ಕನ್ನಡ-ತೆಲುಗು ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಹೋರಾಟದ ಚಿತ್ರಣ

(ಆಯ್ದ ಕಾದಂಬರಿಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ವಿರುಪಾಕ್ಷಪ್ಪ ಪಿ.

ಮಾರ್ಗದರ್ಶಕರು

ಡಾ. ಎಂ. ಉಷಾ

ಪ್ರಾಧ್ಯಾಪಕರು

ಭಾಷಾನಿಕಾಯ

ಭಾಷಾಂತರ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

ಕನ್ನಡ–ತೆಲುಗು ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಹೋರಾಟದ ಚಿತ್ರಣ

(ಆಯ್ದ ಕಾದಂಬರಿಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ವಿರುಪಾಕ್ಷಪ್ಪ ಪಿ.

ಮಾರ್ಗದರ್ಶಕರು

ಡಾ. ಎಂ. ಉಷಾ

ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ–೫೮೩ ೨೭೬

೨೦೧೮

ಸಂಶೋಧಕರ ಪ್ರಮಾಣಪತ್ರ

ಕನ್ನಡ-ತೆಲುಗು ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಹೋರಾಟದ ಚಿತ್ರಣ (ಆಯ್ದ ಕಾದಂಬರಿಗಳನ್ನು ಅನುಲಕ್ಷಿಸಿ) ಎಂಬ ಮಹಾ ಪ್ರಬಂಧವನ್ನು ಡಾ. ಎಂ. ಉಷಾ, ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಭಾಷಾಂತರ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಪ್ರಸ್ತುತ ಮಹಾ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ವಿರುಪಾಕ್ಷಪ್ಪ ಪಿ.)

ಮೊಹಿಲ್ಲೆ

ದಿನಾಂಕ: ೨೪/೨/2018

ಸ್ಥಳ: ವಿದ್ಯಾರಣ್ಯ

ಸಂಶೋಧನ ವಿದ್ಯಾರ್ಥಿ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ವಿರುಪಾಕ್ಷಪ್ಪ ಪಿ. ಅವರು ನನ್ನ ಮಾರ್ಗದರ್ಶನದಲ್ಲಿ **"ಕನ್ನಡ-ತೆಲುಗು ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಹೋರಾಟದ ಚಿತ್ರಣ"** (ಆಯ್ದ ಕಾದಂಬರಿಗಳನ್ನು ಅನುಲಕ್ಷಿಸಿ) ಎಂಬ ಸಂಶೋಧನಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುತ್ತಾರೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

[signature]

ಡಾ. ಎಂ. ಉಷಾ
ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ : 28.2.18
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ಸಮಕಾಲೀನ ರಾಜಕೀಯ ವಿದ್ಯಮಾನಗಳ ಸ್ಪಂದನ ಸಾಹಿತ್ಯದ ಮುಖ್ಯ ಲಕ್ಷಣಗಳಲ್ಲಿ ಒಂದು. ಕನ್ನಡ ಸಾಹಿತ್ಯವಾದರೂ ತನ್ನ ಆರಂಭದಿಂದಲೂ ನಿಯತಿ ಎನ್ನುವಂತೆ ಈ ಸ್ಪಂದನವನ್ನು ಕಾಯ್ದುಕೊಂಡೇ ಬಂದಿದೆ. ನಾಡಿನ ರಾಜಕಾರಣವಾದರೂ ಕವಿಗಳನ್ನು ಆಶ್ರಯಿಸುತ್ತಲೂ, ಕವಿಗಳಿಗೆ ಆಶ್ರಯ ನೀಡುತ್ತಲೂ ತಮ್ಮಿಬ್ಬರ ಸಂಬಂಧವನ್ನು ಗಟ್ಟಿಗೊಳಿಸಿಕೊಂಡೇ ಬಂದಿದೆ. ಕನ್ನಡನಾಡನ್ನು ಆಳಿದ ಹಲವಾರು ರಾಜಮನೆತನಗಳು ಹಲವು ಕವಿಗಳಿಗೆ ಆಶ್ರಯವನ್ನು ನೀಡಿದ್ದು, ಅಂತಹ ರಾಜಾಶ್ರಯಗಳಲ್ಲಿಯೇ ಮೊದಲು ಕನ್ನಡದ ಜೈನ ಸಾಹಿತ್ಯವು ರಚನೆಯಾಗಿದೆ. ನಂತರವಾದರೂ ಹದಿನೆಂಟನೆಯ ಶತಮಾನದವರೆಗಿನ ಬಹುತೇಕ ಸಾಹಿತ್ಯವು ರಾಜಾಶ್ರಯದಲ್ಲಿ ರಚನೆಯಾಗಿದೆ. ಹೀಗೆ ರಾಜಾಶ್ರಯ ಪಡೆದ ಕವಿಗಳು ತಮ್ಮ ಸಾಹಿತ್ಯದಲ್ಲಿ ಸಮಕಾಲೀನ ರಾಜಕೀಯ, ಧಾರ್ಮಿಕ, ಸಾಮಾಜಿಕ ವಿದ್ಯಮಾನಗಳನ್ನು ಬಳಸಿಕೊಂಡಿರುವುದನ್ನು ಗಮನಿಸಬಹುದು.

ರಾಜಾಶ್ರಯದಲ್ಲಿ ರೂಪುಗೊಂಡ ಆಧುನಿಕಪೂರ್ವಸಾಹಿತ್ಯವು ಅಂದಿನ ರಾಜಕೀಯ ಚರಿತ್ರೆಯನ್ನು ಎರಡು ಬಗೆಯಲ್ಲಿ ಪ್ರತಿನಿಧಿಸುವ ಕೆಲಸ ಮಾಡಿದೆ. ಅವುಗಳೆಂದರೆ, ೧. ರಾಮಾಯಣ ಮಹಾಭಾರತದಂತಹ ಯಾವುದಾದರೊಂದು ವಸ್ತುವಿನೊಂದಿಗೆ ತಮ್ಮ ಆಶ್ರಯದಾತನಿಗೆ ಸಂಬಂಧಪಟ್ಟ ರಾಜಕೀಯ ವಿದ್ಯಮಾನಗಳನ್ನು ಸಮೀಕರಿಸುವುದು. ಉದಾಹರಣೆ, ಪಂಪನು ಮಹಾಭಾರತದ ಅರ್ಜುನನೊಂದಿಗೆ ಅರಿಕೇಸರಿಯನ್ನು ಸಮೀಕರಿಸಿ 'ವಿಕ್ರಮಾರ್ಜುನ ವಿಜಯ'ದ ವೃತ್ತಾಂತವನ್ನು ಕುರಿತು ಕೃತಿ ರಚಿಸಿದ್ದಾನೆ. ೨. ಆಳರಸರ ಜೀವನವನ್ನೇ ಕಾವ್ಯದ ವಸ್ತುವಾಗಿಸಿಕೊಳ್ಳುವುದು. ಉದಾಹರಣೆ, ನಂಜುಂಡ ಕವಿಯು ಕಂಪ್ಲಿಯ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಕುಮಾರರಾಮನ ಜೀವನವನ್ನು ವಸ್ತುವಾಗಿಸಿಕೊಂಡು 'ಕುಮಾರರಾಮ ಚರಿತೆ' ಎಂಬ ಚಾರಿತ್ರಿಕ ಕಾವ್ಯವನ್ನು ರಚಿಸಿದ್ದಾನೆ. ಪಂಪನ ಕಾವ್ಯದಲ್ಲಿ ಅರ್ಜುನನಿಗೆ ಅರಿಕೇಸರಿಯನ್ನು ಸಮೀಕರಿಸಿದರೆ ಈ ಕಾವ್ಯದಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ಕುಮಾರರಾಮನಿಗೆ ಅರ್ಜುನನನ್ನು ಸಮೀಕರಿಸಲಾಗಿದೆ. ಹೀಗೆ ಹದಿನೆಂಟನೆಯ

ಶತಮಾನದವರೆಗೂ ಪ್ರಾಚೀನ ಮತ್ತು ಮಧ್ಯಕಾಲೀನ ಸಂದರ್ಭದಲ್ಲಿ ಕನ್ನಡದ ಕವಿಗಳು ರಾಜಕೀಯ ಮತ್ತು ಚಾರಿತ್ರಿಕ ಅಂಶಗಳನ್ನು ಬಳಸಿಕೊಂಡು ಸಾಹಿತ್ಯ ರಚಿಸಿದ್ದಾರೆ.

ಕ್ರಿ.ಶ. ೧೭೯೯ರಲ್ಲಿ ನಡೆದ ೪ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿನ ಟಿಪ್ಪುಸುಲ್ತಾನನ ಸಾವಿನೊಂದಿಗೆ ಕೊನೆಯದಾಗಿ ಉಳಿದಿದ್ದ ಮೈಸೂರು ಸಂಸ್ಥಾನವು ಬ್ರಿಟಿಷರ ಕೈಸೇರುವ ಮೂಲಕ ಕರ್ನಾಟಕವು ಪೂರ್ಣಪ್ರಮಾಣದಲ್ಲಿ ವಸಾಹತುಶಾಹಿಗೆ ಒಳಪಟ್ಟಿತು. ಇಲ್ಲಿಂದ ಸರಿಸುಮಾರು ನೂರುವರ್ಷಗಳವರೆಗೆ ಬ್ರಿಟಿಷರ ನೇರ ಇಲ್ಲವೆ ಪರೋಕ್ಷ ಆಳ್ವಿಕೆಗೆ ಒಳಗಾದ ಕರ್ನಾಟಕದ ಬೇರೆ ಬೇರೆ ಪ್ರಾಂತ್ಯಗಳು ೧೮೫೦ರ ಸುಮಾರಿಗೆ ಇಂಗ್ಲಿಷ್ ಶಿಕ್ಷಣಪದ್ಧತಿಗೆ ತಮ್ಮನ್ನು ತಾವು ಒಪ್ಪಿಸಿಕೊಂಡ ಪರಿಣಾಮವಾಗಿ ರಾಜಾಶ್ರಯದ ಸಾಹಿತ್ಯಕ್ಕಿಂತ ಭಿನ್ನವಾದ ಸಾಹಿತ್ಯ ಹಾದಿಯೊಂದರ ಶೋಧಕ್ಕೆ ಕೈಹಾಕಿತು. ಇದೇ ಮುಂದಿನ ಆಧುನಿಕ ಸಾಹಿತ್ಯದ ಅರುಣೋದಯಕ್ಕೆ ಸಾಕ್ಷಿಯಾಯಿತು. ಪ್ರಭುತ್ವ ಮತ್ತು ಛಂದಸ್ಸಿನ ಬಂಧನದಿಂದ ಬಿಡುಗಡೆಗಾಗಿ ಹಾತೊರೆದ ಮತ್ತು ಪ್ರಜಾಪ್ರಭುತ್ವ, ಮಾನವ ಧರ್ಮ ಸಮಕಾಲೀನ ಭಾಷೆ (ಆಡುನುಡಿ) ಮತ್ತು ಲಯಗಾರಿಕೆಯತ್ತ ಮುಖಮಾಡಿದ ಈ ಸಾಹಿತ್ಯವು ಅತೀ ಶೀಘ್ರದಲ್ಲಿಯೆ ಸಮಕಾಲೀನ ರಾಜಕೀಯ ವಿದ್ಯಮಾನವೊಂದಕ್ಕೆ ಪ್ರತಿಕ್ರಿಯಿಸುವ ಅನಿವಾರ್ಯತೆಯು ಏರ್ಪಟ್ಟಿತು. ಅದುವೆ ಭಾರತದ ಸ್ವಾತಂತ್ರ ಚಳುವಳಿ.

ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶ

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಿಂದೀಚೆಗೆ ಭಾರತದ ಚರಿತ್ರೆಯಲ್ಲಿ ಕಂಡುಬರುವ ಪ್ರಮುಖ ರಾಜಕೀಯ ಸಂಗತಿಯೆಂದರೆ ಬ್ರಿಟಿಷರ ದಾಸ್ಯದಿಂದ ಬಿಡುಗಡೆ ಹೊಂದುವುದರ ಕುರಿತ ಚಿಂತನೆ ಮತ್ತು ಹೋರಾಟ. ೧೮೫೭ರಲ್ಲಿ ಬ್ರಿಟಿಷರ ವಿರುದ್ಧ ನಡೆದ ಸಿಪಾಯಿ ದಂಗೆಯನ್ನು ಮೊದಲುಗೊಂಡು ಹುಟ್ಟಿಕೊಂಡ ವಸಾಹತುಶಾಹಿ ವಿರೋಧವು ೧೮೮೫ರ ಹೊತ್ತಿಗೆ ಖಚಿತವಾಗಿ ರಾಷ್ಟ್ರೀಯ ಹೋರಾಟದ ಚಹರೆಗಳನ್ನು ಪಡೆದುಕೊಂಡಿತ್ತು. ಆ ಸಂದರ್ಭದಲ್ಲಿ ದೇಶದ ನಾನಾ ಭಾಗಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ನೀತಿಗೆ ಎರಡು ರೀತಿಯ ವಿರೋಧಗಳು ಎದುರಾದವು. ಇವು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಅಗತ್ಯವಾದ ಐಕ್ಯಮತ್ಯವನ್ನು ಉಂಟುಮಾಡುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸಿದವು.

೧. ಸ್ಥಳೀಯ ಅರಸರು ತಮ್ಮ ಅರಸೊತ್ತಿಗೆಗಳ ಸ್ವಾಧೀನಕ್ಕಾಗಿ ನಡೆಸಿದ ಹೋರಾಟ

ಬ್ರಿಟಿಷರು ಭಾರತದಾದ್ಯಂತ ತಮ್ಮ ಅಧಿಕಾರವ್ಯಾಪ್ತಿಯನ್ನು ವಿಸ್ತರಿಸಿದ್ದರು. ಈ ವಿಸ್ತರಣೆ ಉದ್ದಕ್ಕೂ ಅವರು ಇಲ್ಲಿನ ಅರಸೊತ್ತಿಗೆಗಳ ವಿರೋಧವನ್ನು ಎದುರಿಸುತ್ತಲೇ ಇದ್ದರೂ, ಹದಿನೆಂಟನೆ ಶತಮಾನದ ಕೊನೆಯ ದಶಕಗಳ ಹೊತ್ತಿಗೆ ಅದಕ್ಕೊಂದು ಸಾಮುದಾಯಿಕ ಸ್ವರೂಪವು ದಕ್ಕಿತು. ಮೊದಮೊದಲಿಗೆ ಏಕಾಂಗಿಯಾಗಿ ಎದುರಿಸಿ ಸೋತ ದೇಶಿಯ ರಾಜರು ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಮುಂದೆ ಪರಸ್ಪರ ಸಹಕಾರದೊಂದಿಗೆ ಹೋರಾಡುವ ದಿಕ್ಕಿನಲ್ಲಿ ಕೂಡ ಆಲೋಚಿಸತೊಡಗಿದರು. ಬ್ರಿಟಿಷರ ಸಾಮ್ರಾಜ್ಯಶಾಹಿತ್ವದ ವಿರುದ್ಧ ದೇಶಿಯ ಅರಸರಾದ ಟಿಪ್ಪುಸುಲ್ತಾನ್, ಝಾನ್ಸಿರಾಣಿ

ಲಕ್ಷ್ಮೀಬಾಯಿ, ರಾಣಿಚೆನ್ನಮ್ಮ, ಬೂದಿಬಸಪ್ಪ, ಚಿಕ್ಕವೀರರಾಜೇಂದ್ರ, ಹಲಗಲಿಯ ಬೇಡರು, ಸಂಗೊಳ್ಳಿ ರಾಯಣ್ಣ ಇನ್ನು ಮುಂತಾದವರು ತಮ್ಮ ತಮ್ಮ ರಾಜ್ಯಗಳನ್ನು ಬ್ರಿಟಿಷರ ಅಧೀನದಿಂದ ಬಿಡಿಸಿಕೊಳ್ಳುವ ಸಲುವಾಗಿ ಹೋರಾಟ ಆರಂಭಿಸಿದರು. ವಾಸ್ತವವಾಗಿ ಇಂತಹ ಹೋರಾಟಗಳ ಹಿನ್ನೆಲೆಯಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ ಇರಲಿಲ್ಲವಾದರೂ ಅಂತಹ ನಾಯಕರನ್ನು ಕೇಂದ್ರವಾಗಿಸಿಕೊಂಡು ನಾಡಿನ ಜನತೆ ತತ್ವಪದ, ಹಾಡು, ದುಂದುಮೆ, ಲಾವಣಿ ಮುಂತಾದ ರೀತಿಯ ಸಾಹಿತ್ಯ ರಚಿಸಿಕೊಂಡರು. ಈ ಸಾಹಿತ್ಯ ಅವರ ಹೋರಾಟದ ಪ್ರಮುಖ ಘಟನೆ ಸನ್ನಿವೇಶಗಳನ್ನು ದಾಖಲಿಸುವುದರ ಜೊತೆಗೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೇರಣೆಗಳನ್ನು ನೀಡಿತು.

೨. ರಾಷ್ಟ್ರೀಯವಾದಿ ಸ್ವಾತಂತ್ರ್ಯ ಹೋರಾಟ

೧೮೫೭ರ ಕ್ರಾಂತಿಯನ್ನು ಬ್ರಿಟಿಷ್ ಸರ್ಕಾರ ಸಿಪಾಯಿದಂಗೆ ಎಂದು ಹತ್ತಿಕ್ಕಿದರೂ, ಜಗತ್ತು ಭಾರತದ ಪ್ರಥಮ ಸ್ವಾತಂತ್ರ್ಯಸಂಗ್ರಾಮವಾಗಿ ಗುರುತಿಸಿತು. ಮುಂದೆ, ಎ.ಓ. ಹ್ಯೂಮ್ ೧೮೮೫ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ್ನು ಸ್ಥಾಪಿಸಿದರು. ಇದು ಕನ್ನಡ ನಾಡಿನ ಮೇಲೆ ಕೂಡ ಅಪಾರವಾದ ಪ್ರಭಾವವನ್ನು ಬೀರಿತ್ತು. ಎ.ಓ. ಹ್ಯೂಮ್ ೧೮೯೩ರಲ್ಲಿಯೇ ಧಾರವಾಡ, ಬೆಳಗಾವಿಗಳಲ್ಲಿ ಪ್ರಯಾಣಿಸಿ ರಾಷ್ಟ್ರೀಯ ಕಾಂಗ್ರೆಸ್‌ನ ಧ್ಯೇಯ-ಧೋರಣೆಗಳನ್ನು ತಿಳಿಸಿ ಜಾಗೃತಗೊಳಿಸಿದನು. ಬ್ರಿಟಿಷರ ದಬ್ಬಾಳಿಕೆ, ಆರ್ಥಿಕ ಶೋಷಣೆ, ರಾಜಕೀಯ ಅಪಹರಣಗಳನ್ನು ಖಂಡಿಸಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಚಳುವಳಿಯನ್ನು ಆರಂಭಿಸಿತು.

ಈ ಚಳುವಳಿಯು ತೀವ್ರಗಾಮಿ ಮತ್ತು ಮಂದಗಾಮಿ ಎನ್ನುವ ಎರಡು ಭಾಷೆಗಳಲ್ಲಿ ಮುಂದುವರಿಯಿತು ಎಂದು ಅಧ್ಯಯನಕಾರರು ಗುರುತಿಸಿದ್ದಾರೆ. ಈ ಎರಡೂ ಧಾರೆಗಳು ವಿವಿಧ ಪ್ರಾಂತ್ಯಾಡಳಿತದಲ್ಲಿ ಹಂಚಿಹೋಗಿದ್ದು ಕರ್ನಾಟಕದಲ್ಲಿ ಕೂಡ ಕಂಡುಬರುತ್ತದೆ. ಅನಿಬೆಸೆಂಟ್, ತಿಲಕ್ ಮುಂತಾದವರು ರೂಪಿಸಿದ ಹೋರಾಟದ ಚಳುವಳಿಯ ಪ್ರಭಾವವು ಇಂದಿನ ಉತ್ತರ ಕರ್ನಾಟಕದ ಭಾಗಗಳಲ್ಲಿ ಪ್ರತಿಧ್ವನಿಸಿತು.

ಗಾಂಧಿ ನೇತೃತ್ವದ ರಾಷ್ಟ್ರೀಯ ಹೋರಾಟದಲ್ಲಿ ಕನ್ನಡ ನಾಡು ಅಸಹಕಾರ, ಖಿಲಾಫತ್, ಕಾನೂನು ಭಂಗ, ಉಪ್ಪಿನ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಇತ್ಯಾದಿ ಚಳುವಳಿಗಳಲ್ಲಿಯೂ ಕೂಡ ಸಕ್ರಿಯವಾಗಿ ಭಾಗವಹಿಸಿತು. ಬೆಳಗಾವಿ, ಬಳ್ಳಾರಿ, ಅಂಕೋಲ ಮುಂತಾದ ಸ್ಥಳಗಳಲ್ಲಿ ಈ ಚಳವಳಿಗಳು ತೀವ್ರ ಸ್ವರೂಪವನ್ನು ಪಡೆದುದಲ್ಲದೆ, ಈ ಎಲ್ಲದರ ಪರಿಣಾಮವಾಗಿ ಕನ್ನಡದ ಲೇಖಕರು ಸ್ವಾತಂತ್ರ್ಯ ಹೋರಾಟವನ್ನು ತಮ್ಮ ಸಾಹಿತ್ಯದ ವಸ್ತುವಾಗಿಸಿಕೊಂಡು ಸಾಹಿತ್ಯ ರಚನೆಗೆ ತೊಡಗಿದರು.

ಹೀಗೆ ಇಪ್ಪತ್ತನೆಯ ಶತಮಾನದಲ್ಲಿ ವ್ಯಾಪಕವಾಗಿ ಹರಡಿದ ರಾಷ್ಟ್ರೀಯ ಚಳುವಳಿಯಿಂದ ಪ್ರಭಾವಿತರಾಗಿ ಕೆಲವು ಲೇಖಕರು ನೇರವಾಗಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಇನ್ನು ಹಲವು ಲೇಖಕರು ಸ್ವಾತಂತ್ರ್ಯ ಹೋರಾಟವನ್ನು ವಸ್ತುವನ್ನಾಗಿಸಿಕೊಂಡು ಕಾವ್ಯ, ನಾಟಕ, ಖಂಡಕಾವ್ಯ,

ಕಥೆ, ಕಾದಂಬರಿ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚನೆಗೆ ಮುಂದಾದರು. ಉದಾಹರಣೆಗೆ ತಲೆಬಾಗದ ಜನ, ಗಾಂಧಿಟೋಪಿ, ಧ್ವಜರಕ್ಷಣೆ, ಮಾಡಿ ಮಡಿದವರು ಹೀಗೆ ಸ್ವಾತಂತ್ರ್ಯ ಹೋರಾಟ ಸಂಬಂಧಿತ ಸಾಹಿತ್ಯವು ಕನ್ನಡದಲ್ಲಿ ಅಪಾರವಾಗಿ ರಚನೆಗೊಂಡಿತು.

ಕನ್ನಡದಂತೆಯೇ ತೆಲುಗುನಾಡು ಮತ್ತು ನುಡಿಗಳು ಇತಿಹಾಸದುದ್ದಕ್ಕೂ ತನ್ನ ರಾಜಕೀಯ ವಿದ್ಯಮಾನಗಳಿಗೆ ತೆರೆದುಕೊಂಡಿದ್ದೇ ಆಗಿದೆ. ಅಲ್ಲಿಯೂ ಸಹ ಕನ್ನಡಕ್ಕೆ ಸಂಬಂಧಪಟ್ಟಂತೆ ಈ ಹಿಂದೆ ಪ್ರಸ್ತಾಪಿಸಲಾದ ಎರಡು ನೆಲೆಯ ರಾಜಕೀಯ ವಿದ್ಯಮಾನಗಳ ಬಳಕೆಯನ್ನು ನಾವು ಸಾಹಿತ್ಯ ಚರಿತ್ರೆಯುದ್ದಕ್ಕೂ ಕಾಣಬಹುದು. ಹೆಚ್ಚುಕಡಿಮೆ ಕನ್ನಡ ಸಾಹಿತ್ಯದ ಜೊತೆಜೊತೆಗೆ ಬೆಳೆದುಬಂದ ತೆಲುಗು ಸಾಹಿತ್ಯವು ರಾಜಾಶ್ರಯದ ವಿಚಾರದಲ್ಲಿಯಾದರೂ ಕನ್ನಡದಂತೆಯೇ ಇದೆ. ಪೂರ್ವಚಾಲುಕ್ಯ ರಾಜಾರಾಜನರೇಂದ್ರನ ಆಶ್ರಯದಲ್ಲಿ ನನ್ನಯ್ಯನ ಮೂಲಕ ಉದಯವಾದ ತೆಲುಗಿನ ಕಾವ್ಯಪರಂಪರೆಯು ಕೃಷ್ಣದೇವರಾಯನ ಕಾಲದಲ್ಲಿ ಅಕ್ಕಪಕ್ಕದಲ್ಲಿ ಕುಳಿತು ವಿರಾಜಮಾನಗೊಂಡಿವೆ. ನನ್ನಯನು ರಾಜಾರಾಜನರೇಂದ್ರನನ್ನು ಸಮೀಕರಿಸಿ ಮಹಾಭಾರತವನ್ನು ರಚಿಸಿದ್ದಾನೆ.

ಕೃಷ್ಣದೇವರಾಯ, ಶಾತವಾಹನ ಮುಂತಾದ ಚಾರಿತ್ರಿಕ ವ್ಯಕ್ತಿಗಳನ್ನು ಆಧರಿಸಿ ಅಲ್ಲದೆ ರಾಜಕೀಯ ವಸ್ತುವನ್ನು ಕುರಿತು ಸಾಹಿತ್ಯ ರಚನೆ ಮಾಡಲಾಗಿದೆ. ಉದಾಹರಣೆಗೆ ಹಿಮಬಿಂದು, ಕೊಲ್ಲಾಯಿ ಗಟ್ಟಿತೇನೇಮಿ, ನಾರಾಯಣರಾವ್, ಮಾಲಪಲ್ಲಿ ಕಾದಂಬರಿಗಳು.

ಅಂತೆಯೇ ಕನ್ನಡನಾಡಿನಂತೆಯೇ ಬ್ರಿಟಿಷರ ವಸಾಹತು ಆಳ್ವಿಕೆಗೆ ಒಳಗಾದ ಆಂಧ್ರಪ್ರದೇಶವು ನಿಜಾಮರ ಅರಸೊತ್ತಿಗೆಯ ಸ್ವಾದೀನತೆಯ ಹೋರಾಟಕ್ಕೆ ಸಾಕ್ಷಿಯಾಗಿರುವುದು ಮಾತ್ರವಲ್ಲದೆ, ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಭಾರತದ ರಾಷ್ಟ್ರೀಯ ಸ್ವಾತಂತ್ರ್ಯಚಳುವಳಿಗೆ ಕೂಡ ತನ್ನನ್ನು ಒಡ್ಡಿಕೊಂಡಿದೆ. ಹೀಗೆ ಭಾರತದ ಸ್ವಾತಂತ್ರ್ಯಹೋರಾಟಕ್ಕೆ ಸಾಕ್ಷಿಯಾಗಿ ತೆಲುಗುನಾಡು ಸ್ವಾತಂತ್ರ್ಯಹೋರಾಟದ ಸಂಗತಿಯನ್ನು ತನ್ನ ಸಾಹಿತ್ಯದ ವಸ್ತುವನ್ನಾಗಿಸಿಕೊಂಡಿದೆ. ಇಂತಹ ವಸ್ತುವನ್ನು ಬಳಸಿಕೊಂಡು ಸಾಹಿತ್ಯ ರಚನೆ ಮಾಡಿದವರೆಂದರೆ ಅಡವಿ ಬಾಪಿರಾಜು, ಉಪ್ಪುಲ ಲಕ್ಮಣರಾವ್, ಉನ್ನವ ಲಕ್ಷ್ಮೀನಾರಾಯಣ, ಕೊಡವಟಿಗಂಟಿ ಕುಟುಂಬರಾವ್, ವಿಶ್ವನಾಥ ಸತ್ಯನಾರಾಯಣ, ಎಸ್.ಜಿ. ರಂಗಾ, ತಲ್ಲಾಪ್ರಗಡ ಸೂರ್ಯನಾರಾಯಣ, ಮಹೀಧರ ರಾಮ ಮೋಹನರಾವ್ ವೆಂಕಟ ಪಾರ್ವತಿಕೇಶ ಮತ್ತು ಅಂತಟಿ ನರಸಿಂಹಂ ಇನ್ನು ಮುಂತಾದವರು.

ಅಧ್ಯಯನದ ಉದ್ದೇಶ

ಅತಿ ಹೆಚ್ಚು ಗಡಿಭಾಗವನ್ನು ಹಂಚಿಕೊಂಡಿರುವ, ಭಾಷಿಕವಾಗಿ ಜ್ಞಾನ ತತ್ವವನ್ನು ಹೊಂದಿರುವ, ಚರಿತ್ರೆಯುದ್ದಕ್ಕೂ ಹಲವು ಬಾರಿ ಏಕ ರಾಜಕೀಯ ಒಡೆತನಕ್ಕೂ ಒಳಗಾಗಿರುವ ಕನ್ನಡ-ತೆಲುಗು ಸಮುದಾಯಗಳು, ಆ ಎಲ್ಲ ಕಾರಣಗಳಿಗಾಗಿಯೇ ಸಾಂಸ್ಕೃತಿಕವಾಗಿ ಅತ್ಯಂತ ನಿಕಟವಾಗಿದ್ದು, ಪರಸ್ಪರ ಪ್ರಭಾವಕ್ಕೂ ಅಪಾರವಾಗಿ ಒಳಗಾದ ಸಾಹಿತ್ಯ ಪರಂಪರೆಯನ್ನು ಹೊಂದಿವೆ. ಇಂತಹ ಎರಡು ಸಾಹಿತ್ಯ ಪರಂಪರೆಗಳ ಭಾಗವಾದ ಕಾದಂಬರಿಗಳಲ್ಲಿನ ಸ್ವಾತಂತ್ರ್ಯ ಹೋರಾಟದ ಚಿತ್ರಣವನ್ನು

ತೌಲನಿಕವಾಗಿ ಪರಿಶೀಲಿಸುವುದು ಸಾಹಿತ್ಯ ಅಧ್ಯಯನದ ದೃಷ್ಟಿಯಿಂದ ಉಪಯುಕ್ತವಾದುದಾಗಿದ್ದು, ಪ್ರಸ್ತುತ ತೌಲನಿಕ ಅಧ್ಯಯನವು ಈ ಕೆಳಕಂಡ ಉದ್ದೇಶಗಳನ್ನು ಹೊಂದಿದೆ.

• ಕನ್ನಡ ಮತ್ತು ತೆಲುಗು ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಸ್ವಾತಂತ್ರ್ಯ ಹೋರಾಟ ಚಿತ್ರಣದ ವಸ್ತುವೈವಿಧ್ಯತೆಯನ್ನು ಗುರುತಿಸುವುದು. ೧೮೮೫ರ ನ್ಯಾಷನಲ್ ಕಾಂಗ್ರೆಸ್ಸಿನ ಉದಯದೊಂದಿಗೆ ಗುರುತಿಸಲಾಗುವ ಭಾರತದ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯು ತನ್ನ ಇತಿಹಾಸದುದ್ದಕ್ಕೂ ಹಲವು ಮೈಲುಗಲ್ಲುಗಳನ್ನು ಹೊಂದಿದ್ದಾಗಿದೆ. ಖಿಲಾಫತ್ ಚಳುವಳಿ–೧೯೨೦, ಅಸಹಕಾರ ಚಳುವಳಿ –೧೯೨೨, ಉಪ್ಪಿನ ಸತ್ಯಾಗ್ರಹ–೧೯೩೦, ಸ್ವದೇಶಿ ಚಳುವಳಿ ಮತ್ತು ವಿದೇಶಿ ವಸ್ತು ಬಹಿಷ್ಕಾರ–೧೯೨೨ ಈ ರಾಷ್ಟ್ರೀಯ ಚಳುವಳಿಯ ಮಜಲುಗಳಲ್ಲಿ ಕನ್ನಡ–ತೆಲುಗು ಕಾದಂಬರಿಕಾರರು ಯಾವ ಯಾವ ಘಟ್ಟಗಳನ್ನು ಅನುಸರಿಸಿ ಕಾದಂಬರಿಗಳನ್ನು ರಚಿಸಿದ್ದಾರೆ, ಈ ಅನುಸರಣೆಯಲ್ಲಿ ಕಂಡುಬರುವ ಸಾಮ್ಯ–ವೈಷಮ್ಯಗಳೇನು? ಇವುಗಳ ಆಯ್ಕೆಯ ಹಿಂದಿನ ಕಾರಣಗಳೇನು? ಅದನ್ನು ಅವರು ನಿರ್ವಹಿಸಿರುವ ವಿಧಾನ ಯಾವುದು? ಇತ್ಯಾದಿ ಅಂಶಗಳನ್ನು ವಿಶ್ಲೇಷಿಸಲಾಗಿದೆ.

• ಭಾರತದ ಸ್ವಾತಂತ್ರ್ಯ ಹೋರಾಟವು ಹಲವು ತಾತ್ವಿಕ ಧಾರೆಗಳಿಂದ ಪ್ರಭಾವಿತವಾದುದಾಗಿದೆ. ರಾಷ್ಟ್ರೀಯ ಹೋರಾಟವನ್ನೇ ಗಮನಿಸುವುದಾದರೆ ಅದರಲ್ಲಿ ಮಂದಗಾಮಿ ಮತ್ತು ತೀವ್ರಗಾಮಿ ಎಂಬ ಎರಡು ಭಿನ್ನ ನೆಲೆಗಳನ್ನು ಕಾಣಬಹುದಾಗಿದೆ. ಇಂತಹ ಭಿನ್ನ ತಾತ್ವಿಕ ನೆಲೆಗಳಲ್ಲಿ ಕನ್ನಡ–ತೆಲುಗು ಕಾದಂಬರಿಕಾರರು ಯಾವ ನೆಲೆಯ ಸಿದ್ಧಾಂತಗಳಿಂದ ಪ್ರಭಾವಿತರಾಗಿ ಕಾದಂಬರಿಗಳನ್ನು ರಚಿಸಿದ್ದಾರೆ, ಈ ಸೈದ್ಧಾಂತಿಕ ಒಲವಿನ ಹಿಂದಿರುವ ಕಾರಣಗಳೇನು? ಎಂಬುದನ್ನು ಚರ್ಚಿಸಲಾಗಿದೆ.

• ಭಾರತ ಸ್ವಾತಂತ್ರ್ಯಚಳುವಳಿ ನಾಡು ಕಂಡ ಅಪೂರ್ವ ಸಾಮುದಾಯಿಕ ಹೋರಾಟಗಳಲ್ಲಿ ಒಂದು. ರೈತರು–ಕಾರ್ಮಿಕರು, ಅಕ್ಷರಸ್ಥರು–ಅನಕ್ಷರಸ್ಥರು, ಪುರುಷರು–ಮಹಿಳೆಯರು, ನಗರದವರು–ಗ್ರಾಮೀಣ ಪ್ರದೇಶದವರು ಹೀಗೆ ಸಮಾಜದ ಭಿನ್ನ ವರ್ಗಗಳ ಪ್ರತಿನಿಧಿಗಳ ತ್ಯಾಗಬಲಿದಾನಗಳನ್ನು ಈ ಹೋರಾಟದ ಉದ್ದಕ್ಕೂ ಕಾಣಬಹುದಾಗಿದೆ. ಈ ಭಿನ್ನ ವರ್ಗದ ಪ್ರತಿನಿಧೀಕರಣವನ್ನು ಕನ್ನಡ–ತೆಲುಗು ಕಾದಂಬರಿಕಾರರು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ವಿವೇಚಿಸಲಾಗಿದೆ.

• ರಾಷ್ಟ್ರೀಯವಾದಿ ಸ್ವಾತಂತ್ರ್ಯಚಳವಳಿಯು ರಾಜಕೀಯ ಬಿಡುಗಡೆಯನ್ನಲ್ಲದೆ ಹಲವಾರು ಸಾಮಾಜಿಕ ಪರಿವರ್ತನೆಯ ಪ್ರಶ್ನೆಗಳನ್ನು ಕೈಗೆತ್ತಿಕೊಂಡಿದ್ದಾಗಿದೆ. ಉದಾಹರಣೆ ಜಾತಿ, ವರ್ಗ, ಲಿಂಗ. ರಾಷ್ಟ್ರೀಯವಾದಿ ಹೋರಾಟದೊಂದಿಗೆ ತಳುಕು ಹಾಕಿಕೊಂಡಿರುವ ಈ ಸಹವರ್ತಿ ಪ್ರಶ್ನೆಗಳನ್ನು ಕನ್ನಡ–ತೆಲುಗು ಕಾದಂಬರಿಕಾರರು ಅರ್ಥೈಸಿಕೊಂಡಿರುವ ಮತ್ತು ನಿರ್ವಹಿಸಿರುವ ಕ್ರಮಗಳನ್ನು ಈ ಅಧ್ಯಯನದಲ್ಲಿ ವಿಮರ್ಶಿಸಲಾಗುವುದು. ಭಾರತದಲ್ಲಿನ ಅಸ್ಪೃಶ್ಯತೆ, ಲಿಂಗಅಸಮಾನತೆ ಮುಂತಾದ ಸಾಮಾಜಿಕ ಅಸಾಮಾಜಿಕ ಪಿಡುಗುಗಳು ರಾಷ್ಟ್ರೀಯ ಏಕತೆಗೆ ಭಂಗ ತರುವುದಾಗಿದೆ ಎಂಬುದನ್ನು ಮನಗಂಡು, ಹರಿಜನೋದ್ಧಾರ, ಸ್ತ್ರೀ ಸುಧಾರಣೆ, ಗ್ರಾಮಸ್ವರಾಜ್ ಮುಂತಾದ ಕಾರ್ಯಕ್ರಮಗಳನ್ನು ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಅಂದು ರೂಪಿಸಲಾಯಿತು. ಈ ಕಾರ್ಯಕ್ರಮಗಳ ಹಿಂದಿನ

ತಾತ್ವಿಕತೆಯ ಚರ್ಚೆ ಮತ್ತು ಆ ಕಾರ್ಯಕ್ರಮದ ಅನುಷ್ಠಾನದ ವಿಭಿನ್ನ ಮಾದರಿಗಳನ್ನು ಕನ್ನಡ–ತೆಲುಗು ಕಾದಂಬರಿಕಾರರು ಹೇಗೆ ಪರಿಭಾವಿಸಿದ್ದಾರೆ ಎಂಬುದನ್ನು ವಿಶ್ಲೇಷಿಸುವುದು ಅಧ್ಯಯನದ ಉದ್ದೇಶವಾಗಿದೆ.

ಮೇಲಿನ ನಾಲ್ಕು ನೆಲೆಗಳನ್ನು ವಿಶ್ಲೇಷಿಸುವ ಮೂಲಕ ಕನ್ನಡ–ತೆಲುಗು ಲೇಖಕರು ಸ್ವಾತಂತ್ರ್ಯ ಹೋರಾಟವನ್ನು ಕುರಿತು ತಳೆದ ನಿಲುವುಗಳು ಸ್ಪಷ್ಟವಾಗಿ ಗೋಚರವಾಗುತ್ತವೆ ಎಂಬುದು ಈ ಉದ್ದೇಶಗಳ ಹಿಂದಿನ ಆಶಯವಾಗಿದೆ.

ವೈಧಾನಿಕತೆ

ಆಕರ: ಪ್ರಸ್ತುತ ಅಧ್ಯಯನಕ್ಕೆ ಕನ್ನಡ ಮತ್ತು ತೆಲುಗು ಸ್ವಾತಂತ್ರ್ಯ ಹೋರಾಟ ಕುರಿತ ಆಯ್ದ ಪಠ್ಯಗಳನ್ನು ಆಕರಗಳಾಗಿ ಬಳಸಿಕೊಳ್ಳಲಾಗುತ್ತದೆ. ಹೀಗೆ ಆಯ್ದುಕೊಳ್ಳಲಾದ ಐದು ಪಠ್ಯಗಳು ಬಸವರಾಜ ಕಟ್ಟೀಮನಿಯವರ 'ಮಾಡಿ ಮಡಿದವರು' (೧೯೫೮), ತ.ರಾ.ಸು ಅವರ 'ರಕ್ತತರ್ಪಣ' (೧೯೫೬), ಶಿವರಾಮಕಾರಂತರ 'ಔದಾರ್ಯದ ಉರುಳಲ್ಲಿ' (೧೯೫೭), ಬಸವರಾಜ ಕಟ್ಟೀಮನಿ ಅವರ 'ಸ್ವಾತಂತ್ರ್ಯದೆಡೆಗೆ' (೧೯೫೬) ಮತ್ತು ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಮೆರವಣಿಗೆ' (೧೯೫೭).

ಅದೇ ರೀತಿ ಅಧ್ಯಯನಕ್ಕೆ ಗುರುತಿಸಿಕೊಳ್ಳಲಾದ ತೆಲುಗು ಪಠ್ಯಗಳೆಂದರೆ ಉನ್ನವ ಲಕ್ಷ್ಮಿನಾರಾಯಣ ಅವರ 'ಮಾಲಪಲ್ಲಿ' (೧೯೨೧), ಮಹೀಧರ ರಾಮ ಮೋಹನರಾವ್ ಅವರ 'ಕೊಲ್ಲಾಯಿ ಗಟ್ಟಿತೇನೇಮಿ' (೧೯೨೧), ಅಡವಿ ಬಾಪಿರಾಜು ಅವರ 'ನಾರಾಯಣರಾವ್' (೧೯೩೪), ಅಡವಿ ಬಾಪಿರಾಜು ಅವರ 'ನರುಡು' (೧೯೫೬), ಅಡವಿ ಬಾಪಿರಾಜು ಅವರ 'ಕೋನಂಗಿ' (೧೯೫೬).

ವಿಧಾನ: ಕನ್ನಡ ಮತ್ತು ತೆಲುಗು ಭಾಷೆಯ ಸ್ವಾತಂತ್ರ್ಯ ಹೋರಾಟ ಕುರಿತ ಪಠ್ಯಗಳನ್ನು ಆಧರಿಸಿದ ಈ ಅಧ್ಯಯನವು ತೌಲನಿಕ ಅಧ್ಯಯನ ವಿಧಾನವನ್ನು ಒಳಗೊಂಡಿದೆ. ಎರಡು ಭಾಷೆಗಳಿಂದ ಆಯ್ದುಕೊಂಡಿರುವ ಹತ್ತು ಕಾದಂಬರಿಗಳನ್ನು ಅವುಗಳ ವಸ್ತುಸಾಮ್ಯ, ರಚನೆಯ ಕಾಲ ಮತ್ತು ಸನ್ನಿವೇಶಗಳನ್ನು ಆಧರಿಸಿ ಪ್ರತ್ಯೇಕವಾಗಿ ಎರಡೆರಡು ಕಾದಂಬರಿಗಳಂತೆ ಗುರುತಿಸಿಕೊಂಡು ವಿಶ್ಲೇಷಿಸಲಾಗಿದೆ. ಹೀಗೆ ಬಿಡಿ ಬಿಡಿಯಾಗಿ ಪಠ್ಯಗಳ ನೆಲೆಯಲ್ಲಿ ಮಾಡಲಾದ ವಿಷಯಗಳ ಅಧ್ಯಯನದ ಫಲಿತಗಳನ್ನು ಕೊನೆಯಲ್ಲಿ ಸಮಗ್ರಗೊಳಿಸಿ ಅಧ್ಯಯನದ ಪ್ರಮೇಯ ರೂಪಿಸಲಾಯಿತು.

ತೌಲನಿಕ ಸಮೀಕ್ಷೆಯಲ್ಲಿ ದೊರೆಯುವ ಸಾಮ್ಯ–ವೈಶಮ್ಯಗಳನ್ನು ಮಂಡಿಸುವುದರೊಂದಿಗೆ, ಅದಕ್ಕೆ ಕಾರಣವಾದ ತಾತ್ವಿಕ ಅಂಶಗಳನ್ನು ಚರ್ಚಿಸುವ ಮೂಲಕ ಅಧ್ಯಯನಕ್ಕೆ ಒಂದು ತಾತ್ವಿಕ ಚೌಕಟ್ಟನ್ನು ಒದಗಿಸಲಾಗಿದೆ.

ವ್ಯಾಪ್ತಿ

ಕನ್ನಡ ಮತ್ತು ತೆಲುಗು ಎರಡು ಭಾಷೆಗಳಲ್ಲಿ ಸ್ವಾತಂತ್ರ್ಯ ಹೋರಾಟ ಕುರಿತಂತೆ ಆಧುನಿಕ ಕಾಲಮಾನದ ಉದ್ದಕ್ಕೂ ಕಾವ್ಯ, ನಾಟಕ, ಕಥೆ ಮತ್ತು ಕಾದಂಬರಿ ಮುಂತಾದ ಪ್ರಕಾರಗಳಲ್ಲಿ ಅಪಾರವಾದ ಸಾಹಿತ್ಯ ರಚನೆಯಾಗಿರುವುದನ್ನು ಕಾಣಬಹುದು. ಆದರೆ ಪ್ರಸ್ತುತ ಅಧ್ಯಯನವು ಕಾದಂಬರಿ ಪ್ರಕಾರವನ್ನು ಮಾತ್ರ ಕುರಿತದ್ದಾಗಿದೆ. ಕಾದಂಬರಿಗಳ ಒಳಗೂ ಆಯ್ದ ಐದೈದು ಕಾದಂಬರಿಗಳನ್ನು ಎರಡು ಭಾಷೆಗಳಿಂದ ಆಯ್ದುಕೊಂಡು ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸುವುದಾಗಿದೆ.

ಸ್ವಾತಂತ್ರ್ಯಹೋರಾಟದ ಭಾಗವಾಗಿ ಹುಟ್ಟಿಕೊಂಡ ಸ್ವಾತಂತ್ರಹೋರಾಟದ ಕಥನಗಳು ಇದುವರೆಗೂ ಮುಂದುವರೆದಿದೆಯಾದರೂ ಪ್ರಸ್ತುತ ಅಧ್ಯಯನವು ಸ್ವಾಂತತ್ರ್ಯಪೂರ್ವದ ಕಥನಗಳಿಗೆ ತನ್ನನ್ನು ಸೀಮಿತವಾಗಿಸಿಕೊಂಡಿದೆ. ಸ್ವಾತಂತ್ರ್ಯಹೋರಾಟವನ್ನು ನೋಡುವ ದೃಷ್ಟಿಕೋನದಲ್ಲಿ ಕಾಲದಿಂದ ಕಾಲಕ್ಕೆ ಭಿನ್ನತೆ ಇದೆ. ಈ ದೃಷ್ಟಿಕೋನದ ಭಿನ್ನತೆ, ಆ ಭಿನ್ನತೆಯನ್ನು ಪ್ರತಿನಿಧಿಸುವ ಕಥನಗಳ ತೌಲನಿಕ ಅಧ್ಯಯನವು ಕುತೂಹಲಕಾರಿಯಾದುದಾದರೂ, ಪ್ರಸ್ತುತ ಅಧ್ಯಯನವು ಎರಡು ಭಾಷಿಕ ಸಮುದಾಯದ ಸಮನಾಂತರ ಕಾಲಘಟ್ಟದ ಒಂದು ದೃಷ್ಟಿಕೋನವನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸುವಲ್ಲಿಗೆ ತನ್ನ ವ್ಯಾಪ್ತಿಯನ್ನು ಗುರುತಿಸಿಕೊಂಡಿದೆ. ಸ್ವಾತಂತ್ರ್ಯದ ಉತ್ಸಾಹ ಮತ್ತು ಅಭೀಪ್ಸೆಗಳು ಅಪಾರವಾಗಿದ್ದ ದಿನಗಳಲ್ಲಿ ಅದಕ್ಕೆ ಪ್ರೇರಣೆ ಒದಗಿಸುವಂತೆ ಬಂದ ಕಾದಂಬರಿಗಳನ್ನು ಮಾತ್ರ ಇಲ್ಲಿ ಆಕರವಾಗಿ ಪರಿಗಣಿಸಲಾಗಿದೆ.

ಸ್ವರೂಪ

ಈ ಪ್ರಬಂಧವು ಒಟ್ಟು ೧೧ ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ ಒಂದು–ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಈ ಅಧ್ಯಾಯದಲ್ಲಿ ಮುಂದೆ ಕೈಗೊಳ್ಳಲಾಗಿರುವ ಅಧ್ಯಯನದ ಸ್ವರೂಪವನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ಎರಡು– ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಈ ವರೆಗೆ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಒಳಗೊಂಡಿದೆ.

ಅಧ್ಯಾಯ ಮೂರು– ಕನ್ನಡ–ತೆಲುಗು ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟ ಎಂಬ ಅಧ್ಯಾಯದಲ್ಲಿ ಕನ್ನಡ–ತೆಲುಗು ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಕಥನಗಳು ಎಂಬ ಅಧ್ಯಾಯದಲ್ಲಿ ಸಾಹಿತ್ಯದ ಪ್ರಕಾರಗಳಾದ ಕಾವ್ಯ, ಕಥೆ, ನಾಟಕಗಳಲ್ಲಿ ರಾಷ್ಟ್ರೀಯತೆಯ ವಸ್ತು, ರಾಷ್ಟ್ರೀಯ ನಾಯಕರು ಮತ್ತು ಅವರ ಸಿದ್ಧಾಂತಗಳು ಹೇಗೆ ಚಿತ್ರಿತವಾಗಿವೆ ಎಂಬುದನ್ನು ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕು– ರಕ್ತತರ್ಪಣ ಮತ್ತು ಕೋನಂಗಿ: ಒಂದು ಕಾಲಘಟ್ಟದ ಎರಡು ರಚನೆಗಳು ಎಂಬ ಅಧ್ಯಾಯದಲ್ಲಿ ಕನ್ನಡದ ಕಾದಂಬರಿಯಲ್ಲಿ ಆಗಸ್ಟ್ ಕ್ರಾಂತಿಯ ಪ್ರಭಾವದಿಂದ ಮತ್ತು

ಚಂದ್ರಶೇಖರನ ಆಗಮನದಿಂದ ಒಂದು ಹಳ್ಳಿಯಲ್ಲಿನ ಜನತೆ ಅಧಿಕಾರ ವ್ಯವಸ್ಥೆಯ ವಿರುದ್ಧ ದಂಗೆದ್ದ ಪರಿಸ್ಥಿತಿಯನ್ನು ಚಿತ್ರಿಸಲಾಗಿದೆ. ಹಾಗೂ ಸ್ವಾತಂತ್ರ್ಯಪೂರ್ವ ಭಾರತದ ಸ್ಥಿತಿಗತಿಯನ್ನು ಅಂದರೆ ಎರಡು ಜಾಗತಿಕ ಯುದ್ಧಗಳ ಪರಿಚಯ, ಗಾಂಧೀಜಿಯವರ ಪ್ರಭಾವ, ಪ್ರೇರಣೆ ಹೇಗಿತ್ತು ಎಂಬುದನ್ನು ಚರ್ಚಿಸಲಾಗಿದೆ.

ಅಧ್ಯಾಯ ಐದು– ಔದಾರ್ಯದ ಉರುಳಲ್ಲಿ ಮತ್ತು ಕೊಲ್ಲಾಯಿ ಗಟ್ಟಿತೇನೇಮಿ: ಸಮಾನ ಘಟನೆಗಳನ್ನು ಪ್ರತಿನಿಧಿಸುವ ರಚನೆಗಳು ಎಂಬ ಅಧ್ಯಾಯದಲ್ಲಿ ಎರಡೂ ಕೃತಿಗಳಲ್ಲಿಯೂ ಸಹ ಅಸಹಕಾರ ಚಳುವಳಿಯ ತುಣುಕುನೋಟಗಳು, ಗಾಂಧೀಜಿಯವರ ಖಾದಿ ತಯಾರಿಕೆ, ಬಳಕೆ, ಸ್ವದೇಶಿ ವಸ್ತು ಬಳಕೆ, ವಿದೇಶಿ ವಸ್ತು ಬಹಿಷ್ಕಾರ, ಗುಡಿ ಕೈಗಾರಿಕೆಗಳಿಗೆ ಆದ್ಯತೆ, ಒಬ್ಬ ವ್ಯಕ್ತಿ, ಸಂಸ್ಥೆಗಳು ನಡೆದುಕೊಂಡ ರೀತಿ, ಕೆಳವರ್ಗದವರ ಪಾಲ್ಗೊಳ್ಳುವಿಕೆ ಹೇಗಿತ್ತು ಎಂಬುದನ್ನು ಚರ್ಚಿಸಲಾಗಿದೆ.

ಅಧ್ಯಾಯ ಆರು– ಮಾಡಿ ಮಡಿದವರು ಮತ್ತು ನಾರಾಯಣರಾವ್: ಸ್ವಾತಂತ್ರ್ಯ ಹೋರಾಟದ ಭಿನ್ನ ಮಾರ್ಗಗಳನ್ನು ಪ್ರತಿನಿಧಿಸುವ ರಚನೆಗಳು ಎಂಬ ಅಧ್ಯಾಯದಲ್ಲಿ ಅಹಿಂಸಾ ಮಾರ್ಗ ಮತ್ತು ಹಿಂಸಾ ಮಾರ್ಗಗಳಿಂದಾದ ಪರಿಣಾಮಗಳೇನು ಎಂಬುದನ್ನು ಮತ್ತು ಗಾಂಧೀಜಿಯವರ ಅಹಿಂಸಾ ಮಾರ್ಗವನ್ನು ಹಿಂಸಾತ್ಮಕವಾಗಿ ಬದಲಾಯಿಸಿಕೊಂಡಿದ್ದರ ಪರಿಣಾಮವೇನೆಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಏಳು ಸ್ವಾತಂತ್ರ್ಯದೆಡೆಗೆ ಮತ್ತು ನರುಡು: ರಾಜಕೀಯ ಮತ್ತು ಸಾಮಾಜಿಕ ಬಿಡುಗಡೆಗಳ ಮುಖಾಮುಖಿಯ ರಚನೆಗಳು ಎಂಬ ಅಧ್ಯಾಯದಲ್ಲಿ ಮಧ್ಯಮ ವರ್ಗ ಮತ್ತು ಕೆಳವರ್ಗದ ಜನತೆ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಪರಿತಪಿಸಿದ ಬಗೆ ಮತ್ತು ಸಾಮಾಜಿಕ ಸ್ವಾತಂತ್ರ್ಯ, ಸೌಲಭ್ಯಗಳನ್ನು ಪಡೆಯಲು ಶ್ರಮಿಸಿದ ರೀತಿಯನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಎಂಟು– ಮೆರವಣಿಗೆ–ಮಾಲಪಲ್ಲಿ: ಜೈಲುವಾಸದಲ್ಲಿ ಅರಳಿದ ಎರಡು ಕಾದಂಬರಿಗಳು ಎಂಬ ಅಧ್ಯಾಯದಲ್ಲಿ ಗಾಂಧೀಜಿಯವರ ಪ್ರಭಾವದಿಂದ ರಚನೆಯಾದ ಕೃತಿಗಳಲ್ಲಿ ಜೈಲಿನಲ್ಲಿ ರಚನೆಯಾದ ಈ ಎರಡು ಕಾದಂಬರಿಗಳಲ್ಲಿ ಜೈಲಿನ ಅಧಿಕಾರಿಗಳು ಹೋರಾಟಗಾರರನ್ನು ಶೋಷಿಸಿದ ರೀತಿ, ಶಿಕ್ಷೆಗಳು, ಖೈದಿಗಳು ಮನಃಪರಿವರ್ತನೆಯಾದ ಬಗೆ, ಗಾಂಧೀಜಿಯವರ ಸಿದ್ಧಾಂತಗಳ ಪರಿಪಾಲನೆಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಒಂಬತ್ತು– ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳಲ್ಲಿ ಕಂಡುಬರುವ ಭಿನ್ನ ಸಮುದಾಯಗಳ ಪ್ರತಿನಿಧೀಕರಣ ಈ ಅಧ್ಯಾಯದಲ್ಲಿ ಸ್ವಾತಂತ್ರ್ಯ ಚಳುವಳಿಯ ಧರ್ಮ, ಜಾತಿ, ವರ್ಗ, ಲಿಂಗ ಸಮುದಾಯಗಳ ಭಾಗವಹಿಸುವಿಕೆ, ಅವರ ಪ್ರತಿಕ್ರಿಯೆಯನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ಹತ್ತು ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳ ಹಿಂದಿನ ಸೈದ್ಧಾಂತಿಕ ನೆಲೆಗಟ್ಟು ಈ ಅಧ್ಯಾಯದಲ್ಲಿ ಗಾಂಧೀಜಿಯವರನ್ನು ಕುರಿತಂತೆ ಪರವಾದ ವಿಚಾರಗಳು, ವಿರೋಧಿ ಅಂಶಗಳು ಮತ್ತು ತತ್ವಗಳ ಪರಿಪಾಲನೆಯನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಹನ್ನೊಂದು ಸಮಾರೋಪ ಈ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳನ್ನು ಹಾಗೂ ಅನುಬಂಧಗಳನ್ನು ನೀಡಲಾಗಿದೆ.

❖❖❖

ಅಧ್ಯಾಯ : ಎರಡು

ಈವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ: ಎರಡು

ಈವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಸ್ವಾತಂತ್ರ್ಯ ಚಳುವಳಿ ಮಹಾನ್ ರಾಷ್ಟ್ರೀಯ ಚಳುವಳಿಯಾಗಿದೆ. ಕನ್ನಡ–ತೆಲುಗು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಈ ಚಳುವಳಿಯ ಸ್ವರೂಪ ಕಂಡುಬರುತ್ತದೆ. ಎರಡೂ ಭಾಷೆಗಳಲ್ಲಿಯೂ ಅನೇಕ ಸಾಹಿತಿಗಳು ಸ್ವತಃ ಚಳುವಳಿಯಲ್ಲಿ ಭಾಗವಹಿಸಿ ಅದರ ರುಚಿ ಅನುಭವಿಸಿ ಅದರ ಅನುಭವವನ್ನು ತಮ್ಮ ಕೃತಿಗಳಲ್ಲಿ ಹಿಡಿದಿಟ್ಟಿದ್ದಾರೆ.

"ಕನ್ನಡ–ತೆಲುಗು ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಹೋರಾಟದ ಚಿತ್ರಣ" ಎಂಬ ವಿಷಯವನ್ನು ಕುರಿತು ಯಾವುದೇ ನಿರ್ಧಿಷ್ಟವಾದ ಅಧ್ಯಯನಗಳು ನಡೆದಿರುವುದಿಲ್ಲ. ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಆಯಾಯ ಭಾಷೆಗಳಲ್ಲಿ ಕೆಲವು ಪಾರ್ಶ್ವಿಕ ಅಧ್ಯಯನಗಳು ನಡೆದಿರುವುದು ಕಂಡುಬರುತ್ತದೆ. ಅವುಗಳನ್ನು ಸ್ಥೂಲವಾಗಿ ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. ಎರಡೂ ಭಾಷೆಗಳಲ್ಲಿ ಸ್ವಾತಂತ್ರ್ಯ ಹೋರಾಟವನ್ನು ವಸ್ತುವಾಗಿಸಿಕೊಂಡು ಕಾವ್ಯ, ನಾಟಕ, ಕಾದಂಬರಿ ಪ್ರಕಾರಗಳಲ್ಲಿ ರಚನೆಯಾಗಿರುವ ಎಂ.ಫಿಲ್., ಪಿಎಚ್.ಡಿ. ಪ್ರಬಂಧಗಳು.

೨. ಸ್ವಾತಂತ್ರ್ಯ ಹೋರಾಟದ ವಸ್ತುವನ್ನು ಹೊಂದಿರುವ ನನ್ನ ಅಧ್ಯಯನ ವಿಷಯದ ವ್ಯಾಪ್ತಿಗೆ ಒಳಪಡುವ ಕಾದಂಬರಿಗಳನ್ನು ಕುರಿತು ಬಂದಂತಹ ವಿಮರ್ಶಾ ಲೇಖನಗಳನ್ನು ನೋಡಲಾಗಿದೆ.

೩. ನವೋದಯ ಕಾವ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ (ಸಂ.ಎ.ಕೆ. ಕೆಂಪಮ್ಮ) ಎಂಬ ಎಂ.ಫಿಲ್ ಸಂಪ್ರಬಂಧದಲ್ಲಿ ಭಾರತದಲ್ಲಿ ಸ್ವಾತಂತ್ರ್ಯ ಆಂದೋಲನ ಹಾಗೂ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಕುರಿತು ವಿವರಿಸಲಾಗಿದೆ. ಹಾಗೂ ನವೋದಯ ಕವಿಗಳಲ್ಲಿ ಸ್ವಾತಂತ್ರ್ಯದ ಕಲ್ಪನೆ ಮೂಡಿ ಬಂದ ಬಗೆಯನ್ನು ಚರ್ಚಿಸಲಾಗಿದೆ. ಮತ್ತು ಸ್ವಾತಂತ್ರ್ಯ ಪರಿಕಲ್ಪನೆ ಕುರಿತ ಕವಿತೆಗಳನ್ನು ವಿಶ್ಲೇಷಣೆ ಮಾಡಲಾಗಿದೆ.

೪. ಬೇಂದ್ರೆಯವರ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆ (ಸಂ.ಹೆಚ್.ಎಸ್. ತಿಪ್ಪೇಸ್ವಾಮಿ) ಎಂಬ ಎಂ.ಫಿಲ್ ಪ್ರಬಂಧದಲ್ಲಿ ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ

ಮಹಾನ್ ವ್ಯಕ್ತಿಗಳ ಬಗ್ಗೆ, ಅವರು ೧೯೪೨ರ ಕ್ವಿಟ್ ಇಂಡಿಯಾ ಚಳುವಳಿ ಮತ್ತು ೧೮೫೭ರ ಸಿಪಾಯಿ ದಂಗೆಯಲ್ಲಿ ಪ್ರಾಣವನ್ನರ್ಪಿಸಿದ ಮಹಾನಾಯಕರನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಮತ್ತು ಬೇಂದ್ರೆಯವರ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆಯನ್ನು ಹೊಂದಿರುವ ಆಯ್ದ ಕವಿತೆಗಳನ್ನು ವಿಶ್ಲೇಷಿಸಲಾಗಿದೆ.

೫. ದಕ್ಷಿಣ ಕನ್ನಡದ ಕವಿತೆಗಳಲ್ಲಿ ರಾಷ್ಟ್ರೀಯತೆ (ಸಂ. ಹೇಮಲತಾ ಟಿ.ಕೆ.) ಎಂಬ ಎಂ.ಫಿಲ್ ಪ್ರಬಂಧದಲ್ಲಿ ರಾಷ್ಟ್ರೀಯತೆ ಎಂದರೇನು? ಎಂಬುದರ ಕುರಿತು ವಿಸ್ತಾರವಾದ ವಿವರಣೆ ಇದೆ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ದಕ್ಷಿಣ ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ ಪರಿಕಲ್ಪನೆ ಯಾವ ರೀತಿ ಇತ್ತು ಎಂದು ಕೆಲವು ಕವಿತೆಗಳನ್ನು ವಿಮರ್ಶಿಸಲಾಗಿದೆ.

೬. ಕನ್ನಡ ನವೋದಯ ಕಾವ್ಯದಲ್ಲಿ ನಾಡು–ನುಡಿ ಚಿಂತನೆ: ಕುವೆಂಪು, ಬೇಂದ್ರೆ, ಪು.ತಿ.ನ. (ಸಂ. ಪ್ರವೀಣ್ ಪಾಟೀಲ್) ಎಂಬ ಎಂ.ಫಿಲ್ ಪ್ರಬಂಧದಲ್ಲಿ ಪ್ರಾಚೀನ, ಮಧ್ಯಕಾಲೀನ, ವಸಾಹತುಶಾಹಿ ಕಾಲಘಟ್ಟಗಳಲ್ಲಿ ನಾಡು–ನುಡಿ ಚಿಂತನೆ ಹೇಗಿತ್ತು ಎಂಬುದನ್ನು ವಿವರಿಸಲಾಗಿದೆ. ಕುವೆಂಪು, ಬೇಂದ್ರೆ, ಪುತಿನ ಅವರ ನಾಡು–ನುಡಿ ಕುರಿತ ಕವಿತೆಗಳನ್ನು ವಿಶ್ಲೇಷಿಸಲಾಗಿದೆ.

೭. ವಸಾಹತು ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ ಹಾಗೂ ಸಂಘರ್ಷದ ಸ್ವರೂಪ (ಸಂ.ಕೆ.ಸಿ. ಶಿವಾರೆಡ್ಡಿ) ಎಂಬ ಪಿಎಚ್.ಡಿ. ಪ್ರಬಂಧದಲ್ಲಿ ದೇಶ ಮತ್ತು ಕರ್ನಾಟಕದಲ್ಲಿ ವಸಾಹತುಶಾಹಿ ಸ್ವರೂಪವನ್ನು ವಿವರಿಸಲಾಗಿದೆ. ಏಕೀಕರಣ, ಸ್ವಾತಂತ್ರ್ಯ, ಯುದ್ಧ, ಬಂಧನ, ಬಿಡುಗಡೆ ಮತ್ತು ವಸಾಹತುಶಾಹಿಗೆ ಸಂಬಂಧಿಸಿದ ಬೇಂದ್ರೆಯವರ ಕವಿತೆಗಳನ್ನು ವಿಶ್ಲೇಷಿಸಲಾಗಿದೆ. ಪುರೋಹಿತಶಾಹಿ ಹಾಗೂ ವಸಾಹತುಶಾಹಿ ವಿರೋಧಿ, ಸ್ವಾತಂತ್ರ್ಯ, ಯುದ್ಧ, ಸರ್ವೋದಯ ಕಲ್ಪನೆಗಳನ್ನು ಸಾರುವ ಕುವೆಂಪುರವರ ಕೆಲವು ಕವಿತೆಗಳನ್ನು ಕುರಿತು ಚರ್ಚಿಸಲಾಗಿದೆ.

೮. ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು (ಸಂ. ಬಸವರಾಜ ಸಬರದ) ಎಂಬ ಕೃತಿಯಲ್ಲಿ ಅಧ್ಯಯನ ದೃಷ್ಟಿಯಿಂದ ರಾಷ್ಟ್ರೀಯತೆ ಕುರಿತ ಕಾದಂಬರಿಗಳು ಮತ್ತು ಸಾಮಾಜಿಕತೆ ಕುರಿತ ಕಾದಂಬರಿಗಳು ಎಂಬುದಾಗಿ ವಿಂಗಡಿಸಿದ್ದಾರೆ. ರಾಷ್ಟ್ರೀಯತೆಯನ್ನು ವಸ್ತುವನ್ನಾಗಿ ಒಳಗೊಂಡ ಕಾದಂಬರಿಗಳಲ್ಲಿ 'ಮಾಡಿ ಮಡಿದವರು' ಮತ್ತು 'ಸ್ವಾತಂತ್ರ್ಯದೆಡೆಗೆ' ಕಾದಂಬರಿಗಳನ್ನು ವಿಶ್ಲೇಷಣೆಗೊಳಪಡಿಸಿದೆ.

೯. ಕನ್ನಡ ಕಾದಂಬರಿಗಳಲ್ಲಿ ಗಾಂಧೀವಾದದ ಪ್ರೇರಣೆ (ಸಂ. ಮೂಡಲಗಿರಿಯಯ್ಯ) ಎಂಬ ಪಿಎಚ್.ಡಿ. ಸಂಪ್ರಬಂಧದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ವಸ್ತುವನ್ನು ಆಧರಿಸಿ ರಚನೆಯಾದ ಹಲವು ಕಾದಂಬರಿಗಳನ್ನು ವಿಶ್ಲೇಷಿಸಲಾಗಿದೆ. ಗಾಂಧೀವಾದ ಮತ್ತು ಅದರ ವಿಭಿನ್ನ ನೆಲೆಗಳು, ಕನ್ನಡದ ರಾಜಕೀಯ ಕಾದಂಬರಿಗಳಲ್ಲಿ ಗಾಂಧೀವಾದದ ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಧೋರಣೆಗಳು ಬಿಂಬಿತವಾಗಿರುವುದರ ಬಗ್ಗೆ ಚರ್ಚೆ ಇದೆ.

೮. ಆಧುನಿಕ ಕನ್ನಡ ಕಾವ್ಯ ಮತ್ತು ಗಾಂಧಿವಾದ (ಸಂ. ಎಚ್.ಪಿ. ಹಾಲೊಳ್ಳಿ) ಪಿಎಚ್.ಡಿ. ಪ್ರಬಂಧದಲ್ಲಿ ಗಾಂಧೀಜಿಯವರ ತತ್ವಗಳು ಮತ್ತು ಅವರು ಕೈಗೊಂಡ ಚಳುವಳಿಗಳ ಬಗ್ಗೆ ಚರ್ಚಿಸಲಾಗಿದೆ. ಮತ್ತು ಸಾಹಿತ್ಯದ ವಿವಿಧ ಘಟ್ಟಗಳಲ್ಲಿ ಗಾಂಧೀಜಿಯವರನ್ನು ಹೇಗೆ ಪ್ರತಿನಿಧಿಸಲಾಗಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ.

೯. ಕನ್ನಡ ಕಾದಂಬರಿಗಳಲ್ಲಿ ರಾಜಕೀಯ ವಸ್ತುವಿನ್ಯಾಸ (ಸಂ. ಸುರೇಶ ಪಾಟೀಲ) ಎಂಬ ಕೃತಿಯಲ್ಲಿ ಕನ್ನಡ ಕಾದಂಬರಿ ಮತ್ತು ಸ್ವಾತಂತ್ರ್ಯ ಚಳುವಳಿ ಎಂಬ ಅಧ್ಯಾಯದಲ್ಲಿ ಸ್ವಾತಂತ್ರ್ಯ ಚಳುವಳಿ ವಸ್ತುವನ್ನು ಕುರಿತು ರಚನೆಯಾದ ಹಲವು ಕಾದಂಬರಿಗಳ ಪಟ್ಟಿಯನ್ನು ನೀಡಲಾಗಿದೆ. ಜೊತೆಗೆ ಸ್ವಾತಂತ್ರ್ಯ ಚಳುವಳಿಯನ್ನು ವಸ್ತುವಾಗಿಸಿಕೊಂಡ ರಕ್ತತರ್ಪಣ, ಮಾಡಿಮಡಿದವರು, ಸ್ವಾತಂತ್ರ್ಯದೆಡೆಗೆ, ಔದಾರ್ಯದ ಉರುಳಲ್ಲಿ, ಮೂರಾಬಟ್ಟೆ, ವಿಜಯಯಾತ್ರೆ ಮೊದಲಾದ ಕಾದಂಬರಿಗಳನ್ನು ವಿಶ್ಲೇಷಿಸಲಾಗಿದೆ.

೧೦. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ರಾಜಕೀಯ ಪ್ರಜ್ಞೆ (ಸಂ. ಮುನಿಯಪ್ಪ) ಈ ಕೃತಿಯಲ್ಲಿ ಶಿವರಾಮ ಕಾರಂತರ ಎಲ್ಲಾ ಕಾದಂಬರಿಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದಂತೆ ಕಾರಂತರು ರಚಿಸಿದ 'ಔದಾರ್ಯದ ಉರುಳಲ್ಲಿ' ಕಾದಂಬರಿಯನ್ನು ಕುರಿತು ವಿಶ್ಲೇಷಿಸಲಾಗಿದೆ.

೧೧. ಕಟ್ಟೀಮನಿ: ಜೀವನ ಸಾಹಿತ್ಯ (ಸಂಪಾ. ಸಿದ್ದಣ್ಣ ಮಸಳಿ) ಎಂಬ ಕೃತಿಯಲ್ಲಿ ಕಟ್ಟೀಮನಿ ಅವರ ಒಟ್ಟು ಸಾಹಿತ್ಯವನ್ನು ಚರ್ಚಿಸಲಾಗಿದೆ. ಮತ್ತು ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ಮಾಡಿ ಮಡಿದವರು ಕಾದಂಬರಿಯಲ್ಲಿನ ಪಾತ್ರಗಳನ್ನು ವಿಶ್ಲೇಷಣೆ ಮಾಡಲಾಗಿದೆ.

೧೨. ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿ ಪ್ರತಿನಿಧೀಕರಣ ಎಂಬ ಪಿಎಚ್.ಡಿ. ಸಂಪ್ರಬಂಧದಲ್ಲಿ (ಸಂದೀಪ ವಿ.) ಎಂಟು ಅಧ್ಯಾಯಗಳಿವೆ. ಕನ್ನಡ ಸಾಹಿತ್ಯದ ಘಟ್ಟಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಕಾಲಘಟ್ಟಗಳಲ್ಲಿ ಸಾಹಿತ್ಯದ ಕಥೆ, ಕಾವ್ಯ, ಕಾದಂಬರಿ, ನಾಟಕ ಪ್ರಕಾರಗಳಲ್ಲಿ ಅಲ್ಲದೆ ಇತರೆ ಸಾಹಿತ್ಯವಾದ ಪ್ರಬಂಧ, ಲೇಖನ, ಶಿಶುಸಾಹಿತ್ಯ, ಅನುವಾದ ಪ್ರಕಾರಗಳಲ್ಲಿ ಗಾಂಧೀಜಿಯವರ ಪ್ರಭಾವ, ಪ್ರೇರಣೆಯನ್ನು ಕುರಿತು ಚರ್ಚಿಸಲಾಗಿದೆ.

೧೩. ಜ್ಯೋತಿ ಅವರ ಕನ್ನಡ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳವಳಿ ಎಂಬ ಪಿಎಚ್.ಡಿ. ಸಂಪ್ರಬಂಧದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಕುರಿತ ಸುಮಾರು ಕನ್ನಡದ ಕಾದಂಬರಿಗಳನ್ನು ವಿಶ್ಲೇಷಿಸಲಾಗಿದೆ.

ವಿಮರ್ಶೆ ಸದಾ ನಿರಂತರವಾಗಿ ನಡೆಯುವಂತಹ ಪ್ರಕ್ರಿಯೆಯಾಗಿದೆ. ಜಗತ್ತಿನಲ್ಲಿ ವಿಮರ್ಶೆ ಇರದ ಕ್ಷೇತ್ರವೇ ಇಲ್ಲ. ಸಾಹಿತ್ಯವೂ ಅದಕ್ಕೆ ಹೊರತಾಗಿಲ್ಲ. ನನ್ನ ಅಧ್ಯಯನದ ವ್ಯಾಪ್ತಿಗೆ ಒಳಪಡುವ ಕಾದಂಬರಿಗಳ ಮೇಲೆ ನನ್ನ ಗಮನಕ್ಕೆ ಬಂದ ಹಾಗೆ ಈ ಕೆಳಗಿನ ವಿಮರ್ಶಾಸಂಕಲನಗಳು ಬಂದಿವೆ.

ತ.ರಾ.ಸು. ಪ್ರಧಾನ ಗುರುದತ್ತ ಅವರು ಸಂಪಾದಿಸಿದ ಈ ವಿಮರ್ಶಾ ಸಂಕಲನದಲ್ಲಿ 'ರಕ್ತತರ್ಪಣ ಆದರ್ಶಪಾತ್ರಗಳ ವೈಭವೀಕರಣ' ಎಂಬ ವಿಷಯದ ಬಗ್ಗೆ ಹಾ.ತಿ. ಕೃಷ್ಣೇಗೌಡ ಎಂಬುವರು ಬರೆದಿದ್ದಾರೆ. ಈ ಕೃತಿಯು ತ.ರಾ.ಸು. ಯಾವುದೇ ಪಾತ್ರವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಬಲ್ಲರು. ಆದರೆ ಪಾತ್ರಗಳ ಬೆಳವಣಿಗೆ ಕೆಲವೊಮ್ಮೆ ಭಾವುಕವೆನಿಸುತ್ತದೆ. ಅತ್ಯುತ್ಸಾಹವೇ ಇಲ್ಲಿ ದೋಷವಾಗಿ ಪರಿಣಮಿಸಿದೆ. ಸಹಜ ಬೆಳವಣಿಗೆಗಿಂತ ಅವುಗಳನ್ನು ವೈಭವೀಕರಿಸುವತ್ತ ಲೇಖಕರ ಗಮನ ಕೇಂದ್ರೀಕೃತವಾಗಿದೆ. ರಕ್ತತರ್ಪಣ ಕಾದಂಬರಿಯಲ್ಲಿ ಚಂದ್ರಶೇಖರ, ಸೀತಾರಾಮಯ್ಯ ಮುಂತಾದ ಪಾತ್ರಗಳು ಇಂತಹ ಆದರ್ಶವಾದದಿಂದ ನರಳಿವೆ. ಸ್ವಾತಂತ್ರ್ಯ ಆಂದೋಲನದ ಕಲ್ಪನೆಯೇ ಇಲ್ಲದ ಅನಂತರದ ತಲೆಮಾರಿನವರಿಗೆ ಆ ಝಳದ ಕಿರು ಅನುಭವವನ್ನು ಉಂಟುಮಾಡುವಲ್ಲಿ ಈ ಕಾದಂಬರಿ ಯಶಸ್ವಿಯಾಗಿದೆ ಎಂದು ಈ ಕೃತಿ ತಿಳಿಸುತ್ತದೆ.

ತೆಲುಗು

೧. ತೆಲುಗು ನವಲಲ್ಲೋ ಸ್ವಾತಂತ್ರ್ಯೋದ್ಯಮ ಚಿತ್ರಣಂ (ಸಂ. ಕೂರೇಳ್ಳ ವಿಠಲಾಚಾರ್ಯ) ಎಂಬ ಪಿಎಚ್.ಡಿ. ಪ್ರಬಂಧದಲ್ಲಿ ಸ್ವಾತಂತ್ರ್ಯ ಹೋರಾಟದ ವಸ್ತುವನ್ನು ಹೊಂದಿದ ಹತ್ತು ಕಾದಂಬರಿಗಳು ಮತ್ತು ತೆಲಂಗಾಣ ಹೋರಾಟ ಕುರಿತ ಕಾದಂಬರಿಗಳ ಬಗ್ಗೆ ಚರ್ಚಿಸಲಾಗಿದೆ.

ಸ್ವಾತಂತ್ರ್ಯ ಹೋರಾಟ ಕುರಿತ ಕಾದಂಬರಿಗಳ ವಿಮರ್ಶೆ ಲೇಖನಗಳು

ಆರ್.ಎಸ್. ಸುದರ್ಶನಂ ಸಂಪಾದಿಸಿದ ಸಾಹಿತ್ಯದಲ್ಲಿ ದೃಕ್ಪಥಾಲು ಎಂಬ ವಿಮರ್ಶಾ ಪುಸ್ತಕದಲ್ಲಿ ಉನ್ನವ ಲಕ್ಷ್ಮೀನಾರಾಯಣ ಎಂಬ ಲೇಖನದಲ್ಲಿ ರಾಷ್ಟ್ರೀಯ ಪರಿಕಲ್ಪನೆ ಕುರಿತು ರಚನೆಯಾದ ಮಾಲಪಲ್ಲಿ ಕಾದಂಬರಿ ಕುರಿತು ಈ ರೀತಿ ಇದೆ.

ಆ ಸಂದರ್ಭದ ದೃಷ್ಟಿ ಎರಡು ಭಿನ್ನ ವೈಕರ್ಯಗಳನ್ನು ಅವಲಂಬಿಸಿದೆ. ಒಂದು ವರ್ಣಾಶ್ರಮ ವ್ಯವಸ್ಥೆ ಶಿಥಿಲವಾಗಿರುವುದು, ಮತ್ತೊಂದು ವೈದಿಕ ಧರ್ಮ ತಲೆ ಎತ್ತಿರುವುದು. ಸಂಸ್ಕೃತಾಧ್ಯಯನವು ಕ್ಷೀಣಿಸಿರುವುದು ಮತ್ತು ಪರಧರ್ಮೀಯರ, ವಿದೇಶಿಯರ ಆಡಳಿತದಲ್ಲಿ ಭಾರತೀಯ ಸಂಸ್ಕೃತಿ, ಭಾಷೆಗಳು ಹಿಂದೂ ಧರ್ಮ ಜೀವನವು ನಶಿಸಿಹೋಗುತ್ತಿವೆ ಎಂದು ಚರ್ಚಿಸಲಾಗಿದೆ.

ಸಹವಾಸಿ ಎಂಬ ಲೇಖಕ ಸಂಪಾದಿಸಿದ ನೂರೆಳ್ಳ ತೆಲುಗು ನವಲ ಎಂಬ ವಿಮರ್ಶಾ ಸಂಕಲನದಲ್ಲಿ ೨೫ ಪ್ರಮುಖ ಕೃತಿಗಳ ವಿಮರ್ಶಾ ಕಾರ್ಯ ನಡೆದಿದೆ. ಮುಖ್ಯವಾಗಿ ಸ್ವಾತಂತ್ರ್ಯ ಹೋರಾಟವನ್ನು ವಸ್ತುವಾಗುಳ್ಳ ಕಾದಂಬರಿಗಳಾದ ಮಾಲಪಲ್ಲಿ, ನಾರಾಯಣರಾವ್, ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಗಳನ್ನು ಈ ರೀತಿ ವಿಮರ್ಶಿಸಲಾಗಿದೆ.

ಮಾಲಪಲ್ಲಿ– ೧೯೨೦ರ ಸಂದರ್ಭದಲ್ಲಿ ಆಂಧ್ರಪ್ರದೇಶದಲ್ಲಿ ಅಸ್ತಿತ್ವದಲ್ಲಿಲ್ಲದ ಕಾರ್ಮಿಕರ ಹೋರಾಟ, ರೈತರ ಕೂಲಿ ಚಳುವಳಿ ನಂತರ ಅಂದಾಜು ೨೭ ವರ್ಷಗಳಿಗೆ ದೊರೆತ ಸ್ವಾತಂತ್ರ್ಯದ ತುಣುಕುಗಳನ್ನು ಕುರಿತು ಚರ್ಚಿಸಲಾಗಿದೆ.

ನಾರಾಯಣರಾವ್– ಅಡವಿಬಾಪಿರಾಜು ಅವರ ಜೀವನ ಸಾಧನೆ, ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡ ಬಗೆ, ಕೆಲವು ಜಮೀನ್ದಾರಿ ಪಾತ್ರಗಳನ್ನು ಕುರಿತು ಪರಿಚಯ ಮಾಡಿಕೊಟ್ಟಿದ್ದಾರೆ.

ಕೊಲ್ಲಾಯಿ ಗಟ್ಟಿತೇನೇಮಿ– ಈ ಕೃತಿಯಲ್ಲಿ ಗ್ರಾಮೀಣ, ಪಟ್ಟಣ ಪ್ರಾಂತ್ಯಗಳಲ್ಲಿ ಸಾಮಾಜಿಕ ವಾತಾವರಣ ಸಹಜವಾಗಿ, ಸಜೀವವಾಗಿ ಓದುಗರ ಕಣ್ಣು ಕಟ್ಟಿದಂತಿವೆ. ಸ್ವದೇಶಿ ವಸ್ತು ಬಳಕೆ, ವಿದೇಶಿ ವಸ್ತು ಬಹಿಷ್ಕಾರ, ದಲಿತೋದ್ಧಾರಣ ಕಾರ್ಯಕ್ರಮ, ಅಂತರ್ಜಾತಿ ವಿವಾಹ ವಿಷಯಗಳ ಕುರಿತು ಚರ್ಚಿಸಲಾಗಿದೆ.

ಹೀಗೆ ಕನ್ನಡ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಅಧ್ಯಯನಗಳಾಗಿದ್ದು, ಕನ್ನಡ–ತೆಲುಗು ಭಾಷೆಗಳಲ್ಲಿ ಸ್ವಾತಂತ್ರ್ಯ ಹೋರಾಟದ ಚಿತ್ರಣ ಕುರಿತಂತೆ ತೌಲನಿಕ ಅಧ್ಯಯನಗಳಾಗಿಲ್ಲದಿರುವುದರಿಂದ ಈ ಪ್ರಬಂಧವನ್ನು ಸಿದ್ದಪಡಿಸಲಾಗಿದೆ.

❖❖❖

ಅಧ್ಯಾಯ : ಮೂರು

ಕನ್ನಡ-ತೆಲುಗು ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟ

ಅಧ್ಯಾಯ: ಮೂರು

ಕನ್ನಡ–ತೆಲುಗು ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟ

ಈ ಜಗತ್ತಿನಲ್ಲಿ.... ತನ್ನನ್ನು ಹೆತ್ತ ತಾಯಿಯನ್ನು ಮತ್ತು ಜನ್ಮ ಕೊಟ್ಟ ಜನ್ಮಭೂಮಿಯನ್ನು ಸ್ಮರಿಸದೆ ಇರುವ ಕವಿಗಳು ಯಾರಾದರೂ ಇದ್ದಾರೆಯೇ? ಎಂದು ಪ್ರಶ್ನಿಸಿದರೆ ಇಲ್ಲ ಎಂಬ ಉತ್ತರ ಖಂಡಿತ ಬರಲಾರದು. ಆದ್ದರಿಂದಲೇ ವೇದಕಾಲೀನ ಸಂದರ್ಭದಲ್ಲೆ 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಸಂಸ್ಕೃತದ ಉಕ್ತಿ ಸುಭಾಷಿತದಂತೆ ಅಂದಿನಿಂದ ಇಂದಿನವರೆಗೂ ಜನರ ನಾಲಿಗೆಯ ಮೇಲೆ ನಿತ್ಯವೂ ಕ್ಷಣ ಕ್ಷಣವೂ ನರ್ತಿಸುತ್ತಿರುವುದು. ೧೯೨೦ರ ಸುಮಾರಿಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಭಾವ ಪ್ರವಾಹದ ಒಂದು ರಾಷ್ಟ್ರೀಯ ಆಯಾಮ ಪ್ರಾಪ್ತವಾಗಿತ್ತು. ದೇಶಾಭಿಮಾನವೇ ಆಗಿನ ಭಾವೋತ್ಕರ್ಷ ತಮ್ಮ ತನುಮನಧನವನ್ನೆಲ್ಲಾ ನಾಡಿಗಾಗಿ ಅರ್ಪಿಸಿದ ರಾಷ್ಟ್ರಾಭಿಮಾನಿ ಭಾರತೀಯರ ಸ್ವಾತಂತ್ರ್ಯ ಪಡೆಯೇ ಬೃಹತ್ತಾಗಿ ನಿರ್ಮಾಣವಾಯಿತು. ಅಂದಿನ ಸಂದರ್ಭದಲ್ಲಿ ಸ್ಪಂದಿಸಿದ ಕನ್ನಡ-ತೆಲುಗು ಲೇಖಕರ ಸಂಖ್ಯೆಯೂ ಅಗಣಿತವೇ. ಒಂದು ಕಡೆ ನೂತನ ಸಾಹಿತ್ಯ ಚಳುವಳಿ; ಅದಕ್ಕೆ ಪೂರಕವಾದದ್ದು. ಸ್ವಾತಂತ್ರ್ಯಾಂದೋಲನ ಸಾಹಿತ್ಯದಲ್ಲಿ ಹೊಸ ಮಾರ್ಗ, ದೇಶದಲ್ಲಿ ಠಿಕಾಣಿ ಹೂಡಿದ ಆಂಗ್ಲರನ್ನು ಹೊಡೆದೋಡಿಸಿ ಸ್ವಾತಂತ್ರ್ಯ ಪಡೆವ ಭಾರತೀಯರ ಅದಮ್ಯ ಹಂಬಲವೂ ಅಪ್ಪಟ ರಾಷ್ಟ್ರಾಭಿಮಾನಿ ಸ್ವಾತಂತ್ರ್ಯ ಹೋರಾಟದ ಸತ್ಯಾಗ್ರಹ ನೂತನ ಮಾರ್ಗ; ಇವೆರಡು ಜೊತೆ ಜೊತೆಗೆ ನಡೆದವು. ಅಂದು ದೇಶದಲ್ಲಿ ಅನುದಿನ ಅನುಕ್ಷಣ ಸ್ವಾತಂತ್ರ್ಯ ಸಂಗ್ರಾಮದ ಜೀವಂತ ಭಾವ ಸಂಚಲನ ಹೋರಾಟಕ್ಕೆ ಭಾರತೀಯರನ್ನು ಪ್ರೇರೇಪಿಸುವುದೇ ಆಗಿನ ಲೇಖಕರ ಸಾಹಿತ್ಯದ ಮೂಲ ಉದ್ದೇಶವಾಗಿತ್ತು. ಬ್ರಿಟಿಷ್ ವಸಾಹತುವನ್ನು ಧಿಕ್ಕರಿಸುವ ಸಂದರ್ಭದಲ್ಲಿ ದೇಶೀಯತೆಯನ್ನು ಕಟ್ಟುವ ಕೆಲಸವನ್ನು ಕನ್ನಡ-ತೆಲುಗು ಸಾಹಿತಿಗಳು ಮಾಡಿದರು. ದೇಶಪ್ರೇಮದ ಕಾದಂಬರಿಗಳು, ಕಾವ್ಯಗಳು, ನಾಟಕಗಳು, ಕಥೆಗಳು ಹಾಗೂ ಇದರ ಸಾಹಿತ್ಯ ಪ್ರಕಾರಗಳು ವಿಪುಲವಾಗಿ ಕಂಡು ಬಂದವು. ದೇಶೀಯತೆಯನ್ನು ಎತ್ತಿಹಿಡಿಯುವ ಸಂದರ್ಭದಲ್ಲಿ ಹಲವಾರು ಆಂತರಿಕ ವಿಷಯಗಳೊಂದಿಗೆ ಹೋರಾಟವನ್ನು ಮಾಡುವುದು ಕೂಡ ಅನಿವಾರ್ಯವಾಗಿತ್ತು. ಅವುಗಳನ್ನು ಅನ್ಯಭಾಷೆಗಳ ಹಿಡಿತ, ಸಾಮಾಜಿಕ ಅನಿಷ್ಟಗಳು, ದೇಶೀಯ ಪ್ರಭುತ್ವ ಇವೇ ಮೊದಲಾದವು ಮುಖ್ಯವಾದವು. ಒಂದು ಕಡೆ ಬ್ರಿಟಿಷರನ್ನು ಓಡಿಸಬೇಕು ಎನ್ನುವ ಹಟ, ಇನ್ನೊಂದೆಡೆ

ಭಾವನಾತ್ಮಕವಾಗಿ, ಭಾಷಿಕವಾಗಿ ಜನರನ್ನು ಒಂದುಗೂಡಿಸಬೇಕು ಎನ್ನುವ ಆಶಯ ಆ ಕಾಲದ ಕನ್ನಡ-ತೆಲುಗು ಲೇಖಕರದಾಗಿತ್ತು. ಹಾಗಾಗಿ ರಾಷ್ಟ್ರೀಯತೆಯು ಕನ್ನಡ-ತೆಲುಗು ಸಾಹಿತ್ಯಗಳಿಗೆ ಯಾವ ರೀತಿಯ ಪ್ರೇರಣೆ ನೀಡಿದೆ ಎಂಬುದನ್ನು ಆಯ್ದ ಕಾವ್ಯ, ಕಥೆ, ನಾಟಕಗಳಲ್ಲಿ ಒಂದು ಸ್ಥೂಲ ಸಮೀಕ್ಷೆಯನ್ನು ಚರ್ಚಿಸಲಾಗುವುದು. ಪ್ರಸ್ತುತ ಅಧ್ಯಯನವು ಕಾದಂಬರಿ ಪ್ರಕಾರವನ್ನು ಕೇಂದ್ರದಲ್ಲಿಟ್ಟುಕೊಂಡು ಮಾಡಿರುವ ಅಧ್ಯಯನವಾಗಿರುವುದರಿಂದ ಇಲ್ಲಿ ಅದನ್ನು ಹೊರತುಪಡಿಸಿ, ಕಾವ್ಯ, ಸಣ್ಣ ಕಥೆ ಮತ್ತು ನಾಟಕ ಪ್ರಕಾರಗಳ ಕುರಿತ ಸಂಗತಿಗಳನ್ನು ಮಾತ್ರ ಚರ್ಚಿಸಲಾಗಿದೆ. ಈ ಚರ್ಚೆಯು ಮುಂದೆ ಮಾಡಲಿರುವ ಕಾದಂಬರಿ ಚರ್ಚೆಗೆ ಪೂರಕವಾದುದಾಗಿದೆ.

ಕಾವ್ಯ

ಯಾವುದೇ ನಾಡಿನಲ್ಲಿ ಅದ್ಭುತವಾದ ಶಕ್ತಿ ಸಂಚಾರವಾಗದೇ ಅದ್ಭುತ ಕಾರ್ಯಗಳು ನಡೆಯುವುದಿಲ್ಲ. ಇಂತಹ ಶಕ್ತಿ ಸಂಚಾರದ ಕಾರ್ಯವನ್ನು ರಾಷ್ಟ್ರಗೀತೆಗಳು ದೇಶ ವಿದೇಶಗಳಲ್ಲಿ ಮಾಡುತ್ತ ಬಂದಿವೆ. ಭಾರತದ ಎಲ್ಲಾ ಭಾಷೆಗಳಲ್ಲಾದಂತೆ ಕರ್ನಾಟದಲ್ಲಿಯೂ ರಾಷ್ಟ್ರೀಯತೆಯ ಭಾವವನ್ನು ಹೊರಹೊಮ್ಮಿಸುವ ದೇಶಭಕ್ತಿ ಹಾಗೂ ನುಡಿಯ ಬಗೆಗೆ ತಮಗಿರುವ ಅಭಿಮಾನವನ್ನು ಇಲ್ಲಿನ ಕವಿಗಳು ಅದ್ಭುತ ರೀತಿಯಲ್ಲಿ ಹೊರಹೊಮ್ಮಿಸಿದ್ದಾರೆ. ಆಯಾ ದೇಶ-ಕಾಲ-ಧರ್ಮ-ಸಮಾಜದ ಧರ್ಮವನ್ನು ಅರಿತು ಅಲ್ಲಲ್ಲಿಯ ಸಂಸ್ಕೃತಿಯ ತಿರುಳನ್ನು ಅರುಗಿಸಿಕೊಂಡು ರಾಷ್ಟ್ರಭಾವನೆಯನ್ನು, ದೇಶದ ಮೇಲಿನ ಪ್ರೀತಿಯನ್ನು, ತನ್ನ ನಾಡಿನ ಸರ್ವಸ್ವವನ್ನೂ ತಮ್ಮ ಗೀತೆಗಳ ಮೂಲಕ ಸರಳ ಸುಂದರವಾಗಿ ಹೊರಹೊಮ್ಮಿಸುವುದೇ ರಾಷ್ಟ್ರಗೀತೆ. ಇದಕ್ಕೊಂದು ಅತ್ಯುತ್ತಮ ಉದಾಹರಣೆ ಜೈ ಭಾರತ ಜನನಿಯ ತನುಜಾತೆ ಕವಿತೆ.

ಗಾಂಧೀಜಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಖಾಮುಖಿಯಾಗಿ ಎದುರಿಸಿದ ದುಗುಡ ದುಮ್ಮಾನಗಳು ಅಗಣಿತ. ಆ ಎಲ್ಲ ಅಸಂಖ್ಯಾ ಎಡರು-ತೊಡರುಗಳನ್ನು ದಾಟಿ ಸ್ವಾತಂತ್ರ್ಯದ ಪತಾಕೆಯನ್ನು ಪಡೆಯಲು ಅವರು ನಡೆಸಿದ ಹೋರಾಟವಂತೂ ಅವರ್ಣನೀಯವಾಗಿದೆ. ಪು.ತಿ.ನ. ಅವರ ನೆರಳು ಕವಿತೆಯಲ್ಲಿ

ಮೇಲೊಂದು ಗರುಡ ಹಾರುತಿಹುದು
ಕೆಳಗೆ ಅದರ ನೆರಳು ಓಡುತಿಹುದು
ಅದಕೋ ಅದರಿಚ್ಚೆ ಹಾದಿ
ಇದಕೋ ಇದರತ್ತ ಬೀದಿ
ಇದನೋಡಿ ನಾನು ನೆನೆವೆನಿಂದು
ಇಂಥ ನೆಳಲೇನು ಗಾಂಧಿಯೆಂದು
ಹರಿದತ್ತ ಹರಿಯ ಚಿತ್ತ
ಈ ಧೀರ ನಡೆವನತ್ತು. (ಗಣೇಶ ದರ್ಶನ, ಪುಟ–೪೯, ೧೯೪೯)

ಕಾವ್ಯ ಇತಿಹಾಸದಲ್ಲಿ ಇಂಥ ಅಪೂರ್ವ ನುಡಿಗಳು ಸಹೃದಯರ ಚಿತ್ತ ಸೆಳೆಯುತ್ತವೆ. ಗರುಡ ತನ್ನ ಅಭೀಪ್ಸೆಯಂತೆ ತನ್ನ ಇಚ್ಛೆಯಂತೆ ಹಾರುತ್ತದೆ. ಅದರಂತೆಯೇ ಅದರ ನೆರಳು ಅದನ್ನು ಹಿಂಬಾಲಿಸಿ ಓಡುತ್ತದೆ. ಅದೇ ರೀತಿ ಗಾಂಧೀಜಿಯವರ ಮುಕ್ತಮನಸ್ಸು, ಇಚ್ಛಾಶಕ್ತಿ ಸ್ವಾತಂತ್ರ್ಯ ಪಡೆಯುವತ್ತ ನೆಟ್ಟಿದೆ ಎಂದು ಗಾಂಧೀಜಿಯವರನ್ನು ಕವಿಗಳು ಗರುಡಕ್ಕೆ ಹೋಲಿಸಿದ್ದಾರೆ.

ಪುಂಡೂರು ಪುಣಿಂಚತ್ತಾಯ ಅವರು ಅಪ್ರತಿಮ ಹೋರಾಟಗಾರರು ಗಾಂಧೀಜಿಯವರ ಅನುಯಾಯಿಯಾಗಿದ್ದವರು. ಅವರು ತಮ್ಮ 'ಖಾದಿಯ ಹಾಡು' ಎಂಬ ಕವಿತೆಯಲ್ಲಿ

ಪರದೇಶದ ಬಟ್ಟೆಯ ಬಿಡುಬಿಡು
ಸುಡುಸುಡು, ದೇಶಬಂಧು
ಸ್ವರ್ಣಧರಣಿಯಾ ಸ್ವರ್ಣವನೆಲ್ಲವ
ಪೂರ್ಣ ವಿದೇಶೀ ವಸ್ತ್ರಕೆ ಕೊಡುವ
ಕರ್ಣ ಕಠೋರ ವಿಚಾರವ ಸುಡು ಸುಡು
ಚರಕವ ತಿರುಗಿಸಿ, ಬಟ್ಟೆಯನೊದಗಿಸಿ
ಪರದೇಶೀ ವ್ಯಾಪಾರವ ನಿಲ್ಲಿಸಿ
ಧರೆಗೆ ಸ್ವರಾಜ್ಯದ ಬಟ್ಟೆ ಕೊಡು ಕೊಡು
(ಸ್ವಾತಂತ್ರ್ಯ ಹೋರಾಟದ ಗೇಯಗೀತೆಗಳು, ಪುಟ–೧೧೮, ೧೯೯೮)

ಬ್ರಿಟಿಷರನ್ನು ನಮ್ಮ ದೇಶದಿಂದ ಹೊರದೂಡುವ ತಂತ್ರಗಳಲ್ಲಿ ಸ್ವದೇಶಿ ವಸ್ತುಬಳಕೆ, ವಿದೇಶಿ ವಸ್ತು ಬಹಿಷ್ಕಾರವೂ ಒಂದಾಗಿದೆ. ಬ್ರಿಟಿಷರ ಆರ್ಥಿಕತೆಯ ಮೇಲೆ ಪೆಟ್ಟು ನೀಡುವ ಕಾರ್ಯ ಇದಾಗಿದೆ. ಅದಕ್ಕೆ ಪ್ರತಿಯಾಗಿ ಚರಕದಿಂದ ತಮ್ಮ ಬಟ್ಟೆಗಳನ್ನು ತಾವೇ ನೂತು ಸ್ವಾವಲಂಬನೆ ಜೀವನ ನಡೆಸುವುದು ಕವಿತೆಯ ಉದ್ದೇಶವಾಗಿದೆ. ಗಾಂಧೀಜಿಯವರು ಅನುಷ್ಠಾನಕ್ಕೆ ತಂದ ಚರಕ, ನೂಲಿನ ಬಟ್ಟೆ ಸ್ವ-ಉದ್ಯೋಗದ ಸಂಕೇತಗಳಾಗಿ ಚಿತ್ರಿತವಾಗಿವೆ.

ಅದೇ ಕವಿಯ ತೀವ್ರ ಸಂವೇದನಾತ್ಮಕ ಗುಣಗಳನ್ನೊಳಗೊಂಡ "ಹರಿಜನ ಸಂಧಾನ" ಎಂಬ ಕವಿತೆಯಲ್ಲಿ ಅಂದಿನ ದಿನಮಾನಗಳ ಪರಿಸ್ಥಿತಿಯನ್ನು ಅರಿಯಬಹುದಾಗಿದೆ. ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರ ಹೊಲತಿಯರ ಸಂಭಾಷಣೆಯನ್ನು ಹೋಲುವಂತೆ, ಅರ್ಥ, ಪ್ರಾಸಗಳು ಸ್ಪಷ್ಟವಾಗಿವೆ. ದೇಶದ ಸ್ವಾತಂತ್ರ್ಯಕ್ಕೆ ಸಮಾಜದಲ್ಲಿರುವ ಎಲ್ಲಾ ವರ್ಗದ ಜನರು ಸಹಕರಿಸಬೇಕು. ಅದರಿಂದಾಗಿ ಸಮಾಜದಲ್ಲಿನ ಜಾತಿ-ಭೇಧ ಎಂಬ ಅಸಮಾನತೆಯನ್ನು ಹೋಗಲಾಡಿಸಲು ಕವಿ.

ಹರಿವ ಹೊಳೆಯನು ನಾವು ಮುಟ್ಟಿರಲು ಮುಳುಗುವಿರಿ
ಹರಿಜನರು ಕಬ್ಬುಗಳ ಕೊಡಲು ಕೊಳ್ಳುವಿರಿ
ನಿಮ್ಮವರು ಹೊಯ್ಲಿನಲಿ ಸಿಕ್ಕಿ ಸಂಕಟಪಡಲು
ನಮ್ಮವರು ಹಾರಿ ಬದುಕಿಸುವರೆಂದಿರಲು

ನಮ್ಮ ಹಸುಗೂಸುಗಳು ಬಾವಿಯಲಿ ಬಿದ್ದರೂ
ನಿಮ್ಮವರು ಕೆಳಗಿಳಿದು ಮುಟ್ಟಲಂಜುವರು
(ಸ್ವಾತಂತ್ರ್ಯ ಹೋರಾಟದ ಗೇಯಗೀತೆಗಳು, ಪುಟ-೧೮೧, ೧೯೯೮)

ಅಂದಿನ ಸಂದರ್ಭದಲ್ಲಿ ರಾಜಕೀಯ ಸ್ವಾತಂತ್ರ್ಯದಷ್ಟೇ ಸಾಮಾಜಿಕ ಸ್ವಾತಂತ್ರ್ಯ ಮುಖ್ಯವಾಗಿತ್ತು. ದೇಶದ ಎಲ್ಲಾ ವರ್ಗದ ಜನತೆಯನ್ನು ಒಗ್ಗೂಡಿಸಿ ಚಳುವಳಿಯಲ್ಲಿ ತೊಡಗಿಸುವುದು ರಾಷ್ಟ್ರನಾಯಕರ ಉದ್ದೇಶವಾಗಿತ್ತು. ಆದರೆ ಉನ್ನತವರ್ಗಗಳು ಕೆಳವರ್ಗಗಳನ್ನು ಶೋಷಿಸುತ್ತಿರುವ ರೀತಿಯನ್ನು ಈ ಕವಿತೆ ತಿಳಿಸುತ್ತದೆ.

ಭೀಮರಾಯ 'ಪದಾ' ಎಂಬ ಕವಿತೆಯಲ್ಲಿ ಸ್ವರಾಜ್ಯ ದೊರೆಯಬಹುದು ಎಂಬ ಭರವಸೆಯನ್ನು ಇಟ್ಟುಕೊಂಡು ಬರೆದಿರುವುದು ಕಂಡುಬರುತ್ತದೆ. ಈ ಕವಿತೆಯಲ್ಲಿ ರಾಷ್ಟ್ರೀಯ ನಾಯಕರನ್ನು ಮಹಾಭಾರತದ ಪಾಂಡವರಿಗೆ ಓಲೈಸಿ ರಚಿಸಿದ್ದಾರೆ.

"ಮೂರುಲೋಕದ ಗಂಡ ಅರ್ಜುನನಂತೆ ಜವಾಹರಲಾಲ
ನೆಹರು ಪ್ರಖ್ಯಾತಿ । ಭೀಮಸೇನನಂತೆ ಆರ್ಭಟ ಮಾಡುವ
ಸುಭಾಶ್ಚಂದ್ರಬೋಸ್ ರಾಷ್ಟ್ರಪತಿ । ಧರ್ಮರಾಜನಂತೆ ಸೌಮ್ಯಗುಣದವ
ಅಬ್ದುಲ್‌ಗಫರಖಾನ ಮಹಾಮೂರ್ತಿ । ನಕುಲ ಸಹದೇವರೆಂಬು
ಸ್ವಯಂ ಸೇವಕರು ಹಗಲಿ ರಾತ್ರಿ ಮಾಡುತಾರ ಚಿಂತಿ
ದ್ರೌಪದಿ ತಾಯಿಯೆಂಬ ಸ್ವತಂತ್ರಭೂದೇವಿಯ ಮಾನ ಉಳಿಸುದಕ
ಮಾಡತಾರ ಯುಕ್ತಿ । ಕೃಷ್ಣಪರಮಾತ್ಮನಂತೆ ಮಹಾತ್ಮಗಾಂಧಿಯವರು
ತಯಾರಾಗಿ ನಿಂತಾರ ಸಾರಥಿ"
(ಸ್ವಾತಂತ್ರ್ಯ ಹೋರಾಟದ ಗೇಯಗೀತೆಗಳು, ಪುಟ-೩೯, ೧೯೯೮)

ಈ ಕವಿತೆಯಲ್ಲಿ ನೆಹರು, ಸುಭಾಶ್ಚಂದ್ರ ಬೋಸ್, ಅಬ್ದುಲ್ ಗಫರ್‌ಖಾನ್, ಮಹಾತ್ಮಗಾಂಧಿ ಅಪ್ರತಿಮ ಅರ್ಜುನ, ಭೀಮ, ಧರ್ಮರಾಯ, ನಕುಲ ಸಹದೇವ, ಶ್ರೀಕೃಷ್ಣ ಅವರೊಂದಿಗೆ ಸಮೀಕರಿಸಿ ಪಾಂಡವರು ಭೂಮಿಗಾಗಿ ಹೋರಾಡಿದಂತೆ ರಾಷ್ಟ್ರೀಯ ನಾಯಕರು ಭೂಮಿ ತಾಯಿ ಎಂಬ ಭಾರತ ಮಾತೆಯನ್ನು ಬ್ರಿಟಿಷರ ಅಧೀನದಿಂದ ವಿಮುಕ್ತಿಗೊಳಿಸಲು ಹೋರಾಟ ನಡೆಸುತ್ತಿರುವುದನ್ನು ಚಿತ್ರಿಸಲಾಗಿದೆ. ಶ್ರೀಕೃಷ್ಣನು ಪಾಂಡವರಿಗೆ ನಾಯಕ, ಸಾರಥಿ, ಮಾರ್ಗದರ್ಶಿಯ ಹಾಗೆ ಗಾಂಧೀಜಿ ರಾಷ್ಟ್ರಕ್ಕೆ ಮುಂದಾಳು, ನಾಯಕ, ಸಾರಥಿಯಾಗಿ ಚಿತ್ರಿತವಾಗಿದ್ದಾರೆ.

ಬಿಷ್ಟಪ್ಪ ಮಂಡೇದ 'ಕಳ್ಳಿ' ಎಂಬ ಕವಿತೆಯನ್ನು ಬ್ರಿಟಿಷರಿಗೆ ಹೋಲಿಸಿ ರಚಿಸಿದ್ದಾರೆ. ಪ್ರಕೃತಿಯಲ್ಲಿ ಈ ಸಸ್ಯ ಮನುಷ್ಯನಿಗೆ ಹಾನಿಯನ್ನುಂಟುಮಾಡುವ ಜಾತಿಯದಾಗಿರುತ್ತದೆ.

'ಸನ್ನುತ ಪ್ರಜರಿಗೆ । ಬನ್ನ ಬಿಡಿಸಿದ ಕಳ್ಳಿ
ಊರಕೇರಿಗಳಲ್ಲಿ । ನೀರಿನ ನೆರೆಯಲ್ಲೀ
ಬೇರೂರಿ ನೆಲೆಸಿತೂ । ನಮ್ಮ ಭಾರತದಲ್ಲೀ
ಕೆಂಪು ಕಾಯದ ಕಳ್ಳಿ । ತಂಪು ಮಾಡಿದ ಕಳ್ಳೀ ।
ಪೆಂಪಿನ ಭಾರತದ ಸೊಂಪನ್ನಡಗಿಸಿದ ಕಳ್ಳೀ ।
ರೊಕ್ಕ ಹೀರಿದ ಕಳ್ಳೀ । ಬಿಕ್ಕೆ ಹಚ್ಚಿದ ಕಳ್ಳಿ ।
ಒಕ್ಕಲಿಗನಿಗೇ ಮಣ್ಣು । ಮುಕ್ಕಿಸಿದ ಕಳ್ಳಿ
ದುಷ್ಟ ಪ್ರಾಣಿಗಳಿಂದ । ಆರ್ಭಟಿಸೊ ಕಳ್ಳೀ ।
ನಷ್ಟ ಮಾಡಿತೋ ನಮ್ । ಶ್ರೇಷ್ಟ ಭಾರತವನ್ನು'
(ಸ್ವಾತಂತ್ರ್ಯ ಹೋರಾಟದ ಗೇಯಗೀತೆಗಳು, ಪುಟ-೫೫, ೧೯೯೮)

ಭಾರತಕ್ಕೆ ವ್ಯಾಪಾರಕ್ಕೆ ತಕ್ಕಡಿ ಹಿಡಿದು ಬಂದ ಬ್ರಿಟಿಷರು ಸು. ಮುನ್ನೂರು ವರ್ಷಗಳ ಕಾಲ ಆಳ್ವಿಕೆ ನಡೆಸುತ್ತಾರೆ. ನಾಡಿನಾದ್ಯಂತ ತಮ್ಮ ಕೋಟೆಗಳನ್ನು ಕಟ್ಟುತ್ತಾರೆ. ಭಾರತದ ಸಂಪತ್ತನ್ನೆಲ್ಲ ಕೊಳ್ಳೆ ಹೊಡೆಯುತ್ತಾರೆ. ಭಾರತದ ಜನಜೀವನದ ಮೇಲೆ ಏರಬಾರದ ಕಂದಾಯಗಳನ್ನು ಏರಿ ಆರ್ಥಿಕವಾಗಿ ಶೋಷಣೆ ಮಾಡುತ್ತಾರೆ. ದುಷ್ಟ ಪ್ರಾಣಿಗಳಂತೆ ಅನೇಕ ದುಷ್ಕೃತ್ಯಗಳನ್ನು ಎಸಗುತ್ತಾರೆ ಎಂದು ಕಳ್ಳಿ ಪ್ರಕೃತಿಯನ್ನು ನಾಶ ಮಾಡಿದಂತೆ ಬ್ರಿಟಿಷರು ಸ್ವಚ್ಛ ಭಾರತವನ್ನು ಸರ್ವನಾಶ ಮಾಡಿರುವುದನ್ನು ಇದರಿಂದ ತಿಳಿಯಬಹುದು.

ಮಾತೃಭೂಮಿಯನ್ನು ದಾಸ್ಯಶೃಖಲೆಗಳಿಂದ ವಿಮುಕ್ತಿ ಹೊಂದಿಸಲು ಎಷ್ಟೋ ಮಂದಿ ಭಾರತ ಮಾತೆಯ ಪುತ್ರರು ಪರಿತಪಿಸಿದರು. ದೇಶಕ್ಕಾಗಿ ಆತ್ಮಾರ್ಪಣೆ ಮಾಡಿಕೊಂಡರು. ತೆಲುಗು ಕವಿಗಳು ಅಂತಹ ಪವಿತ್ರ ಯಜ್ಞದಲ್ಲಿ ಪಾಲು ಪಡೆದರು. ತಮ್ಮ ಕನಸುಗಳನ್ನು ತುಪಾಕಿಗಳನ್ನಾಗಿಸಿಕೊಂಡು ಪ್ರಭೋದಗೀತೆಗಳನ್ನು ಮದ್ದುಗುಂಡುಗಳಂತೆ ಆಂಗ್ಲರ ಮೇಲೆ ಪ್ರಯೋಗಿಸಿದರು. ಅದರಂತೆ ದರ್ಭಾಕ ರಾಜಶೇಖರಾವಧಾನಿ ಎಂಬ ಕವಿ ಚಾರಿತ್ರಿಕ ವ್ಯಕ್ತಿಯನ್ನು ವಸ್ತುವನ್ನಾಗಿಸಿಕೊಂಡು ರಾಣಾಪ್ರತಾಪಸಿಂಹ ಚರಿತ್ರೆ ಎಂಬ ಕಾವ್ಯ ರಚಿಸಿದ್ದಾರೆ.

ಚರಿತ್ರೆ ನಿರ್ಮಾಪಕರು ಚರಿತ್ರೆಕಾರರಂತಹ ಮಹನೀಯರುಗಳ ಜೀವನ ಚರಿತ್ರೆಗಳನ್ನು ಕಾವ್ಯಗಳಾಗಿ ಮಾರ್ಪಡಿಸಿ ಪ್ರಜೆಗಳಲ್ಲಿ ಪ್ರಾಚೀನ ವೈಭವ, ಗಾಢವಾದ ಅಭಿಮಾನವನ್ನು ರೂಪಿಸಿ ಕವಿತೆ/ಕಾವ್ಯಗಳನ್ನು ರಚಿಸಿರುವ ಮಹಾಕವಿಗಳಲ್ಲಿ ರಾಜಶೇಖರಾವಧಾನಿಗಳು ಒಬ್ಬರು. ಈ ಕಾವ್ಯ ಆಂಧ್ರ ಸಾಹಿತ್ಯ ಚಾರಿತ್ರಿಕ ಕಾವ್ಯಗಳಲ್ಲಿಯೇ ಅಗ್ರ ಶ್ರೇಣಿಯ ಸ್ಥಾನದಲ್ಲಿರುವುದು. ತಿಲಕ್, ಮದನ ಮೋಹನ ಮಾಳವೀಯ, ಗಾಂಧೀಜಿ ಈ ಮೂವರು ಮಹಾನಾಯಕರ ನಡೆ-ನುಡಿಯನ್ನು ಅಳವಡಿಸಿಕೊಂಡು ಸ್ವರಾಜ್ಯ ಸಮರಕ್ಕೆ ಸಮುತ್ತೇಜ ಕಲ್ಪಿಸಲು ಪ್ರಥಮವಾಗಿ ಪ್ರಯತ್ನ ಪಟ್ಟವರು ದರ್ಭಾಕ ರಾಜಶೇಖರಾವಧಾನಿಯವರು.

ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿಯ ಪ್ರಭಾವದಿಂದ ಹುಟ್ಟಿಕೊಂಡ ಸ್ವಾತಂತ್ರ್ಯಕ್ಕೆ ವ್ಯತಿರೇಕವಾಗಿ ಈ ಕಾವ್ಯ ರಚನೆಯಾಗಿದೆ. ಈ ಕಾವ್ಯದಲ್ಲಿ ರಾಜಮನೆತನದವರಿಗೂ, ಮಹಮ್ಮದಿಯರಿಗೂ ನಡೆದ ಯುದ್ಧವನ್ನು ವಿವರಿಸಲಾಗಿದೆ. ರಾಣಾಪ್ರತಾಪನು ಲೋಕೋತ್ತರ ನಾಯಕ ಧೀರೋದ್ಧಾತ ಗಂಭೀರ ಮೂರ್ತಿ. ಆತನನ್ನು ದೇವಲೋಕದಿಂದ ಇಳಿದು ಬರುವ ಶಿವನಿಗೆ ಹೋಲಿಸಲಾಗಿದೆ.

ಕನ್ನಡ ಭಾಷಾಂತರ

ಗಜಚರ್ಮವನ್ನು ಶೀಘ್ರವಾಗಿ ಕಣ್ಣಿನಿಂದ ಬಿಡಿಸಿದ
ಚಂದಿರ ಕಿರಣಗಳನ್ನು ಕೈಲಾಸಕ್ಕೆ ನೆಟ್ಟಿದ
ಭರತಖಂಡವನ್ನು ಉದ್ಧರಿಸಲು ಜನಿಸಿದ
ದೂರ್ಜಟಿ ನೀನು, ರಾಜನು ಮಾತ್ರ ಅಲ್ಲ.
(ಮೂಲ; ಅನುಬಂಧ–೩ ಅಧ್ಯಾಯ–೩ ಕ್ರಸಂ. ೧)

ಈ ಪದ್ಯದಲ್ಲಿ ಸ್ವಾತಂತ್ರ್ಯ ದೇವತಾ ಸ್ವರೂಪವೂ ಆತನೇ ಎಂಬುದಾಗಿ ಚಿತ್ರಿತವಾಗಿದ್ದಾನೆ. ಈ ಕಾವ್ಯ ಗಾಂಧೀಜಿ ಸ್ವಾತಂತ್ರ್ಯ ಚಳುವಳಿಯ ನೇತೃತ್ವ ವಹಿಸಿದ ಸಂದರ್ಭದಲ್ಲಿ ರಚನೆಯಾಗಿರಬಹುದು ಎನಿಸುತ್ತದೆ. ರಾಣಾಪ್ರತಾಪನ ದೀಕ್ಷಾ ಸಹ ಒಂದು ಹೋರಾಟದ ಮಹಾಯಜ್ಞವಾಗಿದ್ದು, ಆ ಸಂದರ್ಭದ ಸ್ವಾತಂತ್ರ್ಯ ಸಂಗ್ರಾಮದ ಪ್ರಯತ್ನವೇ ಕವಿಗೆ ಇಂತಹ ವೀರ ಚರಿತ್ರೆಯನ್ನು ಕಾವ್ಯವಸ್ತುವನ್ನಾಗಿಸಿಕೊಳ್ಳುವುದಕ್ಕೆ ಪ್ರೇರಿತವಾಗಿರಬಹುದು.

ರಾಣಾಪ್ರತಾಪನು ತನ್ನ ಸೈನಿಕರಿಗೆ ಸ್ವಾತಂತ್ರ್ಯ ಚಳುವಳಿಯನ್ನು ಕುರಿತು ಈ ರೀತಿ ಬೋಧನೆಯನ್ನು ಮಾಡುತ್ತಾನೆ.

ಕನ್ನಡ ಭಾಷಾಂತರ

ಪಾರತಂತ್ರ್ಯವನ್ನು ಹೋಗಲಾಡಿಸಿ ಸ್ವಾತಂತ್ರ್ಯವನ್ನು ಪಡೆದು
ಯುದ್ಧವು (ಬರುವ) ಸಂಭವಿಸುವ ವರ್ಷದಲ್ಲಿ
ಹಬ್ಬದ ಸಡಗರ ನಿನ್ನ ಭಾರತ ಪ್ರಜೆಗಳಿಗೆಲ್ಲ
ಸಮಭಾಗವಾದ ಉತ್ಸಾಹದ ಸಮಯದಲ್ಲಿ
ಎಲ್ಲರ ಮುಖವನ್ನು ಗಂಟಾಕಿಕೊಂಡು ನಿಂತುಕೊಂಡು
ಗೆಲ್ಲುತ್ತೇವೆಂದು ಸ್ವಾತಂತ್ರ್ಯ ಸಿದ್ಧಿಯ ಗುಂಗಿನಲ್ಲಿರುವವರೆಗೂ
ಶಾಶ್ವತ ನರಕಲೋಕದ ವಾಸನೆಯ ಬೇಡ
(ಮೂಲ; ಅನುಬಂಧ–೩ ಅಧ್ಯಾಯ–೩ ಕ್ರಸಂ. ೨)

ರಾಣಾಪ್ರತಾಪಸಿಂಹನು ನಡೆಸಿದ ಯುದ್ಧಕ್ಕೂ, ಮಹಾತ್ಮನ ಸತ್ಯಾಗ್ರಹ, ಚಳುವಳಿಗೂ ಯಾವುದೇ ಭೇಧವಿಲ್ಲ. ಇಬ್ಬರದೂ ಒಂದೇ ಮಾರ್ಗ ಭಾರತೀಯರನ್ನು ಬ್ರಿಟಿಷರ ಗುಲಾಮತ್ವದಿಂದ

ಬಿಡುಗಡೆಗೊಳಿಸುವುದಾಗಿದೆ. ಆದರೆ ಗಾಂಧೀಜಿಯವರದು ಕತ್ತಿಯಿಲ್ಲದ ಹೋರಾಟ, ಪ್ರತಾಪಸಿಂಹನದು ಕತ್ತಿ ಇರುವ ಹೋರಾಟವಾಗಿದೆ.

ಕನ್ನಡ ಭಾಷಾಂತರ

ಈಶ್ವರನ ಭಕ್ತಿಯನ್ನು ಬಿಡುವಂತಿಲ್ಲ
ಮಧುಮಾಂಸ ಸೇವನೆಗೆ ಆಸೆ ಪಡಬಾರದು
ಬಂಗಾರ, ಬೆಳ್ಳಿಗೆ ಮೋಹಗೊಳ್ಳಬಾರದು
ಭೋಗಜೀವನದ ಕಡೆ ಹೋಗಬಾರದು
ಕಾಮ, ಶತ್ರುಗಳ ಕಡೆ ಸೇರಬಾರದು
ಸತ್ಯವನ್ನ ಬಿಡಬಾರದು
ಆತ್ಮನಿಗ್ರಹವನ್ನು ಮಾಡಬೇಕು
ಮಾನ ಮರ್ಯಾದೆ, ಧನದ ಬಗ್ಗೆ ಯೋಚಿಸಬಾರದು
ಧರ್ಮವೇ ದೈವವೆಂಬ ಯೋಚನೆ ಬಿಡಬಾರದು
(ಮೂಲ; ಅನುಬಂಧ-೩ ಅಧ್ಯಾಯ-೩ ಕ್ರಸಂ. ೩)

ಸರ್ವ ದೇಶಗಳು ಒಂದಾಗಿ ಎದುರಾಗಿ ನಿಂತರೂ ದೇಶಭಕ್ತಿಯಿಂದ ಹೋರಾಡಬೇಕು. ಈಶ್ವರನ ಮೇಲಿನ ಭಕ್ತಿ ಬಿಡಬಾರದು. ಮದ್ಯಸೇವನೆ ಮಾಡಬಾರದು. ಭೋಗಜೀವನ ನಡೆಸಬಾರದು. ವೇಶ್ಯೆ ಸಹವಾಸ ಮಾಡಬಾರದು. ಸತ್ಯವನ್ನು ಬಿಡಬಾರದು. ಎಂತಹ ಸಂದರ್ಭದಲ್ಲಿಯಾದರೂ ದೇಶಕ್ಕಾಗಿ ತ್ಯಾಗ ಮಾಡಲು ಸಿದ್ಧರಿರಬೇಕು. ಧರ್ಮವೇ ದೈವವೆಂದು ಹೋರಾಟ ಮಾಡಬೇಕೆಂದು ಸೈನಿಕರಿಗೆ ರಾಣಾಪ್ರತಾಪನು ಬೋಧಿಸುತ್ತಾನೆ.

ಹೀಗೆ ಕವಿ ಅಕ್ಬರ್-ರಾಣಾಪ್ರತಾಪರ ನಡುವಿನ ಕದನ ಮತ್ತು ಭಾರತ ಬ್ರಿಟಿಷರ ಕಾಳಗಕ್ಕೆ ಓಲೈಸುತ್ತ ರಾಣಾಪ್ರತಾಪನನ್ನು ಮುಕ್ಕಣ್ಣನಾದ ಶಿವನಿಗೆ ಹೋಲಿಸುತ್ತಿರುವುದನ್ನು ಕಾಣಬಹುದಾಗಿದೆ.

ಮುದಿಗೊಂಡ ವೀರಭದ್ರಮೂರ್ತಿ ವಂದೇಮಾತರಂ ಎಂಬ ಕಾವ್ಯವನ್ನು ರಚಿಸಿದ್ದಾರೆ. ವೀರಭಾರತ ತತ್ವವನ್ನು ಪರಿಪಾಲಿಸುವುದು ಈ ಕಾವ್ಯದಲ್ಲಿ ಕಾಣಬಹುದಾಗಿದೆ. ಕವಿ ಈ ಕಾವ್ಯದಲ್ಲಿ ಮಹಾಭಾರತದಂತೆ ೧೮ ಖಂಡಗಳನ್ನು ಸೃಷ್ಟಿಸಿದ್ದಾರೆ. ಭಾರತ ಮಾತೆಯ ವಿಮುಕ್ತಿಗಾಗಿ ಜರುಗಿದ ಮಹಾಸಮರದಲ್ಲಿ ಅನೇಕ ವೀರಾಧಿವೀರರು, ತ್ಯಾಗಮಯಿಗಳು, ತಪಸಂಪನ್ನರು, ದೇಶಭಕ್ತರು, ವೀರವನಿತೆಯರು ತಮ್ಮ ತಮ್ಮ ಪ್ರಾಣಗಳನ್ನು ಅರ್ಪಿಸಿರುವುದನ್ನು ಈ ಕಾವ್ಯದಲ್ಲಿ ಚಿತ್ರಿಸಿದ್ದಾರೆ.

ಕನ್ನಡ ಭಾಷಾಂತರ

ಈಶ ಭಕ್ತಿಗೆ ಮಿಂಚಿದ ದೇಶಭಕ್ತಿ
ದೇಶಭಕ್ತಿಗೆ ಮಿಗಿಲಾದ ಆತ್ಮಶಕ್ತಿ

ಆತ್ಮಶಕ್ತಿಯಿಂದ ರಕ್ತವನ್ನು
ಚೆಲ್ಲಿದರೆ ಭಾರತಕ್ಕೆ ಮುಕ್ತಿ
(ಮೂಲ; ಅನುಬಂಧ-೩ ಅಧ್ಯಾಯ-೩ ಕ್ರಸಂ. ೪)

ಈಶ್ವರನ ಮೇಲಿನ ಭಕ್ತಿಗಿಂತ ದೇಶಭಕ್ತಿ ಅಪಾರವಾದುದು ಮಿಗಿಲಾದುದು. ದೇಶಭಕ್ತಿಗಿಂತ ಘನತರವಾದುದು ಆತ್ಮಶಕ್ತಿ ಎಂದು ಆತ್ಮಶಕ್ತಿಯಿಂದ ದಿಟ್ಟತನದ ಹೋರಾಟ ಮಾಡಿದರೆ ಭಾರತ ಮುಕ್ತಿ ಎಂಬುದನ್ನು ಈ ಕವಿತೆ ಧ್ವನಿಸುತ್ತದೆ. ರಾಷ್ಟ್ರೀಯತೆಯನ್ನು ಪ್ರತಿಯೊಬ್ಬ ವ್ಯಕ್ತಿಯಲ್ಲು ಉಂಟು ಮಾಡುವುದೇ ಈ ಕಾವ್ಯದ ಆಶಯವಾಗಿದೆ.

ಸಣ್ಣ ಕತೆ

ಸ್ವಾತಂತ್ರ್ಯ ಚಳವಳಿ ಎಂಬುದು ದೇಶದಲ್ಲಿ ನಡೆಯುತ್ತಿರುವಂತಹ ಮಹಾನ್ ಯಜ್ಞ, ಅಂತಹ ಮಹಾನ್ ಕಾರ್ಯದಲ್ಲಿ ಅನೇಕ ದೇಶ ಭಕ್ತರು ಸ್ವಾತಂತ್ರ್ಯದ ಬಿಡುಗಡೆಗಾಗಿ ತಮ್ಮ ಮಾತಿನ ಲಹರಿಯಿಂದ ಸ್ವಾತಂತ್ರ್ಯ ಚಳುವಳಿಯನ್ನು ಕುರಿತು ಅನೇಕ ಕವಿತೆಗಳನ್ನು ರಚಿಸಿ ಜನರನ್ನು ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಹುರಿದುಂಬಿಸುತ್ತಿದ್ದಾರೆ. ಅಂತೆಯೇ ಮೌಢ್ಯತೆಯ, ಗುಲಾಮಗಿರಿಯ ಮಡುವಿನಲ್ಲಿ ಬಿದ್ದಿರುವಂತ ದೇಶದ ಜನತೆಯನ್ನು ಜಾಗೃತಿಗೊಳಿಸಲು ಸಣ್ಣಕತೆಯ ಪ್ರಕಾರವನ್ನು ದುಡಿಸಿಕೊಳ್ಳಲಾಗಿದೆ. ಬ್ರಿಟೀಷರ ಅಧೀನದಲ್ಲಿ ಅಧಿಕಾರ ಚಲಾಯಿಸುವ ಸಾಮ್ರಾಜ್ಯಶಾಹಿಯು ಸಾಮಾನ್ಯ ಜನರನ್ನು ಶೋಷಿಸಿದ ರೀತಿ, ಸರ್ಕಾರದ ಅಧೀನ ವ್ಯಕ್ತಿಯಲ್ಲಿನ ರಾಷ್ಟ್ರಪ್ರಜ್ಞೆ ಒಡಮೂಡಿದ ಬಗ್ಗೆ ಗಾಂಧೀಜಿ ಮತ್ತು ಅವರ ಸಿದ್ಧಾಂತಗಳನ್ನು ಕನ್ನಡ-ತೆಲುಗು ಲೇಖಕರು ಯಾವ ರೀತಿ ಹಿಡಿದಿಟ್ಟಿದ್ದಾರೆ ಎಂಬುದನ್ನು ಪ್ರಜಾಪ್ರಭುತ್ವದ ಕ್ಷಣಗಳು, ಅಜ್ಞಾತವಾಸಂ, ಧ್ವಜರಕ್ಷಣೆ ಮತ್ತು ಪ್ರದರ್ಶನ ಕಥೆಗಳನ್ನು ಇಲ್ಲಿ ಮುಖ್ಯವಾಗಿ ಚರ್ಚಿಸಲಾಗಿದೆ.

ಕೇಶವರೆಡ್ಡಿ ಹಂದ್ರಾಳ ಅವರು ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ಬರೆದ ಕತೆ ಪ್ರಜಾಪ್ರಭುತ್ವದ ಕ್ಷಣಗಳು. ವಿಶ್ವದಲ್ಲಿಯೇ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಪ್ರಸಿದ್ಧಿ ಪಡೆದಿರುವ ಭಾರತ ದೇಶದಲ್ಲಿ ಪ್ರಜಾಪ್ರಭುತ್ವದ ಕ್ಷಣಗಳು ಹೇಗಿದ್ದವು ಎಂಬ ತುಣುಕು ನೋಟವನ್ನು ಈ ಕಥೆಯಲ್ಲಿ ಕಾಣಬಹುದು.

ಈ ಕಥೆಯಲ್ಲಿ ವಿನಾಕಾರಣ ಆಪಾದನೆ ಹೊತ್ತ ಬೋಸನ ಕುಟುಂಬದ ಕ್ರೂರ ಬದುಕಿನ ಚಿತ್ರಣ, ಅನ್ಯಾಯ, ಅಸಹಾಯಕತೆ, ಜಮೀನ್ದಾರರ ದೌರ್ಜನ್ಯ, ಶ್ರೀಮಂತರ ದರ್ಪ, ಅಟ್ಟಹಾಸ, ರಾಜಕೀಯ ನಾಯಕರ ಬಣ್ಣದ ಮಾತುಗಳು, ನಾಗರಾಜನ ಕಮ್ಯುನಿಸ್ಟ್ ವಿಚಾರಗಳು ಹಾಸುಹೊಕ್ಕಾಗಿ ಕಂಡುಬರುತ್ತವೆ. ಬೋಸನದು ಅಕ್ಕ, ಅಪ್ಪ ಇರುವ ಚಿಕ್ಕ ಸಂಸಾರ. ಈತನ ತಂದೆ ಜಮೀನ್ದಾರರ ಜೀತದಾಳುವಾಗಿ ಹಗಲಿರುಳು ದುಡಿಯುತ್ತಾ ಜೀವನ ನಡೆಸುತ್ತಾನೆ. ಜಮೀನ್ದಾರರ ಮಗ ಪಟ್ಟಣದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಆಗಾಗ ಹಳ್ಳಿಗೆ ಬಂದಾಗಲೆಲ್ಲ ಬೋಸನ ಅಕ್ಕಳನ್ನು ಮೋಹಿಸಿ ಗರ್ಭವತಿಯನ್ನಾಗಿ ಮಾಡಿ ಪರಾರಿಯಾಗುತ್ತಾನೆ. ಮದುವೆಗೆ ಮುಂಚೆಯೆ ಗರ್ಭವತಿ ಎಂಬ

ಕಳಂಕವನ್ನು ಹೊತ್ತ ಬೋಸನ ಅಕ್ಕ ಸಮಾಜಕ್ಕೂ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಏನೂ ಅರಿಯದ ಬೋಸನ ತಂದೆ ಜೈಲಿಗೆ ಹೋಗುತ್ತಾನೆ. ಪರಿಸ್ಥಿತಿಯನ್ನು ಅರಿತ ಜಮೀನ್ದಾರ ಬೋಸನ ತಂದೆಯನ್ನು ಪೊಲೀಸ್ ಸ್ಟೇಷನ್‌ನಿಂದ ಬಿಡಿಸಿಕೊಂಡು ಬರುತ್ತಾನೆ.

ತಪ್ಪು ಉನ್ನತ ವರ್ಗದವರು ಯಾರೇ ಮಾಡಿರಲಿ ಶಿಕ್ಷೆ ಅನುಭವಿಸುವವರು ಮಾತ್ರ ಬಡವರು, ಸಮಾಜದಲ್ಲಿ ತೀರ ಕೆಳವರ್ಗದವರು ಎಂಬುದನ್ನು ಇಲ್ಲಿ ಮನಗಾಣಬಹುದು. 'ಬಡವನ ಕೋಪ ದವಡೆಗೆ ಮೂಲ' ಎಂಬಂತೆ ಬೋಸನ ಕುಟುಂಬ ಜಮೀನ್ದಾರಿ ವರ್ಗದಿಂದ ಅನೇಕ ರೀತಿಯ ಅನ್ಯಾಯ, ಅನಾಚಾರ ಮತ್ತು ಅಸಹಾಯಕ ಸ್ಥಿತಿಯನ್ನು ಅನುಭವಿಸುತ್ತಿರುವುದನ್ನು ಕಾಣಬಹುದಾಗಿದೆ.

ನಾಗರಾಜ ವಿದ್ಯಾವಂತ ಕಮ್ಯುನಿಸ್ಟ್‌ವಾದಿ. ಕಾರ್ಮಿಕರ ಹಕ್ಕು ಮತ್ತು ಸೌಲಭ್ಯಗಳಿಗಾಗಿ ಹೋರಾಟ ಮಾಡುತ್ತಾನೆ. ಕಾರ್ಮಿಕರ ಪ್ರತಿನಿಧಿಯಾಗಿ, ಮುಂದಾಳುವಾಗಿ ಕಾರ್ಮಿಕರನ್ನು ಸಂಘಟಿಸಿ ಅಮಾಯಕ ಕೆಲಸಗಾರರಲ್ಲಿ ವಿವೇಕವನ್ನು ತುಂಬಿ ಕಾರ್ಮಿಕರ ಆಶಾಕಿರಣವಾಗಿ ಬಿಂಬಿತವಾಗುತ್ತಾನೆ.

ನಾಗರಾಜ ಒಳ್ಳೆಯ ಮಾತುಗಾರನಾಗಿದ್ದು, ಅನ್ಯಾಯವನ್ನು ಕಂಡಲ್ಲಿಯೇ ಖಂಡಿಸುವವ ನಾಗಿರುತ್ತಾನೆ. ಚುನಾವಣೆಯ ಸಮಯದಲ್ಲಿ ಮಾಲೀಕನ ಮಗ ಸ್ಲಮ್ಮಿನ ಕ್ಷೇತ್ರದಲ್ಲಿ ಸ್ಪರ್ಧಿಸಿ ಜನರಿಗೆ ಆಶ್ವಾಸನೆಗಳನ್ನು ಕೊಡುತ್ತಾನೆ. ಆದರೆ ನಾಗರಾಜ ಆಶ್ವಾಸನೆಗಳನ್ನು ಚುನಾವಣೆಗೆ ಮುಂಚೆ ಈಡೇರಿಸಬೇಕು ಎಂದು ಸವಾಲು ಹಾಕುತ್ತಾನೆ. ಆದರೆ ಸಮಾಜದಲ್ಲಿ ಪ್ರಬಲವಾಗಿ ಬೇರು ಬಿಟ್ಟಿದ್ದ ಮಾಲೀಕವರ್ಗ ನಾಗರಾಜನ ಮೇಲೆ ನಕ್ಸಲೇಟ್ ಎಂಬ ಆರೋಪವನ್ನು ಹೊರಿಸಿ ಕೊಲೆ ಮಾಡುತ್ತದೆ. ಬೋಸನು ಕೊಲೆಯ ಆಪಾದನೆಯನ್ನು ಹೊತ್ತು ಅರೆಸ್ಟ್ ಆಗುತ್ತಾನೆ.

ಹಳ್ಳಿಯಲ್ಲಿ ಜಮೀನ್ದಾರನ ಮಗ ಮಾಡಿದ ಅನೈತಿಕ ಸಂಬಂಧದ ಆರೋಪಕ್ಕೆ ಗುರಿಯಾಗಿ ಬೋಸನ ತಂದೆ ಶಿಕ್ಷೆ ಅನುಭವಿಸಿದರೆ ಪಟ್ಟಣದಲ್ಲಿ ಕಾರ್ಖಾನೆಯ ಮಾಲೀಕನ ಕುತಂತ್ರದಿಂದ ನಾಗರಾಜನ ಕೊಲೆಯ ಆರೋಪ ಹೊತ್ತು ಬೋಸನು ಶಿಕ್ಷೆ ಅನುಭವಿಸುತ್ತಾನೆ. ಬಡವರ, ಅಮಾಯಕರ, ನಿರ್ಗತಿಕರ ಶೋಷಣೆ ನಿರಂತರವಾಗಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಜಮೀನ್ದಾರರು, ಮಾಲೀಕರುಗಳಿಂದ ಹೇಗೆ ನಡೆಯುತ್ತಿತ್ತು ಎಂಬುದಕ್ಕೆ ಬೋಸನ ಕುಟುಂಬವೇ ಸಾಕ್ಷಿಯಾಗಿದೆ.

ಒಂದು ಕಡೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ದಿನದಂದೇ ಬಡವನ ಹಸಿವಿನ ನರಳಾಟ ಕೇಳಿ ಬರುತ್ತಿದ್ದರೆ, ಇನ್ನೊಂದು ಕಡೆ ರಾಜಕೀಯ ವ್ಯಕ್ತಿಗಳ ಅಧಿಕಾರದ ಗದ್ದುಗೆಗೆ ಏರಲು ಬಣ್ಣದ ಮಾತುಗಳ ಝೇಂಕಾರ ಕೇಳಿ ಬರುತ್ತದೆ. ಬೋಸನು ತನ್ನ ಕುಟುಂಬದ ಅಸ್ವಸ್ಥ ಸ್ಥಿತಿಗೆ ಜಮೀನ್ದಾರಿ ವರ್ಗವೇ ಕಾರಣ ಎಂದು ಕೋಪೋದ್ರಿಕ್ತನಾಗುತ್ತಾನೆ. "ತಾನು ಹೆಚ್ಚು ಹೆಚ್ಚು ಸಂಪಾದನೆ ಮಾಡಿ ಅಪ್ಪನನ್ನು ಜೀತ ಪದ್ಧತಿಯಿಂದ ಮುಕ್ತಗೊಳಿಸಿ ತಂದು ಸುಖವಾಗಿ ತನ್ನ ಬಳಿ ಇಟ್ಟುಕೊಳ್ಳಬೇಕು. ತನ್ನನ್ನು ಕಂಡು ಜಮೀನ್ದಾರರು ಹೊಟ್ಟೆ ಉರಿದುಕೊಳ್ಳುವಂತೆ ಮಾಡಬೇಕು" ಎಂದೆಲ್ಲ ಯೋಚಿಸುತ್ತಾನೆ. (ಪ್ರಜಾಪ್ರಭುತ್ವದ ಕ್ಷಣಗಳು, ಪುಟ-೫೮, ೨೦೦೮)

ಬೋಸನ ಆ ಮಾತುಗಳಲ್ಲಿ ಜಮೀನ್ದಾರಿ ವರ್ಗದ ಮೇಲಿನ ಕೋಪ-ತಾಪ, ದುಡಿಮೆಯ ಫಲ, ಹಸಿವು, ಆಕ್ರೋಶ, ಧೈರ್ಯ, ನೋವು, ಸಂಕಟ ಎದ್ದು ಕಾಣುತ್ತದೆ. "ಈ ಚರಂಡಿಗಳಲ್ಲಿ ಹರಿಯುವುದು ನಮ್ಮ ರಕ್ತ. ಮಾಲೀಕರು, ಶ್ರೀಮಂತರು ನಮ್ಮ ಬೆವರಿನಲ್ಲಿ ಮೈ ತೊಳೆಯುತ್ತಾರೆ. ನಮ್ಮ ಬದುಕುಗಳೊಂದಿಗೆ ಅವರು ಚಕ್ಕಂದ ಆಡುತ್ತಾರೆ. ಅವರ ಮನೆಯ ನಾಯಿಗಳಿಗೆ ನಮಗಿಂತ ನೂರು ಪಾಲು ಹೆಚ್ಚಿನ ಸೌಲಭ್ಯವಿರುತ್ತದೆ. ನಾವು ಅನ್ನದ ಅಗಳುಗಳನ್ನು ಎಣಿಸುವಾಗ ಅವರು ಆಕಾಶದಲ್ಲಿ ನಕ್ಷತ್ರಗಳನ್ನು ಎಣಿಸುತ್ತಿರುತ್ತಾರೆ. ಈ ಸರ್ಕಾರದ ಪ್ರತಿನಿಧಿಗಳು ಮತ್ತು ಪೊಲೀಸರು ಶ್ರೀಮಂತರ ಏಜೆಂಟರುಗಳು." (ಪ್ರಜಾಪ್ರಭುತ್ವದ ಕ್ಷಣಗಳು, ಪುಟ–೬೧, ೨೦೦೮)

ಎಂದು ಕಿಡಿಕಾರುವ ನಾಗರಾಜನ ಮಾತುಗಳಲ್ಲಿ ಸಾವಿರಾರು ಜನ ಕಾರ್ಮಿಕರ ನೋವು ಸಂಕಟವನ್ನು ಕಾಣಬಹುದು. ಕಾರ್ಮಿಕರು ತಮ್ಮ ಒಡಲನ್ನು ತಂಬಿಕೊಳ್ಳಲು ಹಗಲಿರುಳು ದುಡಿಯುತ್ತಾರೆ. ಆದರೆ ಅವರಿಗೆ ಸರಿಯಾದ ರೀತಿಯಲ್ಲಿ ವೇತನವನ್ನು ನೀಡದೆ ಶೋಷಣೆ ಮಾಡುತ್ತಾರೆ. ಸರಿಯಾದ ಸೌಲಭ್ಯಗಳನ್ನು ನೀಡುವುದಿಲ್ಲ. ಅವರು ಮಾತ್ರ ವೈಭವಯುತವಾದ ಜೀವನವನ್ನು ನಡೆಸುತ್ತ ಬಡವರ ಜೀವನ, ಬದುಕುಗಳನ್ನು ಲೆಕ್ಕಿಸದೆ ವ್ಯವಸ್ಥೆಯನ್ನು ತನ್ನ ಅಂಕೆಯಲ್ಲಿಟ್ಟುಕೊಂಡು ಮೆರೆದಾಡುತ್ತಾರೆಂದು ತನ್ನ ಆಕ್ರೋಶವನ್ನು ವ್ಯಕ್ತಪಡಿಸುತ್ತಾನೆ.

ಬಂಡವಾಳಶಾಹಿಯನ್ನು ನಿರ್ಮೂಲನೆ ಮಾಡದ ಹೊರತು ನಮ್ಮ ರಾಜ್ಯ ಕಲ್ಯಾಣರಾಜ್ಯ ಆಗುವುದಿಲ್ಲ. ಕಾರ್ಖಾನೆಗಳಲ್ಲಿ ಕಷ್ಟಪಟ್ಟು ದುಡಿಯುವವರು ನಾವಾದರೆ, ಉತ್ಪಾದನೆಯ ಸಿಂಹಪಾಲನ್ನು ಅನುಭೋಗಿಸುವವರು ಮಾಲೀಕರು. ಅವರು ಬಂಗಲೆಗಳಲ್ಲಿ ವಾಸಮಾಡಲು, ಕಾರುಗಳಲ್ಲಿ ತಿರುಗಾಡಲು ನಮ್ಮ ಬೆವರು ಕಾರಣ. ಅವರು ಕನಸುಗಳನ್ನು ಕಾಣುತ್ತಾರೆ. ನನಸಾಗುತ್ತವೆ. ನಾವು ವಾಸ್ತವದ ಬರಡು ನೆಲದಲ್ಲಿ ಕೂಳಿಗಾಗಿ, ಒಂದು ಸೂರಿಗಾಗಿ ಹೋರಾಟ ನಡೆಸುತ್ತಿದ್ದೇವೆ. ನಾವು ಎಚ್ಚರಗೊಳ್ಳಬೇಕು. ಆಗ ಮಾತ್ರ ನಮಗೆ ನ್ಯಾಯ ಸಿಗುತ್ತದೆ. ನಾವೆಲ್ಲ ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು.

ಸುಮಾರು ವರ್ಷಗಳಿಂದ ಬಂಡವಾಳಶಾಹಿವರ್ಗ ಶ್ರಮಿಕ ವರ್ಗವನ್ನು ವಿವಿಧ ರೀತಿಯಾಗಿ ಶೋಷಣೆ ಮಾಡುತ್ತ ಬಂದಿದೆ. ಈ ವರ್ಗದ ವಿರುದ್ಧ ಅನೇಕ ಹೋರಾಟಗಳು ನಡೆದಿವೆ, ಯಶಸ್ವಿಯಾಗಿಲ್ಲ. ಆದ್ದರಿಂದ ಅದನ್ನು ಸಮಾಜದಲ್ಲಿ ಪರಿಪೂರ್ಣವಾಗಿ ಸರ್ವನಾಶ ಮಾಡಬೇಕು. ಆಗ ಮಾತ್ರ ನಮ್ಮ ಉದ್ಧಾರ ಸಾಧ್ಯ. ಕೂಲಿಗಳ ಸಾಮ್ರಾಜ್ಯವನ್ನು ಅಸ್ತಿತ್ವಕ್ಕೆ ತರಬೇಕು. ಶ್ರಮಿಕರೆ ಪ್ರಭುಗಳಾಗಬೇಕು. ಅವರದೇ ರಾಜ್ಯ ಆಗಬೇಕು. ಸಮತಾವಾದ, ಸಮಾಜವಾದ ರಾಜ್ಯವನ್ನು ಜಾರಿಗೆ ತರಬೇಕು. ನಮ್ಮ ಹಕ್ಕು ಮತ್ತು ಸೌಲಭ್ಯಗಳನ್ನು ಪರಿಪೂರ್ಣವಾಗಿ ಪಡೆದುಕೊಳ್ಳಬೇಕು ಎಂದು ಕಮ್ಯುನಿಸ್ಟ್ ವಿಚಾರಗಳನ್ನು ಗುರುತಿಸಬಹುದು.

ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತ ದೇಶಕ್ಕೆ ರಾಜಕೀಯವಾಗಿ ಸ್ವಾತಂತ್ರ್ಯ ದೊರೆತರೂ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ಸಿಗದೆ ಶ್ರೀಮಂತರು ಬಡವರ ಮೇಲೆ ನಡೆಸುತ್ತಿರುವ ಅನ್ಯಾಯ, ಅನಾಚಾರ, ದೌರ್ಜನ್ಯಗಳನ್ನು ಈ ಕಥೆಯಲ್ಲಿ ಲೇಖಕರು ಮನಕಲಕುವಂತೆ ಕಟ್ಟಿಕೊಟ್ಟಿದ್ದಾರೆ.

ಕನ್ನಡದ ಲೇಖಕರಂತೆ ತೆಲುಗು ಲೇಖಕರು ಸಹ ರಾಷ್ಟ್ರೀಯತೆ, ರಾಷ್ಟ್ರೀಯ ನಾಯಕರನ್ನು ಗುರಿಯಾಗಿಸಿಕೊಂಡು ಬರೆಯುವುದರಲ್ಲಿ ನಿಸ್ಸೀಮರು. ಮಧುರಾಂತಕಂ ರಾಜಾರಾಂ ಎಂಬುವರು ಅಜ್ಞಾತವಾಸಂ ಎಂಬ ಕಥೆಯಲ್ಲಿ ದಲಿತನ ಜೀವನ ಚರಿತ್ರೆಯನ್ನು ಕುರಿತು ಈ ರೀತಿ ಬರೆಯಲಾಗಿದೆ.

ಗಂಗ ಎಂಬ ದಲಿತನಿಗೆ ಪ್ರೆಸಿಡೆಂಟು (ಸರ್ಪಂಚ) ಎಂಬ ವೇತನರಹಿತ ಉದ್ಯೋಗವನ್ನು ನೀಡುವುದರ ಮೂಲಕ ಅವನನ್ನು ನಿರುದ್ಯೋಗಿಯನ್ನಾಗಿ ಮಾಡುವುದನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ. ಗಂಗನು ಸರ್ಪಂಚ ಉದ್ಯೋಗಿಯಾಗಿ ಊರಿನಲ್ಲಿ ಸಮಯ ಕಳೆಯದೆ ಗುಪ್ತವಾಗಿ ಚಿತ್ತೂರು ಎಂಬ ನಗರಕ್ಕೆ ಬಂದು ಗಾಂಧೀಜಿಯವರ ವಿಗ್ರಹದ ಮುಂದೆ ನಿಂತು ತನ್ನ ಅಜ್ಞಾತ ಅಸಹಾಯಕತೆಯನ್ನು ಹೇಳಿಕೊಳ್ಳುತ್ತಾನೆ. ಪೊರಕಲಬಯಲು ಎಂಬುದು ಗಂಗನ ಊರು. ಆ ಊರಿನಲ್ಲಿ ಎಲ್ಲಾ ವರ್ಗದ ಜನರು ವಾಸವಾಗಿರುತ್ತಾರೆ. ಊರಿನಲ್ಲಿ ಘನತೆಯೆತ್ತ ಕರಣಂ ಮಲ್ಲಯ್ಯ ಮತ್ತು ಪೋಲಿರೆಡ್ಡಿ ಅವರ ಒತ್ತಾಯಕ್ಕೆ ಮಣಿದು ಗಂಗನು ಸರ್ಪಂಚ ಉದ್ಯೋಗವನ್ನು ಒಪ್ಪಿಕೊಂಡಿರುತ್ತಾನೆ. ಅದು ಒಂದು ವೇತನರಹಿತ ಹುದ್ದೆಯಾಗಿರುತ್ತದೆ. ಆ ಉದ್ಯೋಗವನ್ನು ನೀಡುವುದರ ಮೂಲಕ ಕೂಲಿ ಮಾಡಿಕೊಂಡು ನೆಮ್ಮದಿ ಜೀವನ ನಡೆಸುತ್ತಿರುವ ಗಂಗನ ಒಡಲ ಮೇಲೆ ಹೊಡೆಯುವುದನ್ನು ಕಾಣಬಹುದಾಗಿದೆ. ಗಂಗನು ಸರ್ಪಂಚ ಹುದ್ದೆಯ ಪ್ರಮಾಣ ವಚನ ಸ್ವೀಕರಿಸಿ ಮನೆಗ ಬಂದಾಗ ಗಂಡ - ಹೆಂಡತಿಯ ಸಂಭಾಷಣೆ ಹೀಗಿದೆ.

ಕನ್ನಡ ಭಾಷಾಂತರ

"ರಂಗಿ – ಏನು ಮಾಮ! ನೀನು ಸರ್ಪಂಚಿಯಾಗಿದ್ದೀಯಲ್ಲ! ಅದಕ್ಕೇನಾದರೂ ಸಂಬಳ ಕೊಡುತ್ತಾರಾ?

ಗಂಗ – ಕೊಡೊದಾಗಿದ್ರೆ ಯಾರಾದ್ರು ಹೇಳ್ತಾರ? ಕೊಡೋದು ಅನುಮಾನವೇ

ರಂಗಿ – ಹೋಗ್ಲಿ ಬಿಡು ಸಂಬಳ ಕೊಟ್ಟರೂ, ಬಿಟ್ಟರೂ ಪ್ರೆಸಿಡೆಂಟು ಆದ ಮೇಲೆ ಕೂಲಿಗೆಲ್ಲಿಗೋಗುತ್ತೀಯಾ ಮನೆ ಹತ್ತಿರ ಇರು ನಾನು ಕೂಲಿ ಹೋಗಿ ಎರಡು ಮುದ್ದೆ ತರುತ್ತೇನೆ ಅಲ್ವಾ ನಿನಗೊಂದು ನನಗೊಂದು." (ಮೂಲ; ಅನುಬಂಧ–೩ ಅಧ್ಯಾಯ–೩ ಕ್ರ.ಸಂ. ೫)

ಈ ಉದ್ಯೋಗದಿಂದ ತಮ್ಮ ಹೊಟ್ಟೆಗೆ ಬರವಿಲ್ಲವೆಂಬ ಭರವಸೆಯನ್ನು ಹೊಂದಿರುವುದನ್ನು ಅದರಿಂದ ಯಾವುದೇ ರೀತಿಯ ಲಾಭವಿಲ್ಲವೆಂದು ತಿಳಿದಾಗ ಸ್ವಲ್ಪಮಟ್ಟಿಗೆ ನಿರಾಸೆ ಅನುಭವಿಸುತ್ತಾಳಾದರೂ ರಂಗಿ ಇಬ್ಬರಿಗೂ ದುಡಿಯುತ್ತೇನೆ ಎಂಬ ದೃಢನಿರ್ಧಾರ, ಆತ್ಮವಿಶ್ವಾಸ, ಗಂಡಸಿನ ನೆರವಿಲ್ಲದೆ ಎಂತಹ ಕಠಿಣ ಪದ್ಧತಿಯಲ್ಲೂ ಜೀವನ ನಡೆಸಬಲ್ಲೆ ಎಂಬುದನ್ನು ಕಾಣಬಹುದಾಗಿದೆ.

ಸರ್ಕಾರ ಎಂಬ ವ್ಯವಸ್ಥೆ, ಸಮಾಜದ ಉನ್ನತವರ್ಗಗಳು ಕೆಳವರ್ಗಗಳಿಗೆ ದೈಹಿಕವಾಗಿ ಹಿಂಸೆಯನ್ನು ನೀಡದೆ, ಘನತರವಲ್ಲದ ವೇತನರಹಿತ ಹುದ್ದೆಯನ್ನು ನೀಡುವುದರ ಮೂಲಕ

ಶೋಷಣೆಯಂತಹ ಕಾರ್ಯವನ್ನು ಮಾಡುತ್ತ ಅವರ ಬದುಕನ್ನು ಮೂಲೆಗುಂಪನ್ನಾಗಿ ಮಾಡುವುದನ್ನು ಕಾಣಬಹುದಾಗಿದೆ.

ಕನ್ನಡ ಭಾಷಾಂತರ

"ನನಗೆ ತಿಳಿದದ್ದೇನೆಂದರೆ ನಾನು ತಿರುಗಿ ಹೋಗುವಷ್ಟೊತ್ತಿಗೆ ನನ್ನ ಗುಡಿಸಲಿನ ಮಣ್ಣಿನ ಗೋಡೆಗಳು, ಮೇಲೆ ಹೊದಿಸಿರುವ ಸಪ್ಪೆದಂಟು, ತೆಂಗಿನ ಗರಿಯಿಂದ ಕಟ್ಟಿದ ತಡಿಕಿನಂತಹ ಬಾಗಿಲು, ಪಾತ್ರೆಗಳು, ನನ್ನ ಹೆಂಡತಿ ಕಟ್ಟಿಕೊಂಡಿರುವ ಹರಿದಿರುವ ಸೀರೆ, ನನ್ನ ಮಕ್ಕಳು ತೊಟ್ಟಿರುವ ಮಾಸಿದ ಬಟ್ಟೆಗಳು ಬದಲಾಗಿಲ್ಲ. ಆದರೆ ನಾನು ಮಾತ್ರ ಬದಲಾಗಿದ್ದೀನಿ ಎಂದು ಹೇಳುತ್ತಾರೆ..." (ಮೂಲ; ಅನುಬಂಧ-೩ ಅಧ್ಯಾಯ-೩ ಕ್ರಸಂ. ೬)

ಗಂಗನು ಸರ್ಪಂಚ ಉದ್ಯೋಗವನ್ನು ಸ್ವೀಕರಿಸಿರುವುದರಿಂದ ಅವನ ಕುಟುಂಬಕ್ಕೆ ಯಾವುದೇ ರೀತಿಯ ಆರ್ಥಿಕ ನೆರವನ್ನಾಗಲಿ, ಅವನಿಗೆ ಊರಿನಲ್ಲಿ ಘನತೆ, ಗೌರವವಾಗಲಿ ಸಿಗಲಿಲ್ಲ ಮತ್ತು ಮನೆಯಲ್ಲಿ ಹೆಂಡತಿ ಮಕ್ಕಳ ಬಟ್ಟೆ-ಬರೆಗಳಲ್ಲಿ ವ್ಯತ್ಯಾಸವಾಗಲಿಲ್ಲ. ತನ್ನ ಮನೆಯಲ್ಲಿ ಯಾವುದೇ ರೀತಿಯ ಬದಲಾವಣೆ ಆಗಲಿಲ್ಲ ಗಂಗನು ಮತ್ರಾ ಬದಲಾಗಿದ್ದಾನೆ ಎಂದು ಜನರು ಹೇಳುವ ಮಾತುಗಳಲ್ಲಿ ತನ್ನ ಅಸಹಾಯಕತೆಯನ್ನು, ಜನರ ಕುಹಕತೆಯನ್ನು ಅಜ್ಞಾತವಾಸವನ್ನು ಕಾಣಬಹುದು.

ಗಂಗನು ಗಾಂಧೀಜಿಯವರ ವಿಗ್ರಹದ ಮುಂದೆ ನಿಂತುಕೊಂಡು ಹಳ್ಳಿ-ಪಟ್ಟಣ ಜನರ ಜೀವನದ ಪರಿಸ್ಥಿತಿಯನ್ನು ಹೇಳುತ್ತಾ

ಕನ್ನಡ ಭಾಷಾಂತರ

"ನಿನ್ನ ಬಿಟ್ಟರೆ ನಮಗೆ ಬೇರೆ ದಿಕ್ಕು ಯಾರು? ಬದುಕಿರುವವರೆಗೂ ನಮ್ಮ ಏಳಿಗೆಗಾಗಿಯೆ ಶ್ರಮವಹಿಸಿದ್ದೀಯಂತೆ! ನಮಗೆ ಹರಿಜನರು ಎಂದು ನಾಮಕರಣ ಮಾಡಿದ್ದು ಸಹ ನೀವೆನಂತೆ." (ಮೂಲ; ಅನುಬಂಧ-೩ ಅಧ್ಯಾಯ-೩ ಕ್ರಸಂ. ೭)

ಗಾಂಧೀಜಿ ಹರಿಜನರಿಗಾಗಿ, ಅವರಿಗೆ ಸಾಮಾಜಿಕ ಸ್ವಾತಂತ್ರಕ್ಕೋಸ್ಕರ ಪ್ರಯತ್ನಪಟ್ಟಿರುವುದನ್ನು, ಗಾಂಧೀಜಿ ಬಗ್ಗೆ ಹರಿಜನರಿಗಿರುವ ನಂಬಿಕೆ, ವಿಶ್ವಾಸ, ಅಭಿಮಾನ, ಗೌರವವನ್ನು ಗಂಗನ ಮಾತುಗಳಲ್ಲಿ ವ್ಯಕ್ತವಾಗಿರುವುದನ್ನು ತಿಳಿಯಬಹುದಾಗಿದೆ.

ಪು.ತಿ.ನ. ಅವರು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಪರಕೀಯರ ದಬ್ಬಾಳಿಕೆಯಿಂದ ಭಾರತದ ಬಾವುಟ ರಕ್ಷಣೆಯ ಸನ್ನಿವೇಶವನ್ನಿಟ್ಟುಕೊಂಡು 'ಧ್ವಜರಕ್ಷಣೆ' ಎಂಬ ಕಥೆಯನ್ನು ರಚಿಸಿದ್ದಾರೆ. ಈ ಕಥೆಯ ನಾಯಕ ಮುಕುಂದ ಒಬ್ಬ ಸಾಮಾನ್ಯ ಆಫೀಸಿನ ಗುಮಾಸ್ತನಾಗಿರುತ್ತಾನೆ. ದೇಶದ ಅರಾಜಕತೆ, ಅನ್ಯಾಯ, ಅಮಾಯಕತ್ವ, ಅಸಹಾಯಕತೆಯ ಬಗ್ಗೆ ಚಿಂತಿಸುತ್ತಿರುತ್ತಾನೆ. ಮುಕುಂದ ತೀರ ಸಾತ್ವಿಕ ಗಾಂಧೀಜಿಯವರ ಅನುಯಾಯಿಯಾಗಿದ್ದು, ಅವರ ತತ್ವಗಳ ಪರಿಪಾಲಕನಾಗಿದ್ದು ಕೊನೆಗೆ ಅವರ ತತ್ವಗಳನ್ನು ಮೀರಿ ಸಾವನ್ನಪ್ಪುತ್ತಾನೆ.

ಮುಕುಂದನಲ್ಲಿ ಜಡವಾಗಿದ್ದ ರಾಷ್ಟ್ರೀಯತೆ ಒಬ್ಬ ಹುಡುಗನಲ್ಲಿನ ರಾಷ್ಟ್ರಪ್ರೇಮವನ್ನು ಕಂಡು ಜಾಗೃತಗೊಳ್ಳುತ್ತದೆ. ಒಂದು ಬಾಲಯುವಕರ ಗುಂಪು ಭಾರತ ಮಾತೆಯ ಧ್ವಜವನ್ನು ಹಿಡಿದು ಘೋಷಣೆಗಳನ್ನು ಕೂಗುತ್ತ ಮೆರವಣಿಗೆ ಹೊರಟಿರುತ್ತದೆ. ಆ ಹೋರಾಟವನ್ನು ಹತ್ತಿಕ್ಕುವಲ್ಲಿ ಪೊಲೀಸರು ಯಶಸ್ವಿಯಾಗುತ್ತಾರೆ. ಈ ಹೋರಾಟಕ್ಕೂ ತನಗೂ ಯಾವುದೇ ಸಂಬಂಧವಿಲ್ಲವೆಂದು ಮುಕುಂದ ಪ್ರಬಲವಾದ ಪ್ರೇರಣೆಯನ್ನು ತಡೆದುಕೊಂಡು ನಿಂತಿರುತ್ತಾನೆ. ಆದರೆ ಭಾರತ ಮಾತೆಗೆ, ತನ್ನ ತಾಯಿಗೆ ಅವಮಾನವಾಗುತ್ತಿರುವುದನ್ನು ಕಂಡು ಕ್ಷುಬ್ದನಾಗಿ ಪೊಲೀಸರ ಮೇಲೆ ಎರಗಿ ಧ್ವಜವನ್ನು ರಕ್ಷಿಸುತ್ತಾನೆ. ಈ ಘಟನೆಯಲ್ಲಿ ಮುಕುಂದನಿಗೆ ಮಾರಣಾಂತಿಕ ಹೊಡೆತಗಳು ಬಿದ್ದು ಆಸ್ಪತ್ರೆಯಲ್ಲಿ ಸಾಯುತ್ತಾನೆ. ಈತನ ಸಾವು ಸಮಾಜದಲ್ಲಿ ಪ್ರಚಾರವಾಗದೆ ಸಂಬಂಧಪಟ್ಟವರಿಗೆ ಮಾತ್ರ ಸೀಮಿತವಾಗುತ್ತದೆ.

"ಮುಕುಂದ ಸುಸಂಸ್ಕೃತ, ವಿದ್ಯಾವಂತ. ಆತನಿಗೆ ಸ್ವದೇಶ ಪ್ರೇಮವಿಲ್ಲದಿರಲಿಲ್ಲ. ಈತನ ದಿನಚರಿಯಲ್ಲಿ ದೇಶಪ್ರೇಮದ ಸಂಚಾರಕ್ಕೆ ಅವಕಾಶವಿರಲಿಲ್ಲ. ಇವನ ಬಾಳು ಆ ಪ್ರೇಮಕ್ಕೆ ಒಂದು ಸೆರೆಮನೆಯಂತೆ ಪಹರೆ ಇರುವವನಿಗೆ ಖೈದಿಯ ಮೇಲೆ ಸದಾ ಎಚ್ಚರಿಕೆ ಇರುವ ಹಾಗೆ ಮುಕುಂದನಿಗೆ ಈ ಸ್ವದೇಶ ಪ್ರೇಮದ ಅರಿವು ಸದಾ ಇತ್ತು". (ಧ್ವಜ ರಕ್ಷಣೆ, ಪುಟ–೮, ೧೯೩೧)

ಮುಕುಂದನು ಅಧಿಕಾರಶಾಹಿ ಕೈಕೆಳಗೆ ಗುಮಾಸ್ತನಾಗಿ ಕೆಲಸ ಮಾಡುತ್ತಿರುತ್ತಾನೆ. ಭಾರತ ಮಾತೆ ಅನೇಕ ರೀತಿಯ ಅನ್ಯಾಯ ಅನೀತಿ, ಅಕ್ರಮದಂತಹ ದುಷ್ಕೃತ್ಯಗಳಿಂದ ಬಳಲುತ್ತಿರುವುದು. ಭಾರತೀಯರ ಅಸಹಾಯಕ ಸ್ಥಿತಿ. ಪಾಶ್ಚಾತ್ಯರ ವೈಭವಯುತವಾದ ಸ್ಥಿತಿಯಿಂದ ನಾವು ಹೀನವಾದ ದುರ್ಬಲ ಬಾಳನ್ನು ನಡೆಸುತ್ತಿದ್ದೇವೆ ಎಂದು ಭಾರತದ ಅಂಧಾಕಾರದ ಸ್ಥಿತಿಯನ್ನು ನೆನೆದು ಮರುಗುತ್ತಾನೆ.

"ಸ್ವತಂತ್ರರಂತೆ ವರ್ತಿಸಿರಿ-ದಾಸರಂತೆ ಬೇಡ" (ಧ್ವಜ ರಕ್ಷಣೆ, ಪುಟ–೯, ೧೯೩೧) ಮಹಾತ್ಮರು ಸೆರೆಮನೆಯಲ್ಲಿ ಅಂತರ್ಹಿತರಾಗುವುದಕ್ಕೆ ಮುಂಚೆ ಘೋಷಿಸಿದ್ದರು. ಈ ಮಾತು ನೂರಾರು ವರ್ಷಗಳಿಂದ ಬ್ರಿಟಿಷರ ಅಡಿಯಾಳಾಗಿ ಬದುಕುತ್ತಿದ್ದ ಭಾರತೀಯರಿಗೆ ದಿಢೀರನೆ ಸಾವಿರ ಆನೆ ಬಲ ತುಂಬಿದಂತಾಗುತ್ತದೆ. ಜಡವಾಗಿ ಮಲಗಿದ್ದ ದೇಶಪ್ರೇಮಿಗಳ ಮನಸ್ಸುಗಳು ಸಾಣೆ ಹಿಡಿದ ಕತ್ತಿಯಂತೆ ಹರಿತಗೊಳ್ಳುತ್ತವೆ. ಮುಕುಂದನ ಮನಸ್ಸು ಸಹ ಟೈಪರೈಟರಿ ತಾಳದಂತೆ ವರ್ತಿಸುತ್ತದೆ. ಗಾಂಧೀಜಿ ಸ್ವರಾಜ್ಯಕ್ಕಾಗಿ ಮಿಡಿಯುವ ಮನಗಳಿಗೆ ಮಾರ್ಗದರ್ಶಕರಾಗಿ ಕಂಡುಬರುವುದನ್ನು ಕಾಣಬಹುದಾಗಿದೆ.

"ಹುಡುಗರು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೇವೆ ಎಂದರೆ ದೊಡ್ಡವರು ಯಾಕೆ ಇದನ್ನು ವಿರೋಧಿಸುತ್ತಾರೆ? ಸ್ವಾತಂತ್ರ್ಯ ಸ್ವಾದುವೇ ಅಸ್ವಾದುವೇ? ಸ್ವಾದುವಾದರೆ ಅದು ಏಕೆ ಈ ಸರ್ಕಾರಕ್ಕೆ ವಿಷದಂತೆ ವಿಷಮವಾಗಿ ತೋರುತ್ತದೆ? ವೃದ್ಧರಿಂದ ಯುವಕರಿಗೆ ಯಾವಾಗಲೂ ತೊಂದರೆ" ಎಂದು ಮುಕುಂದ ಆಲೋಚಿಸುತ್ತಾನೆ. (ಧ್ವಜ ರಕ್ಷಣೆ, ಪುಟ–೧೧, ೧೯೩೧)

ಸ್ವಾತಂತ್ರ್ಯ ಚಳುವಳಿಯಲ್ಲಿ ಹೆಚ್ಚಿನದಾಗಿ ಯುವಕರನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಗಮನಿಸಬಹುದು. ಚಳುವಳಿಯಲ್ಲಿ ವೃದ್ಧರನ್ನು ಕಡೆಗಣಿಸಿ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ತೊಡಗಲು ಹವಣಿಸುತ್ತಿರುವುದನ್ನು ಮುಕುಂದನ ಮಾತುಗಳಲ್ಲಿ ಕಾಣಬಹುದು. ಈ ಕಥೆಯಲ್ಲಿ ಗಾಂಧೀಜಿ ಪ್ರೇರಕಶಕ್ತಿಯಾಗಿ ಚಿತ್ರಿತವಾಗಿದ್ದಾರೆ.

ದಾದಾಪಯತ್ ಬರೆದ 'ಪ್ರದರ್ಶನ' ಎಂಬ ತೆಲುಗು ಕಥೆಯಲ್ಲಿ ರಾಜಕೀಯ ನಾಯಕರು, ಅಧಿಕಾರ ವ್ಯವಸ್ಥೆ ಗಾಂಧೀಜಿಯವರ ಹೆಸರನ್ನು ಬಳಸಿಕೊಂಡು ದಲಿತರ ಮೇಲೆ ನಡೆಸುವ ದೌರ್ಜನ್ಯ, ಅನ್ಯಾಯ, ಅಕ್ರಮಗಳನ್ನು ಕಾಣಬಹುದಾಗಿದೆ.

ಪೋಲಿರಾಜ ಎಂಬ ಮೂಕ ಹುಡುಗನಿಂದ ಕಥೆ ಪ್ರಾರಂಭವಾಗುತ್ತದೆ. ಅವನು ಪ್ರತಿದಿನ ಗಾಂಧೀಜಿ ಅವರ ವಿಗ್ರಹದ ಬಳಿ ಬಂದು ನಿಂತುಕೊಂಡು ಅತ್ತು, ನಕ್ಕು ಹೊರಟು ಹೋಗುತ್ತಾನೆ. ಕಾರಣ ಆ ಮಹಾತ್ಮ ನಗುತ್ತ ನಿಂತಿರುವ ಜಾಗ ಆ ಪೋಲಿರಾಜನದಾಗಿರುತ್ತದೆ. ಅಲ್ಲದೆ ಇನ್ನೂ ಸಾವಿರಾರು ಹರಿಜನರ ಜಾಗಗಳು ಅಲ್ಲಿ ಮುಳುಗಡೆ ಕಂಡಿರುತ್ತವೆ. ಪೋಲಿರಾಜನೊಬ್ಬನ ನಗು-ಅಳುವಿನಲ್ಲಿ ಎಲ್ಲಾ ಹರಿಜನರ ನೋವು, ಸಂಕಟ, ದುಃಖಗಳನ್ನು ಕಾಣಬಹುದು.

ಮುನ್ಸಿಫಲ್ ಚೇರ್ಮನ್ ತನ್ನ ಅಧಿಕಾರದ ಅವಧಿಯಲ್ಲಿ ಹರಿಜನರು ಇರುವಂತಹ ಸ್ಥಳದಲ್ಲಿಯೇ ಗಾಂಧೀಜಿಯವರ ವಿಗ್ರಹವನ್ನು ಇರಿಸುವುದು ಮೇಲ್ವರ್ಗದವರಿಗೆ ಅಶುಭ, ಮೈಲಿಗೆಯಾಗುತ್ತದೆ ಎಂಬ ಉದ್ದೇಶ ಹೊಂದಿರುತ್ತಾನೆ. ಹರಿಜನರ ಬದುಕು-ಬವಣೆಗಳಿಗಿಂತ ಚೇರ್ಮನ್‌ನ ಘನತೆ, ಗೌರವ ಮುಖ್ಯವಾಗಿರುವುದನ್ನು, ಜಾತಿಭೇದ ಮಾಡುವ ಮನೋಭಾವವನ್ನು ಗುರುತಿಸಬಹುದು.

ಸಾರ್ವಜನಿಕ ಸ್ಥಳದಲ್ಲಿ ಗಾಂಧೀಜಿಯವರ ವಿಗ್ರಹವನ್ನು ನಿರ್ಮಿಸುವುದರ ಉದ್ದೇಶ ಗಾಂಧೀಜಿ ಮೇಲಿನ ಭಕ್ತಿ, ಭಯ, ಗೌರವ ಅಭಿಮಾನದಿಂದಲ್ಲದೆ ಚೇರ್ಮನ್ನನ ಅಧಿಕಾರದ ವ್ಯಾಮೋಹ, ಜನಪ್ರಿಯತೆಗಾಗಿ ಎಂಬುದನ್ನು ಮನಗಾಣಬಹುದಾಗಿದೆ.

ಕನ್ನಡ ಭಾಷಾಂತರ

"ಈ ಹರಿಜನರನ್ನು ಇನ್ನೂ ಅಲ್ಲೆ ಇರಲು ಬಿಟ್ಟರೆ ಆ ಅಕ್ಕಪಕ್ಕದಲ್ಲಿರುವ ಬೆಲೆಬಾಳುವ ಸ್ಥಳವನ್ನೆಲ್ಲ ಆಕ್ರಮಿಸಿಕೊಳ್ಳುತ್ತಾರೆ. ಅದೆಲ್ಲ ಹೊಲಗೇರಿಯಾಗಿ ಹೋಗುತ್ತದೆ." (ಮೂಲ; ಅನುಬಂಧ–೩ ಅಧ್ಯಾಯ–೩ ಕ್ರ.ಸಂ. ೮)

ಹರಿಜನರು ಶೂದ್ರವರ್ಗದವರಾಗಿದ್ದು, ಪೂರ್ವಕಾಲದಿಂದಲೂ ಮೇಲ್ವರ್ಗದವರ ಸೇವೆಗಳನ್ನು ಮಾಡುತ್ತಾ ಜೀವನ ನಡೆಸುತ್ತಾ ಬಂದಿದ್ದಾರೆ. ಅದರಿಂದಾಗಿ ಅವರು ಊರ ಹೊರಗಡೆ ಇರಬೇಕೇ ಹೊರತು ಊರ ಮಧ್ಯದಲ್ಲಲ್ಲ. ಅವರನ್ನು ಅಲ್ಲಿ ಇರುವುದಕ್ಕೆ ಬಿಟ್ಟರೆ ಇರುವ ಸ್ಥಳವನ್ನೆಲ್ಲ ಆಕ್ರಮಿಸಿಕೊಂಡು ಅಸ್ವಚ್ಛಗೊಳಿಸುತ್ತಾರೆ ಎಂಬ ರಾಜಕೀಯ ವ್ಯಕ್ತಿಯ ದಲಿತರ ಬಗೆಗಿನ ಕೀಳು ಮನೋಭಾವವನ್ನು ಗುರುತಿಸಬಹುದಾಗಿದೆ.

ಹರಿಜನರು ತಮ್ಮ ಸ್ಥಳಗಳನ್ನು ಬಿಟ್ಟು ಕದಲುವುದಿಲ್ಲ ಎಂಬ ಮಾತಿಗೆ ಹರಿಜನ ನಾಯಕನನ್ನು ಬೀದಿಗೆಳೆದು ಬಡಿಯುತ್ತಾರೆ. ಹಲವಾರು ಪುರುಷರನ್ನು ವಿವಿಧ ರೀತಿಯಾಗಿ ಹಿಂಸಿಸುತ್ತಾರೆ. ಮನೆಗಳಿಗೆ ಬೆಂಕಿ ಹಚ್ಚುತ್ತಾರೆ. ಅನೇಕ ಅಮಾಯಕ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರವೆಸಗುತ್ತಾರೆ. ಅನೇಕ ಹಸುಗೂಸುಗಳು ಬೆಂಕಿಗೆ ಆಹುತಿಯಾಗುತ್ತವೆ.

ಹೀಗೆ ದಲಿತರ ಮೇಲೆ ರಾಜಕೀಯ ವ್ಯಕ್ತಿಗಳು ಹಾಗೂ ಅಧಿಕಾರಶಾಹಿ ನಡೆಸುವಂತಹ ಅತ್ಯುಗ್ರ ಚಟುವಟಿಕೆಗಳು ಬ್ರಿಟಿಷರು ನಡೆಸುವಂತಹ ದುಷ್ಕೃತ್ಯಗಳಿಗಿಂತ ಅಮಾನುಷವಾಗಿದ್ದವು ಎಂಬುದನ್ನು ತಿಳಿಯಬಹುದಾಗಿದೆ.

ದಲಿತರು ತಮ್ಮ ಇರುವಿಕೆಯನ್ನು ಪ್ರಶ್ನಿಸಿ ಧಗಧಗ ಉರಿಯುವ ಬೆಂಕಿಯಲ್ಲಿ ಬೇಯುತ್ತಿದ್ದರೆ, ರಾಜಕಾರಣಿಗಳು ಪಾರ್ಟಿ, ಪಬ್‌ಗಳಲ್ಲಿ ಸಂತೋಷದ ಅಲೆಯಲ್ಲಿ ತೇಲುತ್ತಾರೆ. ಬಡವರನ್ನು ಸಂಕಷ್ಟದಲ್ಲಿ ಸಿಲುಕಿಸಿ ಬಡವರ ಹಣದಲ್ಲೆ ಮೋಜಿನ ಜೀವನ ನಡೆಸುವುದು ರಾಜಕಾರಣಿ, ಅಧಿಕಾರಶಾಹಿಗೆ ಹೆಮ್ಮೆಯ ಘನತೆಯ ಕಾರ್ಯವಾಗಿರುವುದನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

ಹೀಗೆ ರಾಜಕೀಯ ಧುರೀಣರು ದಲಿತರ ಮೇಲೆ ನಡೆಸುವ ದೌರ್ಜನ್ಯ ಕೇವಲ ಆ ಊರಿನ ಹರಿಜನರ ಮೇಲಿನ ದೌರ್ಜನ್ಯವಾಗಿರದೆ ಇಡೀ ದಲಿತ ಸಮುದಾಯದ ಮೇಲಿನ ಶೋಷಣೆ ಎಂಬುದನ್ನು ಇದರಿಂದ ತಿಳಿಯಬಹುದಾಗಿದೆ.

ದೇಶದಲ್ಲಿ ಅನೇಕ ರಾಷ್ಟ್ರಪ್ರೇಮಿಗಳು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತಮ್ಮ ಪ್ರಾಣಗಳನ್ನು ಅರ್ಪಿಸಿದ್ದಾರೆ. ಆದರೆ ಗಾಂಧೀಜಿಯವರು ರಾಜಕೀಯ ಸ್ವಾತಂತ್ರ್ಯ ಅಲ್ಲದೆ ಸಮಾಜದಲ್ಲಿನ ಜನರಲ್ಲಿರುವ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತನ್ನ ಪ್ರಾಣವನ್ನರ್ಪಿಸಿರುವುದು ಚರಿತ್ರೆಯ ಪುಟಗಳಲ್ಲಿದೆ. ಅಂತಹ ಧೀಮಂತ ವ್ಯಕ್ತಿಯನ್ನು ರಾಜಕಾರಣಿಗಳು ಕೇವಲ ತಮ್ಮ ಅಧಿಕಾರದ ಲಾಲಸೆಗಾಗಿ ಜಾಹೀರಾತಿಗಾಗಿ ಬಳಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಗಾಂಧೀಜಿ ದಲಿತರಿಗೆ ಹರಿಜನ, ಶಿವನ ಮಕ್ಕಳು, ದೇವರ ಮಕ್ಕಳು ಎಂಬ ಹೆಸರಿನ್ನಿಟ್ಟು ಸಮಾಜದ ಎಲ್ಲಾ ವರ್ಗದ ಜೊತೆ ಉತ್ತಮವಾಗಿ ಬದುಕುವಂತೆ ಮಾಡಬೇಕೆಂಬ ಧೋರಣೆಯನ್ನು ಹೊಂದಿರುತ್ತಾರೆ. ಆದರೆ ಈ ಕಥೆಯಲ್ಲಿ ಹರಿಜನರು ಜನರೊಂದಿಗಲ್ಲದೆ ಊರೊಳಗೆ ಬದುಕಲು ಅವಕಾಶವಿಲ್ಲದೆ ತಮ್ಮ ಮಾನ-ಪ್ರಾಣಗಳನ್ನು ಕಳೆದುಕೊಂಡು ಗಾಂಧೀ ರಸ್ತೆಗೆ ಬಿದ್ದು ನಾಶವಾಗುವುದನ್ನು ಕಾಣಬಹುದಾಗಿದೆ.

ಹೀಗೆ ಗಾಂಧೀಜಿ ಚರಿತ್ರೆಯ ಪುಟಗಳಲ್ಲಿ ರಾಷ್ಟ್ರೀಯ, ಸಮಾನತೆಯ ಸಂಕೇತವಾಗಿ ಬಿಂಬಿತವಾಗಿದ್ದರೆ, ಈ ಕತೆಯಲ್ಲಿ ಅಸಮಾನತೆಯ ಹರಿಕಾರನಾಗಿ ಚಿತ್ರಿತಗೊಂಡಿದ್ದಾರೆ.

ನಾಟಕ

ದೇಶದ ಸ್ವಾತಂತ್ರ್ಯಕ್ಕಾಗಿ ಹಲವಾರು ರೀತಿಯ ಜನಸಮುದಾಯಗಳು, ಪತ್ರಿಕೆಗಳು, ಸಂಸ್ಥೆಗಳು ತಮ್ಮ ಕೈಲಾದ ರೀತಿಯಲ್ಲಿ ಹೋರಾಟ ಮಾಡುತ್ತವೆ. ಖಡ್ಗಕ್ಕಿಂತ ಲೇಖನಿ ಹರಿತ ಎಂಬಂತೆ ಅನೇಕ ರೀತಿಯ ಕವಿತೆ, ಕಥೆಗಳಂತಹ ದೇಶದ ಎಲ್ಲಾ ರೀತಿಯ ಭಾಷೆಗಳಲ್ಲಿ ಕವಿಗಳು, ಲೇಖಕರು ವಿಪುಲವಾದ ಸಾಹಿತ್ಯವನ್ನು ರಚಿಸುವುದರ ಮೂಲಕ ಜನಸಾಮಾನ್ಯರನ್ನು ಪ್ರೇರೇಪಿಸುತ್ತಾ ಬ್ರಿಟಿಷ್ ಸರ್ಕಾರದ ವಿರುದ್ಧವಾಗಿ ತಮ್ಮ ಹೋರಾಟವನ್ನು ಸಾಗಿಸುತ್ತಾರೆ. ಅದರಂತೆ ಕನ್ನಡ-ತೆಲುಗು ಲೇಖಕರು ಗಾಂಧೀಜಿ ಮತ್ತು ಅವರ ಪರಿಕರಗಳು, ಕಾರ್ಯಕ್ರಮ, ಸ್ವಾತಂತ್ರ್ಯ ಚಳವಳಿಯ ವಸ್ತುವೈವಿಧ್ಯತೆ, ಬುಡಕಟ್ಟು ನಾಯಕರನ್ನು ಕುರಿತು ನಾಟಕಗಳನ್ನು ರಚಿಸಿದ್ದು, ಈ ಪ್ರಕಾರದಲ್ಲಿ ಸ್ವಾತಂತ್ರ್ಯ ಚಳವಳಿಯ ಸ್ವರೂಪ ಹೇಗಿತ್ತು ಎಂಬುದನ್ನು ಇಲ್ಲಿ ಗಮನಿಸಲಾಗಿದೆ. ಮುಖ್ಯವಾಗಿ ಗಾಂಧಿ ಟೋಪಿ, ತಲೆಬಾಗದ ಜನ, ಮುಂದಡುಗು, ಅಲ್ಲೂರಿ ಸೀತಾರಾಮರಾಜು ನಾಟಕಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

೧೯೪೨ರ ಚಲೇಜಾವ್ ಚಳುವಳಿಯ ಶಿವಮೊಗ್ಗ ಜಿಲ್ಲೆಯ ಈಸೂರಿನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಒಂದು ಪ್ರತಿಭಟನೆಯ ಘಟನೆಯನ್ನು ಕೇಂದ್ರವಾಗಿಟ್ಟುಕೊಂಡು ಕೆ. ವೆಂಕಟರಾಜು ಅವರು **'ತಲೆಬಾಗದ ಜನ'** ಎಂಬ ನಾಟಕ ರಚಿಸಿದ್ದಾರೆ. ಇದು ಗಾಂಧೀಜಿ ಮತ್ತು ಅವರ ಚಿಂತನೆಗಳನ್ನು ಒಳಗೊಂಡಿದೆ. ಕರ್ನಾಟಕದ ಒಂದು ಪುಟ್ಟ ಗ್ರಾಮವಾದ ಈಸೂರು ಕ್ವಿಟ್ ಇಂಡಿಯಾ ಚಳುವಳಿಗೆ ಸ್ಪಂದಿಸಿದ ಬಗೆ, ಹೋರಾಟ ಮಾಡಿದ ಪರಿ ಇಡೀ ನಾಡಿಗೆ ಮಾದರಿಯಾಗಿ ಕಂಡುಬರುತ್ತದೆ. ನಮ್ಮ ದೇಶದಲ್ಲಿ ಇಂತಹ ಸಣ್ಣ ಸಣ್ಣ ಹಳ್ಳಿಗಳು ಎಲೆಮರಿಕಾಯಿಯಂತಿರುವ ಶ್ರೀಸಾಮಾನ್ಯರು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಅವರ ತತ್ವಗಳನ್ನು ಅನುಸರಿಸಿರುವುದು ಅನನ್ಯವಾದುದು.

ಒಂದು ಪುಟ್ಟ ಗ್ರಾಮವಾದ ಈಸೂರಿನಲ್ಲಿ ನಡೆದ ಬ್ರಿಟಿಷರ ದಬ್ಬಾಳಿಕೆಯನ್ನು ಪ್ರತಿಭಟಿಸಿ ತನ್ನನ್ನು ತಾನೇ ಸ್ವತಂತ್ರ ಹಳ್ಳಿಯೆಂದು ಸಾರಿಕೊಂಡು ಈ ಗ್ರಾಮದ ಎಲ್ಲರೂ ಗಾಂಧಿಟೋಪಿಯನ್ನು ಧರಿಸಲೇಬೇಕೆಂದು ಹತ್ತು ವರ್ಷದ ಪುಟ್ಟ ಬಾಲಕನನ್ನು ಅಮಲ್ದಾರನನ್ನಾಗಿ ನೇಮಿಸಿಕೊಂಡು ಬ್ರಿಟಿಷ್ ಸರ್ಕಾರಕ್ಕೆ ಎದುರಾಗುತ್ತಾರೆ. ಸನ್ನಿವೇಶಗಳು ಕೈಮೀರಿ ಬ್ರಿಟಿಷ್ ಸರ್ಕಾರದಿಂದ ನೇಮಿತರಾಗಿದ್ದ ಅಮಲ್‌ದಾರ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್‌ಗಳ ಕೊಲೆಯಾಗುತ್ತದೆ. ಇದರಿಂದ ಕೋಪಗೊಂಡು ಪೊಲೀಸ್ ಪಡೆ ಈಸೂರು ಹಳ್ಳಿಗೆ ನುಗ್ಗಿ ಮನೆಗಳಿಗೆ ಬೆಂಕಿ ಹಚ್ಚಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡಿ, ಇಡೀ ಆ ಹಳ್ಳಿಯನ್ನು ಧ್ವಂಸ ಮಾಡುತ್ತಾರೆ.

೧೯೪೨ರ ಚಳುವಳಿಯ ಸಂದರ್ಭದಲ್ಲಿ ಹೆಚ್ಚಿನದಾಗಿ ವಿದ್ಯಾರ್ಥಿ ಯುವಕರು ಪಾಲ್ಗೊಂಡಿರುತ್ತಾರೆ. ವಿದ್ಯಾರ್ಥಿಗಳು ಹಳ್ಳಿ-ಹಳ್ಳಿಗೆ ಧಾವಿಸಿ ಚಳುವಳಿಯ ಕುರಿತು ಜಾಗ್ರತೆ ಮೂಡಿಸುವ ಕೆಲಸದಲ್ಲಿ ನಿರತರಾಗಿರುತ್ತಾರೆ. ರಾಧಾಕೃಷ್ಣ ಎಂಬ ವಿದ್ಯಾರ್ಥಿ ಸ್ವಾತಂತ್ರ್ಯದ ಗೀಳು ಹತ್ತಿಸಲು ಹಳ್ಳಿ ಹಳ್ಳಿ ಸುತ್ತುತ್ತಾ ಈಸೂರು ಗ್ರಾಮಕ್ಕೆ ಬರುತ್ತಾನೆ. ಗ್ರಾಮದ ಜನತೆಯನ್ನು ಚಳುವಳಿಗೆ ಸಿದ್ಧಗೊಳಿಸಿದ ಪರಿ.

ರಾಧಾಕೃಷ್ಣ – "ಗ್ರಾಮ ಗ್ರಾಮದಲ್ಲಿಯೂ ಹೋರಾಟ ಆದರೆ ಸರ್ಕಾರ ಕುಸಿಯುತ್ತೆ. ಆ ಕಾರಣಕ್ಕೆ ನಾನು ಈಸೂರಿಗೆ ಬಂದೆ. ವಂದೆಮಾತರಂ .... ಜೈಹಿಂದ್, ಮಹಾತ್ಮಗಾಂಧಿಕಿ.

ಎಲ್ಲರೂ – ಜಯ್

ಗುರಪ್ಪ – ನಮ್ಮ ಈ ಗ್ರಾಮ ಶಿವಮೊಗ್ಗಾದಲ್ಲೇ ಹೆಸರಾದ ಗ್ರಾಮ. ನಾವು ಬಿಡುಗಡೆಯ ಹೋರಾಟದ ಮುಂಚೂಣಿಯಲ್ಲಿದ್ದೇವೆ. ನಾವು ಯಾರಿಗೂ ಕಡಿಮೆಯಿಲ್ಲದ ಜನ. ಹೋರಾಟದಲ್ಲಿ ಪಾಲ್ಗೊಳ್ಳಬೇಡವೇ? ಎಲ್ಲರ ಬದುಕಲ್ಲು ಈ ಕ್ಷಣಗಳು ಬರುವುದಿಲ್ಲ. ನಾವು ಭಾಗ್ಯವಂತರು. ಒಂದೇ ಒಂದು ಸಲ ಕಾಲು ತೆಗೆದು ಇಟ್ಟ ಮೇಲೆ ಮತ್ತೆ ಹಿಂದುರುಗಿ ನೋಡುವಂತೆ ಇಲ್ಲ.

ಶಂಕರಪ್ಪ – ನಾವು ಶಿವಮೊಗ್ಗಗೆ ಹೋಗಿ ದಸ್ತಗಿರಿ ಆಗೋಣ

ಹಾಲಪ್ಪ – ಕಚೇರಿಗೆ ಮುತ್ತಿಗೆ ಹಾಕೋಣ

ಮಲ್ಲಪ್ಪ – ಮೈಲಾರ ಮಹದೇವಪ್ಪನ ತರಹ ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿ ಸರ್ಕಾರಿ ಖಜಾನೆ ಹೊತ್ತುಕೊಂಡು ಬರೋಣ." (ತಲೆಬಾಗದ ಜನ, ಪುಟ–೪, ೨೦೦೦)

ದೇಶದೆಲ್ಲೆಡೆ ಬ್ರಿಟಿಷರನ್ನು ದೇಶದಿಂದ ಹೊರಹಾಕಲು ಸದ್ದು ಮಾಡಿದ್ದು ಕ್ವಿಟ್ ಇಂಡಿಯಾ ಚಳುವಳಿ ಅದರಂತೆ ಬ್ರಿಟಿಷ್ ಸರ್ಕಾರವನ್ನು ನಿಷ್ಕ್ರಿಯಗೊಳಿಸಲು ಇದು ಅಂತಿಮ ಹೋರಾಟವೆಂದು ಈ ಯುದ್ಧದಲ್ಲಿ ಬಾಗಿಯಾಗಲು ಅವಕಾಶ ಸಿಗುವುದು ನಮ್ಮ ಅದೃಷ್ಟ, ಮುಂದಿಟ್ಟ ಹೆಜ್ಜೆ ಹಿಂದಿಡಬಾರದು ಎಂದು ಗ್ರಾಮದ ಹಿರಿಯ ನಾಯಕರು ಹೋರಾಟಕ್ಕೆ ಪೂರ್ವ ತಯಾರಿ ನಡೆಸುತ್ತಿರುವುದನ್ನು ಕಾಣಬಹುದಾಗಿದೆ. ಮೈಲಾರ ಮಹದೇವಪ್ಪ ಗಾಂಧಿ ಅನುಯಾಯಿ, ಅವರೊಂದಿಗೆ ಚಳುವಳಿಗಳಲ್ಲಿ ಪಾಲ್ಗೊಂಡವರು ಅದರಿಂದಾಗಿ ಈಸೂರಿನ ಜನತೆಗೆ ಮಹದೇವಪ್ಪ ಮಾದರಿ ವ್ಯಕ್ತಿಯಾಗಿ, ಸ್ಫೂರ್ತಿಯಾಗಿ ಚಿತ್ರಿತಗೊಂಡಿದ್ದಾರೆ.

ಈಸೂರಿನ ಸ್ವಾತಂತ್ರ್ಯ ಹೋರಾಟಗಾರರಾದ ಗುರಪ್ಪ ಮತ್ತು ಸೂರ್ಯನಾರಾಯಣಚಾರ್ ಸರ್ಕಾರವನ್ನು ಅಸ್ವಸ್ಥಗೊಳಿಸಲು ಪರೋಕ್ಷವಾಗಿ ದೇಶೀಯ ಪ್ರಭುತ್ವವನ್ನು ತಿರಸ್ಕರಿಸಬೇಕು ಎಂಬುದರ ಸಂಭಾಷಣೆ ಹೀಗಿದೆ.

ಗುರಪ್ಪ – ಇಡೀ ಶಿವಮೊಗ್ಗಾದಲ್ಲೇ ಇಂತಹ ಚಳುವಳಿ ಆಗಿರಬಾರದು. ಅಂಥಾ ಚಳುವಳಿ ಮಾಡಬೇಕು. ಸರ್ಕಾರ ಹೆದರಿ ನಡುಗಿ ಹೋಗಬೇಕು. ಗಾಂಧೀಜಿ ಹೇಳಿದ್ದಾರೆ. ಭಾರತದ ಪ್ರಾಣಗಳೇ ಹಳ್ಳಿಗಳೂಂತ. ಅದಕ್ಕೆ ಹೊಂದಿಕೊಂಡಂತೆ ಚಳುವಳಿ ಆಗಬೇಕು.

ಸೂರ್ಯನಾರಾಯಣಚಾರ್ – ಹೇಳು ಗುರಣ್ಣ ನೀವು ಹೇಳಿದ ಹಾಗೆ ಕೇಳತೀವಿ.

ಗುರಪ್ಪ – ನಮ್ಮ ದೇಶವನ್ನು ಸ್ವತಂತ್ರಗೊಳಿಸುವ ಮುನ್ನ ನಮ್ಮ ಹಳ್ಳಿಗಳನ್ನು ಇದರ ಬಂಧನದಿಂದ ಬಿಡುಗಡೆ ಮಾಡೋಣ.

ಮತ್ತೊಬ್ಬ – ಅಂದರೇ?

ಗುರಪ್ಪ – ಅಂದರೆ ನಾವೇ ನಮ್ಮ ಹಳ್ಳಿಯನ್ನು ಆಳಿಕೊಳ್ಳೋಣ. ಬ್ರಿಟಿಷರ ಆಡಳಿತವನ್ನು ಮಾನ್ಯ ಮಾಡೋದು ಬ್ಯಾಡ!

ಮಲ್ಲಪ್ಪ – ಗುರಣ್ಣ ಹೇಳತಿರೋದು ಸರಿ ಅಂತ ಅನ್ನಿಸುತ್ತೆ. ಆದರೆ ಅದ್ಯಾಕೋ ಸ್ಪಷ್ಟ ಆಗ್ತಾ ಇಲ್ಲ ರವಷ್ಟು ಬಿಡಿಸಿ ಹೇಳಿದರೆ ಅನುಕೂಲ.

ಗುರಪ್ಪ – ನಮ್ಮನ್ನ ಆಳ್ತಾ ಇರೋರು ಯಾರಪ್ಪಾ?

ಎಲ್ಲರೂ – ಮಹಾರಾಜರು

ಗುರಪ್ಪ – ಅವರು ಯಾರ ಪ್ರಭುತ್ವ ಒಪ್ಪಿಕೊಂಡಿದ್ದಾರೆ.

ಎಲ್ಲರೂ – ಅವರು ಬ್ರಿಟಿಷರ ಪ್ರಭುತ್ವನ ಒಪ್ಪಿಕೊಂಡಿದ್ದಾರೆ. (ತಲೆಬಾಗದ ಜನ, ಪುಟ–೫, ೨೦೦೦)

ಭಾರತ ಹಳ್ಳಿಗಳ ದೇಶ. ದೇಶ ಸ್ವಾತಂತ್ರ್ಯ ಪಡೆಯಬೇಕೆಂದರೆ ಮೊದಲು ಹಳ್ಳಿಗಳು ಉದ್ಧಾರವಾಗಬೇಕು. ಹಳ್ಳಿಗಳಲ್ಲಿನ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಬೇಕು. ಹಳ್ಳಿಯ ಜನರನ್ನು ಸಂಘಟಿಸಬೇಕು. ಹಳ್ಳಿಗಳಿಂದಲೇ ಹೋರಾಟ ಪ್ರಾರಂಭಿಸಬೇಕು. ನಿಜವಾದ ಸ್ವಾತಂತ್ರ್ಯ ಹೋರಾಟಗಾರರಿರುವುದು ಹಳ್ಳಿಗಳಲ್ಲಿ ಎಂದು ಹಳ್ಳಿಗಳ ಬಗೆಗಿನ ಗಾಂಧೀಜಿಯವರ ಕಾಳಜಿಯನ್ನು ಈಡೇರಿಸಲು ಗುರಪ್ಪ ತಂಡದವರು ಪ್ರಯತ್ನಿಸುತ್ತಿರುವುದನ್ನು ಗಮನಿಸಬಹುದು. ಜೊತೆಗೆ ನೇರವಾಗಿ ಬ್ರಿಟಿಷ್ ಸರ್ಕಾರವನ್ನು ವಿರೋಧಿಸದೆ ಅದರ ಅಡಿಯಲ್ಲಿ ಆಳ್ವಿಕೆ ನಡೆಸುತ್ತಿರುವ ರಾಜಪ್ರಭುತ್ವವನ್ನು ಧಿಕ್ಕರಿಸಿ ನಮ್ಮದೇ ಸರ್ಕಾರ ರಚಿಸಿಕೊಳ್ಳಬೇಕು. ನಮ್ಮನ್ನು ನಾವೇ ಆಳಿಕೊಳ್ಳಬೇಕು ಯಾರ ಹಂಗಿನಲ್ಲಿ ಬದುಕಬಾರದು ಎಂದು ಸ್ವ–ಸ್ವತಂತ್ರತೆಯ ಹಳ್ಳಿಯನ್ನಾಗಿ ಮಾಡಬೇಕು ಎಂಬ ಅಭಿಪ್ರಾಯವನ್ನು ತಿಳಿಯಬಹುದಾಗಿದೆ.

ಸರ್ಕಾರಕ್ಕೆ ಪ್ರತಿ ಸರ್ಕಾರವನ್ನು ರಚಿಸಲು ಹತ್ತು ವರ್ಷದ ಜಯಪ್ಪನನ್ನು ಅಮಲ್ದಾರನನ್ನಾಗಿ ನೇಮಿಸಲು ಅವರ ಮನೆಗೆ ಬಂದಾಗ ಅವನ ತಾತ ಚರಕದಲ್ಲಿ ಬಟ್ಟೆ ನೂಲುತ್ತಿರುವಾಗ ಗುರಪ್ಪ ಮತ್ತು ಅವರ ತಾತನ ನಡುವಿನ ಸಂಭಾಷಣೆ ಹೀಗಿದೆ.

ಗುರಪ್ಪ – "ಅಜ್ಜಾ ತಾವು ರಾಟಿನಲ್ಲಿ ನೂಲುತ್ತಿದ್ದೀರಲ್ಲ ಬಹಳ ಮೋಜೆನಿಸಿತು.

ತಾತ – ಮೋಜೇನ್ಬಂತು ಗುರಣ್ಣಾ. ಆ ಗಾಂಧಿ ಮಹಾತ್ಮನ ದೆಸೆಯಿಂದ ಎಲ್ಲೆಲ್ಲೂ ರಾಟೆ ಆಗಿದೆ. ಮನೆ ಮನೇಲಿ ಚರಕಾ ನಡೀತಿದೆ. ನಿನಗೆ ಗೊತ್ತದಾ ಏನು? ಮೈಸೂರುನ್ಹತ್ರ ಬದನವಾಳುವಿನಲ್ಲಿ ಚರಕದಿಂದ ಮೂರುಸಾವಿರ ಜನಕ್ಕೆ ಒಪ್ಪೊತ್ತಿನ ಗಂಜಿಗೆ ಆಗಿದೆ." (ತಲೆಬಾಗದ ಜನ, ಪುಟ–೯, ೨೦೦೦)

ಗಾಂಧೀಜಿಯವರು ಅಸ್ತಿತ್ವಕ್ಕೆ ತಂದ ಚರಕ ಮತ್ತು ನೂಲು ಬಡವರ ಹಾಗೂ ನಿರುದ್ಯೋಗಿಗಳ ದುಡಿಮೆಯ ಸಾಧನಗಳಾಗಿ ಸ್ವಾವಲಂಬನೆಯ ಬದುಕನ್ನು ನೆಡಸಲು ನೆರವಾಗುವುದನ್ನು ಗುರುತಿಸಬಹುದು. ಹಳ್ಳಿಯಿಂದ ದಿಲ್ಲಿಯವರೆವಿಗೂ, ಹದಿಹರೆಯದ ಹುಡುಗನಿಂದ ಮುಪ್ಪಡರಿದ ಮುದುಕನವರೆವಿಗೂ ಹಳ್ಳಿಗಳಲ್ಲಿ ಗಾಂಧೀಜಿಯವರ ಪ್ರಭಾವ ಪ್ರೇರಣೆ ಯಾವ ರೀತಿ ಇತ್ತು ಎಂಬುದನ್ನು ತಿಳಿಯಲಾಗಿದೆ.

ಗುರಪ್ಪ ಗಾಂಧೀ ಅನುಯಾಯಿ ಆಗಿದ್ದು ಪ್ರಾರಂಭದಿಂದಲೂ ಅಹಿಂಸಾ ಪರಿಪಾಲಕನಾಗಿರುತ್ತಾನೆ. ಕೊನೆಗೆ ಜಯಪ್ಪ ಪೊಲೀಸ್ ಜನರ ಜಗಳಾಟದಲ್ಲಿ ಸತ್ತ ಎಂಬ ಸುದ್ದಿ ಕೇಳಿ ಜನರಿಗೆ ಹಿಂಸೆರೂಪದ ಹೋರಾಟಕ್ಕೆ ಕರೆ ನೀಡುತ್ತಾನೆ. ಪೊಲೀಸರ ಮತ್ತು ಅಮಲ್ದಾರರ ಕೊಲೆಯಾಗುತ್ತದೆ. ಅದರ ಹೊಣೆ ಗುರಪ್ಪನು ಹೊತ್ತು ನೇಣುಗಂಬಕ್ಕೆ ಶರಣಾಗುತ್ತಾನೆ. ಜೊತೆಗೆ ಮಲ್ಲಪ್ಪ, ಸೂರ್ಯನಾರಾಯಣ ಆಚಾರಿ, ಹಾಲಪ್ಪ, ಶಂಕರಪ್ಪ ಇವರು ಸಹ ನೇಣುಗಂಬವೇರಿ ಚರಿತ್ರೆಯ ಪುಟಗಳಲ್ಲಿ ಅಜರಾಮರರಾಗಿರುವುದನ್ನು ಕಾಣಬಹುದು.

ಸುಂಕರ ಸತ್ಯನಾರಾಯಣ ಮತ್ತು ವಾಸಿರೆಡ್ಡಿ ಭಾಸ್ಕರರಾವು ಅವರು 'ಮುಂದಡುಗು' ಎಂಬ ತೆಲುಗು ನಾಟಕವನ್ನು ೧೯೪೪ರಲ್ಲಿ ರಚಿಸಿದ್ದಾರೆ. ಈ ನಾಟಕದಲ್ಲಿ ಜಮೀನ್ದಾರರು ಮತ್ತು ಪೊಲೀಸರು ಮತ್ತು ರೈತ ಕೂಲಿ ಆಳುಗಳನ್ನು ದಮನ ಮಾಡಲು ಪ್ರಯತ್ನಿಸುತ್ತಾರೆ. ಆದರೆ ಅವರೆಲ್ಲರು ಒಂದಾಗಿ ಜಮೀನ್ದಾರರನ್ನು ಪ್ರತಿಭಟಿಸುವುದೇ ಈ ನಾಟಕದ ಉದ್ದೇಶವಾಗಿದೆ.

ಈ ನಾಟಕದಲ್ಲಿ ನಾರಾಯಣರಾವ್ ಕಥಾನಾಯಕನಾಗಿ ಚಿತ್ರಿತಗೊಂಡಿದ್ದಾನೆ. ನಾರಾಯಣರಾವ್ ಪುಲ್ಲಯ್ಯ ಎಂಬ ರೈತನನ್ನು ಕೂಡಿಕೊಂಡು ಜಮೀನ್ದಾರಿ ಚಕ್ರಧರರಾವ್, ಠಾಣೆದಾರು ನಾಗೇಂದ್ರರ ಕುತಂತ್ರಗಳನ್ನು ಎದುರಿಸುವುದು, ರೈತರ ಸಂಘ ಸ್ಥಾಪನೆ, ಅಚ್ಚಯ್ಯನಂತಹ ಶ್ರೀಮಂತ ರೈತನು ಸಹ ಇವರೊಂದಿಗೆ ಸೇರಿಕೊಂಡು ಹೋರಾಟ ಮಾಡುವುದು ಈ ನಾಟಕದ ಆಶಯವಾಗಿದೆ. ಅಚ್ಚಯ್ಯನ ಮಗಳು ವಿಮಲ ಎಂಬ ಪಾತ್ರದ ಮೂಲಕ ಮಹಿಳಾ ಸ್ವಾತಂತ್ರ್ಯವನ್ನು, ಖಾಸಿಂ ಪಾತ್ರದ ಮೂಲಕ ಹಿಂದೂ-ಮುಸ್ಲಿಂ ಐಕ್ಯತಾ ಮನೋಭಾವವನ್ನು ಮತ್ತು ಶಾಂತಾ ಪಾತ್ರದ ಮೂಲಕ ಗಾಂಧೀಜಿಯವರ ತತ್ವಗಳ ಪ್ರತಿಪಾದನೆ ನಡೆಯುವುದು ಕಂಡುಬರುತ್ತದೆ. ಈ ನಾಟಕದಲ್ಲಿ ಬ್ರಿಟಿಷರಿಗೆ ವ್ಯತಿರೇಕವಾದ ಒಂದು ಮಾತು ಸಹ ಕಂಡುಬರುವುದಿಲ್ಲ. ಈ ನಾಟಕ ವಾಸ್ತವಿಕಾದ, ಸೌಮ್ಯವಾದ ಸಿದ್ಧಾಂತಗಳನ್ನು ಸಹ ಒಳಗೊಂಡಿದೆ.

ಕೋಟಯ್ಯ ಎಂಬ ರೈತನು ಕಂದಾಯವನ್ನು ಕಟ್ಟಿದ್ದರೂ ಸಹ ಜಮೀನ್ದಾರರು ಕಟ್ಟಿಲ್ಲ, ಇನ್ನೊಮ್ಮೆ ಕಟ್ಟಬೇಕು ಎಂದು ಬೆದರಿಕೆ ಹಾಕುತ್ತಾರೆ. ಆಗ ರೈತರು, ಕೂಲಿ ಆಳುಗಳೆಲ್ಲರು ನಾವು ಈ ಕಷ್ಟದಿಂದ ಪಾರಾಗಬೇಕೆಂದರೆ ಇವರ ಅನ್ಯಾಯವನ್ನು ಎದುರಿಸಬೇಕು. ಸಂಘ ಕಟ್ಟಬೇಕು. ಪ್ರತಿ ರೈತನು ಸಂಘವನ್ನು ಸೇರಬೇಕು. ಅದರಿಂದ ಮಾತ್ರ ನಮಗೆ ಮೋಕ್ಷ, ಸ್ವಾತಂತ್ರ್ಯ ಎಂದು ನಾರಾಯಣರಾವ್ ಎಚ್ಚರಿಸುತ್ತಾ ಹೀಗೆ ಹೇಳುತ್ತಾನೆ.

ಕನ್ನಡ ಭಾಷಾಂತರ

ಭಾರತ ವೀರಕುಮಾರ! ಬಾಬಾ ರಕ್ಷಕ ವೀರಾ
ಎಲ್ಲಾರೂ ಒಂದಾಗಿ ನಮ್ಮ ಹಕ್ಕುಗಳಿಗಾಗಿ ಕದನ ಮಾಡೋಣ
ತಿರುಗಿ ಬಿದ್ದು ನಿಮ್ಮ ಶಕ್ತಿಯನ್ನು ತೋರಿಸು! ಹಾರಿಸು ಭಾವುಟ
(ಮೂಲ; ಅನುಬಂಧ–೩ ಅಧ್ಯಾಯ–೩ ಕ್ರಸಂ. ೯)

ಭಾರತೀಯ ವೀರಪುತ್ರರಾದ ರೈತರೆ, ಕೂಲಿ ಆಳುಗಳೆ ತಮ್ಮ ಹಕ್ಕುಗಳಿಗೋಸ್ಕರ ಒಂದಾಗಿ ಹೋರಾಡಿ, ಅವುಗಳಿಗೋಸ್ಕರ ತಮ್ಮ ಪ್ರಾಣಗಳನ್ನು ಕೊಡಲು ಸಿದ್ಧರಾಗಿರಿ ಎಂಬ ಸಂದೇಶವನ್ನು ತಿಳಿಯಲಾಗಿದೆ. ಹಾಗೆನೇ ಗಾಂಧೀಜಿ ಅನುಯಾಯಿಯಾದ ಪುಲ್ಲಯ್ಯನ ಹೆಂಡತಿ ಶಾಂತ

ಕನ್ನಡ ಭಾಷಾಂತರ

ನೂಲು ತೆಗೆಯೋಣ ಬಾ
ಹಸನಾದ ಬಹುಸಣ್ಣದಾದ ನೂಲು
(ಮೂಲ; ಅನುಬಂಧ–೩ ಅಧ್ಯಾಯ–೩ ಕ್ರಸಂ. ೧೦)

ಶಾಂತಾ ಗಾಂಧೀಜಿಯವರ ಪ್ರೇರಣೆಗೆ ಒಳಗಾಗಿ ಅವರ ತತ್ವಗಳನ್ನು ಪಾಲಿಸುತ್ತಿರುವುದನ್ನು ಅವರು ಪ್ರತಿಪಾದಿಸಿದ ಚರಕ, ಖಾದಿಯ ಬಟ್ಟೆಯ ಕುರಿತು ಧ್ವನಿಸುತ್ತಿರುವುದನ್ನು ಕಾಣಬಹುದಾಗಿದೆ. ವಿಮಲ ಸ್ತ್ರೀ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಕುರಿತು ಹೀಗೆ ಹೇಳುತ್ತಾಳೆ.

ಕನ್ನಡ ಭಾಷಾಂತರ

ಸ್ವಾತಂತ್ರ್ಯ ನೆಮ್ಮದಿ, ಶಾಂತಿ
ಈ ಮಾತ್ರ ಹಕ್ಕು ಇಲ್ಲವೆ ಸ್ತ್ರೀಗೆ
ಸಮಾಜದ ದುರಾಚಾರಗಳನ್ನು ಖಂಡಿಸುವ ನಮ್ಮನ್ನು
ಇನ್ನು ಸುಮ್ಮನಿರುವುದೆ ನಮ್ಮ ದಾರಿ ನಾವು ಹಿಡಿಯಬೇಕು
ಝಾನ್ಸಿರಾಣಿ, ರುದ್ರಮದೇವಿ ಜನಿಸಿದ ಕುಲದಲ್ಲಿ
ತಮ್ಮ ಹಕ್ಕುಗಳನ್ನು ಕೇಳಲು ಭೀತಿಯೆ
(ಮೂಲ; ಅನುಬಂಧ–೩ ಅಧ್ಯಾಯ–೩ ಕ್ರಸಂ. ೧೧)

ಅಚ್ಚಯ್ಯ ಎಂಬ ಧನಿಕ ರೈತನ ಮಗಳಾದ ವಿಮಲ ಝಾನ್ಸಿರಾಣಿ, ರುದ್ರಮದೇವಿ ಜನಿಸಿದ ಈ ನಾಡಿನಲ್ಲಿ ಸ್ತ್ರೀಗೆ ಹಕ್ಕುಗಳನ್ನು ಕೇಳುವ ಅರ್ಹತೆ ಇಲ್ಲವೆ, ಜಮೀನ್ದಾರರು ನಡೆಸುವ ದುರಾಚಾರವನ್ನು ತಡೆಯುವ ಮಾರ್ಗವಿಲ್ಲವೆ. ಸ್ವತಂತ್ರವಾಗಿ ಜೀವಿಸುವ ಹಕ್ಕು, ಸಮಾನತೆ ಕುರಿತು ಪ್ರತಿಭಟಿಸುವುದನ್ನು ಗಮನಿಸಬಹುದಾಗಿದೆ. ಮೋಹನ ಎಂಬ ವ್ಯಕ್ತಿ ತನ್ನ ಅಸಹಾಯಕತೆಯನ್ನು ಹೀಗೆ ಹೇಳುತ್ತಾನೆ.

ಕನ್ನಡ ಭಾಷಾಂತರ

ಓ ದೇಶಮಾತೆಯ ವೀರಕುಮಾರರು ಯಾರು ಇಲ್ವ
ಕ್ರೂರ ಜಮೀನ್ದಾರಿಯ ದಬ್ಬಾಳಿಕೆಯಿಂದ ಅಸುನೀಗಿದ ವೀರಗಳಿರಾ
ಭಾರತ ಭಾಗ್ಯವಿದಾತ ರೈತ
ಗುಲಾಮಗಿರಿಯಾಗಿ ಕಾಲಡಿಯಲ್ಲಿ ಬಿದ್ದಿರುವ
ಸೋದರರೆಲ್ಲನ್ನು ಕೂಡಿಸಿಕೊಂಡು
ಈ ಪೀಡನ ಪದ್ದತಿಯನ್ನು ಎದುರಿಸಲು
ಓಡಿ ಬಾ ಸಾವು-ನೋವು ಲೆಕ್ಕಿಸದೆ
ಸಾಗಿ ಬಾ ಮೂಲೆ ಮೂಲೆಯಲ್ಲಿರುವ
ದೇಶಪುತ್ರರು ಎಲ್ಲ ಬನ್ನಿ!
(ಮೂಲ; ಅನುಬಂಧ-೩ ಅಧ್ಯಾಯ-೩ ಕ್ರಸಂ. ೧೨)

ಭಾರತೀಯ ವೀರಪುತ್ರರೆ, ಕೃಷಿಕರೆ ಕ್ರೂರ ಜಮೀನ್ದಾರಿಗಳು ನಡೆಸುವ ಅನ್ಯಾಯ, ಅನೀತಿ, ದೌರ್ಜನ್ಯಗಳಿಂದ ಅವರ ಗುಲಾಮತ್ವದಿಂದ ಬಿಡುಗಡೆ ಹೊಂದಲು ಸಾವು, ನೋವನ್ನು ಲೆಕ್ಕಿಸದೆ ಒಗ್ಗೂಡಲು ಬನ್ನಿ ಎಂಬ ರಣಕಹಳೆಯ ಸಂದೇಶವನ್ನು ಇದು ತಿಳಿಸುತ್ತದೆ.

ಗಾಂಧೀಜಿಯವರು ರಾಜಕೀಯ ಸ್ವಾತಂತ್ರ್ಯಕ್ಕಿಂತ ಮುಖ್ಯವಾಗಿ ದೇಶದ ಹಳ್ಳಿಗಳಲ್ಲಿ ತಾಂಡವ ವಾಡುತ್ತಿರುವ ಸಾಮಾಜಿಕ ಅನಿಷ್ಟ ಪದ್ದತಿಗಳನ್ನು ತೊಡೆದುಹಾಕಲು ಅವಿರತ ಪ್ರಯತ್ನಿಸಿದವರು.

ಕನ್ನಡ ಭಾಷಾಂತರ

ಹಣ, ಹೊನ್ನಿಗಾಗಿ ಆಸೆಪಟ್ಟು ಮಗಳನ್ನು ಮುದುಕನಿಗೆ
ಧಾರೆಯೆರೆದ ಮೂರ್ಖನೊಬ್ಬನು
ಉತ್ತಮಸಂಬಂಧ ತಪ್ಪಿಹೋಗುತ್ತದೆಂದು ಚಿಕ್ಕ ಹುಡುಗಿಯನ್ನು
ಮದುವೆ ಮಾಡಿಕೊಟ್ಟನೊಬ್ಬನು
(ಮೂಲ; ಅನುಬಂಧ-೩ ಅಧ್ಯಾಯ-೩ ಕ್ರಸಂ. ೧೩)

ಮೈನೆರೆಯುವುದಕ್ಕೆ ಮುಂಚೆ ಈಡು ಜೋಡುನ್ನು ಲೆಕ್ಕಿಸದೆ ಯೋಚಿಸದವನೊಬ್ಬನು ಹಣದ ಆಸೆಗಾಗಿ ತಮ್ಮ ಮಕ್ಕಳನ್ನು ಹದಿಹರೆಯದ ವಯಸ್ಸಿನಲ್ಲಿಯೆ ಮದುವೆ ಮಾಡಿ ವಿವಿಧ ರೀತಿಯ ಚಿತ್ರಹಿಂಸೆಗಳನ್ನು ಅನುಭವಿಸುವುದನ್ನು ಕಾಣಬಹುದು.

ನಾರಾಯಣರಾವ್ ರೈತರ ದಯಾನೀಯ ಸ್ಥಿತಿಯನ್ನು ಕುರಿತು.

ಕನ್ನಡ ಭಾಷಾಂತರ

ಮಧ್ಯಾಹ್ನ ಎರಡು ಗಂಟೆಯ ಉರಿಬಿಸಿಲಲ್ಲಿ
ಬಂಡೆ ಕೆಲಸ ಮಾಡುವುದರಿಂದ ಮಾಂಸ ಖಂಡಗಳ ಕರಗತ
ಅನ್ನವಿಲ್ಲದೆ ಬಿಸಿಲಿನಲ್ಲಿ ಬಳಲಿದಾತ
ಕೃಷಿಕರೆ ಭಾರತದ ಬೆನ್ನೆಲುಬು
(ಮೂಲ; ಅನುಬಂಧ–೩ ಅಧ್ಯಾಯ–೩ ಕ್ರಸಂ. ೧೪)

ರೈತರು ಭಾರತದ ಬೆನ್ನೆಲುಬು ಅವರು ಬಿಸಿಲು ಮಳೆ ಗಾಳಿ ಎನ್ನದೆ ಹೊತ್ತಿಗೆ ಸರಿಯಾಗಿ ಅನ್ನವಿಲ್ಲದೆ ಹಗಲಿರುಳು ದುಡಿಯುತ್ತಿರುವ ಅಸಹನೀಯ ಪರಿಸ್ಥಿತಿಯನ್ನು ತಿಳಿಯಲಾಗಿದೆ.

ಪುಲ್ಲಯ್ಯ ತನ್ನ ತಾಯಿಗೆ ಹೀಗೆ ಹೇಳುತ್ತಾನೆ.

ಕನ್ನಡ ಭಾಷಾಂತರ

ಹತ್ತುಮಂದಿಗೋಸ್ಕರ ಜೈಲಿಗೆ ಹೋಗುತ್ತಿದ್ದೇವೆ...
ಇದರಿಂದ ನಮಗೇನು ನಾಚಿಕೆ, ನಾಮಾರ್ಥತನವಿಲ್ಲ
ಈ ಸಂಕೋಲೆಗಳಾದರೂ ಜೈಲಾದರೂ ನಮಗೇನು ಭಯವಿಲ್ಲ.
(ಮೂಲ; ಅನುಬಂಧ–೩ ಅಧ್ಯಾಯ–೩ ಕ್ರಸಂ. ೧೫)

ಪುಲ್ಲಯ್ಯ ಗೌರವಾನ್ವಿತ ಧನಿಕನಾದರೂ ಸಹ ಸಾಮಾನ್ಯ ಜನತೆಗಾಗಿ ತನ್ನ ಅಧಿಕಾರ, ಅಂತಸ್ತನ್ನು ಲೆಕ್ಕಿಸದೆ ಸಾಮಾಜಿಕ ನ್ಯಾಯಕ್ಕೋಸ್ಕರ ಪ್ರಾಣವನ್ನು ಅರ್ಪಿಸಲು ಸಿದ್ದವಿರುವ ನಿಸ್ವಾರ್ಥ ಸೇವೆಯನ್ನು ಗಮನಿಸಬಹುದು.

ಜಮೀನ್ದಾರರು ಕೋಟಯ್ಯನು ಕಂದಾಯವನ್ನು ಕಟ್ಟಿಲ್ಲ ಎಂದು ಜಮೀನನ್ನು ವಶಪಡಿಸಿಕೊಳ್ಳಲು ಮುಂದಾದಾಗ ವಿಮಲ ಈ ರೀತಿಯಾಗಿ ಸಂದೇಶವನ್ನು ನೀಡುತ್ತಾಳೆ.

ಕನ್ನಡ ಭಾಷಾಂತರ

ದುಡಿಮೆಯೇ ಸಮಾಜದ ಗುಂಪಿನ ಶಕ್ತಿ
ಸೊಂಟ ಬಿಗಿದು ನಿಂತುಕೊಂಡು ಮುಂದೆಜ್ಜೆ ಹಾಕಿ
ಬಂಡುಕೋರರನ್ನು ಮಟ್ಟ ಹಾಕುವುದು
ನಮ್ಮ ಗುಂಪಿಗೆ ಅಸಾಧ್ಯವಾದುದೇನೂ ಇಲ್ಲ.
(ಮೂಲ; ಅನುಬಂಧ–೩ ಅಧ್ಯಾಯ–೩ ಕ್ರಸಂ. ೧೬)

ಯಾವುದೇ ಕೆಲಸವನ್ನು ಕೈಗೊಂಡರೂ ಎಲ್ಲರೂ ಒಗ್ಗಟ್ಟಿನಿಂದ ಇರಬೇಕು. ಸ್ತ್ರೀ ಸೊಂಟ ಬಿಗಿದು ಹೋರಾಟಕ್ಕೆ ನಿಂತರೆ ಪುರುಷನಿಗೇನೂ ಕಡಿಮೆ ಇಲ್ಲದೆ ಹೋರಾಟ ಮಾಡಬಹುದು ಎಂದು ಹೋರಾಟದಲ್ಲಿ ಸ್ತ್ರೀ ಪ್ರತಿನಿಧೀಕರಣವನ್ನು ಸೂಚಿಸುತ್ತದೆ.

ಜಮೀನ್ದಾರ ಚಕ್ರದರರಾವ್ ಮತ್ತು ನಾಗೇಂದ್ರರಾವ್ ಕಾಸಿಂ ಎಂಬ ಮುಸ್ಲಿಂ ಯುವಕ ರೈತಸಂಘದಲ್ಲಿ ಸೇರಿಕೊಂಡು ಹೋರಾಟ ಮಾಡುವುದನ್ನು ಕುರಿತು

ಕನ್ನಡ ಭಾಷಾಂತರ

ನಾಗೇಂದ್ರರಾವ್–ಕಾಸಿಂ ನಿನಗೇಕೆ ಗೊಡವೆ? ಅವರೆಲ್ಲಾ ಹಿಂದೂಗಳು. ನೀವು ಅಲ್ಪಸಂಖ್ಯಾತರು.

ಕಾಸಿಂ – ಆದ್ರೆ

ನಾಗೇಂದ್ರರಾವ್ – ಆ ಆದ್ರೇನಾ? ಅವರೆಲ್ಲ ಹಿಂದುಗಳು. ಒಳ್ಳೆಯದಕ್ಕೂ, ಕೆಟ್ಟದಕ್ಕೂ ಅವರು ಒಬ್ಬರಿಗೊಬ್ಬರು ಆಗ್ತಾರೆ. ಅವಸರ ಬಂದರೆ ನೆತ್ತಿಮೇಲೆ ಕೂರಿಸಿಕೊಳ್ಳುತ್ತಾರೆ. ಇಲ್ಲದಿದ್ದರೆ ನಿಮ್ಮ ಮುಸ್ಲಿಂರ ಮುಖ ನೋಡುವವರ್ಯಾರು.

ಕಾಸಿಂ – ಈಗ ಆ ಗಲಾಟೆ ಏನಿಲ್ಲಪ್ಪ. ಕುಲ, ಮತ, ಬೇಧಗಳು ಸ್ವಲ್ಪವೂ ಇಲ್ಲದೆ ನಮ್ಮ ರೈತರೆಲ್ಲ ಅಣ್ಣ–ತಮ್ಮಂದಿರ ಹಾಗೆ ಇದ್ದೇವೆ. (ಮೂಲ; ಅನುಬಂಧ–೩ ಅಧ್ಯಾಯ–೩ ಕ್ರಸಂ. ೧೭)

ಜಮೀನ್ದಾರರು ಹಿಂದೂ–ಮುಸ್ಲಿಂರಲ್ಲಿ ಭೇದಭಾವ ಕಲ್ಪಿಸಿ ಸಂಘಟನೆಯನ್ನು ಹೊಡೆಯಲು ಪ್ರಯತ್ನಿಸುತ್ತಿರುವುದನ್ನು ಗಮನಿಸಬಹುದು. ಆದರೆ ಕಾಸಿಂ ನಮ್ಮಲ್ಲಿ ಕುಲಮತ ಎಂಬ ಭೇದ ಭಾವವಿಲ್ಲದೆ ಸಹೋದರರಂತೆ ಬಾಳುವೆ ನಡೆಸುತ್ತಿದ್ದೇವೆ ಎಂದು ಹೇಳುವ ಆತನ ಐಕ್ಯತಾ ಮನೋಭಾವವನ್ನು ಗುರುತಿಸಬಹುದು.

ಟಿ.ಎಂ. ಭಾಸ್ಕರ ಅವರು ೨೦೦೦ನೇ ಇಸವಿಯಲ್ಲಿ ಬರೆದ ಗಾಂಧಿಟೋಪಿ ನಾಟಕವು ಮತ್ತು ಕೌಜಲಗಿ ಹನುಮಂತರಾಯರು ಇನ್ನಿತರ ಅವರ ಸಮಕಾಲೀನರು ಜೊತೆಗೂಡಿ ಮಾಡಿದ ಕಾರ್ಯ ಸಾಧಿಸಿದ ಸಾಧನೆಯ ಪರಿಚಯವನ್ನು ತಿಳಿಸುತ್ತದೆ. ಹನುಮಂತರಾಯರು ಸರ್ಕಾರದ ಯಾವ ಒತ್ತಡಕ್ಕೂ, ಬೆದರಿಕೆಗೂ ಹೆದರದೆ ತಲೆಯ ಮೇಲಿನ ಗಾಂಧಿಟೋಪಿಯನ್ನು ತೊರೆಯದ ಧೈರ್ಯಶಾಲಿ ಸರಳ ಕಾಯಕಯೋಗಿ ನಿಸ್ವಾರ್ಥದ ಮೂರ್ತಿಯಾಗಿ ಚಿತ್ರಿತಗೊಂಡಿದ್ದಾರೆ. ಹನುಮಂತರಾಯರು ಕಟ್ಟಾ ಗಾಂಧೀಜಿ ಅನುಯಾಯಿಯಾಗಿದ್ದವರು. ಅವರು ಮಾಡಿದ ದೇಶಸೇವೆ, ಸಮಾಜ ಸೇವೆ ಅನುಪಮವಾದುದು. ಅವರದು ಹೋರಾಟದ ಬದುಕು. ದೀನದಲಿತರು, ದೇವದಾಸಿಯರು ಹಾಗೂ ಹರಿಜನ ಮಹಿಳೆಯರ ಉನ್ನತಿಗಾಗಿ ಬದುಕಿನುದ್ದಕ್ಕೂ ಶ್ರಮಪಟ್ಟವರು. ಗಾಂಧೀಜಿಯವರ ಸ್ಫೂರ್ತಿಯಿಂದ ಆರು ದಶಕಗಳ ಹಿಂದೆಯೇ ಬಿಜಾಪುರ ಜಿಲ್ಲೆಯಲ್ಲಿ ಹರಿಜನ ಕನ್ಯಾಮಂದಿರವನ್ನು, ದೇವದಾಸಿಯರ ಉತ್ತಮ ಬದುಕಿಗಾಗಿ ಅಹಲ್ಯೋದ್ಧಾರ ಮಂದಿರ ಆರಂಭಿಸಿದ ಅವರ ಸಾಮಾಜಿಕ ಕಳಕಳಿ ಅನನ್ಯ. ರೈತರ ಬವಣೆಗಾಗಿ ಮರುಗಿದವರು. ಆಳರಸರ ದೌರ್ಜನ್ಯಕ್ಕೆ ಕೊರಗಿದವರು. ಕಾಯಕವನ್ನು ಬಹಳ ಶ್ರದ್ಧೆಯಿಂದ ಮಾಡಿ ಮುಗಿಸುತ್ತಿದ್ದರು ಎಂದು ಮುನ್ನುಡಿಕಾರರು ಹೇಳಿದ್ದಾರೆ.

ಹನುಮಂತರಾಯರು ಗಾಂಧೀಜಿಯವರ ಅನುಯಾಯಿಯಾಗಿದ್ದು, ವಕೀಲನಾಗಿ ಗಾಂಧಿಟೋಪಿ ಧರಿಸಿದ್ದಕ್ಕಾಗಿ ಕೋರ್ಟಿನಲ್ಲಿ ವಿಚಾರಣೆ ಈ ರೀತಿಯಾಗಿ ನಡೆಯುತ್ತದೆ.

ಮ್ಯಾಜಿಸ್ಟ್ರೇಟ್ – ಗಾಂಧಿಟೋಪಿ ಧರಿಸಿದ್ದು ನಿಮ್ಮದು ತಪ್ಪಲ್ಲವೆ?

ಹನುಮಂತರಾಯ – ಗಾಂಧಿಟೋಪಿ ಧರಿಸಿಕೊಂಡಿರುವುದು ತಪ್ಪಲ್ಲ! ನೀವು ತಿಳಿದುಕೊಂಡಿರುವುದು.

ಮ್ಯಾಜಿಸ್ಟ್ರೇಟ್ – ಅಂದರೆ ನಿಮ್ಮ ಮಾತಿನ ಅರ್ಥ

ಹನುಮಂತರಾಯ – ಅನ್ಯಾಯದ ಆಜ್ಞೆಗಳನ್ನು ಉಲ್ಲಂಘಿಸುವುದು

ಮ್ಯಾಜಿಸ್ಟ್ರೇಟ್ – ಹಾಗಾದರೆ ನೀವು ಗಾಂಧಿಟೋಪಿ ತೆಗೆಯುವುದಿಲ್ಲವೇ?

ಹನುಮಂತರಾಯ – ಅಂತಹ ಮೂರ್ಖ ಕೆಲಸ ನಾನು ಮಾಡಲಾರೆ

ಮ್ಯಾಜಿಸ್ಟ್ರೇಟ್ – ಇನ್ನೂ ಸಮಯ ಕೊಡುವೆ, ವಿಚಾರಿಸಿ....

ಹನುಮಂತರಾಯ – ಕನ್ನಡ ನಾಡಿನ ಹೆಮ್ಮೆಯ ಪುತ್ರರ ಮಾತು ಒಂದೇ ಅದನ್ನು ಬದಲಿಸಲು ಸಾಧ್ಯವಿಲ್ಲ.

ಮ್ಯಾಜಿಸ್ಟ್ರೇಟ್ – ಏಕೆ ಸಾಧ್ಯವಿಲ್ಲ

ಹನುಮಂತರಾಯ – ಅದು ಅಷ್ಟು ಸುಲಭವಲ್ಲ ಮ್ಯಾಜಿಸ್ಟ್ರೇಟರೆ ಗಾಂಧಿಟೋಪಿ ಅದು ಸಾಮಾನ್ಯ ಟೋಪಿ ಅಲ್ಲ (ತಲೆಯ ಮೇಲಿನ ಟೋಪಿ ತೋರಿಸುತ್ತ) (ಗಾಂಧಿಟೋಪಿ, ಪುಟ–೨, ೨೦೦೦)

ಹನುಮಂತರಾಯ ಗಾಂಧಿಟೋಪಿಯ ಘನತೆ, ಗೌರವ, ಮಹತ್ವ, ಅದು ನ್ಯಾಯದ ಸಂಕೇತವಾಗಿದ್ದು, ಅನ್ಯಾಯ, ಅನೀತಿಯನ್ನು ಖಂಡಿಸುವುದೆಂದು, ದೃಢನಿರ್ಧಾರವನ್ನು ಹೊಂದಿರುವ ಕನ್ನಡದ ಅಪ್ಪಟ ಗಾಂಧೀವಾದಿ ಎಂಬುದನ್ನು ತಿಳಿಯಲಾಗಿದೆ.

ಈ ನಾಟಕದಲ್ಲಿ ಗಾಂಧೀಜಿ ಪಾತ್ರವಾಗಿ ಕಂಡುಬರುತ್ತಾರೆ. ಗಾಂಧೀಜಿ ಶ್ರೀರಾಮನ ಭಾವಚಿತ್ರವನ್ನು ಪೂಜಿಸುತ್ತ ದೇಶದಲ್ಲಿ ತಾಂಡವವಾಡುತ್ತಿರುವ ಬಡತನ, ನಿರುದ್ಯೋಗವನ್ನು ಕುರಿತು, ಬ್ರಿಟಿಷರು ದೇಶದ ಸಂಪತ್ತನ್ನೆಲ್ಲ ಯಾರ ಹಂಗಿಲ್ಲದೆ ದೋಚುತ್ತಿರುವುದನ್ನು, ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ಜನರಲ್ಲಿ ವಿಷದ ಬೀಜ ಬಿತ್ತಿ ಕೋಮುಗಲಭೆಗಳನ್ನು ಉಂಟು ಮಾಡುತ್ತಿರುವುದನ್ನು ತಪ್ಪಿಸಿ ರಕ್ಷಿಸುವಂತೆ ಮತ್ತು ಜನಸಾಮಾನ್ಯರ ಬದುಕು ಹಸನಾಗುವಂತೆ ಹರಿಸು, ದುಷ್ಟರನ್ನು ನಿಗ್ರಹಿಸು ಎಂದು ಬೇಡಿಕೊಳ್ಳುತ್ತಾರೆ.

ಸಮಾಜದಲ್ಲಿ ಜನರ ಕಷ್ಟ–ನಷ್ಟಗಳನ್ನು ಪರಿಹರಿಸಿ ಜನರಲ್ಲಿ ಸುಖ, ಶಾಂತಿ, ನೆಮ್ಮದಿ, ಬದುಕು ನಡೆಸುವ ರಾಮರಾಜ್ಯದ ಕನಸು ಕಾಣುತ್ತಿರುವ ಗಾಂಧೀಜಿ ದೈವಸ್ವರೂಪಿಯಾಗಿ ಚಿತ್ರಿತವಾಗಿದ್ದಾರೆ.

ಮಹಾತ್ಮಾಗಾಂಧೀಜಿ ೧೯೩೪ರಲ್ಲಿ ಹರಿಜನ ಸೇವ ಸಂಘ ಸ್ಥಾಪಿಸಿರುವುದರ ಪ್ರೇರಣಾರ್ಥವಾಗಿ ಹನುಮಂತರಾಯರು, ಕಾಕಾ ಕಾರಖಾನೀಸರು ಕರ್ನಾಟಕದಲ್ಲಿ ಹರಿಜನ ಕನ್ಯಾಮಂದಿರ ಸ್ಥಾಪಿಸಲು ಪ್ರಯತ್ನಿಸುತ್ತಾರೆ. ಗಾಂಧೀಜಿ ಒಮ್ಮತವಾಗಿ ಹರಿಜನರ ಏಳಿಗೆಗೆ ಶ್ರಮಿಸಿದರೆ, ಹನುಮಂತರಾಯರು ಮತ್ತು ಕಾರಖಾನೀಸರು ಹರಿಜನ ಸ್ತ್ರೀಯರ ಉನ್ನತಿಗಾಗಿ ದುಡಿಯಲು ಪ್ರಯತ್ನಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಹರಿದುಹೋಗುವ ಘಟಪ್ರಭಾ ನದಿಗೆ ಒಡ್ಡು ಹಾಕಿ ಅದರ ನೀರನ್ನು ರೈತರ ಭೂಮಿಯಲ್ಲಿ ಹರಿಬಿಡುತ್ತಿರುವುದು, ಆ ನೀರು ಹರಿದು ಹೋಗುವ ಸ್ಥಳವು ಸರ್ಕಾರಕ್ಕೆ ಸೇರಿದ್ದೆಂದು ಹೇಳಿ ಹಿಂಸಿಸುತ್ತಿರುವುದು, ಚೆನ್ನಾಗಿ ಬೆಳೆದಿರುವ ಬೆಳೆಯನ್ನು ಹಾಳು ಮಾಡುವುದು, ಕರದ ಮೇಲೆ ಕರ ಏರಿ ಬಡರೈತರನ್ನು ಹಿಂಸಿಸುವುದು, ರೈತರು ಅದರ ವಿರುದ್ಧ ತಕರಾರುಗಳನ್ನು ತೆಗೆದುಕೊಂಡು ಪೋಲೀಸ್ಟೇಷನ್‌ಗೆ ಹೋದರೆ ಜೈಲಿನಲ್ಲಿಯೂ ಸಹ ಚಿತ್ರಹಿಂಸೆ ಕೊಡುತ್ತಿರುವುದು ಮತ್ತು ಸಾಮಾನ್ಯ ನಿರಪರಾಧಿ ಜನಗಳ ಮೇಲೆ ಇಲ್ಲಸಲ್ಲದ ಅಪರಾಧಗಳನ್ನು ಹಾಕಿ ದಂಡಿಸುವುದು, ಮನೆಗೆ ನುಗ್ಗಿ ದರೋಡೆ ಮಾಡುವುದು, ರಸ್ತೆಯ ಮೇಲೆ ಓಡಾಡುವ ಜನರನ್ನು ಹಿಡಿದು ಬಡಿದು ಹಣವನ್ನು ಕಿತ್ತುಕೊಳ್ಳುವುದು.

ಹೀಗೆ ಮುಧೋಳ ರಾಜಾಸಾಹೇಬ ಮಾಲೋಜಿ ಘೋರ್ಪಡೆ ಸಂಸ್ಥಾನದವರು ಭೂಮಿಗಾಗಿ, ಹಣಕ್ಕಾಗಿ, ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಮಾಡಬಾರದ ಹಿಂಸಾಕೃತ್ಯಗಳನ್ನು ಮಾಡಿ ರೈತರು ಮತ್ತು ಕೂಲಿಕಾರ್ಮಿಕರ ಮೇಲೆ ದರ್ಪ, ದೌರ್ಜನ್ಯವನ್ನು ನಡೆಸುತ್ತಿದ್ದರು. ಪೋಲೀಸರ ಅಟ್ಟಹಾಸ ತುಂಬಾ ಹಿಂಸಾತ್ಮಕವಾಗಿರುವುದನ್ನು ಕಾಣಬಹುದಾಗಿದೆ.

ಅಂತಹ ಸಂಸ್ಥಾನ, ಸರ್ಕಾರದಿಂದ ಸಾಮಾನ್ಯ ಜನರಿಗೆ ಆಗುವಂತಹ ಘೋರ ಅನ್ಯಾಯ, ಅಕ್ರಮ, ಶೋಷಣೆ, ದುಷ್ಕೃತ್ಯಗಳ ವಿರುದ್ಧ ಪ್ರತಿಭಟಿಸಲು ಜನರನ್ನು ಸಂಘಟಿಸುವುದು ತಮಗಾಗುವ ಅನ್ಯಾಯವನ್ನು ಕುರಿತು ಜನರಿಗೆ ವಿವರಿಸುವುದು, ಸರ್ಕಾರದ ವಿರುದ್ಧ ಬಂಡಾಯ ಏಳುವುದು ತನ್ನ ಈ ಹೋರಾಟದ ಬದುಕಿಗೆ ಚಾಲಕ, ಪ್ರೇರಕ ಶಕ್ತಿಗಳಾಗಿ ತಿಲಕ್ ಮತ್ತು ಗಾಂಧೀಜಿಯವರು ಪ್ರತಿಬಿಂಬಿತವಾಗಿರುವುದನ್ನು ಗುರುತಿಸಬಹುದಾಗಿದೆ.

ಸಮಾಜದಲ್ಲಿ ತಲತಲಾಂತರದಿಂದಲೂ ತುಳಿತಕ್ಕೊಳಗಾದ, ಮೇಲ್ವರ್ಗದವರಿಂದ ವಿವಿಧ ರೀತಿಯಾಗಿ ಅತ್ಯಾಚಾರಕ್ಕೊಳಗಾದ ದಲಿತ ಸ್ತ್ರೀಯರ ರಕ್ಷಣೆ ಮತ್ತು ಅವರ ಜೀವನೋಪಾಯವನ್ನು ಸುಧಾರಿಸಲು ಹಾಗೂ ದಲಿತ ವರ್ಗವಷ್ಟೇ ಶೋಷಣೆಗೆ ಒಳಗಾಗಿ, ಸಮಾಜ ಕುಟುಂಬದಿಂದ ಬಹಿಷ್ಕರಿಸಲ್ಪಟ್ಟು, ಪ್ರಸ್ತುತವಾಗಿ ಜೀವಿಸಲು ಸರಿಯಾದ ನೆಲೆಯಿಲ್ಲದೆ ಸಂಕಷ್ಟ ಜೀವನವನ್ನು ಅನುಭವಿಸುತ್ತಿರುವ ದೇವದಾಸಿಯರಿಗೆ ರಕ್ಷಣೆ ಒದಗಿಸಲು ಕನ್ಯಾಮಂದಿರ ಮತ್ತು ಅಹಲ್ಯಾ ಮಂದಿರಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವುದನ್ನು ಚಿತ್ರಿಸಲಾಗಿದೆ. ಗಾಂಧೀಜಿಯವರ ದಲಿತೋದ್ಧಾರ, ಸ್ತ್ರೀಶಿಕ್ಷಣ, ಸಮಾನತೆ ಮುಂತಾದ ಸ್ತ್ರೀಪರ ಕಾಳಜಿಗಳಿಗೆ ಒತ್ತುಕೊಟ್ಟಿರುವುದನ್ನು ಗುರುತಿಸಬಹುದಾಗಿದೆ.

ಹನುಮಂತರಾಯರು ಕೋರ್ಟಿಗೆ ಗಾಂಧಿಟೋಪಿ ಮತ್ತು ಖಾದಿ ಬಟ್ಟೆಗಳನ್ನು ಧರಿಸಿಕೊಂಡು ಹೋಗಿರುವುದನ್ನು ಕಂಡು,

ಮ್ಯಾಜಿಸ್ಟ್ರೇಟ್ – ಅಲ್ರಿ ಮೊದಲೇ ಹೇಳಲಿಲ್ಲವೇ? ಒಬ್ಬ ಪ್ರಸಿದ್ಧ ವಕೀಲರಾಗಿದ್ದುಕೊಂಡು ಗಾಂಧಿಟೋಪಿ ಮತ್ತು ಖಾದಿ ಬಟ್ಟೆಗಳನ್ನು ಹಾಕಿಕೊಂಡು ಬರಬಾರದೆಂದು?

ಹನುಮಂತರಾಯ – ಮ್ಯಾಜಿಸ್ಟ್ರೇಟ್‌ರವರೆ, ಈ ಬಟ್ಟೆಯ ಮಹತ್ವ ನಿಮಗೆ ಅರ್ಥವಾಗದು.

ಮ್ಯಾಜಿಸ್ಟ್ರೇಟ್ – ಅಂಥದೇನ್ರಿ? ಅದರ ಮಹತ್ವ

ಹನುಮಂತರಾಯ – ಈ ಬಟ್ಟೆ ನಮ್ಮ ನಾಡಿನ ಬಡಜನರ ಬೆವರಿನಿಂದ ತಯಾರಾದದ್ದು." (ಗಾಂಧಿಟೋಪಿ, ಪುಟ–೧೯, ೨೦೦೦)

ಗಾಂಧೀಜಿಯವರ ಪ್ರಭಾವ ಹನುಮಂತರಾಯರ ಮೇಲೆ ಯಾವ ರೀತಿ ಇತ್ತು, ಅವರ ತತ್ವಗಳನ್ನು ಚಾಚೂತಪ್ಪದೆ ನಿಷ್ಠೆಯಿಂದ ಪಾಲಿಸುತ್ತಿರುವುದು ಖಾದಿ ಬಡಜನರ ಸ್ವಾವಲಂಬಿ ಬದುಕಿಗೆ ನೆರವಾದ ರೀತಿ ಮತ್ತು ಅದರ ಮಹತ್ವವನ್ನು ತಿಳಯಲಾಗಿದೆ.

ಹನುಮಂತರಾಯರು ತಮ್ಮ ರಚನಾತ್ಮಕ ಕಾರ್ಯಗಳ ಈಡೇರಿಕೆಗೆ ಹಳ್ಳಿಗಳನ್ನು ಆಯ್ಕೆಮಾಡಿಕೊಂಡಿದ್ದರು. ಹಳ್ಳಿಗಳಿಗೆ ಕಾಲುನಡಿಗೆ, ಇಲ್ಲವೆ ಕುದುರೆಯ ಮೇಲೆ ಪ್ರಯಾಣಿಸಿ ಕೆಲಸವಿಲ್ಲದೆ ಕಾಲಹರಣ ಮಾಡುತ್ತಿದ್ದ ಹೆಣ್ಣುಮಕ್ಕಳಿಗೆ ಹತ್ತಿಯನ್ನು ಕೊಟ್ಟು ನೂಲು ತೆಗೆಯುವ ಕೆಲಸಕ್ಕೆ ಹಚ್ಚಿದ್ದು, ಪ್ರತಿ ಗುಡಿಸಲುಗಳಿಗೂ ಹತ್ತಿ ಹಂಚುವುದು, ಬಡತನದಲ್ಲಿರುವ ಸ್ತ್ರೀಯರಿಗೆ ಸೀರೆಗಳನ್ನು ಕೊಡುತ್ತಿರುವುದು, ಭಾರತೀಯ ಸ್ತ್ರೀ ನಿರುದ್ಯೋಗಿಯಾಗಿರುವುದನ್ನು ತಪ್ಪಿಸಲು, ಸ್ವಾವಲಂಬನೆ ಜೀವನ ನಡೆಸಲು ನೆರವಾಗುತ್ತಿರುವುದು ಗಾಂಧೀಜಿಯವರ ರಚನಾತ್ಮಕ ಕಾರ್ಯಗಳನ್ನು ಪ್ರಯೋಗಾತ್ಮಕವಾಗಿ ಅನುಷ್ಠಾನಕ್ಕೆ ತರುತ್ತಿರುವುದನ್ನು ಕಾಣಬಹುದಾಗಿದೆ.

ಹನುಮಂತರಾಯರು ಗುಡ್ಡಗಾಡುಗಳಲ್ಲಿ ಬದುಕು ಸಾಗಿಸುವ ಲಂಬಾಣಿ ಜನಾಂಗದವರನ್ನು ಒಂದೆಡೆ ಸಂಘಟಿಸುವುದು. ಆ ಜನಾಂಗದ ಬಡ ಮಕ್ಕಳಿಗಾಗಿ ವಸತಿ ನಿಲಯಗಳನ್ನು ಸ್ಥಾಪಿಸುವುದು, ಆಯಾ ತಾಂಡಾಗಳಲ್ಲಿ ಶಾಲೆಗಳನ್ನು ತೆರೆಯುವಂತೆ ಸರ್ಕಾರಕ್ಕೆ ಒತ್ತಾಯಿಸುವುದು, ಮೊದಲಾದ ಕಾರ್ಯಗಳನ್ನು ಕೈಗೊಳ್ಳುತ್ತಾರೆ.

ಹೀಗೆ ಅಕ್ಷರಜ್ಞಾನ ಅರಿಯದ, ಸಮಾಜದ ವಾಸನೆ ತಿಳಿಯದ ಕಾಡುಮೇಡು, ಬೆಟ್ಟ ಗುಡ್ಡಗಳಲ್ಲಿ ವಾಸಮಾಡುವ ಬುಡಕಟ್ಟು ಜನಾಂಗದವರನ್ನು ಆಧುನಿಕ ಪ್ರಪಂಚಕ್ಕೆ ಪರಿಚಯಿಸುವ ಹಾಗೂ ಅವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿ ಪ್ರಬಲರನ್ನಾಗಿ ಮಾಡುವ ಆಶಯವನ್ನು ಗುರುತಿಸಬಹುದು.

ಒಟ್ಟಾರೆಯಾಗಿ ಈ ನಾಟಕ ಗಾಂಧೀಜಿ ಮತ್ತು ಅವರ ಸಿದ್ಧಾಂತಗಳನ್ನು ಕುರಿತಂತೆ ರಚನೆಯಾಗಿದೆ. ಈ ನಾಟಕದಲ್ಲಿ ಹನುಮಂತರಾಯರು ಕ್ರಾಂತಿಕಾರಿ, ಪ್ರತಿಭಾವಂತ, ನಾಡು–ನುಡಿಗಾಗಿ ಮತ್ತು

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುವ ಮುತ್ಸದ್ದಿಯಾಗಿ ಗಾಂಧೀಜಿಯವರ ಖಾದಿ ಗ್ರಾಮೋದ್ಯೋಗದಂತಹ ರಚನಾತ್ಮಕ ಕಾರ್ಯಗಳನ್ನು ಯಥಾವತ್ತಾಗಿ ಅನುಷ್ಠಾನಕ್ಕೆ ತಂದು ಅವರ ಪ್ರತಿರೂಪದಂತೆ ಚಿತ್ರಿತಗೊಂಡಿದ್ದಾರೆ.

ಆಕುಲ ಸುಬ್ರಹ್ಮಣ್ಯಂ ಅವರು ೧೯೫೪ರಲ್ಲಿ ಅಲ್ಲೂರಿ ಸೀತಾರಾಮರಾಜು ಎಂಬ ನಾಟಕವನ್ನು ರಚಿಸಿದ್ದಾರೆ. ಭಾರತದಲ್ಲಿ ಬ್ರಿಟಿಷರ ದುರಂತ ಆಡಳಿತವನ್ನು ಕೊನೆಗೊಳಿಸುವುದಕ್ಕಾಗಿ ಅನೇಕ ಹೋರಾಟಗಳು ನಡೆದಿವೆ. ಅಂತಹ ಹೋರಾಟಗಳಲ್ಲಿ ಸೀತಾರಾಮರಾಜು ನಡೆಸಿದ ಮನ್ಯಂ ಪ್ರಾಂತ್ಯದ ಹೋರಾಟವೂ ಒಂದು. ಬ್ರಿಟಿಷರು ಮನ್ಯಂ ಪ್ರಾಂತದ ಗಿರಿಜನರ ಮೇಲೆ ದಾಳಿ ನೆಡಸುತ್ತಾರೆ ಮತ್ತು ಮೀಸಲಿಟ್ಟ ಅರಣ್ಯ ಕಾಯಿದೆ ಕಾನೂನು ಜಾರಿಗೆ ತಂದು ಗಿರಿಜನರನ್ನು ಗುಲಾಮರನ್ನಾಗಿ ಮಾಡಿಕೊಂಡು ಬಿಟ್ಟಿ ಕೆಲಸ ಮಾಡಿಸುತ್ತಾರೆ. ಅವರು ಸಂಪಾದಿಸಿದ ಸಂಪತ್ತನ್ನೆಲ್ಲಾ ದೋಚಿಕೊಂಡು ಗಿರಿಜನ ಸ್ತ್ರೀಯರ ಮೇಲೆ ಅತ್ಯಾಚಾರ ನಡೆಸುತ್ತಾರೆ. ಅಂತಹ ಸಂದರ್ಭದಲ್ಲಿ ಸೀತಾರಾಮ ರಾಜರ ಹೋರಾಟ ಪ್ರಾರಂಭವಾಗುತ್ತದೆ. ಗಿರಿಜನರಲ್ಲಿನ ಅಜ್ಞಾನ, ಅಂಧಕಾರವನ್ನು ತೊಲಗಿಸಿ ಮಧ್ಯಪಾನದಂತಹ ದುಶ್ಚಟಗಳಿಂದ ಮುಕ್ತಿ ಹೊಂದುವಂತೆ ಮಾಡುತ್ತಾನೆ. ಗಿರಿಜನರ ಶಕ್ತಿಯನ್ನು ಸಂಘಟಿಸಿ ಬ್ರಿಟಿಷ್ ದೌರ್ಜನ್ಯಗಳಿಗೆ ವ್ಯತಿರೇಕವಾಗಿ ಹೋರಾಟ ನಡೆಸುತ್ತಾರೆ. ಆ ಹೋರಾಟದಲ್ಲಿ ಸೀತಾರಾಮರಾಜು ಸಾವನ್ನಪ್ಪುವುದರ ಮೂಲಕ ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಅಡಿಪಾಯ ಹಾಕಲಾಗುತ್ತದೆ.

ಈ ನಾಟಕದಲ್ಲಿ ಒಂದೇ ರೀತಿಯ ಹೋರಾಟದ ಎರಡು ಬಣಗಳನ್ನು ಗುರುತಿಸಲಾಗಿದೆ. ಸೀತಾರಾಮರಾಜು ಕ್ರಾಂತಿಕಾರಿ ಮತ್ತು ಆತನ ತಾಯಿ ನಾರಾಯಣಮ್ಮ ತೀವ್ರಗಾಮಿ ಸಿದ್ಧಾಂತಗಳನ್ನು ಅಳವಡಿಸಿಕೊಂಡಿರುತ್ತಾರೆ. ಇವರಿಬ್ಬರು ಹಿಂಸೆಯಿಂದಲೇ ಬ್ರಿಟಿಷರನ್ನು ಭಾರತದಿಂದ ಹೊರಹಾಕಬೇಕು ಎಂಬ ಮಹಾನ್ ಉದ್ದೇಶವನ್ನು ಹೊಂದಿರುತ್ತಾರೆ. ನಾರಾಯಣಮ್ಮ ಸೀತಾರಾಮರಾಜುಗೆ ಮಾರ್ಗದರ್ಶಕಳಾಗಿ, ತಾಯಿಯಾಗಿ, ಮಹಾನ್ ಸೇನಾನಾಯಕಿಯಾಗಿ ಚಿತ್ರಿತಗೊಂಡಿದ್ದಾಳೆ. ರತ್ತಿ ಎಂಬ ಸ್ತ್ರೀ ತನ್ನ ನಾಡಿಗಾಗಿ ಹೋರಾಡಿ ಜೀವ ತೆತ್ತು ಇತರರಿಗೆ ಮಾದರಿಯಾಗುವಂತೆ ಬಿಂಬಿತವಾಗಿದ್ದಾಳೆ. ಈ ನಾಟಕದಲ್ಲಿ ಸೀತಾರಾಮರಾಜು ಪರಶುರಾಮ ಮತ್ತು ಶಿವಾಜಿಯ ಹೋರಾಟದ ಮಾದರಿಯನ್ನು ಅನುಸರಿಸಬೇಕೆಂದು ಯೋಚಿಸುತ್ತಾನೆ. ದೇಶಕ್ಕೆ ಸಮರ್ಥ ನಾಯಕತ್ವದ ಕೊರತೆಯನ್ನು ಈ ನಾಟಕದಲ್ಲಿ ಕಾಣಬಹುದು. ಹೋರಾಟದ ಇನ್ನೊಂದು ಬಣ ರಾಮಚಂದ್ರರಾವ್ ಅವರದು. ಸಂಧಿ, ಸಂಬಂಧ, ರಾಜಿ ಎಂದು ಮಂದಗಾಮಿ ನಾಯಕರ ತತ್ವಗಳನ್ನು ಮೈಗೂಡಿಸಿಕೊಂಡಿದ್ದು, ಅಹಿಂಸೆಯಿಂದ ಸ್ವಾತಂತ್ರ್ಯ ದಕ್ಕುವುದಿಲ್ಲವೆಂಬುದನ್ನು ಮನಗಂಡು ತೀವ್ರಗಾಮಿ ವಿಚಾರಗಳೆಡೆಗೆ ತನ್ನ ಗಮನವನ್ನು ಕೊಟ್ಟು ಹೋರಾಟಕ್ಕೆ ಕರೆ ನೀಡುತ್ತಾರೆ.

ರೂಥರ್ ಎಂಬ ಬ್ರಿಟಿಷ್ ಅಧಿಕಾರಿ ಗಿರಿಜನರ ಪುರುಷರನ್ನು ನಡುಬೀದಿಯಲ್ಲಿ ಅರೆಬೆತ್ತಲೆಯಾಗಿ ಮೆರವಣಿಗೆ ಮಾಡುತ್ತಾನೆ. ಗರ್ಭಿಣಿ ಸ್ತ್ರೀಯರ ಹೊಟ್ಟೆಗೆ ಕತ್ತಿಗಳಿಂದ ತಿವಿದು ಪ್ರಪಂಚಕಾಣದ

ಶಿಶುಗಳನ್ನು ಅಮಾನುಷವಾಗಿ ಹತ್ಯೆಗೈಯುತ್ತಾನೆ. ರೂಥರನು ಗಿರಿಜನರ ಮೇಲೆ ಘೋರ ಹಿಂಸೆ ಕೈಗೊಂಡಾಗಲೂ ರಾಮಚಂದ್ರರಾವ್ ಶಾಂತಿ, ಒಪ್ಪಂದ ಎಂದು ತಾಳ್ಮೆಯನ್ನು ತೋರುತ್ತಾನೆ. ಸೀತಾರಾಮ ರಾಮರಾಜು ಮತ್ತು ರಾಮಚಂದ್ರರಾವ್ ನಡುವಿನ ಸಂಭಾಷಣೆ ಹೀಗಿದೆ.

ಕನ್ನಡ ಭಾಷಾಂತರ

ಸೀತಾ – ವೀರನ ಕರ್ತವ್ಯ ಹೋರಾಟವನ್ನು ನಿಲ್ಲಿಸಬಾರದು, ನಿಲ್ಲಿಸಕೂಡದು. ರಕ್ತದ ಕಾಲುವೆ ಹರಿಯಲಿ. ರಣರಂಗದಲ್ಲಿ ವೀರಾಧಿವೀರರು ನೆಲಕ್ಕುರುಳಲಿ. ದೇಶ ದೇಶಗಳೆಲ್ಲ ಒಂದಾಗಿ ಎದುರು ತಿರುಗಲಿ. ಭಾರತ ಮಾತೆಗೆ ದಾಸ್ಯವಿಮುಕ್ತಿ ಆಗುವವರೆಗೂ ಈ ಯುದ್ಧ ನಿಲ್ಲದು. ನಿಜವಾದ ಭಾರತೀಯನ ವಿಧಿ ಹೆಜ್ಜೆ ಹೆಜ್ಜೆಗೂ ರಕ್ತವನ್ನು ಚೆಲ್ಲುತ್ತಾ, ಅರ್ಪಣೆ ಮಾಡುತ್ತಾ ಈ ಭೀಕರ ಸಮರವನ್ನು ಕೊನೆಯಾಗಿಸುವುದೇ ಈ ಧರ್ಮಯುದ್ಧ ಮಧ್ಯದಲ್ಲಿ ನಿಲ್ಲಲು ಸಾಧ್ಯವಿಲ್ಲ. ಇದು ಅನಂತ ಹೋರಾಟ.

ರಾಮ – ಈ ಅನಂತ ಹೋರಾಟವನ್ನು...

ಸೀತಾ – ನಿಲ್ಲಿಸಲು ಸಾಧ್ಯವಿಲ್ಲ. ಬಂಧೀಖಾನೆಗಳಲ್ಲಿಯೇ ಉಳಿದುಹೋದ ದೇಶಭಕ್ತರಿಗೆ ವಿಮುಕ್ತಿ ಇಲ್ಲವೆ! ಶಾಂತಿಯುತ ಸಮಾವೇಶಗಳಲ್ಲಿಯೂ ತಲೆಗಳು ಹೊಡೆದುಹೋಗುತ್ತಿದ್ದರೆ ನಿಮ್ಮ ಅಹಿಂಸಾವಾದಿಗಳಿಗೆ ರಕ್ಷಣೆ ಇಲ್ಲವೆ?

ರಾಮ – ರಕ್ಷಣೆ ಬೇಕು! ಪರ ಪ್ರಭುತ್ವ ಹೋಗಬೇಕು! ಸ್ವಾತಂತ್ರ್ಯ ಬರಬೇಕು.

ಸೀತಾ – ಅದಕ್ಕೆ ಈ ಯುದ್ಧ ನಡೆಯಬೇಕು. ಈ ಅನಂತ ಹೋರಾಟ ಮಧ್ಯೆದಲ್ಲಿ ನಿಲ್ಲದೆ ನಿರಂತರವಾಗಿ ಕೊನೆಸಾಗಲಿ! ಸ್ವಾತಂತ್ರ್ಯ ವೀರರ ಬಲಿದಾನದ ಮಂಗಳಗೀತ ಕೇಳಿಸಬೇಕು! ಆ ಮಂಗಳಗೀತೆಯನ್ನು ಕೇಳಿಸುವವರೆಗೂ ಈ ಬಂಡಾಯಗಳು ಕಿಡಿಯಾಡುತ್ತಿರಲಿ. ಭಾರತ ಪುತ್ರ ಪ್ರಾರಂಭಿಸಿದ ಯಾವ ಕೆಲಸವು ಮಧ್ಯದಲ್ಲಿ ನಿಲ್ಲದು. ಯಾವ ಕಾರ್ಯವನ್ನು ಮಾಡಿದರೂ ಮೊದಲು ಭಾರತ ಮಾತೆಯ ಪುತ್ರನೆ ಮಾಡಬೇಕು. ಭಾರತಪುತ್ರ ಪ್ರಾರಂಭಿಸಿದ ಯುದ್ಧವನ್ನು, ಕಾರ್ಯವನ್ನು ಸಾಧಿಸುವವರೆಗೂ ಮಧ್ಯದಲ್ಲಿ ನಿಲ್ಲುವುದಿಲ್ಲ.

ರಾಮ – ಯುದ್ಧವನ್ನು ನಿಲ್ಲಿಸುವುದಿಲ್ಲವೆ? ಸೀತಾರಾಮರಾಜು! ಯುದ್ಧವನ್ನು....

ಸೀತಾ– ಮಧ್ಯದಲ್ಲಿ ನಿಲ್ಲಿಸಲು ಸಾಧ್ಯವಿಲ್ಲ. ಈ ಜ್ವಾಲಾಜಲಿತ ಭಯಂಕರವಾದ ಸಮರದಲ್ಲಿ ಬಿಳಿಯರು ಆಹುತಿಯಾಗುವವರೆಗೂ ಈ ಯುದ್ಧ ನಿಲ್ಲುವುದಕ್ಕೆ ಅವಕಾಶವಿಲ್ಲ. ಅದು ನೀತಿಗೆ ವಿರುದ್ಧ. ದೇಶಕ್ಕೆ ಅವಮಾನ. ಭಾರತಮಾತೆಯ ಬಾಯಿಗೆ ಬಿಳಿಯಬಟ್ಟೆ ಕಟ್ಟಿ ಕುತ್ತಿಗೆ ಕೊಯ್ಯುವಂತೆ ಅಮಾಯಕ ಮಾನವ ರಕ್ತವನ್ನು ಕುಡಿದು ಹೊಟ್ಟೆ ತುಂಬಿಸಿಕೊಳ್ಳುವ ಈ ಮುಷ್ಕರ ಜಾತಿ ಸಮೂಲಾಗ್ರವಾಗಿ ಸರ್ವನಾಶವಾಗದೆ ಈ ವೀರನು ಹಿಡಿದ ಕತ್ತಿಯನ್ನು ಇಳಿಸುವುದಿಲ್ಲ. ಅಲ್ಲಿಯವರೆಗೂ ಈ ಖಡ್ಗಕ್ಕೆ ವಿಶ್ರಾಂತಿ ಇಲ್ಲ. (ಮೂಲ; ಅನುಬಂಧ–೩ ಅಧ್ಯಾಯ–೩ ಕ್ರ.ಸಂ. ೧೮)

ಹೀಗೆ ಸೀತಾರಾಮರಾಜು ಭಾರತ ಮಾತೆಯ ದಾಸ್ಯವಿಮುಕ್ತಿಗೋಸ್ಕರ ರಕ್ತದೋಕುಳಿಯಾಗಲಿ, ದೇಶ-ದೇಶಗಳೆಲ್ಲಾ ಒಂದಾಗಿ ಎದುರು ತಿರುಗಲಿ, ನಿಜವಾದ ಬಾರತೀಯನ ಕರ್ತವ್ಯ ಹೆಜ್ಜೆ ಹೆಜ್ಜೆಗೂ ರಕ್ತಾರ್ಚನೆ ಮಾಡುವುದಾಗಿದೆ. ಜೈಲುಗಳಲ್ಲಿ ಬಂಧಿತರಾಗಿರುವ ಅಹಿಂಸಾವಾದಿಗಳಿಗೆ ರಕ್ಷಣೆ ಇಲ್ಲವೆ, ಈ ಜ್ವಾಲಾಜ್ವಲಿತ ಭಯಂಕರ ಸಮರಾಗ್ನಿಯಲ್ಲಿ ಬ್ರಿಟಿಷರ ಆಹುತಿ ಆಗುವವರೆಗೂ ಈ ಯುದ್ಧ ನಿಲ್ಲುವುದಿಲ್ಲ. ಅಮಾಯಕರ ರಕ್ತವನ್ನು ಹೀರಿದ ಈ ಮುಷ್ಕರ ಜಾತಿ ಸಮೂಲಾಗ್ರವಾಗಿ ಸರ್ವನಾಶವಾಗುವವರೆಗೂ ಈ ಭಾರತ ವೀರನು ಹಿಡಿದ ಕತ್ತಿಯನ್ನು ಇಳಿಸುವುದಿಲ್ಲ ಎಂದು ರೋಷಾವೇಷದ ಕಿಡಿಗಳನ್ನು ಕಾರುತ್ತಾನೆ.

ರಾಮಚಂದ್ರರಾವ್ ಅಹಿಂಸಾವಾದಿ ಗಾಂಧೀಜಿಯವರ ಪರಿಪಾಲಕನಾಗಿದ್ದು, ಸೀತಾರಾಮ ರಾಜನನ್ನು ಉದ್ದೇಶಿಸಿ ನೀವು ಕತ್ತಿಯನ್ನು ಇಳಿಸದಿದ್ದರೆ ಬ್ರಿಟಿಷರ ದೌರ್ಜನ್ಯಕ್ಕೆ ಮನ್ಯಂ ಪ್ರಾಂತದ ಪ್ರಜೆಗಳು ಮಣ್ಣಿನಲ್ಲಿ ಬೆರೆತುಹೋಗುತ್ತಾರೆ. ಮತ್ತು ಗ್ರಾಮಗಳೆಲ್ಲ ನಾಶವಾಗಿ ಹೋಗುತ್ತವೆ. ಆಲೋಚಿಸು ಎಂದೂ ಹೀಗೆ ಹೇಳುತ್ತಾನೆ.

ಕನ್ನಡ ಭಾಷಾಂತರ

ಸೀತಾರಾಮರಾಜು – ರೋಷದಿಂದ ಆಲೋಚಿಸಿ, ಆಲೋಚಿಸಿ ಅರ್ಥವಿಲ್ಲದೆ ಹೋಗಿದೆ. ಅನಾಥವಾಗಿ ಪರಾನ್ನಭಕ್ಷರಿಗೆ ಪರಮ ದುರ್ಮಾರ್ಗರಿಗೆ ಪಾಪ ಎಂದರೆ ಏನೂ ತಿಳಿಯದ ಪಾಪಾತ್ಮರಿಗೆ ಶರಣಾಗು ಎಂದು ತಾನೆ ನೀನು ಹೇಳುತ್ತಿರುವುದು. (ಮೂಲ; ಅನುಬಂಧ-೩ ಅಧ್ಯಾಯ-೩ ಕ್ರ.ಸಂ. ೧೯)

ಇಲ್ಲಿಯವರೆಗೂ ನಾವು ತಾಳ್ಮೆಯಿಂದ ಇದ್ದು, ಬ್ರಿಟಿಷರು ನಮ್ಮ ಮೇಲೆ ಸವಾರಿ ಮಾಡುವಂತೆ ಮಾಡಿಕೊಂಡಿದ್ದೇವೆ. ಇಷ್ಟೆಲ್ಲಾ ಅನ್ಯಾಯ ನಡೆದರೂ ನಾವು ಸುಮ್ಮನಿದ್ದರೆ ನಿಜವಾಗಿಯೂ ದೇಶಮಾತೆಗೆ ದೇಶದ್ರೋಹಿಗಳಾಗಿರುವುದು ಸಾಮಾನ್ಯವಾದ ಸಂಗತಿಯಾಗಿದೆ. ಹಣದ ಆಸೆಗೆ ಬಲಿಯಾಗಿ ದೇಶ, ಸೈನ್ಯದ ವಿಚಾರಗಳನ್ನು ಎದುರಾಳಿಗಳಿಗೆ ಗುಟ್ಟಾಗಿ ತಿಳಿಸುತ್ತಾರೆ. ಅದೇ ರೀತಿಯಾಗಿ ರತ್ತಿ ಎಂಬ ಭಾರತೀಯ ಸ್ತ್ರೀ ಬ್ರಿಟಿಷರ ಗುಡಾರಗಳಲ್ಲಿ ಬಿಟ್ಟಿ ಕೆಲಸ ಮಾಡಿಕೊಂಡಿದ್ದು ಕೆಂಡದಂತೆ ಬದುಕುತ್ತಿದ್ದು ಅನೇಕ ರಹಸ್ಯ ಸಂಗತಿಗಳನ್ನು ತಿಳಿದುಕೊಂಡು ನಮಗೆ ತಿಳಿಸಿ ಅನೇಕ ಸಾವಿರಾರು ಜನರ ಪ್ರಾಣಗಳನ್ನು ರಕ್ಷಿಸಿದ ಮಹಾನ್ ಮೇಧಾವಿ ರತ್ತಿ. ಹೀಗೆ ದೇಶಕ್ಕಾಗಿ ಸೇವೆ ಮಾಡಿದ ತಪ್ಪಿಗಾಗಿ ಬ್ರಿಟಿಷ್ ಘಾತಕರು ರತ್ತಿಯನ್ನು ಗುಂಡಿಟ್ಟು ಕೊಲ್ಲುತ್ತಾರೆ. ದೇಶಕ್ಕಾಗಿ ಹೋರಾಡಿ ಮೆರೆದ ಮನ್ಯಂ ಪ್ರಾಂತ್ಯದ ಮೊದಲ ಮಹಿಳೆಯಾಗಿ ಚಿತ್ರಿತಗೊಳ್ಳುತ್ತಾಳೆ.

ಮನ್ಯಂ ಪ್ರಾಂತ್ಯದ ಗಿರಿಜನ ವೀರ ಸಿಂಗನ್ನ ಸೀತಾರಾಮರಾಜುವಿನ ತಾಯಿ ನಾರಾಯಣಮ್ಮನನ್ನು ರಕ್ಷಿಸುವ ಸಂದರ್ಭದಲ್ಲಿ ಬ್ರಿಟಿಷರ ಗುಂಡೇಟಿಗೆ ಬಲಿಯಾಗಿ ಸತ್ತು ಹೋಗುತ್ತಾನೆ. ಆಗ ರಾಮಚಂದ್ರರಾವ್ ಬ್ರಿಟಿಷರೊಂದಿಗೆ ರಾಜಿ ಮಾಡಿಕೊಳ್ಳಲು ಸೀತಾರಾಮರಾಜನನ್ನು ಮನವೊಲಿಸಲು ಮುಂದಾದಾಗ ಸೀತಾರಾಮರಾಜು ಭಾರತಮಾತೆಯನ್ನು ಕುರಿತು ಹೀಗೆ ಹೇಳುತ್ತಾನೆ.

ಕನ್ನಡ ಭಾಷಾಂತರ

ಓ ಭಾರತಮಾತಾ! ನಿನ್ನ ಭವಿಷ್ಯ ಮಸಕು ಮಸುಕಾಗಿ ಕಾಣಿಸುತ್ತಿದೆ ತಾಯಿ! ಒಂದು ಬಣ ಅಹಿಂಸತ್ವದಿಂದ ಸ್ವಾತಂತ್ರ್ಯವನ್ನು ಸಂಪಾದಿಸಬೇಕು ಎನ್ನುತ್ತಿದೆ. ಅದು ಎಷ್ಟರಮಟ್ಟಿಗೆ ಸಾಧ್ಯವೋ ನನಗೆ ಅರ್ಥವಾಗುತ್ತಿಲ್ಲ. ನಾನು ನಡೆಯುತ್ತಿರುವ ದಾರಿ ಸರಿಯಲ್ಲ ಅದು ಹಿಂಸೆ ಎಂದು ಕೆಲವರು ಹೇಳುತ್ತಾರೆ. ಅಮ್ಮಾ ಭಾರತ ಮಾತೆ! ಈ ಅಹಿಂಸಾ ನೀತಿಯಿಂದ ನಿನ್ನ ಕಾಲು ಮುರಿದುಹೋಗುತ್ತದೆಯೋ ನಿನ್ನ ಶಿರವೇ ಕತ್ತರಿಸಿಕೊಂಡು ಹೋಗುತ್ತದೋ ತಿಳಿಯುತ್ತಿಲ್ಲ ನಮಗೆ ಬೇಕಾದದ್ದು ಸಂಪೂರ್ಣ ಸ್ವರಾಜ್ಯ ಅದಕ್ಕೋಸ್ಕರ ಬ್ರಹ್ಮಾಂಡವಾದ ಹೋರಾಟ. (ಮೂಲ; ಅನುಬಂಧ–೩ ಅಧ್ಯಾಯ–೩ ಕ್ರ.ಸಂ. ೨೦)

ಹೀಗೆ ಸೀತಾರಾಮರಾಜು ಅವರ ಮಾತುಗಳಲ್ಲಿ ಅಹಿಂಸೆಯಿಂದ ಗುಲಾಮತ್ವ, ಬಂಧನ ಮುಕ್ತಿ, ಸ್ವಾತಂತ್ರ್ಯ ಲಭಿಸುವುದಿಲ್ಲ. ಹಿಂಸೆಯಿಂದ ಮಾತ್ರ ಪೂರ್ಣ ಸ್ವರಾಜ್ಯ ಎಂಬ ತಿಲಕ್, ಸುಭಾಸ್ ಚಂದ್ರಬೋಸ್ ಅವರ ಸಿದ್ಧಾಂತಗಳಿಗೆ ಪುಷ್ಠಿ ನೀಡುತ್ತಿರುವುದು ಅಹಿಂಸತ್ವ ಕುರಿತ ತಿರಸ್ಕಾರ ಮನೋಭಾವವನ್ನು ಗುರುತಿಸಬಹುದಾಗಿದೆ.

ಸೀತಾರಾಮರಾಜು ಬ್ರಿಟಿಷ್ ಅಧಿಕಾರಿ ರೂಥರ್‌ನೊಂದಿಗೆ ಸಂಧಿ, ಒಪ್ಪಂದಕ್ಕೆ (ಹೋಗುವಾಗ) ಹೋಗುವುದಕ್ಕಿಂತ ಮುಂಚೆ ತನ್ನ ತಾಯಿಯೊಂದಿಗಿನ ಸಂಭಾಷಣೆ ಹೀಗಿದೆ.

ಕನ್ನಡ ಭಾಷಾಂತರ

ನಾರಾಯಣಮ್ಮ – ಯಾವ ಅಖಂಡ ಭಾರತ ಸ್ವಾತಂತ್ರ್ಯಕ್ಕಾಗಿ ಇಲ್ಲಿಯವರೆಗೂ ಲಕ್ಷಾಧಿ ವೀರರು ತಮ್ಮ ರಕ್ತವನ್ನು ಅರ್ಪಿಸಿದ್ದಾರೋ ಅವರ ಕೋರಿಕೆಗಳನ್ನು ಈಡೇರಿಸದೆ ಭವಿಷ್ಯದಲ್ಲಿ ಬೇರೆ ಒಪ್ಪಂದಕ್ಕಾದರೂ ಸರಿ. ಯಾವ ಭಾರತೀಯನಾದರೂ ಒಪ್ಪಿಕೊಂಡರೆ ಅದು ದೇಶದ್ರೋಹವಾಗುತ್ತಿದೆ.

ಸೀತಾರಾಮರಾಜು – ದೇಶದ ಸ್ವಾತಂತ್ರ್ಯಕ್ಕಾಗಿ ಯಾವ ಭಾರತೀಯನೂ ಹಿಂದೆ ಸರಿಯುವುದಿಲ್ಲ.

ನಾರಾಯಣಮ್ಮ – ಹೌದು ರಾಮರಾಜು ಹಿಂದೆ ಸರಿಯುವುದಿಲ್ಲ. ಸ್ವಂತ ಮಗ ಆ ಕೆಲಸವನ್ನು ಎಂದೂ ಮಾಡುವುದಿಲ್ಲ. ವೀರನ ಹಾಗೆ ಪ್ರವರ್ತಿಸು. ಬಿಳಿಯ ಜಾತಿಯವರನ್ನು ಬಹಳ ಜಾಗರೂಕತೆಯಿಂದ ಸಾವಿರ ಕಣ್ಣುಗಳಿಂದ ವೀಕ್ಷಿಸು ರಾಜಿ ಮಾಡಿಕೊಳ್ಳಲು ಬಂದಾಗ ಎಚ್ಚರಿಕೆಯಿಂದ ಪ್ರವರ್ತಿಸು ರಾಮರಾಜ. ಆ ದಿನ ಶಿವಾಜಿಯೊಂದಿಗೆ ಮಾತನಾಡಲು ಬಂದ ಅಫಜಲ್‌ಖಾನ್ ಶಿವಾಜಿಯನ್ನು ಅತ್ಯಂತ ಪ್ರೇಮದಿಂದ ಆಲಿಂಗನ ಮಾಡಿಕೊಂಡಾಗ ಸೊಂಟದಲ್ಲಿಟ್ಟುಕೊಂಡಿದ್ದ ಬಾಕುವಿನಿಂದ ಕೊಲ್ಲಲು ಪ್ರಯತ್ನಿಸುತ್ತಾನೆ. ದೇಶದಿಂದ ದೇಶಕ್ಕೆ ಬಂದವರು ಮಾಡುವ ವಿಧಾನವೇ ಅದು. ಅದಕ್ಕೆ ಜಾಗ್ರತೆಯಿಂದಿರಬೇಕು.

ಸೀತಾರಾಮರಾಜು– ಹಾಗೇ ಆಗಲಿ ತಾಯಿ.

ನಾರಾಯಣಮ್ಮ– ರಾಮರಾಜ! ರಾಜಿಗಾಗಿ ಬರುವ ಬ್ರಿಟೀಷರೊಂದಿಗೆ ತಲೆತಗ್ಗಿಸಿ ಮಾತನಾಡಬೇಡ. ಸರಿಯಾಗಿ ಆಲೋಚಿಸಿ ಮಾತನಾಡು ನಮ್ಮ ಸಂಪ್ರದಾಯಕ್ಕೆ ವ್ಯತಿರೇಕವಾದ ಯಾವ ಒಪ್ಪಂದವಾದರೂ ನೀನು ಅಂಗೀಕಾರ ತೋರಿಸಬೇಡ.

ಸೀತಾರಾಮರಾಜು– ನೀನು ಹೆತ್ತ ಮಗ ಸಂಪ್ರದಾಯಕ್ಕೆ, ಚರಿತ್ರೆಗೆ ವ್ಯತಿರೇಕವಾದ ಯಾವ ಕೆಲಸವನ್ನು ಮಾಡುವುದಿಲ್ಲ!

ನಾರಾಯಣಮ್ಮ– ರಾಜಿ ಆಗದಿದ್ದರೆ ಮನ್ಯಂ ಪ್ರಾಂತ್ಯದಲ್ಲಿರುವ ಮಕ್ಕಳೆಲ್ಲ ಕೂಡ ಮಹಾವೀರ, ವನಿತೆಯರಾಗಿ ಹೆಜ್ಜೆ ಹೆಜ್ಜೆಗೂ ಈ ಮಹಾಯಜ್ಞದಲ್ಲಿ ರಕ್ತವನ್ನು ಚೆಲ್ಲುತ್ತಾರೆ.

ಸೀತಾರಾಮರಾಜು– ಬ್ರಿಟೀಷರೊಂದಿಗೆ ರಾಜಿ ಆಗದಿದ್ದರೆ ಅವರು ದಾಸೋಹಕ್ಕೆ ಒಪ್ಪದಿದ್ದರೆ, ನಾವು ಆಶೀರ್ವದಿಸುವ ಬಲದಿಂದ ಪ್ರಚಂಡ ಭೀಕರ ಸಮರವನ್ನು ಸ್ವರಾಜ್ಯ ಬರುವವರೆಗೂ ನಡೆಸುತ್ತೇನೆ. ಆ ಬ್ರಹ್ಮಾಂಡವಾದ ಯುದ್ಧದಲ್ಲಿ ಪ್ರತೀ ಭಾರತೀಯನೂ ಒಬ್ಬೊಬ್ಬ ಮಹಾಯೋಧನಾಗಬೇಕು! ಪ್ರತೀ ಭಾರತೀಯ ಯುವಕನು ಒಬ್ಬೊಬ್ಬ ಅಭಿಮನ್ಯುವಾಗಬೇಕು! ಪ್ರತಿ ಭಾರತೀಯ ಸ್ತ್ರೀ ಸಹ ಮಹಾರಾಣಿ ಝಾನ್ಸಿ, ವೀರವನಿತ ಮಾಂಚಾಲ ಆಗಬೇಕು.

ನಾರಾಯಣಮ್ಮ– ಪ್ರತಿ ಭಾರತ ಸ್ತ್ರೀ ಸಹ ಬೆಂಕಿಯನ್ನು ಉಗುಳುವ ಒಬ್ಬೊಬ್ಬ ಕಾಳಿಕಾ ಮಾತೆಯಾಗಬೇಕು! ಕಾಳಿಕಾಮಾತೆಯ ಉಗ್ರ ರೂಪಕ್ಕೆ ಅಸುರ ಲೋಕವೆಲ್ಲ ಬೂದಿಯಾದಂತೆ, ಮಣ್ಣಲ್ಲಿ ಮಣ್ಣಾಗಿ ಹೋಗಬೇಕು ಈ ಪರಜಾತಿ. (ಮೂಲ; ಅನುಬಂಧ–೩ ಅಧ್ಯಾಯ–೩ ಕ್ರಸಂ. ೨೧)

ಸೀತಾರಾಮರಾಜು ಕೊನೆಯುಸಿರೆಳೆಯುತ್ತಿರುವಾಗ ತನ್ನ ತಾಯಿಯೊಂದಿಗೆ ಆಡಿದ ಮಾತುಗಳು ಹೀಗಿವೆ.

ಸೀತಾರಾಮರಾಜು – ಅಮ್ಮಾ! ನನಗೆ ಅನ್ಯಾಯ ಆಗಿದೆ ಎಂಬ ನೋವಿಲ್ಲ. ಆದರೆ ನಮ್ಮ ಭಾರತ ಮಾತೆಗೆ ಅನ್ಯಾಯವಾಗುತ್ತಿದೆ ಎಂದು ನನ್ನ ಸಂಕಟ. ನನ್ನ ಅಖಂಡ ಸರ್ವಮಂಗಳ ಭಾರತ ಮಾತೆಯು ದಾಸ್ಯಬಂಧನದಿಂದ ಹಾಗೆ ಇರಕೂಡದು ತಾಯಿ ಅದೇ ನನ್ನ ಕೋರಿಕೆ. ಅಮ್ಮ ಭಾರತಮಾತೆ! ನನ್ನ ಮಾತನ್ನು ನೆರವೇರಿಸು ನಿನ್ನ ಭವಿಷತ್ತನ್ನು ನೆನೆಸಿಕೊಂಡರೆ ಈ ಸಾವಿನ ನೋವಿಗಿಂತ ಇನ್ನೂ ಭಯಂಕರವಾಗಿದೆ ತಾಯಿ! ವಂದನೆ ತಾಯಿ. ಈ ವೀರನ ಕಳೇಬರಹವನ್ನು ಆ ರಾಕ್ಷಸ ಜಾತಿ ಮುಟ್ಟದಂತೆ ಈ ನಿನ್ನ ಮಗನ ಶವದ ಮೇಲೆ ಸ್ವಲ್ಪ ಮಣ್ಣು ಹಾಕು ತಾಯಿ! (ಮೂಲ; ಅನುಬಂಧ–೩ ಅಧ್ಯಾಯ–೩ ಕ್ರಸಂ. ೨೨)

ಸೀತಾರಾಮರಾಜುವಿನ ಮಾತೃಪ್ರೇಮ, ನಿಸ್ವಾರ್ಥ ಸೇವೆ, ಭವಿಷ್ಯತ್ತಿನ ಭಾರತದ ಪರಿಸ್ಥಿತಿ, ಸ್ವಾಭಿಮಾನ, ತ್ಯಾಗ ಮನೋಭಾವವನ್ನು ಆತನ ಮಾತುಗಳಲ್ಲಿ ಗ್ರಹಿಸಬಹುದು. ಹೀಗೆ ಸ್ವರಾಜ್ಯ

ಬರುವುದಕ್ಕಿಂತ ಮುಂಚೆ ಪರಿತಪಿಸಿ ಆವೇದನೆಯಿಂದ ತನ್ನ ಪ್ರಾಣವನ್ನು ಪಣಕ್ಕಿಟ್ಟು ರಕ್ತ ಅರ್ಪಿಸಿದ ತ್ಯಾಗವೀರನು, ತೆಲುಗು ನಾಯಕನು, ಆಂಧ್ರವಜ್ರ ಅಲ್ಲೂರಿ ಸೀತಾರಾಮರಾಜು ಕತ್ತಿಗೆ ಕತ್ತಿ, ಏಟಿಗೆ ಏಟು, ರಕ್ತಕ್ಕೆ ರಕ್ತ ಎಂದು ಸ್ವಾತಂತ್ರ್ಯ ಹೋರಾಟಕ್ಕೆ ಸೂತ್ರ ರೂಪಿಸಿದ. ಇದರಿಂದ ಬ್ರಿಟಿಷರ ಅಧಿಕಾರ ಸಿಂಹಾಸವನ್ನು ಪತನ ಮಾಡಬೇಕೆಂದು ಪ್ರಭೋದನೆಯನ್ನು ಮಾಡುತ್ತಾನೆ. ಹೀಗೆ ನಾರಾಯಣಮ್ಮಳಲ್ಲಿನ ಅಪಾರವಾದ ದೇಶಭಕ್ತಿ, ರಾಜೀಗೆ ಹೋಗುವಾಗ ರಾಮರಾಜುಗೆ ಹೇಳುವಾಗ ಬ್ರಿಟಿಷರ ಕುತಂತ್ರಗಳ ಬಗ್ಗೆ ಎಚ್ಚರಿಕೆ, ಸಂಧಾನವಾಗದಿದ್ದರೆ ಮನ್ಯಂಪ್ರಾಂತ್ಯದ ಪ್ರತಿಯೊಬ್ಬರೂ ಮಹಾಯೋಧರಾಗಿ ಹೆಜ್ಜೆ ಹೆಜ್ಜೆಗೂ ರಕ್ತಚೆಲ್ಲುವಂತಾಗಬೇಕು ಎಂಬಲ್ಲಿನ ಧೈರ್ಯ, ಸಾಹಸ, ಕೆಚ್ಚು, ಶೌರ್ಯ, ಪ್ರತಿ ಭಾರತೀಯ ಸ್ತ್ರೀ ಬೆಂಕಿ ಕೆಂಡಗಳನ್ನು ಸುರಿಸುವ ಒಬ್ಬೊಬ್ಬ ಕಾಳಿಕಾ ರೂಪವನ್ನು ತಾಳಬೇಕು ಎನ್ನುವಲ್ಲಿನ ರೋಷದ ಜ್ವಾಲೆ, ಬ್ರಹ್ಮಾಂಡವಾದ ಈ ಯುದ್ಧದಲ್ಲಿ ಪ್ರತಿಯೊಬ್ಬ ಭಾರತೀಯನು ಒಬ್ಬೊಬ್ಬ ಯೋಧ, ಅಭಿಮನ್ಯು, ಬಾಲಚಂದ್ರರಾಗುತ್ತೇವೆ ಎಂದು ಹೇಳುವಲ್ಲಿನ ಸೀತಾರಾಮರಾಜುವಿನ ದೇಶಭಕ್ತಿ, ಬ್ರಿಟಿಷರ ಮೇಲಿನ ಹಗೆತನ, ಯುದ್ಧದ ಕೊನೆಯ ವ್ಯಕ್ತಿಯವರೆಗೂ ಹೋರಾಡಿ ಒಬ್ಬ ಬ್ರಿಟಿಷ್ ಸಿಪಾಯಿನನ್ನಾದರೂ ಕೊಂದು ಸಾಯಬೇಕು ಎನ್ನುವಲ್ಲಿನ ಛಲ, ತ್ಯಾಗ ಕೋಪ ತಾಪಗಳು ಎಂತಹ ವ್ಯಕ್ತಿಯನ್ನಾದರೂ ದೇಶಪ್ರೇಮಿಯನ್ನಾಗಿ, ದೇಶಕ್ಕಾಗಿ ಪ್ರಾಣವನ್ನು ಅರ್ಪಿಸಬೇಕು ಎಂಬ ಮನೋಭಾವವನ್ನು ಹುಟ್ಟಿಸುವಂತೆ ಚಿತ್ರಿತವಾಗಿದೆ.

ಸೀತಾರಾಮರಾಜು ಬ್ರಿಟಿಷರ ಕುತಂತ್ರಕ್ಕೆ ಬಲಿಯಾದಾಗ ಮಂದಗಾಮಿ ನಾಯಕರ ತತ್ವಗಳನ್ನು ಅಳವಡಿಸಿಕೊಂಡಿರುವ ಅಹಿಂಸಾವಾದಿ ರಾಮಚಂದ್ರರಾವ್ ಹೀಗೆ ಹೇಳುತ್ತಾನೆ.

ಕನ್ನಡ ಭಾಷಾಂತರ

ರಾಮಚಂದ್ರರಾವ್ – ಸ್ವಾತಂತ್ರ್ಯ ಹೋರಾಟಗಾರರನ್ನು ಅಹಿಂಸಾಮೂರ್ತಿಗಳೆಂದು ಸಾರುತ್ತಿರುವ ಕಾಂಗ್ರೆಸ್‌ವಾದಿಗಳು ಸ್ವಾತಂತ್ರ್ಯ ಹೋರಾಟ ಎಂದರೆ ಏನು ಅರಿಯದ ಸಂದರ್ಭದಲ್ಲಿ ದಿಡೀರನೆ ಮಹಾಸಭೆಯಲ್ಲಿ ಪ್ರತ್ಯಕ್ಷವಾಗಿ "ಮಹಾಪ್ರಜೆಗಳ ಆತ್ಮಬಲದಿಂದ ಭಾರತೀಯರ ರಕ್ತಾರ್ಚನೆಯಿಂದ ಸ್ವಾತಂತ್ರ್ಯವನ್ನು ಸಂಪಾದಿಸುತ್ತೇವೆ. ವೇದಿಕೆಗಳ ಮೇಲೆ ನೀಡುವ ಉಪನ್ಯಾಸಗಳು ಸ್ವರಾಜ್ಯವನ್ನು, ಸಂಪಾದಿಸುವುದಿಲ್ಲ" ಎಂದು ಬೋಧನೆ ನೀಡಿ ನಮ್ಮ ಕಣ್ಣು ತೆರೆಯಿಸಿದ ಸೀತಾರಾಮರಾಜು, ವಿಪ್ಲವ ಸಂದೇಶವನ್ನು ಕೇಳುವ ತಾಳ್ಮೆ ಇನ್ನು ನಮಗಿಲ್ಲ! ಗುಲಾಮರಾಗಿ ಹುಟ್ಟಿ ಪ್ರತಿದಿನವೂ ಸಾಯುವುದಕ್ಕಿಂತ, ಒಂದೇ ದಿನವೇ ಸತ್ತು ಒಂದು ವಿಪ್ಲವ ಬೆಳಕಾಗಿ ಹುಟ್ಟಬೇಕೆಂದು ಸಂದೇಶ ನೀಡಿದ ಸೀತಾರಾಮರಾಜುವಿನ ಅಜೇಯ ನಾಯಕತ್ವ ಇನ್ನು ನಮಗಿಲ್ಲ ತಾಯಿ, ನಮಗಿಲ್ಲ. (ಮೂಲ; ಅನುಬಂಧ–೩ ಅಧ್ಯಾಯ–೩ ಕ್ರ.ಸಂ. ೨೩)

ಶಿಸ್ತು, ಅಹಿಂಸೆ, ಸಂಯಮ, ಸಂಧಿ ಎಂದು ಮೈಗೂಡಿಸಿಕೊಂಡಿರುವ ಕಾಂಗ್ರೆಸ್‌ವಾದಿ ರಾಮಚಂದ್ರರಾವ್ ಇದರಿಂದ ನಮ್ಮ ದೇಶಕ್ಕೆ ಮುಕ್ತಿ ಇಲ್ಲ ಹಿಂಸೆಯಿಂದ ಅದು ಸಾಧ್ಯ ಎಂಬುದನ್ನು ಮನಗಂಡು ಸೀತಾರಾಮರಾಜು ಹೇಳಿದ ಮಾತನ್ನು ನೆನಪಿಸುತ್ತಾನೆ. "ಮಹಾಪ್ರಜಲ ಗುಂಡೆಬಲಂತೋ

ಭಾರತೀಯಲು ರಕ್ತಾರ್ಜನತೋ ಸ್ವಾತಂತ್ರ್ಯ ಸಂಪಾದಿಸ್ತಾಂ. ವೇದಿಕುಲಮೀದ ಉಪನ್ಯಾಸಲು ಸ್ವರಾಜ್ಯಾನ್ನಿ ಸಂಪಾದಿಂಚಲೇವು" ಎಂಬುದು ಸುಭಾಸ್ ಚಂದ್ರಬೋಸ್ ಅವರ "ನನಗೆ ಒಂದು ಹನಿ ರಕ್ತ ಕೊಡಿ ನಿಮಗೆ ಸ್ವಾತಂತ್ರ್ಯ ಕೊಡಿಸುತ್ತೇನೆ" ಎಂಬ ಹೇಳಿಕೆಗೆ ಪುಷ್ಟಿ ನೀಡುತ್ತದೆ. ಸೀತಾರಾಮರಾಜುನಂತಹ ಸಮರ್ಥ ನಾಯಕನನ್ನು ಕಳೆದುಕೊಂಡಿದ್ದರಿಂದ ಹತಾಶಭಾವವನ್ನು ವ್ಯಕ್ತಪಡಿಸುತ್ತಾನೆ.

ಕನ್ನಡ-ತೆಲುಗು ಸಾಹಿತ್ಯದಲ್ಲಿನ ತೌಲನಿಕ ಅಂಶಗಳು

ಕನ್ನಡ-ತೆಲುಗು ಕವಿಗಳು ಸುಮಾರು ಸಾವಿರದಷ್ಟು ಕವಿತೆಗಳನ್ನು ಸ್ವಾತಂತ್ರ್ಯ ಹೋರಾಟ ಕುರಿತಂತೆ ವಿವಿಧ ಮಜಲುಗಳಲ್ಲಿ ರಚನೆ ಮಾಡಿದ್ದಾರೆ. ಪರಕೀಯರ ಆಳ್ವಿಕೆಯ ಸಂದರ್ಭದಲ್ಲಿ ಅನೇಕ ಕವಿಗಳು ನೇರವಾಗಿ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ್ದಾರೆ. ನೇರವಾಗಿ ಬ್ರಿಟಿಷ್ ಸರ್ಕಾರವನ್ನು ತಿರಸ್ಕರಿಸುವ ಕವಿತೆಗಳನ್ನಲ್ಲದೆ ಪರೋಕ್ಷವಾಗಿ ಸಮಾಜಕ್ಕೆ ಅಪಾಯವನ್ನು ತಂದೊಡ್ಡುವಂತಹ ವಸ್ತು ವ್ಯವಸ್ಥೆಗಳನ್ನು ವಸ್ತುವಾಗಿರಿಸಿಕೊಂಡು ಕವಿತೆಗಳನ್ನು ರಚಿಸಿ ಜನರಲ್ಲಿ ತಿಳುವಳಿಕೆಯನ್ನು ಮೂಡಿಸಿ ಜಾಗೃತಗೊಳಿಸುವುದು ಕವಿಗಳ ಉದ್ದೇಶವಾಗಿತ್ತು. ಕನ್ನಡದ ಕವಿಗಳು ಒಂದೇ ರೀತಿಯ ವಸ್ತುವನ್ನು ಕುರಿತು ಕವಿತೆಗಳನ್ನು ರಚಿಸಲಿಲ್ಲ. ಗಾಂಧೀಜಿ, ಚರಕ, ಖಾದಿಬಟ್ಟೆ, ಹರಿಜನ, ಸ್ವದೇಶಿ ವಸ್ತು ಬಳಕೆ, ವಿದೇಶಿ ವಸ್ತು ಬಹಿಷ್ಕಾರ, ರಾಷ್ಟ್ರೀಯ ನಾಯಕರನ್ನು ಪುರಾಣದ ವ್ಯಕ್ತಿಗಳೊಂದಿಗೆ ಸಮೀಕರಿಸಿ ಕವಿತೆಗಳನ್ನು ರಚಿಸಿದರು. ಸಮಾಜದಲ್ಲಿ ಜನಮನಕ್ಕೆ ಸುಲಭವಾಗಿ ಅರ್ಥವಾಗುವಂತಹ, ಜನರ ಬಳಿಯೇ ಸಿಗುವಂತಹ, ಕಣ್ಣಿಗೆ ಕಾಣುವಂತಹ ವಸ್ತು, ಪರಿಸ್ಥಿತಿಯನ್ನು, ಕುರಿತು ಕವಿತೆಗಳು ರಚನೆಯಾಗಿರುವುದು ಕಾಣಬಹುದಾಗಿದೆ. ತೆಲುಗು ಕವಿಗಳು ಕನ್ನಡ ಕವಿಗಳಿಗಿಂತ ವಿಭಿನ್ನವಾಗಿ ಕವಿತೆಗಳನ್ನು ರಚಿಸಿದ್ದಾರೆ. ಕನ್ನಡ ಕವಿಗಳು ಪೌರಾಣಿಕ ವ್ಯಕ್ತಿಗಳೊಂದಿಗೆ ರಾಷ್ಟ್ರೀಯ ವ್ಯಕ್ತಿಗಳನ್ನು ಸಮೀಕರಿಸಿದರೆ, ತೆಲುಗು ಕವಿಗಳು ಚಾರಿತ್ರಿಕ ವ್ಯಕ್ತಿಗಳನ್ನು ರಾಷ್ಟ್ರೀಯ ನಾಯಕರಾದ ಗಾಂಧೀಜಿ, ತಿಲಕ್ ಮತ್ತು ಮದನ ಮೋಹನ ಮಾಳವೀಯ ಅವರ ನಡೆ-ನುಡಿಗಳನ್ನು ಅಳವಡಿಸಿಕೊಂಡು ಕವಿತೆಗಳನ್ನು ರಚಿಸಿರುವುದು ಕಂಡುಬರುತ್ತದೆ. ಅಲ್ಲದೆ ದೈವಶಕ್ತಿ, ಆತ್ಮಶಕ್ತಿಗಿಂತ ಮಿಗಿಲಾದುದು ದೇಶಭಕ್ತಿ ಎಂದು ದೇಶದ ಮೇಲಿನ ಅಗಾಧ ಅಭಿಮಾನವನ್ನು ತಮ್ಮ ಕಾವ್ಯಗಳಲ್ಲಿ ಒತ್ತರಿಸಿರುವುದು ಕಂಡುಬರುತ್ತದೆ. ಹೀಗೆ ಕನ್ನಡ-ತೆಲುಗು ಕವಿಗಳು ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಮಾದರಿಯಲ್ಲಿ ಕವಿತೆಗಳನ್ನು ರಚಿಸಿದರೂ ಉದ್ದೇಶ ಮಾತ್ರ ಒಂದೇ ರೀತಿಯಾಗಿರುವುದನ್ನು ಗಮನಿಸಬಹುದಾಗಿದೆ.

ಅಜ್ಞಾತವಾಸಂ ತೆಲುಗು ಕಥೆಯಲ್ಲಿ ಗಂಗ ಎಂಬ ದಲಿತ ವ್ಯಕ್ತಿ ಸಮಾಜದಲ್ಲಿನ ಉನ್ನತ ವ್ಯಕ್ತಿಗಳ ಒತ್ತಾಯಕ್ಕೆ ಸಿಲುಕಿ 'ಸರ್ಪಂಚ' ಎಂಬ ವೇತನರಹಿತ ಹುದ್ದೆಯನ್ನು ಪಡೆದುಕೊಂಡು ನಿರುದ್ಯೋಗಿಯಾಗಿರುವುದು ಕಂಡುಬರುತ್ತದೆ. ಕನ್ನಡದ ಪ್ರಜಾಪ್ರಭುತ್ವದ ಕ್ಷಣಗಳು ಕಥೆಯಲ್ಲಿ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ಕ್ಷಣಗಳು ಹೇಗಿದ್ದವು ಎಂಬುದನ್ನು ತಿಳಿಸಲಾಗಿದೆ.

ತೆಲುಗು ಕಥೆಯಲ್ಲಿ ಗಂಗನು ಗಾಂಧೀಜಿಯವರ ವಿಗ್ರಹದ ಮುಂದೆ ತನ್ನ ಪರಿಸ್ಥಿತಿಯನ್ನು ಹೇಳಿಕೊಳ್ಳುವುದರ ಮೂಲಕ ಸಮಾಧಾನಪಟ್ಟುಕೊಳ್ಳುತ್ತಾನೆ. ಗಾಂಧೀಜಿ ದಲಿತರ ದೇವರಾಗಿ ಚಿತ್ರಿತಗೊಂಡಿದ್ದಾರೆ. ಕನ್ನಡದ ಕಥೆಯಲ್ಲಿ ಬೋಸ ಎಂಬ ಹುಡುಗ ಹಳ್ಳಿಯಲ್ಲಿ ತನ್ನ ಅಕ್ಕಳಿಗಾದ ಅನ್ಯಾಯ, ತಂದೆಯ ಮೇಲೆ ಬಂಧನ ಆರೋಪವನ್ನು ಕಂಡು ನಗರಕ್ಕೆ ಬಂದು ಕಾರ್ಮಿಕ ಪಕ್ಷದ ಮುಖಂಡನಾದ ನಾಗರಾಜನ ಬಳಿ ತನ್ನ ಅಳಲನ್ನು ತೋಡಿಕೊಳ್ಳುತ್ತಾನೆ. ಇಲ್ಲಿ ಕಮ್ಯುನಿಸಂನ ಪ್ರಭಾವ ಕಂಡುಬರುತ್ತದೆ. ಕನ್ನಡದ ಕಥೆಯಲ್ಲಿ ಬೋಸ ಎಂಬ ಯುವಕ ಪ್ರತಿಭಟನಾ ಮನೋಭಾವವನ್ನು ಹೊಂದಿದ್ದು, ಶ್ರೀಮಂತರ, ಜಮೀನ್ದಾರರ ಸರಿಸಮಾನವಾಗಿ ಬದುಕಬೇಕು ಎಂಬ ದೃಢಸಂಕಲ್ಪವನ್ನು ಹೊಂದಿರುತ್ತಾನೆ. ತೆಲುಗು ಕಥೆಯಲ್ಲಿ ಗಂಗನು ಕಥೆಯ ಪ್ರಾರಂಭದಿಂದಲೂ ಪ್ರತಿಭಟನಾ ಮನೋಭಾವವನ್ನು ತೋರದೆ ಅಸಹಾಯಕತೆ, ಅನ್ಯಾಯವನ್ನು ಅನುಭವಿಸುತ್ತಾನೆ. ಮೇಲ್ವರ್ಗ ಪ್ರಬಲವಾಗಿರುವುದು ಬೋಸನ ಆ ಸ್ಥಿತಿಗೆ ಕಾರಣವೆನ್ನಬಹುದು. ಕನ್ನಡದ ಕಥೆಯಲ್ಲಿ ಬೋಸನು ಕಾರ್ಮಿಕ, ಕೂಲಿಯಾಗಿರುವುದರಿಂದ ಪ್ರತಿಭಟಿಸುವ ಶಕ್ತಿಯನ್ನು ಹೊಂದಿರುವುದನ್ನು ಗಮನಿಸಬಹುದು. ಕನ್ನಡದ ಕಥೆಯಲ್ಲಿ ಬಂಡವಾಳಶಾಹಿ ಮತ್ತು ರಾಜಕೀಯ ವ್ಯಕ್ತಿಗಳ ಕುತಂತ್ರವನ್ನು ಪ್ರಶ್ನಿಸಿ, ಪ್ರತಿಭಟಿಸಿ ನಾಗರಾಜ ಕೊಲೆಯಾಗುತ್ತಾನೆ. ಬೋಸನು ಕೊಲೆಗಾರ ಎಂಬ ಸುಳ್ಳು ಆಪಾದನೆ ಹೊತ್ತು ಜೈಲು ಸೇರುತ್ತಾನೆ. ಶ್ರೀಮಂತರ ದರ್ಪ, ಅಧಿಕಾರ ಪ್ರಬಲವಾಗಿತ್ತು ಎಂಬುದನ್ನು ಸೂಚಿಸುತ್ತದೆ. ತೆಲುಗು ಕಥೆಯಲ್ಲಿ ಗಂಗನು ಕರಣಂ ಮಲ್ಲಯ್ಯ, ಪೋಲಿರೆಡ್ಡಿ ಮತ್ತು ಮಣಿರತ್ನಂ ಎಂಬ ಉನ್ನತ ವರ್ಗದವರ ಬಲವಂತಕ್ಕೆ ಬಲಿಯಾಗಿ ಸ್ವಾಭಿಮಾನಿಯಾಗಿ ಹಳ್ಳಿಯನ್ನು ತೊರೆದು ಪಟ್ಟಣದಲ್ಲಿ ಅಜ್ಞಾತವಾಸವನ್ನು ಅನುಭವಿಸುತ್ತಾನೆ. ಗಾಂಧೀಜಿ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಸಾಮಾಜಿಕ ಸ್ವಾತಂತ್ರ್ಯವನ್ನು ಸಮಾಜದಲ್ಲಿ ನೆಲೆ ಕಾಣಿಸಬೇಕು ಎಂದು ಅವಿರತವಾಗಿ ಹೋರಾಡಿದವರು. ಆದರೆ ಅವರ ಚಟುವಟಿಕೆಗಳಿಗೆ ವಿರುದ್ಧವಾಗಿ ದಲಿತ ಕುಟುಂಬದ ಮೇಲೆ ಶೋಷಣೆ ನಡೆಯುವುದನ್ನು ಕಾಣಬಹುದಾಗಿದೆ. ಕನ್ನಡದ ಕಥೆಯಲ್ಲಿ ಗಾಂಧೀಜಿಯವರ ವಿಚಾರಗಳಿಗೆ ಎಲ್ಲಿಯೂ ಆಸ್ಪದವಿಲ್ಲದೆ ಕೂಲಿ ಸಾಮ್ರಾಜ್ಯ ಅಸ್ತಿತ್ವಕ್ಕೆ ಬರಬೇಕು ಎಂಬ ಸಮತಾವಾದ, ಸಮಾಜವಾದ ವಿಚಾರಗಳ ಪ್ರಸ್ತಾಪವನ್ನು ಕಾಣಬಹುದು.

ಕನ್ನಡ-ತೆಲುಗು ಲೇಖಕರಿಬ್ಬರಿಗೂ ಗಾಂಧೀಜಿ ಚಿರಪರಿಚಿತರಾಗಿದ್ದರೂ ತೆಲುಗು ಲೇಖಕರ ಮೇಲೆ ಗಾಂಧೀಜಿಯವರ ಪ್ರಭಾವ ಹೆಚ್ಚಾಗಿರುವುದನ್ನು, ಕನ್ನಡದ ಲೇಖಕರ ಮೇಲೆ ಅಷ್ಟಾಗಿ ಪ್ರೇರಣೆ ಇಲ್ಲದಿರುವುದನ್ನು ಗುರುತಿಸಬಹುದಾಗಿದೆ.

ಪು.ತಿ.ನ. ಮತ್ತು ದಾದಾಪಯತ್ ಅವರು ತಮ್ಮ ತಮ್ಮ ಭಾಷೆಗಳಲ್ಲಿ ತಮ್ಮ ಸಾಹಿತ್ಯದ ಛಾಪನ್ನು ವಿಸ್ತರಿಸಿಕೊಂಡಿದ್ದಾರೆ. ಪು.ತಿ.ನ ಅವರು ಪರಕೀಯರ ದಬ್ಬಾಳಿಕೆಯ ಸಂದರ್ಭದಲ್ಲಿ ಭಾರತದ ಬಾವುಟದ ರಕ್ಷಣೆಯ ಸನ್ನಿವೇಶವನ್ನಿಟ್ಟುಕೊಂಡು ಧ್ವಜರಕ್ಷಣೆ ಎಂಬ ಕಥೆಯನ್ನು ರಚಿಸಿದರೆ, ದಾದಾಪಯತ್ ಅವರು ರಾಜಕೀಯ ವ್ಯಕ್ತಿಗಳು ಗಾಂಧೀಜಿಯವರನ್ನು ಪ್ರದರ್ಶನ

ವಸ್ತುವನ್ನಾಗಿಸಿಕೊಂಡು ದಲಿತರ ಮೇಲೆ ನಡೆಸುವ ದೌರ್ಜನ್ಯವನ್ನು ಕುರಿತು ಪ್ರದರ್ಶನ ಎಂಬ ಕಥೆಯನ್ನು ರಚಿಸಿದ್ದಾರೆ. ಕನ್ನಡದ ಕಥೆಯಲ್ಲಿ ಮುಕುಂದ ಎಂಬ ವ್ಯಕ್ತಿ ಸಾಮಾನ್ಯ ಗುಮಾನಸ್ತನಾಗಿದ್ದು, ಪರಕೀಯ ಅಧಿಕಾರಿಗೆ ಮೆಚ್ಚಿಗೆಯವನಾಗಿ ಕೆಲಸ ಮಾಡುತ್ತಿರುತ್ತಾನೆ. ಈತನು ಸಾತ್ವಿಕ ಅಹಿಂಸಾವಾದಿಯಾಗಿರುತ್ತಾನೆ. ಅಪಾರವಾದ ದೇಶಪ್ರೇಮವನ್ನು ಹೊಂದಿದ್ದ ಮುಕುಂದ ಎಲ್ಲಿಯೂ ತನ್ನ ದೇಶಾಭಿಮಾನವನ್ನು ತೋರಿಸಲ್ಪಟ್ಟಿರುವುದಿಲ್ಲ. ಆದರೆ ಒಂದು ಯುವಕರ ತಂಡ ಭಾರತದ ಮಾತೆಯ ಧ್ವಜವನ್ನು ಹಿಡಿದು ಮೆರವಣಿಗೆ ಹೊರಟ ಸಂದರ್ಭದಲ್ಲಿ ಅಧಿಕಾರಶಾಹಿ ಮೆರವಣಿಗೆಯ ಮೇಲೆ ಹಲ್ಲೆ ನಡೆಸಿ ಬಾವುಟವನ್ನು ಅವಮಾನಗೊಳಿಸುತ್ತಿರುವ ಸಂದರ್ಭದಲ್ಲಿ ಮುಕುಂದನು ಆವೇಷಭರಿತನಾಗಿ ಅಧಿಕಾರಶಾಹಿ (ಪೊಲೀಸರ) ಮೇಲೆ ಎರಗಿ ಧ್ವಜವನ್ನು ರಕ್ಷಣೆ ಮಾಡುತ್ತಾನೆ. ಮುಕುಂದನಲ್ಲಿ ಜಡವಾಗಿದ್ದ ರಾಷ್ಟ್ರಪ್ರೇಮ ಅಲ್ಲಿ ತೋರ್ಪಡೆಯಾಗುತ್ತದೆ. ಎಂತಹ ಸ್ವಾರ್ಥಿ, ದೇಶ ಪ್ರೇಮವಿಲ್ಲದವನಾದರೂ ತನ್ನ ನಾಡಿಗೆ, ತಾಯಿಗೆ ಧಕ್ಕೆ ಒದಗಿದಾಗ ಸಿಡಿದೇಳುತ್ತಾನೆ. ಪ್ರತಿಭಟಿಸುತ್ತಾನೆ ಎಂಬುದಕ್ಕೆ ಮುಕುಂದನೆ ನಿದರ್ಶನ. ತೆಲುಗು ಕಥೆಯಲ್ಲಿ ರಾಜಕೀಯ ವ್ಯಕ್ತಿಗಳು ದಲಿತರು ಹೀನಕುಲದವರು, ಊರ ಮಧ್ಯದಲ್ಲಿರುವುದು ಅಶುಭ ಎಂದು ಅವರ ಮೇಲೆ ವಿವಿಧ ರೀತಿಯಾಗಿ ದೌರ್ಜನ್ಯ ಎಸಗುತ್ತಾರೆ. ಕನ್ನಡದ ಕಥೆಯಲ್ಲಿ ಮುಕುಂದ ಪ್ರಾರಂಭದಲ್ಲಿ ಅಹಿಂಸಾವಾದಿಯಾಗಿದ್ದು, ಧ್ವಜರಕ್ಷಣೆಯ ಸಂದರ್ಭದಲ್ಲಿ ಅಹಿಂಸಾತತ್ವವನ್ನು ಮೀರಿ ತನ್ನ ಪ್ರಾಣವನ್ನು ಅರ್ಪಿಸುತ್ತಾನೆ. ತೆಲುಗು ಕಥೆಯಲ್ಲಿ ದಲಿತರು ತಮ್ಮ ಇರುವಿಕೆಯನ್ನು ಪ್ರಶ್ನಿಸಿ, ಉಳಿಸಿಕೊಳ್ಳುವುದಕ್ಕಾಗಿ ಹೋರಾಡಿ ಮಾನ-ಪ್ರಾಣಗಳನ್ನು ಕಳೆದುಕೊಳ್ಳುತ್ತಾರೆ.

ಕನ್ನಡ-ತೆಲುಗು ಕಥೆಗಳಲ್ಲಿಯೇ ಗಾಂಧೀಜಿಯವರ ವಿಚಾರಗಳೇ ಪ್ರಮುಖವಾಗಿ ಕಂಡುಬಂದರೂ ಕನ್ನಡ ಕಥೆಯಲ್ಲಿ ಮುಕುಂದ ಗಾಂಧೀಜಿಯವರ ಸಿದ್ದಾಂತವನ್ನು ದಿಕ್ಕರಿಸಿ ಧ್ವಜವನ್ನು ರಕ್ಷಿಸುತ್ತಾನೆ. ಆ ಸಂದರ್ಭದಲ್ಲಿ ಧ್ವಜ, ಭಾರತಮಾತೆ ಎಂದರೆ ಹಣ, ಅಂತಸ್ತು, ಬೆಲೆಬಾಳುವ ಆಭರಣಗಳಿಗಿಂತ ಬೆಲೆಯುಳ್ಳದ್ದು ಎಂಬ ಅಭಿಪ್ರಾಯ ಜನ-ಮನದಲ್ಲಿ ಮನೆ ಮಾಡಿದ್ದನ್ನು ಗಮನಿಸಬಹುದು. ತೆಲುಗು ಕಥೆಯಲ್ಲಿ ಗಾಂಧೀಜಿಯವರ ಪ್ರಮುಖ ಕಾರ್ಯಚಟುವಟಿಕೆಯಾದ ದಲಿತರ ಉದ್ದಾರ ರಾಜಕೀಯ ವ್ಯಕ್ತಿಗಳ ಕುತಂತ್ರಕ್ಕೆ ಸಿಲುಕಿ ಮುರುಟಿ ಹೋಗುವುದನ್ನು ಕಾಣಬಹುದಾಗಿದೆ. ಕನ್ನಡದ ಕಥೆಯಲ್ಲಿ ಗಾಂಧೀಜಿ ಮಾರ್ಗದರ್ಶಕರಂತೆ, ಯುವಕರಂತೆ ಸ್ಫೂರ್ತಿಯಾಗಿ ಕಂಡುಬಂದರೆ, ತೆಲುಗು ಕಥೆಯಲ್ಲಿ ಗಾಂಧೀಜಿ ಹಣವಂತರ ಸ್ವತ್ತಾಗಿ, ಪ್ರದರ್ಶನದ ಬೊಂಬೆ, ಅಸಮಾನತೆಯ ಸಂಕೇತವಾಗಿ ಚಿತ್ರಿತಗೊಂಡಿದ್ದಾರೆ. ಹೀಗೆ ಕನ್ನಡ-ತೆಲುಗು ಕಥೆಗಳಲ್ಲಿ ಲೇಖಕರು ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿರುವುದನ್ನು ತಿಳಿಯಬಹುದು.

ತಲೆಬಾಗದ ಜನ ೨೦೦೦ ಇಸವಿಯಲ್ಲಿ, ಮುಂದಡುಗು ೧೯೪೫ನೆಯ ಇಸವಿಯಲ್ಲಿ ರಚನೆಯಾಗಿದೆ. ತಲೆಬಾಗದ ಜನ ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯನ್ನು ವಸ್ತುವನ್ನಾಗಿ ಹೊಂದಿದೆ. ಮುಂದಡುಗು ರೈತರು, ಕೂಲಿಗಳು ಧನಿಕರ ವಿರುದ್ಧ ಪ್ರತಿಭಟಿಸುವುದರ ಉದ್ದೇಶವನ್ನು

ಹೊಂದಿದೆ. ತಲೆಬಾಗದ ಜನ ನಾಟಕದಲ್ಲಿ ತುಸು ಹೆಚ್ಚಾಗಿ ಗಾಂಧೀಜಿಯವರ ಸಿದ್ಧಾಂತಗಳನ್ನು ಕಾಣಬಹುದು. ಮುಂದಡುಗು ನಾಟಕದಲ್ಲಿ 'ಶಾಂತಾ' ಎಂಬ ಒಂದು ಪಾತ್ರ ಮಾತ್ರ ಗಾಂಧೀಜಿಯವರ ಸಿದ್ಧಾಂತವನ್ನು ಅನುಷ್ಠಾನಿಸಿರುವುದನ್ನು ಕಾಣಬಹುದು. ಈ ಎರಡು ನಾಟಕಗಳ ವಸ್ತು ೧೯೪೨ ಮತ್ತು ಅದೇ ಸಂದರ್ಭದ ಆಸುಪಾಸಿನದಾದರೂ ಕೃತಿಗಳು ರಚನೆಯಾದ ಕಾಲಮಾನಗಳು ಬೇರೆಬೇರೆಯಾಗಿವೆ. ಕನ್ನಡದ ಲೇಖಕರಿಗೆ ವಿದೇಶಿ ಪ್ರಭುತ್ವದ ಅಡಿಯಲ್ಲಿ ಅಧಿಕಾರ ನಡೆಸುವ ದೇಶೀಯ ಆಡಳಿತವನ್ನು ದಿಕ್ಕರಿಸುವ ಸ್ವಾತಂತ್ರ್ಯ ಪ್ರಮುಖವಾದರೆ ತೆಲುಗು ಲೇಖಕರಿಗೆ ಶ್ರೀಮಂತರು, ಅಧಿಕಾರಿಶಾಹಿ ವರ್ಗದಿಂದ ಬಡವರು, ಕೂಲಿಕಾರರನ್ನು ರಕ್ಷಣೆ ಮಾಡುವ ಜವಾಬ್ದಾರಿ ಪ್ರಮುಖವಾಗಿರುವುದನ್ನು ಗಮನಿಸಬಹುದು. ತಲೆಬಾಗದ ಜನ ನಾಟಕದಲ್ಲಿ ಈಸೂರಿನ ಜನತೆ ಸ್ವತಂತ್ರ ಹಳ್ಳಿ ಎಂದು ಘೋಷಿಸಿಕೊಂಡು ಅಮಲ್ದಾರ ಮತ್ತು ಪೊಲೀಸ್ ಅಧಿಕಾರಿಯನ್ನು ಕೊಂದು ಈಸೂರು ದೌರ್ಜನ್ಯಕ್ಕೆ ಒಳಗಾಗಿ ಅಧಿಕಾರಶಾಹಿಗೆ ತಲೆಬಾಗುವುದನ್ನು ಕಾಣಬಹುದು. ತೆಲುಗು ನಾಟಕದಲ್ಲಿ ರೈತರು, ಕೂಲಿಗಳು ಜಮೀನ್ದಾರ ಚಕ್ರಧರರಾವ್ ಮತ್ತು ಠಾಣೆದಾರ್ ನಾಗೇಂದ್ರ ಅವರನ್ನು ದಂಡಿಸಿ ಹೋರಾಟದಲ್ಲಿ ಯಶಸ್ಸನ್ನು ಕಾಣಬಹುದಾಗಿದೆ.

ಈ ಎರಡು ನಾಟಕಗಳು ಆಯಾಯ ಭಾಷಾ ಪರಿಸರದಲ್ಲಿ ತುಂಬಾ ಸದ್ದುಗದ್ದಲ ಮಾಡಿ ಪ್ರಸಿದ್ಧಿ ಪಡೆದ ಮಹತ್ವವಾದ ನಾಟಕಗಳಾಗಿವೆ. ಹೀಗೆ ತಲೆಬಾಗದ ಜನ ನಾಟಕದಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದರೆ, ಮುಂದಡುಗು ನಾಟಕದಲ್ಲಿ ಸಾಮಾಜಿಕ ನ್ಯಾಯ ಮತ್ತು ಮಹಿಳಾ ಸ್ವಾತಂತ್ರ್ಯಗಳಿಗಾಗಿ ಹೋರಾಟ ನಡೆಯುವುದನ್ನು ತಿಳಿಯಬಹುದಾಗಿದೆ.

ಗಾಂಧೀಟೋಪಿ ಮತ್ತು ಅಲ್ಲೂರಿ ಸೀತಾರಾಮರಾಜು ಎಂಬ ಈ ಎರಡು ನಾಟಕಗಳು ವಸ್ತು ಮತ್ತು ವ್ಯಕ್ತಿಪ್ರಧಾನವಾದವುಗಳು. ಗಾಂಧಿಟೋಪಿ ನಾಟಕದಲ್ಲಿ ಗಾಂಧೀಜಿಯವರ ಸಿದ್ಧಾಂತಗಳನ್ನು ಕಾರ್ಯರೂಪಕ್ಕೆ ತಂದು, ಜನರಲ್ಲಿ ಅವುಗಳನ್ನು ಬಿತ್ತುವ ಮತ್ತು ರಕ್ಷಿಸುವ ಕೆಲಸ ನಡೆದರೆ ತೆಲುಗು ನಾಟಕದಲ್ಲಿ ಮನ್ಯಂ ಪ್ರಾಂತ್ಯದ ಗಿರಿಜನರ ರಕ್ಷಣೆಗಾಗಿ ಮತ್ತು ದೇಶ ವಿಮುಕ್ತಿಗಾಗಿ ಸೀತಾರಾಮರಾಜು ಹೋರಾಟ ನಡೆಸುವುದು ಕಂಡುಬರುತ್ತದೆ. ಗಾಂಧಿಟೋಪಿ ನಾಟಕದಲ್ಲಿ ಹನುಮಂತರಾಯ ಎಂಬುವರು ಗಾಂಧಿಯವರ ಅನುಯಾಯಿಯಾಗಿದ್ದು, ಅವರ ದಲಿತ ಉದ್ಧಾರ, ಸ್ತ್ರೀಉನ್ನತಿ, ಖಾದಿ ಪ್ರಸಾರ, ಸ್ತ್ರೀರಕ್ಷಣೆಯಂತಹ ಸಮಾಜಪರ ಚಟುವಟಿಕೆಗಳನ್ನು ಯಶಸ್ವಿಯಾಗಿಸಲು ಶ್ರಮಿಸುತ್ತಾನೆ. ಸೀತಾರಾಮರಾಜು ನಾಟಕದಲ್ಲಿ ಸೀತಾರಾಮರಾಜು ತನ್ನ ದೇಶಕ್ಕೆ ಅಂಟಿದ ಗುಲಾಮಗಿರಿ ಎಂಬ ಕಳಂಕವನ್ನು ಹೊಡೆದೋಡಿಸಲು ಹಿಂಸೆಗೆ ಪ್ರತಿಹಿಂಸೆ, ರಕ್ತಕ್ಕೆ ರಕ್ತ, ಕತ್ತಿಗೆ ಕತ್ತಿ, ಏಟಿಗೆ ಎದಿರೇಟು ಎಂಬ ಹಮುರಾಬಿಯ ತತ್ವದಂತಹ ಕ್ರಾಂತಿಕಾರಕ ಚಿಂತನೆಗಳನ್ನು ಹೊಂದಿರುತ್ತಾನೆ. ಕನ್ನಡದ ಲೇಖಕರು ಮಂದಗಾಮಿ ನಾಯಕರ ಸಿದ್ಧಾಂತಗಳಿಗೆ ಹೆಚ್ಚು ಒತ್ತು ಕೊಟ್ಟರೆ, ತೆಲುಗು ಲೇಖಕರು ತೀವ್ರಗಾಮಿ ನಾಯಕರ ಸಿದ್ಧಾಂತಗಳಿಗೆ ಒತ್ತುಕೊಟ್ಟಿರುವುದನ್ನು ಗಮನಿಸಬಹುದಾಗಿದೆ. ಗಾಂಧಿಟೋಪಿ ನಾಟಕದಲ್ಲಿ ಗಾಂಧೀಜಿ ಒಂದು ಪಾತ್ರವಾಗಿ ಬಂದಿದ್ದು ಶ್ರೀರಾಮನ ಪೋಟೋಗೆ ಪೂಜೆ ಸಲ್ಲಿಸುತ್ತಾ ದೇಶದಲ್ಲಿ

ರಾಮರಾಜ್ಯವನ್ನು ಅಸ್ತಿತ್ವಕ್ಕೆ ತರಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಾನೆ. ಸೀತಾರಾಮರಾಜು ನಾಟಕದಲ್ಲಿ ಪುರಾಣ ಮತ್ತು ಐತಿಹಾಸಿಕ ಪುರುಷರಾದ ಪರಶುರಾಮ, ಶಿವಾಜಿ ಅವರ ಮಾದರಿಯ ಆಡಳಿತ, ಹೋರಾಟ ನಡೆಸಬೇಕು ಎಂಬ ಆಶಯವನ್ನು ಕಾಣಲಾಗಿದೆ. ಗಾಂಧೀಜಿ ಮತ್ತು ಸೀತಾರಾಮರಾಜು ಅವರು ರಾಷ್ಟ್ರೀಯ ಮತ್ತು ದೇಶೀಯ ಸಂಕೇತಗಳಾಗಿ ಗುರುತಿಸಿಕೊಂಡಿದ್ದು, ತಮ್ಮ ತಮ್ಮ ಸಿದ್ಧಾಂತಗಳ ಮೂಲಕ ಜನರನ್ನು ಒಗ್ಗೂಡಿಸಿದ ರೀತಿ, ಅವರು ಹೋರಾಟದ ಮಂತ್ರಶಕ್ತಿಗಳಾಗಿ ಯಾವ ಯಾವ ತಂತ್ರಗಳನ್ನು ಅನುಸರಿಸಿದರು. ಜನರು ಯಾರ ತಂತ್ರಗಳನ್ನು ಅನುಸರಿಸಿ ಹೋರಾಟದಲ್ಲಿ ಪಾಲ್ಗೊಂಡರು ಎಂಬ ವಿಚಾರಗಳು ಕಂಡುಬರುತ್ತವೆ. ಈ ಎರಡು ನಾಟಕಗಳಲ್ಲಿ ಗಾಂಧೀಜಿ ನಿಯಮಗಳ ಸೃಷ್ಟಿಕರ್ತನಾಗಿ ಕಂಡುಬಂದರೆ ಸೀತಾರಾಮರಾಜು ತತ್ವಗಳ ಪರಿಪಾಲಕನಾಗಿ ಕಂಡುಬರುತ್ತಾನೆ.

ಕನ್ನಡ ಕವಿಗಳು ನೇರವಾಗಿ ಬ್ರಿಟಿಷ್ ಸರ್ಕಾರವನ್ನು ತಿರಸ್ಕರಿಸುವ ಕವಿತೆಗಳನ್ನಲ್ಲದೆ ಪರೋಕ್ಷವಾಗಿ ಸಮಾಜಕ್ಕೆ ಅಪಾಯವನ್ನು ತಂದೊಡ್ಡುವ ವಸ್ತು, ವ್ಯವಸ್ಥೆಗಳನ್ನು ವಸ್ತುವಾಗಿಸಿಕೊಂಡು ಕವನ ರಚಿಸಿದ್ದಲ್ಲದ್ದಾರೆ. ಮತ್ತು ಗಾಂಧೀಜಿ ಹಾಗೂ ಅವರ ಸಿದ್ಧಾಂತಗಳು ಪೌರಾಣಿಕ ವ್ಯಕ್ತಿಗಳನ್ನು ರಾಷ್ಟ್ರೀಯ ನಾಯಕರೊಂದಿಗೆ ಸಮೀಕರಿಸಿ ಕವಿತೆಗಳನ್ನು ರಚಿಸಿದ್ದಾರೆ. ತೆಲುಗು ಕವಿಗಳು ದೀರ್ಘಕಥನ ಮತ್ತು ಖಂಡಕಾವ್ಯಗಳಲ್ಲಿ ಸ್ವಾತಂತ್ರ್ಯ ಚಳವಳಿಯ ವಸ್ತುವಿಗೆ ಸಂಬಂಧಿಸಿದಂತೆ ಚಾರಿತ್ರಿಕ ವ್ಯಕ್ತಿಗಳನ್ನು ರಾಷ್ಟ್ರೀಯ ನಾಯಕರೊಂದಿಗೆ ಹೋಲಿಸಿ ಕವಿತೆಗಳನ್ನು ರಚಿಸಿರುವುದನ್ನು ಗಮನಿಸಬಹುದು. ಕನ್ನಡ ಕವಿಗಳು ಜನರನ್ನು ಬಹುಬೇಗ ಜಾಗೃತಿಗೊಳಿಸಲು ಜನತೆಗೆ ಅರ್ಥವಾಗುವಂತೆ ಪೌರಾಣಿಕ ವ್ಯಕ್ತಿಗಳ ಮೂಲಕ ಸ್ವಾತಂತ್ರ್ಯದ ಸಂದೇಶವನ್ನು ತಿಳಿಸಲು ಪ್ರಯತ್ನಿಸಿರುವುದನ್ನು ಕಾಣಬಹುದು. ಆದರೆ ತೆಲುಗು ಕವಿಗಳು ಚಾರಿತ್ರಿಕ ವ್ಯಕ್ತಿಗಳ ಮೂಲಕ ರಾಷ್ಟ್ರೀಯತೆಯನ್ನು ಮೂಡಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಕನ್ನಡ–ತೆಲುಗು ಕವಿಗಳು ಪೌರಾಣಿಕ, ಚಾರಿತ್ರಿಕ ವ್ಯಕ್ತಿ, ವಸ್ತುಗಳ ಕಡೆಗೆ ಆದ್ಯತೆಕೊಟ್ಟು ಸಾಹಿತ್ಯ ರಚಿಸಿರುವುದು ವಿಶೇಷವಾಗಿದೆ. ಆದರೆ ಉಭಯ ಕವಿಗಳ ಗುರಿ, ಉದ್ದೇಶ ಸ್ವಾತಂತ್ರ್ಯವನ್ನು ಪಡೆಯುವುದೆ ಆಗಿತ್ತು ಎಂಬ ಅಂಶವನ್ನು ಗುರುತಿಸಬಹುದಾಗಿದೆ. ಹಾಗೆನೇ ಕಾವ್ಯಗಳಲ್ಲಿಯಂತೆಯೇ ಕನ್ನಡ–ತೆಲುಗು ಕಥೆಗಳಲ್ಲಿಯೂ ರಾಷ್ಟ್ರೀಯತೆ ಕುರಿತು ಸಾಹಿತ್ಯ ರಚನೆಯಾಗಿರುವುದನ್ನು ಗಮನಿಸಬಹುದು. ಕನ್ನಡ ಕಥೆಗಳಲ್ಲಿ ಸಾಮ್ರಾಜ್ಯಶಾಹಿ ಅಧಿಕಾರದ ಆಸೆಗಾಗಿ, ಸ್ವಾರ್ಥ ಬದುಕಿಗಾಗಿ ಮಧ್ಯಮ, ಕೆಳವರ್ಗದವರ ಮೇಲೆ ಶೋಷಣೆ ನಡೆಸುತ್ತಿರುವುದು ಮತ್ತು ಸರ್ಕಾರದ ಅಧೀನದಲ್ಲಿ ಕೆಲಸ ಮಾಡುತ್ತಾ ರಾಷ್ಟ್ರೀಯತೆಯ ಬಗ್ಗೆ ಜಾಗೃತಗೊಳ್ಳುವುದನ್ನು ಕಾಣಬಹುದಾಗಿದೆ. ಆದರೆ ತೆಲುಗು ಕಥೆಗಳಲ್ಲಿ ದಲಿತರ ಮೇಲೆ ನಡೆಯುತ್ತಿರುವ ಅನ್ಯಾಯ, ಅಕ್ರಮ ದೌರ್ಜನ್ಯದಂತಹ ದುಷ್ಕೃತ್ಯಗಳು ಕಂಡುಬರುತ್ತವೆ. ಕನ್ನಡದ ಲೇಖಕರಿಗೆ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಮ್ರಾಜ್ಯಶಾಹಿ ವರ್ಗ ಇತರೆ ವರ್ಗದ ಜನತೆಯು ಮುಂದಾಗಿರುವುದು ಕಂಡುಬರುತ್ತದೆ. ತೆಲುಗು ಲೇಖಕರು ಹರಿಜನ ದೇವರ ಮಕ್ಕಳು ಎಂದು ಕರೆಸಿಕೊಂಡಿರುವ ದಲಿತರ ಮೇಲಿನ ದೌರ್ಜನ್ಯವನ್ನು ಚಿತ್ರಿಸುತ್ತ ಅವರ ಸಾಮಾಜಿಕ ಸ್ವಾತಂತ್ರ್ಯಕ್ಕೂ

ಒತ್ತುಕೊಟ್ಟಿರುವುದನ್ನು ಗಮನಿಸಬಹುದಾಗಿದೆ. ಎರಡು ಭಾಷೆಗಳ ಲೇಖಕರು ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳಿಗಾಗಿ ಹೋರಾಟ ನಡೆಸುತ್ತಿರುವುದನ್ನು ಕಥೆಗಳಲ್ಲಿ ಚರ್ಚಿಸಿದ್ದಾರೆ. ಮತ್ತು ಕನ್ನಡ ನಾಟಕಗಳಲ್ಲಿ ಕ್ವಿಟ್ ಇಂಡಿಯಾ ಚಳವಳಿಯ ಸ್ವರೂಪ ಈಸೂರು ಎಂಬ ಗ್ರಾಮದಲ್ಲಿ ಯಾವ ರೀತಿ ಇತ್ತು ಎಂಬುದನ್ನು ಅದರ ಕಾರಣ ಪರಿಣಾಮಗಳೇನು ಮತ್ತು ಗಾಂಧೀಜಿಯವರ ಪ್ರಭಾವ ಪ್ರೇರಣೆ ಜನಸಾಮಾನ್ಯರಲ್ಲಿ ಯಾವ ರೀತಿಯಲ್ಲಿತ್ತು. ಅದರಿಂದ ಗಾಂಧಿ ಅನುಯಾಯಿಗಳು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಪ್ರಕ್ರಿಯೆಯನ್ನು ಚಿತ್ರಿಸಲಾಗಿದೆ. ತೆಲುಗು ನಾಟಕಗಳಲ್ಲಿ ರೈತರು, ಕೂಲಿಗಳು ಧನಿಕರ ವಿರುದ್ಧ ಪ್ರತಿಭಟಿಸಿದ ರೀತಿ, ರಚನಾತ್ಮಕ ಸ್ತ್ರೀಯರು ತಮ್ಮ ಹಕ್ಕು ಬಾಧ್ಯತೆಗಳಿಗೆ ಪ್ರತಿಭಟಿಸಿದ ರೀತಿ, ಗಾಂಧೀಜಿಯವರ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡ ಬಗೆಯನ್ನು ಮತ್ತು ಒಬ್ಬ ಬುಡಕಟ್ಟಿನ ವೀರ ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಅಸುನೀಗಿದ ಪರಿಯನ್ನು ಕಾಣಬಹುದು. ಕನ್ನಡದ ಲೇಖಕರು ವಸ್ತು ಮತ್ತು ವ್ಯಕ್ತಿ ಅವರ ಸಿದ್ಧಾಂತಗಳಿಗೆ ಆದ್ಯತೆಕೊಟ್ಟಿರುವುದು ಗಮನಾರ್ಹವಾದರೆ ತೆಲುಗು ಲೇಖಕರು ಸಾಮಾಜಿಕ ನ್ಯಾಯ, ಹಕ್ಕುಗಳು ಬುಡಕಟ್ಟುವೀರ ತನ್ನ ಪ್ರಾಂತ್ಯ, ದೇಶಕ್ಕಾಗಿ ಶ್ರಮಿಸಿರುವುದನ್ನು ಚಿತ್ರಿಸಿದ್ದಾರೆ.

❖❖❖

ಅಧ್ಯಾಯ : ನಾಲ್ಕು

ರಕ್ತತರ್ಪಣ ಮತ್ತು ಕೋನಂಗಿ: ಒಂದು ಕಾಲಘಟ್ಟದ ಎರಡು ರಚನೆಗಳು

ಅಧ್ಯಾಯ: ನಾಲ್ಕು

ರಕ್ತತರ್ಪಣ ಮತ್ತು ಕೋನಂಗಿ: ಒಂದು ಕಾಲಘಟ್ಟದ ಎರಡು ರಚನೆಗಳು

ಈ ಎರಡು ಕೃತಿಗಳು ಒಂದು ಕಾಲಘಟ್ಟದ ಭಿನ್ನವಾದ ರಚನೆಗಳಾಗಿದ್ದು, ಇಬ್ಬರೂ ಲೇಖಕರು ಭಿನ್ನವಾದ ವಿಚಾರಗಳನ್ನು ತಮ್ಮ ಕೃತಿಗಳಲ್ಲಿ ಹಿಡಿದಿಟ್ಟಿದ್ದಾರೆ. ತ.ರಾ.ಸುಬ್ಬರಾವ ಮತ್ತು ಅಡವಿ ಬಾಪಿರಾಜು ಆಯಾಯ ಭಾಷೆಗಳಲ್ಲಿ ಪ್ರಸಿದ್ಧಿ ಪಡೆದ ಲೇಖಕರಾಗಿದ್ದಾರೆ. ಈ ಎರಡು ಕಾದಂಬರಿಗಳು ಸರಿಸುಮಾರು ಒಂದೇ ಕಾಲದಲ್ಲಿ ಅಂದರೆ, ೧೯೪೬ರಲ್ಲಿ ರಚನೆಯಾಗಿವೆ. 'ರಕ್ತತರ್ಪಣ' ಕಾದಂಬರಿಯ ಕಾರ್ಯಕ್ಷೇತ್ರ ಹಳೆಯ ಮೈಸೂರು ಪ್ರಾಂತ್ಯದ ಒಂದು ಹಳ್ಳಿಯಾದರೆ, 'ಕೋನಂಗಿ' ಕಾದಂಬರಿಯ ಕಾರ್ಯಕ್ಷೇತ್ರವು ಆಂಧ್ರಪ್ರದೇಶ ಮತ್ತು ಮದ್ರಾಸ್ ಪ್ರಾಂತ್ಯದಲ್ಲಿ ವಿಸ್ತೃತಗೊಂಡಿದೆ. ರಕ್ತತರ್ಪಣ ಕಾದಂಬರಿಯಲ್ಲಿ ೧೯೪೨ರ ಆಗಸ್ಟ್ ಕ್ರಾಂತಿಯ ಚಿತ್ರಣವನ್ನು ತಾನು ಕಂಡ ರೀತಿಯಲ್ಲಿ ನೀಡಿದ್ದಾಗಿ ಲೇಖಕರು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಆ ಚಳವಳಿಯ ಕಾಲಕ್ಕೆ ವಿದ್ಯಾರ್ಥಿಯಾಗಿದ್ದು, ಆಗಸ್ಟ್ ಕ್ರಾಂತಿಯನ್ನು ತಾವು ಒಂದು ಹಳ್ಳಿಯಲ್ಲಿ ಕಂಡ ವಾಸ್ತವ ಚಿತ್ರಣ ಇದೆನ್ನುವ ತ.ರಾ.ಸು. "ನಾನಿಲ್ಲಿ ಪಳಗಿದ ದೇಶನಾಯಕನೊಬ್ಬನನ್ನು ಚಿತ್ರಿಸುತ್ತಿಲ್ಲ. ಕ್ರಾಂತಿಯ ಮಹಾಪೂರ ಕೊಚ್ಚಿ ತಂದ ಘಟನಾ ಪ್ರಭಾವದಿಂದ ನಾಯಕತ್ವ ವಹಿಸಬೇಕಾಗಿ ಬಂದ ಅನುಭವ ಸಾಲದ ಬಿಸಿನೆತ್ತರ ವಿದ್ಯಾರ್ಥಿಯೊಬ್ಬನನ್ನು ಚಿತ್ರಿಸಿದ್ದೇನೆ" ಎಂದು ಮುನ್ನುಡಿಯಲ್ಲಿ ಹೇಳಿದ್ದಾರೆ.

ಕೋನಂಗಿ ಕಾದಂಬರಿಯಲ್ಲಿ ಕನ್ನಡ ಭಾಷಾಂತರ– ಲೇಖಕ ಈ ಕೃತಿ ರಚನೆಗಿಂತ ಮುಂಚಿನ, ಕೃತಿ ರಚನಾ ಸಂದರ್ಭದಲ್ಲಿ ಜರುಗಿದ, ಜರುಗುತ್ತಿರುವ ಎಲ್ಲಾ ಚಳುವಳಿಗಳನ್ನು ಚಿತ್ರೀಕರಿಸಿದ್ದಾರೆ. ಪ್ರಥಮ, ದ್ವಿತೀಯ ಜಾಗತಿಕ ಯುದ್ಧಗಳ ನಡುವಿನ ಭಾರತ ದೇಶದ ಸ್ಥಿತಿ, ಪ್ರಪಂಚದಲ್ಲಿನ ಪರಿಣಾಮಗಳನ್ನು ಓದುಗರ ಕಣ್ಣಿಗೆ ಕಟ್ಟುವಂತೆ ಅಭಿವರ್ಣಿಸಿದ್ದಾನೆ. (ಮೂಲ; ಅನುಬಂಧ–೩ ಅಧ್ಯಾಯ–೪ ಕ್ರಸಂ. ೧)

ಈ ಎರಡು ಮುನ್ನುಡಿಯ ಮಾತುಗಳು ಆಯಾ ಕಾದಂಬರಿಯ ವಿಸ್ತಾರವನ್ನು ಓದುಗರಿಗೆ ಪರಿಚಯಿಸುತ್ತವೆ.

ಇಲ್ಲಿ ಕನ್ನಡ ಲೇಖಕರು ಕೇವಲ ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯ ಸ್ವರೂಪವನ್ನು ಚಿತ್ರಿಸಿದ್ದರೆ, ತೆಲುಗು ಲೇಖಕರು ಪ್ರಪಂಚ ಯುದ್ಧಗಳು, ದೇಶದ ಅಂದಿನ ಸ್ಥಿತಿಗತಿಗಳನ್ನು ಕುರಿತು ಹೆಚ್ಚಿನದಾಗಿ ಗಮನಿಸಿರುವುದನ್ನು ಕಾಣಬಹುದಾಗಿದೆ. ಈ ಎರಡು ಕೃತಿಗಳ ಕಾಲಘಟ್ಟ ಒಂದೇಯಾಗಿದ್ದರೂ ವಸ್ತುವಿಷಯಗಳು ಬೇರೆ, ಬೇರೆಯಾಗಿರುವುದು ಕಂಡುಬರುತ್ತದೆ. ಕನ್ನಡ ಲೇಖಕರ ಮನದಲ್ಲಿ ದೇಶ ಬಹುಬೇಗ ಬಿಡುಗಡೆ ಪಡೆಯಬೇಕು ಎಂಬ ಹಂಬಲ ಕಂಡುಬರುತ್ತದೆ. ಆದರೆ ತೆಲುಗು ಲೇಖಕರ ಈ ಕೃತಿಯಲ್ಲಿ ಕ್ರಾಂತಿಕಾರಕ ಛಾಯೆ ಎಲ್ಲಿಯೂ ಕಂಡುಬರದೇ ಮುಖ್ಯವಾಗಿ ಎರಡು ಜಾಗತಿಕ ಯುದ್ಧಗಳ ಮುಂದಿನ ಮತ್ತು ನಂತರದ ಭಾರತ ದೇಶದಲ್ಲಿ ಒಡಮೂಡಿದ ಸ್ವಾತಂತ್ರ್ಯ ಚಳುವಳಿಯ ಪ್ರವಾಹವನ್ನು ಮತ್ತು ಜೊತೆಗೆ ಜಾಗತಿಕ ಯುದ್ಧಗಳ ಸ್ವರೂಪವನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

ಕನ್ನಡದ ರಕ್ತತರ್ಪಣ ಕಾದಂಬರಿಯಲ್ಲಿ ಚಂದ್ರಶೇಖರ ಕಥಾನಾಯಕ, ಸೂತ್ರದಾರನಾಗಿರುತ್ತಾನೆ. ಈ ಕಾದಂಬರಿಯಲ್ಲಿ ಮಹಾತ್ಮಗಾಂಧೀಜಿಯವರು ಸೇರಿದಂತೆ ಹಲವಾರು ರಾಷ್ಟ್ರೀಯ ನಾಯಕರನ್ನು ಮುಂಬೈನಲ್ಲಿ ಬಂಧಿಸಿದ್ದಕ್ಕಾಗಿ ಪಟ್ಟಣದಲ್ಲಿ ಹರತಾಳ ನಡೆದು ಅನೇಕ ವಿದ್ಯಾರ್ಥಿಗಳನ್ನು ಸಾಮಾನ್ಯ ಜನರನ್ನು ಪೊಲೀಸರು ಅನೇಕ ರೀತಿಯಲ್ಲಿ ಹಿಂಸೆ ಮಾಡುತ್ತಾರೆ. ಆ ನರಕದಿಂದ ತಪ್ಪಿಸಿಕೊಂಡು ಚಂದ್ರಶೇಖರ ಅಜ್ಜಿಗ ಎಂಬ ರೈತಾಪಿಯ ಎತ್ತಿನ ಗಾಡಿಯಲ್ಲಿ ಸೋಮಲಾಪುರ ಎಂಬ ಹಳ್ಳಿಯನ್ನು ಸೇರಿಕೊಳ್ಳುತ್ತಾನೆ. ಅವನ ಹಿಂದೆಯೇ ಸ್ವಾತಂತ್ರ್ಯದ ಕಿಚ್ಚು ಹಳ್ಳಿಯನ್ನು ಸೇರಿ ಮುಗ್ಧವಾಗಿ ಮಲಗಿದ್ದ ಹಳ್ಳಿಯ ಜನರನ್ನು ಬಡಿದೆಬ್ಬಿಸುತ್ತದೆ.

ತೆಲುಗಿನ ಕೋನಂಗಿ ಕಾದಂಬರಿಯ ನಾಯಕ ಕೋನಂಗಿ. ಈ ಕಾದಂಬರಿಯಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದು ಅಂದಿನ ಮಂತ್ರಿ ಅಯ್ಯಂಗಾರ್ ತೆಲುಗು ದೇಶವನ್ನು ಅಭಿವೃದ್ಧಿಪಡಿಸುವಲ್ಲಿ ಹಿಂದೆ ಬಿದ್ದು ಮಂತ್ರಿ ರಾಜೀನಾಮೆ ಮಾಡುವ ಸಂದರ್ಭದಲ್ಲಿ ಕೋನಂಗಿ ತೆಲುಗು ದೇಶವನ್ನು ತೊರೆದು ಉದ್ಯೋಗ ಹರಸಿ ಮದ್ರಾಸಿಗೆ ಬರುತ್ತಾನೆ.

ಕನ್ನಡ ಭಾಷಾಂತರ

'ವೈಟ್‌ವೆ ಲೆಯಿಡೆಲ್ ಕಂಪನಿಯಲ್ಲಿ ಸೇಲ್ಸ್‌ಮ್ಯಾನ್ ಆಗಿ ಉದ್ಯೋಗಕ್ಕೆ ಸೇರುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೪ ಕ್ರಸಂ. ೨) ಆ ಕಂಪನಿಗೆ ಆಂಗ್ಲ ವ್ಯಕ್ತಿ ಮ್ಯಾನೇಜರ್ ಆಗಿರುತ್ತಾನೆ. ಮ್ಯಾನೇಜರ್ ಕೋನಂಗಿಗೆ ಹೀಗೆ ಹೇಳುತ್ತಾನೆ.

ಕನ್ನಡ ಭಾಷಾಂತರ

ಒಂದು ವಸ್ತುವನ್ನು ಕೊಳ್ಳಲಿಕ್ಕೆ ಬಂದವನ (ಕೈಯಿಂದ) ಕಡೆಯಿಂದ ಹತ್ತು ವಸ್ತುಗಳನ್ನು ತೆಗೆದುಕೊಳ್ಳುವಂತೆ ಮಾಡಬೇಕು. ಸುಮ್ಮನೆ ನೋಡಲಿಕ್ಕೆ ಬಂದರೆ ಐವತ್ತು ವಸ್ತುಗಳನ್ನು ಕೊಂಡುಕೊಳ್ಳುವಂತೆ ಮಾಡಬೇಕು ಎಂದು ಬೋಧಿಸುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–

೪ ಕ್ರಸಂ. ೩) ಇಲ್ಲಿ ಲೇಖಕರು ತಮ್ಮದೇ ಎಂದು ಗುರುತಿಸಿಕೊಂಡಿರುವ ಆಂಧ್ರಪ್ರದೇಶವನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯಬೇಕು ಎಂಬ ಲೇಖಕರ ದ್ವಿಗುಣ ಚಿಂತನೆಯನ್ನು ಗುರುತಿಸಬಹುದಾಗಿದೆ.

ರಕ್ತತರ್ಪಣ ಕಾದಂಬರಿಯಲ್ಲಿ ಕಾಂಗ್ರೆಸ್ ನಾಯಕರನ್ನು ಬಂಧಿಸಿ ರಾಜಕೀಯವಾಗಿ ವಿದೇಶದ ಜನತೆಯಿಂದ ಶೋಷಣೆ ನಡೆಸುವುದು ಕಂಡುಬರುತ್ತದೆ. ಕಾದಂಬರಿಯ ನಾಯಕ ಪಟ್ಟಣವನ್ನು ತೊರೆದು ಹಳ್ಳಿಯನ್ನು ಸೇರಿಕೊಂಡು ಹಳ್ಳಿಯ ಜನರು ಸ್ವಾತಂತ್ರ್ಯ ಚಳವಳಿಗೆ ಪ್ರೇರೇಪಿಸುವಂತೆ ಮಾಡುವ ತ.ರಾ.ಸು. ಅವರ ಅಭಿಪ್ರಾಯವನ್ನು ಗ್ರಹಿಸಬಹುದು. ನಿಜವಾದ ಹಿಂದೂಸ್ತಾನ ಇರುವುದು ಪಟ್ಟಣಗಳಲ್ಲಿ ಅಲ್ಲ ಹಳ್ಳಿಗಳಲ್ಲಿ ಎಂದು ಗಾಂಧಿ ಹೇಳಿದ ಮಾತನ್ನು ಮನದಲ್ಲಿಟ್ಟುಕೊಂಡು ಲೇಖಕರು ಈ ಪ್ರಯತ್ನವನ್ನು ಮಾಡಿದ್ದಾರೆನ್ನಬಹುದು.

ತೆಲುಗಿನ ಕೋನಂಗಿ ಕಾದಂಬರಿಯಲ್ಲಿ ತೆಲುಗು ದೇಶದಲ್ಲಿ ಕಾಂಗ್ರೆಸ್ ಆಳ್ವಿಕೆ ಅಸ್ತಿತ್ವದಲ್ಲಿದ್ದೂ, ಅದು ಜನರ ಮನವನ್ನು ಗೆಲ್ಲುವಲ್ಲಿ ವಿಫಲವಾಗಿದ್ದನ್ನು, ಆ ಪ್ರದೇಶದ ಜನ ಬೇರೆ ಪ್ರಾಂತ್ಯಕ್ಕೆ ವಲಸೆ ಹೋಗುವುದರ ಮೂಲಕ ಸೂಕ್ಷ್ಮವಾಗಿ ತಿಳಿಸುತ್ತಲೇ, ಕೋನಂಗಿಯನ್ನು ಬ್ರಿಟಿಷ್ ಕಂಪನಿಯಲ್ಲಿ ಉದ್ಯೋಗಕ್ಕೆ ತೊಡಗಿಸಿ ಬ್ರಿಟಿಷ್ ಸರಕಾರದ ಆರ್ಥಿಕ ವಸಾಹತುಶಾಹಿ ಮುಖದ ಪರಿಚಯವನ್ನು ಮಾಡುತ್ತಾರೆ. ಇಲ್ಲಿ ಲೇಖಕರು ರಾಜಕೀಯವಾಗಿ ಕಾಂಗ್ರೆಸ್ ಸರ್ಕಾರದ ಅತಂತ್ರ ಸ್ಥಿತಿಯನ್ನು, ಆರ್ಥಿಕವಾಗಿ ಬ್ರಿಟಿಷರು ಭಾರತವನ್ನು ಶೋಷಿಸುತ್ತಿದ್ದ ವಿಧಾನವನ್ನು ಒಂದರೊಳಗೊಂಡು ಬೆರಸಿ ಕಾದಂಬರಿಯನ್ನು ಸಂಕೀರ್ಣವಾಗಿಸಿದ್ದಾರೆ.

ವಸಾಹತು ಆಳ್ವಿಕೆಯಲ್ಲಿ ಸ್ವಾತಂತ್ರ್ಯ ಹೋರಾಟ ಮಾಡುವುದು ಅಪರಾಧವಲ್ಲದೆ, ಹೋರಾಟಗಾರರಿಗೆ ಆಶ್ರಯ ನೀಡುವುದು ಅಷ್ಟೇ ಅಪರಾಧವಾಗಿತ್ತು. ರಕ್ತತರ್ಪಣ ಕಾದಂಬರಿಯ ನಾಯಕ ಚಂದ್ರಶೇಖರನು ಪಟ್ಟಣದಿಂದ ಸೋಮಲಾಪುರಕ್ಕೆ ಹುಲ್ಲಿನಗಾಡಿಯಲ್ಲಿ ಅವಿತುಕೊಂಡು ಬರುತ್ತಾನೆ. ಗಾಯಾಳುವಾಗಿ ಬಂದ ಚಂದ್ರಶೇಖರನನ್ನು ಬೊಮ್ಮಯ್ಯನು ಆ ಹಳ್ಳಿಯ ಶ್ಯಾನುಭೋಗ ಸೀತಾರಾಮಯ್ಯನಿಗೆ ಪರಿಚಯಿಸಿದಾಗ, ಅವನ ಕುಲ ಮತ ವಿಚಾರವನ್ನು ತಿಳಿದುಕೊಂಡು ಚಂದ್ರಶೇಖರನನ್ನು ಮನೆಯೊಳಗೆ ಸೇರಿಸಿಕೊಳ್ಳುತ್ತಾರೆ. ಆಗ ಚಂದ್ರಶೇಖರನು ಆಡುವ ದೇಶದ ಬಿಡುಗಡೆಯ ಕದನವನ್ನು ಬಣ್ಣಿಸುವ ಒಂದೊಂದು ಮಾತೂ ಮಸೆದ ಮಿಂಚಾಗುತ್ತಿತ್ತು. ಕನ್ನಡನಾಡಿನಲ್ಲಿಯೇ ನಡೆದ "ಬಾರ್ಡೋಲಿ, ಸಿರಸಿ, ಸಿದ್ದಾಪುರ, ಸತ್ಯಾಗ್ರಹವನ್ನು ವಿವರಿಸುವಾಗ, ದೂರದ ನಾಡಿನಲ್ಲಿ ಹಗಲಿನಲ್ಲೆ ನಡೆದ ಜಲಿಯನ್ ವಾಲಾಬಾಗಿನ ಕಗ್ಗೊಲೆ, ಅಮೃತಸರದ ಅಪಮಾನ ಮತ್ತು ಭಗತ್‌ಸಿಂಗ್, ರಾಜಗುರು, ಶುಕದೇವ, ಸೊಲ್ಲಾಪುರದ ಧನಸೆಟ್ಟಿ ಮಲ್ಲಪ್ಪ ಇವರನ್ನು ಗಲ್ಲಿಗೇರಿಸಿದ್ದನ್ನು ಬಣ್ಣಿಸುವಾಗ ಕ್ರೋಧ ಕೋಡಿ ಕಡಿದು ಜ್ವಾಲಾಮುಖಿಯಾಗುತ್ತಿದ್ದ." ಅಂತೆಯೇ ನೆಹರೂ, ಗಾಂಧೀಜಿ, ಮೋತಿಲಾಲ ನೆಹರೂ ಅವರ ಜೀವನ ಕಥೆಯನ್ನು ಹೇಳುವಾಗ ತಾನೂ ಕಣ್ಣೀರಿಟ್ಟು, ಕೇಳುವವರ ಕಣ್ಣೂ ತೇವವಾಗುವ ಹಾಗೆ ಮಾಡುತ್ತಿದ್ದ (ರಕ್ತತರ್ಪಣ, ಪುಟ–

೨೧, ೧೯೪೬). ಹೀಗೆ ಸ್ವಾತಂತ್ರ್ಯ ಚಳುವಳಿಯ ಗಂಧಗಾಳಿ ಗೊತ್ತಿಲ್ಲದ ಹಳ್ಳಿಯ ಜನತೆಗೆ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಅಳಿಸಲಾಗದ ರೀತಿಯಲ್ಲಿ ಮಿಂಚಿ ಮರೆಯಾದ, ದೇಶಕ್ಕಾಗಿ ಅವಿರತವಾಗಿ ಹೋರಾಡಿ ತನುಮನಧನವನ್ನು ಅರ್ಪಿಸಿದ ಚಾರಿತ್ರಿಕ ವ್ಯಕ್ತಿಗಳ ತ್ಯಾಗ, ಸಾಹಸ ಕಾರ್ಯಗಳನ್ನು ಮತ್ತು ಚಾರಿತ್ರಿಕ ಘಟನೆಗಳನ್ನು ಲೇಖಕರು ಚಂದ್ರಶೇಖರನ ಮೂಲಕ ಹೇಳಿಸುವುದರ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಪಟ್ಟ ವಿವರಗಳನ್ನು ಕಾದಂಬರಿಯಲ್ಲಿ ದಾಖಲಿಸಿದ್ದಾರೆ.

ಇದಕ್ಕೆ ಪ್ರತಿಯಾಗಿ ಕೋನಂಗಿ ಕಾದಂಬರಿಯಲ್ಲಿ ಲೇಖಕರು ರಾಷ್ಟ್ರೀಯ ಕಾಂಗ್ರೆಸ್, ಅದರ ನಾಯಕರುಗಳು ವಿಧಾನವು ಈ ರೀತಿ ಇದೆ.

ಮಹಾಯುದ್ಧದಲ್ಲಿ ಬ್ರಿಟಿಷ್ ಸರ್ಕಾರದ ಪರವಾಗಿ ನಿಲ್ಲುವುದರ ಕುರಿತು ಚೆಟ್ಟಿಯಾರ್ ಮತ್ತು ಜಯಲಕ್ಷ್ಮಿ ನಡುವೆ ನಡೆದ ಸಂಭಾಷಣೆ:

ಕನ್ನಡ ಭಾಷಾಂತರ

ಚೆಟ್ಟಿಯಾರ್–ಅತ್ತೆ, ಯುದ್ಧ ನಡೆಯುತ್ತದೆ. ಸರ್ಕಾರಕ್ಕೆ ನಾವು ಸಹಾಯ ಮಾಡಬೇಕು.

ಜಯಲಕ್ಷ್ಮಿ – ಸರ್ಕಾರಕ್ಕೆ ನಾವು ಏಕೆ? ಪ್ರಭುತ್ವಕ್ಕಿಂತಲೂ ಸರ್ಕಾರಕ್ಕಿಂತಲೂ ಭಾಗವಂತರಾದವರು ಯಾರು?

ಚೆಟ್ಟಿಯಾರ್ – ಪ್ರಭುತ್ವ ಅಂದರೆ ನಾವೇ ತಾನೆ.

ಜಯಲಕ್ಷ್ಮಿ – ನಾವು ಪ್ರಭುತ್ವ ಹೇಗೆ ಆಗುತ್ತೀವಿ.

ಚೆಟ್ಟಿಯಾರ್ – ನಮ್ಮ ಮಂತ್ರಿಗಳೆ ಅಲ್ಲವೆ ರಾಜ್ಯಭಾರ ಮಾಡುತ್ತಿರುವುದು?

ಜಯಲಕ್ಷ್ಮಿ – ಹಾಗಾದರೆ ಆಡಳಿತ ನಡೆಸುತ್ತಿರುವುದು ಬಿಳಿಯರು ಅಲ್ಲವೆ? ಯಾವ ಮಂತ್ರಿಗಳು ಬಂದರೂ ಅಧಿಕಾರ (ರಾಜ್ಯ) ಬಿಳಿಯರದೆ! ಜಸ್ಟೀಸ್ ಪಾರ್ಟಿಯವರು ಉದ್ಯೋಗದ ಪಾರ್ಟಿಯವರು ಬ್ರಾಹ್ಮಣರ ದ್ವೇಷದ ಮೇಲೆಯೇ ಬದುಕಿದರು. ಅಷ್ಟರಲ್ಲಿಯೇ ಕಾಂಗ್ರೆಸ್ ಬಂದಿತು. ಏನಾಗಿ ಹೋದರು ಜಸ್ಟೀಸ್ ಪಾರ್ಟಿಯವರು! ನೀವೇನು ಹೈಕೋರ್ಟ್ ನ್ಯಾಯವಾದಿಗಳ!

ಚೆಟ್ಟಿಯಾರ್ – ಅಲ್ಲ ಅತ್ತೆ! ಬ್ರಾಹ್ಮಣರು ತಮ್ಮ ರಾಜ್ಯವನ್ನು ಸ್ಥಾಪಿಸಿದರು. ನಾವೆಲ್ಲರೂ ಅವರಿಗೆ ಬುದ್ಧಿ ಹೇಳಿದಿವಿ.

ಜಯಲಕ್ಷ್ಮಿ – ನಾನು ಬ್ರಾಹ್ಮಣ ಸ್ತ್ರೀ. ಅಯ್ಯಂಗಾರಿ ಅವರ ಹೆಂಡತಿ.

ಚೆಟ್ಟಿಯಾರ್ – ಆದರೂ ಕಾನೂನಿನ ಪ್ರಕಾರ ನೀವು ಬ್ರಾಹ್ಮಣರಲ್ಲ.

ಜಯಲಕ್ಷ್ಮಿ – ಹಾಗಾದರೆ ಕಾಂಗ್ರೆಸಿನವರು ಯಾರು?

ಚೆಟ್ಟಿಯಾರ್ – ಅವರು ಬ್ರಾಹ್ಮಣರು.

ಜಯಲಕ್ಷ್ಮಿ – ಪಟೇಲ್, ರಾಜೇಂದ್ರಬಾಬು, ಸುಬಾಸ್‌ಚಂದ್ರ ಬೋಸ್, ಆಜಾದ್, ಗಫೂರ್‌ಖಾನ್, ಅಷ್ಟೇ ಅಲ್ಲದೆ ಕಾಂಗ್ರೆಸಿನ ಮುಂದಾಳತ್ವ ವಹಿಸಿದ ಗಾಂಧೀಜಿ ಬ್ರಾಹ್ಮಣರಲ್ಲವೆ.

ಚೆಟ್ಟಿಯಾರ್ – ಅವರೆಲ್ಲಾ ಬ್ರಾಹ್ಮಣರ ಗುಲಾಮರು

ಜಯಲಕ್ಷ್ಮಿ – ಹಾಗಾದರೆ ಕಾಂಗ್ರೆಸ್ ಯಾಕೆ ಸೋತು ಹೋಯಿತು (ಅಧಿಕಾರಕ್ಕೆ ಬರಲಿಲ್ಲ) ಜಸ್ಟೀಸ್ ಪಾರ್ಟಿ ಹೇಳಲು ಹೆಸರಿಲ್ಲದಂತೆ ಹೋಗಿದೆ. (ಮೂಲ; ಅನುಬಂಧ–೩ ಅಧ್ಯಾಯ–೪ ಕ್ರಸಂ. ೪)

ಇಲ್ಲಿ ಬ್ರಿಟಿಷರನ್ನು ಬಿಳಿಯರು ಎಂದು ಸಂಕೇತಿಸಿದ್ದು, ರಾಷ್ಟ್ರೀಯ ಕಾಂಗ್ರಸ್ಸಿನ ಮಂತ್ರಿಗಳನ್ನು ಆ ಬಿಳಿಯರ ಅಣತಿಯಂತೆ ಆಳುವ ಗುಲಾಮರೆಂದು ಗುರುತಿಸಲಾಗಿದೆ. ಅಲ್ಲದೆ ರಾಷ್ಟ್ರೀಯ ನಾಯಕರನ್ನು ಜಾತಿಯ ಸಂಕೇತಗಳನ್ನಾಗಿ ಚಿತ್ರಿಸಲಾಗಿದೆ. ಭಾರತವನ್ನು ಆಳುವವರು ಬ್ರಿಟೀಶರು, ಅವರ ಅಧೀನದಲ್ಲಿ ಅಧಿಕಾರವನ್ನು ಅನುಭವಿಸುತ್ತಿರುವಂತಹ ರಾಷ್ಟ್ರನಾಯಕರು ಕೇವಲ ಒಂದು ಜಾತಿಗೆ ಮಾತ್ರ ಸೇರಿದವರು ಎಂಬಂತಹ ಅಂಶವನ್ನು ಚೆಟ್ಟಿಯಾರ್–ಜಯಲಕ್ಷ್ಮಿ ಅವರ ಚರ್ಚೆಯಲ್ಲಿ ಕಾಣಬಹುದಾಗಿದೆ. ರಕ್ತತರ್ಪಣ ಕಾದಂಬರಿ ಗಾಂಧಿ, ನೆಹರು, ಭಗತ್‌ಸಿಂಗ್, ಶುಕದೇವ, ರಾಜಗುರು ಮೊದಲಾದ ನಾಯಕರೆಲ್ಲರನ್ನೂ, ಅವರ ಜಾತಿಯಿಂದಾಗಲಿ, ಪ್ರದೇಶದಿಂದಾಗಲಿ ಇಲ್ಲವೆ ಮಂದಗಾಮಿ ಮತ್ತು ತೀವ್ರಗಾಮಿ ಎಂಬ ನಿಲುವಿನಿಂದಾಗಲಿ ಪ್ರತ್ಯೇಕಿಸಿ ಗುರುತಿಸದೆ ಅಖಂಡ ಭಾರತದ ರಾಷ್ಟ್ರೀಯ ನಾಯಕರಾಗಿ ವಿವರಿಸುತ್ತದೆ. ಹೀಗೆ ಒಂದೇ ಅಂಶವನ್ನು ಕುರಿತು ಇಬ್ಬರು ಲೇಖಕರ ಭಿನ್ನ ಚಿಂತನೆಗಳನ್ನು ತಿಳಿಯಬಹುದಾಗಿದೆ.

ಪ್ರಾಚೀನ ಕಾಲದಿಂದಲೂ ಪ್ರಾಂತೀಯ ಹೋರಾಟಗಳಲ್ಲಿಯೂ ಮತ್ತು ರಾಷ್ಟ್ರೀಯ ಚಳವಳಿಯಂತಹ ಮಹಾನ್ ಸಂಗ್ರಾಮಗಳಲ್ಲಿ ಹೆಚ್ಚಿನದಾಗಿ ಪಾಲ್ಗೊಂಡವರು ಹಳ್ಳಿ ಜನರೆ ಎಂಬುದನ್ನು ಗಮನಿಸಬಹುದಾಗಿದೆ. ಅಂತೆಯೇ ರಕ್ತತರ್ಪಣ ಕಾದಂಬರಿಯಲ್ಲಿ ಹಳ್ಳಿಯ ಯುವಪಡೆ 'ಪಾಲ' ಎಂಬುವನ ನಾಯಕತ್ವದಲ್ಲಿ ಹೆಂಡದಂಗಡಿಯ ಮುಂದೆ ಪಿಕೆಟಿಂಗ್ ಮಾಡಲು ಹೊರಟಿರುತ್ತದೆ. ಆ ಸಂದರ್ಭದಲ್ಲಿ ಒಬ್ಬ ಸ್ವಯಂಸೇವಕ 'ಇದೇನಾದ್ರೂ ಗೊತ್ತಾಗಿ ಪೊಲೀಸ್ನೋರು ಬಂದ್ರೆ ಯಾರೂ ಇಂತಿಂಥೋರು ಮಾಡಿದ್ರು ಅಂತ ಗುಟ್ಟು ಒಡೆಯೋಕಿಲ್ಲಾಂತ ಹನುಮಪ್ಪನ ಪಾದ ಮುಟ್ಟಿ ಪ್ರಮಾಣ ಮಾಡಬೇಕು' ಎಂದು ನಿರ್ಧಾರ ಮಾಡುತ್ತಾರೆ. ಜೊತೆಗೆ ಯುದ್ಧಕ್ಕೆ ಹೋಗುವಾಗ 'ಅಂಗೇ ಹೋಗೋದು ಸಂದಾಕಿರೊಲ್ಲ' ಎಂದು

"ಬರುವುದು ಬರಲೆಂದೆನ್ನುವೆವು
ಪರದಾಸ್ಯವ ನಿಂದಳಿಸುವೆವು
ಬಿಸಿಲನು ಚಳಿಯನ್ನು ಲೆಕ್ಕಿಸೆವು

ಹಸಿವಿನ ಕಿಚ್ಚನು ಸೈರಿಸೆವು
ಬೆತ್ತದ ಬಡಿತವ ತಿನ್ನುವೆವು
ಕತ್ತಿಯ ಕಡಿತವ ಸಹಿಸುವೆವು
ಕುಣಿಕುಣಿಯುತೆ ಹೋರಾಡುವೆವು
ರಣದೊಳು ಶೌರ್ಯವ ತೋರುವೆವು
ನಗುತೆಯ ಶೂಲವನೇರುವೆವು
ಜಗದೊಳು ಕೀರ್ತಿಯನುಳಿಸುವೆವು
ಹಾಡುತೆ ರಣದೊಳು ಸಾಯುವೆವು
ನಾಡಿನ ಮಾನವ ಕಾಯುವೆವು."
(ರಕ್ತತರ್ಪಣ, ಪುಟ-೮೮, ೧೯೪೬)

ಎನ್ನುತ್ತ, ದೇಶದ ಒಳಿತಿಗಾಗಿ ಚಳಿ, ಮಳೆ, ಬಿಸಿಲು ಎನ್ನದೆ ಅನ್ನದ ಹಸಿವನ್ನು ಸಹಿಸಿಕೊಂಡು, ಬ್ರಿಟೀಷರು ನೀಡುವಂತಹ ಹಿಂಸೆಗಳನ್ನು ಲೆಕ್ಕಿಸದೆ ಸಂತೋಷದಿಂದ ಹೋರಾಡುವುದನ್ನು, ರಣರಂಗದಲ್ಲಿ ವೀರಧೀರರಂತೆ ಕಾದಾಡಿ ತನು, ಮನ, ಧನವನ್ನು ಅರ್ಪಿಸಲು ಮುಂದಾಗಿರುವ ಹಳ್ಳಿ ಜನರ ದೇಶಪ್ರೇಮವನ್ನು ಚಿತ್ರಿಸಲಾಗಿದೆ. ಈ ಸಾಮೂಹಿಕ ಸಮಾವೇಶದ ಒಟ್ಟು ದನಿಯಾಗಿ ಮೇಲಿನ ಘೋಷಣಾ ಮಾತುಗಳು ಬಳಕೆಯಾಗಿವೆ.

ಕೋನಂಗಿ ಕಾದಂಬರಿಯಲ್ಲಿ ಸ್ವಾತಂತ್ರ್ಯಹೋರಾಟದ ಘೋಷಣಾ ಮಾತುಗಳು ಒಂದು ನಾಟಕದೊಳಗಿನ ಅಭಿನಯವಾಗಿ ಬಳಕೆಗೊಂಡಿವೆ. ಆಂಧ್ರಮಹಾಸಭೆಯವರು ರೂಪಿಸಿದ 'ಉಷಾಪರಿಣಯಂ' ಎಂಬ ಪೌರಾಣಿಕ ನಾಟಕದಲ್ಲಿ ಕೋನಂಗಿ ಪಾಲ್ಗೊಳ್ಳುತ್ತಾನೆ. ಈ ನಾಟಕದಲ್ಲಿ ಸಂಭಾಷಣೆ ಹೀಗಿದೆ.

ಕನ್ನಡ ಭಾಷಾಂತರ

ನಮ್ಮ ದೇಶಕ್ಕೆ ಈಗ ಒಳ್ಳೆಯ ಸಮಯ ಬಂದಿದೆ.
ಇದೇ ವರ್ಷ ನಮ್ಮ ದೇಶ ಬಂಧನ ಮುಕ್ತಿಗೊಳ್ಳುತ್ತದೆ.
ಹಿಂದೂ, ಮುಸ್ಲಿಂ, ಪಾರ್ಸಿ, ಸಿಕ್ಕು ಎಲ್ಲರೂ ಒಂದಾಗುತ್ತೇವೆ.
ಸಂಪೂರ್ಣವಾಗಿ ದೇಶಮಾತೆಗೆ ಸ್ವಾತಂತ್ರ್ಯವನ್ನು ತರುತ್ತೇವೆ.
(ಮೂಲ; ಅನುಬಂಧ-೩ ಅಧ್ಯಾಯ-೪ ಕ್ರ.ಸಂ. ೫)

ಸ್ವಾತಂತ್ರ್ಯ ಎಂಬ ಸ್ವತ್ತು-ಸಂಪತ್ತು ಕೇವಲ ಒಬ್ಬ ವ್ಯಕ್ತಿ, ಒಂದು ಜನಾಂಗದಿಂದ ಸಾಧಿತವಾಗುವಂತಹುದಲ್ಲ. ಅದರಿಂದಾಗಿ ಎಲ್ಲಾ ಧರ್ಮಗಳು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಸ್ವಾತಂತ್ರ್ಯ ತರುವಲ್ಲಿ ನೆರವಾದರೆ ಬಹುಬೇಗ ದೇಶ ಬಂಧನ ವಿಮುಕ್ತವಾಗುತ್ತದೆ ಎಂಬ ಆಕಾಂಕ್ಷೆ, ಅಭಿಲಾಷೆಯನ್ನು ಇಲ್ಲಿ ಗ್ರಹಿಸಬಹುದಾಗಿದೆ. ಈ ಸಂದೇಶವನ್ನು ಸಾರುವುದಕ್ಕಾಗಿ ಇಬ್ಬರೂ

ಲೇಖಕರು ಪದ್ಯವೊಂದನ್ನು ರಚಿಸಿ ಬಳಸಿದ್ದಾರೆ. ಕನ್ನಡ ಕಾದಂಬರಿಯು ಅದನ್ನು ಹೋರಾಟ ಗೀತೆಯಾಗಿ ಬಳಸಿದ್ದರೆ, ತೆಲುಗು ಕಾದಂಬರಿ ನಾಟಕದೊಳಗಿನ ಗೀತೆಯಾಗಿಸಿದೆ.

ರಕ್ತತರ್ಪಣ ಕಾದಂಬರಿಯಲ್ಲಿ ಚಂದ್ರಶೇಖರನು ಅಜ್ಜಿಗನ ಮುಖಂಡತ್ವದ ಹಳ್ಳಿಯ ಯುವಪಡೆಯನ್ನು ಸಿದ್ಧಮಾಡಿ ಕ್ರಾಂತಿಯ ಪಾಠವನ್ನು ಬೋಧಿಸುತ್ತಾನೆ. "ನಾವೆಲ್ಲ ಗುಲಾಮರಾಗಿದ್ದೇವೆ. ನಮ್ಮದು ಎಂದು ನಾವು ಜಂಬದಿಂದ ಹೇಳುವ ಈ ಭೂಮಿ, ಈ ಮಣ್ಣಿನಲ್ಲಿಯ ಒಂದು ಕಣವೂ ನಮ್ಮದಲ್ಲ. ನೂರೈವತ್ತು ವರ್ಷದಿಂದ ಇದು ಕಂಡವರ ಸ್ವತ್ತಾಗಿದೆ. ನೀವು ಹೊರಗಿನಿಂದ ಬಂದ ಮಾರಿಗಳು. ಬಿಟ್ಟು ಹೋಗಿ, ತೊಲಗಿ ಎಂದು ಹೇಳುತ್ತಿದೆ ಕಾಂಗ್ರೆಸ್. ನಮ್ಮದನ್ನು ನಮಗೆ ಕೊಡಿ ಎಂದುದಕ್ಕಾಗಿಯೇ ಸಾವಿರಾರು ಜನರ ಪ್ರಾಣ ಹೀರಿದೆ, ಈ ಪರದೇಶಿ ಮಾರಿ; ಕೋಟ್ಯಾಂತರ ಜನರನ್ನು ಕಳ್ಳಕಾಕರಂತೆ ಜೈಲಿಗಟ್ಟಿದೆ. ಲಾಠಿ ಬಂದೂಕಿನೇಟುಗಳ ಮಳೆಗೆರೆದು ನಮ್ಮ ಭೂಮಿಯನ್ನು ನೆತ್ತರಿನಲ್ಲಿ ನೆನೆಸಿದೆ.. ಆದ್ದರಿಂದಲೇ ಗಾಂಧೀಜಿ ಒಳ್ಳೆಮಾತಿನಲ್ಲಿ ಹೋಗಿ ಎನ್ನುವುದನ್ನು ಬಿಟ್ಟು ನಾಯಿಯನ್ನು 'ಹಚಾ' ಎನ್ನುವ ಹಾಗೆ "ಭಾರತ ಬಿಟ್ಟು ತೊಲಗಿ" ಎಂದು ಹೇಳಿದ್ದಾರೆ. ಮಾತಿಗೆ ಮಾವಿನಕಾಯಿ ಉದುರುವುದಿಲ್ಲ. ಇವರನ್ನು ಓಡಿಸಬೇಕಾದರೆ ಒಂದೇ ದಾರಿ. ನಾವೆಲ್ಲ ತೊಡೆ ತಟ್ಟಿ ಗಂಡುಗಳಾಗಿ ನಿಲ್ಲಬೇಕು (ರಕ್ತತರ್ಪಣ, ಪುಟ-೩೨-೩೩, ೧೯೪೬)

ಚಂದ್ರಶೇಖರನ ಈ ಮಾತುಗಳು ದೇಶಾಭಿಮಾನ, ಗಾಂಧೀಜಿಯವರ ಮೇಲಿನ ಗೌರವ, ಭಕ್ತಿ, ಅವರ ತತ್ವಗಳನ್ನು ಯಥಾವತ್ತಾಗಿ ಸ್ವೀಕಾರ ಮಾಡುವ, ಅವರ ಮಾತುಗಳಿಂದ ಪ್ರೇರಿತನಾಗಿ ಯುದ್ಧಕ್ಕೆ ಸಿದ್ದವಾಗುತ್ತಿರುವುದನ್ನು, ಯುವಪಡೆಗೆ ಸೇನಾಧಿಪತಿಯಂತೆ ಸಿದ್ಧವಾಗುವುದನ್ನು ಬಿಂಬಿತವಾಗಿದ್ದು, ಇದು ಕ್ವಿಟ್ ಇಂಡಿಯಾ ಚಳವಳಿಯ ಸ್ವರೂಪ, ಪ್ರಭಾವವನ್ನು ಪ್ರಧಾನವಾಗಿ ಬಳಸಿಕೊಂಡದ್ದಾಗಿದೆ.

ಇದಕ್ಕೆ ಸಂವಾದಿಯಾಗಿ ಕೋನಂಗಿ ಕಾದಂಬರಿಯಲ್ಲಿ ಕ್ವಿಟ್ ಇಂಡಿಯಾ ಚಳುವಳಿಯನ್ನು ಪ್ರತಿನಿಧಿಸುವ ಕ್ರಮ ಹೀಗಿದೆ:

ಕನ್ನಡ ಭಾಷಾಂತರ

ರಾಷ್ಟ್ರನಾಯಕರು, ಜಿಲ್ಲಾ ನಾಯಕರು ಬಂಧಿತರಾಗಿದ್ದಾರೆ. ಅಸಂಖ್ಯಾತ ಜನರು ರೈಲುಗಳನ್ನು ತಡೆದು, ಬೋಗಿಗಳಿಗೆ ಬೆಂಕಿ ಹಚ್ಚಿದ್ದಾರೆ. ಪಟ್ಟಾಲುಗಳನ್ನು ಎಳೆದು ಕಿತ್ತು ಬಿಸಾಡಿದರು. ವಿದ್ಯುತ್ ಕಂಬ ತಂತಿಗಳನ್ನು ಉರುಳಿಸಿದರು. ರೈಲ್ವೆ ಸ್ಟೇಷನ್, ತಾಲೂಕಾಫೀಸು, ಕಲೆಕ್ಟರ್ ಆಫೀಸುಗಳಿಗೆ ಬೆಂಕಿ ಹಚ್ಚಿದರು. ಅನೇಕ ಸ್ಥಳಗಳಲ್ಲಿ ಪೊಲೀಸರ ಮೇಲೆ ಗುಂಡಿನ ಸುರಿಮಳೆ, ಕೆಲವು ಕಡೆ ಪೊಲೀಸರನ್ನೆ ಸುಟ್ಟು ಹಾಕಿದ್ದಾರೆ. ಅಪಾರವಾದ ದೇಶಪ್ರೇಮವನ್ನು ಹೊಂದಿದ ರಾಷ್ಟ್ರೀಯ ನಾಯಕರು ದೇಶದ ಮೂಲೆ ಮೂಲೆಗೂ ತೆರಳಿ ಹೋರಾಟ ನಡೆಸುತ್ತಿದ್ದಾರೆ. (ಮೂಲ; ಅನುಬಂಧ-೩ ಅಧ್ಯಾಯ-೪ ಕ್ರ.ಸಂ. ೬)

ಗಾಂಧೀಜಿ ಮುಂಬೈನಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ 'ಮಾಡು ಇಲ್ಲವೆ ಮಡಿ' ಕರೆಗೆ ಆದೇಶವಿತ್ತಾಗ ಗಾಂಧೀಜಿ ಸೇರಿದಂತೆ ಅನೇಕ ರಾಷ್ಟ್ರೀಯ ನಾಯಕರನ್ನು ಬ್ರಿಟಿಷ್ ಸರ್ಕಾರ ಬಂಧಿಸುತ್ತದೆ. ಆಗ ದೇಶವನ್ನು ಮುನ್ನಡೆಸುವ ನಾಯಕರಿಲ್ಲದೆ ಜನರಿಗೆ ಹೇಗೆ ತೋಚುತ್ತದೆಯೋ ಹಾಗೆ ಹೋರಾಟವನ್ನು ಮುಂದುವರಿಸುತ್ತಾರೆ. ಸರ್ಕಾರದ ಅನೇಕ ಸೌಲಭ್ಯಗಳನ್ನು ನಾಶಪಡಿಸುತ್ತಾರೆ. ಹೀಗೆ ದಿಕ್ಕು-ದಿಸೆಯಿಲ್ಲದ ಮುಂದುವರಿದ ಕ್ವಿಟ್ ಇಂಡಿಯಾ ಚಳವಳಿಯ ಸ್ವರೂಪವನ್ನು ತೆಲುಗು ಲೇಖಕರು ಇಲ್ಲಿ ಚಿತ್ರಿಸಿದ್ದಾರೆ. ಹೀಗೆ ಕನ್ನಡ ಮತ್ತು ತೆಲುಗು ಕೃತಿಗಳೆರಡು ಕ್ವಿಟ್ ಇಂಡಿಯಾ ಚಳವಳಿಯ ಸ್ವರೂಪದ ಎರಡು ಭಿನ್ನ ಚಿತ್ರಗಳನ್ನು ಕಟ್ಟಿಕೊಡುತ್ತವೆ. ಕನ್ನಡದ ಕೃತಿ ಅದರ ವ್ಯವಸ್ಥಿತವಾದ, ಮಂದಗಾಮಿ ಗುಣವನ್ನು ಎತ್ತಿಹಿಡಿದರೆ, ತೆಲುಗು ಕೃತಿ ಅದರ ತೀವ್ರವಾದಿ ಸ್ವರೂಪವನ್ನು ಎತ್ತಿ ಹಿಡಿಯುತ್ತದೆ.

ರಕ್ತತರ್ಪಣ ಕಾದಂಬರಿಯಲ್ಲಿ ಯುವಕರ ಮುಂದಾಳು ಅಜ್ಜಿಗ ಮತ್ತು ಶಾನುಬೋಗ ಸೀತಾರಾಮಯ್ಯ ಬ್ರಿಟಿಷ್ ಸರ್ಕಾರಕ್ಕೆ ಚಂದ್ರಶೇಖರನ ಸುಳಿವು ಕೊಡದೆ ಇದ್ದುದರಿಂದ ಅಜ್ಜಿಗನನ್ನು ವಿವಿಧ ರೀತಿಯಾಗಿ ಹೊಡೆದು ಹಿಂಸೆ ನೀಡಿದ್ದಲ್ಲದೆ ಜೈಲಿಗೆ ಕರೆದೊಯ್ಯುತ್ತಾರೆ. ಜೊತೆಯಲ್ಲಿಯೆ ಸೀತಾರಾಮಯ್ಯನನ್ನು ಹೋರಾಟಗಾರರಿಗೆ ನೆರವು ನೀಡುತ್ತಾನೆ, ಚಳವಳಿಗೆ ಬೆಂಬಲ ನೀಡುತ್ತಾನೆ ಎಂಬ ಆರೋಪದಡಿ ಅರೆಸ್ಟ್ ಮಾಡುತ್ತಾರೆ. ಆಗ ಕ್ರಾಂತಿಕಾರಿಗಳಾದ ಅಜ್ಜಿಗನ ಸಹಚರರಾದ ಓಬಣ್ಣ, ಕರಿಯ, ಪಾಲ ಎಂಬುವರು ಇದಕ್ಕೆಲ್ಲಾ ಬಾಪಾರೆಡ್ಡಿಯೇ ಕಾರಣ ಎಂದು "ಸುಡ್ಗಾಡ್ ಬಾಪಾರೆಡ್ಡೀನ ಹಳ್ಳಿಯಿಂದ ಓಡಿಸ್ದೊರ್ತು ನಮಗ್ಯಾರ್ಗೂ ಸುಖವಿಲ್ಲ, ಹೊತ್ತಾರೆ ಮನೆ ಬಿಟ್ಟು ಹೊರೀಕೊಂಡ್ಲೀ ನೋಡು, ಅವನ ಚರ್ಮ ಸುಲೀದಿದ್ರೆ" ಎಂದು ರೇಗಾಡುತ್ತಾರೆ. ಆಗ ಚಂದ್ರಶೇಖರನು "ಹಾಗೆಂತ ಅವರನ್ನು ಕೊಂದುಹಾಕುವುದೊಂದೇ ದಾರಿಯಲ್ಲ. ನಮ್ಮ ಒಳ್ಳೇತನದಿಂದ ಅವರನ್ನು ನಮ್ಮ ದಾರಿಗೆ ತಂದುಕೊಬೇಕೇ ಹೊರತು, ಆಗದವರನ್ನೆಲ್ಲ ಕೊಲ್ಲುತ್ತೇವೆ ಅಂತ ಹೊರಟರೆ ಅದಕ್ಕೆ ಕೊನೆಯೆಲ್ಲಿ? ಹಿಂಸೆಯದೊಂದು ವಿಷಚಕ್ರ, ಮುಳ್ಳುಬಿತ್ತಿ ಹೂ ಬೆಳೆಯುವುದಕ್ಕಾಗುತ್ತೇನು, ಮುಳ್ಳಿನ ಫಲ ಮುಳ್ಳೇ" ಎನ್ನುತ್ತಾನೆ.(ರಕ್ತತರ್ಪಣ, ಪುಟ-೧೦೩-೧೦೪, ೧೯೪೬).

ಚಂದ್ರಶೇಖರ ಎಷ್ಟೇ ಕ್ರಾಂತಿಕಾರಿಯಾಗಿ ಭಾಷಣ ಮಾಡಿದರೂ ಬಾಪಾರೆಡ್ಡಿಯನ್ನು ಪ್ರೀತಿ, ವಿಶ್ವಾಸ, ಶಾಂತಿ ಸಂಯಮದಿಂದ ಸರಿದಾರಿಗೆ ತರಬೇಕು ಎಂಬ ಅವನ ಮಾತುಗಳಲ್ಲಿ ಗಾಂಧೀಜಿಯವರ ಅಹಿಂಸಾ ಮಾರ್ಗವನ್ನು ಕಾಣಬಹುದಾಗಿದೆ. ಅಂತೆಯೇ ಕೋನಂಗಿ ಕಾದಂಬರಿಯಲ್ಲಿ ಚೆಟ್ಟಿಯಾರ್ ಕೋನಂಗಿಯನ್ನು ಆಳುಗಳ ಮುಖಾಂತರ ಹೊಡೆಸಿದರೂ ಸಹ ಕೊನೆಗೆ ಕೋನಂಗಿ ಚೆಟ್ಟಿಯಾರ್‌ನನ್ನು ಕ್ಷಮಿಸುವಲ್ಲಿ ಗಾಂಧಿಯ ಅಹಿಂಸಾವಾದದ ಪ್ರಭಾವವನ್ನು ಕಾಣಬಹುದು. ಆತನ ವಿಶಾಲ ಹೃದಯದ ಮನೋಭಾವ ಮತ್ತು ಕೋನಂಗಿ ಪರಿಪಾಲಿಸುತ್ತಿರುವ ತತ್ವದಲ್ಲಿ ಗಾಂಧೀಜಿಯವರ ಅಹಿಂಸಾ ತತ್ವವನ್ನು ಕಾಣಬಹುದಾಗಿದೆ. ಹೀಗೆ ಕನ್ನಡ-ತೆಲುಗು ಲೇಖಕರಿಬ್ಬರೂ ಅಂತಿಮವಾಗಿ ತಮ್ಮ ತಮ್ಮ ಕಾದಂಬರಿಗಳಲ್ಲಿ ನಾಯಕರನ್ನೂ ಅಹಿಂಸಾವಾದಿಗಳಾಗಿ ಚಿತ್ರಿಸಿರುವುದು ಕಂಡುಬರುತ್ತದೆ.

ರಕ್ತತರ್ಪಣ ಕಾದಂಬರಿಯಲ್ಲಿ ಚಂದ್ರಶೇಖರನು ಬ್ರಿಟಿಷರನ್ನು ದೇಶದಿಂದ ಹೊರಗೆ (ದೂಡಲು) ಕಳುಹಿಸಬೇಕೆಂದರೆ ಅವರಿಗೆ ಕಂದಾಯ ಕೊಡಬೇಡಿ. ಅವರ ಕೋರ್ಟುಗಳಲ್ಲಿ ವ್ಯಾಜ್ಯ ಹೂಡಬೇಡಿ. ಅವರ ಮಾರಿ ಬಾಯಿಗೆ ಕಷ್ಟಪಟ್ಟು ದುಡಿದ ದುಡ್ಡು ಸುರಿಯಬೇಡಿ. ಹೆಂಡ ಕುಡಿದು ಮೈಮರೆತು ಅವರ ಬೊಕ್ಕಸ ತುಂಬಬೇಡಿ. ನೀವು ಹೀಗೆ ಮಾಡುವುದರಿಂದ ಅವರು ನಿಮ್ಮ ಮೇಲೆ ಇಲ್ಲದ ಅತ್ಯಾಚಾರ ಮಾಡಬಹುದು. ನಿಮ್ಮ ಮನೆಮಠ ಹಾಳು ಮಾಡಬಹುದು. ನಿಮ್ಮ ಪ್ರಾಣ ತೆಗೆಯಬಹುದು. ಆದರೆ ನೀವು ಮಾತ್ರ ಯಾವುದಕ್ಕೂ ಹೆದರಬಾರದು. ಪ್ರಾಣ ಹೋದರೂ ಮುಂದಿಟ್ಟ ಹೆಜ್ಜೆ ಹಿಂದಿಡಬಾರದು (ರಕ್ತತರ್ಪಣ ಪುಟ–೩೩, ೧೯೪೬) ಎನ್ನುವಲ್ಲಿ, ಹಳ್ಳಿಯನ್ನು ಬದಲಾಯಿಸಲು ಪ್ರತಿಜ್ಞೆ ಮಾಡಿರುವ ಸೋಮಲಾಪುರದ ಕ್ರಾಂತಿವೀರರಿಗೆ ಕ್ರಾಂತಿಪಾಠ ಬೋಧಿಸುತ್ತಿರುವ ಚಂದ್ರಶೇಖರನ ಚಾಣಾಕ್ಷತನವನ್ನು ಗುರುತಿಸಬಹುದಾಗಿದೆ. ಅಲ್ಲದೆ ಗಾಂಧೀಜಿಯವರು ಕೈಗೊಂಡ ಅಸಹಕಾರ ಚಳವಳಿಯ ಸ್ವರೂಪವನ್ನು ಚಂದ್ರಶೇಖರನ ಈ ಮಾತುಗಳಲ್ಲಿ ತಿಳಿಯಬಹುದಾಗಿದೆ.

ಕೋನಂಗಿ ಕಾದಂಬರಿಯಲ್ಲಿ ಕೋನಂಗಿ 'ಖದ್ದರು ಪಂಚ, ಖದ್ದರು ಚೊಕ್ಕ ತೊಡುಕ್ಕೊನಿ, ಖದ್ದರು ಟೋಪಿ ಧರಿಂಚಿ ಗಾಂಧಿ ಮಹಾತ್ಮುನಿ ಮೀದ "ಕ್ವಿಟ್ ಇಂಡಿಯಾ" ನೀನಾದಪೂರಿತಮೈ ವಚ್ಚಿನ ಒಕ ಗೀತಾನ್ನಿ ಪಾಡುತಾಡು. ಆ ಗೀತ (ಕನ್ನಡ ಭಾಷಾಂತರ– ಕೋನಂಗಿ ಖಾದಿ ವಸ್ತ್ರ, ಖಾದಿ ಟೋಪಿ ತೊಟ್ಟುಕೊಂಡು ಕ್ವಿಟ್ ಇಂಡಿಯಾ ಚಳುವಳಿ ಕುರಿತ ಕವನವನ್ನು ಈ ರೀತಿ ಹಾಡುತ್ತಾನೆ)

ಕನ್ನಡ ಭಾಷಾಂತರ

ಮಹಾತ್ಮ ಗಾಂಧಿ! ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಕ್ವಿಟ್ ಇಂಡಿಯಾವನ್ನು ಎಂದು ದಿಢೀರನೆ ಮಂತ್ರ ಮಾಡಿದ್ದೀಯಾ

"ಬ್ರಿಟಿಷರ ಎದೆಯಲ್ಲಿ ನಡುಕ
ಉಂಟು ಮಾಡಿದ್ದೀಯಾ
ಇನ್ನೆಂದೆಂದಿಗೂ ನಿನ್ನ ಮಾತೆ
ನಮಗೆ ದೇಶವನ್ನು ಮುನ್ನಡೆಸುವ ಶಕ್ತಿಯಾಗಿ
ಸ್ವರಾಜ್ಯದೆಡೆಗೆ ಕೊಂಡೊಯ್ದಿದೆ
ಶರವೇಗದಂತೆ
ಮಹಾತ್ಮ....
ಬ್ರಿಟಿಷ್ ಪ್ರಭುತ್ವದ ಕಪಟತನಕ್ಕೆ
ಹೆದರದ ಶಕ್ತಿಯಾಗಿ ವಿಜೃಂಭಿಸಿ
ಹಿಂದೂ ಮುಸಲ್ಮಾನ
ಪಾರ್ಸಿ ಸಿಕ್ಕರ

ಸಂಯೋಗಕ್ಕೆ ಸಾಧನವಾದೆ
ಮಹಾತ್ಮಗಾಂಧೀಜಿ.....
ಅಧೋಗತಿಯಲ್ಲಿ ಬಿದ್ದು ಒದ್ದಾಡಿದ
ಹರಿಜನರೆಲ್ಲರನ್ನು ರಕ್ಷಿಸಿದ್ದೀಯಾ
ಅವರಿಗೆ ಮೂಲಭೂತ ಹಕ್ಕು ಸೌಲಭ್ಯ
ಗಳನ್ನು ಒದಗಿಸಿ ಕೊಟ್ಟಿದ್ದೀಯಾ
ಮಹಾತ್ಮ ಗಾಂಧೀಜಿ!
ಜಯ ಜಯ ಲೋಕಗುರು
ಸತ್ಯ, ಧರ್ಮವನ್ನು ಸಾಯಿಸಿದ ಅಳಿಸಿದ ಲೋಕ
ನಿತ್ಯದ ಬದುಕನ್ನು ತಿಳಿಯದ ಲೋಕ
ಅಮೃತವಾಣಿಯಂತಹ ನಿನ್ನ ವೇದ ವಾಕ್ಯವನ್ನು
ಆನಂದದಿಂದ ಪಾಲಿಸುವೆ!
ಜಯ ಜಯ!"
(ಮೂಲ; ಅನುಬಂಧ–೩ ಅಧ್ಯಾಯ–೪ ಕ್ರಸಂ. ೭)

ಗಾಂಧೀಜಿ ಕೈಗೊಂಡ ಚಳವಳಿಗಳಲ್ಲೆಲ್ಲಾ ಅತಿ ಪ್ರಮುಖವಾದದ್ದು, ತುಂಬಾ ಪರಿಣಾಮಕಾರಿಯಾದದ್ದು ಕ್ವಿಟ್ ಇಂಡಿಯಾ ಚಳವಳಿ. ಈ ಚಳವಳಿ ಬ್ರಿಟಿಷರ ಭದ್ರವಾದ ಕೋಟೆಯನ್ನು ತಲ್ಲಣಗೊಳಿಸಿದೆ. ಗಾಂಧೀಜಿಯವರ ಮಾತುಗಳನ್ನೆ ವೇದವಾಕ್ಯಗಳನ್ನಾಗಿಸಿಕೊಂಡು ಚಳವಳಿಯನ್ನು ಸ್ವಾತಂತ್ರ್ಯದ, ಸ್ವರಾಜ್ಯದ ಸಮೀಪ ಸಾಗಿಸಿಕೊಂಡು ಬಂದಿದೆ. ಗಾಂಧಿ ಎಂಬ ಮಹಾತ್ಮ ಬ್ರಿಟಿಷ್ ಪ್ರಭುತ್ವದ ಮಾಯಾಜಾಲಕ್ಕೆ ಕಡಿವಾಣದ ಶಕ್ತಿಯಾಗಿ ವಿಜೃಂಭಿಸಿದ, ಹಿಂದೂ, ಮುಸ್ಲಿಂ, ಪಾರ್ಸಿ, ಸಿಕ್ಕು ಧರ್ಮಗಳ ಸಂಯೋಜನೆಯ ಸಾಧನವಾಗಿ, ಹರಿಜನರ ಅಮೃತವಾಗಿ, ಸಂಜೀವಿನಿಯಾಗಿ, ಲೋಕದ ಗುರುವಾಗಿ ಚಿತ್ರಿತವಾಗಿದ್ದಾರೆ. ಹೀಗೆ ಕನ್ನಡ ಕಾದಂಬರಿಯಲ್ಲಿ ಕ್ವಿಟ್ ಇಂಡಿಯಾ ಚಳವಳಿ ಮತ್ತು ಅಸಹಕಾರ ಚಳವಳಿಯ ತುಣುಕು ನೋಟಗಳನ್ನು ಪ್ರಸ್ತಾಪಿಸಿರುವುದು ಕಂಡುಬಂದರೆ ತೆಲುಗು ಕಾದಂಬರಿಯಲ್ಲಿ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಗಾಂಧೀಜಿಯವರ ಚಾಕಚಕ್ಯತೆ, ಎಲ್ಲಾ ಧರ್ಮಗಳ ಭಾರತೀಯತೆ, ಸಮಾನತಾ ಮನೋಭಾವ ಮೊದಲಾದ ವಿಷಯಗಳ ಕಡೆಗೆ ಒತ್ತುಕೊಟ್ಟಿರುವುದು ಕಂಡುಬರುತ್ತದೆ.

ಅಂದಿನ ಕನ್ನಡ–ತೆಲುಗು ಪರಿಸರದಲ್ಲಿ ಬ್ರಿಟಿಷರು ಹಿಂದೂ–ಮುಸ್ಲಿಂ ಸೇರಿದಂತೆ ಧರ್ಮ–ಧರ್ಮಗಳ ನಡುವೆ ಕೋಮು ಗಲಭೆಗಳಂತಹ ವಿಷಬೀಜಗಳನ್ನು ಬಿತ್ತುವುದರ ಮೂಲಕ ದೇಶದ ಜನರಲ್ಲಿಯೇ ಒಡಕನ್ನು ಉಂಟುಮಾಡುವುದಕ್ಕೆ ಪ್ರಯತ್ನಿಸುತ್ತಿದ್ದುದನ್ನು ಇಬ್ಬರು ಲೇಖಕರು ತಮ್ಮದೇ ಆದ ರೀತಿಯಲ್ಲಿ ದಾಖಲಿಸುವ ಪ್ರಯತ್ನ ಮಾಡಿದ್ದಾರೆ.

ರಕ್ತತರ್ಪಣ ಕಾದಂಬರಿಯಲ್ಲಿ ಚಂದ್ರಶೇಖರನನ್ನು ಕಾಲುವೆಹಳ್ಳಿ ಮನೆಯಲ್ಲಿ ಬಚ್ಚಿಟ್ಟ ಸಂದರ್ಭದಲ್ಲಿ ಬಾಲಾಜಿಸಿಂಗ್ ಎಂಬ ಪೊಲೀಸ್ ಅಧಿಕಾರಿ ಚಂದ್ರಶೇಖರನ ಬಚ್ಚಿಟ್ಟ ಸಂಗತಿಯನ್ನು ತಿಳಿದುಕೊಳ್ಳಲು ಹುಸೇನ್‌ಸಾಬಿಯನ್ನು ವಿಚಾರಿಸುತ್ತಾನೆ. ಅವರಿಬ್ಬರ ನಡುವೆ ನಡೆದ ಸಂಭಾಷಣೆ ಹೀಗಿದೆ.

ಬಾಲಾಜಿ ಸಿಂಗ್– ಈ ಕಾಂಗ್ರೆಸ್ನೋರು ಇದಾರಲ್ಲ ಬಡ್ಡೀಮಕ್ಳು, ಎಲ್ಲಾ ಸಾಬರ್ನ ಮಟ್ಟ ಹಾಕ್ಬೇಕೂಂತ ಮಸಲತ್ತು ಮಾಡ್ತಾ ಇದಾರೆ.

ಹುಸೇನ್‌ಸಾಬಿ – "ಅಂಗಾಂದ್ರೆ ಎಲ್ಲ ಹಿಂದೂಗಳ್ಗೇನ್ನಿ–ಇವ್ರು ಮಾಡೋದೆಲ್ಲ?"

ಬಾಲಾಜಿ ಸಿಂಗ್ – "ಅಷ್ಟೆ"

ಹುಸೇನ್‌ಸಾಬಿ – "ನೀವು ಹಿಂದೂ ಅಳ್ವ ದಫೇದಾರ್ರೆ? ಮತ್ತೆ ನೀವ್ಯಾಕೆ ಕತ್ತಿ ಮಸಿತೀರಿ ಇವರ ಮ್ಯಾಕೆ?"

ಬಾಲಾಜಿಸಿಂಗ್–"ನಾವು ಸರ್ಕಾರದೋರು, ಹಿಂದೂ–ಮುಸಲ್ಮಾನ್ ಅಂತ ಬೇದಮಾಡೋ ಕಾಗುತ್ಯೋ? ನಮಗೆಲ್ಲಾರೂ ಒಂದೇ ಅದ್ಕೆ ಮುಸಲ್ಮಾನರನ್ನು ಮಟ್ಟಾ ಹಾಕ್ಬೇಕೂಂತ ಹೊಂಟಿರೋ ಇವರ್ನ ನಾವು ಮಟ್ಟ ಹಾಕ್ತಾ ಇದೀವಿ."

ಹುಸೇನ್‌ಸಾಬಿ– "ನೀವೇನೋ ಇಂಗೇಳ್ತೀರಿ. ನಮ್ಮ ಮೌಲಾನ ಅಜಾದ್ ಸಾಹೇಬ್ರು, ಗಫಾರ್‌ಖಾನ್ ಸಾಹೇಬ್ರು ಎಲ್ಲಾ ಕಾಂಗ್ರೆಸ್‌ಗೇ ಸೇರ್ಬೇಕೂಂತಾರಲ್ಲ!" ಎಂದ.

ಬಾಲಾಜಿಸಿಂಗ್– "ಅವ್ರೆಲ್ಲಾ ಹಿಂದೂಗಳ್ಹತ್ರ ಲಂಚ ತಗೊಂಡು ಹಂಗೆ ಹೇಳ್ತಾ ಅವ್ರೆ" ನಿನಗ್ಗೊತ್ತಿಲ್ಲ ಹುಸೇನ್ ಅವನು ಈ ಸೀತಾರಾಮಯ್ಯ ಮಾಡೋದೆಲ್ಲ ಮಾಡಿ ಕಡೆಗೆ ನಿನಗೇ ಸಿಗಿಸ್ತಾನೆ! ಈ ಬ್ರಾಂಬ್ರ ಬುದ್ದಿ ನಿನಗೊತ್ತಿಲ್ಲ."

ಹುಸೇನ್‌ಸಾಬಿ– ಇನ್ನೊಂದಪಾ ಹಿಂಗೆಲ್ಲ ಮಾತಾಡಿದ್ರೆ ನನಗ್ ಬಾಲ ಸಿಟ್ಬರ್‍ತೈತಿ ನಾನೇನ್ಬಕ್ರಾಂತ ತಿಳಕೊಂಡ್ರೋ? ಬ್ರಾಂಬ್ರಂತೆ–ಸಾಬ್ರಂತೆ ಇನ್ನೊಂದ್ಸಲ ಜಾತಿ ಎಸರೆತ್ತಿದ್ರೆ ಆಮ್ಯಾಕೆ... ನಾನು.... ಸಾಬ್ರಿಗೆ ಬ್ರಾಂಬ್ರೂ ಏನೂ ಮಾಡೋಕಿಲ್ಲ. ಬ್ರಾಂಬ್ರಿಗೆ ಸಾಬ್ರೂ ಏನೂ ಮಾಡೋಕಿಲ್ಲ, ಅಣ್ಣ ತಮ್ಮ ಆಗಿಲ್ಲ ಇಲ್ಲಿ? ನಿಮ್ಮಂಥ ಹಲ್ಕಾಗಳೇ ಈ ವಿಷ ಅರದಿಕ್ಕೋದು. ಬ್ರಾಂಬ್ರಂತೆ, ಸಾಬ್ರಂತೆ! ಎಲ್ಲೈತೆ ಅದು ನಮ್ದು ಮಸೀದ್ಯಾಗ, ಅವರ್ದು ಅನುಮಪ್ಪನ್ ಗುಡ್ಯಾಗೆ. ಹೋರಗ್ಬಂದ್ರೆ ಇಬ್ರೂ ಒಂದೇ. ನೀವಿದೀರಲ್ಲಾ ಹರಾಮ್‌ಕೊರ್‍ರು, ನೀವೇ ಇದೆಲ್ಲ ಅಡ್ಡದಾರಿ ಹಿಡಿಸೋದು. ನಿಮ್ಮಂಥೋರ್ ಸೊಂಟ ಮುರ್ದು, ಸಿಗ್ದು, ಹನುಮಪ್ಪನ ಗುಡಿ ಬಾಗಿಲ್ಗೆ ತ್ವರ್ಣಾ ಕಟ್ಬೇಕು." (ರಕ್ತತರ್ಪಣ, ಪುಟ–೭೧, ೭೨, ೭೩, ೧೯೪೬)

ಬ್ರಿಟಿಷರು ಕೊಡುವ ಎಂಜಲು ಕಾಸಿಗೆ ಆಸೆಪಟ್ಟು ಭಾರತೀಯ ಅಧಿಕಾರಿಗಳು ಬ್ರಿಟಿಷರಿಗಿಂತ ಕ್ರೂರವಾಗಿ ಭಾರತೀಯ ದೇಶಪ್ರೇಮಿಗಳನ್ನು ಚಿತ್ರಹಿಂಸೆ ನೀಡಿ ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದರು. ಬ್ರಿಟಿಷರು ಕೊಡುವ ಅಲ್ಪಕಾಸು ಮತ್ತು ಚಿಕ್ಕ ಹುದ್ದೆಗಾಗಿ ತಾನು ಹುಟ್ಟಿ ಬೆಳೆದ ನಾಡನ್ನು

ಕಾಲಿನಿಂದ ತುಳಿದು ಮಹಾರಾಜರಂತೆ ಮೆರೆಯುತ್ತಿದ್ದರು. ಮತ್ತು ದೇಶಪ್ರೇಮಿಗಳಿರುವ ಸುಳಿವನ್ನು ತಿಳಿದುಕೊಳ್ಳಲು ಹಿಂದೂ–ಮುಸ್ಲಿಂ, ಸಿಖ್–ಪಾರ್ಸಿ ಧರ್ಮಗಳ ಮಧ್ಯೆ ಕೋಮುಗಲಭೆಗಳಂತಹ ವಿಷಬೀಜಗಳನ್ನು ಬಿತ್ತುತ್ತಿದ್ದರು. ಕೆಲವು ಮತಾಂಧರು ದೇಶದ್ರೋಹಿಗಳ ಮಾತು ಕೇಳಿ ಪರಿಸ್ಥಿತಿಯನ್ನು ಇನ್ನೂ ಉಲ್ಬಣಗೊಳಿಸುತ್ತಿದ್ದರು. ಆದರೆ ದೇಶಾಭಿಮಾನಿಗಳು ಮಾತ್ರ ಅವರ ಮಾತುಗಳನ್ನು ಲೆಕ್ಕಿಸದೆ ನಾವೆಲ್ಲ ಭಾರತೀಯರು. ಒಂದೇ ಕುಟುಂಬದ ಸದಸ್ಯರಂತೆ ಇದ್ದೇವೆ ಎಂಬ ಮಾತು/ ಸನ್ನಿವೇಶವನ್ನು ಐಕ್ಯತಾ ಮನೋಭಾವವನ್ನು ಹುಸೇನ್‌ಸಾಬಿ ಮಾತುಗಳಲ್ಲಿ ಕಾಣಬಹುದಾಗಿದೆ.

ಕೋನಂಗಿ ಕಾದಂಬರಿಯು ಧರ್ಮ ಮತ್ತು ರಾಜಕಾರಣದ ಪ್ರಸಕ್ತಿಯನ್ನು ಇನ್ನೊಂದು ರೀತಿಯಲ್ಲಿ ಪ್ರತಿನಿಧಿಸುತ್ತದೆ. ಇಲ್ಲಿನ ರಿಯಾಸತ್–ಮೆಹರುನ್ನೀಸಾ ಎಂಬ ಪ್ರೇಮಿಗಳು ಒಬ್ಬರನೊಬ್ಬರು ಇಷ್ಟಪಟ್ಟಿರುತ್ತಾರೆ. ಆದರೆ ರಿಯಾಸತ್ ಕಾಂಗ್ರೆಸ್ ಪಕ್ಷ, ಮೆಹರುನ್ನೀಸಾ ತನ್ನ ತಂದೆಯ ಪಕ್ಷವಾದ ಮುಸ್ಲಿಂಲೀಗ್ ಅನ್ನು ಸೇರುವ ಮೂಲಕ ಇಬ್ಬರೂ ಬೇರೆ ಬೇರೆಯಾಗಿರುತ್ತಾರೆ. ಮೆಹರುನ್ನೀಸಾ ತನ್ನ ಮನಸ್ಸಿನ ಸಂಕಷ್ಟದ ಪರಿಸ್ಥಿತಿಯಲ್ಲಿ ನುಡಿದ ಮಾತುಗಳು ಹೀಗಿವೆ.

ಕನ್ನಡ ಭಾಷಾಂತರ

ಅಭಿಮಾನ ದೊಡ್ಡದಾ! ದೇಶಪ್ರೇಮ ದೊಡ್ಡದ? ಎಂದು ಮೆಹರುನ್ನೀಸಾ ಕಣ್ಣಿನಲ್ಲಿ ನೀರು ತಂದುಕೊಳ್ಳುತ್ತಾಳೆ. ರಿಯಾಸತ್ ಮಾತನಾಡುವುದಿಲ್ಲ. ತನ್ನ ತಂದೆ ಮುಸ್ಲಿಂ ನಾಯಕರಲ್ಲಿ ಒಬ್ಬರು ತನ್ನ ಬಾವ ರಾಷ್ಟ್ರೀಯ ಹೋರಾಟಗಾರರಲ್ಲಿ ಒಬ್ಬರು. ಪಾಕಿಸ್ತಾನದ ವಿಷಯವಾಗಿ ಮುಸ್ಲಿಂಲೀಗ್‌ನ ನಾಯಕ ವರ್ಗವೆಲ್ಲ ಅನುಮಾನಸಹಿತವಾಗಿ ಮಾತನಾಡುತ್ತಿದೆ. ಪಾಕಿಸ್ತಾನವನ್ನು ಸೃಷ್ಟಿಸುವುದು, ಮುಸ್ಲಿಂ ಜಾತಿಯನ್ನು ರಕ್ಷಿಸುವುದು, ಮುಸ್ಲಿಂ ಜಾತಿಯನ್ನು ರಕ್ಷಿಸದಿದ್ದರೆ ಮುಸ್ಲಿಂ ಧರ್ಮ ನಶಿಸಿ ಹೋಗುತ್ತಿದೆ. ಆ ಧರ್ಮ ನಶಿಸಿದರೆ ಇಡೀ ಇಸ್ಲಾಂ ಮತವೇ ನಶಿಸುತ್ತದೆ. (ಮೂಲ; ಅನುಬಂಧ–೩ ಅಧ್ಯಾಯ–೪ ಕ್ರ.ಸಂ. ೮)

ಮೆಹರುನ್ನೀಸಾಳಲ್ಲಿನ ಮುಸ್ಲಿಂ ಧರ್ಮದ ಬಗೆಗಿನ ಗೌರವ–ಅಭಿಮಾನ, ತಂದೆಯ ಮೇಲಿನ ಭಯ–ಭಕ್ತಿ, ರಿಯಾಸತ್ ಮೇಲಿನ ಪ್ರೀತಿ–ವಿಶ್ವಾಸ–ನಂಬಿಕೆಯನ್ನು ಕಾಣಬಹುದಾಗಿದೆ. ಮೆಹರುನ್ನೀಸಾ ಭಾರತ ದೇಶದ ಪ್ರಜೆಯಾಗಿದ್ದರೂ ಪಾಕಿಸ್ತಾನ, ಮುಸ್ಲಿಂ ಧರ್ಮದ ಅಸ್ತಿತ್ವದ ಬಗ್ಗೆ ಆತಂಕ, ಕಳವಳವನ್ನು ವ್ಯಕ್ತಪಡಿಸುತ್ತಾಳೆ. ಹೀಗೆ ಕನ್ನಡ ಲೇಖಕರು, ಸ್ವಾತಂತ್ರ್ಯ ಸಂದರ್ಭದಲ್ಲಿ ಬ್ರಿಟೀಶರ ಒಡೆದು ಆಳುವ ನೀತಿ ಮತ್ತು ದೇಶಾಭಿಮಾನಿಗಳ ಧಾರ್ಮಿಕ ಸಹಿಷ್ಣುತೆಯನ್ನು ಎತ್ತಿತೋರಿಸಿದರೆ, ತೆಲುಗು ಲೇಖಕರು ೧೯೪೦ರ ದಶಕದಲ್ಲಿ ತಲೆದೋರಿದ್ದ ಧಾರ್ಮಿಕ ಬಿರುಕನ್ನು ಎತ್ತಿತೋರಿಸಿದ್ದಾರೆ. ಭಾರತ–ಪಾಕಿಸ್ತಾನ ದೇಶಗಳಲ್ಲಿ ಯಾವ ದೇಶಕ್ಕೆ, ಯಾವ ಪಕ್ಷಕ್ಕೆ ಬೆಂಬಲ ನೀಡಬೇಕೋ, ಸೇರಿಕೊಳ್ಳಬೇಕೋ ಎಂಬ ಜನಮನದಲ್ಲಿದ್ದ ಗೊಂದಲಮಯ ಪರಿಸ್ಥಿತಿಯನ್ನು ಹಿಡಿದಿಟ್ಟಿದ್ದಾರೆ.

ರಕ್ತತರ್ಪಣ ಕಾದಂಬರಿಯಲ್ಲಿ ಚಂದ್ರಶೇಖರನ ಸ್ವಯಂ ಸೇವಕರ ತಂಡ ಹೆಂಡದಂಗಡಿಯ ಮುಂದೆ ಹರತಾಳ ಮಾಡಲು ಸಿದ್ಧವಾಗಿರುತ್ತದೆ. ಯುದ್ಧಕ್ಕೆ ಹೊರಟ ಅಜ್ಜಿಗನಿಗೆ ಚೆನ್ನಿ ಕುಂಕುಮ

ಹಚ್ಚಿ, ಕಣಗಿಲ ಹೂವಿನ ಹಾರ ಹಾಕಿ ಆರತಿ ಮಾಡುತ್ತಾಳೆ. ತಂದೆ ಬೊಮ್ಮಯ್ಯ "ದೇವರ ಮೇಲೆ ಭಾರ ಹಾಕಿ ಹೋಗ್ಲಾ" ಎಂದು ಬೆನ್ನು ಚಪ್ಪರಿಸಿ ಕಳುಹಿಸುತ್ತಾನೆ. ಈ ಮೆರವಣಿಗೆಯ ಉತ್ಸಾಹದಿಂದ ಉದ್ರೇಕಿತರಾದ "ಹೊಲೆಯರ ಹುಡುಗರಿಬ್ಬರೂ" ತಾವೇ ಅನಾಹ್ವಾನಿತರಾಗಿ ಬಂದು ತಮಟೆ ಬಾರಿಸಲಾರಂಭಿಸುತ್ತಾರೆ. (ರಕ್ತತರ್ಪಣ, ಪುಟ–೪೧, ೧೯೪೬). ಸ್ವಾತಂತ್ರ್ಯ ಸಮರದಂತಹ ಮಹಾನ್ ಕಾರ್ಯಕ್ಕೆ ದೇಶದಲ್ಲಿರುವ ಎಲ್ಲಾ ಜನರ ಬೆಂಬಲ, ನೆರವು, ಸಹಕಾರ ಅಗತ್ಯವಾಗಿತ್ತು. ಅದರಂತೆ ಅಲ್ಪಸೇವೆಯನ್ನಾದರೂ ಮಾಡಿ ತಮ್ಮ ಕರ್ತವ್ಯ, ಜವಾಬ್ದಾರಿಯನ್ನು ಈಡೇರಿಸಬೇಕು ಎನ್ನುವ ಹೊಲೆಯ ಹುಡುಗರ ಸ್ವತಂತ್ರ ಮನೋಭಾವವನ್ನು ಗುರುತಿಸಬಹುದು.

ಕೋನಂಗಿ ಕಾದಂಬರಿಯಲ್ಲಿ ಕಾದಂಬರಿಯ ನಾಯಕ ಕೋನಂಗಿ ಸಾಂಘಿಕವಾಗಿ, ಸಾಮಾಜಿಕವಾಗಿ ಮನಧೋರಣೆ ಕುರಿತು

ಕನ್ನಡ ಭಾಷಾಂತರ

ನನ್ನಿಂದ ಹರಿಜನರ ಸೇವೆ ಮಾಡುವುದು ಸಾಧ್ಯನಾ! ಇಲ್ಲವೇ? ನನಗೆ ಜಾತಿಯೇ ಇಲ್ಲ. ಗುಡಿಯನ್ನೇ ನುಂಗುವವನಿಗೆ ಗುಡಿಯಲ್ಲಿರುವ ಲಿಂಗವೇನು ದೊಡ್ಡದ! (ಮೂಲ; ಅನುಬಂಧ–೩ ಅಧ್ಯಾಯ–೪ ಕ್ರಸಂ. ೯)

ಹರಿಜನ ಸೇವೆ ಗಾಂಧೀಜಿಯವರ ಕಾರ್ಯಕ್ರಮಗಳಲ್ಲಿ ಒಂದಾಗಿದ್ದು, ಸ್ವಾತಂತ್ರ್ಯ ಚಳವಳಿಯ ಭಾಗವಾಗಿ ಕಂಡುಬರುತ್ತದೆ. ಇಲ್ಲಿ ಲೇಖಕರು ಹರಿಜನರ ಉದ್ಧಾರದ ಬಗ್ಗೆ ಕಾದಂಬರಿಯ ನಾಯಕನಲ್ಲಿ ದುರ್ಬಲ ಮನಸ್ಥಿತಿಯನ್ನು ಚಿತ್ರಿಸಿದ್ದಾರೆ. ಏಕೆಂದರೆ ಹರಿಜನ ಸಮುದಾಯ ಸಮಾಜದಲ್ಲಿ ತುಂಬಾ ಹಿಂದುಳಿದ ಜನಾಂಗವಾಗಿದ್ದು, ಆ ಜನಾಂಗವನ್ನು ಸ್ವಲ್ಪಮಟ್ಟಿಗೆ ಮೇಲೆತ್ತುವಂತಹ ಕಾರ್ಯ ನಡೆಯಬೇಕಾಗಿದೆ. ಅದು ಕಷ್ಟಸಾಧ್ಯವಾಗಿದ್ದು ಎಂಬಂತಹ ಲೇಖಕನ ಮನಸ್ಥಿತಿಯನ್ನು ಗುರುತಿಸಬಹುದು. ಜೊತೆಗೆ ಕನ್ನಡ ಲೇಖಕರಿಗೆ ದೇಶಕ್ಕೆ ಸ್ವಾತಂತ್ರ್ಯ ಎಂಬುದು ಬಹಳ ಮುಖ್ಯ. ಅದರಲ್ಲಿ ದಲಿತ ಜನರ ಇರುವಿಕೆಯನ್ನು ಗುರುತಿಸಿರುವುದು ಕಂಡುಬರುತ್ತದೆ. ತೆಲುಗು ಲೇಖಕರಿಗೆ ದೇಶಕ್ಕೆ ಸ್ವಾತಂತ್ರ್ಯ ಸಾಧಿಸುವಂತಹ ಮಹಾನ್ ಕಾರ್ಯದಷ್ಟೇ, ಹರಿಜನರ ಉದ್ಧಾರ ಮುಖ್ಯವಾಗಿದ್ದು ಅವರಿಗೆ ಸಹಾಯ, ನೆರವು ಮಾಡಲಾಗುತ್ತದೆಯೋ ಇಲ್ಲವೋ ಎಂಬಂತಹ ಮನಸ್ಥಿತಿಯನ್ನು ಇಲ್ಲಿ ಗುರುತಿಸಬಹುದಾಗಿದೆ.

ಹೀಗೆ ಕನ್ನಡ–ತೆಲುಗು ಲೇಖಕರಿಬ್ಬರೂ ಅಲ್ಲಲ್ಲಿ ಕೆಳಜಾತಿಗಳ ಪ್ರಸ್ತಾಪ ತಂದರೂ, ಜಾತೀಯತೆಯ ಬಗ್ಗೆ ಕೆಲವು ಮಾತನಾಡಿದರೂ, ಕಾದಂಬರಿಯ ಮುಖ್ಯಪಾತ್ರವಾಗಿ, ಘಟನೆಯಾಗಿ ಅದನ್ನು ಬೆಳೆಸಿಲ್ಲ. ಅರ್ಥಾತ್ ಇಬ್ಬರಿಗೂ ಆ ಸಂದರ್ಭದಲ್ಲಿನ ಹರಿಜನ ಸಮಸ್ಯೆ, ಅವರ ಉದ್ಧಾರ ಅಷ್ಟು ಮುಖ್ಯವಾಗದೆ ಇರುವುದನ್ನು ನಾವಿಲ್ಲಿ ಗ್ರಹಿಸಬಹುದಾಗಿದೆ.

ಸ್ವಾತಂತ್ರ್ಯಚಳುವಳಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಅತಿಮುಖ್ಯವಾದುದು. ರಕ್ತತರ್ಪಣ ಕಾದಂಬರಿಯಲ್ಲಿ ಚಂದ್ರಶೇಖರನ ಸ್ವಯಂಸೇವಕ ತಂಡ ಹೆಂಡದಂಗಡಿಯ ಮುಂದೆ ಪಿಕೆಟಿಂಗ್

ನಡೆಸಿದಾಗ ಚಂದ್ರಶೇಖರನಿಗೆ ದೊಣ್ಣೆಪೆಟ್ಟು ತಗುಲಿದ್ದನ್ನು ಹೆಂಡ ಕುಡಿಯುವ ಜನರ ಮನಃಪರಿವರ್ತನೆ ಆಗಿ ಹೆಂಡದಂಗಂಡಿಗೆ ಹೋಗುವುದನ್ನು ನಿಲ್ಲಿಸುತ್ತಾರೆ. ಆಗ ಅಂಗಡಿಯ ಸಹ ಮಾಲೀಕ ಬಾಲಯ್ಯ ಒಬ್ಬೊಬ್ಬರ ಮನೆಗೆ ತಾನೇ ಕಳ್ಳತನದಲ್ಲಿ ಹೆಂಡ ತೆಗೆದುಕೊಂಡು ಹೋಗಿ ಕೊಡಲು ಯತ್ನಿಸುತ್ತಾನೆ. ಆಗ ಮನೆಯ ಹೆಂಗಸರು "ಇನ್ನೊಂದ್ಸಲ ನಮ್ಮನೇತಾವೇನಾದ್ರು ಬಂದ್ರೆ ಕಸಬರ್ಕೆಲಿ ಒಡೆದ್ಬುಡ್ತೀವಿ ನೋಡು" ಎಂದು ಬೆದರಿಸಿ ಕಳುಹಿಸುತ್ತಾರೆ. (ರಕ್ತತರ್ಪಣ, ಪುಟ-೪೭, ೧೯೪೬).

ನಂತರ ಬಾಪಾರೆಡ್ಡಿಯ ಕುತಂತ್ರದಿಂದ ಸೀತಾರಾಮಯ್ಯ ಮತ್ತು ದೇಶಭಕ್ತ ಅಜ್ಜಿಗನು ಜೈಲು ಸೇರುತ್ತಾರೆ. ಬಾಪಾರೆಡ್ಡಿಯ ವಿಶ್ವಾಸದ್ರೋಹವನ್ನು ಕಂಡು ಹಳ್ಳಿಯ ಹೆಂಗಸರೂ ಕೆರಳಿದ್ದು "ಥೂ ಕಳ್ಳೂಳೀಮಗ, ಇವನ ಮನೆ ಹಾಳಾಗ್ಹೋಗ, ಇವನ್ನಿನ್ನೂ ಬಿಟ್ಟಿದ್ದಾರೆ ಗಂಡಸ್ರು- ಬಳೆ ತೊಟ್ಕೊಂಡು!" ಎಂದು ಮಹಿಳಾ ಮಂಡಳಿಯವರು ಕೆರಳಿದ ನಾಗಮಣಿಗಳಾಗುತ್ತಾರೆ. (ರಕ್ತತರ್ಪಣ, ಪುಟ-೮೩, ೧೯೪೬). ಚಂದ್ರಶೇಖರ "ಚೆನ್ನವ್ವ, ನನ್ನಿಂದ ನಿನ್ನ ಅಣ್ಣನಿಗೆ ಈ ಗತಿ ಆಯ್ತುಂತ ಸಿಟ್ಟೇನು?" ಎಂದು ಕೇಳಿದ. "ನಿಮ್ಯಾಲೆ ಸಿಟ್ಯಾಕೆ ಬುದ್ಧಿ. ದೇಶಕ್ಕೋಸ್ಕರ ನಗನಗ್ತಾ ಜೈಲಿಗೋದ ಗಂಡಸು ಮಗ. ಅವರೆಲ್ಲ ಕಷ್ಟಪಡ್ತಾ ಇರೋವಾಗ ಹೆಣ್ಮುಂಡೆ ನಾನೊಳ್ಳೆ ಅಳ್ತಾ ಕೂತಿರ್ಬೇಕಲ್ಲಾಂತ ಎಸನ. ಅಣ್ಣನಿಡುಕೊಂಡೋದೋರು ನನ್ನೂ ಇಡುಕೊಂಡೋಗಿದ್ರೆ, ಅಣ್ಣಯ್ಯನಂಗಾದ್ದೆ! ನಂಗೂ ಆಗ್ತಾ ಇತ್ತಲ್ಲಾ' ಎನ್ನುತ್ತಾಳೆ ಚೆನ್ನಿ (ರಕ್ತತರ್ಪಣ, ಪುಟ-೧೦೫, ೧೯೪೬). ಜಮೀನ್ದಾರರ ವಿರುದ್ಧ ಪುರುಷರು ಪ್ರತಿಭಟಿಸುವುದೂ ಕಷ್ಟಸಾಧ್ಯವಾಗಿದ್ದ ಪರಿಸರದಲ್ಲಿ ಸ್ತ್ರೀಯರು ಸರ್ಕಾರದ ವಿರುದ್ಧ ತಿರುಗಿ ನಿಂತಿದ್ದು, ತಮ್ಮ ಕೌಟುಂಬಿಕ ಜೀವನವನ್ನು ಆರ್ಥಿಕ ದುಸ್ಥಿತಿಗೆ ತಳ್ಳದೆ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುವಂತಹ ಜವಾಬ್ದಾರಿ ಮನೋಭಾವವನ್ನು ಪ್ರಕಟಿಸಿದ್ದು ಇತ್ಯಾದಿಗಳನ್ನು ಈ ಮಾತುಗಳಲ್ಲಿ ಕಾಣಬಹುದಾಗಿದೆ.

ಕೋನಂಗಿ ಕಾದಂಬರಿಯಲ್ಲಿ ಅನಂತಲಕ್ಷ್ಮಿ-ಮೆಹರುನ್ನೀಸಾ ನಡುವೆ ರಾಜಕೀಯ, ಪ್ರೇಮ ಕುರಿತಂತೆ ನಡೆದ ಚರ್ಚೆ ಹೀಗಿದೆ:

ಕನ್ನಡ ಭಾಷಾಂತರ

ಅನಂತಲಕ್ಷ್ಮಿ – ನಾನು ಗಾಂಧೀವಾದಿ. ಖಾದಿ ವಸ್ತ್ರ ಕಟ್ಟದಿದ್ದರೂ, ಚರಕದಿಂದ ನೂಲದಿದ್ದರೂ, ನಮ್ಮೆಜಮಾನ್ರು ಸಮಾಜವಾದಿಯಾದರೂ, ಅಲ್ಲದೆ ಆಳುವ ಪಕ್ಷದ ಪರವಾಗಿದ್ದರೂ ನಾನು ಅದನ್ನು ಲೆಕ್ಕಿಸುವುದಿಲ್ಲ.

ಮೆಹರುನ್ನೀಸಾ- ನೀನು ಅಪ್ಪಟ ಗಾಂಧೀವಾದಿ. ನೀನು ಖಾದಿ ವಸ್ತ್ರ ಬಿಟ್ಟು ಬೇರೆ ವಸ್ತ್ರಗಳನ್ನು ಬಳಕೆ ಮಾಡುತ್ತಿಲ್ಲ ಎಂದುಕೋ ನೀನು ಯಾವಾಗಲೂ ಚರಕದಲ್ಲಿ ಖಾದಿ ವಸ್ತ್ರಗಳನ್ನು ನೇಯುತ್ತಿರುತ್ತೀಯಾ ಅಂದುಕೋ ಅಂತಹ ಸಂದರ್ಭದಲ್ಲಿ ನಿಮ್ಮ ಯಜಮಾನ್ರು ನಿನ್ನನ್ನು ಖಾದಿ ವಸ್ತ್ರಗಳನ್ನು ಬಳಕೆ ಮಾಡಬೇಡ, ನೇಯುವುದರಿಂದ ಉಪಯೋಗವಿಲ್ಲ. ಗಾಂಧೀಜಿಯವರ ವಿಚಾರಗಳಿಂದ ಯಾವುದೇ ಲಾಭವಿಲ್ಲ ಎಂದು ಪಟ್ಟು ಹಿಡಿದರೆ, ಆಗ ಏನು ಮಾಡುತ್ತೀಯಾ.

ಅನಂತಲಕ್ಷ್ಮಿ – ನನಗೆ ಹಿಂಸೆ ಅಂದರೆ ನಂಬಿಕೆ ಇಲ್ಲ.

ಮೆಹರ್ – ಏನು ಗಾಂಧೀ ತತ್ವವಾದಿ! ಎಲ್ಲಿ ಕಲಿತುಕೊಂಡಿದ್ದೆ ಈ ವೇದಾಂತವನ್ನು? ಯಾವಾಗ ಪ್ರವೇಶ ಮಾಡಿದೆ ಕಾಂಗ್ರೇಸಿಗೆ?

ಅನಂತಲಕ್ಷ್ಮಿ – ಅಹಿಂಸೆ ಪರಮಸಾಧನವೆಂದು ನಂಬಲಿಕ್ಕೆ ಕಾಂಗ್ರೇಸಿಗೆ ಸೇರಬೇಕೇನು. (ಮೂಲ; ಅನುಬಂಧ–೩ ಅಧ್ಯಾಯ–೪ ಕ್ರ.ಸಂ. ೧೦) ಮೆಹರುನ್ನೀಸಾ ಹೊರಟು ಹೋಗುತ್ತಾಳೆ. ಆಗ ಅನಂತಲಕ್ಷ್ಮಿ ಉತ್ತಮವಾದ ಖಾದಿ ವಸ್ತ್ರಗಳನ್ನು ತೊಟ್ಟುಕೊಂಡು

ಕನ್ನಡ ಭಾಷಾಂತರ

ಖಾದಿ ಪ್ರಚಾರ ಕಾರ್ಯಾಲಯಕ್ಕೆ ಹೋಗಿ ನೇಯುವುದು, ಇತರರಿಗೆ ನೇಯುವುದನ್ನು ಕಲಿಸುವುದು. ಅಲ್ಲಿಂದ ಮಹಿಳಾ ಖಾದಿ ಪ್ರಚಾರಾಲಯಕ್ಕೆ ವಸ್ತ್ರ ವಿಕ್ರಯ ಶಾಲೆಗೆ ಹೋಗಿ, ಅಲ್ಲಿ ಖಾದಿ ಮಾರಾಟ ಮಾಡುತ್ತಾಳೆ. ತಾಯಿಯೊಂದಿಗೆ ವಾರ್ಧಾಕ್ಕೆ ಹೋಗಿ ಆಶ್ರಮದಲ್ಲಿ ಮಹಾತ್ಮನ ಸನ್ನಿಧಿಯಲ್ಲಿ ಸೇವೆ ಮಾಡುತ್ತಾ ಇರುತ್ತಾಳೆ. (ಮೂಲ; ಅನುಬಂಧ–೩ ಅಧ್ಯಾಯ–೪ ಕ್ರ.ಸಂ. ೧೧)

ಇಲ್ಲಿನ ಅನಂತಲಕ್ಷ್ಮಿ ಅಪ್ಪಟ ಗಾಂಧಿ ಅನುಯಾಯಿ, ದೇಶಭಕ್ತೆ. ಗಾಂಧೀತತ್ವಗಳನ್ನು ಚಾಚೂತಪ್ಪದೇ ಪರಿಪಾಲಿಸುತ್ತಿರುವುದು ಮಾತ್ರವಲ್ಲದೆ, ಅದರ ಪ್ರಚಾರಕಿ ಕೂಡ. ಹೀಗೆ ಕನ್ನಡದ ರಕ್ತತರ್ಪಣ ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳಲ್ಲಿ ಹೋರಾಟದ ಕ್ರಾಂತಿಕಾರಿ ಪ್ರತಿಭಟನಾ ಮನೋಭಾವ ಕಂಡುಬಂದರೆ, ತೆಲುಗಿನ ಕಾದಂಬರಿಯಲ್ಲಿ ಗಾಂಧೀಜಿಯವರ ತತ್ವವನ್ನು ಪಾಲಿಸುವ ಪಾತ್ರವರ್ಗವನ್ನು ಕಾಣಬಹುದಾಗಿದೆ.

ರಕ್ತತರ್ಪಣ ಕಾದಂಬರಿಯಲ್ಲಿ ಪೊಲೀಸ್ ಅಧಿಕಾರಿ ಸ್ವಾತಂತ್ರ್ಯದ ಹೋರಾಟಗಾರ ಚಂದ್ರಶೇಖರನನ್ನು ಊರಿನ ಶಾನುಭೋಗ ಸೇರಿದಂತೆ ಸೋಮಲಾಪುರದ ಜನತೆ ಹಳ್ಳಿಯನ್ನು ಬಿಟ್ಟು ಬೇರೆ ಕಡೆಗೆ ಸ್ಥಳಾಂತರಿಸಿರುತ್ತಾರೆ. ಅವನನ್ನು ಹುಡುಕಿ ಬಂಧಿಸುವಂತೆ ಪೋಲೀಸ್ ಅಧಿಕಾರಿ ಬಾಲಾಜಿ ಸಿಂಗನಿಗೆ ವಾರೆಂಟು ಬಂದಿರುತ್ತದೆ. ಚಂದ್ರಶೇಖರನು ಎಲ್ಲಿದ್ದಾನೆಂಬ ಗುಟ್ಟನ್ನು ತಿಳಿದುಕೊಳ್ಳಲು ಯುವಪಡೆಯ ಮುಂದಾಳು ಅಜ್ಜಿಗನಿಗೆ ಚಿತ್ರಹಿಂಸೆ ನೀಡುತ್ತಾನೆ. ಆದರೂ ಅಜ್ಜಿಗನು ಚಂದ್ರಶೇಖರನ ವಿಷಯ ತಿಳಿಸುವುದಿಲ್ಲ. ಬಾಪಾರೆಡ್ಡಿ ಅಜ್ಜಿಗನನ್ನು ಹಿಂಸಿಸುತ್ತಿರುವಾಗ ಅವನ ಕಣ್ಣೆದುರು, ಗಲ್ಲಿನ ಮರದ ಮೇಲೆ ನಿಂತು ತಾಯಿಗಾಗಿ ತಲೆ ಕೊಡುವೆ ಎಂದ ಭಗತ್‌ಸಿಂಗ್, ಕಟುಕ ಸಾಮ್ರಾಜ್ಯಶಾಹಿಯ ಬಲವೆಷ್ಟಿದೆಯೊ ನೋಡೇಬಿಡ್ತೀನಿ ಎಂದು ಹೇಳಿ ಗಲ್ಲಿಗೇರಿದ ಬಿಸ್ಮಿಲ್ಲಾ, ಧರಸನಾದ ಉಪ್ಪಿನ ಕಾರ್ಖಾನೆಯ ಎದುರು ಮೂಳೆ ಮುರಿದು, ನೆತ್ತರು ಬಸಿದು ಮಲಗಿದ ಸಾವಿರಾರು ಜನ ಸ್ವಯಂಸೇವಕರು, ಲಾಹೋರಿನ ರಸ್ತೆಯಲ್ಲಿ ಲಾಠಿ ಏಟು ತಿಂದು ಮಲಗಿದ ಪಂಜಾಬಿನ ಸಿಂಹ ಲಾಲಾ ಲಜಪತ್‌ರಾಯ್, ಜಲಿಯನ್ ವಾಲಬಾಗಿನಲ್ಲಿ

ಗುಂಡಿಗೊಬ್ಬರಂತೆ ಸತ್ತ ಭಾರತೀಯರು, ದಕ್ಷಿಣ ಆಫ್ರಿಕಾದ ಬಿಳಿಯರ ಕಲ್ಲು ಮಳೆಯಲ್ಲಿ ಕೆಚ್ಚು ಕೆಡದೆ ನಿಂತ ಗಾಂಧೀಜಿ, ಪೊಲೀಸರ ಅತ್ಯಾಚಾರಕ್ಕೆ ತಿರಸ್ಕಾರದ ನಗೆಯ ಉತ್ತರ ಕೊಟ್ಟ ಸಿರಸಿ ಸಿದ್ದಾಪುರಗಳ ವೀರಕನ್ಯೆಯರು, ಸೊಲ್ಲಾಪುರದ ಗಂಡುಗಲಿ ಧನಶೆಟ್ಟಿ, ಮಲ್ಲಪ್ಪ, ಬಾವುಟದ ಮಾನ ಕಾಯಲು ಪ್ರಾಣ ಭಯ ಬಿಟ್ಟು ನಿಂತ ಕಂದಮ್ಮಗಳು ಚಿತ್ರದ ಮೇಲೆ ಚಿತ್ರ ಬಂದು ಮಾಯವಾಗುತ್ತಿದ್ದವು. ಸಾವಿನ ಭಯವಿಲ್ಲ–ನಿರ್ಭಯರು ಎಂಬ ನಾದ ಅವನ ಕಿವಿಗೆ ಕೇಳಿ ಬರುತ್ತಿತ್ತು (ರಕ್ತತರ್ಪಣ, ಪುಟ–೭೬, ೧೯೪೬).

ಹೀಗೆ ಪೊಲೀಸ್ ಅಧಿಕಾರಿಯಿಂದ ಹಿಂಸೆ, ಕಿರುಕುಳ ಶೋಷಣೆ ನಡೆಯುತ್ತಿರುವಾಗ ಅದನ್ನು ಲೆಕ್ಕಿಸದೆ ದೇಶಕ್ಕಾಗಿ ಮಾನ–ಪ್ರಾಣಗಳನ್ನು ಅರ್ಪಿಸಿ ಚರಿತ್ರೆಯ ಪುಟಗಳಲ್ಲಿ ಅಮರರಾದ ತ್ಯಾಗಮಯಿ, ವೀರಧೀರರನ್ನು ಸ್ಮರಿಸಿಕೊಳ್ಳುತ್ತಿರುವಂತಹ ಅಜ್ಜಿಗನಲ್ಲಿನ ಅಪ್ರತಿಮ ದೇಶಪ್ರೇಮ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ಚಾರಿತ್ರಿಕ ವ್ಯಕ್ತಿಗಳು, ಘಟನೆಗಳು ಸ್ವಾತಂತ್ರ್ಯ ಹೋರಾಟಗಾರರಿಗೆ ಹೇಗೆ ಪೂರಕ, ಪ್ರೇರಕ ಸ್ಫೂರ್ತಿದಾಯಕ ಎಂಬುದನ್ನು ಕಾಣಬಹುದಾಗಿದೆ.

ಕೋನಂಗಿ ಕಾದಂಬರಿಯಲ್ಲಿ ಕೂಡ ಕೋನಂಗಿ ಜೈಲಿನಲ್ಲಿರುವಾಗ ಸರ್ಕಾರದ ರಾಯಬಾರಿಯು

ಕನ್ನಡ ಭಾಷಾಂತರ

ನೀವು ಈ ಯುದ್ಧ ಮುಗಿಯುವವರೆಗೂ ಬ್ರಿಟಿಷ್ ಸರ್ಕಾರದ ಮೇಲೆ ಕೆಟ್ಟದಾಗಿ ಬರೆಯದೆ ನಮ್ಮ ಪತ್ರಿಕೆಯನ್ನು ನಡೆಸುತ್ತೇವೆಂದು, ಯುದ್ಧ ಸರಿಯಾಗಿ ನಡೆಯಲಿಕ್ಕೆ ನಮ್ಮ ಶಕ್ತಿ ಇರುವತನಕ ದುಡಿಯುತ್ತೇವೆಂದು ಮಾತು ಕೊಟ್ಟರೆ ಸರ್ಕಾರ ನಿಮ್ಮನ್ನು ಬಿಡುಗಡೆಗೊಳಿಸುತ್ತದೆ. ನಿಮಗೆ ಸರ್ಕಾರ ಎಷ್ಟೋ ಸಹಾಯ ಮಾಡುತ್ತದೆ ಎನ್ನುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೪ ಕ್ರ.ಸಂ. ೧೨)

ಕೋನಂಗಿ ಆ ಮಾತುಗಳನ್ನು ತಿರಸ್ಕರಿಸಿ ಜೈಲಿನಲ್ಲಿಯೇ ಇದ್ದು, ಕನ್ನಡ ಭಾಷಾಂತರ – ತನ್ನ ದೇಶ, ತನ್ನ ಮಣ್ಣು, ತನ್ನ ನದಿಗಳು, ತನ್ನ ಗಾಳಿ, ತನ್ನ ಪ್ರಜೆಗಳು, ತನ್ನಲ್ಲೆ ಪ್ರತಿಫಲಿಸುತ್ತಿದ್ದಾರೆ. ರಾಜ್ಯ, ವಿದೇಶಿಯರು, ಯುದ್ಧ ನಾಶ ಬರಡು ರೋಗ ವಿವಿಧ ಮತಗಳು ಉದ್ಭವಿಸುವುದು ಮತಯುದ್ಧಗಳು, ಗುಲಾಮಗಿರಿಯತ್ವ ಗುಲಾಮಗಿರಿಯನ್ನು ಹೊಡೆದೋಡಿಸಿ ಸ್ವಾತಂತ್ರ್ಯ ಹೊಂದಬೇಕೆಂಬ ಆಕಾಂಕ್ಷೆ, ಅದಕ್ಕೆ ಪ್ರಯತ್ನಗಳು, ರಹಸ್ಯಮಾರ್ಗಗಳು, ಪ್ರಥಮ ಸ್ವಾತಂತ್ರ್ಯ ಯುದ್ಧ, ಝಾನ್ಸಿರಾಣಿ ಲಕ್ಷ್ಮೀಬಾಯಿ, ತಾಂತ್ಯಟೋಪಿ, ಕಾಂಗ್ರೆಸ್‌ನ ಪ್ರಾರಂಭ, ಮಾಧ್ಯಮಿಕವಾದಿಗಳು, ಅತಿವಾದಿಗಳು, ರಾಜಕೀಯ ಹತ್ಯೆಗಳು, ರಾಷ್ಟ್ರೀಯತಾ ಮನೋಭಾವ, ಹಿಂಸೆ, ಅಹಿಂಸಾ ಮನೋಭಾವ, ಗಾಂಧೀಜಿ, ಸತ್ಯಾಗ್ರಹ, ಖೈದಿ, ಪಾಕಿಸ್ತಾನದ ಸೃಷ್ಟಿಯ ಬಿಗಿಹಿಡಿತ, ದೇವರೇ ತನ್ನ ದೇಶ ಇನ್ನೆಷ್ಟು ದಿನಗಳು ಈ ಪಂಜರದಲ್ಲಿ ಇರಬೇಕು ಎಂದು ನೆನೆಸಿಕೊಂಡು ಮರುಗುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೪ ಕ್ರ.ಸಂ. ೧೩)

ಹೀಗೆ ಕೋನಂಗಿ ಜೈಲಿನಲ್ಲಿರುವಾಗ ತನ್ನ ದೇಶದ ಪರಿಸ್ಥಿತಿಯನ್ನು, ಹೋರಾಡಿ ಮಡಿದ ನಾಯಕರನ್ನು ಗಾಂಧೀಜಿಯವರ ಸಿದ್ಧಾಂತಗಳನ್ನು ಸ್ಮರಿಸಿಕೊಳ್ಳುತ್ತಾ ಜೈಲುವಾಸವನ್ನು ತೀರಿಸುತ್ತಾನೆ. ಕನ್ನಡದ ಕಾದಂಬರಿಯ ಅಜ್ಜಿಗನಾದರೂ ಹೋರಾಟದ ಸೂತ್ರದಾರನಾದ ಚಂದ್ರಶೇಖರನ ಗುಟ್ಟನ್ನು ಬಿಟ್ಟುಕೊಡದೆ, ತನ್ನ ಪ್ರಾಣವನ್ನು ಅರ್ಪಿಸಲು ಸಿದ್ದವಾಗಿರುತ್ತಾನೆ. ಅಜ್ಜಿಗನಲ್ಲಿನ ಅಚಲವಾದ ದೃಡನಿರ್ಧಾರ, ದೇಶಭಕ್ತಿ, ತ್ಯಾಗಮನೋಭಾವ, ಹೋರಾಟಗಾರರ ಬಗೆಗಿನ ಕಾಳಜಿ, ಭಯ, ಭಕ್ತಿ, ಗೌರವ, ಮುಂಜಾಗ್ರತಾ ಬುದ್ಧಿಶಕ್ತಿಯನ್ನು ಕಾಣಬಹುದಾಗಿದೆ. ಕೋನಂಗಿಯಲ್ಲಿಯೂ ಅಜ್ಜಿಗನಲ್ಲಿರುವಂತೆಯೇ ದೇಶಪ್ರೇಮ, ಸಂಯಮ, ತಾಳ್ಮೆ ಮನೋಭಾವವನ್ನು ಕಾಣಬಹುದಾಗಿದ್ದರೂ, ತನ್ನ ದೇಶದ ಸಮಕಾಲೀನ ಸ್ಥಿತಿಯನ್ನು ಅವನು ನೋಡುವುದರಲ್ಲಿ ಅಜ್ಜಿಗನ ದೃಷ್ಟಿಗಿಂತ ವಿಸ್ತಾರತೆ ಇದೆ.

ಭಾರತದ ಸ್ವಾತಂತ್ರ್ಯ ಚಳುವಳಿಗೆ ಅಂದಿನ ಜನರ ಪ್ರತಿಕ್ರಿಯೆಗಳು ಭಿನ್ನವಾಗಿದ್ದವು. ಕೆಲವರು ತಮಗೂ ಇದಕ್ಕೂ ಸಂಬಂಧವೇ ಇಲ್ಲ ಎನ್ನುವಂತಿದ್ದರೆ, ಇನ್ನು ಕೆಲವರು ತಮ್ಮ ಅಗತ್ಯಕ್ಕನುಗುಣವಾಗಿ ಅದನ್ನು ಪರಿಭಾವಿಸುತ್ತಿದ್ದರು, ಪ್ರತಿಕ್ರಿಯಿಸುತ್ತಿದ್ದರು. ಸ್ವಾತಂತ್ರ್ಯ ಚಳುವಳಿಯೊಳಗಿದ್ದವರಲ್ಲಿ ಕೂಡ ತೀವ್ರಗಾಮಿ ಮತ್ತು ಮಂದಗಾಮಿ ಎಂಬ ಎರಡು ಭಿನ್ನ ವಿಚಾರಧಾರೆಯನ್ನು ಹೊಂದಿದವರಿದ್ದರು. ಈ ಎಲ್ಲ ಭಿನ್ನ ಜನವರ್ಗವನ್ನು ಎರಡು ಕಾದಂಬರಿಗಳು ಸಾಧ್ಯವಾದಷ್ಟು ಮಟ್ಟಿಗೆ ತಮ್ಮದೇ ಆದ ರೀತಿಯ ಕಥನದಲ್ಲಿ ಬಳಸಿಕೊಳ್ಳಲು ಪ್ರಯತ್ನಿಸಿರುವುದು ಒಂದು ಕುತೂಹಲಕಾರಿ ಸಂಗತಿಯಾಗಿದೆ.

ರಕ್ತತರ್ಪಣ ಕಾದಂಬರಿಯಲ್ಲಿ ಬ್ರಿಟಿಷರ ಪರವಾದ ಬಾಪಾರೆಡ್ಡಿಗೆ ಯಾವ ಶಿಕ್ಷೆ ವಿಧಿಸಬೇಕೆಂದು ಸೋಮಲಾಪುರದ ಹಿರಿಯರು ಮಾರಮ್ಮನ ಕಟ್ಟೆಯ ಮೇಲೆ ಸಭೆ ನಡೆಸುತ್ತಾರೆ. ಆ ಸಂದರ್ಭದಲ್ಲಿ ಊರಿನ ಹಿರಿಯ ಕುಳ ಪಟೇಲ ಬಸವಯ್ಯ, 'ತಾನು ಈ ಕೆಲಸ ಮಾಡಿದರೆ ತನಗೇನು ಗತಿಯಾದೀತೂ' ಎಂಬ ಹೆದರಿಕೆಯಿಂದ ಇರುತ್ತಾನೆ.ಅಲ್ಲಲ್ಲಿ ಪತ್ರಿಕೆಯಲ್ಲಿ ಕಾಂಗ್ರೆಸ್ಸಿಗೆ ಸೇರಿದವರ ಆಸ್ತಿಪಾಸ್ತಿ ಜಪ್ತು ಮಾಡಿದ್ದ ವಿಚಾರ ಕೇಳಿದ್ದ ಈತ ಈ ಗದ್ದಲದಲ್ಲಿ ತಾನು ತಂದಿರುವ ಹಳ್ಳಿಗೆ ಹೆಸರಾದ ತನ್ನ ಹೋರಿಗಳ ಗತಿ ಏನಾದಿತೋ ಎಂದು ಭಯಪಡುತ್ತಾನೆ. ಬಾಪಾರೆಡ್ಡಿಯ ಪ್ರಸಂಗದಿಂದಾದ ಪೊಲೀಸರ ಪ್ರವೇಶದಿಂದ ಹಳ್ಳಿ ಸಂಪೂರ್ಣವಾಗಿ ಕಾಂಗ್ರೆಸ್ ರಂಗೇರುತ್ತಿದ್ದಂತೆ, ಈಗ ತಾನು ಬಾಪಾರೆಡ್ಡಿಗೆ ವಿರೋಧವಾಗಿ ವರ್ತಿಸಿದರೆ ತಾನೂ ಕಾಂಗ್ರೆಸಿಗೆ ಸೇರಿದವನು ಎಂದು ತನ್ನ ಮನೆ, ಹೊಲ, ಹೋರಿ ಜೊತೆ ಎಲ್ಲಿ ಜಪ್ತಾಗುತ್ತದೋ ಎಂಬ ಶಂಕೆ ಅವನಿಗೆ. ಆದ್ದರಿಂದ ಅವನು ಮಧ್ಯಮಮಾರ್ಗ ಹಿಡಿಯಲು ಬಯಸುತ್ತಾನೆ. ಅವನ ಮಾತಿಗೆ ದನಿಗೂಡಿಸಿದಂತೆ ವಡ್ಡರಹಟ್ಟಿಯ ಮುಖಂಡ ಪೆದ್ದಾಬೋವಿಯೂ 'ಬಾಪರೆಡ್ಡಿಯನ್ನು ಕರೆಸಿ ತಪ್ಪುದಂಡ ಇರಿಸಿ ಬಿಟ್ಟುಬಿಡೋಣ' ಎಂದು ಹೇಳುತ್ತಾನೆ.

ಆದರೆ ಬಾಪಾರೆಡ್ಡಿಗೆ ಶಿಕ್ಷೆಯಾಗಬೇಕೆಂಬ ಎಂಬುದರ ಬಗ್ಗೆ ಭಿನ್ನಮತವಿಲ್ಲದ ಊರ ಜನರು ಇದನ್ನು ವಿರೋಧಿಸುತ್ತಾರಾದರೂ ಅವನಿಗೆ ಯಾವ ಶಿಕ್ಷೆ ನೀಡಬೇಕೆಂಬ ವಿಚಾರದಲ್ಲಿ ಬಿನ್ನಮತಿಗಳಾಗುತ್ತಾರೆ.

ಹಿರಿಯರ ಸಭೆಯಲ್ಲಿ ಸೌಮ್ಯವಾದಿಗಳು ಬಾಪಾರೆಡ್ಡಿಗೆ ಹಳ್ಳಿಯಲ್ಲಿ ಬೆಂಕಿ, ನೀರು ಕೊಡಕೂಡದು ಎಂದು ತೀರ್ಮಾನಿಸುತ್ತಾರೆ. ಈ ಆಜ್ಞೆ ಕಿರಿಯ ಕ್ರಾಂತಿಕಾರಿ, ತೀವ್ರಗಾಮಿ ಚಿಂತನೆಗಳನ್ನು ಮೈಗೂಡಿಸಿಕೊಂಡ ಅಜ್ಜಿಗ ತಮ್ಮ ತಂಡದ ಮುಖಂಡನ ರಕ್ತ ಹೀರಿದ ಮುಖವನ್ನು ಸ್ಮರಿಸಿಕೊಂಡು ಕೆಂಡಮಂಡಲವಾಗಿ ಸೌಮ್ಯವಾದಿಗಳು ಕೈಗೊಂಡ ನಿರ್ಧಾರವನ್ನು ದಿಕ್ಕರಿಸಿ ಕ್ರಾಂತಿಕಾರಕವಾದ ನಿರ್ಣಯವನ್ನು ಕೈಗೊಂಡು ಬಾಪಾರೆಡ್ಡಿಯ ಅಂಗಡಿಗೆ ಬೆಂಕಿ ಹಚ್ಚುತ್ತಾರೆ. (ರಕ್ತತರ್ಪಣ, ಪುಟ– ೮೫, ೧೯೪೬).

ಪಟೇಲ ಬಸವಯ್ಯನಂತಹ ಊರಿನ ಹಿರಿಯರು ತಮ್ಮ ಆಸ್ತಿ ಬೀದಿಪಾಲಾಗುತ್ತದೆ ಎಂಬ ಭಯದಿಂದ ಬಾಪಾರೆಡ್ಡಿ ದೇಶದ್ರೋಹಿ ಎಂಬ ವಿಷಯ ಗೊತ್ತಿದ್ದರೂ ಸರಿಯಾದ ತೀರ್ಮಾನ ತೆಗೆದುಕೊಳ್ಳದಿರುವುದನ್ನು ಇಲ್ಲಿ ಗಮನಿಸಬಹುದು. ಅಲ್ಲದೆ ಸಮಾಜದಲ್ಲಿ ಉನ್ನತವರ್ಗಗಳಾದ ಪಟೇಲ, ಶಾನುಭೋಗ, ಜಮೀನ್ದಾರಿ ಮನೆತನಗಳು ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವನ್ನು ನೀಡದೆ ಬ್ರಿಟಿಷ್ ಸರ್ಕಾರಕ್ಕೆ ಋಣವಾಗಿರುವುದನ್ನು ತಿಳಿಯಬಹುದು. ಜೊತೆಗೆ ಸ್ವಾತಂತ್ರ್ಯ ಹೋರಾಟಗಾರರಲ್ಲಿದ್ದ ಭಿನ್ನ ಚಿಂತನೆಗಳನ್ನು ಇಲ್ಲಿ ಗಮನಿಸಬಹುದು.

ಈ ವಿಚಾರದಲ್ಲಿ ಕೋನಂಗಿ ಕಾದಂಬರಿಯನ್ನು ಗಮನಿಸುವುದಾದರೆ, ಅಲ್ಲಿನ ಕೋನಂಗಿ ಮತ್ತು ಡಾಕ್ಟರ್ ಮಧ್ಯೆ ನಡೆಯುವ ಮಂದಗಾಮಿ, ತೀವ್ರಗಾಮಿ ಸಿದ್ಧಾಂತಗಳ ಕುರಿತು ನಡೆದ ಚರ್ಚೆ ಗಮನಾರ್ಹವಾಗಿದೆ.

ಕನ್ನಡ ಭಾಷಾಂತರ– ಕೋನಂಗಿ– ಕಾಂಗ್ರೆಸು ರಾಜಕೀಯದ ಮಾತು ಏನು?

ಡಾಕ್ಟರ್ – ಕಾಂಗ್ರೆಸ್ ಒಳ್ಳೆಯದೆ. ಮಹಾತ್ಮ ಗಾಂಧೀಜಿ ಉತ್ತಮ ಆಶಯಗಳ ದಾತ. ಆದರೆ ಕಾಂಗ್ರೆಸ್‌ನ ಆಶಯಗಳ ಪ್ರಕಾರ ಕಾಂಗ್ರೆಸಿನಲ್ಲಿ ಕೋಟೀಶ್ವರನೂ ಸೇರಿದರೂ ಏನು ಸಮಸ್ಯೆ ಇಲ್ಲ.

ಕೋನಂಗಿ – ತೀವ್ರವಾದಿಗಳೊಂದಿಗೆ ಮಾತ್ರ ಕೋಟೀಶ್ವರರು ಸೇರಲಿಕ್ಕೆ ಅಭ್ಯಂತರವಿದೆಯೆ

ಡಾಕ್ಟರ್–ಕೋಟೀಶ್ವರರು ಸೇರಬಹುದು. ಆದರೆ ಮುಂದೆ ತಮಗಿರುವ ಆಸ್ತಿಯನ್ನು ಸಾಂಘಿಕವಾದಿಗಳಿಗೆ ಅರ್ಪಿಸಬೇಕಾಗುತ್ತದೆ.

ಕೋಂನಂಗಿ (ಸಾಂಘಿಕವಾದಿಗಳು) ಮಂದಗಾಮಿ, ತೀವ್ರಾಗಮಿಗಳು ಮಹಾತ್ಮ ಗಾಂಧೀಜಿಯವರ ಬೋಧನೆಗಳನ್ನು ಒಪ್ಪುತ್ತಾರಾ?

ಡಾಕ್ಟರ್ – ಒಪ್ಪಿಕೊಳ್ಳುವುದಿಲ್ಲ.

ಕೋನಂಗಿ – ಕಾರಣ

ಡಾಕ್ಟರ್ – ಆ ಬೋಧನೆಗಳಿಂದ ನಷ್ಟವೇನು, ನಷ್ಟ ಲಾಭಗಳ ತೂಕ ನೋಡದೆ ತೀವ್ರವಾದಿಗಳು ಆತನ ಬೋಧನೆಗಳನ್ನು ಹೇಗೆ ಒಪ್ಪಿಕೊಳ್ಳುತ್ತಾರೆ.

ಕೋನಂಗಿ – ಮಹಾತ್ಮಾ ಗಾಂಧಿಜಿಯವರು ನಿಜವಾದ ಸೌಮ್ಯವಾದಿ. ಡಾಕ್ಟರ್‌ರವರೆ, ಪ್ರಪಂಚ ಪ್ರಪಂಚದಲ್ಲಿರುವ ಎಲ್ಲ ಪ್ರಜೆಗಳದು. ಆ ಪ್ರಜೆಗಳೆಲ್ಲರೂ ಸಮಾನವಾದ ಜೀವನ ನಡೆಸಲು ಮನುಷ್ಯನ ಧರ್ಮಶಕ್ತಿಯೇ ಆಧಾರ.

ಡಾಕ್ಟರ್– ಸೌಮ್ಯವಾದವು ಹೇಳುವುದು ಅದನ್ನೇ. ಮನುಷ್ಯನ ಧರ್ಮಶಕ್ತಿಯ ಮೇಲೆ (ಆಧಾರವಾಗಿ) ನಂಬಿಕೆ ಇಟ್ಟುಕೊಂಡು ಸುಮ್ಮನಿದ್ದರೆ ಆ ಉತ್ತಮ ಸ್ಥಿತಿ ಬರುವುದಕ್ಕೆ ಭೂಮಿಯೇ ಮುಳುಗಿ ಹೋಗುವವರೆಗೂ ಎದುರು ನೋಡುತ್ತಿರಬೇಕು ಅಷ್ಟೆ.

ಕೋನಂಗಿ – ಯಾವುದರ ಮೇಲೆ (ಆಧಾರ) ನಂಬಿಕೆ ಇಟ್ಟರೆ ಬೇಗ ಬರುತ್ತದೆ.

ಡಾಕ್ಟರ್ – ಹಿಂಸೆಯ ಮೇಲೆಯೇ. ತಪ್ಪು ಮಾಡಿದವನನ್ನು ಶಿಕ್ಷಿಸುವುದು ಮಾನವ ಜಾತಿಯಲ್ಲಿರುವ ಒಂದು ದೊಡ್ಡ ಶಕ್ತಿ. ಅದನ್ನು ಉಪಯೋಗಿಸುವುದನ್ನು ಬಿಟ್ಟು ಎಲ್ಲೋ ಮೂಲೆಯಲ್ಲಿ ಬಿದ್ದಿರುವ ಸಣ್ಣ ಮುದಿ ಶಕ್ತಿಯ ನೆರವನ್ನು ಪಡೆದರೆ ಯಾವ ಕೆಲಸ ಆಗುತ್ತದೆ. (ಮೂಲ; ಅನುಬಂಧ–೩ ಅಧ್ಯಾಯ–೪ ಕ್ರಸಂ. ೧೪)

ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ದೇಶಭಕ್ತರು ವಿವಿಧ ರೀತಿಯ ಬಣ, ಗುಂಪುಗಳನ್ನಾಗಿ ಮಾಡಿಕೊಂಡಿದ್ದಾರೆ. ಸೌಮ್ಯವಾದಿಗಳು ಮತ್ತು ತೀವ್ರಗಾಮಿಗಳು ವಿವಿಧ ರೀತಿಯಾಗಿ ಹೋರಾಟವನ್ನು ನಡೆಸಿ ತಮ್ಮ ಪ್ರಾಣಗಳನ್ನು ಅರ್ಪಿಸಿದ್ದಾರೆ. ಈ ಎರಡು ಗುಂಪಿನಲ್ಲಿ ಯಾವ ಪಕ್ಷದಿಂದ ದೇಶಕ್ಕೆ ಸ್ವಾತಂತ್ರ್ಯ ಬರುತ್ತದೆ. ಹೋರಾಟಗಾರರು, ದೇಶಪ್ರೇಮಿಗಳು, ಯಾರನ್ನು ಉತ್ತಮ ನಾಯಕರನ್ನಾಗಿ ಒಪ್ಪಿಕೊಳ್ಳುತ್ತಾರೆ ಎಂಬ ಚರ್ಚೆ ಇದೆ. ಹಿಂಸೆ–ಅಹಿಂಸೆ ತತ್ವಗಳ ಕುರಿತ ಚರ್ಚೆ ಇದ್ದು ಹಿಂಸೆಯಿಂದ ದೇಶಕ್ಕೆ ಸ್ವಾತಂತ್ರ್ಯ ಎಂಬುದನ್ನು ಡಾಕ್ಟರ್ ಅವರ ಮಾತುಗಳಿಂದ ತಿಳಿಯಬಹುದು.

ಹೀಗೆ ಕನ್ನಡ ಕಾದಂಬರಿಯಲ್ಲಿ ಅಹಿಂಸಾ ಪರವಾದ ಸೌಮ್ಯವಾದಿಗಳು ಸೌಮ್ಯನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ಆದರೆ ತೀವ್ರವಾದಿ ಚಿಂತನೆ/ಸಿದ್ಧಾಂತಗಳನ್ನು ಹೊತ್ತ ಯುವ ಪಡೆ ಸೌಮ್ಯವಾದಿ ತೀರ್ಮಾನಗಳನ್ನು ಉಲ್ಲಂಘಿಸುವುದನ್ನು ಕಾಣಬಹುದು. ಆದರೆ ತೆಲುಗು ಕಾದಂಬರಿಯಲ್ಲಿ ಸೌಮ್ಯವಾದ–ತೀವ್ರವಾದ ಸಿದ್ಧಾಂತಗಳ ಕುರಿತ ಚರ್ಚೆ ಕಂಡುಬಂದರೂ ಇಲ್ಲಿ ತೀವ್ರವಾದವು ಸೌಮ್ಯವಾದದೊಂದಿಗೆ ಹೆಣೆದುಕೊಂಡದ್ದಾಗಿದ್ದು, ಡಾಕ್ಟರ್ ಅದರ ಪ್ರತಿಪಾದಕರಾಗಿದ್ದಾರೆ. ಒಟ್ಟಾರೆಯಾಗಿ ಕನ್ನಡ–ತೆಲುಗು ಈ ಕಾದಂಬರಿಗಳಲ್ಲಿ ಹೆಚ್ಚಿನದಾಗಿ ಗಾಂಧೀಜಿಯವರ ಸಿದ್ಧಾಂತಗಳು ಕಂಡುಬಂದರೂ, ಅಲ್ಲಲ್ಲಿ ಕ್ರಾಂತಿಕಾರಕ ಸಿದ್ಧಾಂತಗಳಿಗೆ ಒತ್ತುಕೊಟ್ಟಿದ್ದನ್ನು ಸಹ ಗಮನಿಸಬಹುದು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂದರ್ಭದಲ್ಲಿ ಮಂದಗಾಮಿ–ತೀವ್ರಗಾಮಿ ನಾಯಕರ ವಾದ–ಸಂವಾದಗಳ ಪ್ರಸ್ತಾಪವನ್ನು ಇಬ್ಬರೂ ಸಾಕಷ್ಟು ಪ್ರಮಾಣದಲ್ಲಿ ಹಿಡಿದಿಟ್ಟಿರುವುದನ್ನು ಗುರುತಿಸಬಹುದು.

❖❖❖

ಅಧ್ಯಾಯ : ಐದು

ಔದಾರ್ಯದ ಉರುಳಲ್ಲಿ ಮತ್ತು ಕೊಲ್ಲಾಯಿ ಗಟ್ಟಿತೇನೇಮಿ: ಸಮಾನ ಘಟನೆಗಳನ್ನು ಪ್ರತಿನಿಧಿಸುವ ರಚನೆಗಳು

ಅಧ್ಯಾಯ: ಐದು

ಔದಾರ್ಯದ ಉರುಳಲ್ಲಿ ಮತ್ತು ಕೊಲ್ಲಾಯಿ ಗಟ್ಟಿತೇನೇಮಿ: ಸಮಾನ ಘಟನೆಗಳನ್ನು ಪ್ರತಿನಿಧಿಸುವ ರಚನೆಗಳು

ಶಿವರಾಮ ಕಾರಂತ ಮತ್ತು ಮಹೀಧರ ರಾಮಮೋಹನರಾವ್ ಲೇಖಕರು ಬೇರೆ ಬೇರೆ ಕಾಲಘಟ್ಟದಲ್ಲಿ ಈ ಕೃತಿಗಳನ್ನು ರಚನೆ ಮಾಡಿದ್ದರೂ ಸಹ ಗಾಂಧೀಜಿಯವರು ಕೈಗೊಂಡ ಅಸಹಕಾರ ಚಳವಳಿಯ ತುಣುಕು ನೋಟಗಳನ್ನು ಹಿಡಿದಿದ್ದಾರೆ. ಇವರು ಸ್ವಾತಂತ್ರ್ಯ ಚಳವಳಿಯನ್ನು ಹತ್ತಿರದಿಂದ ಕಂಡವರಾಗಿದ್ದಾರೆ. ಶಿವರಾಮಕಾರಂತರು ತಮ್ಮ ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಮೂರು ಸ್ವಾತಂತ್ರ್ಯ ಹೋರಾಟಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಅವರ ನಿಸ್ವಾರ್ಥ ದೇಶಸೇವೆಯ ಆದರ್ಶದಿಂದ ಪ್ರೇರಿತರಾಗಿ, ಪ್ರಾಮಾಣಿಕವಾಗಿ ದುಡಿದು ದಣಿದು ಸೋತುಹೋದವರ ವಿವಂಚನೆಯನ್ನು ವಿಫಲಭಾವನೆಯನ್ನು ಚಿತ್ರಿಸುತ್ತಾರೆ. ಈ ಕೃತಿಯಲ್ಲಿ ೧೯೨೧ರ ಸುಮಾರಿಗೆ ಅಸಹಕಾರ ಚಳವಳಿಗೆ ದುಮುಕಿ ಸ್ವಾತಂತ್ರ್ಯ ಉದಯದ ತನಕ ಸಾಗಿದ ತನ್ನ ಸ್ವಂತ ಬದುಕಿನ ಮತ್ತು ಅದನ್ನು ಸುತ್ತುವರಿದ ಸಾಮಾಜಿಕ ವ್ಯಕ್ತಿ, ಸಂಸ್ಥೆ, ರೀತಿ ನೀತಿಗಳ ಅನುಭವಗಳ ಪ್ರತೀಕವಿದೆ. ಆರಂಭದಲ್ಲಿ ತನ್ನ ಜತೆಗೆ ಅಲೆದಾಡಿದ ಮೂವರು ಮಿತ್ರರ ನೆನಪು, ಕುಂದಾಪುರ ತಾಲೂಕಿನಲ್ಲಿ ಮಿಂಚಿ ಮಾಯವಾದ ಅಸಹಕಾರದ ಪ್ರತಿಬಿಂಬ, ಸ್ವಾತಂತ್ರ್ಯ ಚಳುವಳಿಯನ್ನು ಕುರಿತ ತನ್ನ ಹತಾಶ ಕನಸುಗಳೂ ಈ ಕೃತಿಯಲ್ಲಿ ತುಂಬಿವೆ. ಚಿರಮನ್ನಣೆಗೆ ಪಾತ್ರರಾದ ಕಾರ್ನಾಡು ಸದಾಶಿವರಾಯರ ಬದುಕು, ಅವರ ದಮನಕ್ಕೆ ಕಾರಣರಾದ ಮುಂದೆ ರಾಜಕೀಯದಲ್ಲಿ ಮೆರೆದ ವ್ಯಕ್ತಿಗಳ ಚಿತ್ರವೂ ಇಲ್ಲಿದೆ ಎಂದು ಕಾರಂತರು ಮುನ್ನುಡಿಯಲ್ಲಿ ಹೇಳಿದ್ದಾರೆ.

ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ಮಹೀಧರ ರಾಮಮೋಹನರಾವ್ ಅವರು ಅಸಹಕಾರ ಚಳವಳಿ, ಕ್ವಿಟ್ ಇಂಡಿಯಾ ಚಳವಳಿ ಮತ್ತು ಸ್ವದೇಶಿ ವಸ್ತು ಬಳಕೆ, ವಿದೇಶಿವಸ್ತು ಬಹಿಷ್ಕಾರ ಚಳವಳಿಗಳ ತುಣುಕು ನೋಟಗಳು ಕಂಡುಬರುತ್ತವೆ.

ಕನ್ನಡ ಭಾಷಾಂತರ

ನಮ್ಮ ರಾಷ್ಟ್ರೀಯ ಹೋರಾಟ ಬಹಳ ಮಂದಿ ಅಂದುಕೊಂಡಂತೆ ಭಾವಿಸಿದಂತೆ ಕೇವಲ

ರಾಜಕೀಯಕ್ಕೆ ಪರಿಮಿತವಾದದ್ದು ಅಲ್ಲ. ಕುಲಮತ ಭೇದಗಳನ್ನು, ದ್ವೇಷಗಳನ್ನು ನಿರಾಕರಿಸುವುದು. ನಿರ್ಮೂಲನೆ ಮಾಡುವುದರ ಮೇಲೆ ಅವರ ಭವಿಷ್ಯ ಆಧಾರವಾಗಿದೆ. ಅಸ್ಪೃಶ್ಯತೆಯನ್ನು, ಅಸಮಾನತೆಯನ್ನು ಹೋಗಲಾಡಿಸಿ ಹಿಂದಿನಿಂದಲೂ ಅನೇಕ ರೀತಿಯ ಅವಮಾನಗಳಿಗೆ ಗುರಿಯಾದ ವರ್ಣಭೇದವನ್ನು ನಿರಾಕರಿಸುವುದು, ಉಳಿದವರೊಂದಿಗೆ ಸಮಾನವಾಗಿ ಬೆರೆತು ಬದುಕುವಂತೆ ಮಾಡುವುದು ಈ ರಾಷ್ಟ್ರೀಯತೆಯ ಉದ್ದೇಶವಾಗಿದೆ. ಫ್ಯೂಡಲ್ ಆಚಾರಗಳನ್ನು, ಆಲೋಚನೆಗಳನ್ನು, ಹವ್ಯಾಸ/ಅಭ್ಯಾಸಗಳನ್ನು ತೊಲಗಿಸಿ ಜನರಲ್ಲಿ ತಲೆ ಎತ್ತುತ್ತಿರುವ ಹೊಸ ಆಲೋಚನೆಗಳಿಗೆ, ಆಚಾರಗಳಿಗೆ ಪುಷ್ಟಿ ನೀಡಬೇಕು (ಮೂಲ; ಅನುಬಂಧ–೩ ಅಧ್ಯಾಯ–೫ ಕ್ರಸಂ. ೧) ಎಂದು ಸ್ವತಃ ಕಾದಂಬರಿಕಾರರು ಕೊನೆಯ ಪುಟಗಳಲ್ಲಿ ಹೇಳುತ್ತಾರೆ.

ಕಾದಂಬರಿಕಾರರ ಈ ಆಶಯಗಳಿಗೆ ಅನುಗುಣವಾಗಿ ಅವರ ಕೃತಿಗಳು ಮೂಡಿಬಂದಿದ್ದು ಅವುಗಳ ಭಿನ್ನತೆ ಒಟ್ಟಂದದಲ್ಲಿ ಈ ರೀತಿ ಇದೆ.

೧. ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ರಾಧಾಕೃಷ್ಣನು ಕೇವಲ ರಾಜಕೀಯ ಸ್ವಾತಂತ್ರ್ಯಕ್ಕೆ ಹೆಚ್ಚು ಒತ್ತುಕೊಟ್ಟಿರುವುದು ಕಂಡುಬಂದರೆ, ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ರಾಮನಾಥನು ಸಾಮಾಜಿಕ ಸ್ವಾತಂತ್ರ್ಯಕ್ಕೆ ಹೆಚ್ಚು ಆದ್ಯತೆ ಕೊಟ್ಟಿರುವುದನ್ನು ಗಮನಿಸಬಹುದಾಗಿದೆ.

೨. ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ಮದ್ಯಮ ವರ್ಗದ ಜನತೆ ಚಳವಳಿಗೆ ಸ್ಪಂದಿಸಿರುವುದು ಕಂಡುಬಂದರೆ, ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ಮೇಲ್ವರ್ಗದ ಜನತೆ ಚಳವಳಿಯಲ್ಲಿ ಭಾಗವಹಿಸಿರುವುದನ್ನು ಕಾಣಬಹುದಾಗಿದೆ.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ನಾಯಕ ರಾಧಾಕೃಷ್ಣ ಬಿ.ಎ. ವ್ಯಾಸಂಗ ಮಾಡುತ್ತಿದ್ದಾಗ ಮಹಾತ್ಮ ಗಾಂಧೀಜಿಯವರ ಸ್ವರಾಜ್ಯ ಚಳವಳಿಯ ವ್ಯಾಮೋಹಕ್ಕೆ ಒಳಗಾಗಿ ಓದನ್ನು ಅರ್ಧದಲ್ಲಿಯೇ ನಿಲ್ಲಿಸಿ ದೇಶಸೇವೆಯ ಚಳವಳಿಗೆ ದುಮುಕುತ್ತಾನೆ. ಅವನ ಗೆಳೆಯ ಸಖರಾಮ ಶಾಲೆಯೊಂದರಲ್ಲಿ ಉಪಾಧ್ಯಾಯನಾಗಿ ದುಡಿದು ತಿಂಗಳಿಗೆ ಐವತ್ತು ರೂಪಾಯಿ ಸಂಪಾದಿಸುತ್ತಿರುತ್ತಾನೆ. ಮಂಗಳೂರಿಗೆ ಮಹಾತ್ಮಗಾಂಧೀಜಿಯವರು ಬಂದಾಗ, ಅವರ ವಿಚಾರಗಳಿಂದ ಮತ್ತು ಭಾಷಣಗಳಿಂದ ಪ್ರಭಾವಿತನಾಗಿ ಪರ ಸರ್ಕಾರದ ದಾಸ್ಯಕ್ಕಿಂತ ಮಹಾಪರಾಧವಿಲ್ಲ ಎಂದುಕೊಂಡು ಕೆಲಸವನ್ನು ಬಿಡುತ್ತಾನೆ. ಅವನ ಮತ್ತೊಬ್ಬ ಗೆಳೆಯ ಸದಾನಂದ ಕಮ್ತಿ ಕುಂದಾಪುರದ ಶ್ರೀಮಂತ ಕುಟುಂಬಕ್ಕೆ ಸೇರಿದವನು. ಇವನು ಮುಂಬಯಿಯಲ್ಲಿ ವೈದ್ಯಕೀಯ ವಿದ್ಯಾಭ್ಯಾಸವನ್ನು ಕಲಿಯುತ್ತಿದ್ದವನು, ಓದು ಮುಗಿಯಲು ಕೇವಲ ಒಂದು ವರ್ಷ ಬಾಕಿಯಿರುವಾಗ ತಂದೆಗೂ ಸಹ ತಿಳಿಸದೆ ಓದನ್ನು ನಿಲ್ಲಿಸಿ ರಾಷ್ಟ್ರೀಯ ಚಳವಳಿಯಲ್ಲಿ ಧುಮುಕಲು ನಿರ್ಧರಿಸುವನು. ರಾಧಾಕೃಷ್ಣ, ಸಖಾರಾಮ ಮತ್ತು ಸದಾನಂದ ಕಮ್ತಿ ಈ ಮೂವರು ಗೆಳೆಯರು ನಿತ್ಯವೂ ಸಂಜೆ ಕುಂದಾಪುರದ ಮೈದಾನದಲ್ಲಿ ಸಭೆ ಸೇರುವರು. ಅಲ್ಲಿ ಸ್ವರಾಜ್ಯ ಮತ್ತು ಸ್ವದೇಶಗಳನ್ನು ಕುರಿತಂತೆ ಭಾಷಣ ಮಾಡುವರು.

ಆಗ ಕುಂದಾಪುರದ ಜನತೆಯ ದೃಷ್ಟಿಯಲ್ಲಿ ಈ ಮೂವರು ಪೊಲೀಸ್ ತೋಳಗಳ ಬಾಯಿಗೆ ಎದುರಾದ ಕುರಿಗಳಂತೆ ಕಾಣಿಸುತ್ತಾರೆ. ಎಲ್ಲರೂ ಅವರನ್ನು ಕಂಡು ಕನಿಕರಿಸುವವರೇ! ಹೋಗಲಿ! ಹಿಂದೂಸ್ಥಾನಕ್ಕೆ ಒಬ್ಬ ಗಾಂಧಿಯಾದರೆ, ನಮ್ಮ ಕುಂದಾಪುರಕ್ಕೆ ಮೂವರು ಎಂಬ ಹೆಮ್ಮೆ ತಾಳುತ್ತಾರೆ. ಈ ಮೂವರು ಗ್ರಾಮಸಂಚಾರವನ್ನು ಮಾಡಿ ಜನರನ್ನು ತಯಾರಿಸಬೇಕು ಜನರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಗಳಾಗಬೇಕು. ಆದ್ದರಿಂದ ಇದಕ್ಕೆಲ್ಲ ಮುಖ್ಯವಾಗಿ ಕಾಯಿದೆ ಭಂಗ, ಕರ ನಿರಾಕರಣೆಯೇ ಮೂಲ ಮಂತ್ರವಾಗಬೇಕು. ಹೀಗೆ ಅನೇಕ ರೀತಿಯ ಆಲೋಚನೆಗಳನ್ನು ತಮ್ಮ ಮನಸ್ಸುಗಳಲ್ಲಿ ತುಂಬಿಕೊಂಡು ವಿದ್ಯಾವಂತರಾಗಿರುವ ತಾವು ಅಜ್ಞಾನಿ ಗ್ರಾಮೀಣ ಜನರನ್ನು ಬ್ರಿಟಿಷ್ ಸರ್ಕಾರದ ವಿರುದ್ಧ ಎಚ್ಚರಿಸುತ್ತೇವೆ ಎನ್ನುವ ಹುಮ್ಮಸ್ಸಿನಿಂದ ಅನೇಕ ಊರುಗಳನ್ನು ಮೈಲುಗಟ್ಟಲೆ ಕಾಲುನಡಿಗೆಯಲ್ಲೇ ನಡೆದು ಸುತ್ತಾಡುವರು. ಆ ಸಮಯದಲ್ಲಿ ಅನ್ನ, ನೀರು ಸಹ ಸರಿಯಾಗಿ ಸಿಗದೆ ನಿದ್ರಿಸಲು ಸ್ಥಳ ಸಿಗದೆ ಎಲ್ಲೆಂದರಲ್ಲಿ ಬದುಕನ್ನು ಸಾಗಿಸುವುದನ್ನು ಕಾಣಬಹುದು.

ಮನೆಬಿಟ್ಟ ಎರಡು ತಿಂಗಳೊಳಗಾಗಿಯೇ ಸದಾನಂದ, ಸಖರಾಮರ ಉತ್ಸಾಹ ಕಡಿಮೆಯಾಗಿ ಹೋಗುತ್ತದೆ. ಅವರಿಬ್ಬರು ರಾಧಾಕೃಷ್ಣನಿಗೆ ಒಂದು ದಿನ ಸುಳಿವು ನೀಡದೆ ದೇಶಸೇವೆಯ ಚಳವಳಿಗೆ ಸಂಗ್ರಹ ಮಾಡಿದ್ದ ಹಣದೊಂದಿಗೆ ಪರಾರಿಯಾಗುವರು. ರಾಧಾಕೃಷ್ಣ ಬಹಳ ನೊಂದುಕೊಂಡು ತಾನು ಮಾತ್ರ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ಇಡಲಾರೆನೆಂದು ಅಚಲವಾದ ದೃಢ ನಿರ್ಧಾರವನ್ನು ತೆಗೆದುಕೊಂಡು ಮುಂದೆ ಸಾಗುವನು.

ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ನಾಯಕ ರಾಮನಾಥನು ಬ್ರಾಹ್ಮಣ ಕುಟುಂಬಕ್ಕೆ ಸೇರಿದವನಾಗಿರುತ್ತಾನೆ. ಗಾಂಧೀಜಿಯವರು ಬ್ರಿಟಿಷರನ್ನು ದೇಶದಿಂದ ಹೊರಹಾಕಲು ಈ ರೀತಿ ಹೇಳುತ್ತಾನೆ.

ಕನ್ನಡ ಭಾಷಾಂತರ

ಸ್ಕೂಲು, ಕಾಲೇಜು, ಕೋರ್ಟ್, ಉದ್ಯೋಗಗಳನ್ನು ತೊರೆದು ಪರ ಪ್ರಭುತ್ವ/ಬ್ರಿಟಿಷ್ ಸರ್ಕಾರದ ವಿರುದ್ಧ ಅಸಹಕಾರ ಚಳವಳಿ ಹೂಡಬೇಕು ಎನ್ನುವ ಮಾತನ್ನು ನೆನಪಿಸಿಕೊಳ್ಳುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೫ ಕ್ರಸಂ. ೨)

ರಾಮನಾಥನು ಅವರ ಕರೆಗೆ ಓಗೊಟ್ಟು ಶಾಲೆಯನ್ನು ತೊರೆಯುತ್ತಾನೆ. ರಾಮನಾಥನ ಸಹಪಾಠಿಗಳಾದ ಹರಿನಾರಾಯಣ ಮತ್ತು ಮಂಗರಾಜ ರಾಷ್ಟ್ರೀಯ ಮನೋಭಾವವನ್ನು ಹೊಂದಿರುತ್ತಾರೆ. ಮಂಗರಾಜನು ಚಳವಳಿಯಲ್ಲಿ ಧುಮುಕಲು ಪ್ರಯತ್ನಿಸಿದಾಗ ಅವನ ತಂದೆ ಬಲವಂತವಾಗಿ ಕರೆದುಕೊಂಡು ಹೋಗಿ ಶಾಲೆಗೆ ಕಳುಹಿಸುತ್ತಾನೆ. ಹರಿನಾರಾಯಣನು ಓದಿನಲ್ಲಿ ರಾಮನಾಥನಿಗಿಂತ ಮೊದಲು ಬರಬೇಕೆಂಬ ಆಶಯವನ್ನು ಹೊಂದಿರುತ್ತಾನೆ. ಆತನ ಮನಸ್ಸಿನಲ್ಲಿ ಸ್ವಾತಂತ್ರ್ಯ ಮನೋಭಾವ ಇದ್ದರೂ ಹೊರಗಡೆಗೆ ತೋರಿಸುತ್ತಿಲ್ಲ. ಆದರೆ ರಾಮನಾಥನು ನಿರ್ಭಯವಾಗಿ ಶಾಲೆಯನ್ನು ತೊರೆಯುತ್ತಾನೆ. ನಂತರ ರಾಮನಾಥ ಸುಂದರಿಯೊಂದಿಗೆ ಮಾತನಾಡುತ್ತಿರುವುದನ್ನು

ನೋಡಿದ ಆಕೆಯ ತಂದೆ ನಾರಾಯಣರಾವ್ ಅನ್ಯಥಾ ಎಂದು ಭಾವಿಸಿ ಆತನ ಮೇಲೆ ಅಪವಾದ ಮಾಡುತ್ತಾನೆ. ಇದು ಕಾರಣವಲ್ಲದೆ ತನ್ನ ಅಳಿಯನಾದವನು ಸ್ವಾತಂತ್ರ್ಯ ಚಳುವಳಿಯಲ್ಲಿ ದುಮುಕಿ ಹಾಳಾಗುತ್ತಿದ್ದಾನೆ ಎಂಬ ಮನೋಭಾವ ನಾರಾಯಣರಾವ್‌ನ ದೃಷ್ಟಿಯಲ್ಲಿ ಚಳುವಳಿಯಲ್ಲಿ ಪಾಲ್ಗೊಳ್ಳುವುದು ತಪ್ಪು ಎಂಬ ಗ್ರಹಿಕೆಯನ್ನು ಈ ಸನ್ನಿವೇಶದಿಂದ ಗ್ರಹಿಸಬಹುದಾಗಿದೆ. ಇಂತಹ ಕ್ಷುಲ್ಲಕ ಕಾರಣಕ್ಕಾಗಿ ಜೈಲಿಗೆ ಹೋಗಿ ಮನೆಯಿಂದ ದೂರ ಉಳಿಯುತ್ತಾನೆ. ಬ್ರಾಹ್ಮಣ ವರ್ಗದಲ್ಲಿ ಯಾರಾದರೂ ಜೈಲು ಮೆಟ್ಟಿಲು ಹತ್ತಿದರೆ ಮಹಾಪರಾಧ ಎಂಬ ಸೂಕ್ಷ್ಮವನ್ನು ಗಮನಿಸಬಹುದು.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ರಾಧಾಕೃಷ್ಣನಿಗೆ ಆಕಸ್ಮಿಕವಾಗಿ ಆಸ್ಪತ್ರೆಯ ವೈದ್ಯ ಡಾ. ಕೃಷ್ಣಪ್ಪನವರು ಸಿಕ್ಕಿ ರಾಧಾಕೃಷ್ಣನನ್ನು ಮನೆಗೆ ಕರೆದುಕೊಂಡು ಹೋಗಿ ಉಪಚರಿಸುವರು. ಆಗ ರಾಧಾಕೃಷ್ಣ ಮತ್ತು ಡಾ. ಕೃಷ್ಣಪ್ಪ ಅವರ ಮಧ್ಯೆ ನಡೆಯುವ ಸ್ವಾತಂತ್ರ್ಯವನ್ನು ಕುರಿತ ಸಂಭಾಷಣೆ ಈ ರೀತಿ ಇದೆ.

ಡಾ. ಕೃಷ್ಣಪ್ಪನವರು ರಾಧಾಕೃಷ್ಣನಿಗೆ ಮದುವೆಯಾಗಿ ಎಲ್ಲಿಯಾದರು ಒಂದು ಕಡೆ ನೆಲೆಯನ್ನು ಕಂಡುಕೋ. ಈ ಚಳವಳಿಯಿಂದ ಯಾವುದೇ ರೀತಿಯ ಪ್ರಯೋಜನ ಮತ್ತು ಅರ್ಥವಿಲ್ಲ ಎಂದು ಹೇಳಿ ತನ್ನ ನಿದರ್ಶನವನ್ನು ಕೊಡುವರು. ನಮ್ಮ ಜನರ ಬೆಂಬಲ ಮತ್ತು ಸಹಕಾರವನ್ನು ನಂಬಿಕೊಂಡು ಯಾವುದೇ ರೀತಿಯ ಕೆಲಸವನ್ನು ಮಾಡಲು ಸಾಧ್ಯವಿಲ್ಲ ಎಂದು ಹೇಳುವನು. ತಾನೂ ಕೂಡ ನಮ್ಮ ಜನರನ್ನು ನಂಬಿ ಯಾವುದೇ ಕೆಲಸವನ್ನು ಮಾಡಿದವನಲ್ಲ ಎಂದು ಹೇಳಿ, ತನ್ನ ಅನಿಸಿಕೆಯಂತೆ ನೀನು ಮತ್ತೆ ಕಾಲೇಜಿಗೆ ಸೇರಿ, ನಿನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ, ನಿನ್ನ ಜೀವನವನ್ನು ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗಲು ಕಲಿತ ಮೇಲೆ ನಿನ್ನ ನೆರೆಹೊರೆಯವರಿಗೆ ನಿನ್ನ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಸಹಾಯ ಮಾಡಿದರೆ ಅಷ್ಟೇ ಸಾಕು ಅನಿಸುತ್ತದೆ ಎನ್ನುವರು.

ಆಗ ರಾಧಾಕೃಷ್ಣನು ಕಾಲೇಜಿನ ವಿದ್ಯಾಭ್ಯಾಸದ ವಿಚಾರವನ್ನು ಈಗಾಗಲೇ ಸಂಪೂರ್ಣವಾಗಿ ಬಿಟ್ಟಿದ್ದೇನೆ. ಮತ್ತೆ ಕಾಲೇಜಿಗೆ ಸೇರಿ ಬಿ.ಎ. ಓದಿ ತನಗೆ ಅದರಿಂದ ಆಗಬೇಕಾದದ್ದು ಏನು ಇಲ್ಲ ಎನ್ನುವನು. ತನಗೆ ಪರಕೀಯರ ವಿದ್ಯೆಯು ಬೇಡ, ನನಗೆ ತನ್ನೊಬ್ಬನ ಜೀವನ ನಿರ್ವಹಿಸಿಕೊಂಡು ಹೋಗುವುದು ಕಷ್ಟವೆಂದು ತೋರುವುದಿಲ್ಲ. ಮತ್ತು ಅದನ್ನೇ ತಾನು ಆದರ್ಶವಾಗಿ ಇಟ್ಟುಕೊಂಡರೆ ನಾಳೆ ಅದರಲ್ಲಿಯೇ ಆಯಸ್ಸು ಕಳೆಯುತ್ತದೆ. ಪ್ರಪಂಚ ಮುಳುಗಿ ಹೋದರೂ ಅದರ ಕಡೆ ನೋಡುವ ಕಣ್ಣು ಇರುವುದಿಲ್ಲ ಎಂದು ಹೇಳುವನು. ಆಗ ಡಾ. ಕೃಷ್ಣಪ್ಪ, ರಾಧಾಕೃಷ್ಣನನ್ನು ಕುರಿತು ನೀನು ಮದುವೆಯಾಗಿ ಸಂಸಾರಿಯಾಗುವುದಿಲ್ಲ ಎನ್ನುವ ತೀರ್ಮಾನವೇ? ಎಂದು ಕೇಳುವನು. ಅದಕ್ಕೆ ಉತ್ತರವಾಗಿ, ರಾಧಾಕೃಷ್ಣ ಈಗಾಗಲೇ ಇರುವ ಹಿಂದೂಸ್ಥಾನದ ಗುಲಾಮರ ಸಂಖ್ಯೆಯ ಜೊತೆಗೆ ಮತ್ತಷ್ಟು ಗುಲಾಮರನ್ನು ಹೆಚ್ಚಿಸಲು ತಾನು ಸಿದ್ದನಿಲ್ಲ ಎನ್ನುವನು. ಆಗ ಡಾ. ಕೃಷ್ಣಪ್ಪನವರು ನಕ್ಕು ಆ ಮಾತನ್ನು ಗಾಂಧಿಯವರು ಹೇಳಿರುವುದು ಅವರಿಗೆ ಅದು ಸಮವಾಗಿ ತೋರಬಹುದು.

ಆದ್ದರಿಂದ ಸಂಸಾರಿಯಾಗಿ ವಿರಕ್ತನಾಗುವುದು ಬೇರೆ, ಆಗುವ ಮೊದಲೇ ಅನುಭವ ತಿಳಿಯದೆ ಆಡುವ ಮಾತು ಬೇರೆ. ನಾಳೆ ಬೆಳೆದು ದೊಡ್ಡವನಾದ ಮೇಲೆ ಒಂಟಿ ಜೀವನ ನಿನ್ನಿಂದ ಸಾಧ್ಯವಾಗುವುದಿಲ್ಲ. ಆದ್ದರಿಂದ ಈಗಲೇ ಮದುವೆಯ ಬಗ್ಗೆ ಒಂದು ದೃಢವಾದ ನಿರ್ಧಾರವನ್ನು ತೆಗೆದುಕೊಳ್ಳುವುದು ಸೂಕ್ತ ಎನ್ನುವರು. ಅದಕ್ಕೆ ರಾಧಾಕೃಷ್ಣ ನನ್ನ ಮನಸ್ಸು ನನಗೆ ಗೊತ್ತಿಲ್ಲ ಎಂದುಕೊಂಡಿದ್ದೀರಿ ಎನ್ನುವನು.

ಆಗ ಡಾ. ಕೃಷ್ಣಪ್ಪ ಈಗ ನಿನಗೆ ಅದು ತಿಳಿಯುವುದಿಲ್ಲ. ಹಾಗೆ ನಾಳಿನ ನಿನ್ನ ಮನಸ್ಸು ಇವತ್ತಿನಂತಿರಲಿಕ್ಕಿಲ್ಲ. ನೀನು ದೇಶದ ಗುಲಾಮರ ಸಂಖ್ಯೆಯನ್ನು ಬೆಳೆಯಿಸುವ ವಿಷಯ ಹೇಳುತ್ತೀಯ ನಾನು ಮೂವರು ಗುಲಾಮರ ತಂದೆಯಾಗಿಲ್ಲವೇ ಎನ್ನುವರು. ಆಗ ರಾಧಾಕೃಷ್ಣ ಡಾ. ಕೃಷ್ಣಪ್ಪನವರಿಗೆ ನಿಮಗೆಂದು ನಾನು ಆ ವಿಚಾರವನ್ನು ಹೇಳಲಿಲ್ಲ ಎನ್ನುವನು. ಡಾ. ಕೃಷ್ಣಪ್ಪ ತಾನು ಆ ವಿಚಾರವನ್ನು ಬಲ್ಲೆ. ನಿನ್ನ ಮಾತಿನ ಅರ್ಥವನ್ನು ವಿಶ್ಲೇಷಿಸುತ್ತಿದ್ದೇನೆ. ನಿನ್ನ ಗಾಂಧಿಯವರಿಗೂ ಮೂವರು ಮಕ್ಕಳಿದ್ದಾರೆ. ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕೂ ಗುಲಾಮರು ಹುಟ್ಟಬೇಕಾದುದು ಅವಶ್ಯಕ. ಇವತ್ತಿನ ಗುಲಾಮರಿಗೆ ಸ್ವರಾಜ್ಯ ಸಿಗದೆ ಹೋದರೂ ನಾಳಿನ ಗುಲಾಮರಿಗೆ ಅದು ಸಿಗಬಾರದು ಎಂದು ಇಲ್ಲ ಎನ್ನುವನು. ಆಗ ರಾಧಾಕೃಷ್ಣ ಡಾ. ಕೃಷ್ಣಪ್ಪನವರನ್ನು ಕುರಿತು ಈ ವರ್ಷ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಿಲ್ಲ ಎನ್ನುತ್ತೀರಾ? ಗಾಂಧೀಜಿಯವರ ಭವಿಷ್ಯ ಸುಳ್ಳು ಎಂದು ಪ್ರಶ್ನಿಸುವನು. ಆಗ ರಾಧಾಕೃಷ್ಣ ಮತ್ತು ಡಾ. ಕೃಷ್ಣಪ್ಪ ಇವರ ಮಧ್ಯೆ ಸ್ವಾತಂತ್ರ್ಯ ಸಿಗುವ ವಿಚಾರ ಕುರಿತು ನಡೆಯುವ ನಾಟಕೀಯ ಸಂಭಾಷಣೆಯು ತುಂಬ ಸ್ವಾರಸ್ಯಕರವಾಗಿದೆ:

"ಸುಳ್ಳೋ ಸತ್ಯವೋ, ನನಗಂತು ಅದು ಸದ್ಯ ಬರುವಂತೆ ಕಾಣಿಸುತ್ತಿಲ್ಲ. ಹೋಗಲಿ ಈ ವರ್ಷ ಅದು ಸಿಗಲಿಲ್ಲವೆಂದು ತಿಳಿಯುವ, ಆಗಲೂ ಮದುವೆ ಬೇಡವೆನ್ನುತ್ತೀಯಾ?

ಅದೇನು ಹೇಳಲಾರೆ, ಈ ವರ್ಷದ ಚಿತ್ರವಷ್ಟು ನನ್ನ ಮುಂದಿನದು, ಹಾಗೆಂದು ನಾಳಿನ ಭವಿಷ್ಯ ನಾನು ನಿರ್ಧರಿಸುವ ಹಾಗಿದ್ದರೆ ಪ್ರಪಂಚದ ವ್ಯವಹಾರ ಎಷ್ಟು ಸಲೀಸು ಇರುತ್ತಿತ್ತು ಗೊತ್ತೇ? ನಮ್ಮ ತಂತ್ರದಲ್ಲಿರುವುದರ ಸಾವಿರ ಪಾಲು ಪರತಂತ್ರದಲ್ಲಿದೆ, ಸಂಸಾರದ ಪ್ರತಿಯೊಂದು ಪ್ರಶ್ನೆಯು ಹಾಗೆನೇ, ಈಗ ನೀನು ಊರೂರು ತಿರುಗಾಡಿ ಬಂದಿದ್ದೀ, ಯಾಕೆ, ನೀನು ಅಂದಂತೆ ಜನರು ಕೇಳಲು ಸಿದ್ದರಿಲ್ಲ?

ಜನರಿಗೆ ತಿಳುವಳಿಕೆ ಬಂದಿಲ್ಲ

ತಿಳುವಳಿಕೆ ಬರುವಂತೆ ನಾವು ಏನು ಮಾಡಿದ್ದೇವೆ? ನಾಲ್ಕು ಉಪನ್ಯಾಸ ಕೇಳಿ ಅವರು ತಯಾರಾಗುತ್ತಾರೆಯೇ?

ಇಲ್ಲ ತಯಾರಿಸಬೇಕು, ಅವರನ್ನು

ಹೇಗೆ ?

ಗಾಂಧೀಜಿಯವರು ಅಂದಿಲ್ಲವೆ, ನೂಲುವುದರಿಂದ, ಅಸ್ಪೃಶ್ಯತಾ ನಿವಾರಣೆ, ಮಧ್ಯಪಾನ ನಿಷೇಧ ಇವುಗಳಿಂದ...

ನೂಲುವ ಜನಗಳೂ ಇದ್ದಾರೆ. ಬೇರೆ ದೇಶದಲ್ಲಿ ಹೊಲೆಯರಿಲ್ಲದ ಊರುಗಳು ಉಂಟು. ಅವೆಲ್ಲ ಸ್ವತಂತ್ರವಾಗಿರುವ ದೇಶಗಳೆಂದು ತಿಳಿಯಲು ಬೇಕಿಲ್ಲ. ಸ್ವತಂತ್ರವಾಗಿರುವ ರಾಷ್ಟ್ರಗಳಲ್ಲಿ ಕುಡುಕುತನ, ಬಡತನದ ರಾಜ್ಯಗಳೇ ಅಧಿಕ. ಒಂದಕ್ಕೊಂದು ಸಂಬಂಧವಿಲ್ಲ. ನೀನು ಚರಿತ್ರೆ ಓದುವವನೇ? ಕತ್ತಿ ಹಿಡಿಯದೆ ಯಾವ ರಾಜ್ಯವು ಸ್ವಾತಂತ್ರ್ಯ ಗಳಿಸಿಲ್ಲ. ಹಾಗೆ ಮಾಡುವ ತನಕ ನಮ್ಮ ವೈರಿ ಓಡುವುದು ಇಲ್ಲ. ನಮ್ಮ ವೈರಿಗಳಿಗಿಂತ ಹೆಚ್ಚಾಗಿ ನಾವು ಕಾದಬಲ್ಲವಾದರೆ ಸ್ವಾತಂತ್ರ್ಯ ಇಲ್ಲವಾದರೆ ದಾಸ್ಯ"

ಇಲ್ಲಿ ಡಾ. ಕೃಷ್ಣಪ್ಪನವರು ರಾಧಾಕೃಷ್ಣನಿಗೆ ಸ್ವಾತಂತ್ರ್ಯವು ಪರಕೀಯರಿಂದ ತಮಗೆ ಸಿಗಲು ಯಾವ ರೀತಿಯಲ್ಲಿ ಸಾಧ್ಯವಾಗುವುದು ಎಂಬುದನ್ನು ಕುರಿತು ಹೇಳುವರು. ಇಲ್ಲಿ ರಾಧಾಕೃಷ್ಣ ಮತ್ತು ಡಾ. ಕೃಷ್ಣಪ್ಪನವರ ನಡುವೆ ನಡೆಯುವ ಚರ್ಚೆಯು ಸ್ವಾತಂತ್ರ್ಯವನ್ನು ಕುರಿತಂತೆ ತುಂಬ ಪ್ರಮುಖವಾದದ್ದು ಎಂದು ಹೇಳಬಹುದಾಗಿದೆ. ಡಾ. ಕೃಷ್ಣಪ್ಪನವರಿಂದ ಅಷ್ಟೆಲ್ಲ ವಿಚಾರ ವಿನಿಮಯ ನಡೆದರೂ ರಾಧಾಕೃಷ್ಣ ತಾನು ಹೋರಾಟವನ್ನು ಮುಂದುವರಿಸುವನು. (ಔದಾರ್ಯ ಉರುಳಲ್ಲಿ, ಪುಟ–೬೬–೬೭, ೧೯೪೭)

ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ರಾಮನಾಥನು ಗಾಂಧೀಜಿಯವರ ಅಸಹಕಾರ ಚಳವಳಿಯ ಕರೆಗೆ ಓಗೊಟ್ಟು ಶಾಲೆಯನ್ನು ತೊರೆದಿರುತ್ತಾನೆ. ಆಗ ರಂಗನಾಥರಾವ್ ಎಂಬ ಅಧ್ಯಾಪಕರು ರಾಮನಾಥನೊಂದಿಗೆ ಮಾತನಾಡಲು ಇಚ್ಚಿಸಿರುತ್ತಾನೆ. ಆಗ ರಂಗನಾಥರಾವ್ ಮತ್ತು ರಾಮನಾಥನ ನಡುವೆ ನಡೆದ ಸಂಭಾಷಣೆಯಲ್ಲಿ ರಂಗನಾಥರಾವ್ ತಾನು ಇಂಗ್ಲೆಂಡ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಸಂದರ್ಭದಲ್ಲಿ ಮದನ್‌ಲಾಲ್ ಡಿಂಗ್ರಾ ಬ್ರಿಟಿಷ್ ಅಧಿಕಾರಿಯನ್ನು ಕೊಂದ ಸಂದರ್ಭದಲ್ಲಿ ಅಲ್ಲಿದ್ದುದನ್ನು ಹೇಳುತ್ತಾನೆ. ನಂತರ ರಾಮನಾಥನನ್ನು ಕುರಿತು

ಕನ್ನಡ ಭಾಷಾಂತರ

ಚೆನ್ನಾಗಿ ಯೋಚನೆ ಮಾಡಿಯೇ ಚಳವಳಿಗೆ ಇಳಿದಿರುತ್ತೀಯಾ ಅಲ್ಲವೆ? ಡಿಂಗ್ರಾ, ಸಾವರ್ಕರ್ ಮಾಡಿದ ತ್ಯಾಗ, ಸಾಹಸಗಳಂತೆ ನೀನು ಸಹ ತ್ಯಾಗ, ಸಾಹಸ ಮಾಡುತ್ತಿದ್ದೀಯಾ?

ಆಲೋಚಿಸದೆ ಯಾವ ಕೆಲಸವನ್ನು ಸಹ ಮಾಡಕೂಡದು. ಒಂದು ಸಾರಿ ಚಳವಳಿಯಲ್ಲಿ ದುಮುಕಿದ ಮೇಲೆ ಕೊನೆಯವರೆಗೂ ಹೋರಾಡಬೇಕು. ಮಧ್ಯದಲ್ಲಿ ಹಿಂದಕ್ಕೆ ಬರಬಾರದು ಎಂದು ಆತ ಯಾವಾಗಲೂ ಹೇಳುತ್ತಿರುತ್ತಾನೆ. ಅದೇ ಈಗ ಹೊಸ ರೂಪದಲ್ಲಿ ಬೆಳಕಿಗೆ ಬಂದಿದೆ. ಅದರಲ್ಲಿ ಎತ್ತಿಕೊಂಡಿರುವುದು ಅಂತಿಂಥ ಸಣ್ಣಪುಟ್ಟ ವ್ಯವಹಾರದ ಕೆಲಸ ಅಲ್ಲ. ದೇಶಕ್ಕೆ ಸ್ವಾತಂತ್ರ್ಯ ತರುತ್ತೇನೆ ಎನ್ನುತ್ತೀಯಾ (ಮನಸ್ಸಿಗೆ, ದೇಹಕ್ಕೆ ಒಳ್ಳೆಯದಲ್ಲ) ಅದು ಒಳ್ಳೆಯದಲ್ಲ. ಆಸ್ತಿ

ಮುಂತಾದವುಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ನಿನಗೆ ಬೆಂಬಲಿಸುವಂತವರು ಸಹ ಕಂಡುಬರುವುದಿಲ್ಲ. ನೀನು ಸತ್ಯಾಗ್ರಹ ಪ್ರತಿಜ್ಞೆ ತೆಗೆದುಕೊಂಡಾಗ ಅನೇಕ ಜನರು ಬೆಂಬಲಿಸಿದರು. ಈಗ ಅವರೇ ಹಿಂದೆ ಸರಿದಿದ್ದಾರೆ. ಅವರೇ ಮತ್ತೆ ರಾತ್ರಿ ತಮ್ಮ ಕೋಣೆಗಳಿಗೆ ಬೀಗ ಹಾಕಿಕೊಂಡು ಬಂದು ಕಾಲೇಜು ಬಿಟ್ಟಿದ್ದರಿಂದ ದುಃಖಪಟ್ಟರು. ಸತ್ಯಾಗ್ರಹ ಎಂಬ ಪ್ರತಿಜ್ಞೆಯಿಂದ ಹೊರಗೆ ಬಾ ಅನೇಕ ರೀತಿಯಾಗಿ ಹೇಳಿದರು. (ಮೂಲ; ಅನುಬಂಧ–೩ ಅಧ್ಯಾಯ–೫ ಕ್ರಸಂ. ೩)

ಹೀಗೆ ದೇಶದ ಸ್ವಾತಂತ್ರ್ಯ ಎಂಬುದು ಒಬ್ಬರ ಸ್ವತ್ತು, ಸಂಪತ್ತು ಅಲ್ಲ, ನೀನು ಕೈ ಹಾಕಿರುವ ಕೆಲಸ ಸಾಮಾನ್ಯವಾದುದಲ್ಲ, ಅಸಾಮಾನ್ಯವಾದುದು ಸ್ವಾತಂತ್ರ್ಯ ಎಂಬ ಸಮುದ್ರದಲ್ಲಿ ಈಜುವುದು ಬಹಳ ಕಷ್ಟ, ಹಿಂದೆ ಸರಿ ಎಂದು ಹೇಳುತ್ತಾನೆ. ಅದಕ್ಕೆ ಪ್ರತಿಯಾಗಿ ರಾಮನಾಥನು ಯಾವುದೇ ಕೆಲಸಕ್ಕೆ ಕೈಹಾಕಿದ ಮೇಲೆ ಎಷ್ಟೇ ಕಷ್ಟ ಬಂದರೂ ಹಿಂದೆ ಸರಿಯಬಾರದು ಎಂದು ಗಾಂಧೀಜಿಯವರನ್ನು ನೆನೆಸಿಕೊಳ್ಳುತ್ತಾನೆ. ಇಷ್ಟೆಲ್ಲಾ ಸ್ವಾತಂತ್ರ್ಯ ಕುರಿತಂತೆ ಚರ್ಚೆ ನಡೆದರೂ ರಾಮನಾಥ ತನ್ನ ಹೋರಾಟವನ್ನು ಮುಂದುವರೆಸುತ್ತಾನೆ. ಹೀಗೆ ರಾಮನಾಥನಲ್ಲಿನ ಅಚಲ ದೇಶಭಕ್ತಿ, ಧೃಢನಿರ್ಧಾರ, ದೇಶಾಭಿಮಾನವನ್ನು ಗಮನಿಸಬಹುದು.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ರಾಧಾಕೃಷ್ಣನ ಸ್ವಾತಂತ್ರ್ಯ ಹೋರಾಟಕ್ಕೆ ಜನರ ಪಾಲಿಗೆ ದೇವರೆನಿಸಿಕೊಂಡಿದ್ದ ಡಾಕ್ಟರ್ ಅಡ್ಡಿಯುಂಟು ಮಾಡಲು ಪ್ರಯತ್ನಿಸುತ್ತಾನೆ. ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ಸಮಾಜವನ್ನು ರೂಪಿಸುವ, ಬದಲಾಯಿಸುವ ಗುರುಗಳು, ಅಧ್ಯಾಪಕರು ರಾಮನಾಥನ ದೇಶಭಕ್ತಿಗೆ ಅಡ್ಡಗಾಲು ಹಾಕುವುದನ್ನು ಕಾಣಬಹುದಾಗಿದೆ. ಈ ಎರಡು ಕಾದಂಬರಿಗಳಲ್ಲಿನ ಡಾಕ್ಟರ್ ಮತ್ತು ಅಧ್ಯಾಪಕರು ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುತ್ತಾರೆ. ದೇಶವನ್ನು ಉದ್ದಾರ ಮಾಡುವ, ನಾಶಪಡಿಸುವ ಶಕ್ತಿ ಈ ವ್ಯಕ್ತಿಗಳಿರುತ್ತದೆ. ಬ್ರಿಟಿಷರಿಗಿಂತ ಮೊದಲು ಸ್ವಾತಂತ್ರ್ಯ ಚಳವಳಿಯನ್ನು ದಮನ ಮಾಡುವ ಈ ಪಾತ್ರಗಳು ಹೋರಾಟಗಾರರಲ್ಲಿ ಅಪನಂಬಿಕೆ, ಅಧೈರ್ಯ ಉಂಟು ಮಾಡುವ ಬ್ರಿಟಿಷರ ಪ್ರತಿನಿಧಿಗಳಾಗಿ ಕಂಡುಬರುವುದನ್ನು ಸೂಕ್ಷ್ಮವಾಗಿ ಗ್ರಹಿಸಬಹುದು.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ರಾಧಾಕೃಷ್ಣನು ಮದುವೆಯಾದ ನಂತರ ಸ್ವಲ್ಪ ದಿನಗಳನ್ನು ಅಲ್ಲಿಯೇ ಕಳೆಯುತ್ತಾನೆ. ಹಾಗೆ ತನ್ನ ಸ್ವರಾಜ್ಯದ ಕನಸನ್ನು ನನಸು ಮಾಡಲು ತನ್ನ ಪಾಲಿನ ಕರ್ತವ್ಯವನ್ನು ಮಾಡಲೇಬೇಕೆಂದು ಹಂಬಲದಿಂದ ಹಾತೊರೆಯುತ್ತಿರುವನು. ಆ ಸಮಯದಲ್ಲಿ ರಾಧಾಕೃಷ್ಣನಿಗೆ ದಯಾನಂದರಾಯರ ಪರಿಚಯವಾಗುವುದು. ಅವನ ಮಾರ್ಗದರ್ಶಕರು, ಮುಖ್ಯ ಗುರುಗಳೂ ಆದ ಮಂಗಳೂರಿನ ದಯಾನಂದರಾಯರು ನಾಡಿನ ಧುರೀಣರು, ಹಲವರ ಆದರ್ಶ. ದೇವರು ಅವರಿಗೆ ಸಂಪತ್ತು, ಸಂತಾನ ಸುಖ ಎಲ್ಲವನ್ನು ಕೊಟ್ಟಿದ್ದಾನೆ. ಅಂಥ ಜೀವನದಿಂದ ಅವರ ಮನಸ್ಸು ಸೇವಾ ಜೀವನಕ್ಕೆ ಹರಿಯಿತು. ತ್ಯಾಗಕ್ಕೆ ಮುಂದುವರಿಯಿತು. ಗಾಂಧೀಜಿಯವರ ಪ್ರಿಯದರ್ಶನದಿಂದ, ಸಂಭಾಷಣೆಗಳಿಂದ, ಮೈಯಲ್ಲಿ ರಾಷ್ಟ್ರೀಯತೆಯ ಹುರುಪು ಉದಯಿಸಿತು.

ಅವರ ಜೊತೆಯಲ್ಲಿ ನೂರಾರು ತರುಣರು ಕಲೆತರು. ಔದಾರ್ಯಹೀನರು ಉದಾರಿಗಳಾದರು. ಮಂಗಳೂರಿನಲ್ಲಿ ಅವರು ಯುವ ಗಾಂಧಿಯೇ ಆದರು. ತೆರೆಗೈಯ್ಯ ಕರ್ಣನಂತೆ ತಮ್ಮ ಬೊಕ್ಕಸವನ್ನು ರಾಷ್ಟ್ರ ಸೇವೆಗೆ ಮೀಸಲಿಟ್ಟರು.

ದಯಾನಂದರಾಯರ ವರ್ಚಸ್ಸು ಮೇರೆವರಿಯಿತು. ಹಲಸಿನ ತೊಳೆಗೆ ಮುತ್ತುವ ಸೊಳ್ಳೆಗಳಂತೆ ಸೋಮಾರಿಗಳು, ಸೋಗಿನವರು ಸುತ್ತುವರಿದರು. ಜನತೆಯ ಮಾತಿಗೂ, ಮನಕ್ಕೂ ಇರುವ ಅಂತರವನ್ನು ಅರಿಯದೆ ಅವರು ಎಲ್ಲರನ್ನು ನಂಬಿದರು. "ಅಲ್ಲಿ ಹತ್ತು ನೂರು ಜನ ಶಾಲೆಗಾಗಿ ಕಾದಿದ್ದಾರೆ. ಅಲ್ಲಿ ಐನೂರು ಜನ ಹೊಲೆಯರು ಮದ್ಯಪಾನ ಪ್ರತಿಜ್ಞೆ ಮಾಡಿದ್ದಾರೆ. ಮತ್ತೊಂದು ಕಡೆ ಊರಿನ ಪ್ರಮುಖರೆಲ್ಲರು ಕಾಯಿದೆ ಭಂಗಕ್ಕೆ ಅನುವಾಗಿದ್ದಾರೆ" (ಔದಾರ್ಯದ ಉರುಳಲ್ಲಿ, ಪುಟ–೮೦, ೧೯೪೭) ಎಂದರೆ ಎಲ್ಲವನ್ನೂ ನಂಬಿದರು. ಅಲ್ಲಿ ಇಲ್ಲಿ ಓಡಾಡಿದರು. ತಮ್ಮ ಸಂಪತ್ತು ತಮ್ಮದಲ್ಲವೆಂಬಷ್ಟು ಉದಾರವಾಗಿ ಹಣ ವ್ಯಯಿಸಿದರು. ಎಲ್ಲರನ್ನು ನಂಬಿ ಅವರು ತಮ್ಮ ಬೊಕ್ಕಸವನ್ನು ಬರಿದು ಮಾಡಿಕೊಂಡರು. ಅಳತೆ ಮೀರಿದ ಔದಾರ್ಯ, ಮಾತಿನ ಉರುಳಿಗೆ ಸುಲಭವಾಗಿ ಬಲಿ ಬೀಳುವ ಅವರ ಸರಳತನ ಅವರನ್ನು ಬಹುಬೇಗನೆ ಸಾಲಿಗರ ಕೈಗೆ ಸಿಲುಕಿಸಿದವು. ಅವರ ಕೈ ಬರಿದಾಗುತ್ತಲೇ ಅವರನ್ನು ಸುತ್ತುವರಿದಿದ್ದ ಜನರ ಉತ್ಸಾಹವು ಬರಿದಾಯಿತು. ಜನರು ಅವರಿಂದ ದೂರ ಸರಿದರು. ದಯಾನಂದರು ತಮ್ಮ ಭೂಮಿ, ಮನೆಗಳನ್ನು ಕಳೆದುಕೊಂಡು ಸಾಲದ ಸುಳಿಯಲ್ಲಿ ಸಿಲುಕಿಕೊಳ್ಳುತ್ತಾರೆ. ಹೀಗೆ ದಯಾನಂದರಾಯರು ತಮ್ಮ ಸಮಸ್ತ ಸಂಪತ್ತನ್ನು ರಾಷ್ಟ್ರೀಯ ಚಳವಳಿಗೆ ಮೀಸಲಾಗಿರಿಸಿ ಕೊನೆಗೆ ಸೋಗಿನ ಕಪಟ ವ್ಯಕ್ತಿಗಳ ಸಂಚುಗಳಿಗೆ ಬಲಿಯಾಗುವುದನ್ನು ಮುಖ್ಯವಾಗಿ ಕಾಣಬಹುದಾಗಿದೆ.

ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ರಾಮನಾಥನ ತಂದೆ ಶಂಕರಶಾಸ್ತ್ರಿ ಅವರು ಸಮಾಜದಲ್ಲಿ ತನ್ನ ಸ್ಥಾನವನ್ನು ಉನ್ನತೀಕರಿಸಿಕೊಳ್ಳಲು, ತನ್ನ ಘನತೆ, ಗೌರವವನ್ನು ಹೆಚ್ಚಿಸಿಕೊಳ್ಳಲು ರಾಷ್ಟ್ರದಲ್ಲಿ ನಡೆಯುವಂತಹ ಕಾಂಗ್ರೇಸ್ ಸಭೆ, ಸಮಾರಂಭ, ಆಂಧ್ರ ಪ್ರದೇಶದಲ್ಲಿ ನಡೆಯುವಂತಹ ಎಲ್ಲಾ ರೀತಿಯ ಕಾರ್ಯಕ್ರಮಗಳಿಗೆ ಹಾಜರಾಗುತ್ತಿರುವುದು, ಊರಿಗೆ ಯಾರಾದರೂ ದೊಡ್ಡ ವ್ಯಕ್ತಿಗಳು ಬಂದರೆ ಅವರ ವಸತಿ, ಊಟೋಪಚಾರದ ವ್ಯವಸ್ಥೆ ಮಾಡಿ ಹೆಚ್ಚಿನ ಹಣವನ್ನು ವ್ಯಯ ಮಾಡುತ್ತಿರುತ್ತಾರೆ. ಈತನು ಕಾಂಗ್ರೇಸ್ ಅಭಿಮಾನಿ, ಗಾಂಧೀವಾದಿ ಎಂಬುದನ್ನು ತಿಳಿಯಬಹುದು. ಹೀಗೆ ಶಂಕರಶಾಸ್ತ್ರೀಯು ಸಹ ರಾಷ್ಟ್ರೀಯ ಚಳವಳಿಗಾಗಿ ತನ್ನ ಆಸ್ತಿ, ಅಂತಸ್ತನ್ನು ಪೋಲು ಮಾಡಿಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಹೀಗೆ ಸ್ವಾತಂತ್ರ್ಯವೇ ಉಸಿರು, ಪ್ರಾಣ ಎಂದು ನಂಬಿಕೊಂಡು ತಮ್ಮ ಸ್ವಂತ ಜೀವನ ಮತ್ತು ಮಕ್ಕಳ ಪರಿಸ್ಥಿತಿಯನ್ನು ಲೆಕ್ಕಿಸದೆ ದೇಶಕ್ಕಾಗಿ ತನ್ನ ಸರ್ವಸ್ವವನ್ನೆಲ್ಲ ತ್ಯಾಗ ಮಾಡಿದ ದಯಾನಂದರಾಯರು ಮತ್ತು ಶಂಕರಶಾಸ್ತ್ರಿಯವರ ದಾರಾಳತೆಯನ್ನು ಗುರುತಿಸಬಹುದು.

ಶಂಕರಶಾಸ್ತ್ರಿಯ ಈ ಖರ್ಚನ್ನು ಅವರ ಮಗಳು ವಿಶಾಲಾಕ್ಷಿಯೇ ತನ್ನ ದೊಡ್ಡಸ್ತಿಕೆಯನ್ನು ತೋರಿಸಿಕೊಳ್ಳುವುದಕ್ಕಾಗಿ ಅಪ್ಪ ತನ್ನ ಆಸ್ತಿಯನ್ನು ಪೋಲು ಮಾಡಿಕೊಳ್ಳುತ್ತಿರುವುದಾಗಿ ಹೇಳುತ್ತಾಳೆ:

ತನ್ನ ತಂದೆ ಕಾಂಗ್ರೆಸ್ ಸಭೆಗಳನ್ನು, ಆಂಧ್ರಪ್ರದೇಶದ ರಾಷ್ಟ್ರ ಮಹಾಸಭೆಗಳಂತಹ ರಾಜಕೀಯ ಸಮಾವೇಶಗಳಿಗೆ ಹೋಗಿ ಬರುವುದಕ್ಕೆ ತನ್ನ ಪಾಲಿಗೆ ಬಂದಿರುವ ಐದು ಎಕರೆ ಭೂಮಿಯಲ್ಲಿ ಅರ್ಧ ಭಾಗವನ್ನು ಈಗಾಗಲೇ ಮಾರಿದ್ದಾನೆ. ಉಳಿದ ಭಾಗ ಸಾಲಗಳಿಗೆ ಸರಿಯಾಗುತ್ತದೆ. ವ್ಯವಸಾಯ ಬೆಳೆಗಳಿಗೆ ಸ್ವಲ್ಪ ಸರಿಯಾದ ಬೆಲೆ ಸಿಗುತ್ತಿರುವುದರಿಂದ ಸಾಲಗಾರರು ಮನೆ ಹತ್ತಿರ ಬರುತ್ತಿಲ್ಲ. ಇಲ್ಲದಿದ್ದರೆ ಅದು ಕೂಡ ಎಂದೋ ಜಮಾ ಆಗುತ್ತಿತ್ತು. ಆತನ ಬಳಿ ಯಾರ್ಯಾರೋ ದೊಡ್ಡ ದೊಡ್ಡ ವ್ಯಕ್ತಿಗಳು ಆಗಾಗ ಬರುತ್ತಿರುವುದು ಆತನನ್ನು ಆ ಮಟ್ಟಕ್ಕೆ ತಂದು ನಿಲ್ಲಿಸಿದೆ. ಹಿಂದೆ ಒಮ್ಮೆ ನಮ್ಮ ಊರಿನಲ್ಲಿ ವಿವೇಕೋದಯ ಪುಸ್ತಕ ಭಂಡಾರ ವಾರ್ಷಿಕೋತ್ಸವ ನಡೆಯುತ್ತಿರುವ ಸಂದರ್ಭದಲ್ಲಿ ಕಾಶಿನಾಥ, ನಾಗೇಶ್ವರರಾವ್ ಬಂದಿದ್ದು, ತಮ್ಮ ಮನೆಯಲ್ಲಿ ವಸತಿ ಹೂಡಿದ್ದರು. ಅಂತಹ ಮೇಧಾವಿ ವ್ಯಕ್ತಿಗಳ ಪರಿಚಯ, ಆ ದೊಡ್ಡಸ್ತಿಕೆಯಿಂದ ತಮ್ಮ ಆಸ್ತಿ ಹೋಗುತ್ತದೆಂಬುದು ತೋಚಲೇ ಇಲ್ಲ. (ಮೂಲ; ಅನುಬಂಧ–೩ ಅಧ್ಯಾಯ–೫ ಕ್ರಸಂ. ೪) ಹೀಗೆ ಎರಡು ಕಾದಂಬರಿಗಳು ಶ್ರೀಮಂತರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಿದ್ದ ಕ್ರಮವನ್ನು, ಅದನ್ನು ಜನ ಗ್ರಹಿಸುತ್ತಿದ್ದ ಭಿನ್ನ ರೀತಿಗಳನ್ನು ದಾಖಲಿಸುತ್ತಾರೆ.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ರಾಮನಾಥನು ಕುಂದಾಪುರ ತಾಲೂಕಿನಲ್ಲಿ ಆಲೆಮನೆ ಗ್ರಾಮದಲ್ಲಿ ಸಂಚಾರ ಮಾಡಿ ಸ್ಲೇಟಿನ ಚೂರು, ಬಿದಿರಿನ ಕಡ್ಡಿಗಳಿಂದ ತಕಲಿಯನ್ನು ನಿರ್ಮಾಣ ಮಾಡಿ ಮಕ್ಕಳಿಗೆ ನೂಲು ಮಾಡಲು ಹೇಳಿಕೊಡುತ್ತಾನೆ. ಹೊಸ ಉಪಾಧ್ಯಾಯರು ಹುಡುಗರಿಗೆ ಹೆಬ್ಬಾಗಿಲಲ್ಲಿ ಕುಳಿತು ತಕಲಿಯಿಂದ ನೂಲು ಮಾಡಲು ಹೇಳಿಕೊಡುತ್ತಾರೆ. ಬಿದಿರಿನ ಬಿಲ್ಲಿನಿಂದ ಹತ್ತಿ ಹಿಂಜುವ ಪಾಠವನ್ನು ಹೇಳಿಕೊಡುತ್ತಾರೆ. ಮಂಜಯ್ಯನವರು ಆಗ್ರಹ ಪಡಿಸಿ ಊರ ಬಡಗಿಗೆ ನಾಲ್ಕು ದಿನ ಶ್ರಮಕೊಟ್ಟು, ಎರಡು ರಾಟೆಗಳನ್ನು ತಯಾರಿಸುತ್ತಾರೆ. ಲಕ್ಷ್ಮಿ, ಸತ್ಯ, ಮಂಜಯ್ಯ ನೂಲುವುದನ್ನು ಕಲಿಯುತ್ತಾರೆ. ರಾಧಾಕೃಷ್ಣನು ಹಳ್ಳಿಯ ಜನರಿಗೆ "ನೀವಿಷ್ಟು ಹತ್ತಿಯ ಗಿಡ ನೆಟ್ಟು ನೂಲು ಮಾಡುತ್ತ ಬಂದರೆ ನಿಮ್ಮ ಖರ್ಚಿಗೆ ಬೇಕಾದ ಅರಿವೆಯನ್ನು ಮಾಡಿಕೊಳ್ಳಬಹುದಲ್ಲಾ" ಎಂದು ಉಪದೇಶಿಸುತ್ತಾನೆ. ಮಂಜಯ್ಯನ ತಾಯಿ ಶೇಷಮ್ಮ ಜನ ಬರಿದೆ ಹೊತ್ತು ಕಳೆಯುವುದಕ್ಕಿಂತ ನೂತದ್ದರಿಂದ ಹಾನಿ ಇಲ್ಲ" ಎಂದು ಒಪ್ಪುತ್ತಾಳೆ. (ಔದಾರ್ಯದ ಉರುಳಲ್ಲಿ, ಪುಟ–೪೭, ೭೧,೭೨, ೧೯೪೭)

ಹೀಗೆ ರಾಧಾಕೃಷ್ಣನು ಗಾಂಧೀಜಿಯವರ ತತ್ವಗಳನ್ನು ಪರಿಚಯಿಸುವುದರ ಮೂಲಕ ಪರಿಪಾಲನೆ ಮಾಡುವಂತೆ ಪ್ರೇರೇಪಿಸುತ್ತಾನೆ. ಹಳ್ಳಿಯಲ್ಲಿ ಕೆಲಸ ಮಾಡದೆ ಬರಿ ಸೋಮಾರಿಗಳಾಗಿದ್ದಂತಹ ಜನರಿಗೆ ಹತ್ತಿ ಬೆಳೆದು ಸ್ವ–ಉದ್ಯೋಗ ಮಾಡುವ ಸ್ವಾವಲಂಬನೆ ಜೀವನ ಮಾರ್ಗವನ್ನು ರೂಪಿಸುವ ಬಡವರ ದಾರಿದೀಪವಾಗಿ ಬಿಂಬಿತವಾಗುತ್ತಾನೆ. ವಿದೇಶಿವಸ್ತು ಬಹಿಷ್ಕಾರ, ಸ್ವದೇಶಿವಸ್ತು ಬಳಕೆ ಮಾಡುವ ಬುದ್ಧಿವಂತಿಕೆಯನ್ನು ತೋರಿಸುತ್ತಾನೆ.

ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ನಾರಾಯಣ ಮತ್ತು ರಾಮನಾಥನು ಹಲವಾರು ವಿಷಯಗಳನ್ನು ಕುರಿತು ಚರ್ಚೆ ಮಾಡುತ್ತಾ ಹೋಗುತ್ತಿರುವಾಗ ನಾರಾಯಣನು ರಾಮನಾಥನನ್ನು "ಗಾಂಧಿಗಾರು" ಎಂದು ಪರಿಚಯ ಮಾಡುತ್ತಾನೆ. ಹಾಗೆ ಮುಂದೆ ಸಾಗುತ್ತಿರುವಾಗ ಲಚ್ಚಮ್ಮ ಚರಕದ ಮುಂದೆ ಕುಳಿತುಕೊಂಡು ನೂಲುತ್ತಿರುತ್ತಾಳೆ. ಅದನ್ನು ಕಂಡು ರಾಮನಾಥನು ಹರ್ಷಭರಿತನಾಗುತ್ತಾನೆ. ಆಗ ರಾಮನಾಥ,

ಕನ್ನಡ ಭಾಷಾಂತರ

ಇದು ಎಂದಿನಿಂದ ತಾಯಿ!

ಗಾಂಧೀಜಿಯವರು ಹೇಳಿದ ಹಾಗೆ ನೀವೆಲ್ಲ ಜೈಲಿಗೆ ಹೋಗುತ್ತಿದ್ದಾಗ, ನಾವು ಈ ರೀತಿಯ ಕೆಲಸವನ್ನಾದರೂ ಮಾಡಲಿಕ್ಕಾಗುವುದಿಲ್ಲವೆ? ಎಂದು ಲಚ್ಚಮ್ಮ ಹೇಳುತ್ತಾಳೆ.

ಈ ಆರು ತಿಂಗಳಿನಲ್ಲಿ ನಮಗೆ ಬೇಕಾದ ಪಂಚೆಗಳು, ಸೀರೆಗಳನ್ನು ನೇಯ್ದುಕೊಂಡಿದ್ದೇವೆ. ನಿಮ್ಮ ದೊಡ್ಡಪ್ಪ, ನಿನಗೆ ವೆಂಕಟರಮಣ ಕೋರ್ಟಿನಲ್ಲಿ ವಿರೋಧವಾಗಿ ಸಾಕ್ಷಿ ಹೇಳಿದ ದಿನದಿಂದ ನೂಲುತ್ತಿದ್ದಾನೆ. ನೂಲು ತುಂಬಾ ಚಿಕ್ಕದಾಗಿದೆ. ಎಂಬತ್ತು ನಂಬರ್ ಇರಬಹುದು ಅನಿಸುತ್ತದೆ. ಅದು ಸಣ್ಣ ಹತ್ತಿಯಿಂದ ಮಾಡಿದ್ದು. ಆ ಹತ್ತಿಗೋಸ್ಕರವಾಗಿ ಹಿತ್ತಲಲ್ಲಿ ಬಂಗಾರದ ಹತ್ತಿ ಗಿಡಗಳನ್ನು ನೆಟ್ಟಿದ್ದೇವೆ. ಶರಭಯ್ಯ ಹತ್ತು ಚರಕಗಳನ್ನು ಸಿದ್ಧಪಡಿಸಲು ಮಾವಿನ ಮರದ ಕೆಳಗಡೆ ಆತನಿಗೆ ಬೇಕಾದ ಮರಮುಟ್ಟುಗಳನ್ನೆಲ್ಲ ತಂದಿದ್ದಾನೆ. (ಮೂಲ; ಅನುಬಂಧ-೩ ಅಧ್ಯಾಯ-೫ ಕ್ರ.ಸಂ. ೫)

ಎರಡೂ ಕಾದಂಬರಿಗಳೂ ಗಾಂಧೀ ಹೋರಾಟದ ಭಾಗವಾಗಿದ್ದ ಚರಕ ಮತ್ತು ಸ್ವದೇಶೀ ಚಳುವಳಿಯನ್ನು ಸ್ವಾತಂತ್ರ್ಯ ಹೋರಾಟದ ಪ್ರಮುಖ ಸಂಗತಿಯಾಗಿ ಪರಿಭಾವಿಸಿ ಅದಕ್ಕೆ ಮಹತ್ವ ನೀಡುತ್ತವೆ. ತೆಲುಗು ಕಾದಂಬರಿಯಲ್ಲಂತೂ ಆ ಮಾತುಗಳನ್ನು ಲಚ್ಚಮ್ಮನ ಬಾಯಲ್ಲಿ ಹೇಳಿಸುವ ಮೂಲಕ, ಸ್ವಾತಂತ್ರ್ಯಹೋರಾಟದಲ್ಲಿ ಸ್ತ್ರೀಯರು ಪುರುಷರಿಗಿಂತ ಯಾವುದೇ ರೀತಿಯಲ್ಲಿ ಹಿಂದೆ ಬಿದ್ದಿರಲಿಲ್ಲ, ದೇಶಕ್ಕಾಗಿ ನಡೆದ ಮಹಾಯಜ್ಞದಲ್ಲಿ ಭಾಗವಹಿಸಿಲ್ಲ ಎಂಬ ಮಾತನ್ನು ಸುಳ್ಳಾಗಿಸುವಂತೆ ಚಿತ್ರಿಸಿದ್ದಾರೆ.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ಶ್ಯಾಮನು ಸುಳ್ಳು ನೆಪದಿಂದ ಜೈಲು ತೀರಿಸಿ ಮನೆಗೆ ಬಂದಿರುತ್ತಾನೆ. ಆಗ ರಾಧಾಕೃಷ್ಣ ಚಳವಳಿಯ ಜಾಗೃತಿ ಮೂಡಿಸಲು ಹಳ್ಳಿಗಳ ಪ್ರವಾಸ ಹೋಗಿರುತ್ತಾನೆ. ಆಗ ಸತ್ಯ "ಏನು ಮಾಡಲಿ ಶ್ಯಾಮ! ನಮ್ಮ ಚಂದ್ರನಿಲ್ಲದಿದ್ದರೆ ಅವರ ಹಿಂದೆ ನಾನೂ ಹೋಗಬೇಕೆಂದಿದ್ದೆ. ಮುಂಬಯಿಯಂತಹ ಊರಿನಲ್ಲಿ ಇನ್ನೂ ಸತ್ಯಾಗ್ರಹ ನಡೆಯುತ್ತಿದೆಯಂತೆ. ನಮ್ಮ ಊರಿನಲ್ಲಿ ಎಲ್ಲವೂ ತಣ್ಣಗಾಯಿತು. ಹೆಚ್ಚಿನ ಕೆಲಸವಿಲ್ಲವಾದರೂ ಅಷ್ಟನ್ನಾದರೂ ಮಾಡಬಹುದಿತ್ತು" ಎನ್ನುತ್ತಾಳೆ. (ಔದಾರ್ಯದ ಉರುಳಲ್ಲಿ, ಪುಟ-೨೨೦, ೧೯೪೭)

ಸ್ತ್ರೀ ಕೇವಲ ಗೃಹಿಣಿಯಾಗಿ ಕುಟುಂಬದ ಪೋಷಣೆ ಮಾಡಲು ಸಮರ್ಥಳು ಮಾತ್ರವಲ್ಲದೆ ದೇಶದ ಯಾವ ಭಾಗದಲ್ಲಾದರೂ, ಯಾವುದೇ ಕೆಲಸವನ್ನು ನಿರ್ವಹಿಸುವಲ್ಲಿ ತಜ್ಞಳು ಎಂಬುದನ್ನು ಮತ್ತು ಮುಂಬಯಿಯಂತಹ ನಗರದಲ್ಲಿ ಇನ್ನೂ ಚಳವಳಿಯ ಬಿಸಿ, ಕಾವು ಆರಿಲ್ಲ. ಆದರೆ ನಮ್ಮ ಊರಿನಲ್ಲಿ ಚಳವಳಿಯ ಗಂಧವೇ ಇಲ್ಲದಂತಾಗಿದೆ. ನಮ್ಮ ರಾಜ್ಯ, ಪ್ರದೇಶಗಳಲ್ಲಿ ಸುತ್ತಾಡಿ ರಾಷ್ಟ್ರೀಯತೆಯ ಬಗ್ಗೆ ಜಾಗೃತ ಮೂಡಿಸುವಂತಹ ಅಲ್ಪಕಾರ್ಯವನ್ನಾದರೂ ಮಾಡಿ ನನ್ನ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುತ್ತೇನೆ ಎಂಬ ಸತ್ಯಳಲ್ಲಿನ ರಾಷ್ಟ್ರಾಭಿಮಾನದ ಛಾಯೆಯನ್ನು ತಿಳಿಯಬಹುದು. ಮತ್ತು ನಗರಗಳಲ್ಲಿ ಸ್ವಾತಂತ್ರ್ಯದ ಕಿಚ್ಚು ಹತ್ತಿಕೊಂಡು ಉರಿಯುತ್ತಿರುವಾಗ ನಮ್ಮ ಹಳ್ಳಿಯ ಜನರು ನಮಗೆ ಸಂಬಂಧವೇ ಇಲ್ಲ ಎಂಬಂತೆ ಅದರ ಪರಿವೆ ಇಲ್ಲದೆ ಆರಾಮಾಗಿ ಸುಖಿಗಳಾಗಿರುವುದನ್ನು ಕಂಡು ಸತ್ಯ ಪರೋಕ್ಷವಾಗಿ ಹೇಳುತ್ತಿರುವುದನ್ನು ಗಮನಿಸಬಹುದು.

ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ಗಾಂಧೀಜಿ ಅಸಹಕಾರ ಚಳವಳಿಯ ಪ್ರತಿಜ್ಞೆಯನ್ನು ಕೈಗೊಂಡಾಗ ದುವ್ವೂರಿ ಸುಬ್ಬಮ್ಮ ಸ್ವದೇಶಿ ವಸ್ತುಗಳು, ಖಾದಿ ಬಟ್ಟೆಯ ಮೂಟೆಯನ್ನು ಪುರುಷನಂತೆ ಭುಜದ ಮೇಲೆ ಹೊತ್ತುಕೊಂಡು ಗಲ್ಲಿಗಲ್ಲಿ ತಿರುಗಿ ಮಾರಾಟ ಮಾಡುತ್ತಾಳೆ. ಮತ್ತು ವಿದೇಶಿ ವಸ್ತ್ರಗಳನ್ನು ವಿದ್ಯಾರ್ಥಿಗಳ ಸಮಾಗಮದಲ್ಲಿಯೇ ಬೆಂಕಿಯಲ್ಲಿ ಹಾಕಿ ಸುಟ್ಟುಹಾಕುತ್ತಾಳೆ. (ಕೊಲ್ಲಾಯಿ ಗಟ್ಟಿತೇನೇಮಿ, ಪುಟ–೬, ೧೭೬, ೧೯೨೧) ಈ ಎಲ್ಲ ವಿವರಗಳೂ ಕನ್ನಡ–ತೆಲುಗು ಕಾದಂಬರಿಗಳೆರಡರಲ್ಲಿಯೂ ಸ್ವಾತಂತ್ರ್ಯ ಚಳವಳಿಯಲ್ಲಿ ಸ್ತ್ರೀ ಭಾಗವಹಿಸುವಿಕೆಯ ಮಹತ್ವವನ್ನು ತೋರಿಸುತ್ತವೆ.

ಅಂದಿನ ಜನರಲ್ಲಿ ಗಾಂಧೀವಾದ ಮತ್ತು ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಇದ್ದ ತಪ್ಪು ಅಭಿಪ್ರಾಯವನ್ನೂ ಈ ಕಾದಂಬರಿಗಳು ಸಾಕಷ್ಟು ದಾಖಲಿಸುತ್ತವೆ. ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ಗಾಂಧೀಜಿಯವರ ಅಸಹಕಾರ ಚಳವಳಿ ಸಂದೇಶ ಕೇಳಿ ರಾಧಾಕೃಷ್ಣ ತನ್ನ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ ಬಂದಿರುತ್ತಾನೆ. ಆಗ ಅವರ ತಂದೆ ಗಾಂಧೀಜಿ ಮತ್ತು ಕಾಂಗ್ರೇಸನ್ನು ಕುರಿತು ಹೇಳುವ ಮಾತುಗಳು ಹೀಗಿವೆ: "ಈ ಗಾಂಧೀ ಮಂದಿಯ ಪಿತೂರಿ ಕೇಳಿ ಬೆಪ್ಪಾಗಿ ಕಾಲೇಜು ಬಿಟ್ಟು ಸ್ವರಾಜ್ಯ ತರುತ್ತಾನಂತೆ, ಇವೆಲ್ಲಾ ಸೇರಿಕೊಂಡು ಪಂಡು ಕೂಡಿಸುವುದಂತೆ. ನೂಲು ಮಾಡಲಿಕ್ಕೆ ಹೇಳುವುದಂತೆ, ಮೆಂಬರಿ ಮಾಡುವುದಂತೆ, ಆಗಿ ಹೋಗುವ ಪಂಚಾಯಿತಿ ಯಾವುದೂ ಅಲ್ಲ. ತಿರುಗುತ್ತಲೆ ಇದ್ದಾನೆ. (ಪುಟ–೪)

"ಅವನು ಗಾಂಧಿ ಕೆಲಸ ಮಾಡುವುದಾದರೆ ಅದೇ ಗಾಂಧಿ ಅವನಿಗೆ ಸಂಬಳ ಕೊಡಲಿ" ಎಂದು ರಾಧಾಕೃಷ್ಣನ ಭಾವ ನಾಗಪ್ಪಯ್ಯ ಹೇಳಿದಾಗ ತಂದೆ ರಾಮಪ್ಪಯ್ಯನು "ಹಾ! ಗಾಂಧಿ ಸಂಬಳ ಕೊಡುವವನೇ? ಇವರಿಂದಲೇ ಫಂಡು ಕೂಡಿಸಿ ಅವನು ತರಿಸಿಕೊಳ್ಳುವಾಗ ನನಗೆ ಯಾವುದೂ ತಿಳಿಯುವುದಿಲ್ಲ. ಇವರ ಸ್ವರಾಜ್ಯವೂ ಆಯಿತು. ಇವನೂ ಆಯಿತು. ಆ ಸ್ವರಾಜ್ಯವೊಂದು ಇಲ್ಲವೆ ನಮಗೇನು ಕಡಿಮೆಯಾಗಿದೆಯೆಂದು ಬೇಡವೇ? (ಪುಟ–೫)

ಮಂಜಯ್ಯ ರಾಧಾಕೃಷ್ಣನ ಜಾತಕ ನೋಡಿ ಹೋದಂತಹ ಸಂದರ್ಭದಲ್ಲಿ "ರಾಮಪ್ಪಯ್ಯ ಅವರು ಎಷ್ಟು ಮೆಚ್ಚಿದರೂ ಫಲವಿಲ್ಲ. ಕೈಗೆ ಬಾರದ ತುತ್ತು ಅದು ಮಂಜಯ್ಯನವರು ಅಲ್ಲ ಅವರ ಅಪ್ಪ ಬಂದರೂ ನೆಂಟಸ್ತಿಕೆ ಆಗುವ ನಮೂನೆ ಇಲ್ಲ. ಅವರು ಏನಾದರೂ ಆ ಗಾಂಧಿಗೆ ಕಾಗದ ಬರೆದು, ಅವರಿಂದ ಇವನಿಗೆ ಬರೆಯಿಸಿದರೆ ಆಗುತ್ತದೆಯೋ ಏನೋ" ಎನ್ನುತ್ತಾನೆ. (ಔದಾರ್ಯದ ಉರುಳಲ್ಲಿ, ಪುಟ–೬೨, ೧೯೪೭).

ಪುರುಷೋತ್ತಮನು ಕಲೆಕ್ಟರ್ ಆದಂತಹ ಸಂದರ್ಭದಲ್ಲಿ ರಾಧಾಕೃಷ್ಣನನ್ನು ಆಕಸ್ಮಿಕವಾಗಿ ನೋಡಿದ ಸಂದರ್ಭದಲ್ಲಿ ಅವನು ರಾಜದ್ರೋಹಿ, ಇನ್ನೂ ಖಾದಿ ಧರಿಸುತ್ತಾನೆ. "ಇಂಥ ಗಾಂಧಿ ನಾಯಿಗಳನ್ನು ಉಸಿರಿಲ್ಲದಂತೆ ಸಾಯಿಸಿಬಿಡಿ" ಎಂದು ಅಪ್ಪಣೆ ಕೊಡುತ್ತಾನೆ. (ಔದಾರ್ಯದ ಉರುಳಲ್ಲಿ, ಪುಟ–೩೨೨, ೧೯೪೭) ಗಾಂಧೀಜಿ ನಾಡು ಕಂಡ ದೈವಮೂರ್ತಿ. ಅವರ ವಿಚಾರಧಾರೆಗಳು ಹಲವಾರು ಜನರ ಮನೆ, ಮನಸ್ಸುಗನ್ನು ಸೇರಿ ಸ್ವಾತಂತ್ರ್ಯ ಚಳುವಳಿಯತ್ತ ಕೊಂಡೊಯ್ದಿವೆ. ಆದರೆ ಅಂತಹ ದೈವ ಸಂಕಲ್ಪ, ಸಂಭೂತ ಎಂದು ಬಿಂಬಿತರಾದ ಗಾಂಧೀಜಿಯವರನ್ನು ವಿರೋಧಿಸುತ್ತಿದ್ದವರು ನಾಡಿನಲ್ಲಿ ಇದ್ದರೆಂಬುದನ್ನು ನಾವಿಲ್ಲಿ ಗಮನಿಸಬಹುದಾಗಿದೆ.

ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ರಾಮನಾಥ–ರಂಗನಾಥರಾವ್ ಚರ್ಚೆ ಮಾಡುವ ಸಂದರ್ಭದಲ್ಲಿ ರಾಮನಾಥನು ಬ್ರಿಟಿಷರು ಭಾರತದ ಜನರ ದುಡಿಮೆಯ ಮೇಲೆ ದಿಗ್ಬಂಧನ ಏರಿ ರಾಜಕೀಯವಾಗಿ ಅಲ್ಲದೆ ಆರ್ಥಿಕವಾಗಿ ಶೋಷಿಸುತ್ತಿರುವುದನ್ನು ಹೇಳುತ್ತಿರುವಾಗ ರಂಗನಾಥರಾವ್

ಕನ್ನಡ ಭಾಷಾಂತರ

ನಿಮ್ಮ ಗಾಂಧೀಜಿ ದೇಶವನ್ನು ಕೃತಕಯುಗದ ಕಡೆ ತಿರುಗಿಸಬೇಕೆಂದುಕೊಂಡಿದ್ದಾನೆಯೇ. ಅದು ಸಾಧ್ಯವಿಲ್ಲದ ಕೆಲಸ. ಗಾಂಧೀಜಿಯ ಹೋರಾಟಕ್ಕೆ ಖಾದಿ ಕೇವಲ ಸಂಕೇತ ಮಾತ್ರ. ದೇಶದ ಪುರೋಭಿವೃದ್ಧಿಯಲ್ಲಿ ಅದರ ಪಾತ್ರವೇನಿಲ್ಲ ಎನ್ನುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೫ ಕ್ರಸಂ. ೬)

ಚರಕ ಖಾದಿಯಿಂದಲೇ ಸ್ವರಾಜ್ಯ, ಸ್ವತಂತ್ರ ಎಂದು ನಂಬಿ ಗಾಂಧೀಜಿಯವರನ್ನು ಅವತಾರ ಪುರುಷ, ದೇವತಾ ಮನುಷ್ಯ ಎಂದು ಪೂಜಿಸುತ್ತಿರುವ ದೇಶದ ಜನತೆಯ ಸಂದಡಿಯಲ್ಲಿ ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟಕ್ಕೆ ಖಾದಿ ಕೇವಲ ಸಂಕೇತ ಮಾತ್ರ. ಅದರಿಂದ ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎನ್ನುವಲ್ಲಿ ಗಾಂಧೀಜಿ, ಖಾದಿ ಬಗೆಗಿನ ಅಸಮಾಧಾನವನ್ನು ರಂಗನಾಥರಾವ್ ಮಾತುಗಳಲ್ಲಿ ಕಾಣಬಹುದಾಗಿದೆ.

ಅದೇ ರೀತಿಯಾಗಿ ರಾಜಮ್ಮ–ವಿಶಾಲಾಕ್ಷಿ ರಾಮನಾಥ ಸ್ವಾತಂತ್ರ್ಯ ಚಳವಳಿಯಲ್ಲಿ ದುಮುಕುವ ಮೊದಲು ಇದ್ದಂತ ಪರಿಸ್ಥಿತಿಯನ್ನು ಚರ್ಚಿಸುತ್ತಾ ರಾಜಮ್ಮ,

ಕನ್ನಡ ಭಾಷಾಂತರ

ಈ ಹಾಳು ಕಾಂಗ್ರೇಸ್, ದಿಕ್ಕುದೆಸೆಯಿಲ್ಲದ ಗಾಂಧೀಜಿ... ಎಲ್ಲಿಂದ ಬಂದರೇ ತಾಯಿ! ಹಚ್ಚ ಹಸುರಾಗಿ ಚಿಗುರು ಹೊಡೆಯುತ್ತಿರುವ ಕುಡಿಯನ್ನು ಚಿವುಟಿದಂತಾಯಿತು.! (ಮೂಲ; ಅನುಬಂಧ–೩ ಅಧ್ಯಾಯ–೫ ಕ್ರಸಂ. ೭)

ದೇಶದ ಜನತೆ ದಿಕ್ಕು ದಯೆ ಇಲ್ಲದೆ ದಿಕ್ಕಾಪಾಲಾಗಿ, ಕಂಗೆಟ್ಟು ಸಂಕೋಲೆಯ ಸುಳಿಯಲ್ಲಿ ಸುತ್ತಿಕೊಂಡಿರುವಾಗ ಸೂತ್ರದಾರನಂತೆ, ದಿಕ್ಸೂಚಿಯಂತೆ ದಂಡನಾಯಕನಾಗಿದ್ದವರು ಗಾಂಧೀಜಿ. ಆದರೆ ಇಲ್ಲಿ ಗಾಂಧೀಜಿಯವರನ್ನು ಬೋಗವಾಗಿ ಬೆಳೆದು ಬರುತ್ತಿರುವ ಗಿಡದಲ್ಲಿ ಕುಡಿಯನ್ನು ಚಿವುಟಿದ ಹಾಗೆ ಎಂದು ದೇಶದ ತಂದೆ, ಕುಟುಂಬದ ಯಜಮಾನನಂತಿರುವ ಗಾಂಧೀಜಿಯವರನ್ನು ಒಂದು ಕುಟುಂಬದ ವಿರೋಧಿಯಾಗಿ ಕುಟುಂಬದ ನಾಶಕ ಎಂಬಂತೆ ಚರ್ಚಿಸುತ್ತಾರೆ.

ರಾಮನಾಥನ ಜೀವನದಲ್ಲಿ ಗಾಂಧೀಜಿ ದುರದೃಷ್ಟ ಎಂಬ ರಾಮನಾಥನ ತಾಯಿಯವರ ಅಭಿಪ್ರಾಯವನ್ನು ಗುರುತಿಸಬಹುದು. ಸುಂದರಿ (ರಾಮನಾಥನ ಹೆಂಡತಿ) ಆಕೆಯ ತಾಯಿ ಅನ್ನಪೂರ್ಣಮ್ಮ ತನ್ನ ಜೀವನವನ್ನು ಕುರಿತು ಚರ್ಚಿಸುತ್ತಿರುವಾಗ ಸುಂದರಿ ಕನ್ನಡ ಭಾಷಾಂತರ– ಆ ಗೊತ್ತುಗುರಿಯಿಲ್ಲದ ಗಾಂಧೀ ಯಾರೋ, ಬಂಗಾರದಂತಹ ಕುಟುಂಬದಲ್ಲಿ ಬೆಂಕಿ ಹಚ್ಚಿದ್ದಾನೆ ಎನ್ನುತ್ತಾಳೆ. (ಮೂಲ; ಅನುಬಂಧ–೩ ಅಧ್ಯಾಯ–೫ ಕ್ರಸಂ. ೮)

ಗಾಂಧೀಜಿ ಆ ಸಂದರ್ಭದಲ್ಲಿ ಅಮೂಲ್ಯವಾದ ಬೆಲೆಬಾಳುವ ವಜ್ರ ಇದ್ದಂತೆ. ಭೂಮಿಯೊಳಗಿನ ನಿಕ್ಷೇಪ, ಖನಿಜ ಇದ್ದಂತೆ. ಆದರೆ ಸುಂದರಿಯ ಸುಂದರವಾದ ಜೀವನದಲ್ಲಿ ಕಿಚ್ಚು ಹತ್ತಿಸಿದ ಕಿಡಿ, ತನ್ನ ಅನ್ಯಾಯಕ್ಕೆ ಗಾಂಧೀಜಿಯೇ ಕಾರಣ ಎಂದು ಶಪಥ ಹಾಕುವುದನ್ನು ಕಾಣಬಹುದಾಗಿದೆ. ಹೀಗೆ ಕನ್ನಡ–ತೆಲುಗು ಕಾದಂಬರಿಗಳಲ್ಲಿ ಗಾಂಧೀಜಿಯವರನ್ನು ವಿರೋಧ ನಾಯಕರನ್ನಾಗಿ ಚಿತ್ರಿಸಿರುವುದು ಕಂಡುಬರುತ್ತದೆ.

ಭಾರತದಲ್ಲಿ ಗಾಂಧೀಜಿ ಬ್ರಿಟೀಷರ ದಬ್ಬಾಳಿಕೆ, ಅಧಿಕಾರದ ದರ್ಪ, ಸಾಮ್ರಾಜ್ಯ ವ್ಯಾಮೋಹದ ಮದವನ್ನು ಇಳಿಸಿದವನು, ದೀನ ದಲಿತ ನೊಂದವರಿಗೆ ತಂದೆಯಂತಿದ್ದವನು. ಮಹೋನ್ನತ ಗುಣಗಳಿಂದಲೇ ತತ್ವಾದರ್ಶಗಳಿಂದಲೇ ಲೋಕಕ್ಕೆ ಹಿತವೆಂಬುದನ್ನು ಕತ್ತಲಿಗೆ ಬೆಳಕನೀವ ಸೂರ್ಯನೆಂಬಂತೆ ಬದುಕಿ ಬಾಳಿದವರು ಗಾಂಧೀಜಿ. ಸ್ನೇಹ, ಪ್ರೀತಿ, ವಿಶ್ವಾಸಗಳ ಗಣಿಯಾಗಿ ತಾನು ಪಾಲಿಸಿಕೊಂಡು ಬರುತ್ತಿದ್ದ. ಮೌಲ್ಯಗಳಾದ ಸತ್ಯ, ಸರಳ ಜೀವನ, ತ್ಯಾಗ, ಮಾನವ ಪ್ರೇಮ, ದೇಶಸೇವೆಯೇ ಈಶ ಸೇವೆಯೆನಿಸಿ ಬದುಕಿದವರು. ಗಾಂಧೀಜಿ ದೇಶವನ್ನು ಮುನ್ನೆಡೆಸುವ ಮಹಾನಾಯಕನಾಗಿ ದೇಶವನ್ನು ರಕ್ಷಿಸುವ ಯೋಧನಂತೆ ಚಿತ್ರಿತವಾಗಿದ್ದಾರೆ. ಆದರೆ ರಾಮರಾಜ್ಯದಲ್ಲಿ ರಾವಣನಿರುವಂತೆ, ಗಾಂಧೀನಾಡಿನಲ್ಲಿ ಬ್ರಿಟಿಷರ ಹಣ, ಆಮಿಷಕ್ಕೆ ಬಲಿಯಾಗಿ ರಾಜಕೀಯ, ಅಧಿಕಾರದ ವ್ಯಾಮೋಹದಿಂದ ದೇಶದ ಹೋರಾಟಗಾರರನ್ನು, ರಾಷ್ಟ್ರೀಯ ನಾಯಕರನ್ನು ನಿಂದಿಸುವ, ಅಂಗಿಸುವ, ಅಣಕ ನುಡಿಗಳನ್ನಾಡುವ ವ್ಯಕ್ತಿಗಳು ಒಂದೆಡೆಯಾದರೆ, ಗಾಂಧೀಜಿ, ಕಾಂಗ್ರೆಸ್

ಪ್ರಭಾವಕ್ಕೆ ಸಿಲುಕಿ ತಮ್ಮ ಮಕ್ಕಳು ಉಜ್ವಲವಾದ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂಬ ಕೆಲವು ಕುಟುಂಬದ ಸದಸ್ಯರ ವಿರೋಧ ನಾಯಕರಾಗಿ ಗಾಂಧೀಜಿ ಕಂಡುಬರುತ್ತಾರೆ. ಸ್ವರಾಜ್ಯ, ದಾಸ್ಯತ್ವದಿಂದ ಮುಕ್ತಿ ಹೊಂದಬೇಕೆಂಬ ಆಶಯದ ಬಗ್ಗೆ ಕಿಂಚಿತ್ತೂ ಅಭಿಮಾನವಿಲ್ಲದೆ ತಮ್ಮ ಸ್ವಾರ್ಥಪರವಾದ, ಲೋಭಯುತ ಜೀವನದ ಬಗ್ಗೆ ಹೆಚ್ಚು ಕಾಳಜಿಯನ್ನು ಹೊಂದಿರುವಂತಹ ಅನೇಕ ರೀತಿಯ ಜನರನ್ನು ಅಂದಿನ ಕಾಲದಲ್ಲಿದ್ದಂತೆ ಪ್ರಸ್ತುತ ಸಂದರ್ಭದಲ್ಲಿಯೂ ಕಾಣಬಹುದಾಗಿದೆ.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ರಾಮಪ್ಪಯ್ಯ ರಾಧಾಕೃಷ್ಣನ ತಂದೆ ಹುಡುಗಿ (ಸತ್ಯ) ಮೂಲ ನಕ್ಷತ್ರದಲ್ಲಿ ಹುಟ್ಟಿದ್ದಾಳೆಂದು ರಾಧಾಕೃಷ್ಣ ಸತ್ಯರ ಮದುವೆಗೆ ಒಪ್ಪದೆ ತಿರಸ್ಕರಿಸುತ್ತಾನೆ. ಆಗ ಡಾಕ್ಟರ್ ಕೃಷ್ಣಪ್ಪನವರ ಸಮ್ಮುಖದಲ್ಲಿ ಮದುವೆ ನಡೆಯುತ್ತದೆ. ರಾಧಾಕೃಷ್ಣನ ತಂದೆ ಅವರಿಬ್ಬರನ್ನು ಮನೆಗೆ ಸೇರಿಸಿಕೊಳ್ಳುವುದಿಲ್ಲ. ಮಂಜಯ್ಯ (ಹುಡುಗಿಯ ತಂದೆ) ಲಗ್ನದ ಕಾಣಿಕೆಯಾಗಿ ಇನ್ನೂರು ರೂಪಾಯಿಗಳನ್ನು ರಾಧಾಕೃಷ್ಣನ ಕೈಮೇಲಿರಿಸಿ "ಇದನ್ನು ಯಾವ ಫಂಡಿಗಾದರೂ ಹಾಕು, ರಾಟೆ ಮಾಡಿಸು, ಮಗ್ಗ ಇರಿಸು" ಎನ್ನುವರು (ಔದಾರ್ಯದ ಉರುಳಲ್ಲಿ, ಪುಟ-೭೮, ೧೯೪೭) ಮಂಜಯ್ಯನ ಉದಾರ ಮನೋಭಾವ, ಧಾರಾಳತೆ ಮತ್ತು ರಾಧಾಕೃಷ್ಣನ ನಿಸ್ವಾರ್ಥ ಸೇವಾ ಮನೋಭಾವವನ್ನು ತಿಳಿಯಬಹುದು.

ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ರಾಮನಾಥನು ಜೈಲುವಾಸ ತೀರಿಸಿ ಮನೆಗೆ ಬಂದಿರುವಾಗ ತಂದೆ-ತಾಯಿಗಳು ಮನೆಯೊಳಗೆ ಸೇರಿಸಿಕೊಳ್ಳುವುದಿಲ್ಲ. ಆಗ ರಾಮನಾಥನು ತೋಟದ ಮನೆಯಲ್ಲಿ ವಾಸ್ತವ್ಯ ಹೂಡುತ್ತಾನೆ. ಆ ಸಂದರ್ಭದಲ್ಲಿ,

ಕನ್ನಡ ಭಾಷಾಂತರ

ಆತನು ತನ್ನ ಬಳಿ ಇರುವ ಹಣ ಮತ್ತು ಸಾಲ ಮಾಡಿ ತಂದ ಹಣದಿಂದ ಖಾದಿ ನೇಯಿಸುವುದು, ನೂಲುವುದು, ಸುಮಾರು ಒಂದು ಸಾವಿರ ಜನರಿಗೆ ಚರಕಗಳನ್ನು ತಂದು ನೂಲುವುದನ್ನು ಕಲಿಸುತ್ತಿದ್ದಾನೆ. (ಮೂಲ; ಅನುಬಂಧ-೩ ಅಧ್ಯಾಯ-೫ ಕ್ರ.ಸಂ. ೯)

ರಾಧಾಕೃಷ್ಣನ ನಿಸ್ವಾರ್ಥತೆ, ಸೇವಾ ಮನೋಭಾವ, ಖಾದಿ ಮೇಲಿನ ಗೌರವ, ಚರಕದ ಬಗೆಗಿನ ಅಭಿಮಾನವನ್ನು ಗುರುತಿಸಬಹುದು. ಖಾದಿ, ಚರಕದಿಂದಲೆ ದೇಶಕ್ಕೆ ಸ್ವಾತಂತ್ರ್ಯ ಎಂಬ ಅಂಶವನ್ನು ತಿಳಿಯಬಹುದು. ಕನ್ನಡ ಕಾದಂಬರಿಯಲ್ಲಿ ಮಂಜಯ್ಯನು ರಾಧಾಕೃಷ್ಣನಿಗೆ ಹಣವನ್ನು ಕೊಟ್ಟು ದೇಶಸೇವೆಗೆ ಪ್ರೇರೇಪಿಸುತ್ತಿರುವುದು ಕಂಡುಬಂದರೆ ತೆಲುಗು ಕಾದಂಬರಿಯಲ್ಲಿ ಸುಂದರಿಯ ತಂದೆ-ತಾಯಿಯರು ರಾಮನಾಥನ ದೇಶಸೇವೆ ಅಪರಾಧ ಎನ್ನುವಂತೆ ಪ್ರತಿಕ್ರಿಯಿಸುತ್ತಿರುವುದು ಕಂಡುಬರುತ್ತದೆ. ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಗುಲಾಮಗಿರಿಯನ್ನು ತೊಲಗಿಸುವಲ್ಲಿ ದೇಶದ ಎಲ್ಲಾ ಜನರ ಒಮ್ಮತ ಸಹಕಾರ, ಸಹಾಯ, ಪ್ರೋತ್ಸಾಹ, ಪ್ರೇರಣೆ ಅಗತ್ಯವಾಗಿತ್ತು. ಅದರ ಕೊರತೆ ಇದ್ದುದರಿಂದಲೇ ಸ್ವಾತಂತ್ರ್ಯ ತಡವಾಗಿ ದೊರೆತದ್ದು ಸ್ಪಷ್ಟವಾಗುತ್ತದೆ. ಹೀಗೆ ಕನ್ನಡ-ತೆಲುಗು

ಲೇಖಕರು ಹಲವು ಕಡೆ ಒಂದೇ ವಿಷಯವನ್ನು ಭಿನ್ನವಾಗಿ ಚಿತ್ರಿಸಿದ್ದರೂ ಅವರ ಅಭಿಪ್ರಾಯ, ಆಶಯಗಳು ಒಂದೇ ಎಂಬುದನ್ನು ತಿಳಿಯಬಹುದಾಗಿದೆ.

ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಎಷ್ಟು ಮುಖ್ಯವಾಗಿತ್ತೋ, ಅಷ್ಟೇ ಸಾಮಾಜಿಕ ಸ್ವಾತಂತ್ರ್ಯವೂ ಸಹ ಅವಶ್ಯಕವಾಗಿತ್ತು. ದೇಶದ ಹೋರಾಟದಲ್ಲಿ ಎಲ್ಲರೂ ಭಾಗಿಯಾಗುವುದು ಪ್ರಮುಖವಾಗಿತ್ತು. ಅದರಿಂದಾಗಿ ಮೊದಲು ಸಮಾಜದಲ್ಲಿ ಬಲವಾಗಿ ಬೇರೂರಿದ್ದ ಅನ್ಯಾಯ, ಅಸಮಾನತೆಯನ್ನು ತೊಡೆದು ಹಾಕುವ ಪ್ರಯತ್ನವನ್ನು ಈ ಎರಡು ಕಾದಂಬರಿಗಳು ದಾಖಲಿಸುತ್ತವೆ.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ಮಂಗಳೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ನೆರೆಹಾವಳಿ ಸಂಭವಿಸಿ ಜನ ಮನೆ, ಮಾಡುಗಳಿಲ್ಲದೆ ಸಂಕಷ್ಟವನ್ನು ಅನುಭವಿಸುತ್ತಾರೆ. ಆ ಸಂದರ್ಭದಲ್ಲಿ ರಾಧಾಕೃಷ್ಣನು ಅನೇಕ ಜನರನ್ನು ಶಾಲೆಯ ಚಾವಣಿಯಲ್ಲಿ ಬಿಡುತ್ತಾನೆ. ಆದರೆ ಹೊಲೆಯರಾದ ಒಬ್ಬ ಬಾಣಂತಿ, ಕೂಸು, ಒಬ್ಬಳು ಮುದುಕಿ ಅವನ್ನು ಯಾರು ಸಮೀಪಕ್ಕೆ ಸಹಿಸುವಂತೆ ಇಲ್ಲ. ಅಂಧಶ್ರದ್ಧೆ ಎಂದು ಅವರನ್ನು ಮರಕಾಲನ ಮನೆಗೆ ಬಿಟ್ಟು ಸತ್ಯಳ ಸೀರೆಯನ್ನು ಕೊಟ್ಟು, ಊಟಕ್ಕೆ ಗಂಜಿಯನ್ನು ಕೊಟ್ಟು ಕಳಿಸುತ್ತಾನೆ. (ಔದಾರ್ಯದ ಉರುಳಲ್ಲಿ, ಪುಟ–೧೧೬,೧೧೭, ೧೯೪೭)

ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ಕಾದಂಬರಿಯ ನಾಯಕ ರಾಮನಾಥನು

ಕನ್ನಡ ಭಾಷಾಂತ

ಸತತವಾಗಿ ಎರಡು ವಾರಗಳಷ್ಟು ದಿನ ಬೆಳಿಗ್ಗೆ–ಸಾಯಂಕಾಲ ಚೆಂಬು ತೆಗೆದುಕೊಂಡು ಹಳ್ಳಿ ಜನರಿಗೆ ನೀರು ಒಯ್ಯಬೇಕು. ಮಳೆ ಹಿಂದೆ ಸರಿದಿದೆ. ದಲಿತರಿಗೆ ಬಾವಿಯಲ್ಲಿ ನೀರನ್ನು ತುಂಬಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆ ಕುರಿತು ಹೇಳುತ್ತಿದ್ದರು. ನಮ್ಮ ಊರಿನಲ್ಲಿ ಆ ಒಂದು ಚಿಕ್ಕ ಕೆಲಸವನ್ನಾದರೂ ಮಾಡಿ ಅವರ ಆಶಯಕ್ಕೆ ನೆರವಾಗೋಣ. ಅಸ್ಪೃಶ್ಯತೆ ಎಂಬುದು ಹಿಂದೂ ಧರ್ಮದಲ್ಲಿ ಮಾಸಲಾರದ ಗುರುತು. ಒಂದು ಮಹಾಪರಾಧ ಎಂದು ಬಿಂಬಿತವಾದ ಅಸ್ಪೃಶ್ಯ ನಿವಾರಣದಂತಹ ಮಹಾನ್ ಕೆಲಸ ಮಾಡುವುದು ತುಂಬಾ ಘನತರವಾದುದು. (ಮೂಲ; ಅನುಬಂಧ–೩ ಅಧ್ಯಾಯ–೫ ಕ್ರ.ಸಂ. ೧೦)

ಭಾರತ ಜಾತ್ಯಾತೀತ ರಾಷ್ಟ್ರ. ಎಲ್ಲಾ ಜನಾಂಗದ ಜನರು ಬೇಧ ಬಾವವಿಲ್ಲದೆ ಜೀವಿಸಬಹುದು. ಅಸ್ಪೃಶ್ಯತಾ ನಿವಾರಣೆ ಸ್ವಾತಂತ್ರ್ಯ ಚಳವಳಿಯ ಒಂದು ಭಾಗವಾಗಿದ್ದು, ಮೊದಲು ಅದರ ವಿರುದ್ಧ ಹೋರಾಡಿ ಸಮಾಜದಲ್ಲಿ ಅಸ್ಪೃಶ್ಯರು ಎಂಬ ಕಳಂಕ ಹೊತ್ತು ನಾನಾ ರೀತಿಯ ಕಷ್ಟ–ನಷ್ಟಗಳನ್ನು ಅನುಭವಿಸುತ್ತಿರುವ ಜನರನ್ನು ಕಳಂಕಿತರು ಎಂಬ ಅಂಕಿತದಿಂದ ಬೇರ್ಪಡಿಸಬೇಕು. ಅಸ್ಪೃಶ್ಯತೆಯ ವಿರುದ್ಧ ಹೋರಾಡುವುದು ಮನುಷ್ಯನ ಘನತೆಯನ್ನು ಹೆಚ್ಚಿಸುತ್ತದೆ ಎಂಬ ರಾಮನಾಥನು ಹರಿಜನರಿಗಾಗಿ ಹಗಲಿರುಳು ದುಡಿಯುತ್ತಿದ್ದು, ಗಾಂಧೀಜಿಯವರ ಪ್ರತಿರೂಪದಂತೆ ಕಂಡುಬರುತ್ತಾನೆ.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ರಾಧಾಕೃಷ್ಣನು ಬ್ರಾಹ್ಮಣರ ಮನೆಗೆ ದಲಿತರನ್ನು ಬಿಡುವುದರ ಮೂಲಕ ಅಸಮಾನತೆಯನ್ನು ಹೋಗಲಾಡಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ.

ತೆಲುಗು ಕಾದಂಬರಿಯಲ್ಲಿ ರಾಮನಾಥನು ಉನ್ನತ ವರ್ಗದ ಕುಟುಂಬದ ಸದಸ್ಯನಾಗಿದ್ದರೂ ಸಹ ಜೈಲಿಗೆ ಹೋಗಿ ಬಂದಿದ್ದಾನೆ ಎಂಬ ಕಾರಣದಿಂದ ಮನೆಯಿಂದ ಹೊರಗಡೆ ಇಡುತ್ತಾರೆ. ಅಸ್ಪೃಶ್ಯರಿಗೆ ನೆರವಿನಂತಹ ಸಾಮಾಜಿಕ ಕಾರ್ಯಗಳನ್ನು ಮಾಡಲು ರಾಮನಾಥನು ಉತ್ಸುಕನಾದಾಗ ನಮ್ಮ ಕುಲವನ್ನು ಕೆಡಿಸುತ್ತೀಯಾ ಎಂಬ ದೂರುಗಳನ್ನು ಎದುರಿಸುತ್ತಾನೆ. ಸ್ವಾತಂತ್ರ್ಯ ಚಳವಳಿಯ ಜೊತೆ ಜೊತೆಯಲ್ಲಿಯೇ ಅಸ್ಪೃಶ್ಯತೆಯ ಸಮಸ್ಯೆಯನ್ನು ಸಹ ತೆಗೆದುಕೊಂಡು ಇಬ್ಬರು ಲೇಖಕರು ಭಿನ್ನವಾಗಿ ಚಿತ್ರಿಸಿದ್ದು, ಕನ್ನಡದ ಲೇಖಕರಿಗೆ ದಲಿತರ ಪ್ರಶ್ನೆ ಅಷ್ಟಾಗಿ ಮುಖ್ಯವಾಗದೆ, ತೆಲುಗಿನ ಲೇಖಕರಿಗೆ ಬಹಳ ಪ್ರಮುಖವಾಗಿರುವುದನ್ನು ಗಮನಿಸಬಹುದಾಗಿದೆ.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ಪ್ರಭುದೇವನು ತಮ್ಮ ಸಂಸ್ಥೆಯ ಅಭಿವೃದ್ಧಿಗೆ ಹಣವನ್ನು ಸಂಗ್ರಹಣೆ ಮಾಡಲು ಪಂಜಾಬ್, ಯುಪಿ, ಬಿಹಾರ ಎಂದು ಉತ್ತರ ಹಿಂದೂಸ್ಥಾನವನ್ನೆಲ್ಲ ಪುಡಿ ಪುಡಿ ಮಾಡಿ ಬಂದಿರುವುದಾಗಿಯೂ, ಕೆಲವು ಸಮಾಜವಾದಿ ಗೆಳೆಯರು, ಕೆಲವು ಆರ್ಯಸಮಾಜದ ಮುಖಂಡರುಗಳ ಗುರುತು ಇದೆ ಎಂದು ಹೇಳುತ್ತಾನೆ. (ಔದಾರ್ಯದ ಉರುಳಲ್ಲಿ, ಪುಟ-೩೩೪, ೧೯೪೭)

ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ರಾಮನಾಥನು

ಕನ್ನಡ ಭಾಷಾಂತರ

ಬ್ರಹ್ಮಸಮಾಜದವರು ಕುಲಭೇದಗಳನ್ನು ಮಾಡುತ್ತಿಲ್ಲ ಎಂದು ಅವರ ನೀತಿ ನಿಯಮಗಳನ್ನು ಗಮನಿಸುತ್ತಾನೆ. ಮತ್ತು ಈ ಕಾದಂಬರಿಯಲ್ಲಿ ವೀರೇಶಲಿಂಗಂ, ರಾಜಾರಾಮ್ ಮೋಹನರಾಯ್, ಈಶ್ವರಚಂದ್ರ ವಿದ್ಯಾಸಾಗರರಂತಹ ಸಮಾಜ ಸುಧಾರಕರ (ಪುಟ-೩೨೦) ಪ್ರಸ್ತಾಪವನ್ನು ಕಾಣಬಹುದು. (ಮೂಲ; ಅನುಬಂಧ-೩ ಅಧ್ಯಾಯ-೫ ಕ್ರಸಂ. ೧೧)

ಹೀಗೆ ಎರಡು ಕೃತಿಗಳು ಅಂದಿನ ಸಾಮಾಜಿಕ ಸುಧಾರಣಾ ಸಂಸ್ಥೆಗಳಾದ ಆರ್ಯ ಸಮಾಜ, ಸಮಾಜವಾದ ಸಿದ್ಧಾಂತಗಳನ್ನು ಅವುಗಳ ನಾಯಕರನ್ನು ರಾಷ್ಟ್ರೀಯ ಹೋರಾಟದ ಭಾಗವಾಗಿ ಪರಿಚಯಿಸುತ್ತವೆ. ಇಷ್ಟಾಗಿಯೂ ಕನ್ನಡ ಕಾದಂಬರಿಯಲ್ಲಿ ಕಾದಂಬರಿಯ ಪ್ರಾರಂಭದಿಂದಲೂ ದಲಿತರ ಉನ್ನತಿ, ದಲಿತರ ಆಶ್ರಮ ಎಂಬ ಮಾತುಗಳು ಕೇಳಿ ಬರುತ್ತವೆ ಆದರೆ ಎಲ್ಲಿಯೂ ಸುಧಾರಣೆಯ ಕೆಲಸಗಳು ಕಂಡುಬರುವುದಿಲ್ಲ. ತೆಲುಗಿನ ಕಾದಂಬರಿಯಲ್ಲಿ ದಲಿತರಿಗಾಗಿ ಕೆರೆ, ಬಾವಿಯಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಚರ್ಚೆ ನಡೆಯುತ್ತದೆ.

❖❖❖

ಅಧ್ಯಾಯ : ಆರು

ಮಾಡಿ ಮಡಿದವರು ಮತ್ತು ನಾರಾಯಣರಾವ್: ಸ್ವಾತಂತ್ರ್ಯ ಹೋರಾಟದ ಭಿನ್ನ ಮಾರ್ಗಗಳನ್ನು ಪ್ರತಿನಿಧಿಸುವ ರಚನೆಗಳು

ಅಧ್ಯಾಯ: ಆರು

ಮಾಡಿ ಮಡಿದವರು ಮತ್ತು ನಾರಾಯಣರಾವ್: ಸ್ವಾತಂತ್ರ್ಯ ಹೋರಾಟದ ಭಿನ್ನ ಮಾರ್ಗಗಳನ್ನು ಪ್ರತಿನಿಧಿಸುವ ರಚನೆಗಳು

ಸ್ವಾತಂತ್ರ್ಯ ಚಳುವಳಿಯಲ್ಲಿ ಮಂದಗಾಮಿ ಮತ್ತು ತೀವ್ರಗಾಮಿ ಎಂಬ ಎರಡು ಧಾರೆಗಳು ರೂಪಗೊಂಡಿದ್ದು, ಇಬ್ಬರು ಲೇಖಕರು ಈ ಎರಡು ಧಾರೆಗಳಲ್ಲಿ ಯಾವ ಯಾವ ಹೋರಾಟದ ಮಾರ್ಗಗಳನ್ನು ತಮ್ಮ ಈ ಕೃತಿಗಳಲ್ಲಿ ಹೇಗೆ ನಿರೂಪಿಸಿದ್ದಾರೆ ಎಂಬುದನ್ನು ಇಲ್ಲಿ ನೋಡಲಾಗಿದೆ. ಬಸವರಾಜ ಕಟ್ಟಿಮನಿ ಮತ್ತು ಅಡವಿ ಬಾಪಿರಾಜು ಸ್ವತಃ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸವನ್ನು ಅನುಭವಿಸಿದವರು. ಮಾಡಿ ಮಡಿದವರು ಕಾದಂಬರಿ ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯ ವಸ್ತುವನ್ನು ಹೊಂದಿದೆ. ಗಾಂಧೀಜಿಯವರ ಮಾಡು ಇಲ್ಲವೆ ಮಡಿ ಆದೇಶದಂತೆ ವಿಶ್ವನಾಥ–ಹೇಮಾವತಿ ಆಗಸ್ಟ್ ಕ್ರಾಂತಿಯಲ್ಲಿ ಪಾಲ್ಗೊಂಡು ಹೋರಾಟಕ್ಕಿಳಿಯುತ್ತಾರೆ. ಅವರಿಬ್ಬರು ಈ ಕೃತಿಯಲ್ಲಿ ನಾಯಕ–ನಾಯಕಿ ಸ್ಥಾನವನ್ನು ಪಡೆದುಕೊಂಡು ವೀರಮರಣವನ್ನಪ್ಪುತ್ತಾರೆ. ನಾರಾಯಣರಾವ್ ಕಾದಂಬರಿಯಲ್ಲಿ ಅಸಹಕಾರ ಚಳವಳಿ, ಸ್ವದೇಶಿ ವಸ್ತುಬಳಕೆ, ವಿದೇಶಿ ವಸ್ತು ಬಹಿಷ್ಕಾರ ಚಳವಳಿಗಳ ಪ್ರಸ್ತಾಪವನ್ನು ಕಾಣಬಹುದಾಗಿದೆ. ಈ ಕೃತಿಯಲ್ಲಿ ಗಾಂಧೀಜಿಯವರ ಸಿದ್ಧಾಂತವನ್ನು ಬಲವಾಗಿ ನಂಬಿರುವ ನಾರಾಯಣರಾವ್ ಮತ್ತು ಶ್ಯಾಮಸುಂದರಿ ನಾಯಕ–ನಾಯಕಿಯಾಗಿ ಚಿತ್ರಿತವಾಗಿದ್ದಾರೆ.

ಮಾಡಿ ಮಡಿದವರು ಕಾದಂಬರಿಯಲ್ಲಿ ಹಿರಿಯ ಕಾಂಗ್ರೆಸ್ ನಾಯಕರಾದ ಶಾಮರಾಯರು ಹೇಮಾವತಿಗೆ ಹೋರಾಟದ ಗೊಡವೆ ಬೇಡ, ಮದುವೆಯಾಗಿ ಸುಖಿಯಾಗಿರು ಎಂದು ಹೇಳಿದಾಗ ಹೇಮಾವತಿ ನೀಡುವ "ದೇಶಕ್ಕೆ ದೇಶವೆಲ್ಲ ಹೊತ್ತಿ ಉರಿಯುತ್ತಿರುವಾಗ ತನಗೆ ಮದುವೆಯಂತೆ ಮದುವೆ! (ಮಾಡಿ ಮಡಿದವರು, ಪು–೪, ೧೯೪೮) ಎಂಬ ಉತ್ತರದಲ್ಲಿ ದೃಢವಾದ ನಿಲುವು, ದೇಶಪ್ರೇಮವನ್ನು ಗುರುತಿಸಬಹುದು.

ನಾರಾಯಣರಾವ್ ಕಾದಂಬರಿಯಲ್ಲಿ ಜಗನ್ಮೋಹನನ ಮದುವೆ ನಡೆಯುತ್ತಿರುವ ಸಂದರ್ಭದಲ್ಲಿ ಶಾರದ–ಶಕುಂತಲೆಯ ಸಂಭಾಷಣೆ ಹೀಗಿದೆ.

ಕನ್ನಡ ಭಾಷಾಂತರ

ಶಾರದ – ಅಕ್ಕ ನೀನು ಗಾಂಧೀಜಿಯವರ ಬಣ ಸೇರಿದ್ದೀಯಂತೆ

ಶಕುಂತಲ – ನೀನು ಅದೃಷ್ಟವಂತೆ ಆದ್ದರಿಂದ ನಿನಗೆ ನಾನ್ ಕೋ ಆಪರೇಟಿವ್ ಗಂಡ ಸಿಕ್ಕಿದ್ದಾನೆ. ನೀನು ಕ್ಷಣಾರ್ಧದಲ್ಲಿ ಸೇರಲಿಕ್ಕೆ ಅವಕಾಶವಿದೆ. (ಮೂಲ; ಅನುಬಂಧ–೩ ಅಧ್ಯಾಯ–೬ ಕ್ರಸಂ. ೧)

ಶಾರದೆಗೆ ಗಾಂಧೀಜಿ ಅವರು ನಡೆಸುತ್ತಿರುವ ಹೋರಾಟಗಳು ಎಂದರೆ ಆಸಕ್ತಿ ಇರುವುದಿಲ್ಲ. ನಾರಾಯಣನೂ ಸಹ ಚಳುವಳಿಯಲ್ಲಿ ಪಾಲ್ಗೊಂಡಿರುತ್ತಾನೆ. ತನ್ನ ತಾಯಿ, ಭಾವ ಸ್ವಾತಂತ್ರ್ಯ ಚಳುವಳಿ ಮತ್ತು ನಾರಾಯಣರಾವ್ ಕುರಿತಂತೆ ಶಾರದೆಗೆ ಬಹಳ ವಿರೋಧವಾಗಿ ಹೇಳುತ್ತಿರುತ್ತಾರೆ. ಆದರೆ ಶಕುಂತಲೆ ಮಾತ್ರ ನಾರಾಯಣರಾವ್ ಮತ್ತು ಆತನ ಸೇವಾಮನೋಭಾವವನ್ನು ಕುರಿತು ಶಾರದೆಗೆ ಮನವರಿಕೆ ಮಾಡುತ್ತಾಳೆ.

ಹೀಗೆ ಮಾಡಿ ಮಡಿದವರು ಕಾದಂಬರಿಯಲ್ಲಿ ಹೇಮಾವತಿಯ ತಂದೆ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಬೇಡ. ಆರಾಮಾಗಿ ಸುಖ ಜೀವನ ಮಾಡು ಎಂದು ಹೇಳುತ್ತಿದ್ದರೆ, ನಾರಾಯಣರಾವ್ ಕಾದಂಬರಿಯಲ್ಲಿ ಶಕುಂತಲೆ ಶಾರದೆಗೆ ಚಳವಳಿಗೆ ಸೇರುವಂತೆ ಮನ ಪರಿವರ್ತನೆ ಮಾಡುವುದನ್ನು ಗಮನಿಸಬಹುದಾಗಿದೆ.

ಮಾಡಿ ಮಡಿದವರು ಕಾದಂಬರಿಯಲ್ಲಿ ಶೇಖರ–ಹೇಮಾವತಿ ರೈಲುಗಾಡಿಯಲ್ಲಿ ಭೇಟಿಯಾದ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳವಳಿಗೆ ಸಂಬಂಧಪಟ್ಟಂತೆ ಅನೇಕ ವಿಚಾರಗಳನ್ನು ಕುರಿತು ಚರ್ಚೆ ಮಾಡುತ್ತಾರೆ. ಆ ನಂತರ ಶೇಖರ "ಮೊದಲಿನ ಹಾಗೆ ಸತ್ಯಾಗ್ರಹ ಮಾಡಿ ಜೈಲಿಗೆ ಹೋಗುವ ಕಾಲ ಇದಲ್ಲ. ಬೇರೆ ಚಳವಳಿಗಳ ಹಾಗಲ್ಲ ಈ ಚಳವಳಿ. ಜೈಲಿಗೆ ಹೋಗಿ ಕುಳಿತುಕೊಳ್ಳುವುದರಿಂದ ಏನೂ ಉಪಯೋಗವಿಲ್ಲ. ಹೊರಗಿದ್ದುಕೊಂಡೇ ಹೋರಾಡಬೇಕು. ಸರ್ಕಾರದ ಯಂತ್ರವನ್ನು ಮುರಿದು ನಾಶಮಾಡಬೇಕು. ಎನ್ನುವಲ್ಲಿ ಶೇಖರ ಗಾಂಧೀಜಿಯವರ (ಮಾಡಿ ಮಡಿದವರು, ಪುಟ–೧೩, ೧೯೪೮) ತತ್ವಕ್ಕೆ ಮಿಡಿಯುವಂತವನಾಗಿದ್ದರೂ ಕ್ರಾಂತಿಕಾರಕವಾಗಿ ಮಾತನಾಡುತ್ತಾನೆ. ಕ್ವಿಟ್ ಇಂಡಿಯಾ ಚಳವಳಿಯ ಸ್ವರೂಪ, ಮಹತ್ವ ಎಂತಹದು ಎಂಬುದನ್ನು ತಿಳಿಯಬಹುದು. ಬ್ರಿಟಿಷ್ ಸರ್ಕಾರದ ಮೇಲಿನ ಆವೇಶ ಮತ್ತು ಮಂದಗಾಮಿ ನಾಯಕರ ಹೋರಾಟದ ವಿಧಾನವನ್ನು ಪರೋಕ್ಷವಾಗಿ ಟೀಕಿಸುತ್ತಿರುವುದನ್ನು ಗಮನಿಸಬಹುದು. ಹಾಗೆಯೇ ತೀವ್ರಗಾಮಿ ಸ್ವಾತಂತ್ರ್ಯ ಚಳುವಳಿಯ ಸ್ವರೂಪಕ್ಕೆ ಹೆಚ್ಚು ಒತ್ತುಕೊಟ್ಟಿರುವುದನ್ನು ಕಾಣಬಹುದಾಗಿದೆ. ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್ ಅಸಹಕಾರ ಚಳವಳಿಯಲ್ಲಿ ಪಾಲ್ಗೊಂಡು ಜೈಲುವಾಸ ತೀರಿಸಿ ಬಂದ ರೀತಿಯನ್ನು ಕುರಿತು ರಾಜಾ ವಿಶ್ವೇಶ್ವರರಾವ್ ಅವರೊಂದಿಗಿನ ಸಂಭಾಷಣೆ ಹೀಗಿದೆ.

ಕನ್ನಡ ಭಾಷಾಂತರ

ರಾಜೇಶ್ವರರಾವ್ – ಏನ್ರಿ ಜೈಲಿಗೆ ಹೋಗಿ ಬಂದಿದ್ದೀರಾ ಮತ್ತೆ ಕಾಲೇಜಿಗೆ ಯಾಕೆ ಸೇರಿದ್ದೀರಿ?

ನಾರಾಯಣರಾವ್ – ನಾನು, ನಮ್ಮ ತಂದೆ, ಇತರ ಬಂಧುಬಳಗದವರೆಲ್ಲ ಎಷ್ಟು ಹೇಳಿದರೂ ಕೇಳದೆ ಇಂಟರ್‌ಪರೀಕ್ಷೆ ಮುಗಿದ ವರ್ಷದಲ್ಲಿ ಅಸಹಕಾರ ಚಳವಳಿಯಲ್ಲಿ ಸೇರಿದೆ. ಆ ಸಂದರ್ಭದಲ್ಲಿ ಜೈಲು ತೀರಿಸಿದೆ.

ರಾಜಾ ವಿಶ್ವೇಶ್ವರರಾವ್ – ರಾಜಮಂಡ್ರಿ ಜೈಲಿನಲ್ಲೆ ಇದ್ದಿರ?

ನಾರಾಯಣರಾವ್ – ಎರಡು ತಿಂಗಳು ರಾಜಮಂಡ್ರಿ, ನಾಲ್ಕು ತಿಂಗಳು ಕಡಲೂರು ಜೈಲಿನಲ್ಲಿದ್ದೆ.

ರಾಜಾವಿಶ್ವೇಶ್ವರರಾವ್ – ಹೌದ!

ನಾರಾಯಣರಾವ್ – ಹೌದು! ಜೈಲಿನಿಂದ ಬಂದೆ. ಅದಕ್ಕಿಂತ ಮುಂಚೆ ಆರು ತಿಂಗಳು ದೇಶ ಸುತ್ತಿ ಉಪನ್ಯಾಸ ಕೊಡುವುದು, ಖಾದಿ ಮಾರಾಟ ಮಾಡುವುದು, ಮೊದಲಾದ ದೇಶಸೇವೆ ಕಾರ್ಯಗಳನ್ನು ಮಾಡಿದೆ. (ಮೂಲ; ಅನುಬಂಧ–೩ ಅಧ್ಯಾಯ–೬ ಕ್ರಸಂ. ೨)

ನಾರಾಯಣರಾವ್ ಗಾಂಧೀಜಿ ಅನುಯಾಯಿ ಎಂಬುದನ್ನು ಮತ್ತು ಗಾಂಧೀಜಿಯವರ ಖಾದಿಯನ್ನು ಪ್ರಚಾರ ಮಾಡುತ್ತಿರುವುದನ್ನು ಗಮನಿಸಬಹುದು. ಮಾಡಿಮಡಿದವರು ಕಾದಂಬರಿಯಲ್ಲಿ ಕ್ವಿಟ್ ಇಂಡಿಯಾ ಚಳವಳಿಯ ಕಾರ್ಯಸ್ವರೂಪವನ್ನು ರೂಪಿಸುವನಾಗಿ ಶೇಖರನು ಕಂಡುಬರುತ್ತಾನೆ. ಈತನು ಜೈಲಿಗೆ ಹೋಗದೆ ಬ್ರಿಟಿಷ್ ಸರ್ಕಾರವನ್ನು ನಾಶಮಾಡಬೇಕು ಎಂಬ ಮನೋಭಾವವನ್ನು ಹೊಂದಿದ್ದು, ಅಪ್ಪಟ ದೇಶಾಭಿಮಾನಿಯಾಗಿ ಹೋರಾಟ ಮಾಡುತ್ತಾನೆ. ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್ ಗಾಂಧೀಜಿಯವರ ನೆರಳಿನಂತೆ ಅಹಿಂಸಾ ಮನೋಭಾವದಿಂದ ಅಸಹಕಾರ ಚಳವಳಿಯಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸಿ ಚಳವಳಿಯ ಕುರಿತು ಭಾಷಣಗಳನ್ನು ಮಾಡುತ್ತಾ ಜಾಗೃತಿ ಮೂಡಿಸುತ್ತಿರುವುದನ್ನು ಕಾಣಬಹುದಾಗಿದೆ. ಕನ್ನಡ ಕಾದಂಬರಿಯಲ್ಲಿ ಶೇಖರನು ಗಾಂಧೀಜಿಯವರ ಅನುಯಾಯಿಯಾಗಿದ್ದರೂ ಅವರ ತತ್ವಗಳನ್ನು ಕ್ರಾಂತಿಕಾರಕವಾಗಿ ಬದಲಾಯಿಸಿಕೊಂಡು ಹೋರಾಟಕ್ಕೆ ಸಿದ್ದಗೊಳ್ಳುತ್ತಿರುವುದು ಕಂಡುಬರುತ್ತದೆ. ತೆಲುಗು ಕಾದಂಬರಿಯಲ್ಲಿ ಗಾಂಧೀಜಿಯವರ ಮಾತೇ ವೇದವಾಕ್ಯವೆಂದು ನಂಬಿಕೊಂಡಿರುವುದನ್ನು ಗುರುತಿಸಬಹುದಾಗಿದೆ. ಮಾಡಿ ಮಡಿದವರು ಕಾದಂಬರಿಯಲ್ಲಿ ಗಾಂಧೀಜಿಯವರನ್ನು ಬಂಧಿಸಿದಾಗ ಮುದುಕ ಬಾಳಪ್ಪ ಶೇಖರನನ್ನು "ಗಾಂಧಿ ಮಾರಾಜನ್ನ ಎಲ್ಲಿಟ್ಟಾರಂತಪ್ಪ" ಎಂದು ಕೇಳುತ್ತಾ ದಿನವೂ ಬಸವಣ್ಣನ ಗುಡಿಗೆ ಹೋಗಿ ಕೈಮುಗಿದು "ನಮ್ಮಪ್ಪ ಗಾಂಧಪ್ಪನ ನೆಟ್ಟಗೆ ಇಡು ದೇವರೇ!" (ಮಾಡಿ ಮಡಿದವರು, ಪುಟ–೫೨,೫೩, ೧೯೪೮) ಎಂದು ಬೇಡಿಕೊಳ್ಳುತ್ತಿರುತ್ತಾನೆ. ಹೀಗೆ ಹಳ್ಳಿಯಿಂದ ದಿಲ್ಲಿಯವರೆಗೆ

ಹುಡುಗನಿಂದ ಮುದುಕನವರೆಗೆ ಗಾಂಧೀಜಿ ಎಷ್ಟು ಚಿರಪರಿಚಿತ, ಗಾಂಧಿ ಮೇಲಿನ ಭಕ್ತಿ, ಗೌರವ, ಕಾಳಜಿಯನ್ನು ತೋರಿಸುತ್ತದೆ. ವಿದೇಶಿಯ ಆಡಳಿತದ ವಿರುದ್ಧ ಬಂಡೆದ್ದ ಹಳ್ಳಿಗರ ಪ್ರತೀಕದಂತೆ ಆ ಮುದುಕ ಚಿತ್ರಿತವಾಗಿದ್ದಾನೆ.

ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್ ಮತ್ತು ರಾಜಾವಿಶ್ವೇಶ್ವರರಾವ್ ಜೈಲುಗಳಲ್ಲಿನ ಪರಿಸ್ಥಿತಿಯನ್ನು ಕುರಿತು ಚರ್ಚೆ ಮಾಡುತ್ತಾರೆ. ನಂತರ ವಿಶ್ವೇಶ್ವರರಾವ್

ಕನ್ನಡ ಭಾಷಾಂತರ

ನನಗೆ ಈ ಅಸಹಕಾರ ಚಳವಳಿಯ ಮೇಲೆ ನಂಬಿಕೆ ಇಲ್ಲ. ನೀವು ಪ್ರಭುತ್ವ ನೀಡಿದ ಸವಲತ್ತುಗಳನ್ನೆಲ್ಲ ಪಡೆದುಕೊಂಡು, ಇನ್ನೂ ಹೆಚ್ಚಿಗೆ ಬೇಕು ಎಂದು ಗಡಿಬಿಡಿ ಮಾಡಿದರೆ ಹೇಗೆ, ನಿಧಾನವಾಗಿ ಅವೇ ದೊರೆಯುತ್ತವೆ. ಸ್ವರಾಜ್ಯವೂ ಬರುತ್ತದೆ. (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರಸಂ. ೩) ಎಂಬ ಮಾತುಗಳಲ್ಲಿ ರಾಜಾ ವಿಶ್ವೇಶ್ವರರಾವ್ ಗಾಂಧಿ ವಿರೋಧಿ, ಗಾಂಧೀಜಿಯವರು ಮುನ್ನೆಡೆಸಿದ ಚಳವಳಿಗಳ ಬಗ್ಗೆ ಅಪನಂಬಿಕೆ ಹೊಂದಿರುವುದು ಸರ್ಕಾರದ ಪರವಾಗಿ ಚಿಂತನೆ ಮಾಡುತ್ತಿರುವುದನ್ನು ತಿಳಿಯಬಹುದು. ಕನ್ನಡ ಕಾದಂಬರಿಯಲ್ಲಿ ಗಾಂಧೀಜಿ ಎಂದರೆ ಹಳ್ಳಿಯ ಸಾಮಾನ್ಯ ವ್ಯಕ್ತಿಯಾದ ಬಾಳಪ್ಪನ ದೃಷ್ಟಿಯಲ್ಲಿ ಬಹಳ ಪ್ರಭಾವಿತ ವ್ಯಕ್ತಿಯಾಗಿದ್ದು, ಆತನ ಬಿಡುಗಡೆಗಾಗಿ ಹಸಿವನ್ನು ಸಹಿಸಿಕೊಂಡು ಪ್ರಾರ್ಥನೆ ಪೂಜಾದಿಗಳನ್ನು ಮಾಡುತ್ತಿರುವುದು ಕಂಡುಬರುತ್ತದೆ. ತೆಲುಗು ಕಾದಂಬರಿಯಲ್ಲಿ ವಿಶ್ವೇಶ್ವರರಾವ್ ಅವರ ದೃಷ್ಟಿಯಲ್ಲಿ ಗಾಂಧೀಜಿಯವರು ಸಾಮಾನ್ಯ ವ್ಯಕ್ತಿಯಾಗಿದ್ದು, ಅವರ ಚಳವಳಿಗಳಲ್ಲಿ ತಿರಸ್ಕಾರ ಮನೋಭಾವವನ್ನು ಕಾಣಬಹುದಾಗಿದೆ.

ಮಾಡಿ ಮಡಿದವರು ಕಾದಂಬರಿಯಲ್ಲಿ ಶೇಖರನ ತಂಡದವರು ಗಾಂಧೀಜಿಯವರು ಗಾಂಧೀ ಜಯಂತಿ ದಿನದಂದು ಟಪಾಲು ಬಸ್ಸುಗಳನ್ನು ತಡೆದು, ಲೂಟಿ ಮಾಡಿದ ಕಾಗದ ಪತ್ರಗಳಲ್ಲಿ ಸರ್ಕಾರಿ ಕಾಗದ ಪತ್ರಗಳನ್ನು ಮಾತ್ರ ಸುಟ್ಟು, ಸಾರ್ವಜನಿಕರ ಪತ್ರಗಳನ್ನು ಅಂಚೆ ಕಚೇರಿಯ ಕಟ್ಟೆಯ ಮೇಲೆ ಇರಿಸಿದ್ದು, ತಂಡದವರಲ್ಲಿಯ ಸಾಮಾಜಿಕ ಪ್ರಜ್ಞೆಯನ್ನು ಸೂಚಿಸುತ್ತದೆ. ಸರ್ಕಾರದ ಆಡಳಿತ ಯಂತ್ರವನ್ನು ಮುರಿದು ಹಾಕುವುದೊಂದೇ ಅವರ ಉದ್ದೇಶವಾಗಿತ್ತು. ಹೊರತಾಗಿ ಸಾರ್ವಜನಿಕರಿಗೆ ತೊಂದರೆ ಕೊಡುವುದಾಗಿರುವುದಿಲ್ಲ. (ಮಾಡಿ ಮಡಿದವರು, ಪುಟ-೯೧, ೧೯೪೮) ತಂಡದವರ ಪ್ರಾಮಾಣಿಕತೆಗೆ ಈ ಸಂಗತಿ ಸಾಕ್ಷಿಯಾಗಿರುವುದನ್ನು ಕಾಣಬಹುದಾಗಿದೆ.

ಕನ್ನಡ ಭಾಷಾಂತರ

ನಾರಾಯಣರಾವ್ ಕಾದಂಬರಿಯಲ್ಲಿ ಶ್ಯಾಮಸುಂದರಿ ಗಾಂಧೀಜಯಂತಿ ದಿನದಂದು ಮತ್ತು ರಾಷ್ಟ್ರೀಯ ದಿನಾಚರಣೆಗಳಂದು ರುಕ್ಮಿಣಿದೇವಿಯಂತಹ ದೇಶನಾಯಕಿಯರ ಜೊತೆ ಸೇರಿ ಬೀದಿ ಬೀದಿ ತಿರುಗಿ ಖಾದಿ ಮಾರಾಟ ಮಾಡುವುದು, ಗ್ರಾಮ-ಗ್ರಾಮಗಳಿಗೆ ಹೋಗಿ ಮದ್ಯಪಾನ ಮಾಡಕೂಡದೆಂದು ಬೋಧಿಸುವುದು, ಹಿಂದೂ-ಮುಸ್ಲಿಂರು ಸೋದರರಂತೆ ಇರಬೇಕು. ಆಗ

ಸ್ವರಾಜ್ಯ ಬರುತ್ತದೆ ಎಂದು ಬೋಧನೆ ಮಾಡುತ್ತಿರುವುದನ್ನು ತಿಳಿಯಬಹುದು. (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರಸಂ. ೪) ಹೀಗೆ ಮಾಡಿ ಮಡಿದವರು ಕಾದಂಬರಿಯಲ್ಲಿ ಶೇಖರ ಮತ್ತು ಅವನ ತಂಡ ಗಾಂಧೀ ಜಯಂತಿ ದಿನದಂದು ಸರ್ಕಾರವನ್ನು ಉರುಳಿಸಲು ಅನೇಕ ಹೋರಾಟದ ಚಟುವಟಿಕೆಗಳನ್ನು ಮಾಡುವುದರ ಮೂಲಕ ಸಂಭ್ರಮಿಸುತ್ತಾರೆ. ನಾರಾಯಣರಾವ್ ಕಾದಂಬರಿಯಲ್ಲಿ ಶ್ಯಾಮಸುಂದರಿದೇವಿ ಮತ್ತು ಸ್ನೇಹಿತೆ ರುಕ್ಮಿಣಿದೇವಿ ಗಾಂಧೀಜಿಯವರ ಚಿಂತನೆಗಳನ್ನು ಹಳ್ಳಿ ಜನರಿಗೆ ಬಿತ್ತುವುದರ ಮೂಲಕ ಗಾಂಧೀ ಜಯಂತಿಯನ್ನು ಆಚರಿಸುವುದನ್ನು ಕಾಣಬಹುದಾಗಿದೆ.

ಕನ್ನಡ ಕಾದಂಬರಿಯಲ್ಲಿ ಗಾಂಧೀ ಜಯಂತಿ ದಿನದಂದು ಶೇಖರ ಮತ್ತು ಆತನ ತಂಡದವರು ಸಾರ್ವಜನಿಕ ಬಸ್ಸುಗಳನ್ನು ತಡೆದು ಅದರಲ್ಲಿನ ಸರ್ಕಾರಿ ವಸ್ತುಗಳನ್ನು ನಾಶಪಡಿಸುವುದರ ಮೂಲಕ ಗಾಂಧಿ ಜಯಂತಿ ಸಂಭ್ರಮವನ್ನು ಆಚರಿಸುತ್ತಾರೆ. ಗಾಂಧೀಜಿಯವರು ಮಂದಗಾಮಿ ಬಣಕ್ಕೆ ಸೇರಿದವರಾಗಿದ್ದು, ಗಾಂಧೀಜಿ ನಾಮಸ್ಮರಣೆಯೊಂದಿಗೆ ಹೋರಾಟಕ್ಕಿಳಿದ ಅನುಯಾಯಿಗಳು ಗಾಂಧೀಜಿ ಜಯಂತಿಯನ್ನು ಕ್ರಾಂತಿಕಾರಕವಾಗಿ ಆಚರಿಸುತ್ತಿರುವುದು ಕಂಡುಬರುತ್ತದೆ. ತೆಲುಗು ಕಾದಂಬರಿಯಲ್ಲಿ ಗಾಂಧೀಜಿಯವರ ಕಟ್ಟಾನುಯಾಯಿಯಾದ ಶ್ಯಾಮಸುಂದರಿ ಗಾಂಧೀ ಜಯಂತಿ ದಿನದಂದು ಗಾಂಧೀಜಿಯವರ ಚಿಂತನೆಗಳನ್ನು ಜನರಿಗೆ ಪರಿಚಯಿಸುವುದರ ಮೂಲಕ ಜನ್ಮ ದಿನಾಚರಣೆಯನ್ನು ಆಚರಿಸುತ್ತಾರೆ. ಹೀಗೆ ಮಾಡಿ ಮಡಿದವರು ಕಾದಂಬರಿಯಲ್ಲಿ ಗಾಂಧೀ ಜಯಂತಿಯನ್ನು ತೀವ್ರರೂಪವಾಗಿ ಆಚರಿಸುತ್ತಿರುವುದು ಕಂಡುಬಂದರೆ ನಾರಾಯಣರಾವ್ ಕಾದಂಬರಿಯಲ್ಲಿ ಮಂದಗಾಮಿತನದಿಂದ ಆಚರಿಸುತ್ತಿರುವುದು ಕಂಡುಬರುತ್ತದೆ.

ಮಾಡಿ ಮಡಿದವರು ಕಾದಂಬರಿಯಲ್ಲಿ ಸ್ವಾತಂತ್ರ್ಯ ಚಳವಳಿಯ ಬಗ್ಗೆ ಹಳ್ಳಿ ಜನರಿಗೆ ಜಾಗೃತಿ ಮೂಡಿಸಲು ವಿಶ್ವನಾಥ ಮತ್ತು ಹೇಮಾವತಿ ಲಂಬಾಣಿಗರ ತಾಂಡೆಯಲ್ಲಿದ್ದುಕೊಂಡು ಅವರ ವೇಷ-ಭೂಷಣಗಳನ್ನು ಧರಿಸಿಕೊಂಡು ಹಗಲಿರುಳು ಕರಪತ್ರಗಳನ್ನು ಸಿದ್ದಪಡಿಸುತ್ತಾರೆ. ಹಾಗೆ ಸಿದ್ದಪಡಿಸಿದ ಸಾವಿರಾರು ಪ್ರತಿಗಳನ್ನು "ಕಟ್ಟಿಗೆ ಹೊರೆ ಹೊತ್ತು ಊರೂರು ತಿರುಗುವ ನಂಬಿಕೆಯ ಲಂಬಾಣಿಗಳೊಂದಿಗೆ ಕಳುಹಿಸಿಕೊಡುತ್ತಿದ್ದರು." (ಮಾಡಿ ಮಡಿದವರು, ಪುಟ-೧೩೨, ೧೯೪೮) ಸ್ವಾತಂತ್ರ್ಯ ಚಳವಳಿಯಲ್ಲಿ ಬುಡಕಟ್ಟು ಜನರ ಪಾಲ್ಗೊಳ್ಳುವಿಕೆ, ಲಂಬಾಣಿ ಜನರ ವಿಶ್ವಾಸ, ನಂಬಿಕೆ, ದೇಶಪ್ರೇಮ ಯಾವ ರೀತಿ ಇತ್ತು ಎಂಬುದನ್ನು ತೋರಿಸುವ ಲೇಖಕರ ಪ್ರಯತ್ನವನ್ನು ಕಾಣಬಹುದು. ನಾರಾಯಣರಾವ್ ಕಾದಂಬರಿಯಲ್ಲಿ ಸತ್ಯವತಿ ಜಮೀನ್ದಾರರ ಮನೆಗೆ ಶುಭ ಕಾರ್ಯಕ್ಕೆ ಹೋದ ಕಾರಣಕ್ಕಾಗಿ ವೀರಭದ್ರರಾವ್ ಹಿಂಸೆ ಮಾಡುತ್ತಿರುವಾಗ ನಾರಾಯಣರಾವ್

ಕನ್ನಡ ಭಾಷಾಂತರ

ಯುಗಪುರುಷ ಮಹಾತ್ಮಾಗಾಂಧಿ, ಬುದ್ಧ, ಕ್ರೈಸ್ತರು ನಮಗೆ ಭೋದಿಸಿದ್ದು, ಪ್ರೇಮ ಅಲ್ಲವೆ ಬಾವಾ? ನಾವು ಕೋಪವನ್ನು (ಸಾಯಿಸಿಕೊಂಡು) ತಣ್ಣಗೆ ಮಾಡಿಕೊಂಡು ಪ್ರೀತಿಯನ್ನು ತೋರಿಸುವುದರಿಂದ ನಮ್ಮನ್ನು ನಂಬಿದವರು ಜನ್ಮ ಜನ್ಮಕ್ಕೂ ನಮಗೆ ಅಪಾರವಾದ ಕೃತಜ್ಞತೆಯನ್ನು

ಸಲ್ಲಿಸುತ್ತಾರೆ. ಒಂದು ಕಡೆ ಶತ್ರುಗಳ ಮೇಲೆ ದ್ವೇಷ ಸಾಧಿಸುತ್ತ, ಹಿಂಸೆ ಮಾಡುತ್ತಾ ಇನ್ನೊಂದು ಕಡೆ ಎಷ್ಟು ಪ್ರೀತಿ ತೋರಿಸಿದರೂ ಅದು ಕ್ರೋಧ ರೂಪ, ಅಸತ್ಯವಾಗುತ್ತದೆ. ನಿನಗಿಂತ ಅಕ್ಷರ ಜ್ಞಾನವಿಲ್ಲದ ಲಂಬಾಣಿಗಳು ಎಷ್ಟೋ ಉತ್ತಮ!" (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರಸಂ. ೫) ಎನ್ನುವಲ್ಲಿ ಸ್ತ್ರೀ ಬಗೆಗಿನ ಗೌರವ, ಕಾಳಜಿ ಕುರಿತು ಮಹಾತ್ಮರು ಹೇಳಿದ ಮಾತುಗಳನ್ನು ನೆನಪಿಸಿಕೊಳ್ಳಬಹುದು. ಊರೂರು ಅಲೆಯುತ್ತ ಅಲೆಮಾರಿ ಜೀವನ ನಡೆಸುತ್ತಿರುವ ಅನಕ್ಷರಸ್ಥ ಲಂಬಾಣಿ ಜನರ ನಂಬಿಕೆ, ಆತ್ಮವಿಶ್ವಾಸ, ಪ್ರಾಮಾಣಿಕತೆಯನ್ನು ಕಾಣಬಹುದಾಗಿದೆ. ಮಾಡಿ ಮಡಿದವರು ಕಾದಂಬರಿಯಲ್ಲಿ ಲಂಬಾಣಿಗರು ಸ್ವಾತಂತ್ರ್ಯ ಹೋರಾಟದ ತಂಡದೊಂದಿಗೆ ಸೇರಿಕೊಂಡು ಜಾಗೃತಿಗೊಳಿಸುವ ಕಾರ್ಯಗಳನ್ನು ಮಾಡುವಲ್ಲಿ ನೆರವಾಗುವುದು ಕಂಡುಬಂದರೆ ನಾರಾಯಣರಾವ್ ಕಾದಂಬರಿಯಲ್ಲಿ ವೀರಭದ್ರರಾವ್ ಸತ್ಯವತಿಯ ಮೇಲೆ ದೌರ್ಜನ್ಯ ನಡೆಸುತ್ತಿರುವಾಗ ನಾರಾಯಣರಾವ್ ಲಂಬಾಣಿಗರ ದೊಡ್ಡಸ್ತಿಕೆ, ಗುಣವನ್ನು ಪ್ರಸ್ತಾಪಿಸುವುದನ್ನು ಕಾಣಬಹುದಾಗಿದೆ.

"ಮಾಡಿಮಡಿದವರು ಕಾದಂಬರಿಯಲ್ಲಿ ಮಂದಗಾಮಿ ನಾಯಕರನ್ನು ಕುರಿತು ಶೇಖರ-ಹೇಮಾಳ ಚರ್ಚೆ ಹೀಗಿದೆ. ಅವರು ಸತ್ಯಾಗ್ರಹ ಮಾಡಿ ಪಿಕೆಟಿಂಗ್ ಮಾಡಿ ಜೈಲಿಗೆ ಹೋಗಿ ಅಲ್ಲಿ ಎರಡು ಮೂರು ವರ್ಷ ಕಳೆದು ಹೊರಗೆ ಬಂದು ಮತ್ತೆ ಸತ್ಯಾಗ್ರಹ ಮಾಡಿ ಮತ್ತೆ ಜೈಲಿಗೆ ಹೋಗಿ ಬಂದು ಅಜ್ಞಾತವಾಸದ ಸೋಗು ಹಾಕಿ ಮುಂಬಯಿ ಪುಣೆಗಳಂಥ ದೊಡ್ಡ ಪಟ್ಟಣಗಳಲ್ಲಿ ಅದೂ ದೊಡ್ಡ ದೊಡ್ಡ ಸರ್ಕಾರಿ ಅಧಿಕಾರಿಗಳ ಮನೆಗಳಲ್ಲಿ ಆರಾಮಾಗಿ ಊಟ ಮಾಡಿಕೊಂಡು ಕಾಲ ಕಳೆಯಬೇಕಂತ ಮಾಡಿದ್ದಾರೆ" (ಪುಟ-೩೦, ೧೯೫೦)

ಸ್ವಾತಂತ್ರ್ಯ, ಬಂಧನ ಮುಕ್ತಿ ಎಂದರೆ ಹಿಂಸೆಗೆ ಪ್ರತಿಹಿಂಸೆ, ಏಟಿಗೆ ಎದಿರೇಟು ಒಡ್ಡಿದಾಗ ಮಾತ್ರ ಗುಲಾಮಗಿರಿಯಿಂದ ದೇಶಮಾತೆಯ ಬಿಡುಗಡೆ ಎಂಬ ತತ್ವವನ್ನು ದೇಶದ ಕ್ರಾಂತಿಕಾರಿ ತೀವ್ರಗಾಮಿ ನಾಯಕರ ಪ್ರಬಲವಾದ ಧೋರಣೆಯಾಗಿರುತ್ತದೆ. ಆದರೆ ಒಂದು ಸಾವಿರದ ಒಂಬೈನೂರ ಇಪ್ಪತ್ತೊಂದನೆಯ ಚಳವಳಿಗಳು ಪ್ರಾರಂಭವಾದಾಗಿನಿಂದ ಸ್ವಾತಂತ್ರ್ಯ ಸಿಗುವವರೆಗೂ ಮಂದಗಾಮಿ ನಾಯಕರು, ಅವರ ಸಿದ್ಧಾಂತಗಳ ಕಾರುಬಾರು ಯಥೇಚ್ಛವಾಗಿರುವುದು ಕಂಡುಬರುತ್ತಿದ್ದು, ಅಲ್ಲಲ್ಲಿ ಬಹುಬೇಗ ದೇಶವನ್ನು ಬ್ರಿಟಿಷರ ಕೈಯಿಂದ ಬಿಡಿಸಿಕೊಳ್ಳಬೇಕು ಎಂಬ ಮಹದಾಸೆಯನ್ನು ಹೊತ್ತು ಅನೇಕ ಕ್ರಾಂತಿಕಾರಿ ವೀರರು ತಮ್ಮ ಪ್ರಾಣಗಳನ್ನು ಅರ್ಪಿಸಿದ್ದಾರೆ. ಆದರೆ ಮಂದಗಾಮಿ ನಾಯಕರನ್ನು ಯಥಾವತ್ತಾಗಿ ಅನುಸರಿಸುತ್ತಿರುವ ಈ ಮುಖಂಡರನ್ನು ಹೇಮಾ ಟೀಕಿಸುತ್ತಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್ ಪರಮೇಶ್ವರರಾವ್ ಅವರು ಸ್ವರಾಜ್ಯ ಪಕ್ಷ ಕುರಿತು ನಡೆಸಿದ ಚರ್ಚೆ ಹೀಗಿದೆ.

ಕನ್ನಡ ಭಾಷಾಂತರ

ಕಾಂಗ್ರೇಸಿನಲ್ಲಿದ್ದು ಜೈಲಿಗೆ ಹೋಗುತ್ತಿಲ್ಲ. ಕಷ್ಟಪಡುತ್ತಿಲ್ಲ ಶಾಸನಸಭೆಯಲ್ಲಿ ನಾವು ಸಭ್ಯರು ಎಂಬ ಹಣೆಪಟ್ಟಿ ಬಿಟ್ಟರೆ ಮತ್ತೇನೂ ಇಲ್ಲ. ಸರಿಯಾದ ಮಾರ್ಗದಲ್ಲಿ ನಡೆಯಿರಿ ಎಂದು

ಗಾಂಧೀಜಿಯವರು ಹೇಳಿದ ಮಾತನ್ನು ಮೂಲೆಗೆ ಸೇರಿಸಿದರು. ಒಂದಾಗಿ ಹೋಗುವಂತಹ ದೇಶ ಭಿನ್ನ ಭಿನ್ನವಾಗಿ ಹೇಗೆ ಬೇಕೋ ಹಾಗೆ ಯಮುನಾ ತೀರದಂತೆ ಸಾಗುತ್ತಿದೆ! ಏನು ವಿಚಿತ್ರ ಸ್ವರಾಜ್ಯ ಪಕ್ಷದವರು ಮಾಡಿದ ಅದ್ಭುತಕಾರ್ಯಗಳು? (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರಸಂ. ೬)

ಈ ಮಾತುಗಳನ್ನು ಗಮನಿಸಿದರೆ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂದು ಸ್ವರಾಜ್ಯ ಪಕ್ಷ ಕಟ್ಟಿದ ಸ್ವರಾಜ್ಯ ಪಕ್ಷದವರು ನಾಮಮಾತ್ರವಾಗಿದ್ದಾರೆ. ಯಾವುದೇ ರೀತಿಯ ಹೋರಾಟವಿಲ್ಲ. ಜೈಲಿಗೆ ಹೋಗುವಂತಿಲ್ಲ. ಸಭೆ, ಸಮಾರಂಭಗಳನ್ನು ನಡೆಸುವಂತಿಲ್ಲ. ಗಾಂಧೀಜಿಯವರ ತತ್ವಗಳನ್ನು ಸಹ ಲೆಕ್ಕಿಸದೆ ಇದ್ದಾರೆ. ಒಗ್ಗಟ್ಟು ಮನೋಭಾವವೇ ಇಲ್ಲ ಎಂಬ ಸ್ವರಾಜ್ಯ ಪಕ್ಷದವರ ಕುರಿತು ನಾರಾಯಣನ ನೀರಸ ನುಡಿಗಳನ್ನು ಗಮನಿಸಬಹುದು. ಕನ್ನಡ ಕಾದಂಬರಿಯಲ್ಲಿ ಕಾಂಗ್ರೆಸ್ ಮುಖಂಡರು ಎಂದು ಕರೆಸಿಕೊಂಡವರು ಕ್ರಾಂತಿಕಾರಕವಾಗಿ ಸಭೆ, ಕಾರ್ಯಕ್ರಮ, ಭಾಷಣಗಳಂತಹ ಕಾರ್ಯಚಟುವಟಿಕೆಗಳನ್ನು ನಡೆಸದೆ ಇದ್ದರೂ ಸಹ ಶಿಸ್ತಾಗಿ ಜೈಲಿಗೆ ಪದೇ ಪದೇ ಹೋಗಿ ಬರುವುದನ್ನು ರೂಡಿಸಿಕೊಂಡಿರುವುದನ್ನು ಕುರಿತು ಹೇಮಾ ಕ್ರಾಂತಿಕಾರಕವಾಗಿ ಟೀಕಿಸುತ್ತಾಳೆ. ಆದರೆ ತೆಲುಗು ಕಾದಂಬರಿಯಲ್ಲಿ ಮಂದಗಾಮಿಗಳು, ಸ್ವರಾಜ್ಯ ಪಕ್ಷದವರು ಎಂದು ಕರೆಸಿಕೊಂಡವರು ಕನಿಷ್ಠವಾದ ಕೆಲಸವನ್ನು ಮಾಡುತ್ತಿಲ್ಲ ಗಾಂಧೀಜಿಯವರ ಮಾತುಗಳನ್ನು ಗಾಳಿಗೆ ತೂರಿದ್ದಾರೆ ತನ್ನ ಇಚ್ಛೆಯಂತೆ ತಾವು ಹೋಗುತ್ತಿದ್ದಾರೆ ಎಂಬಂತಹ ಕಾಂಗ್ರೆಸ್ ಮುಖಂಡರಲ್ಲದ ದೇಶಸೇವೆ ಕುರಿತ ನಿರ್ಲಕ್ಷ್ಯಭಾವವನ್ನು ಇಲ್ಲಿ ಗುರುತಿಸಬಹುದಾಗಿದೆ.

ಮಾಡಿ ಮಡಿದವರು ಕಾದಂಬರಿಯಲ್ಲಿ ಶಂಕರ ಮಾಸ್ತರರು ಬೈಲಹೊಂಗಲದಲ್ಲಿ ಪ್ರಭಾತಭೇರಿಯಲ್ಲಿ ಪಾಲ್ಗೊಂಡು ಜನರ ಮೇಲೆ ಸರ್ಕಾರ ಗೋಲಿಬಾರು ನಡೆಸಿದ್ದು, ಅದರಲ್ಲಿ ಕರ್ನಾಟಕದ ಏಳು ಮಂದಿ ಬಲಿಯಾಗಿರುವ ವಿಚಾರವನ್ನು ಶೇಖರನಿಗೆ ತಿಳಿಸುತ್ತಾನೆ. ಆಗ ಶೇಖರ "ನಮ್ಮ ಜನರ ಸ್ವಭಾವ ಇನ್ನೂ ತಿಳಿದಿರಲಿಕ್ಕಿಲ್ಲ ಈ ಸರ್ಕಾರಕ್ಕೆ. ಅದರ ಈ ಕೃತ್ಯಗಳಿಂದ ನಮ್ಮ ಶಕ್ತಿ ಇನ್ನೂ ಹೆಚ್ಚುವುದು. ನಮ್ಮ ಹಟ ಇನ್ನೂ ಹೆಚ್ಚುವುದು. ನಮ್ಮ ಛಲ ಇನ್ನೂ ಬೆಳೆಯುವುದು, ದೇಶಕ್ಕೆ ದೇಶವೆಲ್ಲ ಸಡ್ಡು ಹೊಡೆದು ಮೇಲಕ್ಕೇಳುವುದು, ಮಾಡುವುದು ಇಲ್ಲವೆ ಮಡಿಯುವುದು." (ಪುಟ-೩೪, ೧೯೫೦)

ಶೇಖರ ಗಾಂಧೀಜಿಯವರ ಕಟ್ಟಾ ಅನುಯಾಯಿಯಾಗಿದ್ದು, ಬೈಲಹೊಂಗಲದ ಗೋಲಿಬಾರ್‌ನಿಂದ ಬಹಳ ಕಡುಕೋಪಿಯಾಗುತ್ತಾನೆ. ನಮ್ಮ ಜನರ ಸಹವಾಸ ಸರ್ಕಾರಕ್ಕೆ ಗೊತ್ತಿಲ್ಲ. ಗೋಲಿಬಾರ್‌ನಿಂದಾಗಿ ಜನರು ಸುಮ್ಮನೆ ಕೂರುವುದಿಲ್ಲ. ಇನ್ನೂ ಹೆಚ್ಚಿನದಾಗಿ ಹೋರಾಟದಲ್ಲಿ ದುಮುಕುತ್ತಾರೆ. ಇದರಿಂದಾಗಿ ಸರ್ಕಾರ ಜನರನ್ನು ಯುದ್ಧಕ್ಕೆ ಆಹ್ವಾನಿಸಿದಂತಾಗಿದೆ. ತಣ್ಣನೆಯ ರೀತಿಯಲ್ಲಿ ನಡೆಯುತ್ತಿರುವ ಹೋರಾಟಕ್ಕೆ ಅವರೇ ಶಕ್ತಿ ತುಂಬಿದ್ದಾರೆ. ಮಲಗಿರುವ ಸರ್ಪವನ್ನು ಕೆಣಕಿದಂತಾಗಿದೆ. ಸೇಡು ತೀರಿಸಿಕೊಳ್ಳಲೇಬೇಕು ಎಂಬ ಹಠದ ದೃಢನಿರ್ಧಾರ ಶೇಖರನ ಮಾತುಗಳಲ್ಲಿ ಗುರುತಿಸಬಹುದಾಗಿದೆ. ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್ ರಾಜಮಹೇಂದ್ರವರಂ ಜೈಲಿನಲ್ಲಿದ್ದಂತಹ

ಸಂದರ್ಭದಲ್ಲಿ ಆತನ ತಂಗಿ ಸೂರ್ಯಕಾಂತಮ್ಮಳು ನೋಡಲು ಬಂದಿರುತ್ತಾಳೆ. ಆಗ ನಾರಾಯಣರಾವ್ ತಂಗಿಗೆ ಇಲ್ಲಿ ನಾರಾಯಣರಾವ್ ಗಾಂಧಿಪ್ರಿಯ, ಶಾಂತಸ್ವಭಾವದ ಸ್ಫೂರ್ತಿಯ ಚಿಲುಮೆಯಾಗಿ ತಂಗಿಯಲ್ಲಿ ದೇಶಪ್ರೇಮವನ್ನು ನಿಸ್ವಾರ್ಥವಾಗಿ ಮನವರಿಕೆ ಮಾಡಿಕೊಡುತ್ತಿರುವುದನ್ನು ಗಮನಿಸಬಹುದಾಗಿದೆ. ನಾರಾಯಣರಾವ್ ತಂಗಿಗೆ ಹೇಳುವ ಮನವರಿಕೆ ಮಾತುಗಳು ಈ ರೀತಿ ಇವೆ.

ಕನ್ನಡ ಭಾಷಾಂತರ

"ಮಹಾತ್ಮಗಾಂಧೀಜಿಯವರ ಮನಸ್ಸು ನೊಂದುಕೊಳ್ಳುತ್ತಿದೆ ಎಂದು ತನ್ನ ಮುದ್ದು ತಂಗಿ ತನ್ನನ್ನು ದೇಶದ್ರೋಹಿಯಾಗಿ, ಹೇಡಿಯಂತೆ ಜೈಲು ತೊರೆದು ಬಾ ಎಂದು ಕೋರುವಂತಹ ದೇಶಭಕ್ತಿ ಇಲ್ಲದವಳಲ್ಲ ಎಂದು ಧೈರ್ಯ ಹೇಳುತ್ತಾನೆ." (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರಸಂ. ೭)

ಹೀಗೆ ಕನ್ನಡ ಕಾದಂಬರಿಯಲ್ಲಿ ಹೋರಾಟದ ಸೂತ್ರಧಾರ ಬ್ರಿಟಿಷ್ ಸರ್ಕಾರದ ಮೇಲೆ ಹೋರಾಟ ನಡೆಸಬೇಕು ಎಂದು ಪ್ರತಿಭಟನಾತ್ಮಕವಾಗಿ ಹೇಳುತ್ತಿರುವುದು ಕಂಡುಬಂದರೆ ತೆಲುಗು ಕಾದಂಬರಿಯಲ್ಲಿ ಕಾದಂಬರಿಯ ನಾಯಕ ಶಾಂತಿ ಸ್ವಭಾವದವನಾಗಿದ್ದು, ಸ್ವಾತಂತ್ರ್ಯ ಹೋರಾಟ, ಗಾಂಧೀಜಿಯವರ ಕುರಿತು ಅರಿವು ಮೂಡಿಸುತ್ತಿರುವುದನ್ನು ಕಾಣಬಹುದಾಗಿದೆ. ಮಾಡಿ ಮಡಿದವರು ಕಾದಂಬರಿಯಲ್ಲಿ ಚಳುವಳಿಯ ಸೂತ್ರದಾರ ಶೇಖರನು ವಿಶ್ವನಾಥ ದೇಸಾಯಿಗೆ "ಮಾಯಾ, ಮಮತಾ ಎಲ್ಲವನ್ನು ಹರಿದೊಗೆದು ಈ ಚಳವಳಿಯೊಳಗೆ ಬೀಳಬೇಕು. ಜೀವದ ಹಂಗುತೊರೆದು ನಾವಿಂದು ಹೋರಾಡಬೇಕು. ಹೆಂಡಿರು ಮಕ್ಕಳನ್ನು ತೊರೆದು ಇಡೀ ಜೀವನವನ್ನೇ ದೇಶಕ್ಕೆ ಮುಡುಪಾಗಿಡಬೇಕು" ಎಂದು ಹೇಳುತ್ತಾನೆ. (ಪುಟ-೩೭, ೧೯೫೦) ಶೇಖರನ ಈ ಮೂತುಗಳಲ್ಲಿ ಇಡೀ ದೇಶವೇ ತನ್ನ ಕುಟುಂಬ, ಸಂಸಾರ ಎಂಬ ಅಭಿಪ್ರಾಯವನ್ನು ಕಾಣಬಹುದಾಗಿದೆ. ತನ್ನ ದೇಶಕ್ಕಾಗಿ ಹಗಲಿರುಳು ಎನ್ನದೆ ತನ್ನ ಪ್ರಾಣವನ್ನು ಮೀಸಲಿಡಬೇಕು. ತನ್ನ ಸ್ವಾರ್ಥ ಬದುಕನ್ನು ಬದಿಗಿಟ್ಟು ದೇಶಕ್ಕಾಗಿ ಜೀವಿಸಬೇಕು. ಉಸಿರಾಡಬೇಕು ಎಂಬ ಅಭಿಪ್ರಾಯವನ್ನು ಕಾಣಬಹುದಾಗಿದೆ. ಚಳುವಳಿಯಲ್ಲಿ ತೊಡಗುವಂತೆ ವಿಶ್ವನಾಥ ದೇಸಾಯಿಯನ್ನು ಪ್ರೇರೇಪಿಸುವಂತಹ ಪ್ರೇರೇಪಣಾ ಮನೋಭಾವವನ್ನು ಗುರುತಿಸಬಹುದಾಗಿದೆ. ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್

ಕನ್ನಡ ಭಾಷಾಂತರ

ರೈಲ್ವೆಗಳ ಮೇಲಿನ ಅಧಿಕಾರ ಪ್ರಭುತ್ವದ ಅಧೀನದಲ್ಲಿದ್ದರೆ ಉನ್ನತ ಉದ್ಯೋಗಗಳೆಲ್ಲ ಇಂಗ್ಲಿಷರಿಗೆ ಮೀಸಲಾಗಿದ್ದು, ಅವರಿಗೆಲ್ಲ ಹೆಚ್ಚಿನ ಸಂಬಳ ನೀಡಲಾಗುತ್ತಿದೆ. ಮತ್ತೇನೆಂದರೆ ಆ ಹಣ ಐ.ಸಿ.ಎಸ್. ಅವರ ಸಂಬಳದಂತೆ ಎಲ್ಲಾ ಇಂಗ್ಲೆಂಡ್ ಸೇರುತ್ತದೆ. (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರಸಂ. ೮)

ಬ್ರಿಟಿಷರು ಭಾರತವನ್ನು ತನ್ನ ಅಧೀನದಲ್ಲಿಟ್ಟುಕೊಂಡ ನಂತರ ತಮ್ಮ ಆಡಳಿತದ ಅನುಕೂಲಕ್ಕಾಗಿ ಅನೇಕ ರೀತಿಯ ಸೌಕರ್ಯ ಸಾಧನೆಗಳನ್ನು ರೂಪಿಸಿಕೊಂಡರು. ಇಲ್ಲಿನ ಸಂಪತ್ತನ್ನು ತನ್ನ ದೇಶಕ್ಕೆ ಸಾಗಿಸುವುದಕ್ಕಾಗಿ ರೈಲು ವ್ಯವಸ್ಥೆಯನ್ನು ಮಾಡಿಕೊಂಡರು. ಅಲ್ಲದೆ ರೈಲ್ವೆನಲ್ಲಿ ಕೆಲಸ ಮಾಡಲು ಉನ್ನತ ಹುದ್ದೆಗಳನ್ನು ಬ್ರಿಟಿಷರಿಗೆ ನೀಡಿ ಉಳಿದಂತೆ ಬ್ರಿಟಿಷರ ಕೈಗೊಂಬೆಯಾಗಿ ಕೆಲಸ ಮಾಡುವ ದೇಶದ್ರೋಹಿಗಳಿಗೆ ಸಣ್ಣಪುಟ್ಟ ಹುದ್ದೆಗಳನ್ನು ನೀಡಿರುವಂತಹ ಸಾಮಾಜಿಕ ಹುದ್ದೆಗಳಲ್ಲಿನ ತಾರತಮ್ಯ, ಸ್ವಾತಂತ್ರ್ಯದ ಬಗೆಗಿನ ಹತಾಶ ಭಾವವನ್ನು ನಾರಾಯಣರಾವ್‌ನ ಮಾತುಗಳಲ್ಲಿ ಗಮನಿಸಬಹುದಾಗಿದೆ. ಕನ್ನಡದ ಕಾದಂಬರಿಯಲ್ಲಿ ಶೇಖರನು ದೇಶದ ಬಿಡುಗಡೆಗಾಗಿ ರಾಜಕೀಯವಾಗಿ ಸಿದ್ದತೆಗೊಳ್ಳಲು ವಿಶ್ವನಾಥ ದೇಸಾಯಿಯನ್ನು ಕ್ರಾಂತಿಕಾರಕವಾಗಿ ಪ್ರೇರೇಪಿಸುತ್ತಿರುವುದು ಕಂಡುಬಂದರೆ, ತೆಲುಗು ಕಾದಂಬರಿಯಲ್ಲಿ ಬ್ರಿಟಿಷರು ಉದ್ಯೋಗದಲ್ಲಿ ಭಾರತೀಯರಿಗೆ ಮಾಡುತ್ತಿರುವ ಅನ್ಯಾಯ, ತಾರತಮ್ಯವನ್ನು ಮಂದವಾಗಿ ಚಿತ್ರಿಸುತ್ತಿರುವುದು ಕಂಡುಬರುತ್ತದೆ.

ಮಾಡಿ ಮಡಿದವರು ಕಾದಂಬರಿಯಲ್ಲಿ ಬಾಳಪ್ಪ ಎಂಬ ಮುದುಕ "ಮಾಡಿರಿ, ಮಾಡಿರಿ ನಾನೂ ಬರ್ತೀನಿ ನಿಮ್ಮ ಸಂಗಡ ಆ ಕೆಂಪು ಮೂತೀ ಮಂದಿನ್ನ ಹೊರಗೆ ಹಾಕೇ ಬಿಡೋಣ ಈ ಸರತಿ" (ಪುಟ–೪೭, ೧೯೫೦) ಭಾರತದಲ್ಲಿ ಬ್ರಿಟೀಷರನ್ನು ದೇಶದಿಂದ ಹೊರಗಡೆ ಹಾಕಲು ಎಲ್ಲಾ ರೀತಿಯ ಜನಸಮೂಹದ ಬೆಂಬಲವಿದ್ದಿರುವುದು ಕಂಡುಬರುತ್ತದೆ. ದೇಶದ ಬಿಡುಗಡೆಗೆ ಕೇವಲ ಬಿಸಿರಕ್ತದ ಯುವಕರು ಮಾತ್ರ ತಮ್ಮ ತನು, ಮನ, ಧನ ಅರ್ಪಿಸಲು ಸಿದ್ಧರಾಗಿಲ್ಲ ಅವರ ಜೊತೆಗೆ ಹಾಗೂ ಹೀಗೂ ಪ್ರಾಣ ಬಿಡುವ ಮುದುಕರು ದೇಶದ ಸ್ವಾತಂತ್ರ್ಯಕ್ಕಾಗಿ ಪರಿತಪಿಸುವ ಸ್ವಾತಂತ್ರ್ಯ ಮನೋಭಾವ, ಬ್ರಿಟಿಷರ ಮೇಲಿನ ಕೋಪ ತಾಪವನ್ನು ಈ ಮುದುಕ ಬಾಳಪ್ಪನಲ್ಲಿ ಗುರುತಿಸಬಹುದಾಗಿದೆ. ಬ್ರಿಟಿಷರು ಹಿರಿಯ–ಕಿರಿಯರು ಹೆಣ್ಣು–ಗಂಡು, ವೃದ್ಧ–ಬಾಲ ಎನ್ನದೆ ಅನ್ಯಾಯ, ಅಕ್ರಮಗಳನ್ನು ಎಸಗಿ ದೇಶದ ಜನತೆಯನ್ನು ಬಹಳ ಸಂಕಷ್ಟಕ್ಕೀಡುಮಾಡಿದ್ದಾರೆ. ಆ ನೋವು, ಸಂಕಟವನ್ನು ಬಾಳಪ್ಪನ ಮಾತುಗಳಲ್ಲಿ ಕಾಣಬಹುದಾಗಿದೆ. ನಾರಾಯಣರಾವ್ ಕಾದಂಬರಿಯಲ್ಲಿ ತಿರುಪತಿರಾವ್ ಎಂಬ ಮುದುಕ

ಕನ್ನಡ ಭಾಷಾಂತರ

ಸ್ತ್ರೀ ಸ್ವಾತಂತ್ರ್ಯ ಸಂಪಾದನೆ, ಶಿಕ್ಷಾಸ್ಮೃತಿಯಲ್ಲಿ ಪರ ಹೆಂಡತಿ ಸಂಭೋಗ, ಗರ್ಭವಿಚ್ಛೇದನಕ್ಕೆ ಸಂಬಂಧಿಸಿದ ಶಿಕ್ಷೆಗಳನ್ನು ತೊಲಗಿಸುವುದು, ವಿವಾಹ ವಿಚ್ಛೇಧನ, ಕಾನೂನು, ಅಣ್ಣಾ–ತಮ್ಮಂದಿರ ಆಸ್ತಿಯಲ್ಲಿ ಸ್ತ್ರೀಯರಿಗೆ ಹಕ್ಕು ಇರಬೇಕೆಂಬ ನಿಯಮಗಳನ್ನು ರೂಪಿಸಬೇಕು ಎಂದು ಹೇಳುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೬ ಕ್ರಸಂ. ೯)

ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಎಷ್ಟು ಮುಖ್ಯವೋ ಅಷ್ಟೇ ದೇಶದ ಸಾಮಾನ್ಯ ಜನತೆಗೆ ಸಾಮಾಜಿಕ ಸ್ವಾತಂತ್ರ್ಯ, ಹಕ್ಕು, ಸೌಲಭ್ಯಗಳು ಸಹ ಬಹಳ ಮುಖ್ಯವಾಗಿದ್ದವು. ಬಹಳ ಮುಖ್ಯವಾಗಿ ಸ್ತ್ರೀಯರ ರಕ್ಷಣೆ, ಸ್ವಾತಂತ್ರ್ಯಕಡೆ ಹೆಚ್ಚಿನ ಒಲವು ನೀಡಿರುವುದರ ಕುರಿತು ಚರ್ಚಿಸಿರುವುದನ್ನು

ಗುರುತಿಸಬಹುದಾಗಿದೆ. ದೇಶಕ್ಕೆ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿ ಬ್ರಿಟಿಷರು ಸೇರಿದಂತೆ ಅವರ ಅಧೀನದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರ ವರ್ಗವು ಸ್ತ್ರೀಯರ ಮೇಲೆ ಅನೇಕ ರೀತಿಯ ದೌರ್ಜನ್ಯಗಳನ್ನು, ಅಕ್ರಮಗಳನ್ನು ನಡೆಸುತ್ತಿರುವುದರ ಹಿನ್ನೆಲೆಯಲ್ಲಿ ಈ ರೀತಿಯಾಗಿ ಚರ್ಚಿಸಿದ್ದಾರೆ ಎಂಬುದನ್ನು ಕಾಣಬಹುದಾಗಿದೆ. ಹೀಗೆ ಕನ್ನಡ ಕಾದಂಬರಿಯಲ್ಲಿ ಮುದುಕ ಬಾಳಪ್ಪನು ದೇಶದ ಸ್ವಾತಂತ್ರ್ಯಕ್ಕಾಗಿ ಪರಿತಪಿಸುತ್ತಿರುವುದನ್ನು ಕಟ್ಟೀಮನಿ ಅವರು ಚಿತ್ರಿಸಿದ್ದಾರೆ. ಅಡವಿ ಬಾಪಿರಾಜು ಅವರು ಸಮಾನತೆ ಸ್ವಾತಂತ್ರ್ಯಕ್ಕಾಗಿ ತಿರುಪತಿರಾವ್ ಹಂಬಲಿಸುತ್ತಿರುವುದನ್ನು ಚಿತ್ರಿಸಿರುವುದು ಕಂಡುಬರುತ್ತದೆ. ಆದರೆ ಕನ್ನಡ ಕಾದಂಬರಿಯಲ್ಲಿ ಲೇಖಕರು ಬಾಳಪ್ಪನವರಂತಹ ಮುದುಕನಿಂದ ಕ್ರಾಂತಿಕಾರಕ ನುಡಿಗಳನ್ನು ಹಾಡಿಸಿದ್ದರೆ ತೆಲುಗು ಲೇಖಕರು ತಿರುಪತಿರಾವ್ ಎಂಬ ವ್ಯಕ್ತಿಯಿಂದ ಮಂದವಾಗಿ ಸಮಾನತೆ, ಸ್ವಾತಂತ್ರ್ಯ ಕುರಿತು ಸೂಕ್ಷ್ಮವಾಗಿ ಮಾತನಾಡಿಸಿದ್ದಾರೆ.

ಮಾಡಿಮಡಿದವರು ಕಾದಂಬರಿಯಲ್ಲಿ ಶೇಖರನ ತಂಡದವರು ಕಿರುಬನಕೊಳ್ಳದ ಗುಡಿಯಲ್ಲಿ ಇರುವ ವಿಚಾರವನ್ನು ತಿಳಿದು ಬಾಳಾಸಾಹೇಬ ದೇಸಾಯಿಯ ಕುತಂತ್ರದ ಮೂಲಕ ಕೊಳ್ಳದ ಬಳಿ ಬರುವಷ್ಟರಲ್ಲಿ ವಿಷಯ ತಿಳಿದ ತಂಡದವರು ಪಲಾಯನ ಮಾಡಿರುತ್ತಾರೆ. ಆಗ ಗುಡಿಯ ಹೊರಗಡೆ ಕಾವಲುಗಾರನಂತೆ ನಟಿಸಿ ಸುದ್ದಿ, ಸಮಾಚಾರಗಳನ್ನು ತಿಳಿಸುವ ಬಾಳಪ್ಪನನ್ನು ಪೋಲೀಸರು ಶೇಖರ ಮತ್ತು ಆತನ ತಂಡದವರ ಗುಟ್ಟನ್ನು ತಿಳಿಸುವಂತೆ ಚಿತ್ರಹಿಂಸೆ ನೀಡುತ್ತಾರೆ. ಅಲ್ಲದೆ ಬಹುಮಾನದ ಆಸೆಯನ್ನು ಸಹ ತೋರಿಸುತ್ತಾರೆ. ಆಗ ಬಾಳಪ್ಪ ಕೆರಳಿದ ಹುಲಿಯಂತೆ ಕನಲಿ ಒಂದೇ ಮಾತಿನಲ್ಲಿ "ಕಿತ್ತೂರ ಚೆನ್ನವ್ವನ ನಾಡಿನಾಗ ಹುಟ್ಟಿ ಬೆಳದೀನಿ ನಾನು. ಇಂಥ ಹೇಸಿ ಕೆಲಸ ನಮ್ಮ ಮಂದಿ ಯಾರೂ ಮಾಡಾಕಿಲ್ಲ. ನಾಲಿಗೆ ಬಿಗಿಹಿಡಿದು ಮಾತಾಡಿರಿ" ಎಂದು ಪ್ರತಿಭಟಿಸುತ್ತಾನೆ. (ಪುಟ-೯೭, ೧೯೫೦) ಬೆಳಗಾವಿಯ ಕಿತ್ತೂರು ರಾಣಿ ಚೆನ್ನಮ್ಮ ಪ್ರಾಂತೀಯ ಪ್ರದೇಶಕ್ಕಾಗಿ ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿ ಬ್ರಿಟಿಷರ ನಿದ್ದೆಗೆಡೆಸಿದ ವೀರವನಿತೆ, ಚೆನ್ನಮ್ಮಳ ವೀರತ್ವ, ಧೀರತ್ವ, ಸಾಹಸ ಪ್ರವೃತ್ತಿ, ಕೆಚ್ಚದೆಯ ಗಂಡು ಹೃದಯ, ಅಚಲವಾದ ದೃಢನಿರ್ಧಾರ ಆ ಮಣ್ಣಿನಲ್ಲಿ ಉಳಿದು ಬೆರೆತು ಹೋಗಿವೆ. ನಂತರ ಹುಟ್ಟಿಬರುವ ಪೀಳಿಗೆಗೆ ಆ ನಾಡು ವೀರಭೂಮಿ, ಪುಣ್ಯಭೂಮಿಯಾಗಿದೆ. ಅಂತಹ ನಾಡಿನಲ್ಲಿ ಹುಟ್ಟಿಬೆಳೆದ ಕಿರಿಯ ಬಾಲಕನಿಂದ ಹಿಡಿದು ಮುಪ್ಪಿನ ಮುದುಕನವರೆವಿಗೂ ವೀರರು, ಶೂರರು, ಗಂಡುಗಲಿಗಳಾಗಿ ತನ್ನ ತಾಯ್ನಾಡಿನ ಮಣ್ಣಿಗಾಗಿ ರಕ್ತವನ್ನು ಅರ್ಪಿಸಲು ಸಿದ್ದರಿರುತ್ತಾರೆಯೇ ವಿನಃ ಲಾಭ, ಲೋಭ, ಮೋಜಿಗೆ ಆಸೆಪಟ್ಟು ಸ್ವಾತಂತ್ರ್ಯವೀರರ ಗುಟ್ಟಿನ ವಿಚಾರವನ್ನು ತಿಳಿಸುವಂತ ಹೇಸಿನ ಕೆಲಸ ಚೆನ್ನಮ್ಮನ ಆಶೀರ್ವಾದದಿಂದ ಜನ್ಮ ಪಡೆದ ಯಾವೊಬ್ಬ ವ್ಯಕ್ತಿಯು ತಿಳಿಸಲಿಕ್ಕಿಲ್ಲ ಎಂದು ಆಕ್ರೋಶಗೊಳ್ಳುತ್ತಾನೆ.

ನಾರಾಯಣರಾವ್ ಕಾದಂಬರಿಯಲ್ಲಿ ಪರಮೇಶ್ವರ ಎಂಬ ವ್ಯಕ್ತಿ,

ಕನ್ನಡ ಭಾಷಾಂತರ

ದೇಶಕ್ಕೆ ಸ್ವಾತಂತ್ರ್ಯ ಬಂದು ಕೆಲ ದಿನಗಳ ನಂತರ ಭಿಕ್ಷುಗಾರರನ್ನೆಲ್ಲ ಒಟ್ಟುಗೂಡಿಸಿ ಅವರು

ಈ ವೃತ್ತಿಗೆ ಹೇಗೆ ಬಂದರು ಅದಕ್ಕೆ ಕಾರಣಗಳನ್ನು ತಿಳಿದುಕೊಂಡು, ಅವರ ವೃತ್ತಿಗಳು ಅಭಿವೃದ್ಧಿ ಹೊಂದಲು ಏನಾದರೂ ವ್ಯವಸ್ಥೆ ಮಾಡಬೇಕೆನ್ನುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೬ ಕ್ರಸಂ. ೧೦)

ಪರಮೇಶ್ವರನ ಈ ಮಾತುಗಳಲ್ಲಿ ದೇಶ ಸ್ವಾತಂತ್ರ್ಯ ಕುರಿತ ಮನೋಭಿಲಾಷೆ ಕಂಡು ಬರದೆ ದೇಶದಲ್ಲಿ ಸಂಚಾರಿಗಳಾಗಿ ಸಂಚರಿಸುವ ಭಿಕ್ಷುಕರ ಏಳಿಗೆಗಾಗಿ ಯೋಚಿಸುತ್ತ ಅವರ ನೋವು, ಸಂಕಟಗಳನ್ನು ಪರಿಹರಿಸುವುದರ ಕಡೆ ಗಮನ ಕೊಟ್ಟಿರುವುದನ್ನು ಗಮನಿಸಬಹುದಾಗಿದೆ. ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕೆಂಬ ಯೋಚನೆ, ಕಲ್ಪನೆ ಕಂಡುಬರುತ್ತದೆ. ಸ್ವತಂತ್ರ ಭಾರತದಲ್ಲಿ ಎಲ್ಲರು ಯಾರ ಆಶ್ರಯ, ಸಹಕಾರವಿಲ್ಲದೆ ಬದುಕಬೇಕು ಎಂಬ ಆಶಯವನ್ನು ಗ್ರಹಿಸಬಹುದಾಗಿದೆ. ಹೀಗೆ ಕನ್ನಡ ಕಾದಂಬರಿಯಲ್ಲಿ ಬಾಳಪ್ಪನು ಸ್ಥಳೀಯ ನಾಡಾದ ಬೆಳಗಾವಿ ಮತ್ತು ಚೆನ್ನಮ್ಮನನ್ನು ಕುರಿತಂತೆ ಪ್ರೇರಣೆ, ಘನತೆ, ಗೌರವವನ್ನು ವ್ಯಕ್ತಪಡಿಸುತ್ತಿರುವುದು ಕಂಡುಬರುತ್ತದೆ. ತೆಲುಗು ಕಾದಂಬರಿಯಲ್ಲಿ ಪರಮೇಶ್ವರನು ಭಿಕ್ಷುಕರ ಸ್ಥಿತಿ–ಗತಿ ಕುರಿತು ಚಿಂತಿಸುತ್ತಿರುವುದನ್ನು ಲೇಖಕರು ಹಿಡಿದಿಟ್ಟಿದ್ದಾರೆ.

ಮಾಡಿ ಮಡಿದವರು ಕಾದಂಬರಿಯಲ್ಲಿ ಸಂಗಣ್ಣ ಜೈಲುವಾಸ ತೀರಿಸಿ ಬಂದಂತಹ ಸಂದರ್ಭದಲ್ಲಿ ವಿಶ್ವನಾಥ ದೇಸಾಯಿಯನ್ನು ಭೇಟಿಯಾದಾಗ "ಇದು ಜೈಲಿಗೆ ಹೋಗುವ ಚಳವಳಿ ಅಲ್ಲ. ಪೋಲೀಸರ ಕಣ್ಣಾಗ ಮಣ್ಣು ಹಾಕಿ, ಹೊರಗೆ ಇದ್ದುಕೊಂಡು ಹೋರಾಡುವ ಚಳುವಳಿ. ಸ್ವಾತಂತ್ರ್ಯ ಬರೂತನಕ ಹೋರಾಡಬೇಕು ಇಲ್ಲದಿದ್ದರೆ ಸಾಯಬೇಕು." (ಪುಟ–೧೫೬, ೧೯೫೦)

ಸಂಗಣ್ಣ ಕಲ್ಲಾಪುರದಲ್ಲಿ ಪೈಲ್ವಾನ್ ಸಂಗಣ್ಣ ಎಂದು ಪ್ರಸಿದ್ಧಿ ಪಡೆದ ಆ ಪ್ರತಿಮ ಹೋರಾಟಗಾರನಾಗಿದ್ದಾನೆ. ಈತನ ರಕ್ತದಲ್ಲಿ ಮಾತಿನಲ್ಲಿ ಲಾಲ್ ಬಾಲ್ ಪಾಲ್ ಕ್ರಾಂತಿಕಾರಕ ಹೋರಾಟಗಾರರ ರಕ್ತ ಹರಿದಾಡುತ್ತದೆ. ಇದು ಹೋರಾಟ ಮಾಡಿ ಹೇಡಿಗಳಂತೆ ಸೆರೆಮನೆಯಲ್ಲಿ ಕೂರುವ ಚಳುವಳಿ ಅಲ್ಲ. ಪ್ರಾಣ ಹೋಗುವತನಕ, ಸ್ವಾತಂತ್ರ್ಯ ಸಿಗುವತನಕ ಹೋರಾಟ ಮಾಡಬೇಕು ಎಂದು ಪಣ ತೊಟ್ಟಿರುವುದನ್ನು ಗಮನಿಸಬಹುದು. ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್‌ನ ಭಾವ ಸತ್ಯವತಿಯನ್ನು ಹೊಡೆದಂತಹ ಸಂದರ್ಭದಲ್ಲಿ ನಾರಾಯಣರಾವ್ ಆತನಿಗೆ ಬುದ್ಧಿವಾದವನ್ನು ಹೇಳಿ

ಕನ್ನಡ ಭಾಷಾಂತರ

ನಿನ್ನ ಮನಸ್ಸು ಬಹಳ ಉತ್ತಮವಾದದ್ದು. ನಿನ್ನಂತಹ ಮನುಷ್ಯ ಅಸಹಕಾರ ಚಳುವಳಿಯಲ್ಲಿ ಪಾಲ್ಗೊಂಡರೆ ದೊಡ್ಡ ನಾಯಕನಾಗಬಹುದು. ಈ ಉದ್ಯೋಗದಲ್ಲಿ ಸೇರಿರುವುದರಿಂದ ನಿನ್ನ ಮನಸ್ಸು ಹೀಗಾಗಿದೆ. ಆದರೆ ಇಂತಹ ಉದ್ಯೋಗದಲ್ಲಿದ್ದು ತಮ್ಮ ಜೀವನಗಳನ್ನು ಉತ್ತಮ ಮಾರ್ಗಗಳಲ್ಲಿ ರೂಪಿಸಿಕೊಂಡಿರುವ ಮಹಾನುಬಾವರು ಇದ್ದಾರೆಂದು ಇಲ್ಲಿಯವರೆಗೂ ಪ್ರಜೆಗಳು ಹೇಳಿಕೊಳ್ಳುತ್ತಿಲ್ಲ? (ಮೂಲ; ಅನುಬಂಧ–೩ ಅಧ್ಯಾಯ–೬ ಕ್ರಸಂ. ೧೧)

ವೀರಭದ್ರನು ಸಿಡುಕಿನ ಸ್ವಭಾವದವನಾಗಿದ್ದು, ಸತ್ಯವತಿ ಒಂದು ಕಾರ್ಯಕ್ರಮಕ್ಕಾಗಿ ಜಮೀನ್ದಾರರ ಮನೆಗೆ ಹೋಗಿರುವುದಕ್ಕಾಗಿ ಆಕೆಯನ್ನು ಹೊಡೆದು ಹಿಂಸೆ ಮಾಡುತ್ತಾನೆ. ಇದನ್ನು ಅರಿತ ನಾರಾಯಣರಾವ್ ಆತನ ಮೇಲೆ ಸಿಟ್ಟು, ಆಕ್ರೋಶವನ್ನು ತಾಳದೆ ಶಾಂತ ಸ್ವಭಾವದಿಂದ ಆತನನ್ನು ಅಸಹಕಾರ ಚಳುವಳಿ ಮುಖಂಡನನ್ನಾಗಿ ಮಾಡಲು ಪ್ರಯತ್ನಿಸುತ್ತಾನೆ. ವೀರಭದ್ರನು ನಿರ್ವಹಿಸುತ್ತಿರುವ ಹುದ್ದೆ ಆತನ ಮನಸ್ಥಿತಿಗೆ ಕಾರಣ ಎಂದು ಬುದ್ಧಿವಾದ ಹೇಳುತ್ತಾನೆ. ಹೀಗೆ ನಾರಾಯಣರಾವ್‌ನಲ್ಲಿನ ಮನಃಪರಿವರ್ತನ ಗುಣವನ್ನು ಗುರುತಿಸಬಹುದು.

ಮಾಡಿ ಮಡಿದವರು ಕಾದಂಬರಿಯಲ್ಲಿ ವಿಶ್ವನಾಥ ದೇಸಾಯಿಯನ್ನು ಚಳುವಳಿಯಿಂದ ಬೇರ್ಪಡಿಸುವುದಕ್ಕಾಗಿ ಶೇಖರನ ಕುಟುಂಬದ ಹೊಲ ಮನೆ ದನಕರುಗಳನ್ನು ಜಪ್ತಿ ಮಾಡಿಕೊಂಡಿರುತ್ತಾರೆ. ಆಗ ಶೇಖರನ ತಾಯಿ ಪಾರ್ವತಮ್ಮ "ನಮಗಾಗಿ ನೀನೇನೂ ಚಳವಳಿ ಬಿಡಬೇಕಾಗಿಲ್ಲಪ್ಪ, ನಾ ಮುದಿಕಿಯಾಗ್ತಾ ಬಂದೆ. ಆದರೂ ಮೈಯಾಗ ಶಕ್ತಿ ಐತಿ ಇನ್ನೂ ಈ ತೋಳು ಇರುವತನಕಾ ಯಾರಿಗೂ ಅಂಜಬೇಕಾಗಿಲ್ಲ. ಕೂಲೀ ಮಾಡಿ ದುಡಿದು ಇರ್ತೀವಿ. ಆದರೆ ಯಾರಿಗೂ ಅಂಜಾಕಿಲ್ಲ" ಎಂದು ಆವೇಶದಿಂದ ನುಡಿಯುತ್ತಾಳೆ. (ಮಾಡಿ ಮಡಿದವರು, ಪುಟ–೯೨, ೧೯೫೦) ಕನ್ನಡ ನಾಡಿನಲ್ಲಿ ಗಂಡುಕಲಿಗಳಂತೆ ವೀರಾವೇಶದಿಂದ ಹೋರಾಟ ಮಾಡಿ ಬ್ರಿಟಿಷರ ನಿದ್ದೆ ಕೆಡಿಸಿದ ಚೆನ್ನಮ್ಮನ ಪ್ರತಿರೂಪದಂತೆ ಪಾರ್ವತಮ್ಮ ಇಲ್ಲಿ ತನ್ನ ಪರಾಕ್ರಮವನ್ನು ವ್ಯಕ್ತಪಡಿಸುತ್ತಾಳೆ. ಪಾರ್ವತಮ್ಮಳಲ್ಲಿನ ದೇಶಭಕ್ತಿ, ತ್ಯಾಗಮನೋಭಾವ, ಸ್ವಾಭಿಮಾನ, ಸಂಯಮ, ದೃಢನಿರ್ಧಾರ, ಬ್ರಿಟಿಷರ ಮೇಲಿನ ಆವೇಶ, ಬಿಡುಗಡೆಯ ದಾಹ ಕಂಡುಬರುತ್ತದೆ. ಪಾರ್ವತಮ್ಮಳ ಪಾತ್ರದ ಮೂಲಕ ಚಳುವಳಿಯಲ್ಲಿ ಸ್ತ್ರೀ ಪಾತ್ರದ ಇರುವಿಕೆಯನ್ನು ಗುರುತಿಸಬಹುದಾಗಿದೆ. ದೇಶದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಅಲ್ಲಲ್ಲಿ ಜಮೀನ್ದಾರ, ಗೌಡಿಕೆ ಕುಟಂಬಗಳು ಅದರಲ್ಲಿ ಮುಖ್ಯವಾಗಿ ಪುರುಷರು ಚಳುವಳಿಯ ವಿರೋಧವಾಗಿ ದೇಶದ್ರೋಹಿಯಂತಹ ಕೆಲಸಗಳು ಮಾಡುತ್ತಿರುವುದು ಕಂಡುಬರುತ್ತವೆ. ಆದರೆ ಕೆಲವು ಸ್ತ್ರೀ ಪಾತ್ರಗಳು ಜೀವ ಹೋಗುವ ಸಂದರ್ಭದಲ್ಲಿಯಾದರೂ ಬ್ರಿಟಿಷರ ಅಧಿಕಾರಕ್ಕೆ ಮಣೆ ಹಾಕದೆ ಪೋಲೀಸರಿಗೆ ಪ್ರತಿರೋಧ ತೋರುವುದನ್ನು ಕಾಣಬಹುದಾಗಿದೆ. ಇದೇ ಕಾದಂಬರಿಯಲ್ಲಿ ಸಂಗಣ್ಣನನ್ನು ಹಿಡಿಯಲು ಬಂದಾಗ ಮನೆಯಲ್ಲಿ ಆತನ ತಾಯಿ "ಮುಂದಕ್ಕೆ ಕಾಲನ್ನಾದರೂ ಇಡು ನಿನ್ನನ್ನು ಸುಟ್ಟುಬಿಟ್ಟೇನು" ಯಾವನೋ ಗಂಡಸು ನನ್ನ ಹಿಡಿಯುವವ? ಮೈಗೆ ಕೈ ಹಚ್ಚಿದರ ಕೊಂದು ಬಿಟ್ಟೇನು" (ಪುಟ–೧೧೧, ೧೯೫೦) ಎಂದು ಕರ್ಕಶವಾಗಿ ಕೂಗುತ್ತಿದ್ದ ಮುದುಕಿ ಮೂರು ಲೋಕಗಳನ್ನು ನಡುಗಿಸುವ ಹಾಗೆ ಅಕಟೋವಿಕಟವಾಗಿ ನರ್ತನಗೈಯುವ ಮಹಾಕಾಳಿಯ ಹಾಗೆ ಬೆಂಕಿಯ ಕಿಡಿಯಂತೆ ಸಿಡಿಯುತ್ತಾಳೆ. ದೇಶ, ಸ್ವಾತಂತ್ರ್ಯದ ಪರಿಕಲ್ಪನೆ ಅಷ್ಟಾಗಿ ಅರಿಯದ ಮುದುಕಿ ತನ್ನ ಮಗನನ್ನು ಹಿಡಿಯುತ್ತಾರೆ ಎಂದು ತಿಳಿದ ತಕ್ಷಣ ಅಧಿಕಾರಿಗಳನ್ನು ಗದರಿಸುವಿಕೆಯಲ್ಲಿ ಆಕೆಯಲ್ಲಿನ ಸ್ವಾತಂತ್ರ್ಯ ಭಕ್ತಿಯನ್ನು ಗುರುತಿಸಬಹುದಾಗಿದೆ.

ನಾರಾಯಣರಾವ್ ಕಾದಂಬರಿಯಲ್ಲಿ ರೌನಾಲ್ಡ್‌ಸನ್ ಎಂಬ ವ್ಯಕ್ತಿ ರಾಮಚಂದರ್ ಎಂಬ ವ್ಯಕ್ತಿಗೆ

ಕನ್ನಡ ಭಾಷಾಂತರ

"ರಾಮಚಂದರ್! ಗಾಂಧಿಯವರ ಮಾರ್ಗವೆ ಉತ್ತಮವಾದದ್ದು. ಆಂಗ್ಲ ಪರಿಪಾಲನೆಯನ್ನು ಯಾವುದೇ ಕಾರಣಕ್ಕೂ ದ್ವೇಷಿಸದೆ ಅವರ ಪ್ರಾಣವೇ ನಮ್ಮ ಪ್ರಾಣವೆಂದುಕೊಂಡು ಅವರ ಮನಸ್ಸನ್ನು ಬದಲಾಯಿಸಲು ಪ್ರಯತ್ನಿಸಬೇಕು." (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರಸಂ. ೧೨)

ಇಲ್ಲಿ ಹಿಂಸೆಗೆ ಮಹತ್ವವನ್ನು ನೀಡದೆ ಅಹಿಂಸಾ ತತ್ವದ ಮೂಲಕ ಬ್ರಿಟಿಷರನ್ನು ಮನವೊಲಿಸಬೇಕು. ಅವರ ಆಡಳಿತ, ಅಧಿಕಾರವನ್ನು ಯಾವುದೇ ಕಾರಣಕ್ಕೂ ದ್ವೇಷಿಸಕೂಡದು. ಅವರು ಏನೇ ಹಿಂಸೆಯನ್ನು ನೀಡಿದರೂ ಸಹ ನಾವು ಪ್ರತಿಹಿಂಸೆಗೆ ತೊಡಗಬಾರದು ಹಾಗೆ ಮಾಡಿ ಬ್ರಿಟಿಷರನ್ನು ದೇಶದಿಂದ ಹೊರಹಾಕಬೇಕು. ಗಾಂಧೀಜಿಯವರ ತತ್ವ ಚಿಂತನೆಗಳಿಗೆ ಮನ್ನಣೆ ನೀಡಿರುವುದನ್ನು ಕಾಣಬಹುದಾಗಿದೆ. ಬ್ರಿಟಿಷರನ್ನು ಸ್ವೀಕರಿಸುತ್ತಲೆ ದೂರ ಮಾಡಬೇಕು ಎಂಬ ಅಂಶವನ್ನು ಗ್ರಹಿಸಬಹುದಾಗಿದೆ. ಹೀಗೆ ಕನ್ನಡ ಕಾದಂಬರಿಗಳಲ್ಲಿ ಶೇಖರನ ತಾಯಿ ಮತ್ತು ಸಂಗಣ್ಣನ ತಾಯಿ ಆವೇಶಭರಿತವಾಗಿ ಬ್ರಿಟಿಷರನ್ನು ನಿಂತಲ್ಲಿಯೆ ದೇಶದಿಂದ ಹೊರಹಾಕಬೇಕು ಎಂದು ಬಹಳವಾಗಿ ಪ್ರತಿರೋಧಿಸುವುದು ಕಂಡುಬರುತ್ತದೆ. ತೆಲುಗು ಕಾದಂಬರಿಯಲ್ಲಿ ರೌನಾಲ್ಡ್‌ಸನ್ ಶಾಂತಿಪ್ರಿಯನಾಗಿದ್ದು, ತಾಳ್ಮೆಯಿಂದ ಪ್ರೀತಿ, ವಿಶ್ವಾಸದಿಂದ ಬ್ರಿಟಿಷರನ್ನು ತಮ್ಮವರನ್ನಾಗಿ ಮಾಡಿಕೊಂಡು ದೂರಮಾಡಬೇಕು ಎಂಬಂತಹ ಮನೋಭಾವವನ್ನು ಗ್ರಹಿಸಬಹುದು.

ಮಾಡಿ ಮಡಿದವರು ಕಾದಂಬರಿಯಲ್ಲಿ ಜಮೀನ್ದಾರ ಬಾಬಾಸಾಹೇಬ ದೇಸಾಯಿ ಕಾಂಗ್ರೆಸ್ ಚಳವಳಿಗೆ ಮಾಡಲು ಕೆಲಸವಿಲ್ಲದ ಕೆಲವರು ನಿರುದ್ಯೋಗಿಗಳು ನಡೆಸುವ ಚಳುವಳಿ (ಮಾಡಿಮಡಿದವರು, ಪುಟ-೬೬, ೬೭, ೧೯೪೮) ಎಂದು ಅವರಿಗೆ ಕಾಂಗ್ರೆಸ್ ಗಾಂಧಿ ಟೋಪಿಯನ್ನು ಕಾಣುತ್ತಲೂ ಉರಿದು ಬೀಳುತ್ತಿದ್ದರು. ಸರ್ಕಾರದ ವಿರುದ್ಧದ ಚಳವಳಿಗಳನ್ನೆಲ್ಲ ಅವರು ಬಲವಾಗಿ ವಿರೋಧಿಸುತ್ತಿದ್ದರು. ಬ್ರಿಟಿಷರ ಎಂಜಲು ಕಾಸು, ತುಣುಕು ರೊಟ್ಟಿಗಾಗಿ ಆಸೆಪಟ್ಟು ಚಳವಳಿಯ ವಿರುದ್ಧ ಕುತಂತ್ರಗಳನ್ನು ಮಾಡುತ್ತಿರುವಂತಹ ಸಮಾಜ, ದೇಶಭ್ರಷ್ಟ ವ್ಯಕ್ತಿಗಳ ಪ್ರಸ್ತಾಪವನ್ನು ಗುರುತಿಸಬಹುದಾಗಿದೆ. ನಾರಾಯಣರಾವ್ ಕಾದಂಬರಿಯಲ್ಲಿ ಜಮೀನ್ದಾರ ಸುಬ್ಬಾರಾಯುಡು ಕಾಂಗ್ರೆಸ್‌ವಾದಿ, ಗಾಂಧೀವಾದಿ, ಖಾದಿಯ ಮೇಲೆ ಅಭಿಮಾನವನ್ನು ಹೊಂದಿದ್ದವನು. ಮಗಳು ಸೂರ್ಯಕಾಂತಮ್ಮ ಮತ್ತು ಸೊಸೆ ಶಾರದೆ ಪರೀಕ್ಷೆಯಲ್ಲಿ ಪಾಸಾದಾಗ

ಕನ್ನಡ ಭಾಷಾಂತರ

ತನ್ನ ಹಟ್ಟಿಯಲ್ಲಿರುವ ಎಲ್ಲಾ ಹೆಣ್ಣು ಮಕ್ಕಳಿಗೆ ಖಾದಿಯ ರವಿಕೆ ಬಟ್ಟೆಗಳು, ಹೂ, ಹಣ್ಣು, ಕುಂಕುಮವನ್ನು ಹಂಚಿರಿ" ಎಂದು ಹೇಳುತ್ತಾನೆ (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರಸಂ. ೧೩)

ಸುಬ್ಬಾರಾಯುಡು ಅವರ ಸ್ವಾತಂತ್ರ್ಯಪ್ರೇಮ, ಖಾದಿ ಬಳಕೆ, ಪ್ರಚಾರ, ಗಾಂಧಿ ಅನುಯಾಯಿ ಎಂಬುದನ್ನು ಕಾಣಬಹುದಾಗಿದೆ. ಮಾಡಿ ಮಡಿದವರು ಕಾದಂಬರಿಯಲ್ಲಿ ಊರಿನ ಮುಖ್ಯಸ್ಥ ದೇಶದ ಹಿರಿಯ ಪ್ರತೀಕವಾದ ಊರಿನ ಮುಖಂಡ, ಗೌಡ ಎಂದು ಪ್ರಖ್ಯಾತನಾದ ಸೂರನಗೌಡನು ಶೇಖರನಿಗೆ "ನಮ್ಮ ಮುದುಕಿಗೆ ಗಾಂಧಿ ಮಂದಿ ಅಂದರ ಬಹಳ ಪ್ರೀತಿ. ನೀವು ಬಂದಿರೋದು ಗೊತ್ತಾದ ಕೂಡಲೇ ಇವೊತ್ತು ಹೋಳಿಗೆ ಮಾಡ್ತೀವಿ ಅಂದಳು. ಮಕ್ಕಳು ಮನಿ ಬಿಟ್ಟು ಎಷ್ಟು ದಿನದಿಂದ ತಿರುಗ್ತಾ ಇದ್ದಾರೋ, ಒಮ್ಮೆಯಾದರೂ ಸಿಹಿ ತಿನ್ನಲಿ ಪಾಪ ಅಂತ ಬೆಳಗಿನಾಗ ಎದ್ದು ಹೋಳಿಗಿ ಮಾಡಿಸಿದ್ದಾಳ" ಎಂದು ಕಪಟತನವನ್ನು ತೋರಿಸುತ್ತಾನೆ. (ಮಾಡಿ ಮಡಿದವರು, ಪುಟ-೧೬೨, ೧೯೪೮) ಸರ್ಕಾರದ ಒತ್ತಾಯಕ್ಕೆ ಮಣಿದು ತಂಡದವರನ್ನು ಹಿಡಿಸಿಕೊಟ್ಟ ಸೂರನಗೌಡನ ಪಾತ್ರವೂ ವಿಶಿಷ್ಟ ಬಗೆಯಿಂದ ಕೂಡಿದೆ. ಅಂದಿನ ಗೌಡರ ಪ್ರತಿಮೂರ್ತಿ ಸೂರನಗೌಡ. ಒಣ ಆಡಂಬರದ ವಿಲಾಸದಲ್ಲಿ ಕಾಲ ಕಳೆಯುತ್ತಿದ್ದ ಅಂದಿನ ದೇಸಾಯಿಗಳ ಪ್ರತಿನಿಧಿಯೆಂಬಂತೆ ಬಾಬಾ ಸಾಹೇಬರ ಪಾತ್ರ ಹೃದಯಂಗಮವಾಗಿದೆ. ಬಾಬಾ ಸಾಹೇಬ ದೇಸಾಯಿ ಮತ್ತು ಸೂರನಗೌಡನಂತಹ ಪಾತ್ರಗಳು ಅಂದಿನ ಸಮಾಜದಲ್ಲಿ ಬೆರಳೆಣಿಕೆಯಷ್ಟಿದ್ದು, ಪ್ರಸ್ತುತ ಸಮಾಜದಲ್ಲಿ ಯಥೇಚ್ಛವಾಗಿರುವುದನ್ನು ಕಾಣಬಹುದಾಗಿದೆ. ನಾರಾಯಣರಾವ್ ಕಾದಂಬರಿಯಲ್ಲಿ ಜಮೀನ್ದಾರ ತಲ್ಲಾಪ್ರಗಡ ಲಕ್ಷ್ಮೀಸುಂದರ ಪ್ರಸಾದರಾವ್ ಗೋಖಲೆ ಅವರ ಮಾರ್ಗವನ್ನು ಅನುಸರಿಸುವವನಾಗಿರುತ್ತಾರೆ. ಶಾಸನ ಸಭೆಯಲ್ಲಿ ರಾಷ್ಟ್ರೀಯ ಪಕ್ಷದ ನಾಯಕರಾಗಿದ್ದು, ದೇಶಬಂಧು, ಚಿತ್ತರಂಜನ್ ದಾಸ್ ಅವರ ಪಕ್ಷಕ್ಕೆ ಬೆಂಬಲ ನೀಡುವವರಾಗಿದ್ದಾರೆ. ಯಾವ ಪಕ್ಷದಲ್ಲೇ ಇದ್ದರೂ ದೇಶದ ಸ್ವಾತಂತ್ರ್ಯಕ್ಕಾಗಿ ಹಂಬಲಿಸುವವರಾಗಿರುತ್ತಾರೆ. ಶಾಸನ ಸಭೆಯಲ್ಲಿ ರೈತರ ಪರವಾಗಿ ಅವರ ಅನುಕೂಲ-ಅನಾನುಕೂಲವಾಗಿ ಚರ್ಚೆ ಮಾಡುತ್ತಾರೆ. (ನಾರಾಯಣರಾವ್, ಪುಟ-೧೨೩, ೧೯೩೪) ಗೌಡ ಮತ್ತು ಜಮೀನ್ದಾರ ಎರಡು ಪಾತ್ರಗಳು ಸಮಾಜದಲ್ಲಿ ತನ್ನದೇ ಆದ ಘನತೆ, ಗೌರವವನ್ನು ಉಳಿಸಿಕೊಂಡು ಬಂದಿದೆ. ಆದರೆ ಕನ್ನಡ ಕಾದಂಬರಿಯಲ್ಲಿನ ಸೂರನಗೌಡ ಎಂಬ ಪಾತ್ರ ತೆಲುಗು ಕಾದಂಬರಿಯಲ್ಲಿನ ಜಮೀನ್ದಾರ ಎಂಬ ಪಾತ್ರಕ್ಕೆ ವಿರೋಧವಾಗಿ ಚಿತ್ರಿತಗೊಂಡಿದೆ.

ಹೀಗೆ ಜಮೀನ್ದಾರಿ ವ್ಯವಸ್ಥೆಗೂ, ಭೂಸ್ವಾಮ್ಯ ವ್ಯವಸ್ಥೆಗೂ ಪ್ರತಿಬಿಂಬಿತರಾದ ಲಕ್ಷ್ಮೀಸುಂದರ ಪ್ರಸಾದರಾವು, ಸುಬ್ಬಾರಾಯುಡು ಅವರು ಉತ್ತಮರಾಗಿ, ಉದಾತ್ತರಾಗಿ, ದೇಶಾಭಿಮಾನಿಗಳಾಗಿ ಚಿತ್ರಿತವಾಗಿದ್ದಾರೆ. ಮಾಡಿ ಮಡಿದವರು ಕಾದಂಬರಿಯಲ್ಲಿ ಜಮೀನ್ದಾರ ಮತ್ತು ಗೌಡರು ಚಳವಳಿಯ ವಿರೋಧವಾಗಿ, ರೈತರನ್ನು ಸಂಕಷ್ಟಕ್ಕೆ ಈಡು ಮಾಡುತ್ತಿರುವುದನ್ನು ಕಾಣಬಹುದು. ಆದರೆ ನಾರಾಯಣರಾವ್ ಕಾದಂಬರಿಯಲ್ಲಿ ಜಮೀನ್ದಾರರು ರೈತರ ಪರವಾಗಿ ಅವರ ಯೋಗಕ್ಷೇಮಕ್ಕಾಗಿ ಹೋರಾಡುತ್ತಿರುವುದನ್ನು ಕಾಣಬಹುದಾಗಿದೆ. ಮಾಡಿ ಮಡಿದವರು ಕಾದಂಬರಿಯಲ್ಲಿ ತಾಲೂಕು ಕಚೇರಿಯ ಮೇಲೆ ದಾಳಿ ನಡೆಸುವ ಸಂದರ್ಭದಲ್ಲಿ ಪೊಲೀಸರು ಮತ್ತು ಚಳವಳಿಗಾರರ ನಡುವೆ ಗುಂಡಿನ ಚಕಮಕಿ ನಡೆದು ಶೇಖರ-ಹೇಮಾಳಿಗೆ ಗುಂಡು ತಗುಲಿ ತಪ್ಪಿಸಿಕೊಂಡು ಹೋಗುವ ಸಂದರ್ಭದಲ್ಲಿ ಮಾರ್ಗ ಮಧ್ಯದಲ್ಲಿ ಹಸನ್‌ಸಾಬಿಯ ಭೇಟಿ ಆಗುತ್ತದೆ. ಇಬ್ಬರನ್ನು ಆಸ್ಪತ್ರೆಗೆ

ಕೊಂಡೊಯ್ಯುವಾಗ ಹೇಮಾವತಿ ಸತ್ತುಹೋಗುತ್ತಾಳೆ. ಶೇಖರನು ಸಾಯುವ ಸ್ಥಿತಿಯಲ್ಲಿರುತ್ತಾನೆ. ಆಗ ಹಸನಸಾಬಿಯು ಶೇಖರನ ತಲೆಯನ್ನು ತೊಡೆಯ ಮೇಲಿರಿಸಿಕೊಂಡು ಮೊಣಕಾಲುಗಳನ್ನು ಮಡಚಿಕೊಂಡು ನಮಾಜದ ಭಂಗಿಯಲ್ಲಿ ಕುಳಿತುಕೊಂಡು ಹೃದಯವನ್ನೆ ಹಿರಿದು ಈಚೆಗೆ ಎಳೆದು ತಂದಂತ ಧ್ವನಿಯಲ್ಲಿ "ಅಲ್ಲಾ ದೇವರೇ ಇವನ ಪ್ರಾಣ ಉಳಿಸು, ನನ್ನ ತಂದೆ! ನನ್ನ ಜೀವವನ್ನಾದರೂ ತಕ್ಕೊಂಡು ಇವನ ಪ್ರಾಣ ಉಳಿಸು ತಂದೆ!" ಎನ್ನುವಲ್ಲಿ ಹಿಂದೂ ಮುಸ್ಲಿಂರಲ್ಲಿನ ಪರಸ್ಪರ ಐಕ್ಯತಾ ಮನೋಭಾವವನ್ನು ಗುರುತಿಸಬಹುದು. ಅಲ್ಲದೆ ಮುಸ್ಲಿಂರ ನಿಸ್ವಾರ್ಥ ಸೇವಾ ಮನೋಭಾವವನ್ನು ಕಾಣಬಹುದು. (ಮಾಡಿ ಮಡಿದವರು, ಪುಟ-೨೨೦, ೧೯೪೮).

ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್ ಆಲಂ ಎಂಬ ಮುಸ್ಲಿಂ ಯುವಕನನ್ನು ತನ್ನ ಮನೆಯಲ್ಲಿರಿಸಿಕೊಂಡು ಆತನ ವಿದ್ಯಾಭ್ಯಾಸಕ್ಕೆ ನೆರವಾಗುತ್ತಾನೆ. ಅಲ್ಲಿನ ಹಿಂದು-ಮುಸ್ಲಿಮರ ಸಂಬಂಧ

ಕನ್ನಡ ಭಾಷಾಂತರ

ಮಹಮ್ಮದೀಯರು ಹಿಂದೂ ದೇವಾಲಯಗಳನ್ನು ಗೌರವಿಸುತ್ತಾರೆ. ಹಿಂದೂಗಳು ಮಸೀದಿಗಳ ಹತ್ತಿರ ವಾದ್ಯಗಳನ್ನು ಬಾರಿಸುವುದಿಲ್ಲ. ಆಂಧ್ರಪ್ರದೇಶದಲ್ಲಿ ಮಹಮ್ಮದೀಯರ ಸೋಡಾ ಅಂಗಡಿಗಳಲ್ಲಿ ಬ್ರಾಹ್ಮಣರು ಸಹ ಷರಬತ್ತು ಕುಡಿಯುತ್ತಾರೆ. ಪಾನ್, ಬೀಡಾ ಕೊಂಡುಕೊಳ್ಳುತ್ತಾರೆ. ಹಿಂದೂಗಳು ಮಹಮ್ಮದೀಯರ ಗೋರಿಗಳಿಗೆ ಹೋಗಿ ಪೂಜೆ ಮಾಡುತ್ತಾರೆ. (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರ.ಸಂ. ೧೪) ಹಿಂದೂ-ಮುಸ್ಲಿಂರ ಸಹೋದರ ಮನೋಭಾವವನ್ನು ಗುರುತಿಸಬಹುದು. ಬ್ರಿಟಿಷರು ತಮ್ಮ ಸ್ವಂತ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಹಿಂದೂ-ಮುಸ್ಲಿಂರಲ್ಲಿ ಕಲಹ ಬೀಜಗಳನ್ನು ಬಿತ್ತಿ ಕೋಮುಗಲಭೆಗಳಿಗೆ ಆಸ್ಪದ ಮಾಡಿಕೊಡುತ್ತಿದ್ದ ಕುತಂತ್ರವನ್ನು ಗಮನಿಸಿ, ಇಬ್ಬರೂ ಲೇಖಕರು ತಮ್ಮ ತಮ್ಮ ಕಾದಂಬರಿಗಳಲ್ಲಿ ಹಿಂದೂ-ಮುಸ್ಲಿಂರಲ್ಲಿನ ಅನ್ಯೋನ್ಯ ಸಂಬಂಧಗಳನ್ನು ಚಿತ್ರಿಸಿರಬಹುದು ಎನಿಸುತ್ತದೆ. ಕನ್ನಡ ಕಾದಂಬರಿಯಲ್ಲಿ ಶೇಖರ ಎಂಬ ಸ್ವಾತಂತ್ರ್ಯ ಯೋಧ ಪೋಲೀಸರ ಬಂದೂಕಿನ ಗುಂಡು ತಗುಲಿ ಸಾಯುವ ಸ್ಥಿತಿಯಲ್ಲಿದ್ದಾಗ ಹಸನಸಾಬಿ ಎಂಬ ಮುಸ್ಲಿಂ ದೇಶಪ್ರೇಮಿ ಶೇಖರನ ಪ್ರಾಣವನ್ನು ಉಳಿಸಲು ತನ್ನ ಪ್ರಾಣವನ್ನು ಮುಡುಪಾಗಿಡಲು ಬಯಸುತ್ತಿರುವುದು ಚಿತ್ರಿತವಾಗಿದೆ. ತೆಲುಗು ಕಾದಂಬರಿಯಲ್ಲಿ ನಾರಾಯಣರಾವ್ ಆಲಂ ಎಂಬ ಮುಸ್ಲಿಂ ಯುವಕನನ್ನು ಭಾರತೀಯ ಮನೋಭಾವನೆಯಿಂದ ತನ್ನ ಮನೆಯಲ್ಲಿ ಪೋಷಿಸಿ, ರಕ್ಷಿಸಿ ಹಿಂದೂ ಮುಸ್ಲಿಂ ಧರ್ಮಗಳನ್ನು ಪರಸ್ಪರ ಗೌರವಿಸುತ್ತಿರುವುದನ್ನು ಕಾಣಬಹುದಾಗಿದೆ.

ಯಾವುದೇ ಒಳ್ಳೆಯ ಕೆಲಸಕ್ಕಾಗಲಿ, ಕೆಟ್ಟ ಕೆಲಸಕ್ಕಾಗಲಿ ಸ್ಫೂರ್ತಿ, ಪ್ರೇರಣೆ, ಪ್ರಚೋದನೆ ಬಹಳ ಮುಖ್ಯವಾಗಿರುತ್ತದೆ. ಅದೇ ರೀತಿಯಲ್ಲಿ ಸ್ವಾತಂತ್ರ್ಯ ಚಳವಳಿ ಎಂಬ ಮಹಾಯಜ್ಞ ಮಹಾಸಮರದಲ್ಲಿ ಗುಲಾಮಗಿರಿ ಎಂಬ ಶೃಂಖಲೆಗಳಲ್ಲಿ ಬಂಧಿತರಾಗಿ ಅನೇಕ ಕಷ್ಟ-ನಷ್ಟ ನೋವು ಸಂಕಟಗಳನ್ನು ಅನುಭವಿಸುತ್ತಿರುವ ಜಡತೆಯಿಂದ ಇರುವ ಜನರನ್ನು ಎಚ್ಚರಿಸುವಲ್ಲಿ

ಅಧ್ಯಾಪಕರು, ಡಾಕ್ಟರರ ಪಾತ್ರ ಪ್ರಮುಖವಾದುದನ್ನು ಗಮನಿಸಬಹುದು. ಅದರಂತೆ ಮಾಡಿ ಮಡಿದವರು ಕಾದಂಬರಿಯಲ್ಲಿ ಶಂಕರ ಮಾಸ್ತರರು ಜನರನ್ನು ಚಳವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಲು ಅನೇಕ ದೇಶೀಯ ಮತ್ತು ರಾಷ್ಟ್ರೀಯ ನಾಯಕರನ್ನು ಗುರಿಯಾಗಿಸಿಕೊಂಡು ಕವಿತೆಯನ್ನು ರಚಿಸಿರುವುದು ಹೀಗಿದೆ.

"ನಮ್ಮ ಭರತ ಖಂಡಕ್ಕೆಲ್ಲ ರಾಜಾ ನಮ್ಮ ಜವಹರ್
ಕೈಯೆತ್ತಿ ಸಾರುತಾನ ನಡೀ ಹೊರಗೆ ಸರಕಾರ್
ಇನ್ನು ನಮ್ಮ ಸರಕಾರ್! ಕಾಂಗ್ರೆಸ್ ಸರಕಾರ್
ಹೊಲದಾಗಿನ ರೈತರ ಸರಕಾರಾ
ಗಿರಣ್ಯಾಗಿನ ಕೂಲಿಯವರ ಸರಕಾರ
ಇನ್ನಿಲ್ಲೋ ಇಂಗ್ಲೀಷರ ದಂಡಾರಾಜ್ಯ
ಇನ್ನು ಮೇಲೆ ಹಿಂದಿಯವರ ರಾಮರಾಜ್ಯಾ
ಅದೋ! ಗಾಂಧಿ ಹೇಳುತಾನೆ
ಜವಾಹರಲಾಲ ಹೇಳುತಾನೆ
ಜಯಪ್ರಕಾಶ ಹೇಳುತಾನೆ
ಸುಭಾಷಚಂದ್ರ ಹೇಳುತಾನೆ
ಭಗತ್‌ಸಿಂಗ್ ಹೇಳುತಾನೆ
ಧನಶೆಟ್ಟಿ ಹೇಳುತಾನೆ
ಚೆನ್ನಮ್ಮ ಹೇಳುತಾಳೆ
ಮಲ್ಲವ್ವ ಹೇಳುತಾಳೆ
ರಾಯಣ್ಣ ಹೇಳುತಾನೆ
ಮೀಸಿ ಹೊತ್ತ ಗಂಡಸರೆಲ್ಲ ಮ್ಯಾಲಕ್ಕೇಳಿರೋ!
ರಕ್ತ ಇದ್ದವರೆಲ್ಲಾ ಮ್ಯಾಲಕ್ಕೇಳಿರೋ
ಹೊಲಾ ಬಿಟ್ಟು ಏಳಿರೋ
ಮನೀ ಬಿಟ್ಟು ಏಳಿರೋ"
(ಮಾಡಿ ಮಡಿದವರು, ಪುಟ–೪೮, ೫೦, ೫೧, ೫೨, ೧೯೪೮)

ಈ ಕಾದಂಬರಿ ಉತ್ತರ ಕರ್ನಾಟಕದ ಪರಿಸರದಲ್ಲಿ ರಚನೆಯಾಗಿದ್ದು, ಆ ಭಾಗದ ಜನರನ್ನು ಚಳವಳಿಗೆ ಪ್ರೇರೇಪಿಸುವುದಕ್ಕಾಗಿ ದೇಶೀಯ (ಪ್ರಾಂತೀಯ) ನಾಯಕರನ್ನು, ರಾಷ್ಟ್ರೀಯ ನಾಯಕರಾದ ಮಂದಗಾಮಿ, ತೀವ್ರಗಾಮಿ ಗುಂಪಿನವರನ್ನು ಪ್ರತಿಬಿಂಬಿಸಿರುವುದನ್ನು ಕಾಣಬಹುದು. ಅಲ್ಲದೆ ಹೋರಾಟ ಎಂದರೆ ಕೇವಲ ದೇಶೀಯ ರಾಷ್ಟ್ರೀಯ ನಾಯಕರು ಮಾತ್ರ ಹೋರಾಟ ಮಾಡುವುದಲ್ಲ.

ಸಮಾಜದಲ್ಲಿ ದುಡಿಯುವ ವರ್ಗ ಪ್ರಮುಖವಾದುದೆಂದು ಅವರನ್ನು ತೊಡಗಿಸುವ ಪ್ರಯತ್ನವನ್ನು ಗುರುತಿಸಬಹುದು. ಹೀಗೆ ಹಾಡುವ ಕಲೆಯಿಂದ ಜನ ಜಾಗೃತಿಯನ್ನುಂಟು ಮಾಡುವುದನ್ನು ಕಾಣಬಹುದು.

ಸ್ವಾತಂತ್ರ್ಯ ಚಳುವಳಿಯ ನೇತಾರನಾಗಿ ದೇಶದ ಮುಂದಾಳತ್ವ ವಹಿಸಿದ ಗಾಂಧೀಜಿ ಆ ಸಂದರ್ಭದಲ್ಲಿ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಸಾಹಿತ್ಯ ರಚನೆಗೆ ವಸ್ತುವಾಗಿದ್ದು, ನಾರಾಯಣರಾವ್ ಕಾದಂಬರಿಯಲ್ಲಿ ಪರಮೇಶ್ವರನು ಗಾಂಧೀಜಿಯವರನ್ನು ಕುರಿತು ರಚಿಸಿದ ಕವನ ಹೀಗಿದೆ.

ಕನ್ನಡ ಭಾಷಾಂತರ

ಓಹೊ ತಾತಾ ನಿನ್ನದು ಯಾವೂರು
ನೀನು ಎಲ್ಲಿಗೆ ಹೋಗುತ್ತಿಯಾ
ಊರು ಇಲ್ಲ ಮನೆ ಇಲ್ಲ
ದೇಶವೆಲ್ಲಾ ನಿನ್ನದೇ ಊರು
ಊರಿನ ಹೊರಗೆ ದೇವಸ್ಥಾನದಲ್ಲಿ
ಉಟ್ಟಬಟ್ಟೆಯಲ್ಲಿ ಮಲಗಿಕೊಳ್ಳುತ್ತೀಯಾ
ತಾತಾ ನಿನ್ನದು ಯಾವೂರು
ನೀ ಎಲ್ಲಿಗೆ ಹೋಗುತ್ತೀಯಾ
ಕುಟೀರದಂತಹ ಮನೆ ಕಟ್ಟುತ್ತೀಯಾ
ಮನೆಯ ಸಾಮಾನೆಲ್ಲ ಕಟ್ಟಿಡ್ತಿಯಾ
ಮಕ್ಕಳು ಮರಿಗಳೊಂದಿಗೆ ನಡೆಯುತ್ತಿದ್ದರೆ
ಇಡೀ ರಾಷ್ಟ್ರವೇ ಚಿಕ್ಕದೆನಿಸುತ್ತದೆ.
ತಾತಾ ನಿನ್ನದು ಯಾವೂರು
ನೀ ಎಲ್ಲಿಗೆ ಹೋಗುತ್ತೀಯಾ
ಭಿಕ್ಷೆ ನೀಡೋ ತಾಯಿ ಇದ್ದರೆ
ಅನ್ನ ಹಾಕುವ ತಾಯಿ ಇದ್ದರೆ
ಬಾಡಿ ಹೋಗದ ಹೂವಿನ ಬದುಕು
ಏಕಾಏಕಿ ಬೈರಾಗಿ ಆಗುತ್ತಿಯಾ
ಅಂಗೈ ನೋಡಿ ಶಾಸ್ತ್ರ ಹೇಳುತ್ತೀಯಾ
ತಾತಾ ನಿನ್ನದು ಯಾವೂರು
ನೀ ಎಲ್ಲಿಗೆ ಹೋಗುತ್ತೀಯಾ?
(ಮೂಲ; ಅನುಬಂಧ-೩ ಅಧ್ಯಾಯ-೬ ಕ್ರ.ಸಂ. ೧೫)

ಗಾಂಧೀಜಿಯವರ ಪ್ರಭಾವ ತಣ್ಣೀರಿನಂತಹ ಮುದುಕರಲ್ಲದೆ ಬಿಸಿರಕ್ತದ ಕಿಡಿಗಳಂತೆ ಸಿಡಿಯುವ ಯುವಕರಲ್ಲಿರುವುದನ್ನು ಗಮನಿಸಬಹುದು. ಗಾಂಧೀಜಿಯವರ ಪ್ರಸಿದ್ಧಿಯನ್ನು ಈ ಕವಿತೆಯಿಂದ ತಿಳಿಯಲಾಗಿದೆ. ಸ್ವಾತಂತ್ರ್ಯ ಚಳವಳಿಯ ಸಂದರ್ಭವಾದ್ದರಿಂದ ಗಾಂಧೀಜಿಯವರ ಪ್ರಭಾವ, ಪ್ರೇರಣೆಯನ್ನು ಗುರುತಿಸಬಹುದೇ ವಿನಃ ಈಗಿನ ಪ್ರಸ್ತುತ ಸಮಾಜ, ಕಾಲದಲ್ಲಿ ಗಾಂಧೀಜಿ ಜೀವಂತವಾಗಿದ್ದು ಅವರ ತತ್ವ ಚಿಂತನೆಗಳನ್ನು ಪ್ರಸರಿಸಲು ಪ್ರಯತ್ನಿಸಿದ್ದರೆ ಗಾಂಧೀಜಿ ಇಂದಿನ ಯುವ ಪೀಳಿಗೆಗೆ ಬ್ರಿಟಿಷರಿಗಿಂತ ಬದ್ಧವೈರಿಯಾಗಿರುತ್ತಿದ್ದರು ಎನ್ನುವುದರಲ್ಲಿ ಸಂಶಯವಿರಲಿಲ್ಲ. ಮಾಡಿ ಮಡಿದವರು ಕಾದಂಬರಿಯಲ್ಲಿ ಗಾಂಧೀಜಿಯವರ ಪ್ರಭಾವದ ಜೊತೆಗೆ ನೆಹರು, ಸುಭಾಷ್ ಚಂದ್ರಬೋಸ್, ಭಗತ್‌ಸಿಂಗ್, ಜಯಪ್ರಕಾಶ್, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮುಂತಾದವರ ಪ್ರೇರಣೆ ಅಂದಿನ ಕನ್ನಡದ ಪರಿಸರದಲ್ಲಿ ಇತ್ತು ಎಂಬುದನ್ನು ಮನಗಾಣಬಹುದಾಗಿದೆ. ಆದರೆ ತೆಲುಗಿನ ಪರಿಸರದಲ್ಲಿ ಕೇವಲ ಗಾಂಧೀಜಿಯವರ ಪ್ರೇರಣೆ ಯಥೇಚ್ಚವಾಗಿರುವುದು ಇದರಿಂದ ಸೂಚಿತವಾಗುತ್ತದೆ. ಮಾಡಿ ಮಡಿದವರು ಕಾದಂಬರಿಯಲ್ಲಿ ಶೇಖರ ಮತ್ತು ಮಾಸ್ತರರು ಹಿಂಸೆ-ಅಹಿಂಸೆ ಕುರಿತು ನಡೆದ ಸಂಭಾಷಣೆ ಹೀಗಿದೆ.

"ಸ್ಟೇಷನ್ ಸುಡೋದು, ಪೂಲು ಒಡೆಯುವುದು, ಟಪಾಲು ಲೂಟಿ ಮಾಡೋದು, ಬಾಂಬು ತಯಾರಿಸಿ ಉಪಯೋಗಿಸೋಣ ಇವೆಲ್ಲಾ ಹಿಂಸಾಕೃತ್ಯಗಳೇ ಅಲ್ಲೇನು? ಪಿಸ್ತೂಲು ನಾವು ಉಪಯೋಗಿಸದಿದ್ದರೂ, ಅದನ್ನ ಕೈಯೊಳಗ ಹಿಡಿದು ಹೆದರಿಸಿ ನಮ್ಮ ಕೆಲಸ ಸಾಧಿಸುತೇವಲ್ಲ? ಅದು ಒಂದು ರೀತಿಯಿಂದ ಹಿಂಸಾ ಅಲ್ಲೇನು?

ಶೇಖರ-ಬಂದೂಕು, ಗುಂಡು, ಪಿಸ್ತೂಲುಗಳಿಂದ ತಯಾರಾಗಿರುವ ಪೋಲೀಸರ ಎದುರಿಗೆ ನಿಂತು ಯುದ್ಧ ಮಾಡುವಾಗ ನಮ್ಮ ಕೆಲಸ ಸಾಧಿಸಬೇಕು ಅಂತಿದ್ದರ ಆಯುಧಗಳನ್ನು ಹಿಡಿಯಲೇ ಬೇಕಾಗುತ್ತೈತಿ. ನಮ್ಮ ಕೆಲಸ ಸಾಧಿಸುವುದಕ್ಕಾಗಿ ಆಯುಧ ಹಿಡಿದರೆ ತಪ್ಪೇನೂ ಅಲ್ಲ. ಇದು ಸ್ವಾತಂತ್ರ್ಯದ ಯುದ್ಧ ಅನ್ನೋದನ್ನ ನೆನಪಿನೊಳಿಗಿಟ್ಟುಕೊಂಡರ ಎಲ್ಲಾ ಸರಿ ಹೋಗುತ್ತೈತಿ "ಎನ್ನುತ್ತಾನೆ". (ಮಾಡಿ ಮಡಿದವರು, ಪುಟ-೧೪೮, ೧೯೪೮)

ಗುರಿಸಾಧನೆಗಾಗಿ ಹೋರಾಡುವಲ್ಲಿ ಹಿಂಸೆ-ಅಹಿಂಸೆಯ ಪ್ರಶ್ನೆ ಬರುವುದಿಲ್ಲವೆಂಬ ಕಟ್ಟಿಮನಿ ಅವರ ವಾದವನ್ನು ಗ್ರಹಿಸಬಹುದು. ಕಟ್ಟಿಮನಿ ಅವರ ಚಳವಳಿಯ ಕಲ್ಪನೆ ಗಾಂಧೀಜಿಯವರ ಕಲ್ಪನೆಗೆ ಸ್ವಲ್ಪ ಭಿನ್ನ, ಗುರಿ ಮಾತ್ರ ಒಂದೇ ಎಂಬುದನ್ನು ಶೇಖರನ ಪಾತ್ರದ ಮೂಲಕ ಸಾಬೀತು ಪಡಿಸುತ್ತಾರೆ. ನಾರಾಯಣರಾವ್ ಕಾದಂಬರಿಯಲ್ಲಿ ರಾಜೇಶ್ವರನು ಶಾಸ್ತ್ರಿಯವರ ಪತ್ನಿಯಾದ ಪುಷ್ಪಶೀಲೆಯನ್ನು ಕರೆದುಕೊಂಡು ಹೋಗುತ್ತಾನೆ ನಂತರ ಪುಷ್ಪ ಶೀಲೆಯನ್ನು ರಾಜೇಶ್ವರನಿಂದ ಮುಸ್ಲಿಂ ಯುವಕನು ಮೋಹಿಸಿ ಕರೆದುಕೊಂಡು ಹೋಗುತ್ತಾನೆ. ಆಗ ನಾರಾಯಣರಾವ್

ಕನ್ನಡ ಭಾಷಾಂತರ

ನಾರಾಯಣರಾವ್-ಪರ ಹೆಣ್ಣನ್ನು ಪರಧನಕ್ಕಾಗಿ ಆಶಿಸುವುದು ಒಂದು ರೀತಿಯ ಹಿಂಸೆಯೇ.

ಅದು ಪಾಪಕೃತ್ಯ ಅಹಿಂಸಾ ತತ್ವವನ್ನು ಆಧಾರವಾಗಿಸಿಕೊಂಡು ನೀನು ನಿನ್ನ ಕೆಲಸವನ್ನು ಮಾಡುವುದು ಸಾಧ್ಯವಿಲ್ಲ. ಸಮಾಜವು ಇಂತಹ ಕೃತ್ಯಗಳಿಂದ ಮುಕ್ತಿ ಹೊಂದಲು ಬಯಸುತ್ತಿದೆ. ಅವುಗಳಲ್ಲಿ ಸತ್ಯ, ಅಹಿಂಸೆಗೆ ವ್ಯತಿರೇಕವಾಗಬಾರದು ಎಂದು ಭೋದಿಸುತ್ತಾನೆ. (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರಸಂ. ೧೬) ಎಂದು 'ಗಾಂಧೀ ತತ್ವವನ್ನು ಬೋಧಿಸುತ್ತಾನೆ. ಹಿಂಸೆ ಎಂದರೆ ಬೇರೊಬ್ಬ ವ್ಯಕ್ತಿಯನ್ನು ಹೊಡೆಯುವುದು, ಕೊಲೆ ಮಾಡುವುದಲ್ಲ, ಪರನಾರಿ ವಂಚನೆ, ಬೇರೆಯವರ ಹಣ, ಸಂಪತ್ತನ್ನು ದೋಚುವುದು, ಪರರ ಮನಸ್ಸನ್ನು ನೋಯಿಸುವುದು ಸಹ ಹಿಂಸೆ ಗಾಂಧೀಜಿಯವರ ಅಹಿಂಸಾ ತತ್ವವನ್ನು ಅಧರ್ಮದ ಕೆಲಸಗಳಿಗೆ ಬಳಸಿಕೊಂಡು ಗಾಂಧೀಜಿಯವರ ಹೆಸರಿಗೆ ಮಸಿಬಳಿಯುವ ಅಂದಿನ ಸಮಾಜದ ಜನರ ಮನಸ್ಥಿತಿಯನ್ನು ಸೂಕ್ಷ್ಮವಾಗಿ ತಿಳಿಯಬಹುದು. ಹೀಗೆ ಹಿಂಸೆಯ ಇನ್ನೊಂದು ರೂಪವನ್ನು ಅಡವಿ ಬಾಪಿರಾಜು ಅವರು ತೋರ್ಪಡಿಸುತ್ತಾರೆ. ಕನ್ನಡದ ಕಟ್ಟಿಮನಿ ತೆಲುಗಿನ ಬಾಪಿರಾಜು ಗಾಂಧೀಜಿಯವರ ಅಹಿಂಸೆಯ ತತ್ವವನ್ನು ಭಿನ್ನವಾಗಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಕನ್ನಡದ ಲೇಖಕರಿಗೆ ಚಳುವಳಿಯಲ್ಲಿನ ಹಿಂಸೆ ಪ್ರಮುಖವಾದರೆ, ತೆಲುಗಿನ ಲೇಖಕರಿಗೆ ಸಮಾಜದಲ್ಲಿನ ಸ್ತ್ರೀ, ಸಂಪತ್ತು, ಮಾನವನ ನೋವು ಅಗತ್ಯವಾಗಿರುವುದು ಕಂಡುಬರುತ್ತದೆ.

ಮಾಡಿ ಮಡಿದವರು ಕಾದಂಬರಿಯಲ್ಲಿ ೧೯೪೨ರ ಹಿಂದಿನ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಗುರಿ, ಚಳುವಳಿ ಮಾಡಿ ಕೇವಲ ಜೈಲಿಗೆ ಹೋಗುವುದು ಮಾತ್ರವಾಗಿತ್ತು. ಇದರಿಂದ ಯಾವ ಪ್ರಯೋಜನವೂ ಆಗಿರಲಿಲ್ಲ ಎಂಬುದನ್ನು ಕಾದಂಬರಿ ತಿಳಿಸುತ್ತದೆ. ಇದಕ್ಕೆ ಕಾರಣ, ಕಾಂಗ್ರೇಸ್ ಮುಖಂಡರ ನಿರ್ವೀರ್ಯತನ. ಜೈಲಿಗೆ ಹೋಗುವುದೇ ಪರಮಾರ್ಥವೆಂದು ಭಾವಿಸಿ, ಅದನ್ನೇ ಒಂದು ಪ್ಯಾಷನ್ ಆಗಿ ಮಾಡಿಕೊಂಡ ರಾಜಕಾರಣಿಗಳನ್ನು ಲೇಖಕರು ವಿಡಂಬಿಸಿರುವುದನ್ನು ಕಾಣಬಹುದು. ಆ ನಂತರ "ಕರ್ನಾಟಕದ ರಾಜಕಾರಣಿಗಳು ಅಜ್ಞಾತ ವಾಸದ ಸೋಗು ಹಾಕಿಕೊಂಡು ಮುಂಬಯಿ, ಪೂಣೆಗಳಂತಹ ದೊಡ್ಡ ಪಟ್ಟಣಗಳಲ್ಲಿ ಅದೂ ದೊಡ್ಡ ಸರಕಾರಿ ಅಧಿಕಾರಿಗಳ ಮನೆಯಲ್ಲಿ ಆರಾಮಾಗಿ ಊಟ ಮಾಡಿಕೊಂಡು ಕಾಲಕಳೆಯಬೇಕಂತ ಮಾಡಿದ್ದಾರೆ". ಎಂದು ಶೇಖರ ಹೇಮಾ ಚರ್ಚೆ ಮಾಡುತ್ತಿರುವಾಗ ಹೇಮಾ – ಅದಕ್ಕೆ ನಮ್ಮ ಕರ್ನಾಟಕ ಹಿಂದೆ ಬಿದ್ದಿರೋದು. ನಮ್ಮವರೊಬ್ಬರಾದರೂ ಕಾಂಗ್ರೇಸ್ ಅಧ್ಯಕ್ಷರಾದರೇ? ಕಾರ್ಯದರ್ಶಿ ಆದರೇ? ವರ್ಕಿಂಗ್ ಕಮಿಟಿ ಮೆಂಬರು ಕೂಡ ಆಗಲಿಲ್ಲ. ಕಾಂಗ್ರೇಸ್ಸಿನ ಸೂತ್ರಗಳೆಲ್ಲಾ ಉತ್ತರ ಹಿಂದೂಸ್ಥಾನದವರ ಕೈಯೊಳಗ, ದೊಡ್ಡ-ದೊಡ್ಡ ಮುಖಂಡರೂ ಅವರೇ, ಇದಕ್ಕೆಲ್ಲಾ ಕಾರಣ ಇದೆ. ನಮ್ಮಲ್ಲಿ ಮಾತಾಡುವ ಮುಖಂಡರೂ ಬಹಳ, ಕೆಲಸ ಮಾಡಿ ತೋರಿಸುವವರು ಕಡಿಮೆ" ಎನ್ನುತ್ತಾಳೆ. (ಮಾಡಿ ಮಡಿದವರು ಪುಟ ೩೪, ೩೫, ೧೯೪೮) ಈ ಮಾತುಗಳು ಉತ್ತರ ಭಾರತೀಯರಲ್ಲಿದ್ದ ಅಧಿಕಾರಶಾಹಿ ಮತ್ತು ಆಕ್ರಮಣಶಾಲಿ ಮನೋಭಾವವನ್ನು ಹಾಗೂ ನಮ್ಮವರಲ್ಲಿನ ಮಾತಿನ ಶೂರತನವನ್ನೂ ಕೆಲಸದಲ್ಲಿನ ಸೋಮಾರಿತನವನ್ನು, ಅಧಿಕಾರದ ವ್ಯಾಮೋಹವನ್ನು ಸೂಚಿಸುತ್ತವೆ ಮತ್ತು ಕರ್ನಾಟಕದ ಘನತೆ, ಗೌರವವನ್ನು ಕಾಪಾಡುವ ಸಲುವಾಗಿ, ದೇಶದ ಚಳುವಳಿಯಲ್ಲಿ ತನ್ನ ಇರುವಿಕೆಯನ್ನೇ

ಗಟ್ಟಿಗೊಳಿಸುವುದಕ್ಕಾಗಿ ಉತ್ತರ ಭಾರತ-ದಕ್ಷಿಣ ಭಾರತ ಎಂಬ ಅಧಿಕಾರದ ದೇಶ ವಿಭಜನಾ ಕ್ರಮವನ್ನು ಗುರುತಿಸಬಹುದು. ಹೀಗೆ ೧೯೪೭ರಲ್ಲಿದ್ದಂತಹ ರಾಜಕೀಯ ಪರಿಸ್ಥಿತಿಯನ್ನು ಅರಿತುಕೊಳ್ಳಬಹುದು.

ನಾರಾಯಣರಾವ್ ಕಾದಂಬರಿಯಲ್ಲಿ ತನ್ನ ಗೆಳೆಯರಾದ ರಾಜೇಶ್ವರರಾವ್, ರಾಜಾರಾವು, ತನ್ನ ಬಾವ ಲಕ್ಷ್ಮೀಪತಿ ಪ್ರತ್ಯೇಕ ಆಂಧ್ರರಾಷ್ಟ್ರಬೇಕೆಂದು ವಾದಿಸುತ್ತಾರೆ. ತನ್ನ ಬಾವ ಲಕ್ಷ್ಮೀಪತಿ ಪ್ರತ್ಯೇಕ ಆಂದ್ರರಾಷ್ಟ್ರಬೇಕೆಂದು ವಾದಿಸುತ್ತಿರುವಾಗ ನಾರಾಯಣರಾವ್,

ಕನ್ನಡ ಭಾಷಾಂತರ

ಇಡೀ ದೇಶವೆಲ್ಲ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಯತ್ನ ಮಾಡುವುದನ್ನು ಬಿಟ್ಟು, ಆಂಧ್ರಪ್ರದೇಶ ಮಾತ್ರ ಸ್ವಾತಂತ್ರ್ಯ ತರುತ್ತದೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ಯಾಕೆಂದರೆ ದೇಶಕ್ಕಾಗಿ ಪಣತೊಟ್ಟು ಹೋರಾಟ ಮಾಡುತ್ತಿರುವ ವ್ಯಕ್ತಿಗಳಿಗೆ ಆಂಧ್ರಪ್ರದೇಶದ ಸಮಸ್ಯೆ ತಡೆಯಾಗಬಾರದು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ನಿಮಗಿಷ್ಟ ಬಂದ ಹಾಗೆ ಭಾಷೆ ಅನುಸಾರವಾಗಿಯೋ ಅಥವಾ ಇನ್ನ್ಯಾವುದೋ ರೀತಿಯಿಂದಲೋ ರಾಷ್ಟ್ರ ವಿಭಜನೆ ಮಾಡುವುದು ಸುಲಭ. ಅನವಶ್ಯಕವಾದ ಅನವಸರವಾದ ಖರ್ಚುಗಳಿಂದ ತಲೆಭಾರವಾಗಿರುವ ಈ ಕಾಲದಲ್ಲಿ ರಾಷ್ಟ್ರ ವಿಭಜನೆ ಮಾಡಿದರೆ ಖರ್ಚಿಗೆ ಹಣವಿಲ್ಲದೆ ಭಾಗವಹಿಸಿದ ರಾಷ್ಟ್ರಗಳೆಲ್ಲ ದಿವಾಳಿ ರಾಷ್ಟ್ರಗಳಾದರೆ ಏನು ಲಾಭ? (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರ.ಸಂ. ೧೭) ಎನ್ನುವಲ್ಲಿ ನಾರಾಯಣನ ಸ್ವತಂತ್ರ ರಾಜ್ಯ ನಿರ್ಮಾಣಕ್ಕಿಂತ ದೇಶದ ಸ್ವಾತಂತ್ರ್ಯ ಪ್ರಮುಖ ಎಂಬ ಆತನ ರಾಷ್ಟ್ರಾಭಿಮಾನವನ್ನು ಗುರುತಿಸಬಹುದು, ಹೀಗೆ ಮಾಡಿ ಮಡಿದವರು ಕಾದಂಬರಿಯಲ್ಲಿ ಹೇಮಾಳ ಮಾತುಗಳಲ್ಲಿ ಉತ್ತರ ಭಾರತ-ದಕ್ಷಿಣಭಾರತ ಎಂಬಲ್ಲಿ ಕರ್ನಾಟಕ ಮೇಲಿನ ಅಭಿಮಾನವನ್ನು ಗುರುತಿಸಬಹುದು. ನಾರಾಯಣರಾವ್ ಕಾದಂಬರಿಯಲ್ಲಿ ಲಕ್ಷ್ಮೀಪತಿಯ ಮಾತುಗಳಲ್ಲಿ ಪ್ರತ್ಯೇಕ ಆಂಧ್ರದ ಆಶಯವನ್ನು ಕಾಣಬಹುದು. ಕನ್ನಡ ಕಾದಂಬರಿಯಲ್ಲಿ ಕರ್ನಾಟಕಕ್ಕೂ ಅಧಿಕಾರ, ಆಡಳಿತದ ಮೇಲಿನ ವ್ಯಾಮೋಹ ಕುರಿತು ಕ್ರಾಂತಿಕಾರಕ ಆವೇಶವನ್ನು ಹೇಮಾಳ ಮಾತುಗಳಲ್ಲಿ ಗುರುತಿಸಬಹುದು. ಹಾಗೆನೇ ತೆಲುಗು ಕಾದಂಬರಿಯಲ್ಲಿ ನಾರಾಯಣರಾವ್‌ನಲ್ಲಿನ ಅಪ್ರತಿಮ ದೇಶಭಕ್ತಿಯನ್ನು ಕಾಣಬಹುದಾಗಿದೆ.

ಮಾಡಿ ಮಡಿದವರು ಕಾದಂಬರಿಯಲ್ಲಿ "ಪೈಲ್ವಾನ್ ಸಂಗಣ್ಣನು "ಜೈಲಿಗೆ ಹೋಗುವ ಚಳವಳಿ ಅಲ್ಲ ಅದು. ಪೊಲೀಸರ ಕಣ್ಣಾಗ ಮಣ್ಣು ಹಾಕಿ, ಹೊರಗೇ ಇದ್ದುಕೊಂಡು ಹೋರಾಡುವ ಚಳುವಳಿ ಅಂತ ಆ ಪೋಲಿಸರ ಗುಂಡು ಹತ್ತಿ ನಮ್ಮ ಅವ್ವ ಕಣ್ಮುಚ್ಚಿದಾಗಲೇ ನಾನು ಪ್ರತಿಜ್ಞೆ ಮಾಡಿದ್ದೇನೆ. ಸ್ವಾತಂತ್ರ್ಯ ಬರೂತನಕ ಹೋರಾಡಬೇಕು ಇಲ್ಲದಿದ್ದರ ಸಾಯಬೇಕು ಅಂತ..." (ಮಾ.ಮ.ಪುಟ-೧೮೩, ೧೯೪೮) ಸಂಗಣ್ಣ ಜೈಲಿನಿಂದ ತಪ್ಪಿಸಿಕೊಂಡು ಬಂದು ವಿಶ್ವನಾಥವನ್ನು ಕೂಡಿಕೊಂಡು ಆಡಿದ ಮಾತುಗಳಲ್ಲಿ ಅತೀವವಾದ ದೇಶಪ್ರೇಮ, ಮಾತೃ ಭಕ್ತಿಯನ್ನು ಕಾಣಬಹುದು. ಕೇವಲ ಜೈಲಿಗೆ ಹೋಗಿ ಬರುತ್ತಿದ್ದರೆ ದೇಶಕ್ಕೆ ಆ ಬಿಳಿಕೋತಿಗಳಿಂದ ಮುಕ್ತಿ ಸಿಗುವುದಿಲ್ಲ. ಏಟಿಗೆ

ಎದಿರೇಟು ಹಾಕಬೇಕು, ಎಂದಾಗ ಮಾತ್ರ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಎಂಬ ಪ್ರತಿಭಟನಾ ಮನೋಭಾವವನ್ನು ಈತನ ಮಾತುಗಳಲ್ಲಿ ವ್ಯಕ್ತವಾಗುವುದನ್ನು ಗಮನಿಸಬಹುದಾಗಿದೆ. ಮಂದಗಾಮಿ ನಾಯಕರ ಸಿದ್ಧಾಂತಗಳನ್ನು ಟೀಕಿಸುತ್ತಾ ತೀವ್ರಗಾಮಿತ್ವಕ್ಕೆ ಒತ್ತು ಕೊಟ್ಟಿರುವುದನ್ನು ಈ ಮಾತುಗಳು ಸೂಚಿಸುತ್ತಿವೆ. ಶೇಖರನು ಹೇಳಿದ ಮಾತುಗಳನ್ನೇ ವೇದ ವಾಕ್ಯಗಳೆಂದು ತಿಳಿದು ಹೋರಾಟಕ್ಕೆ ತೊಡಗುತ್ತಾನೆ.

ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್ ರೋಹಿಣಿಯೊಂದಿಗೆ ಮಾತನಾಡುತ್ತಿರುವ ಸಂದರ್ಭದಲ್ಲಿ ಮಂಗಪತಿರಾವ್ ನಾರಾಯಣನನ್ನು ನೋಡಿ ಮುಸಿ ನಗು ನಕ್ಕು ಒಳಗಡೆ ಹೋಗುತ್ತಾನೆ. ಆಗ ನಾರಾಯಣರಾವು,

ಕನ್ನಡ ಭಾಷಾಂತರ

ಮಂಗಪತಿರಾವ್ ಗಾಂಧೀಜಿಯವರ ಅಹಿಂಸಾ ಸಿದ್ಧಾಂತ ಸ್ತ್ರೀಯರ ಸಿದ್ದಾಂತ ಎಂದು, ಬಲಹೀನರಂತೆ ನಾವು ಈ ಅಹಿಂಸಾ ಸಿದ್ದಾಂತದಲ್ಲಿ ಪಾಲ್ಗೊಂಡು ಇನ್ನಷ್ಟು ಇರುವ ಬಲವನ್ನು ಕಳೆದುಕೊಂಡು ನಶಿಸಿಹೋಗುತ್ತೇವೆಂದು ಒಬ್ಬ ಬಾಲಕನ ವಾದವಾಗಿದೆ. ಏನೂ ತಿಳಿಯದ ಯುವಕರು ಸರಿಯಾದ ದಾರಿ ತೋರಿಸಿ ಅದರಂತೆ ನಡೆಯುತ್ತೇವೆ. ಬಾಂಬುಗಳನ್ನು ತಯಾರು ಮಾಡುತ್ತೇವೆ. ಬಂದೂಕಿನ ರುಚಿ ನೋಡುತ್ತೇವೆ. ಯುದ್ಧ ಮಾಡಿ ಸ್ವತಂತ್ರ ಗಳಿಸುತ್ತೇವೆ ಎಂದು ವಾದಿಸುತ್ತಾರೆ. ಈ ಬಿಸಿರಕ್ತದ ಯುವಕರು ಸರಿಯಾದ ಮಾರ್ಗದರ್ಶನವಿಲ್ಲದೆ ತಪ್ಪುದಾರಿ ಹಿಡಿದಿದ್ದಾರೆ. ಮೀರತ್‌ನಲ್ಲಿ ನಡೆದ ಭಯಂಕರವಾದ ದುಷ್ಕೃತ್ಯವನ್ನು ನೋಡುತ್ತಿದ್ದೇವೆ? ಮಹಾತ್ಮಾಗಾಂಧೀಜಿಯವರ ತತ್ವದ ಬಗ್ಗೆ ಇವರಿಗೇನು ಗೊತ್ತು ತಂಗಿ. ಈತನ ಮನಸ್ಸನ್ನು ನಿಧಾನವಾಗಿ ಬದಲಾವಣೆ ಮಾಡಬೇಕು. ಇಲ್ಲದಿದ್ದರೆ ಒಂದು ರಾತ್ರಿ ಎಲ್ಲಿಗಾದರೂ ಓಡಿ ಹೋಗುತ್ತಾನೆ. ಏನಾದರೂ ಕೊನೆಗೆ ಗಲ್ಲುಶಿಕ್ಷೆ ಸಾಬೀತಾದರೆ ಯಾರೂ ಏನು ಮಾಡುವಂತಿಲ್ಲ ಎಂದು ನಾರಾಯಣರಾವ್ ಹೇಳುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೬ ಕ್ರ.ಸಂ. ೧೮)

ಈ ಮಾತುಗಳು ಗಾಂಧೀಜಿ ಮತ್ತು ಅವರ ಸಿದ್ಧಾಂತಗಳ ಟೀಕೆ ಬ್ರಿಟಿಷರ ದುರಹಂಕಾರದ ದುಷ್ಕೃತ್ಯಗಳನ್ನು ಸಹಿಸದ ಬ್ರಿಟಿಷ್ ಉನ್ನತಾಧಿಕಾರಿಗಳನ್ನು ಹತ್ಯ ಮಾಡಲು ತಂತ್ರರೂಪಿಸುತ್ತಿದ್ದ, ಕ್ರಾಂತಿಕಾರಕ ನಾಯಕರಾದ ಉದಾಂಸಿಂಗ್, ಭಗತ್‌ಸಿಂಗ್, ಸುಭಾಸ್ ಚಂದ್ರಬೋಸ್ ಬಾಲಗಂಗಾಧರ ತಿಲಕ್, ಮೊದಲಾದವರನ್ನು ನೆನಪಿಸುವಂತಿವೆ. ಮಾಡಿ ಮಡಿದವರು ಕಾದಂಬರಿಯಲ್ಲಿ ಗಾಂಧೀಜಿಯವರ ಕರೆಯನ್ನೇ! ಉಸಿರನ್ನಾಗಿಸಿಕೊಂಡು ಹೋರಾಟದ ಸ್ವರೂಪವನ್ನು ರೂಪಿಸಿದ ಶೇಖರನು ಪೈಲ್ವಾನ್ ಸಂಗಣ್ಣನಿಗೆ ಗಾಂಧಿಯ ಪ್ರತಿರೂಪವಾಗಿದ್ದು, ಆತನ ಕರೆಯಂತೆ ಕ್ರಾಂತಿಕಾರಕ ಹೋರಾಟ ಮಾಡಿ ವೀರಮರಣವನ್ನಪ್ಪುತ್ತಾನೆ. ನಾರಾಯಣರಾವ್ ಕಾದಂಬರಿಯಲ್ಲಿ ಮಂಗಪತಿರಾವ್ ನೇರವಾಗಿ ಗಾಂಧಿ ಮತ್ತು ಆತನ ತತ್ವಗಳನ್ನು ವಿರೋಧಿಸಿ ಕ್ರಾಂತಿಕಾರಕ ಹೋರಾಟಕ್ಕೆ ತೊಡಗುವುದನ್ನು ಲೇಖಕರು ಚಿತ್ರಿಸಿದ್ದಾರೆ. ಇಲ್ಲಿ ಇಬ್ಬರು ಲೇಖಕರು ತೀವ್ರಗಾಮಿ ಚಿಂತನೆಯ ಕಡೆಗೆ ಒಲವು

ನೀಡಿರುವುದನ್ನು ಗಮನಿಸಬಹುದು. ಹೊಸಪೇಟೆಯಲ್ಲಿ ಒಬ್ಬ ವ್ಯಕ್ತಿಯ ಮನೆಗೆ ಬೆಂಕಿ ಬಿದ್ದಂತಹ ಸಂದರ್ಭದಲ್ಲಿ ಒಬ್ಬ ವ್ಯಕ್ತಿ,

ಕನ್ನಡ ಭಾಷಾಂತರ

ಹಣ, ಬಟ್ಟೆ, ವಸ್ತ್ರ, ಒಡವೆ, ಭೂಮಿ ಪತ್ರಗಳು ಎಲ್ಲಾ ಆ ಪೆಟ್ಟಿಗೆಯಲ್ಲಿವೆ. ಇನ್ನು ನನ್ನ ಕೆಲಸ ಮುಗಿದು ಹೋಯಿತು ಎಂದು ಅಳುತ್ತಿರುವಾಗ (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರಸಂ. ೧೯) ನಾರಾಯಣರಾವ್ ನೆನೆ ಬಟ್ಟೆಗಳನ್ನು ತಲೆಯ ಮೇಲೆ ಹಾಕಿಕೊಂಡು ಕೊಡಗಳಲ್ಲಿ ನೀರು ತೆಗೆದುಕೊಂಡು ಮನೆಯೊಳಗೆ ನುಗ್ಗಿ ಅಗತ್ಯವಾದ ಪರಿಕರಗಳನ್ನು ತಂದು ಸಾಹಸ ಮೆರೆಯುತ್ತಾನೆ. ನಾರಾಯಣರಾವ್‌ಗೆ ಗಾಂಧೀಜಿ ಎಂದರೆ ಎಲ್ಲಿಲ್ಲದ ಭಕ್ತಿ. ದೇಶಯಾತ್ರೆಗೆ ಹೋದಂತಹ ಸಂದರ್ಭದಲ್ಲಿ ಮಹಾತ್ಮರ ಜನ್ಮಸ್ಥಳಕ್ಕೆ ಭೇಟಿ ನೀಡಿ, ಆತನು ಹುಟ್ಟಿದ ಗೃಹದ ದರ್ಶನ ಮಾಡಿ ಸಂತೋಷಿಸುತ್ತಾನೆ. ನಾರಾಯಣರಾವ್ ತನ್ನ ಅಕ್ಕ ಸತ್ಯವತಿಯನ್ನು, ತನ್ನ ಭಾವ ವೀರಭದ್ರರಾವ್ ನೀಡುವ ಹಿಂಸೆ, ಕಿರುಕುಳಕ್ಕೆ ಆತನ ಮನೆಯ ಮುಂದೆ ಗಾಂಧೀಜಿಯವರಂತೆ ಉಪವಾಸ ಸತ್ಯಾಗ್ರಹ ಮಾಡುತ್ತೇನೆ ಎನ್ನುತ್ತಾನೆ. ವಿವೇಕಾನಂದ, ಮಹಾತ್ಮಾಗಾಂಧಿ ಮೊದಲಾದ ಅವತಾರ ಪುರುಷರು ನೀಡಿದ ಆದೇಶಗಳನ್ನು ಆಧಾರ ಮಾಡಿಕೊಂಡು ಇತರರಿಗೆ ಬೋಧಿಸುವುದೇ ದೇಶಾಭಿಮಾನ ಎನ್ನುತ್ತಾನೆ. (ನಾರಾಯಣರಾವ್, ಪುಟ-೧೫೨, ೧೯೨, ೨೦೩, ೧೯೩೪) ಹೀಗೆ ಮಾಡಿ ಮಡಿದವರು ಕಾದಂಬರಿಯಲ್ಲಿ ಶೇಖರನು ಸ್ವಾತಂತ್ರ್ಯದ ಅದಮ್ಯ ಬಯಕೆ, ಅಸಾಮಾನ್ಯ, ಅಪ್ರತಿಮ ವೀರಗುಣಗಳನ್ನು ಬೆಳೆಸಿಕೊಂಡಿರುವ ವೀರಗಣಿಯಾಗಿ ಕಂಡುಬರುತ್ತಾನೆ. ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್ ಗಾಂಧೀಜಿ ಪ್ರತೀಕವಾಗಿ ದಲಿತರ ಆಶಾಕಿರಣವಾಗಿ ವಿಷಯ ಸಂಪನ್ನನಾಗಿ ಚಿತ್ರಿತವಾಗಿದ್ದಾನೆ. ಇಬ್ಬರೂ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳಿಗಾಗಿ ಹೋರಾಟ ನಡೆಸಿರುವುದನ್ನು ಗಮನಿಸಬಹುದು.

ಮಾಡಿ ಮಡಿದವರು ಕಾದಂಬರಿಯಲ್ಲಿ ಕಟ್ಟೀಮನಿಯವರು ಹೇಮಾಳನ್ನು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೆಂಗಸರೂ ಭಾಗವಹಿಸಿದ್ದರು ಎಂಬುದಕ್ಕೆ ಪ್ರತೀಕವಾಗಿ ಬಳಸುತ್ತಾರೆ. ವಿಶ್ವನಾಥನು ಹೇಮಾಳ ಪ್ರೀತಿಗೆ ಹಾತೊರೆದಾಗ, ಅವಳ ನಿಲುವು ಹೀಗಿದೆ. "ನನ್ನ ಮಟ್ಟಿಗೆ ಹೇಳಬೇಕಾದರೆ, ಈ ಚಳವಳಿಯೊಳಗೆ ಇರೂತನಕ ನಾ ಹೆಣ್ಣು ಅನ್ನೋದನ್ನೇ ಮರೆತು ಇರ್ತೀನಿ. ಈಗ ನನ್ನ ಕಣ್ಣಿಗೆ ನೀನು ಬರೀ ಗಂಡಸಲ್ಲ, ನಾನು ಬರೀ ಹೆಂಗಸಲ್ಲ, ಈಗ ನಡೆದಿರೋದು ಯುದ್ಧ. ಈ ಯುದ್ಧದಾಗ ಭಾಗವಹಿಸಿದವರು ನಾವಿಬ್ಬರು ಸೈನಿಕರು." (ಮಾಡಿ ಮಡಿದವರು, ಪುಟ-೧೩೮, ೧೯೪೮) ಈ ಮಾತುಗಳು ವಿಶ್ವನಾಥನನ್ನು ಕಾರ್ಯೋನ್ಮುಖನನ್ನಾಗಿಸುತ್ತವೆ. ಹೆಣ್ಣು ಎಲ್ಲ ವಿಧದಲ್ಲೂ ಉತ್ತೇಜನಕಾರಿ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ತನ್ನಲ್ಲಿದ್ದ ಮೂರ್ತ ಮುಗ್ಧ ಪ್ರೇಮದಿಂದ, ವಾತ್ಸಲ್ಯದಿಂದ ವಿಶ್ವನಾಥನನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿದ್ದು ಮಾತ್ರವಲ್ಲದೆ ಅವಳ ಬಗೆಗೆ ಅವನಲ್ಲಿದ್ದ ಪ್ರೇಮಪೂರಿತ ಭಾವನೆಗಳನ್ನು ಪರಿವರ್ತಿಸಿ, ಅಲ್ಲಿ ನಿರ್ಮಲ ಸೋದರತ್ವವನ್ನು

ಮೂಡಿಸಿದ್ದು ಅವಳ ದೊಡ್ಡತನವನ್ನು ಹೇಳುತ್ತದೆ. ನಾರಾಯಣರಾವ್ ಕಾದಂಬರಿಯ ರಾಮಚಂದ್ರನು ಉನ್ನತ ವಿದ್ಯಾಭ್ಯಾಸಕ್ಕಾಗಿ ಅಮೆರಿಕಾಕ್ಕೆ ಹೋಗಿರುತ್ತಾನೆ. ಸಹಪಾಠಿ ಲಿಯೋನಾರಾ ರಾಮಚಂದ್ರನ ಮೇಲೆ ಮೋಹಿತಳಾಗಿ

ಕನ್ನಡ ಭಾಷಾಂತರ

ಪ್ರಿಯತಮಾ! ನನ್ನ ಪ್ರಭುವೆ ನನ್ನನ್ನು ಒಂದು ಸಾರಿ ತಬ್ಬಿಕೋ. ನನ್ನನ್ನು ಒಂದೇ ಒಂದು ಸಾರಿ ಹೆಂಡತಿಯನ್ನಾಗಿ ಸ್ವೀಕರಿಸು ಒಂದು ನಿಮಿಷ ನಿನ್ನಲ್ಲಿ ಐಕ್ಯಳಾಗುತ್ತೇನೆ ಎಂದು ಮಹಾತ್ಮಗಾಂಧೀಜಿ ಕ್ರಿಸ್ತನ ಅವತಾರ ಆತನು ಹೇಳಿದ ಹಾಗೆ ಈಗಿನಿಂದಲೆ ಬ್ರಹ್ಮಚಾರಿಣಿಯಾಗಿ ಮಾನವಸೇವೆ ಮಾಡಬೇಕೆಂದು ಸಂಕಲ್ಪಿಸಿಕೊಂಡಿದ್ದೇನೆ. (ಮೂಲ; ಅನುಬಂಧ–೩ ಅಧ್ಯಾಯ–೬ ಕ್ರಸಂ. ೨೦) ಎನ್ನುವಲ್ಲಿ ಲಿಯೋನಾರಾ ಪ್ರೀತಿಗೆ, ಸ್ವಾರ್ಥ ಬದುಕಿಗೆ ಮಹತ್ವಕೊಟ್ಟಿರುವುದು ಸ್ಪಷ್ಟವಾಗುತ್ತದೆ. ಪ್ರೀತಿ ದಕ್ಕದಿದ್ದಾಗ ಗಾಂಧೀಜಿಯವರ ಸಿದ್ಧಾಂತದ ಮೊರೆಹೋಗುವುದನ್ನು ಕಾಣಬಹುದಾಗಿದೆ. ಮಾಡಿ ಮಡಿದವರು ಕಾದಂಬರಿಯಲ್ಲಿ ಹೇಮಾ ಸ್ವಾರ್ಥ ಬದುಕನ್ನು ಬದಿಗೊತ್ತಿ ದೇಶದ ಹಿತಕ್ಕೆ ದುಡಿಯುತ್ತಾಳೆ. ನಾರಾಯಣರಾವ್ ಕಾದಂಬರಿಯಲ್ಲಿ ಲಿಯೋನಾರಾ ಮೊದಲು ತನ್ನ ಜೀವನಕ್ಕೆ ಆದ್ಯತೆ ಕೊಟ್ಟಿದ್ದು, ಅನಂತರ ಸೇವಾ ಮನೋಭಾವದ ಮುಖಾಂತರ ತನ್ನ ಆಶಯವನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿದ್ದನ್ನು ಕಾಣಬಹುದು. ಮತ್ತು ವಿದೇಶಿಯರಲ್ಲಿ ಗಾಂಧೀ ಮೇಲಿನ ಭಕ್ತಿಯನ್ನು ಗುರುತಿಸಬಹುದಾಗಿದೆ.

ಮಾಡಿ ಮಡಿದವರು ಕಾದಂಬರಿಯು ೧೯೪೨ನೆಯ ಪ್ರಚಂಡವಾದ ಚಳವಳಿಯನ್ನು ವಸ್ತುವನ್ನಾಗಿ ಹೊಂದಿದೆ. ಈ ಚಳವಳಿಯಲ್ಲಿ ಭಾಗವಹಿಸಿದವರೆಲ್ಲ ಹಳ್ಳಿಗರು, ಅವಿದ್ಯಾವಂತರು ಆದರೆ ಹೇಮಾವತಿ, ವಿಶ್ವನಾಥರಿಬ್ಬರೆ ವಿದ್ಯಾವಂತರು. ನಾರಾಯಣರಾವ್ ಕಾದಂಬರಿಯಲ್ಲಿ ಅಡವಿ ಬಾಪಿರಾಜು ಅವರು ಗಾಂಧೀಜಿಯವರ ಅಸಹಕಾರ ಚಳವಳಿಯಲ್ಲಿ ಕೆಲವು ವಿಶೇಷ ಸಂಗತಿಗಳನ್ನು ಗಾಂಧೀಜಿಯವರ ಖಾದಿ, ಸ್ವದೇಶಿ ವಸ್ತುಗಳ ಬಳಕೆಯನ್ನು ಪ್ರಸ್ತಾಪಿಸಿದ್ದಾರೆ. ಈ ಕಾದಂಬರಿಯಲ್ಲಿ ಚಳವಳಿಯನ್ನು ಕುರಿತು ಚರ್ಚೆ ಮಾಡುವಂತಹ ಪಾತ್ರಗಳೆಲ್ಲ ಅಕ್ಷರಸ್ತವುಗಳಾಗಿರುವುದು ಇಲ್ಲಿ ವಿಶೇಷವಾಗಿದೆ.

ಮಾಡಿ ಮಡಿದವರು ಕಾದಂಬರಿಯಲ್ಲಿ ಚಳವಳಿಯ ಸೂತ್ರದ ನಿರೂಪಕ ಶೇಖರನಾಗಿರುತ್ತಾನೆ. ಕಾದಂಬರಿಯ ಪ್ರಾರಂಭದಿಂದ ಕೊನೆಯವರೆಗೂ ಆತನ ಕುಶಾಗ್ರ ಬುದ್ಧಿಯ, ಚಾಕಚಕ್ಯತೆಯನ್ನು ಪಾದರಸದಂತಹ ಮನಸ್ಸನ್ನು ಕಾಣಬಹುದು. ಹೇಮಾವತಿ–ಶೇಖರ ಇವರಿಬ್ಬರು ಕೂಡಿ ಹೂಡಿದ ತಂತ್ರೋಪಾಯ ರೋಮಾಂಚನಕಾರಿಯಾಗಿದೆ. ಪೊಲೀಸ್ ಅಧಿಕಾರಿಯಾಗಿ ಶೇಖರನು ನಟಿಸಿದ ದರ್ಪ, ವಿಶ್ವನಾಥನು ತೋರಿದ ಅಚಲ ವಿಶ್ವಾಸ, ಸುಭದ್ರವಾದ ರಾಷ್ಟ್ರೀಯ ಪ್ರಜ್ಞೆ ಅಪೂರ್ವ ಸನ್ನಿವೇಶವನ್ನೇ ನಿರ್ಮಿಸಿವೆ. ಶೇಖರನು ದೇಶ ಎಂಬ ಹಿರಿಯ ಸಂಸಾರದ ಹೊರೆಯನ್ನು ಹೊರುತ್ತಾನೆ. ಆದರೆ ಸಂಸಾರಿಯಾಗಿರಬೇಕಾದ ಕರ್ತವ್ಯ ಪ್ರಜ್ಞೆಯುಳ್ಳವನು ವ್ಯಕ್ತಿಯ ಸುಖಕ್ಕಿಂತ ರಾಷ್ಟ್ರದ ಸುಖ ದೊಡ್ಡದೆಂದು ಭಾವಿಸಿ, ಅವನು ಮದುವೆಯಾಗಿ ಸಂಸಾರದ ಜಾಲದಲ್ಲಿ

ಸಿಲುಕಿಕೊಳ್ಳುವುದಿಲ್ಲ. ಸಾಮಾನ್ಯರಲ್ಲಿ ಎಂಥ ಅಸಾಮಾನ್ಯ ತ್ಯಾಗವಿರುವುದೆಂಬ ದೃಷ್ಟಾಂತವನ್ನು ಲೇಖಕರು ಶೇಖರನ ವ್ಯಕ್ತಿತ್ವದ ಮೂಲಕ ಎತ್ತಿ ತೋರಿಸಿದ್ದಾರೆ. ಮಂತ್ರಿ ಪದವಿ ಹಿರಿಯ ಮುಖಂಡರಿಗೆ ಇರಲಿ ನಮ್ಮ ಪಾಲಿಗೆ ಭೂಮಿತಾಯಿ ಮಾತ್ರ ಇರಲಿ ಎಂದು ಒಂದು ಪ್ರಸಂಗದಲ್ಲಿ ಹೇಳುವ ಶೇಖರ ನಿಜವಾಗಿ (ಮಾಡಿ ಮಡಿದರು, ಪುಟ-೧೫೫, ೧೯೪೮) ನಿಸ್ವಾರ್ಥ ಸೇವಾಜೀವಿಯಾಗಿ ಕಂಡುಬರುತ್ತಾನೆ. ಲೇಖಕರೆ ಹೇಳಿದಂತೆ ಹಳ್ಳಿಗರ ಆತ್ಮವಿಶ್ವಾಸ, ಕಾಯಕದಲ್ಲಿ ಶ್ರದ್ಧೆಗಳ ಮೂರ್ತಿಯಾಗಿ ನಿಂತವನು ಶೇಖರನು. ಪ್ರವಾಸಿ ಬಂಗ್ಲೆಯನ್ನು ಸುಡಲು ಹೋದಾಗ ಪೊಲೀಸರ ಕೈಯಲ್ಲಿ ಸಿಗಬಹುದಾದ ಅನಾಹುತದಿಂದ ಅವನು ಪಾರಾದ ರೀತಿ ಅವನ ಪ್ರಸಂಗಾವ ದಾನಬುದ್ಧಿಯನ್ನು ತೋರಿಸುತ್ತದೆ. ಹೊಲದ ಲಾವಣಿಯ ಹಣವನ್ನು ಏಕಕಾಲಕ್ಕೆ ತುಂಬುವ ಕಷ್ಟ ಮೈಮೇಲೆ ಬಂದರೂ ಅವನು ಹೀನ ಪ್ರವೃತ್ತಿಗೆ ಇಳಿಯುವುದಿಲ್ಲ. ಯಾರಾದರಾ ಮನೀ ಒಡೆದು ದರೋಡೆ ಮಾಡಿ ಹಣವನ್ನು ಪಡೆಯಬೇಕು ಎಂದು ವಿಶ್ವನಾಥನು ಸೂಚಿಸಿದಾಗ ಶೇಖರನ ಬಾಯಿಂದ ಬಂದ ಮಾತು ಅವನ ಆಚಾರ ಶುದ್ಧಿಯನ್ನು ತಿಳಿಸುತ್ತದೆ. "ಅಂಥಾ ಕೆಲಸ ನನ್ನ ಕನಸು ಮನಸಿನಾಗೂ ಹೊಳೀಲಿಕ್ಕಿಲ್ಲ." (ಮಾಡಿ ಮಡಿದವರು, ಪುಟ-೧೦೮, ೧೮೯, ೧೯೪೮) ಎಂಥ ಪ್ರಾಮಾಣಿಕ ವಿಚಾರವಿದ್ದ ನಮ್ಮ ಗುರಿಯು ಉದಾತ್ತವಾಗಿರುವಂತೆ ಅದನ್ನು ಸಾಧಿಸುವ ಮಾರ್ಗವೂ ಉದಾತ್ತವಾಗಿರಬೇಕು ಎಂದು ಗಾಂಧೀಜಿ ಹೆಳಿದ ತತ್ವ ಶೇಖರನಲ್ಲಿ ರಕ್ತಗತವಾದಂತಿದೆ. ಸಾವು ಸಮೀಪದಲ್ಲಿ ಸುಳಿಯುತ್ತಿರುವಾಗಲೂ ಶೇಖರನ ಮನಃಪಟಲದ ಮುಂದೆ ಮೂಡುವುದು ಹೋರಾಟದ ಚಿತ್ರ. ಇನ್ನೂ ಮುಗೀಲಿಲ್ಲ ನಮ್ಮ ಯುದ್ಧ! ಇನ್ನೂ ಮುಗೀಲಿಲ್ಲ! ಮತ್ತೆ ಗುಂಪು ಕೂಡಿಸೋಣ, ಮತ್ತೆ ಕೆಲಸ ಸುರು ಮಾಡೋಣ ಎಂದು ಹೇಮಾವತಿಗೆ ಅವನು ನುಡಿದ (ಮಾಡಿ ಮಡಿದವರು, ಪುಟ-೨೧೬, ೧೯೪೮) ಮಾತಿನಲ್ಲಿ ಅಪೂರ್ವ ರಾಷ್ಟ್ರೀಯ ಪ್ರಜ್ಞೆಯನ್ನು ಕಾಣಬಹುದು. ಹೀಗೆ ಹೋರಾಟಕ್ಕೆ ಹೇಳಿ ಮಾಡಿಸಿದ ವ್ಯಕ್ತಿತ್ವ ಶೇಖನಲ್ಲಿದೆ. ರಾಷ್ಟ್ರೀಯ ಪ್ರಜ್ಞೆ ನಿಷ್ಕಾಮ ಸೇವೆ, ಕರ್ತೃತ್ವ ಶಕ್ತಿ ಮೊದಲಾದ ಉದಾತ್ತ ಗುಣಗಳಿಂದ ಜೀವಕಳೆಯಿಂದ ತುಂಬಿದ ಪಾತ್ರವಿದು. ಅವನ ಪಾತ್ರದ ಕೇಂದ್ರ ಶಕ್ತಿಯ ಸುತ್ತಲೂ ಉಳಿದ ಪಾತ್ರಗಳ ಚಲನವಲನವಿದೆ. ಈ ಕಾದಂಬರಿಯ ಕಥಾ ವಸ್ತುವಿನ ಶರೀರಕ್ಕೆ ಶೇಖರನೇ ಒಂದು ಪ್ರಾಣವಿದ್ದಂತೆ.

ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್ ಕಥಾನಾಯಕನಾಗಿರುತ್ತಾನೆ. ಪ್ರಪಂಚದಲ್ಲಿ ಇರುವ ಉತ್ತಮ ಗುಣಗಳೆಲ್ಲ ಆತನ ಸುಂದರ ರೂಪದಲ್ಲಿ ಗೂಡುಕಟ್ಟಿಕೊಂಡಿವೆ. ಎಲ್ಲ ವಿಷಯಗಳನ್ನು ತಿಳಿದವನು, ಉತ್ತಮ ಉಪನ್ಯಾಸಕ, ಉತ್ತಮ ಅಧ್ಯಾಪಕ, ಗಾಂಧೀವಾದಿ, ದೇಶಸೇವಕ, ಉದಾತ್ತ ಮನಸ್ಸಿನವ, ಹಿಂದೂ ನಾಗರೀಕತೆ ಸಂಸ್ಕೃತಿಯಲ್ಲಿ ಅಪಾರವಾದ ಗೌರವವನ್ನು ಹೊಂದಿದ್ದವನು. ದಯಾಮಯಿ, ಸಾಹಸಮಯಿಯಾಗಿದ್ದನು. ನಾರಾಯಣರಾವ್‌ಗೆ ಬಾಲ್ಯದಿಂದಲೂ ಅಸ್ಪೃಶ್ಯರೆಂದರೆ, ಅವರ ಮೇಲೆ ದೀನ ಸ್ಥಿತಿಯಲ್ಲಿರುವ ಬಡವರ ಮೇಲೆ ವಾತ್ಸಲ್ಯವನ್ನು ತೋರಿಸುವವನಾಗಿರುತ್ತಾನೆ. ಕೆಲಸಗಾರ್ತಿ ಶಾರದೆಗೆ ನಾರಾಯಣರಾವ್‌ನ ಬಾಲ್ಯ ವಿಶೇಷತೆ ಕುರಿತು ಹೀಗೆ ಹೇಳುತ್ತಾಳೆ.

ಕನ್ನಡ ಭಾಷಾಂತರ

ಆತನ ಮನಸ್ಸು ವಿಶಾಲವಾದುದು. ಬಹಳ ಬುದ್ಧಿವಂತರು, ವಿಚಾರವಂತರು ಎಷ್ಟೋ... ಚಿಕ್ಕಂದಿನಿಂದಲೂ ಬಡವರೆಂದರೆ ಅವರಿಗೆ ಇಷ್ಟ, ಮಾದಿಗರೆಂದರೆ ಅವರಿಗೆ ಎಲ್ಲಾವನ್ನು ಕೊಡುತ್ತಿದ್ದರು. ಗಾಂಧೀಜಿಯವರ ಮಾತು ಬರುವುದಕ್ಕಿಂತ ಮುಂಚೆನೇ ಮನೆಯಲ್ಲಿರುವ ವಸ್ತುಗಳನ್ನೆಲ್ಲಾ ತೆಗೆದುಕೊಂಡು ಹೋಗಿ ಮಾದಿಗ ಹುಡುಗರಿಗೆ, ನಮ್ಮ ಮಕ್ಕಳಿಗೆ ಕೊಡುತ್ತಿದ್ದರು. ಎಷ್ಟು ಭಕ್ತಿ! ನಮ್ಮವರೆಲ್ಲ ಭಜನೆ ಮಾಡುತ್ತಿದ್ದರೆ ಅವರನ್ನು ಹಾಗೇ ನೋಡುತ್ತಾ ಇರುತ್ತಿದ್ದರು. ದಯೆ ಅಷ್ಟಿಷ್ಟಲ್ಲ. ನಾವು ಆಗಲೇ ಅಂದುಕೊಳ್ಳುತ್ತಿದ್ದೆವು. ಈತನು ಪ್ರಪಂಚದಲ್ಲಿಯೇ ಬುದ್ಧಿವಂತ ವ್ಯಕ್ತಿ ಎಂದು" ನಾರಾಯಣರಾವ್‌ನ ಮಾನವೀಯತೆ ಮನಸ್ಸನ್ನು ತಿಳಿಸಿತ್ತಾಳೆ. (ಮೂಲ; ಅನುಬಂಧ–೩ ಅಧ್ಯಾಯ–೬ ಕ್ರಸಂ. ೨೧)

ಹೀಗೆ ಈ ಎರಡು ಕಾದಂಬರಿಗಳು ಬೇರೆ ಬೇರೆ ದಶಮಾನಗಳಲ್ಲಿ ರಚಿತವಾಗಿದ್ದರೂ ಸ್ವಾತಂತ್ರ್ಯ ಚಳುವಳಿಯ ಸ್ವರೂಪವನ್ನು ಉತ್ತಮವಾಗಿ ಕಟ್ಟಿಕೊಟ್ಟಿವೆ. ಆದರೆ ಕನ್ನಡದ ಕಾದಂಬರಿ ಮುಖ್ಯವಾಗಿ ಕ್ವಿಟ್ ಇಂಡಿಯಾ ಚಳುವಳಿಗೆ ಹೆಚ್ಚಿನದಾಗಿ ಸಂಬಂಧಿಸಿದ್ದು, ಗಾಂಧೀಜಿಯವರ ಚಿಂತನೆಗಳನ್ನು ಕ್ರಾಂತಿಕಾರಕವಾಗಿ ರೂಪಿಸಿಕೊಂಡು ಚಿತ್ರಿತವಾಗಿದೆ. ತೆಲುಗಿನ ಕಾದಂಬರಿ ಸ್ವಾತಂತ್ರ್ಯ ಚಳುವಳಿಯ ಗಾಂಧೀಜಿಯವರ ವಿಚಾರಧಾರೆಗಳೊಂದಿಗೆ ಚಳುವಳಿಗಳು ತುಣುಕು ನೋಟಗಳನ್ನು ಪ್ರಸ್ತಾಪಿಸುತ್ತಾ ಅಧಿಕಾರಶಾಹಿ ಆಳ್ವಿಕೆಯಲ್ಲಿದ್ದಂತಹ ಸಂದರ್ಭದಲ್ಲಿ ರಚಿತಗೊಂಡಿದ್ದು ಮಂದಗಾಮಿ ಚಿಂತನೆಗಳನ್ನು ಹೆಚ್ಚು ಅವಲಂಬಿಸಿ ತೆಲುಗು ನಾಡಿನ ಜನರ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿ ಜನತೆಯನ್ನು ಚಳುವಳಿಯಲ್ಲಿ ದುಮುಕುವಂತೆ ಪ್ರೇರೇಪಿಸಿರುವುದಲ್ಲಿ ಯಶಸ್ವಿಯಾಗಿದೆ.

❖❖❖

ಅಧ್ಯಾಯ : ಏಳು

ಸ್ವಾತಂತ್ರ್ಯದೆಡೆಗೆ ಮತ್ತು ನರುಡು: ರಾಜಕೀಯ ಮತ್ತು ಸಾಮಾಜಿಕ ಬಿಡುಗಡೆಗಳ ಮುಖಾಮುಖಿಯ ರಚನೆಗಳು

ಅಧ್ಯಾಯ: ಏಳು

ಸ್ವಾತಂತ್ರ್ಯದೆಡೆಗೆ ಮತ್ತು ನರುಡು: ರಾಜಕೀಯ ಮತ್ತು ಸಾಮಾಜಿಕ ಬಿಡುಗಡೆಗಳ ಮುಖಾಮುಖಿಯ ರಚನೆಗಳು

ಬಸವರಾಜ ಕಟ್ಟೀಮನಿ ಮತ್ತು ಅಡವಿ ಬಾಪಿರಾಜು ಇಬ್ಬರು ಲೇಖಕರು ಒಂದೇ ಕಾಲಘಟ್ಟದಲ್ಲಿ ಈ ಕೃತಿಗಳನ್ನು ರಚನೆ ಮಾಡಿದ್ದರೂ ತಮಗೆ ಅವಶ್ಯಕವಾದ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳನ್ನು ಪಡೆಯಲು ಪ್ರಯತ್ನಿಸಿರುವುದನ್ನು ಈ ಕೃತಿಗಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ಈಗಾಗಲೇ ಕಟ್ಟೀಮನಿ ಅವರ ಮಾಡಿ ಮಡಿದವರು ಮತ್ತು ಅಡವಿ ಬಾಪಿರಾಜು ಅವರ ಕೋನಂಗಿ, ನಾರಾಯಣರಾವ್ ಕಾದಂಬರಿಗಳನ್ನು ಕುರಿತು ಚರ್ಚಿಸಲಾಗಿದೆ. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಗಾಂಧಿಯವರ ಪೂರ್ಣ ಸ್ವರಾಜ್ಯದ ಪರಿಕಲ್ಪನೆ, (ಸಮಾಜವಾದ, ಸಮತಾವಾದ) ಕಮ್ಯುನಿಸಂನ ಪ್ರಸ್ತಾಪ ಕಂಡು ಬರುತ್ತದೆ. ನರುಡು ಕಾದಂಬರಿಯಲ್ಲಿ ಗಾಂಧೀಜಿಯವರ ನಿರ್ಮಾಣ ಕಾರ್ಯಕ್ರಮಗಳಲ್ಲಿ 'ಹರಿಜನೋದ್ಧಾರ ಪ್ರಮುಖವಾಗಿದ್ದು, ಸ್ವಾತಂತ್ರ್ಯ ಚಳುವಳಿಯಲ್ಲಿ ಹರಿಜನೋದ್ಧಾರ ಒಂದು ಭಾಗವಾಗಿರುವುದನ್ನು ಚಿತ್ರಿಸಲಾಗಿದೆ. ಕಟ್ಟೀಮನಿಯವರು ಹಳ್ಳಿ–ನಗರ, ರೈತ–ಕಾರ್ಮಿಕ–ಶ್ರೀಮಂತ ಎಂಬ ವ್ಯಾಪ್ತಿಯಲ್ಲಿ ಕಥೆಯನ್ನು ವಿಸ್ತರಿಸಿದ್ದಾರೆ. ಅಡವಿ ಬಾಪಿರಾಜು ಹಳ್ಳಿ–ನಗರ, ದೇಶ–ವಿದೇಶ, ಮೇಲ್ವರ್ಗ–ಕೆಳವರ್ಗ ಎಂದು ತಮ್ಮ ಕಥೆಯ ಹಂದರವನ್ನು ಬಿತ್ತರಿಸಿದ್ದಾರೆ. ಇಬ್ಬರು ಲೇಖಕರು ಒಂದೇ ವಸ್ತುವನ್ನು ವಿಭಿನ್ನವಾಗಿ ಬರೆದಿರುವುದು ಕಂಡು ಬರುತ್ತದೆ.

ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಶಾಮರಾವ್ ಮಾಸ್ತರರು ಗಾಂಧಿಯವರನ್ನು ಹಿಡಿದರೆ ಏನು ಮಾಡ್ತೀರಿ ನೀವು? ಎಂದು ಕೇಳಿದಾಗ ಗಾಂಧಿಟೋಪಿ ಹಾಕಿದ ಹುಡುಗರು "ಹಿಡಿದರೆ ನಾವು ಸಾಲೆಗೆ ಬರೋದಿಲ್ಲ ಮಾಸ್ತರರೇ? ಹರತಾಳ ಮಾಡುತ್ತೇವೆ" ಎಂದು ಉತ್ತರ ಕೊಡುತ್ತಾರೆ. (ಸ್ವಾತಂತ್ರ್ಯದೆಡೆಗೆ ಪುಟ–೩, ೧೯೪೬) ಗಾಂಧೀಜಿ ಸಾಮಾನ್ಯ ಜನರ ಮನಗಳಿಗೆ, ಹಿರಿಯ, ಕಿರಿಯರಿಗೆ ಚಿರ ಪರಿಚಿತರು, ಚಿಕ್ಕ ಮಕ್ಕಳಲ್ಲಿನ ದೇಶ ಭಕ್ತಿ, ಪ್ರೇಮ, ಗಾಂಧಿಜಿಯವರ ಮೇಲಿನ ಗೌರವ, ಅಭಿಮಾನವನ್ನು ಗುರುತಿಸಬಹುದು.

ನರುಡು ಕಾದಂಬರಿಯಲ್ಲಿ 'ಯಲ್ಲಮಂದ ಎಂಬ ದಲಿತ ಹುಡುಗ ಕ್ರಿಶ್ಚಿಯನ್ ಶಾಲೆಗೆ ಸೇರುತ್ತಾನೆ. ಆಗ ಜೀವಾನಂದಂ ಎಂಬ ಮಾಸ್ತರರು,

ಕನ್ನಡ ಭಾಷಾಂತರ

ಶಿಕ್ಷಣ ಕಲಿಯಲು ಕುಲ ಮತ ಭೇದಗಳಿಲ್ಲ, ದಾರಿಯಲ್ಲಿ ಬಿದ್ದರೆ ಆ ವಿದ್ಯಾದೇವತೆ ಎಲ್ಲರನ್ನು ಸಮಾನ ಭಾವದಿಂದ ಸ್ವೀಕರಿಸುತ್ತಾಳೆ. ಮುಂದುವರೆದು ಮೂಲ ದಲಿತ ಜನಾಂಗದವರು ಹೇಗೆ ವಿದ್ಯೆ ಕಲಿಯುತ್ತಾರೆ? ಅವರಿಗೆ ಶಿಕ್ಷಣ ಏಕೆ? ಎಂದು ವಾದಿಸುತ್ತಾರೆ. (ಮೂಲ; ಅನುಬಂಧ–೩ ಅಧ್ಯಾಯ–೭ ಕ್ರ.ಸಂ. ೧) ಎಂದು ಹೇಳುತ್ತಾರೆ. ಕ್ರಿಶ್ಚಿಯನ್ ಶಾಲೆಯಲ್ಲಿ ಕೆಲವು ಉಪಾಧ್ಯಾಯರು,

ಕನ್ನಡ ಭಾಷಾಂತರ

ಮೂಲ ಮಾದಿಗ ಕುಲದವರು ಹೇಗೆ ಓದುತ್ತಾರೆ. ಅವರಿಗೆ ಶಿಕ್ಷಣ ಏಕೆ ಎಂದು ಪ್ರಶ್ನಿಸುತ್ತಾರೆ. (ಮೂಲ; ಅನುಬಂಧ–೩ ಅಧ್ಯಾಯ–೭ ಕ್ರ.ಸಂ. ೨) ಶಿಕ್ಷಣವನ್ನು ಕಲಿಯಲು ಕುಲಗಳು, ಮತಗಳು ಬೇಕಿಲ್ಲ, ವಿದ್ಯೆಯನ್ನು ಪಡೆಯುವ, ಸಂಪಾದಿಸುವ, ಮನಸ್ಸು, ಆಶಯ ಬೇಕು ಎಂಬುದನ್ನು ಮತ್ತು ದಲಿತರ ಶಿಕ್ಷಣದ ಬಗೆಗಿನ ಅಪಸ್ವರವನ್ನು ತಿಳಿಯಬಹುದು.

ಬಸವರಾಜ ಕಟ್ಟೀಮನಿ ಶಾಲೆಗೆ ಬಹಿಷ್ಕಾರ, ಹರತಾಳ, ಮುಷ್ಕರಗಳಂತಹ ಕೆಲಸಗಳನ್ನು ಮಾಡುವುದರ ಮೂಲಕ ಇಂಗ್ಲೀಷರ ಗುಲಾಮಗಿರಿಯಿಂದ ನಮ್ಮ ದೇಶವನ್ನು ಬಿಡುಗಡೆಗೊಳಿಸಬೇಕು ಎಂಬ ಆಶಯವನ್ನು ವ್ಯಕ್ತಪಡಿಸುವುದನ್ನು ಕಾಣಬಹುದು. ಅಡವಿ ಬಾಪಿರಾಜು ಅವರು ಯಲ್ಲಮಂದ ಎಂಬ ದಲಿತ ವಿದ್ಯಾರ್ಥಿ ಕ್ರಿಶ್ಚಿಯನ್ ಶಾಲೆಗೆ ಸೇರುವುದರ ಮೂಲಕ, ಇಂಗ್ಲೀಷತ್ವವನ್ನು ಸ್ವೀಕರಿಸಿ ದಲಿತತೆಗೆ ಮುಕ್ತಿ ದಲಿತರನ್ನು ಉನ್ನತ ಸ್ಥಾನದಲ್ಲಿಡುವಂತಹ ದೇಶಸೇವಾ ಮನೋಭಾವವನ್ನು ಗುರುತಿಸಬಹುದು. ಕಟ್ಟಿಮನಿ ಅವರಿಗೆ ದೇಶದ ಸ್ವಾತಂತ್ರ್ಯ ಮುಖ್ಯವಾದರೆ, ಬಾಪಿರಾಜು ಅವರಿಗೆ ದಲಿತರ ಸ್ವಾತಂತ್ರ್ಯ ಮುಖ್ಯವಾಗಿರುವುದು ತಿಳಿದು ಬರುತ್ತದೆ. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಕಮ್ಯುನಿಸಂ ಪಾರ್ಟಿಗೆ ಸೇರಿದ ರಾಜ ಎಂಬ ವಿದ್ಯಾರ್ಥಿಯ ದಂಡು ಶೇಖರನನ್ನು ನೋಡಿ "ಸರ್ಕಾರದ ಮಗಾ ಬಂದ ನೋಡಿರ್ಯೋ", ಲಾಠೀಧಾರೀ ಶೂರ" ಎಂದು ಅಣಕವಾಡುತ್ತಾರೆ. ನರುಡು ಕಾದಂಬರಿಯಲ್ಲಿ ಯಲ್ಲಮಂದನನ್ನು ಎಂದು ಅವಹೇಳನ ಮಾಡುತ್ತಾರೆ.

ಕನ್ನಡ ಭಾಷಾಂತರ

ಎಲ್ಲಿಯದು ಈ ಪ್ರಾಣಿ? ಎಲ್ಲಾ ಶೂನ್ಯ? ಹೇಗೆ ಈ ಪ್ರಾಣಿ! ಸಾಕು ಮಾಡು ಕಂದಾ!" (ಮೂಲ; ಅನುಬಂಧ–೩ ಅಧ್ಯಾಯ–೭ ಕ್ರ.ಸಂ. ೩)

ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದ, ನೌಕರಶಾಹಿ ವರ್ಗಕ್ಕೆ ಸೇರಿದವನು ಚಳುವಳಿಯ ವಿರೋಧಿ ಎಂಬ ಕಾರಣದಿಂದಾಗಿ ಶೇಖರನು ವ್ಯಂಗ್ಯಕ್ಕೆ ಗುರಿಯಾಗುತ್ತಾನೆ. ನರುಡು ಕಾದಂಬರಿಯಲ್ಲಿ ಯಲ್ಲಮಂದ ಕೆಳವರ್ಗದ ದಲಿತ ಕುಟುಂಬಕ್ಕೆ

ಸೇರಿದವನು, ಶಿಕ್ಷಣ ಕಲಿಯಲು ಅರ್ಹನಲ್ಲ ಎಂದು ಯಲ್ಲಮಂದ ಎಂಬ ಹೆಸರನ್ನು, ಕೇಳಿ ಅವಮಾನ ಮಾಡುತ್ತಿರುವುದನ್ನು ಕಾಣಬಹುದಾಗಿದೆ.

ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ರಾಜ ಮತ್ತು ಅವನ ಸಹಚರ ವಿದ್ಯಾರ್ಥಿಗಳು ಹರತಾಳ ಮತ್ತು ಮುಷ್ಕರ ಮಾಡುತ್ತಿರುವುದನ್ನು ಕಂಡು ಅಧ್ಯಾಪಕರಾದ ದೇಸಾಯಿ ಅವರು "ನಡೀರಿ ಒಳಗೆ ಹರತಾಳ ಮಾಡ್ತಾರಂತೆ ಹರತಾಳ! ಉಂಡಾಡಿಗ ಮುಂಡೇ ಮಕ್ಕಳು" ಎಂದು ಗದರಿಸುತ್ತಾನೆ (ಸ್ವಾದೆ.ಪುಟ–೧೫, ೧೯೪೬) ದೇಸಾಯಿ ಮಾಸ್ತರರು ಚಳುವಳಿಯ ವಿರೋಧಿಯಾಗಿ, ಬ್ರಿಟೀಷ್ ಪ್ರತಿನಿಧಿಯಾಗಿ ಚಿತ್ರಿತವಾಗಿದ್ದಾರೆ. ನರುಡು ಕಾದಂಬರಿಯಲ್ಲಿ 'ಯಲ್ಲಮಂದನು' ಉತ್ತಮ ಕ್ರೀಡಾಪಟುವಾಗಿದ್ದು, ಓಟದ ಸ್ವರ್ದೆ, ಪುಟ್ಬಾಲ್ ಆಟದಲ್ಲಿ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿರುತ್ತಾನೆ. ಅದನ್ನು ಕಂಡು ಅಧ್ಯಾಪಕನು,

ಕನ್ನಡ ಭಾಷಾಂತರ

ಈ ಮಾದಿಗ ಹುಡುಗನಿಗೆ ಇವೆಲ್ಲ ಹೇಗೆ ಬಂದವು ಇವೆಲ್ಲ ತನಗೆ ಬರಬೇಕು. (ಮೂಲ; ಅನುಬಂಧ–೩ ಅಧ್ಯಾಯ–೭ ಕ್ರಸಂ. ೪)

ಅಸ್ಪೃಶ್ಯನಾದವನು, ಅಸ್ಪೃಶ್ಯನಾಗಿಯೇ ಇರಬೇಕು, ಉದ್ಧಾರವಾಗಬಾರದು, ಕೀಳುಜಾತಿಯವನು ಇಷ್ಟೆಲ್ಲ ಪ್ರಶಸ್ತಿ ಪಡೆದುಕೊಂಡಿದ್ದಾನೆ ಎಂಬ ಅಧ್ಯಾಪಕನ ಅಸೂಯೆ ಮನೋಭಾವವನ್ನು ಗುರುತಿಸಬಹುದು. ಸ್ವಾತಂತ್ರ್ಯಡೆಗೆ ಕಾದಂಬರಿಯಲ್ಲಿ ಅಧ್ಯಾಪಕನು ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದರೆ, ನರುಡು ಕಾದಂಬರಿಯಲ್ಲಿ ಅಧ್ಯಾಪಕನು ದಲಿತರನ್ನು ಉನ್ನತ ಮಟ್ಟಕ್ಕೆ ಏರಲು ಬಿಡದೆ ಅವರನ್ನು ಅಲ್ಲಿಯೇ ದಮನ ಮಾಡಲು ಪ್ರಯತ್ನಿಸುತ್ತಿರುವುದು ಕಾಣಬಹುದಾಗಿದೆ.

ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಶೇಖರನು ಮನೆಯಲ್ಲಿರುವಾಗ ಅವನ ಕಿವಿಗೆ ಕೇಳಿಸಿದ ಮೆರವಣಿಗೆ ಕೂಗು ಈ ರೀತಿಯಾಗಿದೆ.

"ವೀರರೆಲ್ಲ ಏಳಿರಿ
ತಾಯ ಕರೆಯ ಕೇಳಿರಿ
ಭಾರತೀಯನು ಮುಕ್ತಗೊಳಿಸ
ಲೆಲ್ಲ ಮಕ್ಕಳೇರಿರಿ!" (ಸ್ವಾತಂತ್ರ್ಯದೆಡೆಗೆ ಪುಟ–೫, ೧೯೪೬)

ಈ ಘೋಷಣೆಗಳು ಎಂತಹ ಸ್ವಾತಂತ್ರ್ಯದ ಸತ್ವವಿಲ್ಲದ ಮನುಷ್ಯನನ್ನೂ ಸಹ ಮೈನವಿರೇಳಿಸುವಂತೆ ರೋಮಾಂಚನಗೊಳ್ಳುವಂತೆ ಮಾಡುತ್ತಿವೆ. ಶೇಖರನು ಸಹ ಈ ಹಾಡಿನಿಂದ ರೋಮಾಂಚಿತಗೊಳ್ಳುತ್ತಾನೆ. ಬ್ರಿಟಿಷರ ದಾಸ್ಯದ ಮಡಿಲಲ್ಲಿ ತೊಳಲಾಡುತ್ತಿರುವ ಭಾರತ ಮಾತೆಯನ್ನು ರಾಜಕೀಯವಾಗಿ ಬಿಡುಗಡೆಗೊಳಿಸಬೇಕು ಎಂಬ ಇಂಗಿತ ಇಲ್ಲಿ ಕಂಡುಬರುತ್ತದೆ. ನರುಡು ಕಾದಂಬರಿಯಲ್ಲಿ ಯಲ್ಲಮಂದನು,

ಕನ್ನಡ ಭಾಷಾಂತರ

ನಮಗೆ ದೇವಾಲಯದ ಒಳಗಡೆಗೆ ಪ್ರವೇಶವಿಲ್ಲ. ದೇವಾಲಯದಲ್ಲೆ ದೇವರಿದ್ದು, ಬೇರೆ ಕಡೆ ಇಲ್ಲೆಂದನಾ? (ಬೇಕಾದವರಿಗೆ) ಒಳ್ಳೆಯ, ಉತ್ತಮ ಮನಸ್ಸಿದ್ದವರಿಗೆ ಭಗವಂತ ಎಲ್ಲಿ ಬೇಕಾದರೂ ಇರುತ್ತಾನೆ. ದೇವಸ್ಥಾನದ ಒಳಗಡೆಗೆ ಒಂದು ಕುಲದ ಪ್ರವೇಶ ನಿರಾಕರಿಸಿರುವುದು ಅನಂತವಾದ ಅವಮಾನವಾಗಿದೆ. ದೇವರು ಇದ್ದಾನೆಯೇ? ಅಥವಾ ಇಲ್ಲವೋ ದೇವರು ಇದ್ದಾನೆ ಎನ್ನುವುದಾದರೆ ಇಡೀ ಮಾನವ ಸಂಕುಲವನ್ನೆಲ್ಲ ಒಂದೇ ರೀತಿಯಾಗಿ ನೋಡಬೇಕು. (ಮೂಲ; ಅನುಬಂಧ-೩ ಅಧ್ಯಾಯ-೭ ಕ್ರಸಂ. ೫) ಮನುಷ್ಯರಲ್ಲಿ ಅವನು ಮೇಲು ಇವನು ಕೀಳು ಎಂದು ಭೇದಭಾವ ಎಣಿಸಬಾರದು ಎಂಬ ಎಲ್ಲಮಂದನ ಮನೋವ್ಯಥೆಯನ್ನು ಗಮನಿಸಬಹುದಾಗಿದೆ. ದಲಿತರಿಗೆ ದೇವಾಲಯಗಳ ನಿಷೇಧ ಸಾಮಾಜಿಕ ಅವಮಾನ ಈಗಲೂ ಈ ಅನಿಷ್ಟ ಪದ್ಧತಿ ಜಾರಿಯಲ್ಲಿದೆ. ಅದನ್ನು ತೊಲಗಿಸಬೇಕು. ಹೀಗೆ ಕನ್ನಡದ ಕಾದಂಬರಿಯಲ್ಲಿ ರಾಜಕೀಯ ಸ್ವಾತಂತ್ರ್ಯದ ಪ್ರಸ್ತಾಪ ಇದ್ದರೆ, ತೆಲುಗು ಕಾದಂಬರಿಯಲ್ಲಿ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಪರಿತಪಿಸುವುದನ್ನು ಕಾಣಬಹುದಾಗಿದೆ. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಶೇಖರನು ಗಾಂಧೀ ಟೋಪಿಗಾಗಿ ಹಠಮಾಡಿ ತನ್ನ ತಂದೆಯಿಂದ ಹೊದೆ ತಿನ್ನುತ್ತಾನೆ. ನಂತರ ತನ್ನ ತಾಯಿಯೊಂದಿಗೆ ಈ ರೀತಿಯಾಗಿ ಕೇಳುತ್ತಾನೆ. "ಯಾಕವ್ವಾ ನಾವೂ ಗಾಂಧಿ ಜನರು ಅಲ್ಲೇನು? ನಾವೇನು ಆ ಇಂಗ್ಲಿಷ್ ಸರ್ಕಾರದವರೇನು? ಈ ಕೋತಿ ಮುಖದ ಜನರನ್ನ ಓಡಿಸೋದಕ್ಕಾಗಿ ಆ ಗಾಂಧೀ ಮಹಾತ್ಮ ಚಳವಳಿ ಹೂಡ್ಯಾನ ಸಂಗೊಳ್ಳಿರಾಯಣ್ಣನ ಹಾಂಗ. ಈ ಸರ್ಕಾರವನ್ನೋಡಿಸೂದಕ್ಕಾಗಿ ಆಕೆ ಯುದ್ಧ ಮಾಡಿದ ಹಾಂಗ ನಾವೂ ಯಾಕ ಯುದ್ಧ ಮಾಡಬಾರದು?" (ಸ್ವಾತಂತ್ರ್ಯದೆಡೆಗೆ, ಪುಟ-೨೮, ೧೯೪೬)

ಪುಟ್ಟ ಬಾಲಕನಾದ ಶೇಖರನಲ್ಲಿನ ದೇಶಾಭಿಮಾನ ಎಂತಹದ್ದು ಎಂಬುದನ್ನು ಈ ಮೂಲಕ ತಿಳಿಯಬಹುದಾಗಿದೆ. ಸ್ವಾತಂತ್ರ್ಯದ ಕಿಚ್ಚು, ಬ್ರಿಟಿಷರ ಮೇಲಿನ ಹಗೆತನ, ದ್ವೇಷ, ಸಿಟ್ಟು ಕೇವಲ ಧೀಮಂತ ಹಿರಿಯ ರಾಷ್ಟ್ರೀಯ ನಾಯಕರಲ್ಲಿ ಮಾತ್ರವಲ್ಲದೆ ಕಿರಿಯ ಬಾಲಕರಲ್ಲಿಯೂ ಸಹ ಇದ್ದು, ಸ್ವಾತಂತ್ರ್ಯದ ಹಂಬಲ ಹೇಗೆ ರೂಪುಗೊಂಡಿತ್ತು ಎಂಬುದನ್ನು ಶೇಖರನ ಮಾತುಗಳಲ್ಲಿ ಕಾಣಬಹುದಾಗಿದೆ. ಬ್ರಿಟಿಷರ ಮೇಲಿನ ರೋಷದ ಕಿಡಿ ಕೆಲವೇ ಕೆಲವು ಜಮೀನ್ದಾರಿ, ಶ್ರೀಮಂತ ವರ್ಗದವರನ್ನು ಹೊರತುಪಡಿಸಿ ಸಾಮಾನ್ಯ ಹಿರಿಯ ಕಿರಿಯ ಜನರಲ್ಲಿ ಯಾವ ರೀತಿ ಇತ್ತು ಎಂಬುದನ್ನು ಮನಗಾಣಬಹುದಾಗಿದೆ. ನರುಡು ಕಾದಂಬರಿಯಲ್ಲಿ ಯಲ್ಲಮಂದ,

ಕನ್ನಡ ಭಾಷಾಂತರ

ತನ್ನ ಜಾತಿಗೆ ಹೇಗೆ ಸಹಾಯ ಮಾಡಬೇಕು? ಸತ್ಯವಾಗಿಯೂ ಮಹಾತ್ಮಾ ಗಾಂಧೀಜಿ ಅವತಾರ ಮೂರ್ತಿ. ಹರಿಜನ ಎಂದು ನಾಮಕರಿಸಿ ತಮ್ಮ ಜಾತಿಯನ್ನು ಮೇಲ್ಜಾತಿಗಳೊಂದಿಗೆ ಸಮಾನವಾಗಿಸಲು ತಮ್ಮ ಪವಿತ್ರವಾದ ಜೀವನವನ್ನೇ ತ್ಯಾಗ ಮಾಡಿದ್ದಾರೆ. ತಮ್ಮ ದೇಶದವರೆ ಆತನ ಆಶಯಗಳಿಗೆ ಅಡ್ಡಗಾಲು ಹಾಕುತ್ತಿದ್ದಾರೆ. ಈಗ ಉನ್ನತ ಶಿಕ್ಷಣವನ್ನು ತಮ್ಮ ಜಾತಿಯವರೆಲ್ಲಾ

ಪಡೆದುಕೊಳ್ಳಬೇಕು. ಹುಡುಗ-ಹುಡುಗಿಯರು ಕೂಲಿ ಕೆಲಸ ಬಿಟ್ಟು ಶಿಕ್ಷಣದ ಕಡೆ ಗಮನ ಹರಿಸಬೇಕು. ಉದ್ಯೋಗವನ್ನು ಕೊಡುವುದರಲ್ಲಿ ಸರ್ಕಾರದವರು ಹರಿಜನ ಕಡೆ ಹೆಚ್ಚಿನ ಗಮನ ಕೊಡಬೇಕು. (ಮೂಲ; ಅನುಬಂಧ-೩ ಅಧ್ಯಾಯ-೭ ಕ್ರ.ಸಂ. ೬)

ಹರಿಜನರು ಸಮಾಜದಲ್ಲಿ ತೀರಾ ಹಿಂದುಳಿದಿದ್ದು ತುಳಿತಕ್ಕೆ, ಅನ್ಯಾಯ, ಅಕ್ರಮಗಳಿಗೆ ಒಳಗಾದವರಾಗಿದ್ದಾರೆ. ತಮ್ಮ ಜನಾಂಗಕ್ಕೆ ಹೇಗಾದರೂ ಮಾಡಿ ಸಹಾಯ ಮಾಡಬೇಕು ಅದಕ್ಕಾಗಿ ಗಾಂಧೀಜಿ ತಮ್ಮ ಜೀವನವನ್ನೇ ಹರಿಜನರ ಉದ್ಧಾರಕ್ಕಾಗಿ ಮೀಸಲಿಟ್ಟಿದ್ದಾರೆ. ಅವರ ಹರಿಜನ ಉದ್ಧಾರದಂತಹ ಮಹಾನ್ ಕಾರ್ಯಕ್ಕೆ ದೇಶದ ಕೆಲವು ವರ್ಗದವರು ವಿರೋಧಿಸುತ್ತಿದ್ದಾರೆ. ಇದೆಲ್ಲವೂ ಸುಗಮವಾಗಿ ನಡೆಯಬೇಕಾದರೆ ತಮ್ಮ ಜನಾಂಗದವರೆಲ್ಲ ಉತ್ತಮವಾದ ಉನ್ನತ ಶಿಕ್ಷಣವನ್ನು ಪಡೆಯಬೇಕು. ತಾವು ಮಾಡುತ್ತಿರುವ ಹಳೆಯ ವೃತ್ತಿ ಕಟ್ಟುಪಾಡುಗಳನ್ನು ತೊರೆದು ಶಿಕ್ಷಣವನ್ನು ಪಡೆಯುವ ಕಡೆ ಮುಖ ಮಾಡಬೇಕು. ಪ್ರಭುತ್ವ ಹರಿಜನರಿಗೆ ಉದ್ಯೋಗಗಳನ್ನು ನೀಡುವುದರ ಕಡೆಗೆ ಹೆಚ್ಚಿನದಾಗಿ ಒಲವು ತೋರಿಸಬೇಕು ಎಂಬ ಹರಿಜನತೆ ಸಾಮಾಜಿಕವಾಗಿ ಬದಲಾವಣೆ ಹೊಂದಬೇಕು, ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವಲ್ಲಿ ಮುನ್ನುಗ್ಗಬೇಕು ಎಂಬ ತನ್ನ ಮನೋಭಿಲಾಷೆಯನ್ನು ವ್ಯಕ್ತಪಡಿಸುತ್ತಾನೆ.

ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಶೇಖರನು ಕಲ್ಲಾಪುರಕ್ಕೆ ಹೋದಂತಹ ಸಂದರ್ಭದಲ್ಲಿ "ನನ್ನ ಬಾಳೆಲ್ಲ ಮೀಸಲು ಈ ಹಳ್ಳಿಯ ಬಡಜನಕ್ಕೆ. ಅವರ ಅಜ್ಞಾನ ಅಳಿದು ಬಡತನ ಕಳೆದು, ಪಾರತಂತ್ರ್ಯ ತೊಲಗಿ ಸ್ವಾತಂತ್ರ್ಯ ಬಂದು, ಸಮತೆ ಬೆಳೆಯಬೇಕು. ಹಗಲಿರುಳು ದುಡಿದು ಹೋರಾಟ! ಹೋರಾಟ! ಸತತ ಹೋರಾಟ!.... ಎಂದು ತನ್ನ ಆಶಯವನ್ನು ವ್ಯಕ್ತಪಡಿಸುತ್ತಾನೆ. (ಸ್ವಾತಂತ್ರ್ಯದೆಡೆಗೆ, ಪುಟ-೧೭೩, ೧೯೪೬) ಕಲ್ಲಾಪುರ ರಾಜಕೀಯವಾಗಿ ಬಹಳ ಹಿಂದುಳಿದಿರುತ್ತದೆ. ಜನರು ಅಜ್ಞಾನವೆಂಬ ಅಂಧಾಕಾರದಲ್ಲಿ ಮುಳುಗಿ ಅನೇಕ ರೀತಿಯ ಶೋಷಣೆಗಳನ್ನು ಅನುಭವಿಸುತ್ತಿದ್ದಾರೆ. ಅವರು ಜೀವನದ ಯಾವ ಕ್ಷೇತ್ರದಲ್ಲಿಯೂ ಮುಂದುವರಿದಿಲ್ಲ. ಅವರಿಗೆ ರಾಜಕೀಯ ಪರಿಸ್ಥಿತಿಯ ಬಗ್ಗೆ ತಿಳಿ ಹೇಳಿ ದಾಸ್ಯದ ಬಿಡುಗಡೆಗೆ ಹೋರಾಟ ಮಾಡುವಂತೆ ಅಣಿಗೊಳಿಸಬೇಕು. ಅದಕ್ಕಾಗಿ ಎಲ್ಲರನ್ನು ಒಗ್ಗೂಡಿಸಬೇಕು. ಬೇಕಾದ ಜ್ಞಾನ, ಅರಿವನ್ನು ಮೂಡಿಸಿ ಜಾಗ್ರತೆಯನ್ನು ಬೆಳೆಸಬೇಕು. ರಾಜಕೀಯದಲ್ಲಿ ಕಲ್ಲಾಪುರ ಪರಿಪಕ್ವತೆ ಸಾಧಿಸಬೇಕು ಎಂಬುದನ್ನು ಈ ಮಾತುಗಳಲ್ಲಿ ಕಾಣಬಹುದಾಗಿದೆ. ನರುಡು ಕಾದಂಬರಿಯಲ್ಲಿ ಯಲ್ಲಮಂದ,

ಕನ್ನಡ ಭಾಷಾಂತರ

ತನ್ನ ಸಮಾಜ ತೀರಾ ನಿಕೃಷ್ಟ ಸ್ಥಿತಿಯಲ್ಲಿ ಇರುವುದಕ್ಕೆ ತಾವೇ ಕಾರಣವೆಂದು ಎಂದಾದರೂ ತಾವೇ ಮೇಲ್ವರ್ಗದವರ ಮೂಗುಗಳನ್ನು ಗುದ್ದಿ ಸಮತ್ವವನ್ನು ಸಂಪಾದಿಸಿಕೊಳ್ಳಬೇಕು ಎಂದು ವಾದಿಸುತ್ತಾನೆ. (ಮೂಲ; ಅನುಬಂಧ-೩ ಅಧ್ಯಾಯ-೭ ಕ್ರ.ಸಂ. ೭)

ದಲಿತ ಸಮಾಜ ಪೂರ್ವದಿಂದಲೂ ಮೇಲ್ವರ್ಗದವರ ಸೇವೆಯನ್ನು ಮಾಡುತ್ತಾ ಶ್ರೀಮಂತರು, ಜಮೀನ್ದಾರರ ಗುಲಾಮರಾಗಿದ್ದುಕೊಂಡು ಅರೆ-ಬರೆ ಜೀವನ ಸಾಗಿಸುತ್ತಾ ಬಂದಿದ್ದಾರೆ. ದಲಿತ ಸಮಾಜ ಈ ರೀತಿಯಾಗಿ ನಿಕೃಷ್ಟ ಬದುಕು ಬದುಕುವುದಕ್ಕೆ ತನ್ನ ಸಮಾಜವೇ ಕಾರಣ. ಈ ಅಸಮಾನತೆ ಪ್ರಾಚೀನ ಕಾಲದಿಂದಲೂ ಬಂದಿದೆ. ತನ್ನ ಸಮಾಜ ಪ್ರತಿಭಟನಾ ಮನೋಭಾವ ಹಿಂದಿನಿಂದಲೂ ಬೆಳೆಸಿಕೊಂಡು ಬಂದಿಲ್ಲ. ಈ ಅಸಮಾನತೆ, ಅನ್ಯಾಯದ ವಿರುದ್ಧ ಕೂಗೆತ್ತಬೇಕು. ನಾವು ಅವರಂತೆಯೇ ದಬ್ಬಾಳಿಕೆ ನಡೆಸಬೇಕು. ಏಟಿಗೆ ಎದಿರೇಟು ಕೊಡಬೇಕು. ಸಮಾನತೆಯನ್ನು ಸಾಧಿಸಬೇಕು ಎಂದು ಯಲ್ಲಮಂದ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಪರಿತಪಿಸುತ್ತಿರುವುದನ್ನು ಕಾಣಬಹುದಾಗಿದೆ. ಕನ್ನಡ ಕಾದಂಬರಿಯಲ್ಲಿ ಶೇಖರನು ಅಕ್ಷರಸ್ಥನಾಗಿ ಔಪಚಾರಿಕ ಶಿಕ್ಷಣವನ್ನು ತೊರೆದು ಅನೌಪಚಾರಿಕವಾಗಿ ಕಲ್ಲಾಪುರ ಎಂಬ ಅಜ್ಞಾನ ಹಳ್ಳಿಯನ್ನು ಸ್ವಾತಂತ್ರ್ಯಕ್ಕಾಗಿ ಪ್ರೇರೇಪಿಸುತ್ತಾ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಬೇಕೆಂದು ಹಳ್ಳಿ ಜನರನ್ನು ಹುರಿದುಂಬಿಸುತ್ತಿರುವುದನ್ನು ಕಾಣಬಹುದಾಗಿದೆ. ತೆಲುಗು ಕಾದಂಬರಿಯಲ್ಲಿ ಯಲ್ಲಮಂದ ಔಪಚಾರಿಕ ಶಿಕ್ಷಣವನ್ನು ಪಡೆದು ತನ್ನ ನಿಕೃಷ್ಟ ಜನಾಂಗ ತಲತಲಾಂತರದಿಂದಲೂ ಮೇಲ್ವರ್ಗದ ಜನಾಂಗಗಳಿಂದ ತುಳಿತಕ್ಕೆ ಒಳಗಾಗಿದ್ದು, ಈಗ ಪ್ರತಿಭಟಿಸಬೇಕೆಂದು ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿರುವುದನ್ನು ಗಮನಿಸಬಹುದಾಗಿದೆ.

ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ರಿಕ್ರೂಟ್ ಭರ್ತಿಗಾಗಿ ಸರ್ಕಾರಿ ಅಧಿಕಾರಿಗಳೂ, ಅವರ ಬಾಲ ಹಿಡಿಯುವ ಸ್ವಾರ್ಥಿಗಳೂ ನಡೆಸುತ್ತಿದ್ದ ಅನಿಶ್ಚಿತ ಕೃತ್ಯಗಳಿಂದಾಗಿ ಜನತೆ ರೋಸಿ ಹೋಗಿ "ಯಾಕೆ ಸಾಯಬೇಕು ನಾವು ಈ ಕೆಂಪು ಮೂತೀ ಮಕ್ಕಳಿಗಾಗಿ? ಅವರಿಗಾಗಿ ಸತ್ತರೇನು ಬಂದೀತು? ಸಾಯುವುದೇ ಆದರೆ ನಮ್ಮ ದೇಶಕ್ಕಾಗಿ ಸಾಯಬೇಕು. ಸ್ವಾತಂತ್ರ್ಯಕ್ಕಾಗಿ ಸಾಯಬೇಕು." (ಸ್ವಾತಂತ್ರ್ಯದೆಡೆಗೆ, ಪುಟ-೨೦೧, ೧೯೪೬) ಒಂದು ಸಾವಿರದ ಎಂಟುನೂರ ಐವತ್ತೇಳರ ಸಿಪಾಯಿದಂಗೆಯಿಂದ ಹಿಡಿದು ಸ್ವಾತಂತ್ರ್ಯ ದೊರೆಯುವ ತನಕವೂ ಸಾಮಾನ್ಯ ಜನತೆ ಬ್ರಿಟಿಷರು ಜಮೀನ್ದಾರರ ವಿರುದ್ಧ ಹೋರಾಟ ಮಾಡಿ ಮರಣ ಹೊಂದಿ ಚರಿತ್ರೆಯ ಪುಟಗಳನ್ನು ಸೇರಿದ್ದಾರೆ. ಬ್ರಿಟಿಷರು ಕೊಡುವ ಎಂಜಲು ತುತ್ತಿಗಾಗಿ ಆಸೆ ಪಟ್ಟು ಅಡಿಯಾಳುಗಳಾಗಿ ದೇಶಕ್ಕಾಗಿ ತನು ಮನ ಧನವನ್ನು ಅರ್ಪಿಸಲು ಸಿದ್ಧರಾಗಿರುವ ಸಾಮಾನ್ಯ ಜನತೆಯನ್ನು ದೇಶದ್ರೋಹಿಗಳು ಹಿಂಸಿಸುತ್ತಿದ್ದು, ಅವರ ಬೂಟಾಟಿಕೆಯಿಂದ ಬೇಸತ್ತ ಜನತೆ ಬ್ರಿಟಿಷರ ವಿರುದ್ಧ ಮತ್ತು ಭಾರತೀಯ ಅಧಿಕಾರಿಗಳ ಮೇಲೆ ಆಕ್ರೋಶಗೊಂಡು ತಮ್ಮ ದೇಶಕ್ಕಾಗಿ ಪ್ರಾಣ ಕೊಡಲು ಸಿದ್ದರಿದ್ದರೇ ವಿನಃ ಅವರಿಗಾಗಿ ಕಿಂಚಿತ್ತೂ ಹೋರಾಡುವುದು ತರವಲ್ಲ ಎಂಬಂತ ತನ್ನ ತಾಯ್ನಾಡಿನ ಮೇಲೆ ಜನರಲ್ಲಿನ ಅಭಿಮಾನವನ್ನು ಗುರುತಿಸಬಹುದು. ನರುಡು ಕಾದಂಬರಿಯಲ್ಲಿ ಯಲ್ಲಮಂದ ತನ್ನ ಜನಾಂಗ ಕುರಿತು,

ಕನ್ನಡ ಭಾಷಾಂತರ

ನನ್ನ ಜನಾಂಗ
ನನ್ನ ಮಾದಿಗ ಜನಾಂಗ
ಎಂದು ನಿನಗೆ ಮುಕ್ತಿ?
ಎಂದು ನಿನಗೆ ಬಿಡುಗಡೆ
ಎಂತಹ ಹೀನ ಚರಿತ್ರೆ ನಡೆದು ಹೋಗುತ್ತಿದೆ
ತಿನ್ನಲು ಅನ್ನವಿಲ್ಲದೆ
ಮೈ ಮುಚ್ಚಿಕೊಳ್ಳಲು ಬಟ್ಟೆ ಇಲ್ಲದೆ!
(ಮೂಲ; ಅನುಬಂಧ–೩ ಅಧ್ಯಾಯ–೭ ಕ್ರಸಂ. ೮)

ಹರಿಜನರು ಯುಗಗಳಿಂದಲೂ ಈ ರೀತಿಯ ವೇದನೆ, ನೋವು, ಸಂಕಟವನ್ನು ಅನುಭವಿಸುತ್ತಾ ಬಂದಿದ್ದಾರೆ. ಆಗಿನಿಂದಲೂ ಪ್ರಸ್ತುತದವರೆಗೂ ಹರಿಜನ ಸಮಾಜವನ್ನು ಉದ್ಧಾರ ಮಾಡಲು ಪ್ರಯತ್ನ ನಡೆಯುತ್ತಲೇ ಇದೆ. ಉತ್ತಮ ಕುಲದವರು ತಮ್ಮ ನೋವು, ನಲಿವಿನ ಭಾರವನ್ನು ಈ ಜನಾಂಗದವರ ಮೇಲೆ ಹಾಕುವುದರಿಂದ/ಏರುವುದರಿಂದ ಅವರು ನೀಚಸ್ಥಿತಿಯಲ್ಲಿದ್ದಾರೆ. ಇಷ್ಟು ದಿನ ಈ ಜನಾಂಗವನ್ನು ಊರ ಹೊರಗಡೆ ನೆಟ್ಟಿದ್ದು, ಅವರನ್ನು ಮುಟ್ಟಬಾರದು, ನೋಡಬಾರದು, ಮಾತನಾಡಿಸಲು ಅರ್ಹತೆ ಇಲ್ಲದವರು ಎಂದು ಸಾಂಘಿಕವಾಗಿ, ನೈತಿಕವಾಗಿ, ಆರ್ಥಿಕವಾಗಿ ಅತ್ಯಂತ ನೀಚಸ್ಥಿತಿಯಲ್ಲಿ ನೋಡುತ್ತಿರುವುದು. ಇದಕ್ಕೆ ಮುಕ್ತಿ, ಬಿಡುಗಡೆ ಯಾವಾಗ ಎಂದು ಯಲ್ಲಮಂದ ರೋದಿಸುತ್ತಾನೆ. ಹೀಗೆ ಕನ್ನಡದ ಕಾದಂಬರಿಯಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕೋಸ್ಕರ ಸಾಮಾನ್ಯ ಜನತೆ ಹೋರಾಟ ಮಾಡಲು ಸಿದ್ಧಗೊಳ್ಳುತ್ತಿರುವುದನ್ನು ಲೇಖಕರು ಚಿತ್ರಿಸಿದ್ದರೆ, ತೆಲುಗು ಕಾದಂಬರಿಯಲ್ಲಿ ಮೇಲ್ವರ್ಗದ ಜನಾಂಗದವರಂತೆ ಹರಿಜನ ವರ್ಗವು ಸಾಮಾಜಿಕವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಉನ್ನತ ಸ್ಥಿತಿಯಲ್ಲಿ ಇರಬೇಕು ಎಂಬ ಇಂಗಿತವನ್ನು ಎಲ್ಲಮಂದ ಮೂರ್ತಿಯ ಮಾತುಗಳಲ್ಲಿ ಗಮನಿಸಬಹುದಾಗಿದೆ. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ರಾಷ್ಟ್ರೀಯ ನಾಯಕರಾದ ಗಾಂಧಿ, ನೆಹರೂ, ಆಜಾದ್ ಕಾಂಗ್ರೆಸ್ ಮುಖಂಡರನ್ನೆಲ್ಲ ಸರ್ಕಾರ ಬಂಧಿಸಿದಾಗ, ಗಾಂಧೀಜಿ

"ನಾವು ಹಿಂದೂಸ್ತಾನವನ್ನು ಸ್ವತಂತ್ರಗೊಳಿಸಬೇಕು. ಇಲ್ಲವಾದರೆ ಹೋರಾಡುತ್ತ ಹೋರಾಡುತ್ತ ಸಾಯಬೇಕು" (ಸ್ವಾತಂತ್ರ್ಯದೆಡೆಗೆ, ಪುಟ–೨೦೪, ೧೯೪೬)

ಮಂದಗಾಮಿಗಳಾದ ಮಹಾತ್ಮಗಾಂಧೀಜಿಯವರು ಒಂದು ಸಾವಿರ ಒಂಬೈನೂರ ಇಪ್ಪತ್ತರಿಂದ ದೇಶಕ್ಕೆ ಸ್ವಾತಂತ್ರ್ಯ ಸಿಗುವವರೆಗೂ ಅಪ್ರತಿಮ ಧೀಮಂತರಾಗಿ ಮುನ್ನಡೆಸಿದ ಧೀಮಂತ ನಾಯಕರಾಗಿ ಗುರುತಿಸಿಕೊಂಡಿದ್ದು, ಕ್ವಿಟ್ ಇಂಡಿಯಾ ಚಳವಳಿ ಬಹಳ ಮಹತ್ವವಾದ ಚಳವಳಿ ಹೋರಾಟವಾಗಿತ್ತು. ಆ ಸಂದರ್ಭದಲ್ಲಿ ಗಾಂಧೀಜಿ ಜನತೆಗೆ 'ಮಾಡು ಇಲ್ಲವೆ ಮಡಿ' ಎಂದು ಕರೆ ನೀಡಿದರು. ಚಳವಳಿ ತುಂಬಾ ವಿಕೋಪಕ್ಕೆ ಏರಿದಾಗ ಗಾಂಧೀಜಿ ಬಂಧನಕ್ಕೊಳಗಾದರು. ಆ ಸಂದರ್ಭದಲ್ಲಿ ಜನತೆಗೆ

ಮೇಲಿನಂತೆ ಹೇಳುತ್ತಾರೆ. ಈ ಮಾತಿನಲ್ಲಿ ಬ್ರಿಟಿಷರ ಮೇಲಿನ ಕೋಪ, ತಾಪ, ಆವೇಶಗಳು ಇರುವುದು ಕಂಡು ಬರುತ್ತದೆ. ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಎಷ್ಟು ಮುಖ್ಯ ಅದನ್ನು ನಾವು ಪಡೆದೇತೀರಬೇಕೆಂಬ ಪ್ರಬಲ ಹಂಬಲವನ್ನು ಇಲ್ಲಿ ಕಾಣಬಹುದಾಗಿದೆ. ನರುಡು ಕಾದಂಬರಿಯಲ್ಲಿ ಎಲ್ಲಮಂದ ಮೂರ್ತಿ ತನ್ನ ಜನಾಂಗವನ್ನು ಬದಲಾವಣೆ ಮಾಡಬೇಕು ಎಂಬ ಧೃಡನಿರ್ಧಾರದಿಂದ

ಕನ್ನಡ ಭಾಷಾಂತರ

ಹರಿಜನ ಹುಡುಗಿಯರು ಉತ್ತಮವಾದ ಉನ್ನತ ವಿದ್ಯೆಯನ್ನು ಪಡೆದುಕೊಂಡು ಉತ್ತಮ ಕುಲದ ಮೇಲ್ವರ್ಗದ ಹುಡುಗರನ್ನು ಮದುವೆಯಾಗಬೇಕು. ವಿದ್ಯೆ, ಅಲಂಕಾರ, ಶುಭ್ರತೆ, ನಾಗರೀಕತೆ ಕುರಿತು ಹೇಳಬೇಕು (ಮೂಲ; ಅನುಬಂಧ-೩ ಅಧ್ಯಾಯ-೭ ಕ್ರಸಂ. ೯) ಕೆಳವರ್ಗದವರಾದ ದಲಿತ ಸಮುದಾಯದವರು ಸಮಾಜದಲ್ಲಿ ಗುರುತಿಸಿಕೊಳ್ಳಬೇಕಾದರೆ ಉನ್ನತ ಸ್ಥಿತಿಯಲ್ಲಿರಬೇಕಾದರೆ ಇರುವುದು ಒಂದೇ ಒಂದು ಮಾರ್ಗವೆಂದರೆ ಉತ್ತಮವಾದ ಉನ್ನತ ಶಿಕ್ಷಣ, ಉದ್ಯೋಗವನ್ನು ಪಡೆದುಕೊಳ್ಳುವುದು. ಮೇಲ್ವರ್ಗದವರು ಪ್ರಾಚೀನ ಕಾಲದಿಂದಲೂ ಕೆಳವರ್ಗದವರಿಗೆ ಶಿಕ್ಷಣ ಅವಶ್ಯಕತೆಯಿಲ್ಲ, ಕಲಿಯುವ ಅರ್ಹತೆ ಅವರಿಗಿಲ್ಲ, ಅವರು ಶಿಕ್ಷಣ ಕಲಿಯಕೂಡದು. ಈಗ ಹೇಗಿದ್ದಾರೋ ಹಾಗೆ ಇರಬೇಕು ಯಾವ ಕ್ಷೇತ್ರದಲ್ಲಿಯೂ ಮುಂದುವರೆಯಬಾರದು ಎಂಬ ಅಭಿಪ್ರಾಯ ಹೊಂದಿರುತ್ತಾರೆ. ಆದರೆ ಸ್ವಾತಂತ್ರ್ಯದ ಕಾಲಘಟ್ಟದಲ್ಲಿ ತೆಲುಗು ಲೇಖಕರು ಅದನ್ನು ಈ ಪದ್ಧತಿಯನ್ನು ಬದಲಾಯಿಸುವ ನಿಟ್ಟಿನಲ್ಲಿ ಒಂದು ದಲಿತ ಯುವಕನಿಗೆ ಉನ್ನತವಾದ ವಿದ್ಯೆಯನ್ನು ಕೊಡುವುದರ ಮೂಲಕ ಕೆಳವರ್ಗದ ಸಮುದಾಯವನ್ನು ಮೇಲ್ವರ್ಗ ಸಮುದಾಯದೊಂದಿಗೆ ಸಮಾನವಾಗಿ ನೋಡುವ ಸಲುವಾಗಿ ಸ್ತ್ರೀಯರು ಉನ್ನತ ಶಿಕ್ಷಣವನ್ನು ಪಡೆದುಕೊಂಡು ಮೇಲ್ವರ್ಗದ ಪುರುಷರನ್ನು ವಿವಾಹವಾಗಬೇಕು ಎಂಬ ಸಾಂಸ್ಕೃತಿಕ ಬದಲಾವಣೆ, ಜೀವನದ ಬಗ್ಗೆ ಅರಿವು ಮೂಡಿಸಬೇಕು ಎಂಬಂತಹ ಅಭಿಲಾಷೆಯನ್ನು ಎಲ್ಲಮಂದ ಮೂರ್ತಿಯ ಮಾತುಗಳಲ್ಲಿ ಗುರುತಿಸಬಹುದಾಗಿದೆ.

ಕನ್ನಡ ಕಾದಂಬರಿಯಲ್ಲಿ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಬೇಕು ಎಂಬ ಪ್ರಬಲ ಧೋರಣೆ ಕಂಡುಬಂದರೆ ತೆಲುಗು ಕಾದಂಬರಿಯಲ್ಲಿ ಪ್ರಬಲ ವರ್ಗದವರೊಂದಿಗೆ ಸಾಮಾಜಿಕ, ಸಂಸ್ಕೃತಿ ಪರಸ್ಪರ ವಿನಿಮಯವಾಗಬೇಕು ಎಂಬ ಆಶಯವನ್ನು ಎಲ್ಲಮಂದ ಮೂರ್ತಿ ಪಾತ್ರದ ಮೂಲಕ ಲೇಖಕರು ಗಳಿಸಿಕೊಳ್ಳಲು ಪ್ರಯತ್ನಿಸಿರುವುದು ಕಂಡುಬರುತ್ತದೆ.

ಹೀಗೆ ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಭಾರತ ದೇಶ ಬಹುಬೇಗ ಬ್ರಿಟಿಷರ ಗುಲಾಮಗಿರಿಯಿಂದ ಬಿಡುಗಡೆ ಹೊಂದಬೇಕು. ಹಳ್ಳಿಗಳು ನಾಗರೀಕತೆಯತ್ತ ಧಾವಿಸಿ ಅಜ್ಞಾನವೆಂಬ ಅಂಧಕಾರದಿಂದ ಮುಕ್ತಿ ಹೊಂದಬೇಕು. ದೇಶ ಅಭಿವೃದ್ಧಿಯ ಪಥದತ್ತ ಸಾಗಬೇಕು ಎಂಬ ರಾಜಕೀಯ ಸ್ವಾತಂತ್ರ್ಯದ ಕಡೆಗೆ ಕನ್ನಡದ ಲೇಖಕರು ಹೆಚ್ಚು ಒತ್ತು ಕೊಟ್ಟಿರುವುದು ಕಂಡುಬಂದರೆ, ತೆಲುಗಿನ ನರುಡು ಕಾದಂಬರಿಯಲ್ಲಿ ಮಾನವ ಪ್ರಪಂಚ ಮಾದಿಗ ಸಮುದಾಯ ಎಂದರೆ ಅಸಹ್ಯಿಸಿಕೊಳ್ಳುತ್ತಿದೆ.

ಅಂತಹ ಸಮುದಾಯವನ್ನು ಉದ್ಧರಿಸಲು ಗಾಂಧೀಜಿಯವರು ಬಹಳ ಶ್ರಮಪಟ್ಟಿದ್ದಾರೆ. ಮತ್ತು ಅಂಬೇಡ್ಕರ್‌ರಂತಹ ಮಹಾನ್ ಬುದ್ಧಿಜೀವಿಗಳು ತನ್ನ ಸಮಾಜವನ್ನು ಬದಲಾಯಿಸಲು ಅನೇಕ ರೀತಿಯಾಗಿ ಸೇವೆ ಸಲ್ಲಿಸಿದ್ದಾರೆ. ಇಡೀ ಮಾನವ ಕುಲವನ್ನೆಲ್ಲ ಸಮಾನ ರೀತಿಯಲ್ಲಿ ಕಾಣಬೇಕೆಂಬ ದೃಷ್ಟಿಕೋನದಿಂದ ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆಯುವ ಉದ್ದೇಶ ಎಂಬುದನ್ನು ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಕನ್ನಡದ ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಶೇಖರ ಎಂಬ ಪೊಲೀಸ್ ಅಧಿಕಾರಿಯ ಮಗ ತನ್ನ ಸ್ವಾರ್ಥ ಸ್ವಂತ ಜೀವನವನ್ನು ಬದಿಗೊತ್ತಿ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಪರಿತಪಿಸುತ್ತಾ ಕಲ್ಲಾಪುರ ಎಂಬ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿಸಿ, ತಾನೂ ಸಹ ಮಾದರಿ ವ್ಯಕ್ತಿಯಾಗಿ ಬಿಂಬಿತವಾಗುತ್ತಾನೆ. ತೆಲುಗಿನ ನರುಡು ಕಾದಂಬರಿಯಲ್ಲಿ ಒಬ್ಬ ದಲಿತ ವಿದ್ಯಾರ್ಥಿ ಶಾಲಾದಿನಗಳಲ್ಲಿ ಅನೇಕ ರೀತಿಯ ಅವಮಾನಗಳನ್ನು ಅನುಭವಿಸಿ ತನ್ನ ಧೃಡವಾದ ಛಲದಿಂದ ಉನ್ನತ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಿ ತಳದಲ್ಲಿರುವ ತನ್ನ ಜನಾಂಗವನ್ನು ಉನ್ನತಮಟ್ಟಕ್ಕೇರಲು ಶ್ರಮಪಟ್ಟಿರುವುದು ಈ ಕಾದಂಬರಿಯಲ್ಲಿ ಕಂಡುಬರುತ್ತದೆ.

ಗಾಂಧೀಜಿಯವರನ್ನು ಬಂಧಿಸಿದಾಗ ಒಬ್ಬ ತರುಣನು "ನಮ್ಮ ಜನರಿಗೆ ಹೊಟ್ಟೆ ತುಂಬ ಅನ್ನವಿಲ್ಲ ನಮ್ಮ ಮಕ್ಕಳಿಗೆ ಮೈ ಮುಚ್ಚಿ ಕೊಳ್ಳಲು ಬಟ್ಟೆಯಿಲ್ಲ. ನಮ್ಮ ಅನ್ನ-ಬಟ್ಟೆ ಎಲ್ಲವನ್ನು ಈ ಪರದೇಶೀ ಸರ್ಕಾರ ಸೆಳೆದೊಯ್ಯುತ್ತಿದೆ. ನಮ್ಮ ನಾಡಿನಲ್ಲೇ ನಮಗೆ ಉಪವಾಸ, ಅವರಿಗೆ ಮೇಜವಾನಿ ಎಂಥ ಹೀನಬಾಳು ನಮ್ಮದು!..." (ಸ್ವಾತಂತ್ರ್ಯದೆಡೆಗೆ, ಪುಟ-೨೨, ೧೯೪೬)

ಈ ಮಾತು ವಸಾಹತುಶಾಹಿಯ ದುರಾಡಳಿತದ ಹಾಗೂ ಅದರ ಪರಿಣಾಮವಾಗಿ ಬೆಳೆದ ವರ್ಗವೈರುಧ್ಯದ ಸ್ಪಷ್ಟ ಚಿತ್ರಣ ಕೊಡುತ್ತದೆ. ರಾಷ್ಟ್ರದ ಆರ್ಥಿಕ ಮುಖದ ಸುಧಾರಣೆಯ ಆಶಯವನ್ನು ಈ ಮಾತು ಧ್ವನಿಸುತ್ತದೆ. ನರುಡು ಕಾದಂಬರಿಯಲ್ಲಿ ಅಧ್ಯಾಪಕನು ಯಲ್ಲಮಂದನನ್ನು ಪುಟ್ಬಾಲ್ ಆಟ ಆಡಲು ಕರೆದುಕೊಂಡು ಬಂದಾಗ ವಿದ್ಯಾರ್ಥಿಗಳು,

ಕನ್ನಡ ಭಾಷಾಂತರ

ಇದೇನು ಈ ಜಂತುವನ್ನು ತಂದಿದ್ದಾನೆ? ಈ ಪಕ್ಷೀಂದ್ರನು ಬಂದಿದ್ದಾನಲ್ಲ? ಈ ಗಂಡು ಎಮ್ಮೆ ರಂಗಸ್ಥಳಕ್ಕೆ ಇಳಿದಿಯಲ್ಲ?" (ಮೂಲ; ಅನುಬಂಧ-೩ ಅಧ್ಯಾಯ-೭ ಕ್ರಸಂ. ೧೦) ಈ ಮಾತು ದಲಿತ ಯಲ್ಲಮಂದನನ್ನು ಮನುಷ್ಯರಂತೆ ಕಾಣದೆ ಪ್ರಾಣಿಗಳೆಂಬಂತೆ ಭಾವಿಸಿ ಜಾತಿಭೇದ ತಾರತಮ್ಯವನ್ನು ಗುರುತಿಸುವಂತಿದೆ. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಶೇಖರ ಗಾಂಧಿ ಟೋಪಿಗಾಗಿ ತನ್ನ ತಂದೆಯಿಂದ ಏಟು ತಿಂದು ಯಾರಿಗೂ ಹೇಳದೆ ಕೇಳದೆ ಮನೆ ಬಿಟ್ಟು ಹೋಗುವಾಗ ದಾರಿಹೋಕರ ಗಾಡಿಗಳಲ್ಲಿ ಹೋಗುತ್ತಿರುವಾಗ ಹಳ್ಳಿ ರೈತರು ಗಾಂಧಿಯನ್ನು ಕುರಿತು ರಚಿಸಿದ ಹಾಡು ಹೀಗಿದೆ.

"ಎಂಥಾ ಶ್ಯಾಣ್ಯಾ ಮಹಾತ್ಮಾಗಾಂಧಿ
ಹಿಂದೂಸ್ಥಾನಕ ಅವನೇ ತಂದಿ'
ಖಾದಿಯ ಉಡಿರೆಂದ, ಖಾದಿಯ ತೊಡಿರೆಂದ
ಕಾಯ್ದೆ ! ಭಂಗಾವ ಮಾಡಿರೆಂದ
ಹಿಡಿಸ್ಯಾನ ಕೈಯಾಗ ಝುಂಡ
ಗದಗಮಿಸಿ ಬಿಟ್ಟಾನ ಇಂಗ್ಲೆಂಡ
ಹಿಂದೂಸ್ಥಾನ ಸ್ವಾತಂತ್ರ್ಯ
ಗಾಂಧಿ ಹೇಳ್ಯಾನ ಒಂದೇ ಮಂತ್ರ
ನೂಲಂತೇಳ್ಯಾನ ನಮ್ಮ ಚರಿತ್ರೆ
ಸರ್ಕಾರಿ ಚಾಕರಿ ಕೊರಕಲಿಗ್ಹಾಕಿರಿ"
(ಸ್ವಾತಂತ್ರ್ಯದೆಡೆಗೆ, ಪುಟ-೩೯-೪೦, ೧೯೪೬)

ಮಹತ್ಮಗಾಂಧೀ ದೇಶ ಕಂಡ ಮಹಾನ್ ಪುರುಷ. ದಿಲ್ಲಿಯಿಂದ ಹಳ್ಳಿಯಲ್ಲಿರುವ ಹುಂಬರಿಗೂ ಸಹ ಗೊತ್ತು. ಆತನು ಎಂಥ ಬುದ್ಧಿವಂತ, ಹಿಂದೂಸ್ಥಾನಕ್ಕೆ ಅವನೇ ತಂದೆ, ಗಾಂಧೀಜಿಯವರು ಸಾರಿದ ಜೀವನೋಪಾಯದ ತತ್ವಗಳು, ತಂತ್ರಗಳು ಹಳ್ಳಿಯ ಸರಳ ಜೀವಿಗಳ ಗಾಂಧಿ ಭಕ್ತಿ, ದೇಶಪ್ರೇಮ ಗಾಂಧೀಜಿಯವರ ಪ್ರಭಾವವನ್ನು ತಿಳಿಯಲಾಗುತ್ತದೆ. ಬ್ರಿಟಿಷರ ದುಷ್ಟ ಆಡಳಿತದಿಂದ ಬೇಸತ್ತ ಜನರು "ಎಂದಾಗಿ ಹಾಳಾಗಿ ಹೋಗ್ತಾರೋ, ಏನೋ, ಈ ಮಂಗ್ಯಾ ಸೊಳೆ ಮಕ್ಕಳು ನಮ್ಮ ದೇಶಾ ಬಿಟ್ಟು (ಸ್ವಾತಂತ್ರ್ಯದೆಡೆಗೆ, ಪುಟ-೪೦, ೧೯೪೬)

ಎಂದಾಗ ಇನ್ನೊಬ್ಬ ಗಾಡಿಯುವ "ಇನ್ನೇನು ತಡಾ ಇಲ್ಲ ಬಿಡು ಸಂಗೋಳ್ಳಿ ರಾಯಣ್ಣ ಹುಟ್ಟಿ ಬಂದಂಗ ಬಂದಾನ ನಮ್ಮಪ್ಪ ಈ ಗಾಂಧೆಪ್ಪ' ಈ ಕೆಂಪುಮೂತೀ ಸರ್ಕಾರನ್ನ ಒದ್ದ ಹೊರಗ ಹಾಕ್ತಾನ," (ಸ್ವಾತಂತ್ರ್ಯಡೆಗೆ, ಪುಟ-೪೧, ೧೯೪೬) ಬ್ರಿಟಿಷರು ಜನರನ್ನು, ಏನೆಲ್ಲಾ ರೀತಿಯಾಗಿ ಹಿಂಸೆ ಮಾಡುತ್ತಿದ್ದರು. ಅವರ ಅನ್ಯಾಯ, ಅಕ್ರಮಗಳನ್ನು ತಾಳಲಾರದೆ ಸಂಕಷ್ಟವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಗಾಂಧೀಜಿ ಸಂಗೊಳ್ಳಿ ರಾಯಣ್ಣನಾಗಿ ಪುನಃ ಹುಟ್ಟಿ ಬಂದ ಹಾಗೆ ಬಂದಿದ್ದಾನೆಂದು ಗಾಂಧೀಗಿಂತ ಸಂಗೊಳ್ಳಿ ರಾಯಣ್ಣನು ಮುಖ್ಯ ಎಂಬುದನ್ನು ತಿಳಿಯಬಹುದು. ನರುಡು ಕಾದಂಬರಿಯಲ್ಲಿ ಜೂನಿಯರ್-ಸೀನಿಯರ್ ತಂಡಗಳ ನಡುವೆ ನಡೆದ ಪುಟ್ಬಾಲ್ ಆಟದಲ್ಲಿ ಯಲ್ಲಮಂದ ಪ್ರಸಿದ್ಧ ಪ್ರಮುಖ ಆಟಗಾರನಾಗಿ ಗುರುತಿಸಿ ಕೊಂಡಂತಹ ಸಂದರ್ಭದಲ್ಲಿ ಬಿ.ಎ. ಸೀನಿಯರ್ ವಿದ್ಯಾರ್ಥಿಗೂ ಮತ್ತು ಬ್ರಾಹ್ಮಣ ಬ್ರಹ್ಮ ಸಮಾಜದ ವಿದ್ಯಾರ್ಥಿಗೂ ಯಲ್ಲಮಂದನನ್ನು ಕುರಿತು ನಡೆದ ಚರ್ಚೆ ಹೀಗಿದೆ.

ಕನ್ನಡ ಭಾಷಾಂತರ

ರಾಮ-ವೆಂಕಟೇಶ್ವರ ಶಿಕ್ಷೆಗಳೆನ್ನುವವು ಈ ಲೋಕದಲ್ಲಿ ಇವೆಯೇ? ಇದ್ದಾವ.

ವೆಂಕಟ – ಹೌದು ಇದ್ದಾವೆ. ಅವನ್ನು ನಿರ್ಮಾಣ ಮಾಡಿದ್ದು ಸಮಾಜ.

ರಾಮ – ತಪ್ಪುಗಳನುಸಾರವಾಗಿ ಶಿಕ್ಷೆಗಳು ಬಂದಿವೆ. ಜನ್ಮಶಿಕ್ಷೆ, ಸಾವು ಶಿಕ್ಷೆ ಹತ್ತುವರ್ಷದ ಶಿಕ್ಷೆ! ಹಾಗೇನೇ ಈ ದೇಶದಲ್ಲಿ ಸತ್ತಿರುವ ಮಾಂಸವನ್ನು ತಿನ್ನುತ್ತಾ, ಜನರನ್ನು ಸಾಯಿಸಿ ಸುಟ್ಟುಕೊಂಡು ತಿನ್ನುತ್ತಿರುವ ನರಭಕ್ಷಕರಿಗೆ ಆರ್ಯ ಸಮಾಜದಿಂದ ಶಿಕ್ಷೆ ವಿಧಿಸಿದ್ದಾರೆ.

ಒಬ್ಬ ವಿದ್ಯಾರ್ಥಿ– ಈಗ ನಮ್ಮ ದೇಶದ ತುಂಬೆಲ್ಲ ಬ್ರಿಟಿಷರು ಶಿಕ್ಷೆ ವಿಧಿಸಿದ್ದಾರಲ್ಲವೆ!

ರಾಮ – ಆಗಿನ ಆರ್ಯರು ಈ ಶಿಕ್ಷೆ ಎಂದಿಗೂ ಅಳಿಸದ ನಿಬಂಧನ ಸಹ ಈ ಶಿಕ್ಷೆಯಲ್ಲೇ ವಿಧಿಸಿದ್ದಾರೆ. ಅದರಿಂದಾಗಿ ಈ ಮಾದಿಗರು ಎಲ್ಲಾ ಕಾಲದಲ್ಲಿಯೂ ಹಾಗೇ ಇರಬೇಕಾಗಿದೆ.

ಇನ್ನೊಬ್ಬ ವಿದ್ಯಾರ್ಥಿ– ನಮಗೆ ಯಮಗಂಡರಾದ ಬ್ರಿಟೀಷರು ಈ ಹರಿಜನರಿಗೆ ಶಿಕ್ಷೆ ಕಡಿಮೆ ಮಾಡಿ, ಅವರನ್ನು ನಮಗೆ ಪ್ರಭುಗಳನ್ನಾಗಿ ಮಾಡಿ ಆ ಪ್ರಭುತ್ವ ಅಧಿಕಾರ ಚಲಾಯಿಸುವುದಕ್ಕೆ ತಮ್ಮ ಸೈನ್ಯವೆಲ್ಲ ಅವರಿಗೆ ಸಹಾಯ ಮಾಡಿದರೆ ಏನು ಮಾಡುತ್ತೀರಾ ನೀವು? (ಮೂಲ; ಅನುಬಂಧ–೩ ಅಧ್ಯಾಯ–೭ ಕ್ರಸಂ. ೧೧)

ಭಾರತ ಉತ್ತಮ ಸಂಸ್ಕೃತಿ, ಸಂಪ್ರದಾಯ, ನಾಗರಿಕತೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ, ಬೇರೆ ದೇಶಗಳಿಗೆ ಮಾದರಿ ಪುಣ್ಯಭೂಮಿಯಾಗಿದೆ. ಅನಾದಿಕಾಲದಿಂದಲೂ ಆರ್ಯರು ವರ್ಗತಾರತಮ್ಯ ಮಾಡುತ್ತಾ ಬಡವರು, ದಲಿತರು ತಪ್ಪು ಮಾಡಿದರೂ, ಮಾಡದೇ ಇದ್ದರೂ ತಪ್ಪದೆ ಶಿಕ್ಷೆಯನ್ನು ವಿಧಿಸುತ್ತಿದ್ದರು. ಪ್ರಸ್ತುತ ಸಮಾಜದಲ್ಲಿಯು ಅದೇ ರೀತಿಯ ಅನಾಚಾರ ನಡೆಯುತ್ತಿರುವುದನ್ನು ಕಾಣಬಹುದು. ಆದರೆ ಬ್ರಿಟಿಷರು ಭಾರತವನ್ನು ಆಳುತ್ತಿರುವ ಸಂದರ್ಭದಲ್ಲಿ ತಮ್ಮ ಕ್ರೈಸ್ತಧರ್ಮವನ್ನು ಪ್ರಚಾರ ಮಾಡುವುದಕ್ಕಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡವರಿಗೆ ಶಿಕ್ಷೆ ವಜಾ ಮತ್ತು ಸೌಲಭ್ಯಗಳನ್ನು ನೀಡುವುದಾಗಿ ಆದೇಶಿಸಿದ್ದು, ಹರಿಜನರು ಹೆಚ್ಚಿನದಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುತ್ತಿರುವುದು ಕಂಡುಬರುತ್ತದೆ. ಪ್ರಸ್ತುತ ಸಮಾಜದಲ್ಲಿಯು ಸಹ ಶ್ರೀಮಂತರ, ಮೇಲ್ವರ್ಗದವರ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಹಲವಾರು ಜನಾಂಗಗಳು ಬೇರೆ–ಬೇರೆ ಧರ್ಮಗಳಿಗೆ ಮತಾಂತರಗೊಳ್ಳುವುದನ್ನು ಕಾಣಬಹುದುದಾಗಿದೆ. ನರುಡು ಕಾದಂಬರಿಯಲ್ಲಿ ಯಲ್ಲಮಂದ ಎಂಬ ಅಸ್ಪೃಶ್ಯ ವಿದ್ಯಾರ್ಥಿ ಪುಟ್ಬಾಲ್ ಕ್ರೀಡೆಯಲ್ಲಿ ಉತ್ತಮ ಕ್ರೀಡಾಪಟುವಾಗಿದ್ದರಿಂದ ಅವನ ಏಳಿಗೆಯನ್ನು ಸಹಿಸದ ಮೇಲ್ವರ್ಗದ ವಿದ್ಯಾರ್ಥಿಗಳ ಅಸೂಯೆ, ಸ್ವಾರ್ಥ ಮನೋಭಾವವನ್ನು ಗುರುತಿಸಬಹುದಾಗಿದೆ. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಶೇಖರ ಗಾಂಧಿ ಟೋಪಿಗಾಗಿ ಹಠ ಮಾಡಿ ತನ್ನ ತಂದೆಯಿಂದ ಏಟು ತಿಂದು ಮನೆಬಿಟ್ಟು ಹೋಗಿ ಕಲ್ಲಾಪುರದಲ್ಲಿ ಮಲ್ಲಯ್ಯ ಎಂಬ ರೈತನ ಮನೆಯಲ್ಲಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಗೌರಿಗೆ ರಾಷ್ಟ್ರೀಯತೆಯೆ ಬಗ್ಗೆ, ನಾಡಿನ ಧೀಮಂತ ಹೋರಾಟಗಾರ್ತಿ ಕಿತ್ತೂರಿನ ಚೆನ್ನಮ್ಮನ ಬಗ್ಗೆ ಹೇಳುತ್ತಾ ನಾವು ಇಂದು ಕತ್ತಿಗಿತ್ತಿ, ಮದ್ದು, ಗುಂಡು ಏನೂ ಇಲ್ಲದೆ ಹೇಗೆ ಯುದ್ಧಮಾಡಬೇಕೆಂದುದನ್ನು ಈ ರೀತಿಯಾಗಿ ಹೇಳುತ್ತಾನೆ.

"ಪರದೇಶೀ ಅರಿವೆ ಕೊಳ್ಳಬಾರದು, ಪರದೇಶೀ ಸಾಮಾನು ಕೊಳ್ಳಬಾರದು, ಸರ್ಕಾರದ ಮಾತು ಕೇಳಬಾರದು, ಮನೆಯೊಳಗೆ ನೂತು ಅರಿವೆ ಮಾಡಿಕೊಳ್ಳಬೇಕು, ಕೋರ್ಟು ಕಚೇರಿಗೆ ಹೋಗಬಾರದು, ಕಾಯ್ದೇಭಂಗ ಮಾಡಬೇಕು, ಸರ್ಕಾರ ಏನಾದರೂ ಮಾಡಿದರ ಸುಮ್ಮನಿರಬಾರದು, ಸತ್ಯಾಗ್ರಹ ಮಾಡಬೇಕು" (ಸ್ವಾದೆಡೆಗೆ, ಪುಟ-೬೭, ೧೯೪೬) ಎಂಬ ಮಾತುಗಳು ಸ್ವದೇಶಿ ವಸ್ತು ಬಳಕೆ, ವಿದೆಶಿ ವಸ್ತು ಬಹಿಷ್ಕಾರ ಬ್ರಿಟಿಷರು ಜಾರಿಗೆ ತಂದ ಕಾನೂನುಗಳನ್ನು ಉಲ್ಲಂಘಿಸಬೇಕು, ಪಾಲಿಸಬಾರದು ಬ್ರಿಟಿಷ್ ಪ್ರಭುತ್ವ ಏನಾದರೂ ಅನ್ಯಾಯ, ಆಕ್ರಮ ಎಸಗಿದರೆ ಸತ್ಯಾಗ್ರಹ ಮಾಡಬೇಕು ಎಂದು ಗಾಂಧೀಜಿಯವರ ತತ್ವಗಳನ್ನು ಯಥಾವತ್ತಾಗಿ ಪಾಲಿಸುವವನಾಗಿ ಶೇಖರ ಕಂಡು ಬರುತ್ತಾನೆ. ನರುಡು ಕಾದಂಬರಿಯಲ್ಲಿ ಯಲ್ಲಮಂದ ಮತ್ತು ಅಮೆರಿಕನ್ ಮಿಷನರಿ ಭಾರತ ಮತ್ತು ಅಮೆರಿಕಾ ದೇಶಗಳ ಹಿಂದೂ ಮತ್ತು ಕ್ರಿಶ್ಚಿಯನ್ ಸಂಸ್ಕೃತಿಗಳ ಬಗ್ಗೆ ಚರ್ಚೆ ಮಾಡುತ್ತಾರೆ. ನಂತರ ಯಲ್ಲಮಂದನು ತನ್ನ ಬಿ.ಎ. ವಿದ್ಯಾಭ್ಯಾಸ ಮುಗಿದ ನಂತರ ನನ್ನ ಮುಂದಿನ ವಿದ್ಯಾಭ್ಯಾಸಕ್ಕೆ ಸಹಾಯ ಯಾರು ಮಾಡುತ್ತಾರೆ.

ಕನ್ನಡ ಭಾಷಾಂತರ

ತನ್ನ ಜಾತಿಗೆ, ಜನಾಂಗಕ್ಕೆ ಹೇಗೆ ಸಹಾಯ ಮಾಡುವುದು? ಮಹಾತ್ಮ ಗಾಂಧೀಜಿ ನಿಜವಾಗಿಯೂ ಅವತಾರ ಮೂರ್ತಿ ಹರಿಜನರು ಎಂದು ಹೆಸರಿಟ್ಟು ತಮ್ಮ ಜಾತಿಯನ್ನು ಮೇಲ್ಜಾತಿಯ ಕುಲಗಳೊಂದಿಗೆ ಸರಿಸಮ ಮಾಡಬೇಕೆಂದು ತಮ್ಮ ಪವಿತ್ರವಾದ ಜೀವನವನ್ನು ಅರ್ಪಿಸಿಕೊಂಡಿದ್ದಾರೆ. (ಮೂಲ; ಅನುಬಂಧ-೩ ಅಧ್ಯಾಯ-೭ ಕ್ರ.ಸಂ. ೧೨)

ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಆಕಸ್ಮಿಕವಾಗಿ ದಲಿತ ಕೇರಿಯಲ್ಲಿ ಭೇಟಿಯಾದ ಸಂದರ್ಭದಲ್ಲಿ ರಾಜ ಶೇಖರನಿಗೆ ಬಡವರನ್ನು ಶ್ರೀಮಂತರು ಯಾವ ರೀತಿಯ ಅನ್ಯಾಯ, ಅಕ್ರಮಗಳನ್ನು ಎಸಗುತ್ತಿದ್ದರು. ಅದರಿಂದ ಅವರ ಜೀವನದ ಮೇಲೆ ಎಂತಹ ಪರಿಣಾಮ ಉಂಟಾಗುತ್ತಿತ್ತು ಎಂಬುದನ್ನು ಕುರಿತು ಭಾಗೀರಥವ್ವ ಎಂಬ ಬಡ ಹೆಂಗಸಿನ ಜೀವನವನ್ನು ಉದಾಹರಣೆಯಾಗಿ ನೀಡುತ್ತಾನೆ. ಕಮ್ಯುನಿಸಂ "ಮಾಡುವ ಕೆಲಸಗಳು ಈ ರೀತಿಯಾಗಿವೆ ಎಂದು ಗಿರಿಣಿ ಕೂಲಿಗಾರರು, ಬಡ ಕೆಲಸಗಾರರು, ಭಾಗೀರಥವ್ವನಂಥ ದರಿದ್ರರು ಇವರೆಲ್ಲರ ಮನೆ ಸುತ್ತೋದು-ಅವರ ಕಷ್ಟ ದುಃಖ ತಿಳಕೊಳ್ಳೋದು ಯಾವ ಯಾವ ಶ್ರೀಮಂತ ಏನೇನು ಕಾರಬಾರ ಮಾಡಿದಾನ ಅನ್ನೊದನ್ನು ತಿಳಿದುಕೊಳ್ಳೊದು. ಹಿಂದೂಸ್ತಾನದಾಗ ಕಮ್ಯುನಿಸಂ ತರೋದು! ಶ್ರೀಮಂತರನ್ನೆಲ್ಲಾ ಸುಲಿದು ಲೂಟಿ ಮಾಡಿ ಅವರ ಆಸ್ತಿಪಾಸ್ತಿ ಎಲ್ಲಾ ಬಡವರಿಗೆ ಹಂಚಿ ಕೊಟ್ಟು ಕೂಲಿಗಾರ- ಕೆಲಸಗಾರರ ರಾಜ್ಯ ಸ್ಥಾಪಿಸೋದು ಅದೇ ಕೆಲಸಕ್ಕಾಗಿ ನಾವೆಲ್ಲ ದುಡೀತಾ ಇದೇವೆ" (ಸ್ವಾತಂತ್ರ್ಯದೆಡೆಗೆ ಪುಟ-೧೦೧, ೧೯೪೬).

ಬ್ರಿಟಿಷರು ಒಂದು ಕಡೆ ಅನ್ಯಾಯದ ಪಿಶಾಚಿಗಳಾಗಿದ್ದರೆ, ಅವರಿಗಿಂತ ಹೆಚ್ಚಿನದಾಗಿ ನಮ್ಮ ದೇಶದಲ್ಲಿನ ಶ್ರೀಮಂತರು, ಜಮೀನ್ದಾರರು ಬಡವರು, ದಲಿತರ ಮೇಲೆ ಅನೇಕ ರೀತಿಯ ದುಷ್ಟ

ದೌರ್ಜನ್ಯಗಳನ್ನು ಎಸಗುತ್ತಿದ್ದು, ಅಂತವರ ದುರಾಡಳಿತ, ದುರಾಕ್ರಮವನ್ನು ನೆಲೆಗೊಳಿಸಲು, ಕೊನೆಗಾಣಿಸಲು ರಾಜ ಎಂಬ ಕಮ್ಯುನಿಸ್ಟ್‌ನ ಸಮಾನತಾ ಮನೋಭಾವವನ್ನು ಗುರುತಿಸಬಹುದು. ನರುಡು ಕಾದಂಬರಿಯಲ್ಲಿ ಜೆನ್ನಿಫರ್ ತನ್ನ ಸಹಪಾಠಿಗಳೊಂದಿಗೆ ಭಾರತೀಯ ರಾಜಕೀಯಗಳು, ತನ್ನ ಜಾತಿಯ ಭವಿಷ್ಯತ್ ಕುರಿತು, ಪ್ರಪಂಚದ ರಾಜಕೀಯಗಳ ಕುರಿತು, ಮಾನವನ ವಿಷಯ ಬುದ್ಧಿ ಕುರಿತು ನಡೆದ ಚರ್ಚೆ ಹೀಗಿದೆ.

ಕನ್ನಡ ಭಾಷಾಂತರ

ಜೆನ್ನಿ ಯುರೇಪಿಯನ್ ಜಾತಿ ಕೊನೆಗೆ ತುಂಬಾ ಅಸಹಾಯಕ ಸ್ಥಿತಿಗೆ ಸಿಕ್ಕಿಕೊಂಡಿದೆ. ಭಾರತೀಯರಿಗೆ ಆ ಜಾತಿ ಎಂದರೆ ಗೌರವ ಇಲ್ಲ. ತಮ್ಮ ಕೀಳು ಕುಲಕ್ಕಿಂತ ಅಧ್ವಾನವಾಗಿ ನೋಡುತ್ತಾರೆ.

ಮಾರ್ಥಾ – ಹೌದು ಜೆನ್ನಿ! ಇಂಗ್ಲೀಷರು ನಮಗೆ ಅವರಿಗೆ ಸಂಬಂಧವಿದ್ದ ಹಾಗೇ ಆಲೋಚಿಸುವುದಿಲ್ಲ.

ಹೆನ್ರಿ – ಹೌದು ಮಾರ್ಥಿ ಅವರ ದೃಷ್ಟಿಯಲ್ಲಿ ನಮ್ಮ ಮಹಿಳೆಯರು, ಅವರ ಸೈನಿಕರು ಭಾರತ ದೇಶದಲ್ಲಿ ಇರುವಾಗ ಅವರ ಗಾಢ ಪುರುಷತ್ವ ರಾಕ್ಷಸ ಕಾಮವನ್ನು ತೀರಿಸಲು ಏರ್ಪಾಟಾದ ಒಂದು ವಿಧವಾದ ಜೀವನ ರೂಪಿಸಲು ಉತ್ತಮ ರಕ್ಷಣೆ ಕೊಡಬೇಕೆಂದು!

ಜೆನ್ನಿ – ಅದಕ್ಕೂ ಮುಂಚೆ ಎಲ್ಲದಕ್ಕೂ ತಯಾರಾದವರು ನಮ್ಮ ಸ್ತ್ರೀ ಮುಂಡೆವು ಅಲ್ಲವೆ! ಭಾರತ ದೇಶದಲ್ಲಿ, ಬರ್ಮಾ, ಜಾವಾ, ಮಲಯಾ, ಇಂಡೋಚೈನಾ, ಚೈನಾ, ಅಮೇರಿಕಾ, ಆಫ್ರಿಕಾ ದೇಶಗಳಲ್ಲಿ ನಮ್ಮ ಜಾತಿ ಉದ್ಭವಿಸಿ ಎಲ್ಲಿಯೂ ಉತ್ತಮ ಸ್ಥಿತಿಯನ್ನು ರೂಪಿಸಿಕೊಳ್ಳದೆ ಎಷ್ಟು ನೀಚತ್ವವನ್ನು ಅನುಭವಿಸುತ್ತದೋ!

ಹೆನ್ರಿ – ಎರಡು ಜಾತಿಗಳು ಬೆರೆಯುತ್ತವೆ. ಆ ಜಾತಿ ಪುರುಷರು ಆ ಜಾತಿ ಸ್ತ್ರೀಯರನ್ನು ಪ್ರೀತಿಸುತ್ತಾರೆ. ಆದರೆ ಕಪ್ಪು ಜಾತಿಯವರಲ್ಲಿ, ಬಣ್ಣದ ಜಾತಿಯವರಲ್ಲಿ ಪುರುಷರು ಬಿಳಿಯ ಜಾತಿ ಪುರುಷರನ್ನು ಪ್ರೀತಿಸಕೂಡದು. ಜಗಳಕ್ಕಿಳಿಯಬಾರದು.

ಹೆನ್ರಿ – ಮುಸ್ಲಿಂ ಧರ್ಮದವರು, ಯಾವ ಜಾತಿಯವರನ್ನಾದರೂ ತಮ್ಮಲ್ಲಿ ಸೇರಿಸಿಕೊಳ್ಳುತ್ತಾರೆ. ಎಂತಹ ಮನೆತನದವರಾದರೂ ಆ ಮಹಾ ಧರ್ಮದಲ್ಲಿ ಬೆರೆತುಹೋಗುತ್ತಾರೆ. ಬಿಳಿಯ ಮುಸ್ಲಿಂರಿದ್ದಾರೆ, ಬಂಗಾರದ ಮುಸ್ಲಿಂರಿದ್ದಾರೆ, ಕಪ್ಪು ಮುಸ್ಲಿಂರಿದ್ದಾರೆ, ಚೀನಾ ಮುಸ್ಲಿಂರಿದ್ದಾರೆ, ಜಾವಾ ಮುಸ್ಲಿಂರಿದ್ದಾರೆ, ನೀಗ್ರೊ ಮುಸ್ಲಿಂರು ಭಾರತೀಯರು ಇತ್ಯಾದಿ ಎಲ್ಲರೂ ಒಂದು ಬ್ರಹ್ಮಾಂಡವಾದ ಸಮಾಜದಲ್ಲಿದ್ದಾರೆ. (ಮೂಲ; ಅನುಬಂಧ–೩ ಅಧ್ಯಾಯ–೭ ಕ್ರಸಂ. ೧೩) ಯುರೇಪಿಯನ್ ಜಾತಿಯ ಸ್ತ್ರೀಯರ ಮೇಲಿನ ಶೋಷಣೆ, ಭಾರತ, ಬರ್ಮಾ, ಜಾವಾ, ಮಲಯಾ, ಇಂಡೋಚೈನಾ, ಅಮೆರಿಕಾ, ಆಫ್ರಿಕಾಗಳಲ್ಲಿ ಯುರೇಷಿಯನ್ ಜಾತಿಗಳಲ್ಲಿಯ ಹೀನಸ್ಥಿತಿ ಮುಸ್ಲಿಂ ಜಾತಿಯ ಐಕ್ಯತಾ ಮನೋಭಾವ

ಮೇಲ್ಜಾತಿಯವರ ದಬ್ಬಾಳಿಕೆ ಮನೋಭಾವವನ್ನು ಗುರುತಿಸಬಹುದು. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಭಾಗೀರಥವ್ವ ಬಡಕುಟುಂಬದ ಸ್ತ್ರೀ ಆಕೆಗೆ ಗಂಡ ಸತ್ತುಹೋಗಿರುತ್ತಾನೆ. ಗಂಡ ಸತ್ತ ನಂತರ ಭಾಗಿರಥವ್ವ ಗಿರಣಿ ಕೆಲಸಕ್ಕೆ ಹೋಗುತ್ತಾಳೆ. ಕಾರ್ಖಾನೆಯ ಮ್ಯಾನೇಜರ್ ಭಾಗೀರಥವ್ವಳಿಗೆ ದುಡ್ಡಿನಾಸೆ ತೋರಿಸಿ ವಶಪಡಿಸಿಕೊಂಡು ಬೋಗದ ವಸ್ತುವನ್ನಾಗಿ ಬಳಸಿಕೊಂಡು ಆಕೆ ರಂಪಾಟ ಮಾಡಿದ್ದಕ್ಕೆ ಗಿರಣಿಯಿಂದ ಓಡಿಸುತ್ತಾನೆ. ನಂತರ ಆಕೆ ಒಬ್ಬ ಶ್ರೀಮಂತರ ಮನೆಯಲ್ಲಿ ಮುಸುರೆ ತೊಳೆಯುವುದಕ್ಕೆ ಹೋಗುತ್ತಾಳೆ. ಅಲ್ಲಿಯೂ ಕೂಡ ಶ್ರೀಮಂತನು ಕೇವಲ ಆಕೆಯ ಶರೀರವನ್ನು ಮಾತ್ರ ಅನುಭೋಗಿಸುತ್ತಾನೆ. ಅನಾರೋಗ್ಯದ ಸಂದರ್ಭದಲ್ಲಿಯೂ ಸಹ ನೆರವಾಗದೆ ಪಶುತ್ವವನ್ನು ತೋರಿಸುತ್ತಾನೆ.

ನರಡು ಕಾದಂಬರಿಯಲ್ಲಿ ಜೆನ್ನಿಫರ್ ತನ್ನ ಅಣ್ಣನಿಗೆ ಯಲ್ಲಮಂದ ಬರೆದ ಉತ್ತರವನ್ನು ಓದಿಕೊಳುತ್ತ ಭಾರತದೇಶದಲ್ಲಿನ ಸ್ತ್ರೀಯರ ಸ್ಥಿತಿ-ಗತಿ ಮತ್ತು ತನ್ನ ಜಾತಿಯ ಸ್ಥಿತಿಯನ್ನು ಕುರಿತು,

ಕನ್ನಡ ಭಾಷಾಂತರ

ತನ್ನ ಜಾತಿ ಸ್ಥಿತಿ ಏನು? (ವಸಾಹತು) ಬ್ರಿಟೀಷ್ ಸರ್ಕಾರ ಎಷ್ಟು ದಿನಗಳ ಕಾಲ ಈ ದೇಶವನ್ನು ಆಳುತ್ತದೋ ಅಷ್ಟು ದಿನಗಳ ಕಾಲ ಪಶು ಶರೀರ ಸೌಂದರ್ಯ ಹಕ್ಕು ತನ್ನಂತ ಯುವ ಬಿಳಿಯ ಸೈನಿಕ ಮಿಂಡರಿಗೆ ಮೀಸಲಾಗಿರುತ್ತದೆ. ಆ ಗಂಡು ಪಶುಗಳನ್ನು ಆಕರ್ಷಿಸುವ ಹೆಣ್ಣು ಪಶುಗಳಾಗಿ ತನ್ನ ಜಾತಿ ಸ್ತ್ರೀಯರು ತಯಾರಾಗಿ ತನ್ನ ಜಾತಿಯನ್ನು ಎಂತಹ ನೀಚ ಸ್ಥಿತಿಗೆ ತಂದಿದ್ದಾರೆ. (ಮೂಲ; ಅನುಬಂಧ-೩ ಅಧ್ಯಾಯ-೭ ಕ್ರಸಂ. ೧೪) ಎನ್ನುವಲ್ಲಿ ಬ್ರಿಟಿಷರು ತಮ್ಮ ಆಡಳಿತದ ಅವಧಿಯಲ್ಲಿ ಕೆಳವರ್ಗದ ಸ್ತ್ರೀಯರ ಮೇಲೆ ನಡೆಸುತ್ತಿರುವ ದೌರ್ಜನ್ಯ, ಶೋಷಣೆ, ಬ್ರಿಟಿಷರ ದುರಾಡಳಿತವನ್ನು ಅರಿಯಬಹುದಾಗಿದೆ. ಆದರೆ ಸ್ವಾತಂತ್ರ್ಯಡೆಗೆ ಕಾದಂಬರಿಯಲ್ಲಿ ಕೆಳವರ್ಗದ ಸ್ತ್ರೀಯರ ಮೇಲೆ ಶ್ರೀಮಂತರು, ಜಮೀನ್ದಾರರು ಅನ್ಯಾಯ, ಅನೀತಿ ಎಸಗುತ್ತಿರುವುದನ್ನು ಗಮನಿಸಬಹುದು. ಈ ಕಾದಂಬರಿಯಲ್ಲಿ ಮೇಲ್ವರ್ಗದವರಾದ ಶ್ರೀಮಂತರು ಬ್ರಿಟಿಷರ ಪ್ರತಿನಿಧಿಗಳಾಗಿ ಜನರಲ್ಲಿ ಶೋಷಣೆ ಮಾಡುತ್ತಾರೆ. ನರುಡು ಕಾದಂಬರಿಯಲ್ಲಿ ಬ್ರಿಟೀಷರು ದಲಿತ ಸ್ತ್ರೀಯರ ಮೇಲೆ ರಾಕ್ಷಸ ಪ್ರವೃತ್ತಿಯನ್ನು ನಡೆಸುತ್ತಿರುವುದನ್ನು ತಿಳಿಯಬಹುದಾಗಿದೆ. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಕಲ್ಲಾಪುರದ ಜನರಿಗೆ ಅಕ್ಷರ ಜ್ಞಾನ ಕಲಿಸಲು ಶೇಖರ-ಶಾಂತಾ-ಗೌರಿ ಹಳ್ಳಿಯಲ್ಲಿ ರಾತ್ರಿ ಶಾಲೆಯನ್ನು ತೆರೆಯಬೇಕು ಎಂಬ ಯೋಜನೆಯನ್ನು ರೂಪಿಸುತ್ತಾರೆ. ಅದರಂತೆ ರಾತ್ರಿ ಶಾಲೆಯನ್ನು ಎಲ್ಲಿ ನಡೆಸುವುದು ಎಂದು ಗೌರಿ ಕೇಳಿದಾಗ ಶೇಖರ "ಬಸವಣ್ಣನ ಗುಡಿ ಐತೆಲ್ಲ ಎನ್ನುತ್ತಾನೆ. ಸಮಾಜದಲ್ಲಿ (ಸ್ವಾದೆಡೆಗೆ, ಪುಟ-೧೭೭, ೧೯೪೬) ಬಲವಾಗಿ ಬೇರೂರಿದ್ದ ಜಾತಿಭೇದ, ಅಸಮಾನತೆಯನ್ನು ಹೋಗಲಾಡಿಸಲು ಹನ್ನೆರಡನೆಯ ಶತಮಾನದ ಸಾಮಾಜಿಕ ಕ್ರಾಂತಿಕಾರಿ ಬಸವಣ್ಣನ ಗುಡಿಯಲ್ಲಿ ರಾತ್ರಿ ಶಾಲೆಯನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಲ್ಲಿ ಲಿಂಗತಾರತಮ್ಯ, ಅನ್ಯತಾ ಮನೋಭಾವವನ್ನು ಹೋಗಲಾಡಿಸುವ ಪ್ರಯತ್ನ ಎಂಬುದನ್ನು ಮನಗಾಣಬಹುದಾಗಿದೆ.

ನರಡು ಕಾದಂಬರಿಯಲ್ಲಿ ಯಲ್ಲಮಂದ ಎಂಬ ಹರಿಜನ ವಿದ್ಯಾರ್ಥಿಯನ್ನು ಗೆಳೆಯ ವಿದ್ಯಾರ್ಥಿಗಳು ಅವನ ಕುಲವನ್ನು ಹೆಸರನ್ನು ಕುರಿತು ಗೇಲಿ ಮಾಡುತ್ತಾರೆ. ಯಾರೊಂದಿಗೂ ಸಹ ಗೆಳೆತನ ಮಾಡದೆ ಒಬ್ಬಂಟಿಗನಾಗಿರುತ್ತಾನೆ. ಆದರೆ ಚಿಕ್ಕಂದಿನಿಂದಲೂ ತನ್ನ ಅಚ್ಚುಮೆಚ್ಚಿನ ಕ್ರೀಡೆಯಾದ ಪುಟ್‌ಬಾಲ್ ಆಟ ಯಲ್ಲಮಂದನನ್ನು ಗುರುತಿಸುತ್ತದೆ. ಆತನಿಂದಲೇ ತನ್ನ ಕಾಲೇಜಿಗೆ ಜಯ ಸಿಗುತ್ತದೆ. ಆಗ ಕೆಲವರು ಯಲ್ಲಮಂದನಿಗೆ ಗೆಳೆಯರಾಗಿ 'ಮೂರ್ತಿ' ಎಂದು ಹೆಸರಿಡುತ್ತಾರೆ ಹೀಗೆ ನರುಡು ಕಾದಂಬರಿಯಲ್ಲಿ ಪುಟ್ಬಾಲ್ ಎಂಬ ಪ್ರಸಿದ್ಧ ಕ್ರೀಡೆಯಿಂದ ವಿದ್ಯಾರ್ಥಿಗಳಲ್ಲಿನ ಅನ್ಯ ಮನಸ್ಸಿನ ಭಾವನೆಯನ್ನು ತೊಡೆದುಹಾಕಲು ಲೇಖಕರು ಪ್ರಯತ್ನಿಸಿರುವುದನ್ನು ಗುರುತಿಸಬಹುದಾಗಿದೆ.

ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಕಲ್ಲಾಪುರ ಗ್ರಾಮಕ್ಕೆ ಇನ್‌ಪ್ಲುಯೆಂಜಾ ತಗುಲಿ ಅನೇಕ ಬಡ ಜನರು ವೈದ್ಯ ವ್ಯವಸ್ಥೆ ಇಲ್ಲದೆ ಸಾವನ್ನಪ್ಪುತ್ತಾರೆ. ಆಗ ಶೇಖರನು ಹಳ್ಳಿ ಜನರಿಗೆ ಆರೋಗ್ಯ ಸೂತ್ರಗಳನ್ನು ತಿಳಿಸಬೇಕು, ಕೆಲಸವಿಲ್ಲದ ಸೋಮಾರಿಗಳಾಗಿ ಕುಳಿತುಕೊಂಡಿರದೆ ಚರಕದಿಂದ ನೂಲಲು ಪ್ರೋತ್ಸಾಹಿಸಬೇಕು, ಸ್ವಚ್ಚತೆ ಬಗ್ಗೆ ತಿಳಿಸಬೇಕು, ಉತ್ತಮ ಜೀವನ ವಿಚಾರಗಳನ್ನು ತಿಳಿಸುವುದು, ಹೊಸ ಪದ್ದತಿಯಿಂದ ಬೆಳೆ ತೆಗೆದುಕೊಳ್ಳಲು ಕಲಿಸುವುದು". (ಸ್ವಾತಂತ್ರ್ಯದೆಡೆಗೆ, ಪುಟ–೧೪೫, ೧೭೩, ೧೯೪೬) ಎನ್ನುವಲ್ಲಿ ಅಕ್ಷರ ಲೋಕದಿಂದ ವಂಚಿತರಾದ ಹಳ್ಳಿ ಜನರು ಅನೇಕ ರೀತಿಯ ದುಷ್ಕೃತ್ಯಗಳಿಗೆ ಬಲಿಯಾಗುತ್ತಿದ್ದಾರೆ, ಉತ್ತಮವಾದ ಜೀವನ ನಡೆಸುವ ಪರಿಜ್ಞಾನ ಇರಬೇಕು. ಪರಾವಲಂಬಿಗಳಾಗದೆ, ಸ್ವಾವಲಂಬಿಗಳಾಗಿ ಜೀವನವನ್ನು ನಡೆಸಬೇಕು. ರೈತನು ಭಾರತದ ಬೆನ್ನೆಲುಬು ರೈತನ ಉದ್ದಾರವೇ ದೇಶದ ಉದ್ದಾರ ಎಂಬ ಶೇಖರನಲ್ಲಿನ ಸಮಾಜ ಪರ ಚಿಂತನೆಗಳು ಗಾಂಧೀಜಿಯವರ ಚಿಂತನೆಗಳನ್ನು ನೆನಪಿಸುತ್ತವೆ. ನರುಡು ಕಾದಂಬರಿಯಲ್ಲಿ ಯಲ್ಲಮಂದ ಗಾಂಧೀಜಿಯವರೊಂದಿಗೆ ಈ ರೀತಿಯಗಿ ಮನವಿ ಮಾಡಿಕೊಳ್ಳುತ್ತಾನೆ.

ಕನ್ನಡ ಭಾಷಾಂತರ

ಬಾಪೂಜಿ! ನನ್ನ ಕರ್ತವ್ಯ ನನಗೆ ತಿಳಿಯುತ್ತಿಲ್ಲ. ಇಷ್ಟು ಶಿಕ್ಷಣ ಪಡೆದುಕೊಂಡು ಬಂದು ನಾನು ಪ್ರಭುತ್ವ ಉದ್ಯೋಗ ಸ್ವೀಕರಿಸದೆ ಇದ್ದರೆ ನನ್ನ ವಿದ್ಯೆಗೆ ಬೆಲೆಯಿಲ್ಲ! ಈ ಓದು ನಮ್ಮ ದೇಶಕ್ಕೆ ಪ್ರಸ್ತುತವಾಗಿ ಶಿರೋಮಣಿ ಇದ್ದ ಹಾಗೆಯೇ ಆಣೆಕಟ್ಟುಗಳು ಇಲ್ಲದೆ ನದಿಗಳ ಉಪಯೋಗವಿಲ್ಲ. ಆಣೆಕಟ್ಟುಗಳಿಂದ ವಿದ್ಯುಚ್ಛಕ್ತಿ ಉದ್ಭವಿಸುತ್ತದೆ. ಈ ಶಕ್ತಿ ದೇಶಕ್ಕೆ, ರೈತನಿಗೆ ನೀರು, ಮನೆಗಳಿಗೆ ಚಿಕ್ಕ ಪರಿಶ್ರಮಗಳಿಗೆ ಅನೇಕ ವಿಧಗಳಲ್ಲಿ ಉಪಯೋಗ. ಪೂರ್ವಕಾಲದ ಗೃಹ ಆಶ್ರಮ, ಗ್ರಾಮಗಳು, ಸ್ವಲ್ಪಮಟ್ಟಿಗೆ ಬದಲಾಗುತ್ತವೆ. ವ್ಯವಸಾಯವು ತೀರ ಕ್ಲಿಷ್ಟರೂಪವಾಗದೆ ಅನೇಕ ರೂಪಗಳ ಉತ್ತಮ ವಿಧಾನಗಳನ್ನು ಅಳವಡಿಸಿಕೊಳ್ಳುತ್ತದೆ. (ಮೂಲ; ಅನುಬಂಧ–೩ ಅಧ್ಯಾಯ–೭ ಕ್ರ.ಸಂ. ೧೫)

ಯಲ್ಲಮಂದ ಒಬ್ಬ ಹರಿಜನ ಯುವಕ ಬ್ರಹ್ಮ ಸಮಾಜದವರು, ಸತ್ಸಂಗದವರು, ಕಾಂಗ್ರೇಸಿನವರ ನೆರವಿನಿಂದ ಪ್ರಾಥಮಿಕ ಶಿಕ್ಷಣವನ್ನು ಮುಗಿಸುತ್ತಾನೆ. ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಹೋಗಿ ಕಲಿಯುತ್ತಾನೆ. ವಿದೇಶದಲ್ಲಿ ವಿದ್ಯುಚ್ಛಕ್ತಿ ಕುರಿತು ಹೆಚ್ಚಿನದಾಗಿ ಅಭ್ಯಾಸ ಮಾಡಿ ರೈತರ

ಕೃಷಿಗೆ, ಸಾಮಾನ್ಯ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ಶ್ರಮಪಡುತ್ತಾನೆ. ಹೀಗೆ ಯಲ್ಲಮಂದನು ತನ್ನ ಉನ್ನತ ಶಿಕ್ಷಣದಿಂದ ತನ್ನ ಜಾತಿಗೆ ಮತ್ತು ದೇಶದ ಜನತೆಗೆ ನೆರವಾಗಬೇಕೆಂಬ ಜನಪರ ಯೋಚನೆಯನ್ನು ಕಾಣುತ್ತಾನೆ. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಗಾಂಧೀಜಿಯವರು ಬಂಧಿಸಿದ್ದರ ಸಲುವಾಗಿ ಹರತಾಳ, ಮುಷ್ಕರ, ಮೆರವಣಿಗೆ ನಡೆಯುತ್ತದೆ. ಬಿಳಿಯ ಖಾದೀ ಅಂಗಿ, ನೀಲಿ ವರ್ಣದ ಖಾದೀ ಚಲ್ಲಣ, ಗಾಂಧೀ ಟೋಪಿ ಹಾಕಿಕೊಂಡ ನಾಲ್ವರು ತರುಣರು ಧ್ವಜಕ್ಕೆ ವಂದನೆ ಸಲ್ಲಿಸಿ ಒಬ್ಬನು ಧ್ವಜರೋಹಣ ಮಾಡುತ್ತಾನೆ. ಮತ್ತೊಬ್ಬನು ಮುಂಗೈಯನ್ನು ರಭಸದಿಂದ ಮೇಲಕ್ಕೆತ್ತಿ, ಬಿಗಿದ ಮುಷ್ಟಿಯನ್ನು ಮುಂದೆ ಮಾಡಿ ಆವೇಶದಿಂದ ದುಂಡು ಮೇಜಿನ ಪರಿಷತ್ತಿನ ನಾಟಕ, ಸರ್ಕಾರದ ಕಾರಸ್ಥಾನ, ಗಾಂಧೀಜಿಯವರ ಬಂಧನ, ಅಸಹಕಾರ ಚಳವಳಿ ಆರಂಭ, ಬ್ರಿಟಿಷ್ ಸರ್ಕಾರ–ಸಾಮ್ರಾಜ್ಯಶಾಹಿ.. ಬ್ರಿಟಿಷ್ ಸರ್ಕಾರವನ್ನು ಹಿಂದೂಸ್ಥಾನದಿಂದ ಹೊರಡಿಸಬೇಕು. ಅದಕ್ಕಾಗಿ ಮಹಾತ್ಮರು ಅಸಹಕಾರ ಚಳವಳಿ ಹೂಡಿದ್ದಾರೆ. ನಾವೆಲ್ಲ ಅವರ ಆಜ್ಞೆ ಪಾಲಿಸಿ ಹೋರಾಡಬೇಕು. ಖಾದಿ ತೊಡಬೇಕು, ಗಾಂಧೀಟೋಪಿ ಹಾಕಿಕೊಳ್ಳಬೇಕು. ಬ್ರಿಟಿಷ್ ಸರ್ಕಾರ ಮಹಾತ್ಮರನ್ನು ಸೆರೆಗೆ ದೂಡಿದೆ. ನಾವು ಹೆದರಕೂಡದು ಜೈಲಿಗೆ ಹೋಗಲು ಅಂಜ ಕೂಡದು.... ಹೋರಾಟ ಹಾಗೇ ಸಾಗಬೇಕು..." (ಸ್ವಾತಂತ್ರ್ಯದೆಡೆಗೆ, ಪುಟ–೮, ೧೯೪೬).

ಹೀಗೆ ತರುಣನು ಗಾಂಧೀಜಿಯವರನ್ನು ಬಂಧಿಸಿದ್ದರಿಂದ ಮತ್ತು ಬ್ರಿಟಿಷ್ ಸರ್ಕಾರದ ದೌರ್ಜನ್ಯ ಆಡಳಿತ, ಜಮೀನ್ದಾರಿ ವರ್ಗದವರ ಸಾಮ್ರಾಜ್ಯಶಾಹಿ ಆಡಳಿತದ ವಿರುದ್ಧ ಸಾಮಾನ್ಯ ಜನತೆಗೆ ಅರಿವು ಮೂಡಿಸುತ್ತಿರುವುದು ಗಾಂಧಿಜಿಯವರ ತತ್ವಗಳನ್ನು ಪಾಲಿಸಬೇಕೆಂಬ ಉದ್ದೇಶವನ್ನು ಆ ತರುಣನ ಮಾತುಗಳಲ್ಲಿ ಗಮನಿಸಬಹುದು. ನರುಡು ಕಾದಂಬರಿಯಲ್ಲಿ ಯಲ್ಲಮಂದ ಅಮೇರಿಕಾದಲ್ಲಿ ತನ್ನ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ತನ್ನ ಸ್ವಗ್ರಾಮಕ್ಕೆ ತೆರಳಿದ ಸಂದರ್ಭದಲ್ಲಿ ತನ್ನ ಜಾತಿಯ ಜನರಲ್ಲಿ ಹಬ್ಬದ ವಾತಾವರಣ ಉಂಟಾಗಿರುತ್ತದೆ. ಆ ಸಂದರ್ಭದಲ್ಲಿ ಯಲ್ಲಮಂದಮೂರ್ತಿ ಭಾಷಣ ಮಾಡಿದ ರೀತಿ ಹೀಗಿದೆ.

ಕನ್ನಡ ಭಾಷಾಂತರ

ಹರಿಜನರಿಗೆ ಕಾಂಗ್ರೆಸ್ ಸರ್ಕಾರ ಒಬ್ಬರಿಗೆ ಹತ್ತು ಎಕರೆಗೆ ಕಡಿಮೆ ಇಲ್ಲದೆ ಭೂಮಿ ಕೊಡಬೇಕು. ಬೇರೆಯವರು ಹೇಗೆ ಇದ್ದರೂ ಹರಿಜನರ ಹೀನ ಕುಲದವರಿಗೆ ತಪ್ಪದೆ ಹತ್ತನೆ ತರಗತಿಯವರೆಗೆ ಶಿಕ್ಷಣ ಕೊಡಿಸಬೇಕು. ದೇವಾಲಯಗಳ ಒಳಗೆ ಪ್ರವೇಶ ಕೊಡಬೇಕು ಇತ್ಯಾದಿ ವಿಚಾರಗಳು ಈ ಮಾತುಗಳನ್ನು ಯಾರೂ ತಪ್ಪುವಂತಿಲ್ಲ. ಈ ಎಲ್ಲಾ ಸೌಲಭ್ಯಗಳು ನಮಗೆ ಬೇಕು. (ಮೂಲ; ಅನುಬಂಧ–೩ ಅಧ್ಯಾಯ–೭ ಕ್ರಸಂ. ೧೬) ಎಂದು ಮಹಾವೇಶಪೂರಿತನಾಗಿ ಯಲ್ಲಮಂದ ಮಾತನಾಡುತ್ತಾನೆ.

ಯಲ್ಲಮಂದನ ಈ ಮಾತುಗಳಲ್ಲಿ ತಲೆತಲಾಂತರಗಳಿಂದ ತುಳಿತಕ್ಕೆ ಬಲಿಯಾದ ದಲಿತ ಜನಾಂಗದ ಆವೇದನ, ಆಕ್ರೋಶ, ಹಸಿವಿನ ಕೂಗು ಕಂಡುಬರುತ್ತದೆ. ಪ್ರಸ್ತುತ ಸಮಾಜದಲ್ಲಿಯೂ

ಸಹ ಕೆಲವು ಹಳ್ಳಿ ಪ್ರದೇಶಗಳಲ್ಲಿ ದಲಿತರ ಶೋಷಣೆ ದೌರ್ಜನ್ಯಗಳು ನಡೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಹೀಗೆ ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ತರುಣನ ಮಾತುಗಳಲ್ಲಿ ಬ್ರಿಟೀಷರ ದಾಸ್ಯತ್ವದಿಂದ ಬಿಡುಗಡೆ ಹೊಂದಬೇಕು, ರಾಜಕೀಯ ಸ್ವಾತಂತ್ರ್ಯವನ್ನು ನಮ್ಮ ದೇಶದ ಜನತೆ ಪಡೆದುಕೊಳ್ಳಬೇಕು ಎಂಬ ಆಶಯವನ್ನು ಕಾಣಬಹುದಾದರೆ, ನರುಡು ಕಾದಂಬರಿಯಲ್ಲಿ ದಲಿತ ಜನಾಂಗಕ್ಕೆ ಸಾಮಾಜಿಕ ಸ್ವಾತಂತ್ರ್ಯ ಬೇಕೇ ಬೇಕು ಎಂಬ ಇಂಗಿತವನ್ನು ಯಲ್ಲಮಂದನ ಮಾತುಗಳಲ್ಲಿ ಕಾಣಬಹುದಾಗಿದೆ. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಶೇಖರನು ಪೂರ್ವಕಾಲದಿಂದಲೂ ಭಾರತದ ಬೆನ್ನೆಲುಬಾದ ರೈತನು ತುಳಿತಕ್ಕೊಳಗಾದ ಸ್ಥಿತಿಯನ್ನು ಅವರನ್ನು ಉಚ್ಚರಿಸುವ ಮಾತುಗಳು ಹೀಗಿವೆ.

> ಕರಿಯರದೊ, ಬಿಳಿಯರದೊ ಯಾರದಾದರೆ ಏನು
> ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ
> ವಿಜಯನಗರವೊ, ಮೊಗಲರಾಳ್ವಿಕೆಯೊ, ಇಂಗ್ಲೀಷರೊ
> ಎಲ್ಲರೂ ಜಿಗಣೆಗಳ ನನ್ನ ನೆತ್ತರಿಗೆ
> ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು
> ನವಯುಗವಾಣಿ ಘೋಷಿಸಿದ ಕೇಳಿ ಯುಗಯುಗದ ದಾರಿದ್ರ್ಯಭಾರದಿಂ ಬೆನ್‌ಬಾಗಿ
> ಗೋಳಿಡುವ ಬಡಜನರೆ ಏಳಿರೈ ಏಳಿ!
> ಶ್ರೀಮಂತರಡಿಗಳಡಿ ಹುಡಿಯಲ್ಲಿ ಹೊರಳಾಡಿ
> ಕುಸಿದು ಕುಗ್ಗಿದವರೆಲ್ಲ ಸಂತಸವ ತಾಳಿ!
> (ಸ್ವಾತಂತ್ರ್ಯದೆಡೆಗೆ, ಪುಟ-೧೭೭, ೧೯೪೬)

ಭಾರತ ದೇಶವನ್ನು ಅನೇಕ ರಾಜಮನೆತನಗಳು, ಇಂಗ್ಲೀಷರು ಆಳ್ವಿಕೆ ನಡೆಸಿದ್ದಾರೆ. ಅವರ ಆಳ್ವಿಕೆಯಲ್ಲಿ ಬಲಿಪಶುಗಳು, ತುಳಿತಕ್ಕೊಳಗಾದವರು ಹೆಚ್ಚಿನದಾಗಿ ರೈತರು. ಶ್ರೀಮಂತರು, ಜನೀನ್ದಾರರು ಮತ್ತು ಪರದೇಶದವರು ರೈತರನ್ನು ಹಿಂಡಿ ಹಿಪ್ಪೆಯಾಗಿಸಿದ್ದಾರೆ. ಆದ್ದರಿಂದ ಎದೆಗಳನ್ನು ಸೀಳಿ ವಿಪ್ಲವದ ಕಹಳೆಯನ್ನು ಊದಬೇಕು ಸರ್ವರಿಗೂ ಸಮಪಾಲು, ಸಮಬಾಳು ಆಗಬೇಕು ಎಂದು ಸಮಾನತೆ, ಸಾತಂತ್ರ್ಯಕ್ಕಾಗಿ ಹೋರಾಡಬೇಕು ಎಂಬ ನಿಲುವನ್ನು, ಇಲ್ಲಿ ಕಾಣಬಹುದಾಗಿದೆ. ನರುಡು ಕಾದಂಬರಿಯಲ್ಲಿ ಯಲ್ಲಮಂದ ಉನ್ನತ ವ್ಯಾಸಂಗ ಮಾಡಿದ್ದಾನೆ. ಉದ್ಯೋಗಕ್ಕಾಗಿ ಪಂಜಾಬ್, ಸಿಂಧೂ, ಬೊಂಬಾಯಿ, ಮದ್ರಾಸ್ ಪ್ರಾಂತ್ಯಗಳಲ್ಲಿ ಸುತ್ತುತ್ತಾನೆ. ಆದರೆ ಹರಿಜನ ಎಂಬ ಕಾರಣಕ್ಕಾಗಿ ಉದ್ಯೋಗವನ್ನು ನೀಡದೆ ತಿರಸ್ಕರಿಸುತ್ತಾರೆ, ಅದರಿಂದಾಗಿ ಬೇಸತ್ತ ಯಲ್ಲಮಂದ,

ಕನ್ನಡ ಭಾಷಾಂತರ

ನಮ್ಮ ಜನಾಂಗಕ್ಕೆ/ಸಮಾಜಕ್ಕೆ ವಿಮುಕ್ತಿ ಎಂದು ಕಾಂಗ್ರೆಸ್ಸಿನವರು ತಮ್ಮ ಹಿಂದಿನ ಸಂಪ್ರದಾಯವನ್ನು ಬಿಡುವಂತಿಲ್ಲ. ಆದರೆ ಏನೇ ಮಾಡಿದರೂ ಅವರೇ ಮಾಡಬೇಕು! ಅದೊಂದೇ

ಮಾರ್ಗ. ಹರಿಜನ ಸ್ತ್ರೀಯರು ಉತ್ತಮ ಶಿಕ್ಷಣ ಪಡೆದುಕೊಂಡು ಮೇಲ್ವರ್ಗದ ಪುರುಷರನ್ನು ಮದುವೆ ಮಾಡಿಕೊಳ್ಳಬೇಕು. ಶಿಕ್ಷಣ, ಸೌಂದರ್ಯ, ನಾಗರೀಕತೆ, ಸ್ವಚ್ಛತೆ ಇವು ಮನುಷ್ಯನನ್ನು (ಮೇಲಕ್ಕೆ ಕೊಂಡೊಯ್ಯುತ್ತವೆ) ಉತ್ತಮ ಸ್ಥಿತಿಗೆ ಕೊಂಡೊಯ್ಯುತ್ತವೆ. (ಮೂಲ; ಅನುಬಂಧ-೩ ಅಧ್ಯಾಯ-೭ ಕ್ರಸಂ. ೧೭) ಎನ್ನುವಲ್ಲಿ ದಲಿತರಿಗೆ ಉದ್ಯೋಗದಲ್ಲಿ ಮಾಡುತ್ತಿರುವಂತಹ, ಜಾತಿಭೇದ, ತಾರತಮ್ಯವನ್ನು, ಕಾಂಗ್ರೇಸ್‌ನ ಅವಿಧೇಯತಾ ನಡತೆ, ಭ್ರಷ್ಟತೆಯನ್ನು ಕಾಣಬಹುದು. ಹರಿಜನರು ಮೇಲ್ವರ್ಗದವರೊಂದಿಗೆ ಸಮಾನವಾಗಿ ಬದುಕಬೇಕೆಂಬ ವಿದ್ಯೆ ಬುದ್ಧಿಯನ್ನು ಸಮರ್ಥವಾಗಿ ಕಲಿತು ಮೇಲ್ವರ್ಗದವರೊಂದಿಗೆ ಮದುವೆ ಮಾಡಿಕೊಳ್ಳುವಂತಹ ಮನೋಭಾವ ಅಂತರ್ಜಾತಿ ವಿವಾಹದ ಪ್ರೋತ್ಸಾಹವನ್ನು ಇಲ್ಲಿ ಗಮನಿಸಬಹುದು. ಹೀಗೆ ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ತುಳಿತಕ್ಕೊಳಗಾದ ರೈತನನ್ನು ಸಮಾನವಾಗಿಸುವ ದೃಷ್ಟಕೋನವನ್ನು ನೋಡಬಹುದು.

ನರುಡು ಕಾದಂಬರಿಯಲ್ಲಿ ಜಾತಿ ಭೇದ ಮರೆತು ಜಾತಿ-ಜಾತಿಗಳ ನಡುವಿನ ಅಸಾಮರಸ್ಯವನ್ನು ತೊಡೆದು ಸಮಾನತೆಯನ್ನು ತರಬೇಕೆಂಬ ಮನೊಭಾವವನ್ನು ನಾವಿಲ್ಲಿ ಗುರುತಿಸಬಹುದಾಗಿದೆ. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಶೇಖರ ಕಲ್ಲಾಪುರದಲ್ಲಿರುವುದನ್ನು ಪತ್ತೆ ಮಾಡಿದ ಶಂಕರಪ್ಪ ಆತನನ್ನು ಊರಿಗೆ ಮರಳಿ ಕರೆದೊಯ್ಯುತ್ತಾನೆ. ಈ ಸಂದರ್ಭದಲ್ಲಿ ಆತ ಅನಿವಾರ್ಯವಾಗಿ ಬೆಳಗಾವಿಯ ದಲಿತ ಕೇರಿಯಲ್ಲಿ ವಾಸಮಾಡಬೇಕಾಗುತ್ತದೆ. ದಲಿತಕೇರಿಯ ಮುರುಕು ಗುಡಿಸಲು, ಅನ್ನದಕೂಗು, ಅನಾರೋಗ್ಯ, ಜರ್ಜರಿತ ಜೀವನ ಅಲ್ಲಿ ನಡೆಯುತ್ತಿದ್ದ ಶ್ರೀಮಂತ ಕಾಮುಕರ ಶೋಷಣೆ ಈ ಎಲ್ಲ ವಿಕೃತ ಮತ್ತು ದಾರುಣ ಸ್ಥಿತಿ ಸ್ವಾತಂತ್ರ್ಯಪೂರ್ವದ ಪರಿಸ್ಥಿತಿ ಮತ್ತು ಸ್ವತಃ ಕೂಲಿ ಮಾಡಬೇಕಾಗಿ ಬಂದಾಗ ಆತ ಶ್ರೀಮಂತರ ಶೋಷಣೆಯ ಸ್ವರೂಪವನ್ನು ಅರಿತುಕೊಳ್ಳುತ್ತಾನೆ. ಹೀಗೆ ವರ್ಗವೈರುದ್ಯದ ನೈಜ ಚಿತ್ರಣವನ್ನು ಕಾಣಬಹುದಾಗಿದೆ.

ನರುಡು ಕಾದಂಬರಿಯಲ್ಲಿ ಯಲ್ಲಮಂದ ಗೆಳತಿ ಲಿಯೋನರಾಳಿಗೆ ದಲಿತರ ಸ್ಥಿತಿ-ಗತಿಯನ್ನು ಈ ಕೆಳಕಂಡಂತೆ ಪರಿಚಯಿಸುತ್ತಾನೆ.

ಕನ್ನಡ ಭಾಷಾಂತರ

ನಮ್ಮ ಜಾತಿಗೆ/ಸಮಾಜಕ್ಕೆ ಸರಿಯಾಗಿ ಮನೆಕಟ್ಟಿಕೊಳ್ಳುವುದು ಗೊತ್ತಿಲ್ಲ. ಆರೋಗ್ಯಕರ ಊಟ ಇಲ್ಲ, ಜಗತ್ತು ಅಂದರೆ ಏನೂ ತಿಳಿದಿಲ್ಲ. ನಮ್ಮ ಬೆವರಿನ ದುರ್ಗಂಧದ ವಾಸನೆ, ನಮ್ಮ ಮೈಬಣ್ಣ ಕಪ್ಪು, ನಮ್ಮ ತಲೆಗಳು ಎಣ್ಣೆ ಮುಖ ನೋಡಿಲ್ಲ. ನಮ್ಮ ದೇಹಗಳು ಸೋಪನ್ನು ಕಂಡಿಲ್ಲ. ನಮ್ಮ ಬಟ್ಟೆ ಬಿಳುಪು, ಅಂದ-ಚೆಂದವನ್ನು ಪ್ರಕಾಶವನ್ನು ಹೊಂದಿಲ್ಲ. (ಮೂಲ; ಅನುಬಂಧ-೩ ಅಧ್ಯಾಯ-೭ ಕ್ರಸಂ. ೧೮) ಎನ್ನುವಲ್ಲಿ ದಲಿತರು ಎಂದರೆ ಅಜ್ಞಾನ ಭೂತಿಗಳು, ಜಗತ್ತನ್ನು ಕಾಣದವರು, ಕಾಡುಮೇಡುಗಳಲ್ಲಿ ವಾಸಿಸುವ ಆದಿವಾಸಿಗಳಂತೆ, ಮಾನವ ಪ್ರಪಂಚವನ್ನು ಅರಿಯದವರನ್ನು, ಮೂಲ ಸೌಕರ್ಯಗಳ ಪರಿಜ್ಞಾನ ಇಲ್ಲದವರನ್ನು ಮಾನವ ಜಗತ್ತಿಗೆ ಪರಿಚಯಿಸುವುದನ್ನು ಕಾಣಬಹುದಾಗಿದೆ.

ಹೀಗೆ ಸ್ವಾತಂತ್ರ್ಯದೆಡೆಗೆ–ನರುಡು ಕಾದಂಬರಿಗಳಲ್ಲಿನ ದಲಿತರ ಜೀವನ ಚಿತ್ರಣಗಳಲ್ಲಿ ವ್ಯತ್ಯಾಸಗಳಿರುವುದನ್ನು ಕಾಣಬಹುದಾಗಿದೆ. ಹೀಗೆ ಸ್ವಾತಂತ್ರ್ಯದೆಡೆಗೆ ಕಾದಂಬರಿ ಉತ್ತರ ಕರ್ನಾಟಕ ಭಾಗದಲ್ಲಿ ನಡೆದ ಹೋರಾಟದ ಛಾಯೆಯನ್ನು ತಿಳಿಸುತ್ತಾ, ಈ ಕಾದಂಬರಿಯಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿರುವುದು ಕಂಡುಬರುತ್ತದೆ. ನರುಡು ಕಾದಂಬರಿಯಲ್ಲಿ ಸಮಾಜದಲ್ಲಿ ಕಟ್ಟಕಡೆಯ ವರ್ಗವಾದ ದಲಿತರು ತಲತಲಾಂತರಿಂದಲೂ ಸಮಾಜದ ಉನ್ನತ ವರ್ಗಗಳಿಂದ ತುಳಿತಕ್ಕೆ ಒಳಗಾಗಿದ್ದು ಅವರ ಸಾಮಾಜಿಕ ಸ್ವಾತಂತ್ರ್ಯಕ್ಕೆ ಪ್ರಯತ್ನ ನಡೆದಿರುವುದು ಕಂಡುಬರುತ್ತದೆ. ಒಂದು ದೇಶ ಸುಸ್ಥಿತಿ, ಸುಭದ್ರವಾಗಿ ಇರಬೇಕಾದರೆ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳು ಬಹಳ ಮುಖ್ಯವಾಗಿರುತ್ತವೆ. ಆ ಸಂದರ್ಭದಲ್ಲಿ ಕನ್ನಡ–ತೆಲುಗು ಲೇಖಕರು ರಾಜಕೀಯ–ಸಾಮಾಜಿಕ ಸ್ವಾತಂತ್ರ್ಯಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿರುವುದನ್ನು ಇಲ್ಲಿ ತಿಳಿಯಬಹುದಾಗಿದೆ.

❖❖❖

ಅಧ್ಯಾಯ : ಎಂಟು

ಮೆರವಣಿಗೆ–ಮಾಲಪಲ್ಲಿ: ಜೈಲುವಾಸದಲ್ಲಿ ಅರಳಿದ ಎರಡು ಕಾದಂಬರಿಗಳು

ಅಧ್ಯಾಯ: ಎಂಟು

ಮೆರವಣಿಗೆ–ಮಾಲಪಲ್ಲಿ: ಜೈಲುವಾಸದಲ್ಲಿ ಅರಳಿದ ಎರಡು ಕಾದಂಬರಿಗಳು

ಈ ಕೃತಿಗಳ ಲೇಖಕರು ಅಪ್ಪಟ ಗಾಂಧಿ ಅನುಯಾಯಿಗಳಾಗಿದ್ದು, ದೇಶದ ಒಳಿತಿಗಾಗಿ ಸೆರೆಮನೆಯನ್ನು ಸೇರಿ, ಸೆರೆಮನೆವಾಸ ಅನುಭವಿಸಿ ತಮ್ಮ ಮನೋವ್ಯಥೆಯನ್ನು ಅಲ್ಲಿನ ರಾಷ್ಟ್ರಪ್ರೇಮವನ್ನು ತಮ್ಮ ಅಭಿಪ್ರಾಯಗಳ ಮೂಲಕ ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ. ಉನ್ನವ ಲಕ್ಷ್ಮೀನಾರಾಯಣ ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕನ್ನಡ–ತೆಲುಗು ಭಾಷೆಗಳಲ್ಲಿ ತುಂಬಾ ಪ್ರಸಿದ್ದಿ ಪಡೆದ ಲೇಖಕರು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಆಧುನಿಕ ಕನ್ನಡ ಸಾಹಿತ್ಯದ ಹಿರಿಯ ತಲೆಮಾರಿನ ಲೇಖಕರಲ್ಲೊಬ್ಬರು. ಪ್ರಥಮ ಶ್ರೇಣಿಯವರು ಸಹ ಆಗಿದ್ದಾರೆ. ಅವರು ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಗಾಂಧೀಜಿಯವರ ಅಸಹಕಾರ ಚಳವಳಿಯಿಂದ ಆಕರ್ಷಿತರಾಗಿ ಶಿಕ್ಷಣಕ್ಕೆ ವಿದಾಯ ಹೇಳಿದವರು. ಅನಂತರ ಅವರು ಲೋಕಮಿತ್ರ, ಆಂಧ್ರಪತ್ರಿಕೆ, ಭಾರತಿ ಪತ್ರಿಕೆಗಳಲ್ಲಿ ಕೆಲಸ ಮಾಡಿ, ಕೆಂಗೇರಿಯ ಗುರುಕುಲಾಶ್ರಮವನ್ನು ಸೇರಿದರು. ಹರಿಜನೋದ್ದಾರ ಅದರ ಮುಖ್ಯ ಕಾರ್ಯವಾಗಿತ್ತು. ಅದನ್ನು ಗೊರೂರರು ಶ್ರದ್ಧೆಯಿಂದ ನಿರ್ವಹಿಸಿದರು. ನಂತರ ಗೊರೂರರು ತಮ್ಮ ಗ್ರಾಮಕ್ಕೆ ತೆರಳಿ, ಮೈಸೂರು ಗ್ರಾಮ ಸೇವಾ ಸಂಘವನ್ನು ಸ್ಥಾಪಿಸಿ, ಖಾದಿ ಪ್ರಚಾರ, ಹರಿಜನೋದ್ಧಾರ, ವಯಸ್ಕರ ಶಿಕ್ಷಣ, ಗ್ರಾಮ ಕೈಗಾರಿಕೆಗಳು ಮುಂತಾದ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿದರು. ೧೯೪೨ರ ಚಲೇಜಾವ್ ಚಳವಳಿಯಲ್ಲಿ ಭಾಗವಹಿಸಿ ಜೈಲುವಾಸವನ್ನು ಅನುಭವಿಸಿದವರು. ಆ ಸಂದರ್ಭದಲ್ಲಿ ಸುಮಾರು ಹದಿನೈದು ತಿಂಗಳ ಅವಧಿಯಲ್ಲಿ ಮೆರವಣಿಗೆ ಕಾದಂಬರಿಯನ್ನು ರಚಿಸಿದ್ದರು ಎಂಬುದನ್ನು ತಿಳಿಯಬಹುದು.

ತೆಲುಗಿನ ಉನ್ನವ ಲಕ್ಷ್ಮೀನಾರಾಯಣ ಅವರು ಸಮಾಜ ಸುಧಾರಕರು, ಶುದ್ದ ಗಾಂಧೀವಾದಿ. ಭಾರತ ಸ್ವಾತಂತ್ರ್ಯ ವಳುವಳಿ ಮಾತ್ರವಲ್ಲದೆ ಆಂಧ್ರರಾಷ್ಟ್ರ, ವಿಶಾಲಾಂದ್ರ ರಾಷ್ಟ್ರ, ಮಹಿಳಾ ಜನೋದ್ಧಾರ ಇತ್ಯಾದಿ ಚಳವಳಿಗಳಲ್ಲಿ ಭಾಗವಹಿಸಿದ ಮಹಾನ್ ದೇಶಭಕ್ತರಾಗಿದ್ದವರು. ಉನ್ನವ ಲಕ್ಷ್ಮಿನಾರಾಯಣ ಅವರು ಐರ್ಲೆಂಡಿನಲ್ಲಿ ಬ್ಯಾರಿಸ್ಟರ್ ಓದುತ್ತಿದ್ದಾಗ ಅಲ್ಲಿನ ಪ್ರಜೆಗಳು ತಮ್ಮ ದೇಶ ಸ್ವಾತಂತ್ರ್ಯಕ್ಕಾಗಿ ಮಾಡುತ್ತಿದ್ದ ಹೋರಾಟದಲ್ಲಿ ಪಾಲ್ಗೊಂಡಿರುತ್ತಾರೆ. ಬ್ಯಾರಿಸ್ಟರ್ ಮುಗಿಸಿಕೊಂಡು

ಸ್ವದೇಶಕ್ಕೆ ಬಂದಾಗ ಭಾರತ ದೇಶದ ರಾಜಕೀಯದಲ್ಲಿ ಬಾಲಗಂಗಾಧರ ತಿಲಕರು ಪ್ರಮುಖ ಪಾತ್ರವಹಿಸಿರುತ್ತಾರೆ. ಅವರ ಹೋಂರೂಲ್ ಚಳವಳಿಯಲ್ಲಿ ಉನ್ನವ ಲಕ್ಷ್ಮೀನಾರಾಯಣ ಅವರು ಪಾಲ್ಗೊಳ್ಳುತ್ತಾರೆ.

ಆ ನಂತರ ಗಾಂಧೀಜಿಯವರ ಪ್ರವೇಶದಿಂದ ಭಾರತ ಸ್ವಾತಂತ್ರ್ಯ ಚಳವಳಿಗೆ ಒಂದು ವಿನೂತನ ಶಕ್ತಿ ವಿಜೃಂಭಿಸುತ್ತದೆ. ಆ ಸಂದರ್ಭದಲ್ಲಿ ಗಾಂಧೀಜಿ ಸತ್ಯಾಗ್ರಹ, ಅಸಹಕಾರ ಚಳವಳಿಗಳನ್ನು ಕೈಗೊಳ್ಳುತ್ತಾರೆ. ಈ ಚಳವಳಿ ಆಂಧ್ರಪ್ರದೇಶದಲ್ಲಿ ಗುಂಟೂರು ಜಿಲ್ಲೆಯಲ್ಲಿ ತೀವ್ರವಾಗುತ್ತದೆ. ಆ ಸಂದರ್ಭದ 'ಪಲ್ನಾಟಿ ಪುಲ್ಲರಿ ಸತ್ಯಾಗ್ರಹ' ಒಂದು ಉಜ್ವಲವಾದ ಚಳವಳಿಯಾಗಿದೆ. ಈ ಜನಪರ ಚಳವಳಿಗೆ ಉನ್ನವ ಲಕ್ಷ್ಮೀನಾರಾಯಣ ಅವರು ಮುಂದಾಳತ್ವ ವಹಿಸಿಕೊಂಡಾಗ ಬ್ರಿಟಿಷ್ ಸರ್ಕಾರ ಒಂದು ವರ್ಷಗಳ ಕಾಲ ಉನ್ನವ ಅವರಿಗೆ ಕಾರಾಗಾರ ಶಿಕ್ಷೆಯನ್ನು ವಿಧಿಸುತ್ತದೆ. ಆ ಸಂದರ್ಭದಲ್ಲಿ ಉನ್ನವ ಲಕ್ಷ್ಮೀನಾರಾಯಣ ಅವರು 'ಮಾಲಪಲ್ಲಿ' ಕಾದಂಬರಿಯನ್ನು ರಚಿಸುತ್ತಾರೆ.(ತೆಲುಗು ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಹೋರಾಟದ ಚಿತ್ರಣ, ಪುಟ-೧೬೧, ೨೦೧೨)

ಮೆರವಣಿಗೆ ಕಾದಂಬರಿಯು ಸ್ವಾತಂತ್ರ್ಯಪೂರ್ವ ಭಾರತದ ಪರಿಸ್ಥಿತಿಯನ್ನು ವಸ್ತುವನ್ನಾಗಿಸಿಕೊಂಡಿದೆ. ಅಂದರೆ ೧೯೪೭ಕ್ಕಿಂತ ಹಿಂದಿನ ಭಾರತೀಯರ, ಸಾರ್ವಜನಿಕ ವ್ಯವಹಾರಗಳು, ಸರ್ಕಾರ ಮತ್ತು ಕೃಷಿಕರ ಸಂಬಂಧ, ಪ್ರಾಥಮಿಕ ಶಾಲೆಯ ಶಿಕ್ಷಕರು ಮತ್ತು ಮೇಲಾಧಿಕಾರಿಗಳ ನಡುವಿನ ವ್ಯವಹಾರಿಕ ಸಂಬಂಧ, ವಿದ್ಯಾರ್ಥಿ ಮತ್ತು ಶಿಕ್ಷಕರ ಸಂಬಂಧ, ವಿದ್ಯಾರ್ಥಿ ಜೀವನದ ಸಮಸ್ಯೆಗಳು, ಶಿಕ್ಷಣಪದ್ಧತಿ ಮತ್ತು ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದ ವಿಚಾರಗಳು, ಪರಂಪರೆ ಮತ್ತು ಸಮಕಾಲೀನ ಜೀವನದ ಸಮಸ್ಯೆಗಳು, ಆಧುನಿಕ ಜೀವನ ವಿಧಾನ ಮತ್ತು ಆಧುನಿಕಪೂರ್ವದ ಧಾರ್ಮಿಕ ವಿಚಾರಗಳು ಮತ್ತು ಜಾತಿಪದ್ಧತಿ ಕುರಿತ ಚರ್ಚೆ ಇಲ್ಲಿ ಮುಖ್ಯವಾಗಿ ಕಂಡುಬರುತ್ತದೆ.

ಇದೆಲ್ಲಕ್ಕೂ ಮಿಗಿಲಾಗಿ ಬ್ರಿಟಿಷ್ ಆಡಳಿತದ ಸರ್ವಾಧಿಕಾರ, ಸೆರೆಮನೆಯ ಸಂಕುಚಿತ ವಾತಾವರಣ, ಲಾಠಿ ಚಾರ್ಜು, ಉಪವಾಸ, ಅಧಿಕಾರಶಾಹಿಯ ಅಟ್ಟಹಾಸ, ಕೈಕೊಳ-ನಿಲುಬೇಡಿ, ತಿಕಡಿ ಅಥವಾ ಛಡಿ ಏಟು, ಫಾಸೀ, ಸೆರೆಯಾಳುಗಳಿಗೆ ತಮ್ಮ ಕುಟುಂಬದ ಚಿಂತೆ ಇತ್ಯಾದಿ ದಿಗ್ಬಂಧನಗಳ ನಡುವೆ ಜೈಲು ಅಧಿಕಾರಿಗಳ ದೃಷ್ಟಿಗೆ ಬೀಳದಂತೆ ಗೊರೂರು ತಮ್ಮ ಕೃತಿಯನ್ನು ರಚಿಸಿ ಬಿಡುಗಡೆ ಮಾಡಿದ್ದಾರೆ.

ಮಾಲಪಲ್ಲಿ ಕಾದಂಬರಿಯಲ್ಲಿ ಪೀಡಿತವರ್ಗದವರಾದ ದಲಿತರ ಚರಿತ್ರೆ, ಸಮಾಜದಲ್ಲಿನ ಜನರ ನೋವು ಸಂಕಟ ಇದೆ. ದೇಶಕ್ಕೆ ರಾಜಕೀಯ ಸ್ವಾತಂತ್ರ್ಯಬೇಕು ಎಂಬ ಗಾಂಧೀಜಿಯವರ ಉದ್ದೇಶದ ಜೊತೆಗೆ, ಸಮಾಜದಲ್ಲಿ ಆರ್ಥಿಕವಾಗಿ ಸಮಾನತೆಯನ್ನು ಉಂಟುಮಾಡಿ ಮಾನವರೆಲ್ಲರೂ ಸಹೋದರರು ಎಂಬ ಮನೋಭಾವನೆಯನ್ನು ನಿತ್ಯಜೀವನದಲ್ಲಿ ಉಂಟು ಮಾಡುವುದು ಅವರ ಆದರ್ಶವಾಗಿತ್ತು. ಗಾಂಧೀಜಿಯವರ ಹೋರಾಟದಲ್ಲಿ ಹರಿಜನೋದ್ಧಾರ ಬಹಳ ಮಹತ್ವವಾದ ಕಾರ್ಯಕ್ರಮವಾಗಿದ್ದು, ಸಮಾಜದಲ್ಲಿ ಅಸ್ಪೃಶ್ಯನನ್ನು ತುಂಬಾ ಹೀನಾಯವಾಗಿ ನೋಡಲಾಗಿದೆ. ಆ

ಅಸಮಾನತೆಯನ್ನು ದೂರಮಾಡಬೇಕೆಂಬುದು ಗಾಂಧೀಜಿಯವರ ಉದ್ದೇಶವಾಗಿರುತ್ತದೆ. ಈ ಕಾದಂಬರಿಯಲ್ಲಿ (ಕಾರ್ಮಿಕ) ಕೂಲಿಗಳ ಹೋರಾಟವನ್ನು, ಸೌಮ್ಯವಾದ ಸಿದ್ಧಾಂತಗಳನ್ನು ಪ್ರಜೆಗಳಿಗೆ ತಿಳಿಸುವ ಕೆಲಸವನ್ನು ಕೆಲವು ಪಾತ್ರಗಳು ಮಾಡುತ್ತವೆ. ಸ್ವಾತಂತ್ರ್ಯ ಹೋರಾಟಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟು ಪ್ರಜೆಗಳಲ್ಲಿ, ಸ್ವಾತಂತ್ರ್ಯಭಾವ, ದೇಶಭಕ್ತಿಯನ್ನು ಉಂಟುಮಾಡುತ್ತದೆ.

ಗೊರೂರು ರಾಮಸ್ವಾಮಿ ಅಯ್ಯಂಗಾರರು ಗಾಂಧೀವಾದ ಹಾಗೂ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದವರು. ಸ್ವಾತಂತ್ರ್ಯ ಚಳವಳಿಯ ನೆಲೆಗಳನ್ನು ಮೆರವಣಿಗೆ ಕೃತಿಯಲ್ಲಿ ತಂದಿದ್ದು, ಎಲ್ಲ ವಿಚಾರಗಳು ಸುಧಾರಣಾವಾದದ ನೆಲೆಯಲ್ಲಿಯೇ ಬರುತ್ತವೆ. ಮೆರವಣಿಗೆಯಲ್ಲಿ ಕರ್ನಾಟಕದ ರಾಷ್ಟ್ರೀಯ ಆಂದೋಲನದ ಸಂಕ್ಷಿಪ್ತ ಇತಿಹಾಸವೇ ಒಂದು ಖಂಡದಲ್ಲಿ ಬಂದಂತಿದೆ. ೧೯೨೧ರಿಂದ ೧೯೪೨ರ ವರೆಗೆ ಅನೇಕಾನೇಕ ಚಳವಳಿಗಳ ವಿವರಗಳನ್ನು ಕ್ರೋಢೀಕರಿಸಿದೆ. ಈ ಕಾದಂಬರಿಯ ನಾಯಕ ಸುದರ್ಶನನು ಗಾಂಧೀ ತತ್ವಗಳಿಗೆ ಅನುಗುಣವಾಗಿ ಚಿತ್ರಿತವಾಗಿದ್ದಾನೆ.

ಈ ಕಾದಂಬರಿ ಎರಡು ಭಾಗಗಳಾಗಿ ವಿಭಜಿತಗೊಂಡಿದ್ದು, ಮಲ್ಲಿಗೆ ಹಳ್ಳಿಯ ಚಿತ್ರಣವನ್ನು ನೀಡುತ್ತಲೇ ದೇಶದಲ್ಲಾಗುವ ಬದಲಾವಣೆಯನ್ನು ತಿಳಿಸುತ್ತದೆ. ಇಲ್ಲಿ ಅನೇಕ ಪಾತ್ರಗಳು, ಘಟನೆಗಳು ಮೆರವಣಿಗೆ ಹೊರಟಂತೆ ತೋರುತ್ತವೆ. ಲೇಖಕರು ಗಾಂಧೀವಾದಿಯಾಗಿದ್ದು, ಸೆರೆಮನೆಯಲ್ಲಿನ ತಮ್ಮ ಅನುಭವವನ್ನು ಈ ಕಾದಂಬರಿಯಲ್ಲಿ ಹಿಡಿದಿಟ್ಟಿದ್ದಾರೆ.

ತೆಲುಗಿನ ಮಾಲಪಲ್ಲಿ ಕಾದಂಬರಿ ನಾಲ್ಕು ಭಾಗಗಳಾಗಿ ವಿಭಜನೆಗೊಂಡಿದೆ. ಪ್ರಧಾನವಾಗಿ ರಾಮದಾಸ, ಆತನ ಪತ್ನಿ ಮಾಲಕ್ಷ್ಮಿ, ಮಕ್ಕಳಾದ ಸಂಗದಾಸ, ವೆಂಕಟದಾಸ, ರಂಗ, ಜ್ಯೋತಿ ಮತ್ತು ಅಪ್ಪಾದಾಸ. ಮೇಲ್ವರ್ಗಕ್ಕೆ ಸೇರಿದ ಚೌದರಯ್ಯ, ಪತ್ನಿ ಲಕ್ಷ್ಮಮ್ಮ, ಮಕ್ಕಳಾದ ರಾಮಾನಾಯುಡು, ವೆಂಕಟಯ್ಯ, ರಾಮಾನಾಯುಡು ಪತ್ನಿ ಕಮಲ ಮಗ ಸಾಹುಕೃಷ್ಣ, ಮೋಹನರಾವ್ ಇವರೆಲ್ಲರದು ಒಂದು ಕುಟುಂಬ. ಈ ಎರಡು ಕುಟುಂಬಗಳ ಮಧ್ಯೆ ಅನೇಕಾನೇಕ ಪಾತ್ರಗಳು ಪ್ರವೇಶಿಸಿ ಸಂದರ್ಭೋಚಿತವಾಗಿ ತಮ್ಮ ಅಸ್ತಿತ್ವವನ್ನು ಪ್ರದರ್ಶಿಸುತ್ತಿವೆ. ಈ ಕಾದಂಬರಿಯು ಸೆಟ್ಲಮೆಂಟ್, ಜೈಲು, ಕೋರ್ಟ್, ಶಾಲೆಗಳು, ಪೊಲೀಸ್, ಖಾದಿ, ಚರಕ, ಅಸಹಕಾರ ಚಳವಳಿಯ ತುಣುಕು ನೋಟ, ಕೋಮುಗಲಭೆಗಳು, ಮತಾಂತರತೆ ಮೊದಲಾದ ವಿಷಯಗಳನ್ನು ಒಳಗೊಂಡಿದೆ. ಎರಡು ಕಾದಂಬರಿಗಳಲ್ಲಿಯೂ ಅನೇಕ ಸ್ವಾತಂತ್ರ್ಯ ಚಳವಳಿಯ ವಿಷಯಗಳು ಮಹಾಭಾರತವನ್ನು ನೆನಪಿಸುವಂತೆ ಕಂಡುಬರುತ್ತದೆ. ಮೆರವಣಿಗೆ ಕಾದಂಬರಿಯಲ್ಲಿ ಸುದರ್ಶನನು ಕಾದಂಬರಿಯ ನಾಯಕನಾಗಿದ್ದು, ಕುಟುಂಬದ ತೊಳಲಾಟದ ಮಧ್ಯೆ ಸ್ವರಾಜ್ಯಕ್ಕಾಗಿ ಹೋರಾಟ ನಡೆಸುತ್ತಾನೆ. ಸುದರ್ಶನನಿಗೆ ಕುಟುಂಬದ ಬೆಂಬಲ ಸಿಗುವುದಿಲ್ಲ. ಮಾಲಪಲ್ಲಿ ಕಾದಂಬರಿಯಲ್ಲಿ ಸ್ವರಾಜ್ಯ ಕಹಳೆಯನ್ನು ಮೊದಲು ರಾಮದಾಸನ ಮಗ ಸಂಗದಾಸನು ಊದುತ್ತಾನೆ. ಆದರೆ ಚೌದರಯ್ಯನ ಸಿಟ್ಟು, ಕೋಪದಿಂದ ಹತನಾಗುತ್ತಾನೆ. ನಂತರ ರಾಮದಾಸನ ಕುಟುಂಬದ ಪ್ರತಿಯೊಬ್ಬರು ದೇಶಕ್ಕಾಗಿ ತಮ್ಮ ಪ್ರಾಣವನ್ನು ಅರ್ಪಿಸುತ್ತಾರೆ. ದೇಶದ ಚಳುವಳಿಯಲ್ಲಿ ಕುಟುಂಬಗಳ ಪಾಲ್ಗೊಳ್ಳುವಿಕೆ ಹೇಗಿತ್ತು ಎಂಬುದನ್ನು ಇಲ್ಲಿ ಕಾಣಬಹುದು.

ಮೆರವಣಿಗೆ ಕಾದಂಬರಿಯಲ್ಲಿ ಕೂಲಿಕಾರರ ಸಾಧಕ–ಬಾಧಕಗಳ ಚರ್ಚೆ ಇದೆ. ಈ ನಮ್ಮ ಭಾರತ ದೇಶದಲ್ಲಿ ಕೂಲಿಕಾರರ ಚಳವಳಿಗೆ ಮೂಲ ಪುರುಷರು ಕೆ.ಟಿ. ಭಾಷ್ಯಂರು. ಇಲ್ಲಿಯ ಕೂಲಿಕಾರರ ಇತಿಹಾಸ, ಕೂಲಿಗಳೊಂದಿಗೆ ಇವರಿಗೆ ಇರುವ ಸಂಬಂಧವೇ ಎಂದು ಧಾರಾಳವಾಗಿ ಹೇಳಬಹುದು. ಮೈಸೂರು ಜಿಲ್ಲೆಯ ಮಿಲ್ ಮಾಲೀಕರು ಇದ್ದಕ್ಕಿದ್ದಂತೆ ಬಟ್ಟೆಯ ಧಾರಣೆ ಕಡಿಮೆಯಾಗಿರುವುದರಿಂದ ನಿಮ್ಮ ಕೂಲಿಗಳನ್ನು ಕಡಿಮೆ ಮಾಡುತ್ತೇವೆ ಎಂದು ಕೂಲಿ ಕಡಿಮೆ ಮಾಡುತ್ತಾರೆ, ಆಗ ಕೂಲಿಗಳು ಪ್ರತಿಭಟಿಸಿದಾಗ ಮಿಲ್ ಅಧಿಕಾರಿಗಳು ಪೊಲೀಸ್ ಅಧಿಕಾರಿಗಳನ್ನು ಕರೆಸಿದಾಗ ಅವರು ಎಚ್ಚರಿಕೆಯನ್ನು ಕೊಡದೆ ಸಾಯಿಸುತ್ತಾರೆ. ಕೂಲಿಕಾರರು ತಮ್ಮ ಅವಶ್ಯಕತೆಗಳನ್ನು ಹೀಗೆ ಹೇಳುತ್ತಾರೆ. ಕೂಲಿಯು ಹೆಚ್ಚಬೇಕು, ರಜಾ ದಿನಗಳಿಗೆ ಸಂಬಂಧಿಸಿದ್ದು, ಕೂಲಿಗಳನ್ನು ಅನವಶ್ಯಕವಾಗಿ ಇತರ ಕಾರಣಗಳಿಗಾಗಿ ಶಿಕ್ಷಿಸುವುದು. (ಮೆರವಣಿಗೆ, ಪುಟ–೪೮೪, ೧೯೪೭)

ದೇಶದಲ್ಲಿ ಶೇ ೮೦%ಷ ಭಾಗದಷ್ಟು ಜನರು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಒಂದೆಡೆಯಾದರೆ, ಹಸಿವು ಎಂಬ ಮಾರಿಯನ್ನು ನೀಗಿಸಲು ಕೂಲಿಗಳು ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲಕ್ಕಾಗಿ ಬಂಡವಾಳಗಾರರ ವಿರುದ್ಧ ಚಳವಳಿ ನಡೆಸುತ್ತಿರುವುದು ಇನ್ನೊಂದು ಕಡೆ ಸಾಗುತ್ತದೆ. ಹೋರಾಟದ ಮುಂಚೂಣಿಯಲ್ಲಿದ್ದ ಧೀಮಂತ ನಾಯಕರು ಕೂಲಿಕಾರರ ಚಳವಳಿ ಕಡೆ ಗಮನಹರಿಸದೆ ಕೇವಲ ದೇಶದ ಸ್ವಾತಂತ್ರ್ಯದ ಕಡೆಗೆ ತೊಡಗಿರುವುದನ್ನು ಗಮನಿಸಬಹುದು. ಮಾಲಪಲ್ಲಿ ಕಾದಂಬರಿಯಲ್ಲಿ ಚೌದರಯ್ಯ ಕೂಲಿಕಾರರಿಗೆ ಧಾನ್ಯಕ್ಕೆ ಬದಲು ಹಣವನ್ನು ಕೊಡುತ್ತೇನೆ ಎನ್ನುತ್ತಾನೆ. ಕೂಲಿಗಳು ಧಾನ್ಯವೇ ಬೇಕು ಎಂದು ಮುಷ್ಕರ ಹೂಡಬೇಕೆಂದು ಸಂಗದಾಸ, ಮುತ್ತಣ್ಣ, ವೀರದಾಸ, ಪುನ್ನಣ್ಣರ ನಡುವಿನ ಸಂಭಾಷಣೆ ಹೀಗಿದೆ.

ಕನ್ನಡ ಭಾಷಾಂತರ

ಮುತ್ತಡು – ಜಮೀನ್ದಾರ ಫಸಲು (ಕೊಯ್ಲು) ಕಟಾವು ಮಾಡಿದಕ್ಕೆ ಕಾಳು ಕೊಡುವುದಿಲ್ಲವಂತೆ. ಹಣ ಕೊಡುತ್ತಾನಂತೆ.

ಸಂಗದಾಸ– ಎಷ್ಟು ಕೊಡುತ್ತೇನೆ ಎಂದಿದ್ದಾನೆ.

ಮುತ್ತಡು – ದಿನಕ್ಕೆ ನಾಲ್ಕಾಣೆ. ಅದು ಮಾಮೂಲು ಕೂಲಿಯಂತೆ.

ಸಂಗದಾಸ – ರೂಪಾಯಿಗೆ ಹನ್ನೆರಡು ಸೇರು ಜೋಳ ಕೊಡುತ್ತಿರುವಾಗ ಕೂಲಿ ನಾಲ್ಕಾಣಿ. ಆ ಪ್ರಕಾರ ಆದರೆ ಈಗಿನ ದರ ಪ್ರಕಾರ ಕೂಲಿ ರೂಪಾಯಿಗೆ........

ಜೀತ ಕೂಲಿಯವರ ಕರ್ತವ್ಯ, ಭೂಮಿ ರೈತನ ಸ್ವತ್ತು. ಅದರ ಬೆಲೆ ಅದಕ್ಕಿರಬೇಕು. ತನ್ನ ಪದಾರ್ಥಗಳಿಗೆ ತಾನು ಹೆಚ್ಚಿನ ಬೆಲೆ ತಂದುಕೊಳ್ಳುತ್ತಿರುವಾಗ ಅದಕ್ಕಾಗಿ ಬೆವರು ಸುರಿಸಿರುವ ಕೂಲಿಯವನಿಗೆ ಬೆಲೆ ಬೇಡವೇ?

ರಂಗದಾಸ–ನಾಲ್ಕಾಣೆಯಿಂದ ಅವರಿಗೆ ನಷ್ಟ ಯಾಕೆ? ಕೆಲಸಕ್ಕೆ ಹೋಗುವುದು ಬಿಟ್ಟು ಅವರಿಗೆ ನಷ್ಟ ಮಾಡುವುದು ಬೇಡ. ಅವರೇ ಚೆನ್ನಾಗಿರಲಿ. ಸಾಯೋರು ಹೇಗಿದ್ದರೂ ಸಾಯ್ತೀವಿ. ಸುಮ್ನೆ ಕೆಲಸ ಮಾಡಿ ಬನ್ನಿ. (ಮೂಲ; ಅನುಬಂಧ–೩ ಅಧ್ಯಾಯ–೮ ಕ್ರಸಂ. ೧)

ಹೀಗೆ ಶ್ರೀಮಂತ ವರ್ಗದವರು ಕೂಲಿ ಮಾಡಿ ಅರೆ ಅನ್ನದ ಜೀವನ ಸಾಗಿಸುತ್ತಿರುವುದನ್ನು ಕಂಡು ಇನ್ನೂ ಆರ್ಥಿಕವಾಗಿ ಶೋಷಿಸುತ್ತಿರುವುದು ಇಲ್ಲಿ ಸಂಗದಾಸನ ನೇತೃತ್ವದಲ್ಲಿ ಕೂಲಿಕಾರರು, ಸಾಮಾಜಿಕ, ರಾಜಕೀಯ ಹಕ್ಕಿಗಾಗಿ ಹೋರಾಟ ಮಾಡದೆ ತಮ್ಮ ಶ್ರಮಕ್ಕೆ, ದುಡಿಮೆಗೆ ತಕ್ಕ ಪ್ರತಿಫಲ ಬೇಕೆಂದು ಅನ್ನದ ಹಕ್ಕಿಗಾಗಿ ಪ್ರತಿಭಟನೆ ಮಾಡಲು ಸಿದ್ಧಗೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಚೌದರಯ್ಯನಂತಹ ಧನಿಕರು ಧಾನ್ಯಕ್ಕೆ ಬದಲಾಗಿ ದಿನಕ್ಕೆ ಪಾವಲಾ ಕೊಡುತ್ತೇನೆ ಎಂದು ಹೇಳಿದಾಗ ಕೆಲವು ಮಂದಿ ಕೆಲಸಕ್ಕೆ ಹೋಗಬಾರದೆಂದು ಹೇಳಿದಾಗ ರಂಗದಾಸ ಅವರಿಗೆ ನಷ್ಟ ಮಾಡುವುದು ಬೇಡ, ನಾವು ಸತ್ತರೂ ಚಿಂತೆಯಿಲ್ಲ ಎಂದು ಹೇಳುತ್ತಾನೆ. ಆತನ ನಿಸ್ವಾರ್ಥ ಮನೋಭಾವ, ತ್ಯಾಗ, ತಾಳ್ಮೆ, ಸಂಯಮವನ್ನು ಕಾಣಬಹುದಾಗಿದೆ. ಹೀಗೆ ಕನ್ನಡದ ಮೆರವಣಿಗೆ ಕಾದಂಬರಿಯಲ್ಲಿ ಕೂಲಿಯಾಳುಗಳ ಅವಶ್ಯಕತೆ, ಅಂದಿನ ಪರಿಸ್ಥಿತಿಯನ್ನು ಕನ್ನಡದ ಲೇಖಕರು ಚಿತ್ರಿಸಿರುವುದು ಕಂಡುಬಂದರೆ, ತೆಲುಗಿನ ಮಾಲಪಲ್ಲಿ ಕಾದಂಬರಿಯಲ್ಲಿ ಪ್ರತ್ಯಕ್ಷವಾಗಿ ಕೂಲಿಯಾಳುಗಳು ತಮ್ಮ ಶ್ರಮದ ಬೆವರಿನ ಬದಲು ಪ್ರತಿಫಲಕ್ಕಾಗಿ ಪ್ರತಿಭಟಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಎರಡು ಕಾದಂಬರಿಗಳಲ್ಲಿಯೂ ಮೇಲ್ವರ್ಗದ ಧನಿಕ ಜನತೆ ಕೂಲಿಯಾಳುಗಳನ್ನು ಆರ್ಥಿಕವಾಗಿ ಶೋಷಣೆಗೀಡು ಮಾಡಿರುವುದನ್ನು ಚಿತ್ರಿಸಲಾಗಿದೆ.

ಮೆರವಣಿಗೆ ಕಾದಂಬರಿಯಲ್ಲಿ ಗಾಂಧೀಜಿಯವರು "ಬ್ರಿಟಿಷ್ ಸರ್ಕಾರಕ್ಕೆ ಹಿಂದೂಸ್ತಾನವನ್ನು ಆಳಲು ಯೋಗ್ಯತೆ ಇಲ್ಲವೆಂದು" ಖಡಾಖಂಡಿತವಾಗಿ ಹೇಳಿದರು. ಆಗ ಸರ್ಕಾರ ಗಾಂಧೀಜಿಯವರನ್ನು ಬಂಧಿಸಿ ಸೆರೆಮನೆಯಲ್ಲಿಡುತ್ತದೆ. (ಮೆರವಣಿಗೆ, ಪುಟ–೬೦೨, ೧೯೪೭) ಗಾಂಧೀಜಿ ಆ ಸಂದರ್ಭದಲ್ಲಿ ಜನರ ಅಚ್ಚುಮೆಚ್ಚಿನ ನಾಯಕ, ಪ್ರಭು, ತಮ್ಮ ಕುಟುಂಬಗಳ ಯಜಮಾನನಂತಿರುತ್ತಾನೆ. ಅವರನ್ನು ಬಂಧಿಸಿದಾಗ ದಿಕ್ಕೇ ತೋಚದಂತಾಗುತ್ತದೆ. ದೇಶದಾದ್ಯಂತ ಸಭೆಗಳು, ಪ್ರಾರ್ಥನೆಗಳು ನಡೆಯುತ್ತವೆ.

ಸೆರೆಮನೆಗಳ ವಾತಾವರಣದಲ್ಲಿ ಕೂಡ ಬದಲಾಗುತ್ತದೆ. ಹಾಸ್ಯ, ನಗು, ಅಧಿಕಾರಿಗಳ ಮೇಲಿನ ಹಾರಾಟ ಎಲ್ಲಾ ಮರೆಯಾಗುತ್ತದೆ. ಸೆರೆಮನೆಗಳಲ್ಲಿ ತಿಂಡಿ ಕೂಡ ಮಾಡಕೂಡದೆಂದು ತೀರ್ಮಾನವಾಯಿತು. ಪ್ರತಿದಿನವೂ ಪ್ರಾತಃಕಾಲ ೯ ಗಂಟೆಗೆ ಗಾಂಧೀಜಿಯವರ ಆರೋಗ್ಯಕ್ಕಾಗಿ ಸೆರೆಮನೆಯಲ್ಲಿ ಪ್ರಾರ್ಥನೆ, ಭಗವದ್ಗೀತೆ ಪಠನ, ಮೌನ ನಡೆಯುತ್ತಿದ್ದವು. ಭಗವಂತ ಮಾಡಿದಂತೆ, ಎಲ್ಲಾ ಭಗವಂತನ ಇಚ್ಛೆ ಎಂಬ ಸಾತ್ವಿಕ ತ್ಯಾಗ ಸೆರೆಯಾಳುಗಳೆಲ್ಲರ ಮುಖದಲ್ಲಿ ಒಡೆದು ಕಾಣುತ್ತಿದ್ದಿತು. ಕ್ರಿಮಿನಲ್ ಖೈದಿಗಳೂ ಸಹ, ತಮ್ಮ ನಿತ್ಯದ ಹೊಡೆದಾಟವನ್ನು ಬಿಟ್ಟರು. ತಮ್ಮ ಕೆಲಸದಿಂದ ಯಾವ ಅನಾಹುತ ಸಂಭವಿಸುವುದೋ ಎಂದು ಹೆದರಿದರು. ಅವರಲ್ಲಿಯ ಪರಸ್ಪರ ಕಲಹಗಳು, ಗಾಂಧೀ ಉಪವಾಸದಿಂದ ಶಾಂತವಾದವು. ಹೀಗೆ ಗಾಂಧೀಜಿಯವರ ಉಪವಾಸದಿಂದ

ಸೆರೆಮನೆಯಲ್ಲಿ ಕ್ರಾಂತಿಕಾರಕ, ಅಹಿಂಸಾ ಜೀವನವನ್ನು ನಡೆಸುತ್ತಿರುವ ಖೈದಿಗಳು ಪರಿವರ್ತನೆಯಾಗುವುದನ್ನು ಕಾಣಬಹುದು. ಅಷ್ಟರಮಟ್ಟಿಗೆ ಗಾಂಧೀಜಿ ಜನಸಾಮಾನ್ಯರ ಮೇಲೆ ಅಲ್ಲದೆ ಖೈದಿಗಳ ಮೇಲೂ ಸಹ ಪ್ರಭಾವವನ್ನು ಬೀರಿದ್ದರು.

ಗಾಂಧೀಜಿಯವರ ಸ್ವರಾಜ್ಯ, ಸ್ವಾತಂತ್ರ್ಯ ಕುರಿತು ಭಾಷಣಗಳನ್ನು, ಲೇಖನಗಳನ್ನು ಕೇಳಿದ, ಓದಿದ ಅಕ್ಷರಸ್ಥ, ಅನಕ್ಷರಸ್ಥ ಜನರು ತಮ್ಮ ತಮ್ಮ ಹಳ್ಳಿಗಳಿಗೆ ಬಂದು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ಹಳ್ಳಿಗಳಲ್ಲಿ ಗಾಂಧೀಜಿಯವರ ಪ್ರತಿರೂಪದಂತೆ ಅವರ ತತ್ವಗಳನ್ನು ಅಳವಡಿಸಿಕೊಂಡು ಮರಿಗಾಂಧೀಜಿಯಂತೆ ನಾಯಕತ್ವವನ್ನು ವಹಿಸಿಕೊಂಡು ಜನರನ್ನು ಚಳವಳಿಗೆ ಪ್ರೇರೇಪಿಸುವ ಕೆಲಸವನ್ನು ಮಾಡುತ್ತಾರೆ.

ನಿದರ್ಶನವಾಗಿ ತೆಲುಗಿನ ಮಾಲಪಲ್ಲಿ ಕಾದಂಬರಿಯಲ್ಲಿ ಪುನ್ನನ್ನ ಮತ್ತು ರಂಗದಾಸ ಎಂಬ ತಂದೆ ಮಕ್ಕಳಿಬ್ಬರೂ ಕಲ್ಲಿನ ಕೆಲಸದಲ್ಲಿ ನಿರತರಾಗಿರುತ್ತಾರೆ. ಒಮ್ಮೆ ಸಂಗದಾಸನ ಸಹವಾಸದಿಂದ ಕುಡಿಯುವುದನ್ನು ಬಿಟ್ಟು ದುಡ್ಡು ಉಳಿಸುತ್ತಾರೆ. ಗಾಂಧೀಜಿ ಅವರ ಪ್ರಕಾರ ದೇಶಕ್ಕೆ ಸ್ವಾತಂತ್ರ್ಯ ಸಿಗಬೇಕಾದರೆ ಮೊದಲು ಜನರ ಮನಸ್ಸನ್ನು ಶುದ್ಧಗೊಳಿಸಬೇಕು ಮಧ್ಯಪಾನ ನಿಷೇಧ, ವೇಶ್ಯವಾಟಿಕೆ ವಿರೋಧ, ಜೂಜುಗಳಂತಹ ದುಂದುವೆಚ್ಚದ ಕೆಲಸಗಳಿಂದ ಮುಕ್ತರಾಗಿಸಬೇಕು ಎಂಬ ಧ್ಯೇಯೋದ್ದೇಶವನ್ನು ಹೊಂದಿರುತ್ತಾರೆ.

ಹೀಗೆ ಮೆರವಣಿಗೆ ಕಾದಂಬರಿಯಲ್ಲಿ ಗಾಂಧೀಜಿಯವರ ಉಪವಾಸ ಸತ್ಯಾಗ್ರಹದಿಂದ ಜೈಲಿನಲ್ಲಿನ ಕೈದಿಗಳು ಪರಿವರ್ತನೆಯಾಗಿರುವುದು ಕಂಡುಬಂದರೆ, ಮಾಲಪಲ್ಲಿ ಕಾದಂಬರಿಯಲ್ಲಿ ಕುಡಿತಕ್ಕೆ ಒಳಗಾದ ಕುಟುಂಬದ ಪರಿವರ್ತನೆಯನ್ನು ಚಿತ್ರಿಸಲಾಗಿದೆ. ಮೆರವಣಿಗೆ ಕಾದಂಬರಿಯಲ್ಲಿ ಸುದರ್ಶನ ಗಾಂಧೀಜಿಯವರ ಮುಖ್ಯಮಂತ್ರವಾದ ಖಾದಿಯ ಕಡೆ ತಿರುಗುತ್ತಾನೆ. ನಮ್ಮ ದೇಶದ ಜನ ಅದರಲ್ಲಿಯೂ ಹಳ್ಳಿಯವರು ಖಾದಿಯ ಕೈಗಾರಿಕೆಯನ್ನು ಸ್ವೀಕರಿಸುತ್ತಾರೆಯೇ? ಸ್ವಲ್ಪ ಒಳ್ಳೆಯ ಬೇಸಾಯದ ಜಮೀನು ಇರುವ ಮಲ್ಲಿಗೆ ಹಳ್ಳಿಯಲ್ಲಿ ಜನ, ಈ ಕೈಗಾರಿಕೆಯನ್ನು ತೆಗೆದುಕೊಳ್ಳಲು ಮನಸ್ಸು ಮಾಡಲೇ ಇಲ್ಲ. ರಾಟೆಯನ್ನು ಮೊದಲು ಹುಡುಕಲು ಗಾಂಧಿಯವರಿಗೆ ಎಷ್ಟು ಕಷ್ಟವಾಯಿತೋ, ಸುದರ್ಶನನಿಗೆ ಖಾದಿಯನ್ನು ಮಲ್ಲಿಗೆಹಳ್ಳಿಯಲ್ಲಿ ಪ್ರಾರಂಭಿಸಲಿಕ್ಕೆ ಅಷ್ಟೇ ಕಷ್ಟಪಡುತ್ತಾನೆ. ಸುದರ್ಶನ ಜನರಿಗೆ "ಖಾದಿ ಪ್ರಚಾರವಾಗಬೇಕು; ಊರಿನಲ್ಲಿ ಚರಕಗಳು ತಿರುಗಬೇಕು; ಊರಿಗೆ ಬೇಕಾಗುವ ಖಾದಿಯೆಲ್ಲಾ ಆ ಚರಕಗಳಿಂದಲೇ ತಯಾರಾಗಬೇಕು." ಸುದರ್ಶನ ಪ್ರಚಾರದ ಭರದಲ್ಲಿ "ನೂಲುವುದರಿಂದಲೇ ಒಬ್ಬನ ಜೀವನಕ್ಕೆ ಬೇಕಾದಷ್ಟು ಉತ್ಪತ್ತಿಯಾಗುತ್ತದೆ" ಎಂದು ಹೇಳತೊಡಗುತ್ತಾನೆ. (ಮೆರವಣಿಗೆ ಪುಟ-೩೫೭, ೧೯೪೭)

ಸುದರ್ಶನ ಗಾಂಧೀವಾದಿಯಾಗಿದ್ದು, ಖಾದಿ ಪ್ರಚಾರಕ, ಅಪ್ಪಟ ದೇಶಾಭಿಮಾನಿ, ಗಾಂಧೀಜಿಯವರ ತತ್ವಗಳನ್ನು ಸಾಮಾನ್ಯ ಜನರಿಗೆ ಪ್ರಸರಿಸುತ್ತಿರುವುದನ್ನು ಕಾಣಬಹುದು. ಸ್ವದೇಶಿ ವಸ್ತುಗಳ ಬಳಕೆ, ವಿದೇಶಿ ವಸ್ತು ಬಹಿಷ್ಕಾರಕ್ಕೆ ಮಹತ್ವ ಕೊಟ್ಟಿರುವುದನ್ನು ಗುರುತಿಸಬಹುದು.

ಮಾಲಪಲ್ಲಿ ಕಾದಂಬರಿಯಲ್ಲಿ ಅಸಹಕಾರ ಚಳವಳಿಯ ಪ್ರಭಾವಿತದಿಂದ ಜನರು ನಿಡುದವೊಲು ಜೈಲು ಸೇರುತ್ತಾರೆ.

ಕನ್ನಡ ಭಾಷಾಂತರ

ಹೊಲಗೇರಿಗಳೆಲ್ಲ ಚರಕಗಳಿಂದ ತುಂಬಿ ಹೋಗಿವೆ. ಅಕ್ಕಸಾಲಿಗರು, ನೇಕಾರರು, ಮಾದಿಗರು, ತೋಟಿಗರು ಮೊದಲಾದ ಜನಾಂಗದವರೆಲ್ಲ ದೇಶಕ್ಕೆ ಬೇಕಾದ ಬಟ್ಟೆಗಳನ್ನು ಸಿದ್ದಪಡಿಸಿಕೊಂಡಿದ್ದಾರೆ. ಸ್ವದೇಶಿ ಪಾದರಕ್ಷೆಗಳನ್ನು ತಯಾರಿಸಿರುವುದರಿಂದ ಜನರಿಗೆ ಅಭಿಮಾನ ಉಂಟಾಗುವುದರ ಜೊತೆಗೆ ಅವರಿಗೆ ಕೈತುಂಬಾ ಹಣ ಸಿಗುತ್ತದೆ. ಖಾದಿ ಬಳಕೆ ಹೆಚ್ಚಾಗಿರುವುದರಿಂದ ಕೋಟಾದಿ ಜನರಿಗೆ ನೂಲುವುದು, ನೇಯುವುದು, ಬಣ್ಣ ಹಚ್ಚುವಂತಹ ಕೆಲಸ (ಸರಿಹೋಗುತ್ತದೆ) ಸಿಗುತ್ತದೆ. ವಿದೇಶಿ ವಸ್ತ್ರಗಳನ್ನು ಮಾರುತ್ತಿರುವವರೆಲ್ಲಾ ಸ್ವದೇಶಿ ವಸ್ತ್ರಗಳನ್ನು ಮಾರಾಟ ಮಾಡುತ್ತಿದ್ದಾರೆ. ಜನ ಕುಡಿಯುವುದನ್ನು ಬಿಟ್ಟಿದ್ದಾರೆ. ಯಾರೋ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಓದಿದವರನ್ನು ಬಿಟ್ಟರೆ ಜನಸಾಮಾನ್ಯರಲ್ಲ ಎಂದು ರಾಮದಾಸ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೆ ಜಾಮೀನು ಕುರಿತು ವಿಚಾರಣೆ ನಡೆಯುತ್ತಿರುವಾಗ ಹೇಳುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೮ ಕ್ರಸಂ. ೨) ರಾಮದಾಸ ದಲಿತ ಕುಟುಂಬಕ್ಕೆ ಸೇರಿದವನಾಗಿದ್ದು, ಅಪ್ಪಟ ಗಾಂಧಿ ಅನುಯಾಯಿಯಾಗಿರುತ್ತಾನೆ. ಗಾಂಧೀಜಿಯವರ ಸ್ವ–ಜೀವನದ ತಂತ್ರಗಳಾದ ನೂಲು, ಚರಕ, ಖಾದಿ ಉತ್ಪತ್ತಿ, ಬಣ್ಣ ಹಚ್ಚುವುದು ಮೊದಲಾದ ಗಾಂಧೀಜಿಯವರ ಸಿದ್ಧಾಂತಗಳನ್ನು ಜನರು ಪರಿಪಾಲಿಸುತ್ತಿರುವುದು ಕಾಣಬಹುದು. ಕೂಲಿಗಳು, ದಲಿತ ಜನಾಂಗದವರು ಕೈತುಂಬಾ ಕೆಲಸವನ್ನು ಗಿಟ್ಟಿಸಿಕೊಂಡು ಸುಖಮಯವಾದ ಜೀವನವನ್ನು ನಡೆಸುತ್ತಿದ್ದಾರೆ. ಇಡೀ ಊರೂರೇ ಇನ್ನೊಬ್ಬರ ಸಹಾಯವಿಲ್ಲದೆ ಜೀವನವನ್ನು ಸ್ವಾವಲಂಬಿ ಬದುಕು ನಡೆಸುತ್ತದೆ. ಕುಡಿತದಿಂದ ಬಡಜನರ ಬಾಳು ಗೋಳಾಗುವುದನ್ನು ತಪ್ಪಿಸುತ್ತಿರುವುದು. ಈ ಕಾದಂಬರಿಯಲ್ಲಿಯೂ ಸಹ ಗಾಂಧೀಜಿಯವರ ತತ್ವಗಳನ್ನು ಯಥಾವತ್ತಾಗಿ ಪಾಲಿಸುತ್ತಿರುವುದು ಕಂಡುಬರುತ್ತದೆ. ಹೀಗೆ ಮೆರವಣಿಗೆ ಕಾದಂಬರಿಯಲ್ಲಿ ಸುದರ್ಶನನು ಗಾಂಧೀಜಿಯವರ ಸ್ವಾವಲಂಬಿ ಜೀವನದ ತತ್ವಗಳನ್ನು ಜನರಿಗೆ ಮನವರಿಕೆ ಮಾಡುತ್ತಿರುವುದು, ಅವರ ಆ ತತ್ವಗಳನ್ನು ಸ್ವೀಕಾರ ಮಾಡುವಲ್ಲಿನ ಗೊಂದಲ ಮನಸ್ಸು ಚಿತ್ರಿತವಾಗಿರುವುದು ಕಂಡುಬರುತ್ತದೆ. ಮಾಲಪಲ್ಲಿ ಕಾದಂಬರಿಯಲ್ಲಿ ಇಡೀ ಮಾಲಪಲ್ಲಿಯೇ ಗಾಂಧೀಜಿಯವರ ರಚನಾತ್ಮಕ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಸಮಾಜದಲ್ಲಿನ ಎಲ್ಲಾ ವರ್ಗದ ಜನರು ಕಾರ್ಯಪ್ರವೃತ್ತರಾಗಿರುವುದು ಕಂಡುಬರುತ್ತದೆ.

ಮೆರವಣಿಗೆ ಕಾದಂಬರಿಯಲ್ಲಿ ಗಾಂಧೀಜಿಯವರ ತತ್ವಗಳನ್ನು ಮೇಲ್ವರ್ಗದ ಜನತೆ ಸ್ವೀಕಾರ ಮಾಡುವಲ್ಲಿನ ಅರೆಮನಸ್ಸು ಮತ್ತು ಮಾಲಪಲ್ಲಿ ಕಾದಂಬರಿಯಲ್ಲಿ ದಲಿತವರ್ಗ ಸೇರಿದಂತೆ ಹಲವಾರು ಕೆಳ ಸಮುದಾಯಗಳು ಸ್ವೀಕಾರ ಮಾಡಿಕೊಂಡಿರುವುದರ ಬಗೆ ಹೇಗಿತ್ತು ಎಂಬುದನ್ನು ಈ ಕಾದಂಬರಿಗಳಲ್ಲಿ ಕಾಣಬಹುದಾಗಿದೆ.

ಮೆರವಣಿಗೆ ಕಾದಂಬರಿಯಲ್ಲಿ ೧೯೪೨ನೆಯ ಆಗಸ್ಟ್ ತಿಂಗಳಿನಲ್ಲಿ "ಭಾರತದಿಂದ ತೊಲಗಿ" ಚಳವಳಿಯ ಪ್ರಾರಂಭದಲ್ಲಿ ಹಾಸನದ ಸೆರೆಮನೆಯಲ್ಲಿ ನಮ್ಮ ದೇಶದ ಮುಂದಾಳುಗಳನ್ನೆಲ್ಲಾ ಬಂಧಿಸಿ ಚಳವಳಿಯಲ್ಲಿ ದುಮುಕುತ್ತಾರೆ ಎಂಬ ಆರೋಪವನ್ನು ಹೊರಿಸಿರುತ್ತಾರೆ. ಸೆರೆಮನೆಯಲ್ಲಿ ಅನೇಕ ಮುಖ್ಯವಾಗಿ ರಾಜಕೀಯ ಕೈದಿಗಳನ್ನು ಬಹಳ ಜಾಗರೂಕತೆಯಿಂದ ಎಚ್ಚರವಹಿಸಿ ನೋಡಿಕೊಳ್ಳುತ್ತಿದ್ದರು. ಮನುಷ್ಯ ಜೀವನಕ್ಕೆ ಸಮರಸವಿಲ್ಲದಿದ್ದರೆ, ರಾಜಕೀಯ ಪ್ರಪಂಚವೂ ಅಸ್ವಾಭಾವಿಕವಾಗುತ್ತದೆ. ಸಮತೆಯನ್ನು ಅಭ್ಯಾಸ ಮಾಡಿಕೊಳ್ಳದವರಿಗೆ ರಾಜಕೀಯ ಕ್ಷೇತ್ರದಲ್ಲಿ ಸೆರೆಮನೆ ಹೊಕ್ಕ ಕೂಡಲೇ ತಲೆ ಕೆಡುತ್ತದೆ. ತಾವು ಎಲ್ಲಾ ವಿಧದಲ್ಲಿಯೂ ಪ್ರಾಜ್ಞರೇ ಇರಬಹುದೇನೋ ಎಂಬ ಮಂಕು ಉಂಟಾಗುತ್ತದೆ. ಅಂತಹ ಸಂದರ್ಭದಲ್ಲಿ ಆನಂದದ, ಸತ್ಯದ ಸಂದೇಶವನ್ನು ತಿಳಿಸಿದ ವಾಲ್ಮೀಕಿ ಮತ್ತು ಹರಿಶ್ಚಂದ್ರರು ಅವರಿಗೆ ಬಡ ಪ್ರಚಾರಕರಾಗಿಯೇ ತೋರುತ್ತಾರೆ. ಸೆರೆಮನೆಯಲ್ಲಿ ಕೈದಿಗಳು ಬೆಳಗಿನ ಸ್ನಾನವಾದ ಕೂಡಲೇ ಹರಿಶ್ಚಂದ್ರ ಕಾವ್ಯವನ್ನು ಮತ್ತು ರಾಮಾಯಣವನ್ನು ಓದಲು ಪ್ರಾರಂಭಿಸುತ್ತಿದ್ದರು. ಸತ್ಯಾರಾಧಕರ ಸತ್ಯದ ಶೋಧನೆಯನ್ನು ಕೈದಿಗಳು ಪ್ರಬಲವಾಗಿ ಮೈಗೂಡಿಸಿಕೊಳ್ಳುತ್ತಿದ್ದರು. ಬ್ರಿಟಿಷ್ ಅಧಿಕಾರಿಗಳು ಕೈದಿಗಳ ಬಾಯಿಯಿಂದ ಸುಳ್ಳು ಸಾಕ್ಷಿಗಳನ್ನು, ದೇಶಮಾತೆಗೆ ವಿರೋಧವಾದ ಘೋಷಣೆಗಳನ್ನು ಹೇಳಿಸುತ್ತಿದ್ದುದು ಸಾಮಾನ್ಯವಾದ ವಿಷಯವಾಗಿತ್ತು. ಆದ್ದರಿಂದ ರಾಮಾಯಣ ಮತ್ತು ಹರಿಶ್ಚಂದ್ರ ಕಾವ್ಯಗಳು ಭಾರತ ಹಿಂದೂ ಧರ್ಮದ ಪವಿತ್ರ ಗ್ರಂಥಗಳು. ಅದರಲ್ಲಿ ಎಲ್ಲಾ ರೀತಿಯ ಸತ್ಯ, ಸಂಯಮ, ತ್ಯಾಗ, ಭಯ, ಭಕ್ತಿ, ಕುಟಿಲತೆ ಮೊದಲಾದ ಎಲ್ಲಾ ಗುಣಗಳ ಗಣಿಗಳು ಈ ಕೃತಿಗಳು ಜಗತ್ತಿಗೆ ಸಂದೇಶವನ್ನು ಸಾರಿದ ಸಾಮಾಜಿಕ, ರಾಜಕೀಯ, ಧಾರ್ಮಿಕ ಗ್ರಂಥಗಳಾಗಿವೆ. ದೇಶಭಕ್ತರ ಮನಸ್ಸಿನ ಮೇಲೆ ಉತ್ತಮವಾಗಿ ಪ್ರಭಾವ ಬೀರಲಿ ಎಂಬ ಧೃಡಸಂಕಲ್ಪದಿಂದ ಈ ಕೃತಿಗಳ ಪ್ರಸ್ತಾಪವನ್ನು ಈ ಕಾದಂಬರಿಯಲ್ಲಿ ತಂದಿದ್ದಾರೆ ಎನಿಸುತ್ತದೆ. ಮಾಲಪಲ್ಲಿ ಕಾದಂಬರಿಯಲ್ಲಿ ಮಂಗಳಾಪುರ ಎಂಬ ರಾಮದಾಸನ ಊರಿನಲ್ಲಿ ದಲಿತರ ಕೂಲಿಕಾರರ ಹಕ್ಕು, ಸ್ವಾತಂತ್ರ್ಯಕ್ಕಾಗಿ ಹೋರಾಡಿ ತಮ್ಮ ಪ್ರಾಣವನ್ನು ಅರ್ಪಿಸಿದ ಸಂಗದಾಸನ ಮಂದಿರದಲ್ಲಿ ಭಕ್ತಪ್ರಹ್ಲಾದ ನಾಟಕವನ್ನು ಏರ್ಪಡಿಸಲಾಗಿರುತ್ತದೆ.

ನಾಟಕವನ್ನು ನೋಡಲು ಸುತ್ತಮುತ್ತಲಿನ ಹಳ್ಳಿಗಳಿಂದ ಜನರು ಸಾಲು ಸಾಲಾಗಿ ಬರುತ್ತಾರೆ. ಸಂಗಮಂದಿರದಲ್ಲಿ ಸಭಿಕರೂ, ಕೂಲಿಗಳು, ಮಾಲ-ಮಾದಿಗರು ಎಲ್ಲಾ ಹಿಂದೂ ಮುಸ್ಲಿಂರು ಹಾಜರಾಗಿರುತ್ತಾರೆ. ಚೌದರಯ್ಯ ಮೊಮ್ಮಗ ಸಾಹುಕೃಷ್ಣನನ್ನು ನಾಟಕಕ್ಕೆ ಹೋಗುವುದು ಬೇಡ ಎನ್ನುತ್ತಾನೆ. ಇಲ್ಲಿ ಪ್ರಹ್ಲಾದನ ಜನನ, ಪ್ರಹ್ಲಾದ ವಿಷ್ಣುಭಕ್ತನಾದುದರ ಬಗ್ಗೆ ಹಿರಣ್ಯಕಶಿಪು ಪ್ರಹ್ಲಾದನನ್ನು ಪರಿವರ್ತನೆಗೆ ಪ್ರಯತ್ನಿಸಿದರ ಕುರಿತು ಪ್ರಸ್ತಾಪ ಇದೆ. ಇಲ್ಲಿ ಮೇಲ್ವರ್ಗದ ಜನತೆಯನ್ನು ಹಿರಣ್ಯಕಶಿಪುವಿಗೆ ಮತ್ತು ಕೆಳವರ್ಗದ ಜನರನ್ನು ಪ್ರಹ್ಲಾದನಿಗೆ ಹೋಲಿಸಬಹುದು. ಈ ಭಕ್ತಪ್ರಹ್ಲಾದ ನಾಟಕದ ಮೂಲಕ ಲೇಖಕರು ಸಾಮಾನ್ಯ ಜನರಲ್ಲಿ ದೇಶಭಕ್ತಿ, ಆತ್ಮಶಕ್ತಿ, ಮಾತೃಪ್ರೇಮ, ಸತ್ಯವನ್ನು ಮೂಡಿಸಲು ಹೊರಟಿದ್ದಾರೆ. ಹಾಗೂ ಹಿಂದೂ-ಮುಸ್ಲಿಂರಲ್ಲಿನ ಐಕ್ಯತಾ ಮನೋಭಾವವನ್ನು ಕಾಣಬಹುದು. ಅಲ್ಲದೆ ಸಂಗದಾಸನ ಸವಿನೆನಪಿಗಾಗಿ ಮಂಗಳಾಪುರದಲ್ಲಿ ರಾಮನ ದೇವಾಲಯವನ್ನು

ನಿರ್ಮಿಸಬೇಕೆಂದು ಅಪ್ಪದಾಸನ ಬಯಕೆಯಾಗಿರುತ್ತದೆ. ಹೀಗೆ ಕನ್ನಡ ಕಾದಂಬರಿಯಲ್ಲಿ ಹರಿಶ್ಚಂದ್ರ, ರಾಮನ ವಿಚಾರಧಾರೆಗಳನ್ನು ಕೈದಿಗಳ ಮನಸ್ಸಿನ ಮೇಲೆ ಬಿತ್ತುವುದರ ಮೂಲಕ ಕೈದಿಗಳ ಮನಸ್ಥಿತಿಯನ್ನು ದೇಶದ ಚಳವಳಿಯ ಕಡೆಗೆ ಒಯ್ಯುವ ಉದ್ದೇಶವಿರಬಹುದೆನಿಸುತ್ತದೆ. ತೆಲುಗು ಕಾದಂಬರಿಯಲ್ಲಿ ಭಕ್ತಪ್ರಹ್ಲಾದ ನಾಟಕವನ್ನು ಪ್ರದರ್ಶನ ಮಾಡುವುದರ ಮೂಲಕ ದೇಶಭಕ್ತಿಯನ್ನು ಎಷ್ಟೇ ಹಿಂಸೆ ನೀಡಿದರೂ ಬದಲಿಸದ ಅಚಲ ನಿರ್ಧಾರವನ್ನು ಹೊಂದಿರಬೇಕು ಎಂಬ ಮನಸ್ಥಿತಿಯನ್ನು, ಸತ್ಯದ ಸಂದೇಶವನ್ನು ಈ ನಾಟಕದ ಮೂಲಕ ತಿಳಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಹೀಗೆ ಎರಡು ಕಾದಂಬರಿಗಳಲ್ಲಿಯೂ ರಾಮನಾಮಸ್ಮರಣೆ, ರಾಮ ದೇವಾಲಯ ಕುರಿತ ವಿಚಾರಗಳು ಬಂದಿದ್ದು, ದೇಶವನ್ನು ರಾಮರಾಜ್ಯವನ್ನಾಗಿ ಮಾಡಬೇಕೆಂಬ ಗಾಂಧೀಜಿಯವರ ಕನಸನ್ನು ನನಸು ಮಾಡುವ ಪ್ರಯತ್ನವನ್ನು ಇಲ್ಲಿ ಕಾಣಬಹುದಾಗಿದೆ.

ಮೆರವಣಿಗೆ ಕಾದಂಬರಿಯಲ್ಲಿ ಸುಬ್ರಹ್ಮಣ್ಯ ಎಂಬ ರಾಜಕೀಯ ವ್ಯಕ್ತಿ ಅಹಿಂಸೆಯಿಂದಲೆ ದೇಶಕ್ಕೆ ಮುಕ್ತಿ ಅದನ್ನು ಬಿಟ್ಟು ಹೋಗುವಂತಿಲ್ಲ ಎಂದು ಕೈದಿಗಳಲ್ಲಿ ಹೇಳುತ್ತಿರುವುದು ಕಂಡುಬಂದರೆ, ಮಾಲಪಲ್ಲಿ ಕಾದಂಬರಿಯಲ್ಲಿ ರಾಮದಾಸ ಎಂಬ ವ್ಯಕ್ತಿ ಹಿಂಸೆಯ ಇನ್ನೊಂದು ರೀತಿಯನ್ನು ಪರಿಚಯಿಸುತ್ತಾನೆ. ಮೆರವಣಿಗೆ ಕಾದಂಬರಿಯಲ್ಲಿ ದೇಶಬಂಧನ ಮುಕ್ತಿಗೋಸ್ಕರ ಸೆರೆಮನೆ ಸೇರಿದವರಲ್ಲಿ ತಗಡೂರು ರಾಮಚಂದ್ರರಾಯರು ಒಬ್ಬರಾಗಿದ್ದರು. ಇವರು ತೀವ್ರಗಾಮಿ ಚಿಂತನೆಯುಳ್ಳವರಾಗಿರುತ್ತಾರೆ. ಇವರನ್ನು ಟಿ. ಸುಬ್ರಹ್ಮಣ್ಯ ಅವರು ಸೆರೆಮನೆಯಲ್ಲಿ "ಪ್ರಚಂಡ ಪರಶುರಾಮ" ಎಂದು ಕರೆಯುತ್ತಾರೆ. ಇವರು ನಮ್ಮ ದೇಶದಲ್ಲಿ ನಡೆದಿರುವ ಎಲ್ಲಾ ರಾಷ್ಟ್ರೀಯ ಕೆಲಸಗಳಲ್ಲಿಯೂ ಮುಂದಾಗಿರುತ್ತಾರೆ. ಇವರು ಪ್ರವೇಶಿಸಿದ ದೇಶಕಾರ್ಯಗಳು ಈ ದೇಶದಲ್ಲಿ ಒಂದೂ ಇಲ್ಲ". "ಖಾದಿ, ಗ್ರಾಮೋದ್ಧಾರ, ಮಾದರಿ ತಾಲ್ಲುಕು, ಕ್ರೈಸ್ತರ ಶುದ್ಧಿ, ಗ್ರಾಮಕೈಗಾರಿಕೆ, ವಾರ್ಧಾ ಶಿಕ್ಷಣ, ಹರಿಜನೋದ್ಧಾರ" ಕಾರ್ಯಗಳನ್ನು ಕೈಗೊಳ್ಳುತ್ತಾರೆ ಮತ್ತು ಸತ್ಯಾಗ್ರಹಿಗಳ ಪರವಾಗಿ ಮೈಸೂರಿನ ಮಹಾರಾಜರಿಗೆ "ಸಿಂಹಾಸನದಿಂದ ಕೆಳಗಿಳಿಯಿರಿ" ಎಂದು ಪತ್ರವನ್ನು ಬರೆಯುತ್ತಾರೆ. (ಮೆರವಣಿಗೆ, ಪುಟ ೪೮೬-೪೯೩, ೧೯೮೧)

ಹೀಗೆ ತಗಡೂರು ರಾಮಚಂದ್ರರಾಯರು ಅಪ್ಪಟ ಕ್ರಾಂತಿಕಾರಿ ತೀವ್ರಗಾಮಿ ತತ್ವಗಳನ್ನು ಮೈಗೂಡಿಸಿಕೊಂಡವರಾಗಿದ್ದು, ಗಾಂಧೀಜಿಯವರ ಚಿಂತನೆಗಳ ಮೊರೆ ಹೋಗಿರುವುದನ್ನು ಕಾಣಬಹುದಾಗಿದೆ. ದೇಶದ ಕೆಲವು ಭಾಗಗಳಲ್ಲಿ ಬ್ರಿಟಿಷ್ ಸರ್ಕಾರ ತನ್ನ ಅಧಿಕಾರವನ್ನು ಕಳೆದುಕೊಂಡಿದ್ದರೂ ಆಗಿನ ಮೈಸೂರು ರಾಜ್ಯದಲ್ಲಿ ಇನ್ನು ಬ್ರಿಟಿಷ್ ಸರ್ಕಾರದ ಛಾಯೆಗಳು ಇದ್ದವು. ಕಾರಣ ಮೈಸೂರಿನ ಮಹಾರಾಜರ ನೆರವು, ಬೆಂಬಲದಿಂದ. ಅದರಿಂದಾಗಿ ತಗಡೂರು ರಾಮಚಂದ್ರರಾಯರು ಬ್ರಿಟಿಷರಿಗಿಂತ ಮೊದಲು ದೇಶೀಯ ಅರಸರ ದಬ್ಬಾಳಿಕೆ, ಅಧಿಕಾರದ ಮಧವನ್ನು ಅಡಗಿಸಬೇಕು ಎಂಬ ನಿರ್ಧಾರವನ್ನು ಮಾಡಿರಬಹುದು ಎನಿಸುತ್ತದೆ. ಇಲ್ಲಿ ತಗಡೂರು ರಾಮಚಂದ್ರರಾಯರ ಮೇಲೆ ಗಾಂಧೀಜಿಯವರ ಪ್ರಭಾವ ಪ್ರೇರಣೆಯನ್ನು ಗುರುತಿಸಬಹುದು.

ಮಾಲಪಲ್ಲಿ ಕಾದಂಬರಿಯಲ್ಲಿ ರಾಮದಾಸು ಎಂಬ ಗಾಂಧೀವಾದಿ ಉರಿಶಿಕ್ಷೆ ವಿಷಯವಾಗಿ ವೆಂಕಟಸ್ವಾಮಿ ಎಂಬ ವ್ಯಕ್ತಿಗೆ ಅಹಿಂಸೆ ಕುರಿತು ಈ ರೀತಿಯಾಗಿ ಬೋಧಿಸುತ್ತಾನೆ.

ಕನ್ನಡ ಭಾಷಾಂತರ

ಅಹಿಂಸಾ ಪರಮೋ ಧರ್ಮ ಎನ್ನುವ ಸೂತ್ರವನ್ನು ಮಂತ್ರವನ್ನು ಅನಾದಿಕಾಲದಿಂದಲೂ ಆಚರಿಸುತ್ತಿರುವ ಭಾರತ ದೇಶವೇ ಈ ಧರ್ಮ ತತ್ವವನ್ನು ಪ್ರತಿಷ್ಠಾಪಿಸಿ ಇಡೀ ಜಗತ್ತಿಗೆ ಮಾರ್ಗಸೂಚಿಯಾಗಿದೆ. ಕೇವಲ ಸ್ವಾತಂತ್ರ್ಯ ಪಡೆಯುವುದು ನಮ್ಮ ಪ್ರಯತ್ನ, ಉದ್ದೇಶವಲ್ಲ. ಸ್ವರಾಜ್ಯ ನಿಜವಾಗಿಯೂ ಸ್ವರ್ಗ ರಾಜ್ಯ, ರಾಮರಾಜ್ಯವಾಗಬೇಕು. ನಮ್ಮ ಮಾರ್ಗ ರಕ್ತಸಿಕ್ತವಾದ ಮಾರ್ಗವಾದರೆ ನಮಗೆ ಸ್ವರಾಜ್ಯ, ಸ್ವತಂತ್ರ ಬರುವುದು ಸಾಧ್ಯವಿಲ್ಲ. ರಕ್ತದ ಊಟ ನಮಗೆ ಹಿಡಿಸುವುದಿಲ್ಲ. (ಮೂಲ; ಅನುಬಂಧ-೩ ಅಧ್ಯಾಯ-೮ ಕ್ರಸಂ. ೩) ಇಲ್ಲಿ ರಾಮದಾಸನ ಮಾತುಗಳಲ್ಲಿ ಗಲ್ಲುಶಿಕ್ಷೆ ಎಂಬ ಬ್ರಿಟಿಷ್ ಸರ್ಕಾರ ನೇಮಿತ ಕೆಲಸದಲ್ಲಿ ಕಾರ್ಯನಿರ್ವಹಿಸುತ್ತಿರುವ ವೆಂಕಟಸ್ವಾಮಿಗೆ ಭಾರತ ದೇಶದ ಮೂಲಮಂತ್ರವನ್ನು ಪರಿಚಯಿಸುತ್ತಿರುವುದನ್ನು ಗುರುತಿಸಬಹುದು. ಹಿಂಸಾತ್ಮಕವಾದ ಒಬ್ಬ ಕೈದಿಯ ಮನಸ್ಸನ್ನು ಅಹಿಂಸಾತ್ಮಕವಾಗಿ ಪರಿವರ್ತಿಸುತ್ತಿರುವ ರಾಮದಾಸನ ಮನೋಭಿಮಾನವನ್ನು ಕಾಣಬಹುದಾಗಿದೆ. ನಮ್ಮ ದೇಶದ ಹಿತ ಕೇವಲ ಸ್ವಾತಂತ್ರ್ಯವನ್ನು ಪಡೆಯುವುದು ಅಷ್ಟೇ ಅಲ್ಲ. ಜೊತೆಗೆ ಸ್ವಾತಂತ್ರ್ಯ ದೇಶದಲ್ಲಿ ಜನರು ಸುಖ, ನೆಮ್ಮದಿ ಸಂತೋಷದಿಂದ ಜೀವನವನ್ನು ನಡೆಸುವುದು ಬಹಳ ಮುಖ್ಯ ಉದ್ದೇಶವಾಗಿದೆ ಎಂಬುದನ್ನು ಇಲ್ಲಿ ತಿಳಿಯಬಹುದು. ಹೀಗೆ ಕನ್ನಡದ ಕಾದಂಬರಿಯಲ್ಲಿ ತೀವ್ರಗಾಮಿ ನಾಯಕ ಮಂದಗಾಮಿ ನಾಯಕರ ಚಿಂತನೆಗಳಲ್ಲಿ ಒಲವು ತೋರಿಸಿದ್ದು, ದೇಶದ ಬಿಡುಗಡೆಗಾಗಿ ಪ್ರತಿಭಟಿಸುತ್ತಿರುವುದು ಕಂಡುಬಂದರೆ ತೆಲುಗಿನ ಕಾದಂಬರಿಯಲ್ಲಿ ಮಂದಗಾಮಿ ನಾಯಕ ಮಂದಗಾಮಿ ರಾಷ್ಟ್ರೀಯ ನಾಯಕರ ಚಿಂತನೆಗಳನ್ನು ವಿಸ್ತಾರಗೊಳಿಸುತ್ತಿರುವುದು ಮತ್ತು ಭಾರತದ ಧರ್ಮ ಪರಿಪಾಲನೆಯನ್ನು ಎತ್ತಿಹಿಡಿಯುವುದನ್ನು ಕಾಣಬಹುದಾಗಿದೆ.

ಬ್ರಿಟೀಷರು ತಮ್ಮ ಬೇಳೆಕಾಳುಗಳನ್ನು ಬೇಯಿಸಿಕೊಳ್ಳುವುದಕ್ಕಾಗಿ ದೇಶಪ್ರೇಮಿಗಳ ಶಕ್ತಿಯನ್ನು ಕುಗ್ಗಿಸುವುದಕ್ಕಾಗಿ ಅವರ ಸಂಸಾರದಲ್ಲಿ ಯಾವ ವಿಷಬೀಜವನ್ನು ಬಿತ್ತಬಹುದು? ಅಣ್ಣ ತಮ್ಮಂದಿರು, ತಂದೆ ಮಕ್ಕಳು, ದಾಯಾದಿಗಳು ಇವರೆಲ್ಲ ಮತ್ತೆ ಸೇರದಂತೆ ಪರಸ್ಪರ ಕಾದಾಡುತ್ತಲೇ ಸಾಯುವಂತೆ ಹೇಗೆ ಮಾಡುವುದು? ಹೀಗೆ ಯೋಚಿಸಿ ಅನೇಕ ಎಷ್ಟೋ ಸಂಸಾರಗಳನ್ನು ನಾಶ ಮಾಡಿದ್ದಾರೆ. ಅನೇಕ ಮನೆಗಳಲ್ಲಿ ಮೂರು ತಲೆ ಕಾದರೂ ಕೋರ್ಟಿಗೆ ಅಲೆದರೂ ಮುಗಿಯದ ವ್ಯಾಜ್ಯ ಬೀಜವನ್ನು ಬಿತ್ತಿದ್ದಾರೆ. ಅದರಂತೆ ಮೆರವಣಿಗೆ ಕಾದಂಬರಿಯಲ್ಲಿ ಸುದರ್ಶನ ಎಂಬ ಬಿಸಿರಕ್ತದ ಯುವಕ ಅನೇಕ ರೀತಿಯ ರಾಷ್ಟ್ರೀಯ ಕಾರ್ಯಗಳಲ್ಲಿ ಭಾಗಿಯಾಗಿರುತ್ತಾನೆ. ಬ್ರಿಟಿಷ್ ಸರ್ಕಾರ ಗಾಂಧೀಜಿ ಸೇರಿದಂತೆ ಹಲವಾರು ರಾಷ್ಟ್ರೀಯ ನಾಯಕರನ್ನು ದಸ್ತಗಿರಿ ಮಾಡಿ ಸೆರೆಮನೆಗೆ ತಳ್ಳಿರುತ್ತದೆ. ಸೆರೆಮನೆಯಲ್ಲಿದ್ದ ಬಿ. ಸುಬ್ರಹ್ಮಣ್ಯ ಎಂಬ ವ್ಯಕ್ತಿ ಪೂರ್ಣ ಅಹಿಂಸಾವಾದಿ, ಮಹಾತ್ಮರ ಪಟ್ಟಭಕ್ತರು. "ಯಾವ ಕಾಲದಲ್ಲಿಯೂ ಅಹಿಂಸೆಯನ್ನು ಬಿಡಲೇಕೂಡದು. ಅದು ನಮ್ಮ ಒಂದು ಅಸ್ತ್ರ ಮಾತ್ರವಲ್ಲ. ಅದೇ ನಮ್ಮ ಧರ್ಮ. ಕಾಯಾ, ವಾಚಾ, ಮನಸಾ ಅಹಿಂಸೆಯನ್ನು ಅನುಸರಿಸಬೇಕು." (ಮೆರವಣಿಗೆ, ಪುಟ-೪೮೬, ೧೯೮೧) ಹೀಗೆ ಸೆರೆಮನೆಯಲ್ಲಿ ಹಿಂಸೆ-ಅಹಿಂಸೆಗಳ ಚರ್ಚೆ ಬಂದಾಗ

ಬಹಳ ವಿದ್ವತ್‌ಪೂರ್ಣವಾದ ಪ್ರತಿಭೆಯಿಂದ ಭಾಷಣವನ್ನು ಮಾಡಿ ಕ್ರಾಂತಿಕಾರಿ ಕೈದಿಗಳ ಮನಸ್ಸನ್ನು ಪರಿವರ್ತಿಸುತ್ತಿರುವುದನ್ನು ಕಾಣಬಹುದಾಗಿದೆ.

ಮಾಲಪಲ್ಲಿ ಕಾದಂಬರಿಯಲ್ಲಿ ರಾಮದಾಸ ಮತ್ತು ಒಬ್ಬ ಮುದುಕ ಹಿಂಸೆ ಅಹಿಂಸೆ ಕುರಿತು ನಡೆದ ಸಂಭಾಷಣೆ ಹೀಗಿದೆ.

ಕನ್ನಡ ಭಾಷಾಂತರ

ಮುದುಕ–ನೀನು ನೊಣಗಳನ್ನು ಸಾಯಿಸು ಎಂದರೆ ತಪ್ಪಿಸಿಕೊಂಡಿದ್ದೀಯಾ. ಮಾಂಸಕ್ಕಾಗಿ ಸಾಯಿಸುವುದು ತಪ್ಪು. ಮನುಷ್ಯ ಮನುಷ್ಯನನ್ನು ಹತ್ಯೆ ಮಾಡಿದರೆ ತಪ್ಪ? ತಪ್ಪು ಅಲ್ಲದಿದ್ದರೆ ಸಾಯಿಸಿದವನನ್ನು ಗಲ್ಲುಶಿಕ್ಷೆಗೆ ಏರಿಸುವ ಕಾನೂನು ಏಕೆ ಇದೆ. (ಮೂಲ; ಅನುಬಂಧ–೩ ಅಧ್ಯಾಯ–೮ ಕ್ರ.ಸಂ. ೪)

ಇಲ್ಲಿ ರಾಮದಾಸನು ಕಟ್ಟಾ ಗಾಂಧೀ ಅನುಯಾಯಿಯಾಗಿದ್ದು, ಹಿಂಸೆಯಿಂದ ಏನು ಮಾಡಲು ಸಾಧ್ಯವಿಲ್ಲ. ಅದರಿಂದಾಗಿ ಜೀವವಿರುವ ಯಾವುದೇ ಪ್ರಾಣಿ, ಪಕ್ಷಿ, ಮನುಷ್ಯರನ್ನು ಸಾಯಿಸುವುದು ತಪ್ಪು. ಅಹಿಂಸೆಯಿಂದ ಜಗತ್ತನ್ನು ಗೆಲ್ಲಬಹುದು ಎಂದು ಅಹಿಂಸೆಯ ಮಹತ್ವವನ್ನು ತಿಳಿಸುತ್ತಾನೆ. ಸುದರ್ಶನನು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾಗೃತಿ ಮೂಡಿಸಿ ಸೆರೆಮನೆ ಸೇರಿರುತ್ತಾನೆ. ಆಗ ಸೆರೆಮನೆಯಲ್ಲಿ ಒಬ್ಬ ಅಧಿಕಾರಿ ಸುದರ್ಶನನ್ನು ಕರೆಸಿ "ಕಾಂಗ್ರೆಸ್ ಎಂಬುದು ಬ್ರಾಹ್ಮಣೇತರರ ಸಂಸ್ಥೆ. ನೀವು ಯಾಕೆ ಅದರಲ್ಲಿ ಸಾಯುತ್ತೀರಿ. ನಿಮ್ಮನ್ನು ಉಪಯೋಗಿಸಿಕೊಂಡು ಅವರು ತಮಗೆ ಬೇಕಾದುದನ್ನು ಹೊಂದುತ್ತಾರೆ ಎಂದು ಹೇಳಿ, ಮತ್ತೊಬ್ಬ ಕೆಲಸಗಾರನನ್ನು ಕರೆಸಿ "ಕಾಂಗ್ರೆಸ್ ಬ್ರಾಹ್ಮಣರ ಸಂಸ್ಥೆ ನಾಲ್ಕಾರು ಬ್ರಾಹ್ಮಣರು ತಮ್ಮ ಸ್ವಾರ್ಥ ಸಾಧನೆಗಾಗಿ ಈ ವೇಷ ಹಾಕಿದ್ದಾರೆ" (ಮೆರವಣಿಗೆ, ಪುಟ–೪೯, ೧೯೮೧) ಎಂದು ಜೈಲಿನಲ್ಲಿರುವ ಪೊಲೀಸ್ ಅಧಿಕಾರಿಗಳು ದೇಶದಲ್ಲಿ ರಾಷ್ಟ್ರೀಯತೆಗಾಗಿ ಒಕ್ಕೂರಲಿನಿಂದ ನಡೆಸುತ್ತಿರುವ ಮಹಾನ್ ಪಕ್ಷ, ವ್ಯಕ್ತಿಗಳಲ್ಲಿ ಭೇದಭಾವ ಉಂಟು ಮಾಡುತ್ತಿರುವುದು ನಮ್ಮ ದೇಶದವರೇ ಆದ ಅಧಿಕಾರಿಗಳು ಬ್ರಿಟಿಷರ ಎಂಜಲು ಕಾಸಿಗೆ ಆಸೆಪಟ್ಟು ಮೈಸೂರು ಸಂಸ್ಥಾನದಲ್ಲಿ ಕಾಂಗ್ರೇಸ್‌ನ್ನು ಮಟ್ಟಹಾಕಲು ಹೊರಟಿರುವಂತದ್ದನ್ನು ಇಲ್ಲಿ ಗಮನಿಸಲಾಗಿದೆ. ಕನ್ನಡದಲ್ಲಿನಂತೆಯೇ ತೆಲುಗಿನಲ್ಲಿಯೂ ಇದಕ್ಕೆ ಹೊರತಾಗಿಲ್ಲ ಮಾಲಪಲ್ಲಿ ಕಾದಂಬರಿಯಲ್ಲಿ ರಾಮದಾಸು ಮತ್ತು ಆತನ ಕುಟುಂಬ ನಿಡುದವೊಲು ಸೆಂಟ್ರಲ್ ಜೈಲಿಗೆ ಬಂದಂತಹ ಸಂದರ್ಭದಲ್ಲಿ ಜೈಲಿನ ಅಧಿಕಾರಿ ರಾಮದಾಸನನ್ನು ಕುರಿತು

ಕನ್ನಡ ಭಾಷಾಂತರ

ನೋಡು, ರಾಮದಾಸು ನೀನು ನಮ್ಮ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿ ಬಿಟ್ಟರೆ ನಿನ್ನ ಎಲ್ಲ ಸಮಸ್ಯೆಗಳೂ ಬಗೆಹರಿಯುತ್ತವೆ. ಪೌಲು ಅವರು ನಿಮಗೆ ಏನು ಲೋಪ ಬರದೆ ಹಾಗೆ ಮಾಡುತ್ತಾರೆ. ಇಲ್ಲಿ ಭಾರತ ದೇಶದಲ್ಲಿರುವ ಅನೇಕ ಧರ್ಮದ ಜನತೆ ವಾಸವಾಗಿದ್ದು, ಭಾರತ ಜಾತ್ಯಾತೀತ

ರಾಷ್ಟ್ರವಾಗಿದೆ. ರಾಷ್ಟ್ರೀಯ ನಾಯಕರಿಗೆ ಆಶ್ರಯ ನೀಡುತ್ತಾನೆ ಎಂಬ ಸುಳ್ಳು ಆಪಾದನೆಯನ್ನು ಹೊತ್ತು ಬಂದ ರಾಮದಾಸುವಿಗೆ ಕ್ರಿಶ್ಚಿಯನ್ ಧರ್ಮಕ್ಕೆ ಸೇರು ತಮ್ಮನ್ನು ಎಲ್ಲಾ ಬಂಧಮುಕ್ತರನ್ನಾಗಿ ಮಾಡುತ್ತೇವೆ (ಮೂಲ; ಅನುಬಂಧ-೩ ಅಧ್ಯಾಯ-೮ ಕ್ರ.ಸಂ. ೫) ಎಂಬ ಆಮಿಷವನ್ನು ತೋರಿಸುತ್ತಿರುವುದನ್ನು ಕಾಣಬಹುದಾಗಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಇದು ಸಾಮಾನ್ಯವಾದ ವಿಷಯವಾಗಿತ್ತು. ಕನ್ನಡದ ಕಾದಂಬರಿಯಲ್ಲಿ ಜೈಲಿನ ಅಧಿಕಾರಿ ಸುದರ್ಶನ ಮತ್ತು ಆತನ ಸಹಚರರಿಗೆ ಕಾಂಗ್ರೆಸ್ ಎಂಬ ರಾಷ್ಟ್ರೀಯ ಪಕ್ಷವನ್ನು ತುಳಿದು ಹಾಕಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ದೇಶದ ಸಾಮಾನ್ಯ ದೇಶಭಕ್ತರಲ್ಲೇ ಕಾಂಗ್ರೆಸನ ಬಗ್ಗೆ ಅಪ ಪ್ರಚಾರ ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ. ಆದರೆ ತೆಲುಗು ಕಾದಂಬರಿಯಲ್ಲಿ ಜೈಲಿನ ಅಧಿಕಾರಿ ತನ್ನ ಪರಮ ಧರ್ಮವಾದ ಕ್ರಿಶ್ಚಿಯನ್ ಧರ್ಮವನ್ನು ಭಾರತ ದೇಶದಲ್ಲಿ ಪ್ರಬಲವಾಗಿ ಬೆಳೆಸಲು, ಪ್ರಸಾರ ಮಾಡಲು ರಾಮದಾಸು ಎಂಬ ಸಾಮಾನ್ಯ ದೇಶಭಕ್ತನಿಗೆ ಮತಾಂತರದ ಬೋಧನೆಯನ್ನು ಬೋಧಿಸುತ್ತಿರುವುದನ್ನು ಗಮನಿಸಬಹುದಾಗಿದೆ.

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಸಮಾಜದಲ್ಲಿನ ಮೇಲ್ವರ್ಗ, ಕೆಳವರ್ಗದ ಜನರು ಮತ್ತು ವಿದ್ಯಾರ್ಥಿಗಳು ತಮ್ಮ ಜೀವದ ಹಂಗು ತೊರೆದು, ಮನೆ-ಮಾರುಗಳನ್ನು ಕಳೆದುಕೊಂಡು, ಹೆಂಡತಿ ಮಕ್ಕಳನ್ನು ದೂರಮಾಡಿಕೊಂಡು ತಾವು ಹುಟ್ಟಿದ ತಾಯ್ನಾಡಿನಲ್ಲೇ ಕಳ್ಳರಂತೆ ಜೀವಿಸುತ್ತಾ, ಕೆಲವರು ಭೂಗತರಾಗಿದ್ದುಕೊಂಡು ಜನರನ್ನು ಸಂಘಟಿಸುತ್ತಾ ಹೋರಾಟವನ್ನು ನಡೆಸುತ್ತಿದ್ದಾರೆ. ಇನ್ನೂ ಕೆಲವರು ಅತಿಯಾದ ಆವೇಶದಿಂದ ಅಧಿಕಾರಿಗಳ ಮೇಲೆ ದೌರ್ಜನ್ಯವನ್ನು ಮಾಡುತ್ತಾ ಸೆರೆಯಾಳುಗಳಾಗಿ ಸೆರೆಮನೆಯಲ್ಲಿ ಅನೇಕ ರೀತಿಯ ಚಿತ್ರಹಿಂಸೆಗಳನ್ನು ಅನುಭವಿಸುತ್ತಿದ್ದಾರೆ. ನಮ್ಮ ದೇಶದ ಜನತೆ ತಮ್ಮ ಚೂರಿನ ಕುಟುಂಬದ ನಿರ್ವಹಣೆಗೋಸ್ಕರ ಸರ್ಕಾರದ ಪರವಾಗಿ ಕೈಜೋಡಿಸಿ ದೇಶದ ಮಹಾನ್ ದೇಶಪ್ರೇಮಿಗಳನ್ನು ಹಿಂಸಿಸುತ್ತಾರೆ. ಅವರಂತೆ ಬ್ರಿಟಿಷ್ ಅಧಿಕಾರಿಗಳು ಸಹ ದೇಶಪ್ರೇಮಿಗಳ ಸಣ್ಣ ಪುಟ್ಟ ತಪ್ಪುಗಳಿಗೂ ಸಹ ದೊಡ್ಡ ರೀತಿಯ ಶಿಕ್ಷೆಗಳನ್ನು ನೀಡುತ್ತಾ ದೇಶದ ಜನತೆಯನ್ನು ಕುರಿ, ಕೋಳಿಗಳಿಗಿಂತ ಅಮಾನುಷವಾಗಿ ಕೊಲ್ಲುತ್ತಿದ್ದಾರೆ. ಅಧಿಕಾರಿಗಳು ದೇಶದಲ್ಲಿನ ಪುಟ್ಟ ಬಾಲಕನಿಂದ ಹಿಡಿದು ಮುಪ್ಪಾಗಿರುವ ವೃದ್ಧನವರೆಗೂ ಒಂದೇ ರೀತಿಯ ಶಿಕ್ಷೆಗಳನ್ನು ನೀಡುತ್ತಾ ಹಿಂಸಿಸುತ್ತಿರುವುದು ಕಂಡುಬರುತ್ತದೆ. ಈ ದೇಶದಲ್ಲಿ ಜನಿಸಿದ ಗಂಡು-ಹೆಣ್ಣು ಎಂಬ ಎರಡು ಜಾತಿಗಳಲ್ಲಿ ಸ್ವಾತಂತ್ರ್ಯದ ಕಿಚ್ಚು, ಆಸೆ, ಹಂಬಲಗಳು ಅಪಾರವಾಗಿ ಮನೆಮಾಡಿದ್ದು, ವಿದ್ಯುತ್ ರೀತಿಯಲ್ಲಿ ಅವು ದೇಹದ ನರನಾಡಿಗಳಲ್ಲಿ ಸಂಚರಿಸುತ್ತಿದ್ದು, ಅವರು ದೇಶಮಾತೆಗಾಗಿ ಯಾವ ತ್ಯಾಗಕ್ಕಾದರೂ ಸಿದ್ಧ ಎಂಬುದನ್ನು ಅವರು ಮನಗಂಡಿದ್ದರು. ಹೀಗೆ ಬ್ರಿಟಿಷರು ಭಾರತಮಾತೆಯ ಭಕ್ತರನ್ನು ಸೆರೆಮನೆ ಎಂಬ ನಾಲ್ಕು ಗೋಡೆಯ ಗೂಡಿಗೆ ಸೇರಿಸಿ ಅವರನ್ನು ಮಾನಸಿಕವಾಗಿ, ದೈಹಿಕವಾಗಿ ಹೇಗೆ ಹಿಂಸಿಸುತ್ತಿದ್ದರು ಎಂಬುದನ್ನು ಮೆರವಣಿಗೆ-ಮಾಲಪಲ್ಲಿ ಕಾದಂಬರಿಯಲ್ಲಿ ಈ ಕೆಳಗಿನಂತೆ ಕಾಣಲಾಗಿದೆ.

ಮೆರವಣಿಗೆ ಕಾದಂಬರಿಯಲ್ಲಿ ಬ್ರಿಟಿಷ್ ಸರ್ಕಾರ ಆ ಸಂದರ್ಭದಲ್ಲಿ ಪುಟ್ಟ ಬಾಲಕನಿಂದ ಹಿಡಿದು ಮುದುಕನವರೆಗೂ ಸಾಮಾನ್ಯ ವ್ಯಕ್ತಿಯಿಂದ ಅಧಿಕಾರಿಯವರೆವಿಗೂ ಜೈಲುವಾಸ ತೀರಿಸಿದ್ದು ಕಂಡುಬರುತ್ತದೆ. ಒಮ್ಮೆ ಅಡ್ವೋಕೇಟ್ ಜೈಲಿನಲ್ಲಿರುವಾಗ ವಿಪರೀತ ಸಿಗರೇಟು ಸೇದುತ್ತಿರುತ್ತಾನೆ. ಈ ಹವ್ಯಾಸವನ್ನು ಬಿಡಿಸುವುದಕ್ಕೋಸ್ಕರ ಹೆಂಡತಿ ಆತನಿಗೆ ಜೈಲಿಗೆ ಹಿಂದಿ ಪುಸ್ತಕಗಳನ್ನು ಕಳುಹಿಸಿಕೊಡುತ್ತಾಳೆ. ಅವುಗಳನ್ನು ಅಡ್ವೋಕೇಟ್ ಜೈಲಿನಲ್ಲಿರುವ ಕೈದಿಗಳಿಗೆ ಕೊಡುತ್ತಾರೆ. (ಮೆರವಣಿಗೆ, ಪುಟ-೫೯೬, ೧೯೪೭) ರಾಷ್ಟ್ರೀಯತೆಯ ರಚನಾತ್ಮಕ ಕಾರ್ಯಗಳಲ್ಲಿ ಹಿಂದಿ ಭಾಷೆಯನ್ನು ಕಲಿಸುವುದು ಪ್ರಚಾರ ಮಾಡುವುದು ಪ್ರಮುಖವಾದ ಅಂಶವಾಗಿದೆ. ಜೊತೆಗೆ ಜೈಲಿನಲ್ಲಿ ಚರಕ, ನೂಲು, ಹಿಂಜಿಯನ್ನು ಗಮನಿಸಿದರೆ ಗಾಂಧೀಜಿಯವರ ಪ್ರಭಾವ, ಪ್ರೇರಣೆಯನ್ನು ಗುರುತಿಸಬಹುದಾಗಿದೆ. ಮಾಲಪಲ್ಲಿ ಕಾದಂಬರಿಯಲ್ಲಿ ರಾಮದಾಸ ಆ ನಾಡಿನ ಗಾಂಧಿಯಾಗಿ ಬದಲಾವಣೆಯ ಹರಿಕಾರನಾಗಿ ಜೈಲುಗಳಲ್ಲೆಲ್ಲಾ ರಾಟೆಗಳನ್ನು ಇಟ್ಟು ನೂಲು ತೆಗೆಸಿ ಇಡೀ ರಾಜ್ಯವೆಲ್ಲಾ ಸ್ವದೇಶಿ ಬಟ್ಟೆಗಳಿಂದ ತುಂಬಿ ಹೋಗುವಂತೆ ಮಾಡಬೇಕೆಂದು ಯೋಚಿಸುತ್ತಾನೆ. ಇಡೀ ರಾಜ್ಯ ರಾಮರಾಜ್ಯವಾಗಬೇಕೆಂದು ಕನಸು ಕಾಣುತ್ತಾನೆ. ಹೀಗೆ ಕನ್ನಡ-ತೆಲುಗು ಎರಡು ಭಾಷೆಗಳ ಕಾದಂಬರಿಗಳಲ್ಲಿಯೂ ಗಾಂಧೀಜಿಯವರ ಪ್ರೇರಣೆ ಇರುವುದನ್ನು ಅದನ್ನು ಜೈಲುಗಳಲ್ಲಿಯೂ ಸಹ ಸಮರ್ಥವಾಗಿ ಉಭಯ ಲೇಖಕರು ಬಳಸಿಕೊಂಡಿರುವುದನ್ನು ಗಮನಿಸಬಹುದಾಗಿದೆ.

ಮೆರವಣಿಗೆ ಕಾದಂಬರಿಯಲ್ಲಿ ಕರನಿರಾಕರಣೆ ಚಳುವಳಿಯ ಸನ್ನಿವೇಶವನ್ನು ಸುದರ್ಶನನು ನಿಬಾಯಿಸಿದ ರೀತಿ ಹೀಗಿದೆ. ಒಂದು ರೈತನ ಮನೆಯನ್ನು ಸುದರ್ಶನನು ಸ್ವರಾಜ್ಯ ಆಶ್ರಮವನ್ನಾಗಿ ರೂಪಿಸಿಕೊಂಡು ಅಲ್ಲಿ ಅನೇಕ ಸ್ವಯಂ ಸೇವಕರು ಸೇರುತ್ತಿದ್ದರು. ಈ ಆಶ್ರಮದಲ್ಲಿ ಸುದರ್ಶನನು "ಯಾರ್ಯಾರಿಗೆ ಎಷ್ಟೆಷ್ಟು ಪೈರು ನಷ್ಟವಾಗಿದೆ? ಅವನ ಮೇಲೆ ಬಿದ್ದಿರುವ ಕಂದಾಯದ ಹೊರೆ ಎಷ್ಟು? ಈ ಕಂದಾಯ ಅವನಿಗೆ ಕೊಡುವುದಕ್ಕಾಗುತ್ತದೆಯೇ? ಕೊಡದಿದ್ದರೆ ಏನು ಆಗುತ್ತೆ? ಸರ್ಕಾರದವರು ಬಂದು ಮನೆ, ಮಠ, ದನಕರು, ಜಮೀನುಗಳನ್ನು ಹರಾಜು ಹಾಕುತ್ತಾರೆ. ಕೊನೆಗೆ ಬಡಿಯುತ್ತಾರೆ. ಊರು ಬಿಟ್ಟು ಓಡಿಸುತ್ತಾರೆ. ಗುಂಡು ಹಾರಿಸುತ್ತಾರೆ. ಇದಕ್ಕೆಲ್ಲಾ ನೀವು ಸಿದ್ಧವಾಗಿರಬೇಕು?" ಎಂದು ಸ್ವಯಂ ಸೇವಾ ಘೋಷಣೆಯ ಭಾಷಣವನ್ನು ಮಾಡುತ್ತಾನೆ (ಪುಟ-೪೦೭, ೧೯೪೭). ದೇಶದಾದ್ಯಂತ ಕರನಿರಾಕರಣ ಚಳವಳಿ ನಡೆಯುತ್ತಿರುವಾಗ ಕರ್ನಾಟಕದಲ್ಲಿನ ಈ ಚಳುವಳಿಗೆ ಸುದರ್ಶನನ ನೇತೃತ್ವದಲ್ಲಿ ಚಳುವಳಿ ಪ್ರಾರಂಭವಾಗುತ್ತದೆ. ಬ್ರಿಟಿಷ್ ಅಧಿಕಾರಿಗಳು ಮತ್ತು ಬ್ರಿಟಿಷ್ ಸರ್ಕಾರ ನೇಮಿತ ಭಾರತದ ಪ್ರತಿನಿಧಿಗಳು ಭಾರತೀಯರು ಎಂಬ ಮನೋಭಾವವನ್ನು ತಾಳದೆ ಅಧಿಕಾರದ ವ್ಯಾಮೋಹಕ್ಕೆ ಬಲಿಯಾಗಿ ಹಿಗ್ಗಾಮುಗ್ಗಾ ಥಳಿಸುತ್ತಿರುವುದನ್ನು ಮತ್ತು ಜನರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತಹ ದುಷ್ಕೃತ್ಯಗಳು ನಡೆಯುತ್ತಿರುವುದನ್ನು ಚಿತ್ರಿಸಿದ್ದಾರೆ. ದೇಶದ ಜನತೆ ದೇಶಮಾತೆಯ ಮುಕ್ತಿಗೋಸ್ಕರ ಸರ್ವವನ್ನು ತ್ಯಾಗಮಾಡಬೇಕು ಎಂದು ಜನರನ್ನು ಏಕನಿರ್ಧಾರಕ್ಕೆ ಕಟ್ಟುಬಿದ್ದಿರುವಂತೆ ಬೋಧನೆ ನಡೆಸುವುದನ್ನು ಗುರುತಿಸಬಹುದು. ಮಾಲಪಲ್ಲಿ ಕಾದಂಬರಿಯಲ್ಲಿ ಕೂಲಿಗಳ ಪರವಾಗಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿ ಪ್ರಾಣವನ್ನರ್ಪಿಸಿದ

ಸಂಗದಾಸನ ಹೆಂಸರಿನಲ್ಲಿ ಸಂಗಪೀಠ ರಚನೆಯಾಗುತ್ತದೆ. ರಾಮದಾಸು ಸಂಗಪೀಠದಲ್ಲಿ ಕೂಲಿಯಾಳುಗಳ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಹೇಳಿಕೊಡುತ್ತಾನೆ. ರಾತ್ರಿ ಹೊತ್ತಿನಲ್ಲಿ ಅಪ್ಪಾದಾಸು ಕೂಲಿ ಮಕ್ಕಳಿಗೆ ರಾತ್ರಿ ಪಾಠ ಹೇಳಿಕೊಡುತ್ತಾನೆ. ಪತ್ರಿಕೆಗಳು ಬರುತ್ತಿವೆ. ಜನರು ಲೋಕವ್ಯವಹಾರವನ್ನು ತಿಳಿದುಕೊಳ್ಳುತ್ತಿದ್ದಾರೆ. ಮತ್ತು ದುರ್ವ್ಯಸನಿಗಳಿಂದ ಜನರು ಇದರಿಂದ ದೂರವಾಗುತ್ತಿದ್ದಾರೆ.

ಹೀಗೆ ಜಾತಿ ಭೇದವಿಲ್ಲದೆ ಎಲ್ಲಾ ಬಗೆಯ ವ್ಯಕ್ತಿಗಳು, ಮಕ್ಕಳು ಶಿಕ್ಷಣ ಕಲಿಯಲು ಮತ್ತು ಕಲಿಸಲು ಸಂಗಪೀಠ ವಿದ್ಯಾಲಯವಾಗಿ ಚಿತ್ರಿತವಾಗಿರುವುದು, ಸಂಘ, ಸಮೂಹಗಳು ರೂಪಿತವಾಗುವುದಕ್ಕೆ ನೆರವಾಗುವುದನ್ನು ಕಾಣಬಹುದಾಗಿದೆ. ಕನ್ನಡದ ಕಾದಂಬರಿಯಲ್ಲಿ ಸುದರ್ಶನನು ಸ್ವರಾಜ್ಯ ಆಶ್ರಮವನ್ನು ಸ್ಥಾಪಿಸಿ ಅದರಲ್ಲಿ ರಾಷ್ಟ್ರೀಯತೆಯ ಅಂಶಗಳನ್ನು ಬಿತ್ತರಿಸುವುದನ್ನು ಕಾಣಬಹುದಾದರೆ ತೆಲುಗು ಕಾದಂಬರಿಯಲ್ಲಿ ರಾಮದಾಸ ಮತ್ತು ಆತನ ಕುಟುಂಬದ ಸಹಚರರು ಕೂಲಿ ಆಳುಗಳಿಗೆ, ಮಕ್ಕಳಿಗೆ ಸಾಮಾಜಿಕ ಶಿಕ್ಷಣವನ್ನು ಕೊಡುವುದರ ಮೂಲಕ ಸಮಾನತೆಯನ್ನು ಸ್ಥಾಪಿಸಬೇಕೆಂಬ ಉದ್ದೇಶವನ್ನು ಗುರುತಿಸಬಹುದಾಗಿದೆ.

ಮೆರವಣಿಗೆ ಕಾದಂಬರಿಯಲ್ಲಿ ಒಬ್ಬ ಪುನರುಜ್ಜೀವನ ಅಧಿಕಾರಿ ಅಪ್ಪನ್ ಮತ್ತು ಒಬ್ಬ ಮಿಸ್ ಅವರು ಸೀಮೆ ಕೋಳಿಗಳನ್ನು ಸಾಕುವ ಕ್ರಮ ಬೋಧನೆ, ಕಸೂತಿ ಕೆಲಸ, ಕಾಲುಚೀಲಗಳ ತಯಾರಿ, ಬಟ್ಟೆ ಹೊಲಿಯುವುದು, ಸೂಲಗಿತ್ತಿಯ ಪ್ರಾಥಮಿಕ ಪಾಠಗಳನ್ನು ಕಲಿಸುತ್ತಾರೆ. (ಮೆರವಣಿಗೆ, ಪುಟ-೩೮೨, ೧೯೪೭) ದೇಶ ಕೇವಲ ರಾಜಕೀಯ ಬಿಡುಗಡೆಗಾಗಿ ಹೋರಾಡುವುದರ ಜೊತೆಗೆ ಗ್ರಾಮಗಳ ಉದ್ಧಾರ, ಬೆಳವಣಿಗೆಗಳಂತಹ ಚಟುವಟಿಕೆಗಳನ್ನು ಮಾಡಬೇಕು ಎಂಬಂತಹ ಮಹಾನ್ ಚಿಂತನೆಯನ್ನು ಮಹಾತ್ಮಗಾಂಧೀಜಿಯವರು ಹೊಂದಿದ್ದರು ಎಂಬುದನ್ನು ಇಲ್ಲಿ ಗುರುತಿಸಬಹುದಾಗಿದೆ. ಮಾಲಪಲ್ಲಿ ಕಾದಂಬರಿಯಲ್ಲಿ ಸಂಗದಾಸನು

ಕನ್ನಡ ಭಾಷಾಂತರ

ಬ್ರಾಹ್ಮಣರು ಬಹಳ ವರ್ಷಗಳವರೆಗೆ ಬೇರೆ ಬೇರೆ ವೃತ್ತಿಗಳನ್ನು ಆಶ್ರಯಿಸಿದರು. ಅವರಿಗೆ ಪಾರತಂತ್ರ್ಯ ಪೂರ್ತಿಯಾಗಿ ಪ್ರಾಪ್ತವಾಗಿದೆ. ಕ್ಷಾತ್ರಿಯೇತರರು ಪೂರ್ವಕಾಲದಲ್ಲಿಯೇ ಕ್ಷಾತ್ರಧರ್ಮವನ್ನು ಅವಲಂಬಿಸಿದ್ದಾರೆ. ಶೂದ್ರರು ಅನೇಕರು ಅರಸರಾದರು. ಕೂಲಿಯವನು ಸಹ ತನ್ನ ಮತವನ್ನು ಕೊಟ್ಟು ಪ್ರಭುತ್ವವನ್ನು ನಡೆಸುವುದು ಉತ್ತಮವೆಂದುಕೊಳ್ಳುತ್ತಾನೆ. ಬುದ್ಧ, ರಾಮಾನುಜ, ಬಸವ, ಚೆನ್ನಬಸವ ಮೊದಲಾದ ಮತ ಸಂಸ್ಕರ್ತರರು ಇತರ ಕುಲಗಳಲ್ಲಿ ಮತ ಪ್ರಚಾರಕ ಸಂಘಗಳನ್ನು ತಯಾರು ಮಾಡಿದರು. (ಮೂಲ; ಅನುಬಂಧ-೩ ಅಧ್ಯಾಯ-೮ ಕ್ರ.ಸಂ. ೬) ಮನುಷ್ಯ ಜನಿಸಿದ ದಿನಗಳಿಂದಲೂ ಮೇಲ್ಜಾತಿಯವರಾದ ಬ್ರಾಹ್ಮಣ, ಕ್ಷತ್ರಿಯರು ಭೂಮಿಗೆ ಅಧಿಪತಿಗಳಾಗುತ್ತಾ ಬಂದಿದ್ದಾರೆ. ಸಾಮಾನ್ಯ ಕೆಳವರ್ಗದ ಜನತೆಯ ಮೇಲೆ ಅಧಿಕಾರ ಚಲಾಯಿಸುತ್ತ ಅವರನ್ನು ವಿವಿಧ ರೀತಿಯ ಹಿಂಸೆಗಳಿಗೆ ಗುರಿಯಾಗಿಸಿದ್ದಾರೆ. ಈ ಅಸಮಾನತೆಯನ್ನು ಹೋಗಲಾಡಿಸಲು ಬುದ್ಧ, ಬಸವ, ರಾಮಾನುಜ, ಚನ್ನಬಸವನಂತಹ ಮಹಾನ್ ವ್ಯಕ್ತಿಗಳು ಸಾಮಾಜಿಕ ಸುಧಾರಣೆಗಾಗಿ ಅನೇಕ

ರೀತಿಯ ಚಿಂತನೆ, ಉಪದೇಶಗಳನ್ನು ನೀಡುತ್ತಾ ತಮ್ಮ ಪ್ರಾಣಗಳನ್ನು ಅರ್ಪಿಸಿ ಅಮರರಾಗಿದ್ದಾರೆ. ಸಮಾಜ ಬದಲಾವಣೆಯ ಹಾದಿಯಲ್ಲಿದೆ. ಬ್ರಾಹ್ಮಣರನೇಕರು ತಮ್ಮ ಮೂಲ ವೃತ್ತಿಗಳನ್ನು ಅಲ್ಲದೆ ಇತರೆ ವೃತ್ತಿಗಳ ಕಡೆಗೆ ಗಮನಹರಿಸಿದ್ದಾರೆ. ಶೂದ್ರರು ರಾಜ್ಯವನ್ನು ಆಳುವ ಪ್ರಭುಗಳಾಗಿದ್ದಾರೆ. ಒಂದು ಹೊತ್ತಿನ ಊಟಕ್ಕೆ ಹಗಲಿರುಳು ಮೈಮುರಿದು ದುಡಿಯುವ ಕೂಲಿಯವನು ಅಧಿಕಾರದ ಚುಕ್ಕಾಣಿ ಹಿಡಿದಿದ್ದಾನೆ. ಸಂಗದಾಸನ ಈ ಮಾತುಗಳಲ್ಲಿ ಹಿಂದೂ ಧರ್ಮದ ಪುನರ್ ನಿರ್ಮಾಣಕ್ಕೂ ಹೆಚ್ಚು ಒತ್ತುಕೊಟ್ಟಿರುವುದನ್ನು ಗಮನಿಸಬಹುದಾಗಿದೆ. ಕನ್ನಡ ಕಾದಂಬರಿಯಲ್ಲಿ ಲೇಖಕರು ಗ್ರಾಮಪುನರುಜ್ಜೀವನ ಅಂಶಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಸಮಾಜದಲ್ಲಿನ ಸಾಮಾನ್ಯ ಜನತೆ ಪರಾವಲಂಬಿಗಳಾಗದೆ ಸ್ವಾವಲಂಬಿ ಜೀವನವನ್ನು ನಡೆಸಬೇಕು ಎಂಬ ಉದ್ದೇಶವನ್ನು ಈಡೇರಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ತೆಲುಗು ಕಾದಂಬರಿಯಲ್ಲಿ ಲೇಖಕರು ಹಿಂದೂ ಸಮಾಜದಲ್ಲಿ ವಾಸಮಾಡುವ ಎಲ್ಲಾ ಜನರು ಸಮಾನತೆಯ ದೃಷ್ಟಿಯಿಂದ ಸಮಾನ ರೊಟ್ಟಿ, ಸಮಾನ ಬಟ್ಟೆಯ ಅಡಿಯಲ್ಲಿ ಜೀವಿಸಬೇಕು ಎಂಬ ಹಿಂದೂ ಸಮಾಜ ಪುನರ್‌ನಿರ್ಮಾಣದಂತಹ ಮಹಾನ್ ಏಳಿಗೆಯ ಕಾರ್ಯದ ಕಡೆ ಗಮನಕೊಟ್ಟಿರುವುದನ್ನು ಕಾಣಬಹುದಾಗಿದೆ.

ಮೆರವಣಿಗೆ ಕಾದಂಬರಿಯಲ್ಲಿ ಗಾಂಧೀಜಿಯವರು ವೈಸರಾಯರ ಪ್ರತ್ಯುತ್ತರವನ್ನು ನೋಡಿ ಹೇಳಿರುವುದನ್ನು ಲೇಖಕರು ಕೋಟ್ ಮಾಡಿರುವುದು "ನಾನು ನಮಸ್ಕಾರ ಮಾಡಿ ಅನ್ನ ಕೇಳಿದೆ. ಆದರೆ ನನಗೆ ದೊರಕಿದುದು ಕಲ್ಲು. ಬ್ರಿಟಿಷ್ ಜನಾಂಗ ಹಿಂಸೆಗೆ ಮಾತ್ರ ಬಗ್ಗುವುದು. ಆದುದರಿಂದ ವೈಸರಾಯರ ಪ್ರತ್ಯುತ್ತರದಿಂದ ನನಗೆ ಆಶ್ಚರ್ಯವಾಗಿಲ್ಲ. ಭಾರತದಲ್ಲಿ ಇರುವ ಶಾಂತಿ, ಸೆರೆಮನೆಯ ಶಾಂತಿ ಮಾತ್ರ. ಭಾರತ ಒಂದು ದೊಡ್ಡ ಸೆರೆಮನೆ. ಈ ಕಾನೂನನ್ನು ನಾನು ಪ್ರತಿಭಟಿಸುತ್ತೇನೆ. ದೇಶದ ಶಾಂತಿಯನ್ನು ಒಡೆಯುತ್ತೇನೆ." (ಮೆರವಣಿಗೆ, ಪುಟ-೩೮೯, ೧೯೪೭) ಗಾಂಧೀಜಿ ಜಗತ್ತು ಕಂಡಂತಹ ಮಹಾನ್ ಶಾಂತಿಪ್ರಿಯರೆಂದು ಗುರುತಿಸಿಕೊಂಡಿದ್ದಾರೆ. ಹಾಗಾಗಿಯೇ ಅವರು ಮಹಾತ್ಮರಾಗಿದ್ದದ್ದು ಎನಿಸುತ್ತದೆ. ನಮ್ಮ ದೇಶದಲ್ಲಿ ನಮಗೆ ವನವಾಸ, ಯಜಮಾನಗಿರಿ ಅವರದು. ಗುಲಾಮಗಿರಿ ನಮ್ಮದು ನಮಗೆ ಉಪವಾಸ ಎಂದು ಬ್ರಿಟಿಷರ ದೌರ್ಜನ್ಯ, ದುಷ್ಕೃತ್ಯದಿಂದ ಬೇಸತ್ತ ಗಾಂಧಿ ಇಲ್ಲಿಯವರೆವಿಗೂ ಅಹಿಂಸೆಯಿಂದಲೇ ತಾಳ್ಮೆಯಿಂದ ಇದ್ದು, ಬ್ರಿಟಿಷರು ಹಿಂಸೆಗೆ ಮಾತ್ರ ಬಗ್ಗುವುದು. ಭಾರತದಲ್ಲಿನ ಶಾಂತಿ ಕೇವಲ ಸೆರೆಮನೆಯಲ್ಲಿ ಮಾತ್ರ ದೇಶದ ಉಸಿರನ್ನು ಹಿಡಿದಿಟ್ಟಿರುವ ಶಾಂತಿಯನ್ನು ಒಡೆಯುತ್ತೇನೆ ಎಂಬಂತಹ ಮಾತುಗಳು ಶಾಂತಮೂರ್ತಿಯಲ್ಲು ಸಿಟ್ಟು, ಕೋಪ, ತಾಪ, ಹಿಂಸೆಯ ಮನೋಭಾವ ಎಷ್ಟಿತ್ತು ಎಂಬುದನ್ನು ತಿಳಿಯಪಡಿಸುತ್ತಿವೆ. ಎಷ್ಟೇ ಶಾಂತಿ, ಸಂಯಮ, ತಾಳ್ಮೆಯವರಾದರೂ ತನಗೆ ತನ್ನ ನಾಡಿಗೆ ಕುತ್ತು, ಆಪತ್ತು, ಅನ್ಯಾಯ ಒದಗಿದಾಗ ಸಿಡಿದೇಳುತ್ತಾನೆ ಎಂಬುದಕ್ಕೆ ಗಾಂಧೀಜಿಯವರ ಈ ಮಾತುಗಳೇ ನಿದರ್ಶನ. ತೆಲುಗು ಕಾದಂಬರಿಯಲ್ಲಿ ಸೆಟಲ್ಮೆಂಟುಗಳಲ್ಲಿರುವ ಖೈದಿಗಳೆಲ್ಲ ಕ್ರಿಶ್ಚಿಯನ್ ಧರ್ಮದ ಪ್ರಾರ್ಥನೆಗೆ ಖಾಯಂ ಆಗಿ ಪ್ರತಿದಿನ ಹೋಗಬೇಕಾಗಿತ್ತು. ಆದರೆ ರಾಮದಾಸು-ಪುಲ್ಲಯ್ಯ ಯಾರೂ ಪ್ರಾರ್ಥನೆಗೆ ಹೋಗಬಾರದೆಂದು ನಿಶ್ಚಯ ಮಾಡುತ್ತಾರೆ. ಆ ಸಂದರ್ಭದ ಸಂಭಾಷಣೆ ಹೀಗಿದೆ.

ಕನ್ನಡ ಭಾಷಾಂತರ

ರಾಮದಾಸು – ನಾವು ಪ್ರಾರ್ಥನೆಗೆ ಹೋಗದೆ ಓಡಿ ಹೋದರೆ ಪೋಲೀಸರಿಂದ ಬಂದೂಕಿನಿಂದ ಹೊಡೆದು ಸಾಯಿಸುತ್ತಾರೆ.

ಪುಲ್ಲಯ್ಯ – ಅದಕ್ಕೂ ನಾವು ಸಿದ್ದರಾಗಿಯೇ ಇರಬೇಕು. ಎಷ್ಟು ಮಂದಿ ಹೆಣ್ಣುಮಕ್ಕಳನ್ನು, ಚಿಕ್ಕಮಕ್ಕಳನ್ನು ಕೊಲ್ಲುತ್ತಾರೋ ನೋಡೋಣ.

ರಾಮದಾಸು– ನಾಳೆ ಬೆಳಿಗ್ಗೆ ಯಾರೂ ಪ್ರಾರ್ಥನೆಗೆ ಹೋಗಬಾರದು. ಆಗ ಹೊರಗಡೆ ಸರ್ಕಾರದವರು ಕದಲದೆ ಕಾವಲು ನಿಂತಿರುತ್ತಾರೆ. ಅವರವರ ದಾರೀಲಿ ಅವರು ಹೋಗೋಣ. ಸಾಯಿಸಿದರೆ ಸಾಯಿಸಲಿ ನಾವು ಮಾತ್ರ ದೌರ್ಜನ್ಯಕ್ಕೆ ಇಳಿಯಬಾರದು. (ಮೂಲ; ಅನುಬಂಧ–೩ ಅಧ್ಯಾಯ–೮ ಕ್ರಸಂ. ೭)

ಬ್ರಿಟಿಷರು ಭಾರತೀಯರನ್ನು ರಾಜಕೀಯ, ಆರ್ಥಿಕವಾಗಿ ಶೋಷಣೆ ಮಾಡಿದ್ದಲ್ಲದೆ ಧಾರ್ಮಿಕವಾಗಿ ಶೋಷಣೆ ಮಾಡಲು ಪ್ರಯತ್ನಿಸುತ್ತಿರುವುದನ್ನು ಕಾಣಬಹುದಾಗಿದೆ. ಭಾರತದ ಹಿಂದೂಗಳನ್ನು ಕ್ರಿಶ್ಚಿಯನ್ ಪ್ರಾರ್ಥನೆಗೆ ಕರೆಸಿಕೊಂಡು ಬಲವಂತವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಿಸುತ್ತಾರೆ ಎಂಬ ಭಯ ಅವರು ಹೇಳುವ ಕೆಲಸಗಳಿಗೆ ತಲೆಬಾಗದೆ ಪ್ರತಿಭಟಿಸುವುದನ್ನು ಸಹ ಇಲ್ಲಿ ಗುರುತಿಸಬಹುದಾಗಿದೆ. ಇಲ್ಲಿ ರಾಮದಾಸು, ಪುಲ್ಲಯ್ಯ ಗಾಂಧೀಜಿಯವರ ಕಟ್ಟಾ ಅನುಯಾಯಿಗಳೆಂಬುದು ಸಾಬೀತಾಗುವುದನ್ನು ಕಾಣಬಹುದಾಗಿದೆ. ಹಾಗೆ ಕನ್ನಡ ಕಾದಂಬರಿಯಲ್ಲಿ ಅಹಿಂಸಾವಾದಿಯಾದ ಗಾಂಧೀಜಿಯವರೇ ಹಿಂಸಾ ಮಾರ್ಗಕ್ಕೆ ಒತ್ತುಕೊಟ್ಟು ದೇಶದಿಂದ ಬ್ರಿಟಿಷರನ್ನು ಬಹುಬೇಗನೆ ಹೊರಹಾಕಬೇಕು. ಹಿಂಸೆಗೆ ಪ್ರತಿಹಿಂಸೆ, ಏಟಿಗೆ ಎದಿರೇಟು ಎಂಬಂತೆ ಕ್ರಾಂತಿಕಾರಕ ಮನಸ್ಥಿತಿಯನ್ನು ಗಮನಿಸಬಹುದಾಗಿದೆ. ಆದರೆ ತೆಲುಗು ಕಾದಂಬರಿಯಲ್ಲಿ ಅಹಿಂಸಾ ತತ್ವಕ್ಕೆ ಮಹತ್ವ ಕೊಟ್ಟು ರಾಮದಾಸು–ಪುಲ್ಲಯ್ಯರನ್ನೊಳಗೊಂಡಂತೆ ಖೈದಿ ಸಮೂಹ ತಮ್ಮ ಪ್ರಾಣಗಳನ್ನು ಅರ್ಪಿಸಲು ಸಿದ್ಧವಾಗಿರುವುದನ್ನು ಗುರುತಿಸಬಹುದಾಗಿದೆ. ಕನ್ನಡ ಕಾದಂಬರಿಕಾರರು ಹಿಂದಿನ ಎಲ್ಲಾ ಕಾದಂಬರಿಗಳಲ್ಲಿಯೂ ಕೇವಲ ಗಾಂಧೀಜಿಯವರ ಸಿದ್ಧಾಂತಗಳನ್ನು ಮಾತ್ರ ಬಳಸಿಕೊಂಡು ಕ್ರಾಂತಿಕಾರಕವಾಗಿ ಹೋರಾಟ ಮಾಡುತ್ತಿರುವುದನ್ನು ಚಿತ್ರಿಸಿದ್ದರೆ, ಈ ಕಾದಂಬರಿಯಲ್ಲಿ ಮಾತ್ರ ಸ್ವತಃ ಗಾಂಧೀಜಿಯವರೆ ಹಿಂಸಾಪ್ರವೃತ್ತಿಗೆ ಕುಮ್ಮಕ್ಕು ಕೊಟ್ಟಿರುವುದನ್ನು ಗೋರೂರು ರಾಮಸ್ವಾಮಿ ಅಯ್ಯಂಗಾರರು ಹಿಡಿದಿಟ್ಟಿದ್ದಾರೆ. ತ.ರಾ.ಸು., ಶಿವರಾಮ ಕಾರಂತ, ಬಸವರಾಜ ಕಟ್ಟಿಮನಿ ಅವರಿಗಿಂತ ಗೋರೂರು ರಾಮಸ್ವಾಮಿ ಅಯ್ಯಂಗಾರರು ವಿಭಿನ್ನವಾಗಿದ್ದು ಗಾಂಧೀಜಿಯವರ ಇನ್ನೊಂದು ಮನಸ್ಥಿತಿಯನ್ನು ಪರಿಚಯಿಸಿರುವುದು ಕಂಡುಬರುತ್ತದೆ. ಆದರೆ ತೆಲುಗು ಕಾದಂಬರಿಕಾರರು ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳೆಲ್ಲದರಲ್ಲಿಯೂ ಗಾಂಧೀಜಿಯವರ ಅಹಿಂಸಾ ಮನೋಭಾವವನ್ನು ಚಿತ್ರಿಸಿದ್ದು ಹೆಚ್ಚಿನ ಗಾಂಧಿಪ್ರಿಯರು ಎಂಬುದನ್ನು ಇವರ ಮೇಲೆ ಗಾಂಧೀಜಿಯವರ ಪ್ರಭಾವ ಪ್ರೇರಣೆ ಯಥೇಚ್ಛವಾಗಿತ್ತು ಎಂಬುದನ್ನು ಕಾಣಲಾಗಿದೆ.

❖❖❖

ಅಧ್ಯಾಯ : ಒಂಬತ್ತು

ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳಲ್ಲಿ ಕಂಡುಬರುವ ಭಿನ್ನ ಸಮುದಾಯಗಳ ಪ್ರತಿನಿಧೀಕರಣ

ಅಧ್ಯಾಯ: ಒಂಬತ್ತು

ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳಲ್ಲಿ ಕಂಡುಬರುವ ಭಿನ್ನ ಸಮುದಾಯಗಳ ಪ್ರತಿನಿಧೀಕರಣ

ಭಾರತದ ಸ್ವಾತಂತ್ರ್ಯ ಹೋರಾಟ ಎಂಬುದು ಒಂದು ಮಹಾನ್ ಯಜ್ಞ ಕಾರ್ಯವಾಗಿದ್ದು, ಅಂತಹ ಕಾರ್ಯದಲ್ಲಿ ದೇಶದ ವಿವಿಧ ಪ್ರದೇಶಗಳು ಹಾಗೂ ಎಲ್ಲಾ ಜನಸಮುದಾಯಗಳ ಪ್ರಾತಿನಿಧ್ಯವಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಅವುಗಳಲ್ಲಿ ಜನಸಮುದಾಯಗಳ ಪ್ರಾತಿನಿಧ್ಯವನ್ನು ಧಾರ್ಮಿಕ ಸಮುದಾಯ, ಜಾತಿ ಸಮುದಾಯ, ವರ್ಗಸಮುದಾಯ, ಲಿಂಗಸಮುದಾಯ ಎಂಬ ಈ ನೆಲೆಗಳಲ್ಲಿ ಗುರುತಿಸಬಹುದಾಗಿದೆ. ಆದರೆ ಕನ್ನಡ–ತೆಲುಗು ಕಾದಂಬರಿಗಳು ಈ ಎಲ್ಲಾ ಸಮುದಾಯಗಳ ಪ್ರಾತಿನಿಧ್ಯವನ್ನು ಚರ್ಚಿಸಿವೆ ಎಂದು ಹೇಳುವಂತಿಲ್ಲ. ಆದರೂ ಕೆಲವೇ ಕೆಲವು ಸಮುದಾಯಗಳ ಪ್ರಾತಿನಿಧ್ಯವನ್ನು ಚಿತ್ರಿಸಿರುವ ಕಾದಂಬರಿಗಳು ಈ ಎರಡು ಭಾಷೆಗಳಲ್ಲಿವೆ. ಮುಖ್ಯವಾಗಿ ಧಾರ್ಮಿಕ ಸಮುದಾಯದಲ್ಲಿ ಮುಸ್ಲಿಂರ ಭಾಗವಹಿಸುವಿಕೆ, ಜಾತಿ ಸಮುದಾಯದಲ್ಲಿ ಮೇಲ್ಜಾತಿ–ಕೆಳಜಾತಿ ಜನರ ಪ್ರತಿನಿಧೀಕರಣ, ವರ್ಗಸಮುದಾಯದಲ್ಲಿ ಅಕ್ಷರಸ್ಥವರ್ಗ ಮತ್ತು ಅನಕ್ಷರಸ್ಥ ವರ್ಗದ ಪಾಲ್ಗೊಳ್ಳುವಿಕೆ ಹಾಗೂ ಲಿಂಗಸಮುದಾಯದಲ್ಲಿ ಸ್ತ್ರೀ–ಪುರುಷರ ಸಹಭಾಗಿತ್ವ, ಪ್ರತಿಕ್ರಿಯೆ ಯಾವ ರೀತಿ ಇತ್ತು ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಸ್ವಾತಂತ್ರ್ಯ ಚಳವಳಿಯಲ್ಲಿ ಹಲವಾರು ಮಂದಿ ಅಧ್ಯಾಪಕರು, ಡಾಕ್ಟರರು, ವಕೀಲರು ಗಾಂಧೀಜಿಯವರ ಪ್ರಭಾವ ಪ್ರೇರಣೆಯಿಂದ ಹೋರಾಟಗಾರರನ್ನು ಪ್ರಚೋದಿಸುವುದರಲ್ಲಿ, ಸಮಾಜ ಸೇವೆಯಂತಹ ಕಾರ್ಯ ಮಾಡುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಇವರು ಹಳ್ಳಿಯ ಜನರನ್ನು, ವಿದ್ಯಾರ್ಥಿಗಳನ್ನು ಒಗ್ಗೂಡಿಸುವ ಕೆಲಸವನ್ನು ಮಾಡುತ್ತಾರೆ. ಪ್ರಮುಖವಾಗಿ ಅಧ್ಯಾಪಕರು ರಾಷ್ಟ್ರೀಯ ಶಾಲೆಗಳನ್ನು ತೆರೆಯುವುದರ ಮೂಲಕ ತಮ್ಮ ಮೊನಚಾದ ಭಾಷಣದ ಮೂಲಕ ಇನ್ನೂ ಬೇರೆ ಬೇರೆ ಮಾಧ್ಯಮಗಳ ಮೂಲಕ ಪರೋಕ್ಷವಾಗಿ ಚಳವಳಿಗಾರರನ್ನು ಪ್ರೋತ್ಸಾಹಿಸುತ್ತಾರೆ. 'ಮಾಡಿ ಮಡಿದವರು' ಕಾದಂಬರಿಯಲ್ಲಿ ಶಂಕರಪ್ಪ ಮಾಸ್ತರರು ನೆಹರೂ ಬನೀನನ್ನು ತೊಟ್ಟುಕೊಂಡು ತಮ್ಮ ಲಾವಣಿ ಗೀತೆಯ ಮೂಲಕ ಯುವಕರನ್ನು ಪ್ರೇರೇಪಿಸುತ್ತಿದ್ದರು. ಇಡೀ ಕಲ್ಲಾಪುರದ ಜನರು ಅವರ ಲಾವಣಿ ಗೀತೆಯನ್ನು ಕೇಳಿ ರೋಮಾಂಚನಗೊಳ್ಳುತ್ತಾರೆ.

"ಹೊಲಾ ಬಿಟ್ಟು ಏಳಿರೋ
ಮನೀ ಬಿಟ್ಟು ಏಳಿರೋ
ತೋಟಾ ಬಿಟ್ಟು ಏಳಿರೋ
ಊಟಾ ಬಿಟ್ಟು ಏಳಿರೋ
ತಂದೆ ಗಾಂಧಿ ಒಂದೇ ಒಂದು
ಮಾತು ನಿಮಗೆ ಹೇಳಿದಾನೆ
ಕಿವಿಗೊಟ್ಟು ಕೇಳಿರೋ
ಮನಗೊಟ್ಟು ಕೇಳಿರೋ
ತಾಯೀ ಹೊಟ್ಯಾಗ ಹುಟ್ಟಿದವರೆಲ್ಲಾ ಏಳಿರೋ
ಗಂಡು ಹೆಣ್ಣು ಕೂಸು ಕುನ್ನಿ ಎಲ್ಲಾ ಏಳಿರೋ
ಮೀಸೀ ಹೊತ್ತ ಗಂಡಸರೆಲ್ಲಾ ಏಳಿರೋ (ಮಾಡಿ ಮಡಿದವರು, ಪುಟ-೪೩, ೧೯೪೮)

ಸಾಮಾನ್ಯ ಭಾಷೆಯಲ್ಲಿರುವಂತಹ ಈ ಲಾವಣಿ ಪದ, ಗೀತೆ, ಅಜ್ಞಾನದ ಮಡುವಿನಲ್ಲಿ ಬಿದ್ದಿದ್ದ ಕಲ್ಲಾಪುರದ ಜನರ ಮೇಲೆ ಅಗಾಧವಾದ ಪ್ರಭಾವವನ್ನು ಬೀರಿ ಯುವಕನಿಂದ ಹಿಡಿದು, ಸ್ತ್ರೀಯರ ಸಮೇತವಾಗಿ ಮುದುಕನು ಸಹ ತನ್ನ ಪ್ರಾಣವನ್ನು ಲೆಕ್ಕಿಸದೆ ದೇಶಕ್ಕಾಗಿ ಹೋರಾಡಲು ಮುಂದಾಗುತ್ತಾನೆ. ಮುದುಕ ಬಾಳಪ್ಪನಿಗೆ ಮೊದಲಿನಿಂದಲೂ ಗಾಂಧಿ ಎಂದರೆ ತುಂಬಾ ಪ್ರೀತಿ ಇರುತ್ತದೆ. "ಮಾಡಿರಿ, ಮಾಡಿರಿ, ನಾನೂ ಬರ್ತೀನಿ ನಿಮ್ಮ ಸಂಗಡ. ಆ ಕೆಂಪು ಮೂತೀ ಮಂದಿನ್ನ ಹೊರಗೆ ಹಾಕೇ ಬಿಡೋಣ ಈ ಸರತಿ"ಎಂದು ನುಡಿಯುತ್ತಾನೆ. (ಮಾಡಿ ಮಡಿದವರು, ಪುಟ-೪೭, ೧೯೪೮)

ಶೇಖರ ಮತ್ತು ಅವನ ತಂಡದವರ ಗುಟ್ಟು ತಿಳಿಯಲು ದೇಸಾಯಿ ಮತ್ತು ಪೊಲೀಸಿನವರು ದಿನವೆಲ್ಲ ಮುದುಕನಿಗೆ ಏಟಿನ ಮೇಲೆ ಏಟು ಹಾಕುತ್ತಾರೆ. ಆದರೂ ಬಾಳಪ್ಪ ಬಾಯಿ ಬಿಡುವುದಿಲ್ಲ. ಬಹುಮಾನ ಕೊಡುವುದಾಗಿ ಆಸೆ ಹುಟ್ಟಿಸಿದರೂ ಮುದುಕ ಆ ಲೋಭದ ಹೊಡೆತವನ್ನು ಮಾತ್ರ ಸಹಿಸದೆ ಕೆರಳಿದ ಹುಲಿಯಂತೆ ಕನಲಿ ಒಂದೇ ಮಾತಿನಲ್ಲಿ ಉತ್ತರವಿತ್ತ: "ಕಿತ್ತೂರ ಚೆನ್ನವ್ವನ ನಾಡಿನಾಗ ಹುಟ್ಟಿ ಬೆಳದೀನಿ ಇಂಥ ಹೇಸಿ ಕೆಲಸ ನಮ್ಮ ಮಂದಿ ಯಾರೂ ಮಾಡಾಕಿಲ್ಲ. ನಾಲಿಗೆ ಬಿಗಿಹಿಡಿದು ಮಾತಾಡಿರಿ" (ಮಾಡಿ ಮಡಿದವರು, ಪುಟ-೯೮, ೧೯೪೮). ಮುದುಕನಲ್ಲಿನ ನಿಷ್ಠೆ, ಪ್ರಾಮಾಣಿಕತೆ, ದೇಶಪ್ರೇಮವನ್ನು ಕಾಣಬಹುದಾಗಿದೆ. ಬಾಳಪ್ಪನಂತಹ ಅನೇಕ ಸ್ತ್ರೀ-ಪುರುಷರು ದೇಶಕ್ಕಾಗಿ ತಮ್ಮ ಪ್ರಾಣಗಳನ್ನು ಅರ್ಪಿಸಿದ್ದಾರೆ. ಅದೇ ಕಾದಂಬರಿಯಲ್ಲಿ ಸ್ವಾತಂತ್ರ್ಯ ಚಳವಳಿಯನ್ನು ಕುರಿತು ಚರ್ಚೆ ಮಾಡುವಾಗ ಸ್ವಾಮೀಜಿ ವಿಷಾದದ ಧ್ವನಿಯಲ್ಲಿ "ನಿಮ್ಮಂಥ ಹಳ್ಳಿಯ ಬಂಟರೇ ಮಾಡಬೇಕು. ನಿಮ್ಮಿಂದಲೇ ಸ್ವಾತಂತ್ರ್ಯ ಬರುವ ಹಂಗಾಗಬೇಕು. ನೀವು ತಂದು ಕೊಡೋ ಸ್ವಾತಂತ್ರ್ಯವನ್ನು ಎಲ್ಲರೂ ಅನುಭವಿಸಲಿ" ಎಂದಾಗ ಶೇಖರ "ನಮ್ಮಿಂದ ನಿಮ್ಮ ಮ್ಯಾಲ ಏನಾದರೂ ಬಂದೀತು ಬುದ್ಧಿ!" ಎನ್ನುತ್ತಾನೆ. ಆಗ ಸ್ವಾಮೀಜಿ "ಬಂದರೂ ಒಳ್ಳೆದಾದೀತು ಬಿಡು. ನಮಗೂ

ಒಂದು ಸಲ ಹಿಂಡಲಗಿ ಜೇಲು ನೋಡುವ ಆಸೆ ಆಗಿದೆ" ಎನ್ನುತ್ತಾನೆ. (ಮಾಡಿ ಮಡಿದವರು, ಪುಟ-೧೦೨, ೧೯೪೪) ಈ ಮಾತುಗಳಲ್ಲಿ ನಿಜವಾದ ದೇಶಭಕ್ತರು, ಸ್ವಾತಂತ್ರ್ಯ ಹೋರಾಟಗಾರರು ಇರುವುದು ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಅಲ್ಲ ಎಂಬುದನ್ನು ತಿಳಿಯಬಹುದಾಗಿದೆ. ಸಾಮಾನ್ಯ ಜನಗಳೇ ಜೈಲಿಗೆ ಹೋಗಿ ಬಂದರೆ ಅಪಚಾರ ಎನ್ನುವ ಕಾಲದಲ್ಲಿ ಮಠದಲ್ಲಿ ಧರ್ಮಬೋಧನೆ ಮಾಡುತ್ತಿರುವ ಸ್ವಾಮೀಜಿಗಳು ದೇಶಕ್ಕೋಸ್ಕರ ಜೈಲಿಗೆ ಹೋಗಲು ಸಿದ್ಧವಾಗುತ್ತಾರೆ. ಅವರಲ್ಲಿನ ನಿಷ್ಕಲ್ಮಷ ದೇಶಪ್ರೇಮವನ್ನು ಗುರುತಿಸಬಹುದಾಗಿದೆ. ಅದೇ ಕಾದಂಬರಿಯಲ್ಲಿ ಕ್ರಾಂತಿಕಾರಿ ಸಂಗಣ್ಣ ಜೈಲಿನಿಂದ ತಪ್ಪಿಸಿಕೊಂಡು ಬಂದಂತಹ ಸಂದರ್ಭದಲ್ಲಿ ಗೋಕಾವಿಗೆ ಹೋಗುವ ಮಾರ್ಗದಲ್ಲಿ ವಿಶ್ವನಾಥ, ಹೇಮಾಳ ಭೇಟಿಯಾಗುತ್ತದೆ. ಆಗ ಸಂಗಣ್ಣ ಜೈಲಿಗೆ ಹೋಗುವ ಚಳವಳಿ ಅಲ್ಲ ಇದು ಪೋಲೀಸರ ಕಣ್ಣಾಗೆ ಮಣ್ಣು ಹಾಕಿ, ಹೊರಗೆ ಇದ್ದುಕೊಂಡು ಹೋರಾಡುವ ಚಳವಳಿ ಅಂತ ಎಂದು ಶೇಖರನು ಹೇಳಿದ ಪ್ರತಿಜ್ಞೆಯನ್ನು ನೆನಪಿಸಿಕೊಂಡು ಆ ಪೊಲೀಸರ ಗುಂಡು ಹತ್ತಿ ನಮ್ಮ ಅವ್ವ ಕಣ್ಮುಚ್ಚಿದಾಗಲೇ ನಾನು ಪ್ರತಿಜ್ಞೆ ಮಾಡಿದ್ದೀನಿ. ಸ್ವಾತಂತ್ರ್ಯ ಬರೂತನಕ ಹೋರಾಡಬೇಕು. ಇಲ್ಲದಿದ್ದರ ಸಾಯಬೇಕು ಅಂತ ಎಂದು ಪ್ರತಿಜ್ಞೆ ಮಾಡುತ್ತಾನೆ. (ಮಾಡಿ ಮಡಿದವರು, ಪುಟ-೧೫೬, ೧೯೪೪)

ಸಂಗಣ್ಣನ ಮಾತುಗಳಲ್ಲಿ ಚಳವಳಿಯ ಸ್ವರೂಪವನ್ನು ತಿಳಿಯಬಹುದಾಗಿದ್ದು, ಆತನಲ್ಲಿನ ಮಾತೃಪ್ರೇಮ, ದಿಟ್ಟತನ, ಧೈರ್ಯ, ದೇಶಭಕ್ತಿ ಸ್ಪುಟವಾಗಿ ಚಿತ್ರಿತವಾಗಿದೆ. ಈತನು ನಿಜವಾದ ಗಾಂಧೀಜಿಯ ನೇರ ಸಂದರ್ಶನವಿಲ್ಲದಿದ್ದರೂ ಶೇಖರನನ್ನೇ ಗಾಂಧೀಜಿಯೆಂದು ತಿಳಿದು ಆತನ ಮಾತುಗಳನ್ನೇ ವೇದವಾಕ್ಯಗಳೆಂದು ಭಾವಿಸಿ ಹೋರಾಟಕ್ಕಿಳಿಯುತ್ತಾನೆ. ಹೀಗೆ ಗಾಂಧೀಜಿ ಅಲ್ಲದಿದ್ದರೂ ಗಾಂಧೀಜಿಯವರ ನೆರಳಿನಂತೆ ಕೆಲಸ ಮಾಡುವ ಅನುಯಾಯಿಗಳನ್ನು ನಂಬಿಕೊಂಡು ಹೋರಾಟಕ್ಕಿಳಿಯುವ ಮುಗ್ಧ, ನಿಷ್ಕಲ್ಮಷ ಹೃದಯದವರು ಹಳ್ಳಿಗಳಲ್ಲಿ ಇದ್ದರೆಂಬುದನ್ನು ಸಂಗಣ್ಣನ ಮಾತುಗಳಿಂದ ತಿಳಿಯಬಹುದು. ಅದೇ ಕಾದಂಬರಿಯಲ್ಲಿ ಶೇಖರನ ಗುಂಪಿಗೆ ಹೊಸದಾಗಿ ಸೇರಿದ ಹುರುಪಿನ ಯುವಕ ಬಸವಣ್ಣೆಪ್ಪ ಹಳ್ಳಿಯೂರಿನಲ್ಲಿ ಬೇಸಾಯ ಮಾಡುತ್ತ ಜೀವನ ಸಾಗಿಸುತ್ತಿದ್ದವನು ಚಳವಳಿಗಳಲ್ಲಿ ಭಾಗವಹಿಸುತ್ತಿದ್ದು, ಮೂರು-ನಾಲ್ಕು ಸಲ ಸೆರೆಮನೆಯನ್ನು ಕಂಡು ಬಂದಿದ್ದ. ಕಾಂಗ್ರೇಸಿನ ಶಿಸ್ತು, ಸಂಯಮಕ್ಕೆ ಮಾರು ಹೋಗಿ ಸತ್ಯಾಗ್ರಹ ಮಾಡಿ ಕಾರಾಗೃಹಕ್ಕೆ ಹೋಗುವುದರಲ್ಲಿ ನಂಬಿಕೆ ಇಟ್ಟಿರಲಿಲ್ಲ. ಬರೀ ಸೆರೆಮನೆಗೆ ಹೋಗುವುದರಿಂದ ಯಾವ ಮಹಾಕಾರ್ಯವನ್ನು ಸಾಧಿಸಿದಂತಾಯಿತೆಂದು ಆತ ವಾದಿಸುತ್ತಿದ್ದನು. ಸರ್ಕಾರದ ಯಂತ್ರವನ್ನು ಮುರಿದು ಹಾಕದೆ ಕೇವಲ ಜೈಲುಗಳನ್ನು ತುಂಬುವುದರಿಂದ ಸ್ವಾತಂತ್ರ್ಯ ಬರುವುದು ಸಾಧ್ಯವೆಂದು ಅವನ ಭಾವನೆಯಾಗಿದ್ದಿತು. ಅಂತೆಯೇ ಚಲೇಜಾವ್ ಚಳವಳಿಯ ಕಹಳೆ ಮೊಳಗುತ್ತಲೇ ಆತ ಅತ್ಯುತ್ಸಾಹದಿಂದ ಕದನದ ರಂಗಕ್ಕೆ ದುಮುಕಿದ್ದನು. ತಮ್ಮೂರಿನ ಹಾಗೂ ಸುತ್ತಮುತ್ತಲಿನ ಹಳ್ಳಿಯ ಇಪ್ಪತ್ತು ಇಪ್ಪತ್ತೈದು ಜನ ಬಂಟರನ್ನು ಕೂಡಿಸಿಕೊಂಡು ಸುತ್ತಮುತ್ತಲಿನ ಪ್ರದೇಶದಲ್ಲಿ ಸರ್ಕಾರದ ವಿರುದ್ಧ ಸಂಚು ಹೂಡಿದ್ದನು. ಶೇಖರ ಮತ್ತು ಶಂಕರಪ್ಪ ಮಾಸ್ತರರು ಹಿಂಸೆ-ಅಹಿಂಸೆ ಕುರಿತು

ಚರ್ಚೆ ಮಾಡುತ್ತಿರುವಾಗ ಬಸವಣ್ಣೆಪ್ಪ "ಹೋಗಲಿ ಬಿಡು ಶೇಖರಣ್ಣ ಈ ನಾಜೂಕು ವಿಷಯ ತಕ್ಕೊಂಡು ನಾವೇನು ಮಾಡೋಣ? ಮಾಡಬೇಕು–ಇಲ್ಲಾ ಮಡಿಬೇಕು ಅಂತ ಹೇಳಿದಾನೆ ಆ ಮಹಾತ್ಮ. ಮಾಡುವುದು ನಮ್ಮ ಕೆಲಸ. ಹಿಂಸಾ ಅಹಿಂಸಾ ಅಂತ ನಾವು ವಾದ ಹಾಕ್ತಾ ಕೂತುಬಿಟ್ಟರ ಕೆಲಸ ಎಲ್ಲೋ ಉಳಿದು, ನಾವು ಹಾಂಗ ಇನ್ನೂ ನೂರಾರು ವರ್ಷ ಮಂಗ್ಯಾನ್ಹಾಂಗ ಕೂತುಕೋಬೇಕಾದೀತು ಆ ಕೆಂಪು ಮಾರಿಯವರ ದಾಸರಾಗಿ! (ಮಾಡಿ ಮಡಿದವರು, ಪುಟ–೧೨೫, ೧೨೭, ೧೯೪೪)

ಭಾರತದ ಬೆನ್ನೆಲುಬು ಕೃಷಿಕ ಬಸವಣ್ಣೆಪ್ಪ ಬ್ರಿಟೀಷರ ಗುಲಾಮಗಿರಿಯಿಂದ ಬೇಸತ್ತಿದ್ದು, ಅವರು ವಿಧಿಸುತ್ತಿದ್ದ ಅನೈತಿಕ ಕಂದಾಯಗಳಿಂದ ಕಂಗೆಟ್ಟಿದ್ದು, ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿರುವುದನ್ನು ಕಾಣಬಹುದಾಗಿದೆ. ದೇಶದಲ್ಲಿ ಅತೀ ಹೆಚ್ಚಿನದಾಗಿ ಬ್ರಿಟಿಷರು ಮತ್ತು ಶ್ರೀಮಂತರಿಂದ ವಿವಿಧ ರೀತಿಯಾಗಿ ತುಳಿತಕ್ಕೊಳಗಾಗಿ ಮತ್ತು ಕ್ರಾಂತಿಕಾರಿಯಾಗಿ ಹೋರಾಟಕ್ಕಿಳಿದವನು ರೈತನು. ಕೊನೆಯದಾಗಿ ಹೋರಾಟದ ಮಾರ್ಗ ಹಿಂಸೆ ಆದರೇನು, ಅಹಿಂಸೆ ಆದರೇನು ದೇಶ ಬಹುಬೇಗ ದಾಸ್ಯಮುಕ್ತವಾಗಬೇಕು ಎಂಬ ಆತನಲ್ಲಿನ ಆತುರತೆ, ಕಾಳಜಿ, ದೇಶಪ್ರೇಮ ಎದ್ದು ಕಾಣುತ್ತದೆ. ತೀರಾ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾದಾಗ ನಮ್ಮ ಹೋರಾಟಗಾರರು ತಮ್ಮ ಸೈದ್ಧಾಂತಿಕ ನಿಲುವನ್ನು ಹೀಗೆ ಬದಲಾಯಿಸಬೇಕಾಗಿದ್ದುದು ಕಂಡುಬರುತ್ತದೆ.

ಅದೇ ಕಾದಂಬರಿಯಲ್ಲಿ ಬಾಬಾ ಸಾಹೇಬ ದೇಸಾಯಿಯವರ ಮಗ ವಿಶ್ವನಾಥ ಚಳವಳಿಗೆ ಧುಮುಕಿದ್ದು, ಕೊನೆಗೆ ಮೀನುಗಾರರ ಬಲೆಯಲ್ಲಿ ತಾನಾಗಿ ಬಂದು ಬೀಳುವಂಥ ಮೀನಾಗುತ್ತಾನೆ. ಗುಂಪು ಬಿಡಿಸಿಕೊಂಡು ಕೊನೆಯುಸಿರು ಬಿಡುವ ಸನ್ನಿವೇಶ ಭೀಕರವಾಗಿದೆ. ಬಾಬಾಸಾಹೇಬರಿಗೆ ತಮ್ಮ ಮಗನನ್ನು ಕಳೆದುಕೊಂಡು ದುಃಖವಾದರೆ ನಮಗೆ ನಮ್ಮ ವೀರ ಸಹೋದರನೊಬ್ಬನನ್ನು ಕಳೆದುಕೊಂಡು ಕಳವಳವಾಗುವುದು. ವಿಶ್ವನಾಥನ ಹೃದಯದಿಂದ ರಾಷ್ಟ್ರೀಯ ಪ್ರಜ್ಞೆ ಉಗಮವಾಗಿ ಬಾಬಾಸಾಹೇಬರ ಎದೆಯಲ್ಲಿ ಸೆಲೆಯೊಡೆಯುವುದು. ಬಾಬಾ ಸಾಹೇಬರು ಪೋಲೀಸ್ ಅಧಿಕಾರಿಗಳಿಗೆ 'ಚಲೇಜಾವ್, ಇಲ್ಲಾಂದ್ರ ನಾನ ಎದ್ದು ಗುಂಡು ಹಾಕಬೇಕಾದೀತು ನಿಮಗೆ' ಎಂದು ಸಿಡಿಲಾಗಿ ಮೊಳಗುವರು. ಬ್ರಿಟಿಷ್ ಸರ್ಕಾರದ ಪಾದ ಧೂಳಿನಲ್ಲಿ ಉರುಳಾಡುವ ದೇಸಾಯಿಯವರು "ನಾ ಸಾಯುವ ತನಕ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೇನೆ. ಸ್ವಾಮಿಗಳ ಪಾದ ಮುಟ್ಟಿ ಪ್ರತಿಜ್ಞೆ ಮಾಡಿದ್ದೇನೆ" ಎಂದು ವೀರಾವೇಶದಲ್ಲಿ ನುಡಿದ ಸಂದರ್ಭ ನಮ್ಮಲ್ಲಿ ಮೈ ನವಿರೇಳಿಸುವುದು. ಹೃದಯ ಪರಿವರ್ತನೆಯ ಈ ಸನ್ನಿವೇಶವನ್ನು ಲೇಖಕರು ಕರುಳು ಮಿಡಿಯುವಂತೆ ಚಿತ್ರಿಸಿದ್ದಾರೆ. (ಮಾಡಿ ಮಡಿದವರು, ಪುಟ–೧೬೫, ೧೬೭, ೧೯೪೪)

ಅದೇ ಕಾದಂಬರಿಯಲ್ಲಿ ಕೊನೆಗೆ ಶೇಖರನ ತಂಡಕ್ಕೂ ಮತ್ತು ಪೊಲೀಸರ ನಡುವೆ ಗುಂಡಿನ ಚಕಮಕಿ ನಡೆಯುತ್ತಿರುವಾಗ ಹೇಮಾಳ ಎಡ ತೋಳಿಗೆ ಗುಂಡು ತಗುಲಿದಾಗ ನಾನೇನು ಉಳಿಯುವ ಹಾಗಿಲ್ಲ ಶೇಖರಣ್ಣ ಎನ್ನುತ್ತಾಳೆ. ಆಗ ಶೇಖರ "ಹಾಗೆಲ್ಲ ಮಾತನಾಡಬ್ಯಾಡ ಹೇಮಕ್ಕ,

ಈಗ ಗೋಕಾವಿಗೆ ಹೋಗತೀವಿ. ಅಲ್ಲೊಬ್ಬ ನಮ್ಮ ಮಿತ್ರ ಡಾಕ್ಟರ್ ಇದಾರ. ಅವರು ನಿನ್ನ ತೋಳಿನಾಗಿನ ಗುಂಡು ತೆಗೆದು ನೆಟ್ಟಗೆ ಮಾಡತಾರ. ನನಗೂ ನೆಟ್ಟಗಾದೀತು. ಸ್ವಲ್ಪ ಶಕ್ತಿ ಬರುವ ತನಕಾ ಅಲ್ಲಿದ್ದು ಮತ್ತೆ ಗುಂಪು ಕೂಡಿಸೋಣ. ಮತ್ತೆ ಕೆಲಸ ಸುರು ಮಾಡೋಣ. ಇನ್ನೂ ಮುಗೀಲಿಲ್ಲ ನಮ್ಮ ಯುದ್ಧ ಹೇಮಾ! ಇನ್ನೂ ಮುಗೀಲಿಲ್ಲ... (ಮಾಡಿ ಮಡಿದವರು, ಪುಟ-೧೮೪, ೧೯೪೮) ಎಂದು ಹೋರಾಟವನ್ನೇ ಉಸಿರಾಗಿಸಿಕೊಂಡಿರುತ್ತಾನೆ. ಇಲ್ಲಿ ೧೯೪೨ರ ಆಗಸ್ಟ್ ವೀರರ ಒಂದು ಶ್ರೇಷ್ಠ ಮಾದರಿಯಾಗಿ ಶೇಖರ ಕಂಗೊಳಿಸಿದ್ದಾನೆ. ಸ್ವಾತಂತ್ರ್ಯದ ಅದಮ್ಯ ಬಯಕೆ, ಅಸಾಮಾನ್ಯ ಮನೋನಿಗ್ರಹ, ಸ್ಥಿತಪ್ರಜ್ಞತ್ವ, ಗಾಂಭೀರ್ಯ, ಅಪ್ರತಿಮ ವೀರಗುಣಗಳ ಖಣಿಯಾಗಿದ್ದಾನೆ.

ಕೆಲವು ಮಂದಿ ವಿದ್ಯಾವಂತರು ನಗರಗಳಲ್ಲಿ ಚಳವಳಿಯು ತೀವ್ರ ಸ್ವರೂಪಕ್ಕೆ ತಿರುಗಿದಾಗ ಪೋಲೀಸರು ಚಳವಳಿಗಾರರ ಮೇಲೆ ಹಲ್ಲೆ ನಡೆಸಿದಾಗ ನಗರಗಳನ್ನು ತೊರೆದು ಹಳ್ಳಿಗಳನ್ನು ಸೇರುತ್ತಾರೆ. ಅಲ್ಲಿ ಹಳ್ಳಿ ಯುವಕರನ್ನು ಸಂಘಟಿಸಿ ಬ್ರಿಟೀಷರ ವಿರುದ್ಧ ಹೋರಾಟಕ್ಕೆ ಸಿದ್ಧ ಮಾಡುತ್ತಾರೆ. ಅಂತಹ ನಿದರ್ಶನವನ್ನು ತ.ರಾ.ಸು. ಅವರ ರಕ್ತತರ್ಪಣ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಅಜ್ಜಿಗ ಕೆಲಸದ ಮೇಲೆ ಪಟ್ಟಣಕ್ಕೆ ಹೋಗಿದ್ದಾಗ ಯುವ ಚಳವಳಿಗಾರರು ಹೆಂಡದಂಗಡಿಯ ಮುಂದೆ ಪಿಕೆಟಿಂಗ್ ಮಾಡುತ್ತಿರುವಾಗ ಸೋಮಸುಂದರಪ್ಪ ಎಂಬ ಚಂದ್ರಶೇಖರನ ಸ್ನೇಹಿತ ಲಾಠಿ ಚಾರ್ಜಿಗೆ ಒಳಗಾಗಿ ಸತ್ತುಹೋಗುತ್ತಾನೆ. ಆ ವಿಷಯ ಚಂದ್ರಶೇಖರನಿಗೆ ತಿಳಿದಾಗ ತುಂಬಾ ಉದ್ವಿಗ್ನಕ್ಕೆ ಒಳಗಾಗಿ ಒಂದು ಕ್ಷಣನೂ ಸಹ ಈ ನರಸತ್ತವರ, ಷಂಡರ ಊರಿನಲ್ಲಿ ಇರುವುದಿಲ್ಲ ಎಂದು ಹೊರಡುತ್ತಾನೆ. ಆಗ ಅಜ್ಜಿಗ ತಾನು ಸ್ವಾತಂತ್ರ್ಯ ಚಳವಳಿಯಲ್ಲಿ ದುಮುಕಲು ನಿರ್ಧಾರ ಕೈಗೊಳ್ಳುತ್ತಾನೆ.

ಆ ಊರಿನಲ್ಲಿ ಹತ್ತು-ಹನ್ನೆರಡು ಜನ ಹಳ್ಳಿ ಸಿಪಾಯಿಗಳನ್ನು ಕರೆತರುತ್ತಾನೆ. ಚಂದ್ರಶೇಖರ ತಾವು ಅನುಭವಿಸುತ್ತಿರುವ ದಾಸ್ಯದ ಬದುಕಿನ ಬಗ್ಗೆ ಭೋದಿಸುತ್ತಾನೆ. ಅಲ್ಲಿ ಸೇರಿದ ಹದಿನೈದು ಜನರೂ ಒಬ್ಬೊಬ್ಬರಾಗಿ ಗರ್ಭಗುಡಿಯೊಳಗೆ ಹೋಗಿ ಆಂಜನೇಯನ ಪಾದ ಮುಟ್ಟಿ "ನಾನು ನಮ್ಮ ದೇಶಕ್ಕೋಸ್ಕರ ಪ್ರಾಣ ಕೊಡಲಿಕ್ಕೂ ತಯಾರು. ಏನು ಬಂದ್ರೂ ಮೋಸ ಮಾಡಾಕಿಲ್ಲ, ಈ ಮಾತು ಸುಳ್ಳಾದ್ರೆ ಗೋತಾಯಿನ ತಿಂದ ಪಾಪ ಬರ್ಲಿ" ಎಂದು ಹೇಳಿ ಪ್ರಮಾಣ ಮಾಡುತ್ತಾರೆ. (ರಕ್ತತರ್ಪಣ, ಪುಟ-೩೩, ೧೯೪೬) ಊರಿನ ಜನ ದೇಶವನ್ನು ಎಷ್ಟು ಪ್ರೀತಿಸುತ್ತಿದ್ದರೋ ಅಷ್ಟೇ ಧರ್ಮವನ್ನೂ ಗೌರವಿಸುತ್ತಿದ್ದರು. ದೇವರ ಮೇಲೆ ಅಗಾಧವಾಗಿ ನಂಬಿಕೆ ಇಟ್ಟಿದ್ದು, ಮಾತಿಗೆ ತಪ್ಪಿದರೆ ದೇವರು ಶಿಕ್ಷಿಸುತ್ತಾನೆ ಎಂಬ ಭಯವನ್ನು ಇಟ್ಟುಕೊಂಡಿರುತ್ತಾರೆ. ಶುದ್ಧ ನಿಷ್ಕಾಮ ಪ್ರೇಮವಿದ್ದ ಗೌರಜ್ಜಿ, ಸೀತಾರಾಮಯ್ಯರ ಆಶೀರ್ವಾದ ಪಡೆದುಕೊಂಡರು. ಚಂದ್ರಶೇಖರನ ಸ್ವಯಂಸೇವಕದಳದವರಿಗೆ ವಂದೇಮಾತರಂ, ದೇವಿ ಭವನಮನಮೋಹಿನಿ, ಹಿಂದೂಸ್ತಾನ್ ಹಮಾರಾ, ಜನಗಣಮನ ಅಧಿನಾಯಕ ಜಯಹೇ ಹಾಡುಗಳು ಶಿಸ್ತು, ಸಂಯಮ ಬೆಳೆಸಿದ್ದವು. ಅನಕ್ಷರಸ್ಥನಾದ ಅಜ್ಜಿಗನು ಸಹ ದಿಟ್ಟತನ, ಧೈರ್ಯದಿಂದ ಪೋಲೀಸರಿಗೆ ಎದುರಾಡುತ್ತಾನೆ. ತನ್ನ ತಾಯಿಗೆ ಕೆಟ್ಟ ಮಾತುಗಳನ್ನಾಡಿದಾಗ ಪೋಲೀಸರಿಗೆ ಹೊಡೆಯುವುದಕ್ಕೂ ಹಿಂಜರಿಯುವುದಿಲ್ಲ.

ದಫೇದಾರ ಬಾಲಾಜಿಸಿಂಗ್ ಚಂದ್ರಶೇಖರನ ಗುಟ್ಟಿನ ವಿಷಯ ತಿಳಿದುಕೊಳ್ಳಲು ಹಸನ್‌ಸಾಬಿನಲ್ಲಿ ಕೋಮುಗಲಭೆ ಉಂಟು ಮಾಡುತ್ತಾನೆ. ಅಜ್ಜಿಗನನ್ನು ಕಣ್ಣು, ಮೂಗು, ಬಾಯಿ ಎಲ್ಲೆಂದರಲ್ಲಿ ಬೂಟುಕಾಲಿನಿಂದ ಒಡೆದು, ಬರೆ ಎಳೆದು ನಾನಾ ರೀತಿಯ ಚಿತ್ರಹಿಂಸೆ ನೀಡುತ್ತಾನೆ. ರಕ್ತದ ಕೋಡಿ ಹರಿಯುತ್ತದೆ ಆದರೂ ಸಹ ಅಜ್ಜಿಗ ಚಂದ್ರಶೇಖರನ ವಿಷಯವನ್ನು ಬಾಯಿ ಬಿಡುವುದಿಲ್ಲ. ಒಬ್ಬ ಚಂದ್ರಶೇಖರನಿಗೋಸ್ಕರ ಒಬ್ಬ ರೈತಾಪಿ ಅಜ್ಜಿಗ ತನ್ನ ಪ್ರಾಣವನ್ನು ಬಿಡಲು ಸಿದ್ಧವಾಗುತ್ತಾನೆ. ಅಂತಹ ಜಾಗೃತಿಯನ್ನು ಚಂದ್ರಶೇಖರನು ಮೂಡಿಸಿರುತ್ತಾನೆ. ಹೀಗಾಗಿ ಇಂತಹ ನಿಷ್ಠೆ, ಪ್ರಾಮಾಣಿಕತೆಯನ್ನು ಗಮನಿಸಿದಂತಹ ಗಾಂಧೀಜಿ ನಿಜವಾದ ಹಿಂದೂಸ್ತಾನ ಇರುವುದು ಹಳ್ಳಿಗಳಲ್ಲಿ ಎಂದಿದ್ದು ಮತ್ತು ಜನರನ್ನು ನಿಮ್ಮ ನಿಮ್ಮ ಹಳ್ಳಿಗಳಿಗೆ ಹೋಗಿ ಕಾರ್ಯಪ್ರವೃತ್ತರಾಗಿ ಜನರನ್ನು ಜಾಗೃತಿಗೊಳಿಸಿ ಎಂದಿರುವುದನ್ನು ಗಮನಿಸಬಹುದಾಗಿದೆ. ಸೋಮಲಾಪುರದಂತಹ ಹಳ್ಳಿಯಲ್ಲಿ ಜನರು ಚಂದ್ರಶೇಖರನಿಂದಾಗಿ ನಾಡಿನ ಚರಿತ್ರೆಯನ್ನು, ದೇಶಪ್ರೇಮಿಗಳ ತ್ಯಾಗ, ಬಲಿದಾನಗಳನ್ನು ತಿಳಿದುಕೊಂಡು ಹಳ್ಳಿಯನ್ನು ಹೋರಾಟದ ಕಣವನ್ನಾಗಿಸಿಕೊಂಡು ಸಿಡಿದೇಳುತ್ತಾರೆ.

ಕನ್ನಡ ಕಾದಂಬರಿಗಳಲ್ಲಿನಂತೆಯೇ ತೆಲುಗು ಕಾದಂಬರಿಗಳಲ್ಲಿಯೂ ಸಹ ಭಾರತದ ಬೆನ್ನೆಲುಬಾದ ಕೃಷಿಕರು ಹೆಗಲಿಗೆ ಹೆಗಲು ಕೊಟ್ಟು ಹೋರಾಟ ಮಾಡುತ್ತಾರೆ. ಮಾಲಪಲ್ಲಿ ಕಾದಂಬರಿಯಲ್ಲಿ ರಾಮದಾಸನ ಹಿರಿಯ ಮಗ ವೆಂಕಟದಾಸ ಉರೂಫ್ ತಕ್ಕಡಿ ಜಗ್ಗ, ಗುಂಟೂರು ತಾಲ್ಲೂಕು ಜೈಲಿನಲ್ಲಿ ಬಂಧಿತನಾಗಿರುತ್ತಾನೆ. ಜಗ್ಗನೊಂದಿಗೆ ಹೋರಾಟದಲ್ಲಿ ಪಾಲ್ಗೊಂಡಿದ್ದ ಸಂತಾನಿ ರಾಮಣ್ಣ ಜಗ್ಗನ ಹೆಂಡತಿ ಎಂದು ಮಾರುವೇಷದಲ್ಲಿ ಅಧಿಕಾರಿಗಳನ್ನು ವಂಚಿಸಿ ಜೈಲಿನೊಳಕ್ಕೆ ಪ್ರವೇಶಿಸುತ್ತಾನೆ. ಆಗ ರಾಮಣ್ಣನೊಂದಿಗೆ ವೆಂಕಟದಾಸನು

ಕನ್ನಡ ಭಾಷಾಂತರ

ಇಲ್ಲಿಯವರೆಗೂ ನಾವು (ಹುಟ್ಟಿ ಹಾಕಿದ) ಪ್ರಾರಂಭಿಸಿದ ಆಂದೋಲನದಿಂದ ಧನಿಕರು, ಪ್ರಭುತ್ವದವರೂ ಪ್ರಸ್ತುತ ಸ್ಥಿತಿಗತಿಗಳನ್ನು ಬದಲಾಯಿಸಬೇಕೆಂದು ಅಭಿಪ್ರಾಯಪಡುತ್ತಿದ್ದಾರೆ. ಇನ್ನು ಮುಂದೆ ಹಳೆ ಪದ್ಧತಿಯನ್ನು ನಿಲ್ಲಿಸಿ ಹೊಸ ನಿಯಮಗಳನ್ನು ಅವಲಂಬಿಸಿ. ನಮ್ಮ ಹತ್ತಿರ ಎಲ್ಲಾ ಕಡೆ ಐದು ಕೋಟಿ ಹತ್ತು ಲಕ್ಷ ಹಣವಿದೆ. ಅದರಲ್ಲಿ ಐದು ಕೋಟಿ ಹಣವನ್ನು ಸಂತಾನರೆಲ್ಲ ಸಮಾನವಾಗಿ ಹಂಚಿಕೊಂಡು ಸುಖಮಯ ಜೀವನ ನಡೆಸಿ, ಉಳಿದ ಹತ್ತು ಲಕ್ಷದಲ್ಲಿ ಧರ್ಮಕ್ಕೆ ಉಪಯೋಗಿಸಿ ನೀವೆಲ್ಲ ಕಾರ್ಮಿಕರ ಸಂಘಗಳ ಸಭಿಕರಾಗಿ ಸೇರಿ ಕೆಲಸ ಮಾಡಿ ಇನ್ನು ಸ್ವಲ್ಪ ದಿನಗಳಲ್ಲೇ ನಮಗೆ ಸ್ವಾತಂತ್ರ್ಯ ಸಿಗುತ್ತದೆ. ಶಿಕ್ಷಣ ವ್ಯವಸ್ಥೆ ಅಭಿವೃದ್ಧಿ ಹೊಂದಿ ನಮ್ಮ ದೇಶದ ಸ್ಥಿತಿ ಗತಿ ಖಂಡಿತ ಬದಲಾಗುತ್ತದೆ. ನಮ್ಮ ದೇಶಕ್ಕೆ ಖಂಡಿತವಾಗಿಯೂ ಸ್ವಾತಂತ್ರ್ಯ ಬಂದೇ ಬರುತ್ತದೆ ಎಂಬ ಆತ್ಮವಿಶ್ವಾಸವನ್ನು ಜಗ್ಗನ ಮಾತುಗಳಲ್ಲಿ ಪ್ರಕಟವಾಗುತ್ತಿರುವುದನ್ನು ಕಾಣಬಹುದಾಗಿದೆ. (ಮೂಲ; ಅನುಬಂಧ–೩ ಅಧ್ಯಾಯ–೬ ಕ್ರಸಂ. ೧)

ಅದೇ ಕಾದಂಬರಿಯಲ್ಲಿ ರಾಮದಾಸ ಸೆಟ್ಲಮೆಂಟಲ್‌ಗಳಲ್ಲಿ ಇರುವಂತಹ ಸಂದರ್ಭದಲ್ಲಿ ಪೌಲು ತನ್ನ ಮಗಳು ಜ್ಯೋತಿಯ ವಿಚಾರದಲ್ಲಿ ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದಾನೆ ಎಂದು ಬ್ರೌನ್ಸನ್ ಅವರಿಗೆ ಹೇಳುತ್ತಿರುವಾಗ

ಕನ್ನಡ ಭಾಷಾಂತರ

ಸ್ವರಾಜ್ಯ ಬಂದರೆ ಮಾತ್ರ ನಮ್ಮ ದೇಶದ ಕಷ್ಟಗಳು ಬಗೆಹರಿಯುತ್ತವೆ ಎಂದು ಸಂಗದಾಸನು ಹೇಳುತ್ತಿರುವ ಮಾತು ವಾಸ್ತವ. ಸೈನ್ಯಕ್ಕೆ ಮನುಷ್ಯರನ್ನು ಸೇರಿಸಿಕೊಳ್ಳುವುದಕ್ಕೆ, ಕ್ರಿಶ್ಚಿಯನ್ ಧರ್ಮವನ್ನು ಪ್ರಸಾರ ಮಾಡಲಿಕ್ಕೆ ಬಿಟ್ಟರೆ ಈ ಸೆಟ್ಲಮೆಂಟ್‌ಗಳಿಂದ ಬೇರೆ ಏನು ಪ್ರಯೋಜನವಿಲ್ಲ. ಸ್ವರಾಜ್ಯ ಬಂದನಂತರ ಪದ್ಧತಿಗಳನ್ನು ಬದಲಾಯಿಸಿ ಇವುಗಳನ್ನು ಗ್ರಾಮಗಳಾಗಿ ಮಾರ್ಪಡಿಸಬೇಕು. (ಮೂಲ; ಅನುಬಂಧ–೩ ಅಧ್ಯಾಯ–೯ ಕ್ರಸಂ. ೨)

ಎಂದು ರಾಮದಾಸನ ಈ ಮಾತುಗಳಲ್ಲಿ ನವಭಾರತ ನಿರ್ಮಾಣದ ಆಶಯವನ್ನು ಗುರುತಿಸಬಹುದು. ಕೋನಂಗಿ ಕಾದಂಬರಿಯಲ್ಲಿ ರೈತರ ನಾಯಕ, ಮುಖಂಡ ವೆಂಕಟಸ್ವಾಮಿ, ಗಾಂಧಿತ್ವವಾದಿ, ಖಾದಿ ಅಭಿಮಾನಿ, ಕಾಂಗ್ರೇಸಿನಲ್ಲಿ ಸಭ್ಯ ನಾಯಕನಾಗಿದ್ದು, ಎರಡು ಮೂರು ಸಾರಿ ಜೈಲಿಗೆ ಹೋಗಿ ಬಂದಿರುತ್ತಾನೆ. (ಪುಟ–೮೩, ೧೯೪೬) ವೆಂಕಟಸ್ವಾಮಿ ಮಗಳು ಬೇರೆ ಕುಲದ ಪ್ರಸಾದರಾವ್ ಎಂಬ ಯುವಕನನ್ನು ಮದುವೆಯಾಗಿರುವುದರಿಂದ ದ್ವೇಷಿಸುತ್ತಾನೆ. ಪ್ರಸಾದರಾವ್ ವ್ಯವಸಾಯದಲ್ಲಿ ಉತ್ತಮ ಪರಿಣಿತಿಯನ್ನು ಹೊಂದಿದ್ದು, ಜಿಲ್ಲೆಯಲ್ಲಿ ತುಂಬಾ ಪ್ರಸಿದ್ದಿಯನ್ನು ಹೊಂದಿರುತ್ತಾನೆ. ಗಾಂಧೀಜಿಯವರು ಆ ಊರಿಗೆ ಬಂದಿದ್ದಾಗ ಅವರ ತೋಟದಲ್ಲಿ ತಂಗುತ್ತಾರೆ. ಇದರಿಂದ ಸಂತೋಷಗೊಂಡ ವೆಂಕಟಸ್ವಾಮಿ ಮಗಳ ಕುಟುಂಬದೊಂದಿಗೆ ಸೇರಿಕೊಳ್ಳುತ್ತಾನೆ. ಹೀಗೆ ಗಾಂಧೀಜಿಯವರ ಆಗಮನ ಕುಟುಂಬ ಕಲಹಗಳ ಕೂಡುವಿಕೆಗೆ ನೆರವಾಗುವುದನ್ನು ಗಮನಿಸಬಹುದು. ಇಲ್ಲಿ ಲೇಖಕರು ರೈತರು ಚಳವಳಿಯಲ್ಲಿ ಪಾಲ್ಗೊಳ್ಳುವಿಕೆಯನ್ನು ಮಾತ್ರ ಪ್ರಸ್ತಾಪಿಸಿದ್ದಾರೆ. ವಿಚಾರವಾದಿ, ಬುದ್ಧಿವಾದಿ ವಿದ್ಯಾವಂತರಿಗಿಂತ ದೇಶದ ಚಳವಳಿಯಲ್ಲಿ ರೈತನು ಹಿಂದೆ ಬಿದ್ದಿಲ್ಲ ಎಲ್ಲಾ ರೀತಿಯ ತ್ಯಾಗಕ್ಕೆ ಸಿದ್ದ ಎಂಬುದನ್ನು ಇಲ್ಲಿ ತಿಳಿಯಲಾಗಿದೆ.

ಕನ್ನಡ ಕಾದಂಬರಿಗಳಲ್ಲಿನಂತೆಯೇ ತೆಲುಗಿನ ಕಾದಂಬರಿಗಳಲ್ಲಿಯೂ ಸಹ ನೌಕರಶಾಹಿ ವರ್ಗವು ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಲು ಹಿಂದೆ ಬಿದ್ದಿಲ್ಲ. ನಾರಾಯಣರಾವ್ ಕಾದಂಬರಿಯಲ್ಲಿ ಶ್ಯಾಮಸುಂದರಿದೇವಿ ವೃತ್ತಿಯಲ್ಲಿ ವೈದ್ಯಳಾಗಿರುತ್ತಾಳೆ. ಚಿಕ್ಕಂದಿನಿಂದಲೂ ಗಂಭೀರ ಸ್ವಭಾವವನ್ನು ಮೈಗೂಡಿಸಿಕೊಂಡಿದ್ದು,

ಕನ್ನಡ ಭಾಷಾಂತರ

ಈಶ್ವರನ ನಾಮಸ್ಮರಣೆಯಿಂದ ಮಾನವ ಸೇವೆ ಮಾಡಬೇಕೆಂದು ವೈದ್ಯಶಾಲೆ ತೆರೆದು ದೇಶಸೇವೆ ಮಾಡಬೇಕು. ಶ್ರೀ ಸರೋಜಿನಿದೇವಿ, ಕಸ್ತೂರಿ ಬಾಯಿ ಮೊದಲಾದವರಂತೆ ತನ್ನ ಜನ್ಮವನ್ನು

ದೇಶಕ್ಕಾಗಿ ಅರ್ಪಣೆ ಮಾಡಬೇಕೆಂದು ಸಂಕಲ್ಪಿಸಿಕೊಂಡಿದ್ದೇನೆ. ಬಿಡುವಾದಗಲೆಲ್ಲ ಚರಕದಿಂದ ನೂಲುತೆಗೆಯುವುದು, ತಂಗಿಯರೊಂದಿಗೂ ಸಹ ನೂಲು ತೆಗೆಸುತ್ತೇನೆ. (ಮೂಲ; ಅನುಬಂಧ-೩ ಅಧ್ಯಾಯ-೯ ಕ್ರಸಂ. ೩)

ಅದೇ ಕಾದಂಬರಿಯಲ್ಲಿ ನಾರಾಯಣರಾವ್ ಶ್ಯಾಮಸುಂದರಿಯನ್ನು,

ಕನ್ನಡ ಭಾಷಾಂತರ

ನೀನು ದೇಶ ಸೇವೆ, ಮಾನವ ಸೇವೆ ಮಾಡಬೇಕೆಂದು ಆಶಯ ಹೊಂದಿದ್ದೀಯಾ. ತರಬೇತಿಗಳೆಲ್ಲ ಪೂರ್ತಿಯಾದ ನಂತರ ಸಬರ್ಮತಿ ಆಶ್ರಮಕ್ಕೆ ಹೋಗಿ ಸೇವೆ ಮಾಡುವ ಪುಣ್ಯವನ್ನು ಸಂಪಾದಿಸಿಕೊಳ್ಳುತ್ತೀಯಾ ಎಂದು ಕೇಳಿದಾಗ ಶ್ಯಾಮಸುಂದರಿದೇವಿ ಆ ಮಹಾತ್ಮನ ಪಾದಗಳಡಿ ಸೇವೆ ಮಾಡುವುದನ್ನು ಕಲಿತುಕೊಂಡು ನನ್ನ ಜನ್ಮವನ್ನು ಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ನಿಶ್ಚಯಿಸಿಕೊಂಡಿದ್ದೇನೆ. (ಮೂಲ; ಅನುಬಂಧ-೩ ಅಧ್ಯಾಯ-೯ ಕ್ರಸಂ. ೪) ವೈದ್ಯರನ್ನು ಸಮಾಜದಲ್ಲಿ ದೇವರು ಎಂದು ಸಂಬೋಧಿಸಲಾಗಿದೆ. ಶ್ಯಾಮಸುಂದರಿ ಜನರಿಗೆ ಉಚಿತ ವೈದ್ಯ ಸೇವೆಯನ್ನು ಮಾಡುವುದರ ಮೂಲಕ, ಬಿಡುವು ಸಿಕ್ಕಿದಾಗ ಚರಕದಿಂದ ನೂಲು, ಖಾದಿಯನ್ನು ನೇಯುವುದು, ತನ್ನ ತಂಗಿಯರನ್ನು ಸಹ ಖಾದಿ ನೇಯುವುದಕ್ಕೆ ತೊಡಗಿಸುವುದರ ಮುಖಾಂತರ ದೇಶಸೇವೆ ಮಾಡುತ್ತೇನೆ ಎಂಬ ಆಕೆಯ ಗ್ರಹಿಕೆಯನ್ನು ಗುರುತಿಸಬಹುದು. ನೇರವಾಗಿ ಚಳವಳಿಯಲ್ಲಿ ದುಮುಕದೆ ಪರೋಕ್ಷವಾಗಿ ಹಳ್ಳಿಗಳಲ್ಲಿ ರೋಗ-ರುಜಿನೆಗಳಿಂದ ನರಳುತ್ತಿರುವ ದೀನ-ದಲಿತ ಜನರಿಗೆ ಉಚಿತವಾಗಿ ಜನರ ಆರೋಗ್ಯಗಳನ್ನು ವಿಚಾರಿಸುವುದು ಒಂದು ರೀತಿಯ ಮಾನವ ಸೇವೆ ಎಂಬುದನ್ನು ಶ್ಯಾಮಸುಂದರಿಯ ಮಾತುಗಳಲ್ಲಿ ಕಾಣಬಹುದು. ಗಾಂಧೀಜಿ ಸಾಮಾನ್ಯ ಜನರು ನೌಕರಶಾಹಿ ವರ್ಗದವರು, ರೈತರು ಇನ್ನೂ ಮೊದಲಾದವರ ಮನಸ್ಸಿನ ಮೇಲೆ ಎಷ್ಟೊಂದು ಗಾಢವಾದ ಪ್ರಭಾವ ಬೀರಿದ್ದರೆಂದರೆ ಅವರ ಪಾದಸೇವೆಯೇ ಜೀವನದ ಮುಕ್ತಿ ಎಂಬಷ್ಟರ ಮಟ್ಟಿಗೆ ಜನರು ಬಂದಿದ್ದರೆನ್ನುವ ನಿದರ್ಶನವನ್ನು ಮೇಲಿನ ಮಾತುಗಳಲ್ಲಿ ಕಾಣಬಹುದು.

ಅದೇ ಕಾದಂಬರಿಯಲ್ಲಿ ರಾಜಾರಾವು ಎಂಬ ಡಾಕ್ಟರ್, ನಾರಾಯಣರಾವ್ ಅವರ ಸಹಪಾಠಿಯಾಗಿರುತ್ತಾನೆ. ಈತನು ಮೊದಲಿನಿಂದಲೂ ನಾರಾಯಣರಾವ್‌ನೊಂದಿಗೆ ಸ್ವಾತಂತ್ರ್ಯ ಚಳವಳಿಯನ್ನು ಕುರಿತು ಚರ್ಚೆ ಮಾಡುತ್ತಿರುತ್ತಾನೆ. ರಾಜಾರಾವ್ ನಾರಾಯಣರಾವ್‌ರವರ ಸಹಾಯದಿಂದ ಒಂದು ವೈದ್ಯಶಾಲೆಯನ್ನು ಪ್ರಾರಂಭಿಸುತ್ತಾನೆ. ಈತನು ಮೋಟಾರು ಸೈಕಲ್ಲಿನಲ್ಲಿ ಗ್ರಾಮ-ಗ್ರಾಮಗಳನ್ನು ಒಂದು ಖಾದಿ ಚೀಲದೊಂದಿಗೆ ಸುತ್ತುತ್ತಾನೆ. ಜನರಿಗೆ ಔಷಧೋಪಚಾರವನ್ನು ಮಾಡಬಹುದು ಹಾಗೇನೇ (ನಾರಾಯಣರಾವ್, ಪುಟ-೨೬೮, ೧೯೩೪) ಬ್ರಿಟೀಷರ ಆಳ್ವಿಕೆಯ ಸಂದರ್ಭದಲ್ಲಿ ಸಾಮಾನ್ಯ ಜನರು, ಕಾಂಗ್ರೆಸಿಗರು, ಗಾಂಧಿ ಅನುಯಾಯಿಗಳು ಎಂದರೆ ಉರಿದುಬೀಳುತ್ತಿದ್ದರು. ಆದರೆ ಡಾಕ್ಟರರ ಮೇಲೆ ಯಾವುದೇ ಸಂಶಯವನ್ನು ಸಹ ಪಡುತ್ತಿರಲಿಲ್ಲ ಎಂಬ ಕಾರಣಕ್ಕಾಗಿ ಡಾಕ್ಟರರು ಮಾನವ ಸೇವೆ ಎಂಬ ಸೋಗುಹಾಕಿಕೊಂಡು ದೇಶಸೇವೆಯನ್ನು

ಮಾಡುತ್ತಿರುವುದನ್ನು ಗಮನಿಸಬಹುದು. ಹಾಗೇನೇ ಗುಟ್ಟಾಗಿ ಚಳವಳಿಯ ಕುರಿತು ಕರಪತ್ರಗಳನ್ನು ಡಾಕ್ಟರರು ಪ್ರಕಟಿಸಿ ಜನರಲ್ಲಿ ಚಳವಳಿಗೆ ಪ್ರೇರೇಪಿಸುತ್ತಿದ್ದರು ಎಂಬ ಅಂಶವನ್ನು ತಿಳಿಯಬಹುದು.

ಅಡವಿ ಬಾಪಿರಾಜು ಸ್ವಾತಂತ್ರ್ಯ ಚಳವಳಿಯನ್ನು ಕುರಿತು ರಚಿಸಿದ ಮತ್ತೊಂದು ಕಾದಂಬರಿ ಕೋನಂಗಿ. ಇದರಲ್ಲಿ ಡಾಕ್ಟರ್ ರೆಡ್ಡಿ ಕಾಂಗ್ರೆಸ್‌ನವರಿಗೆ ವೈದ್ಯನಾಗಿ ಕೆಲಸ ಮಾಡುತ್ತಾನೆ. ಆದರೆ ಕಮ್ಯುನಿಸ್ಟ್ ವಿಚಾರಗಳ ಕುರಿತಾಗಿ ಈ ಕಾದಂಬರಿಯಲ್ಲಿ ಧ್ವನಿ ಎತ್ತುತ್ತಾನೆ. ಡಾಕ್ಟರ್ ರೆಡ್ಡಿ ಅವರು

ಕನ್ನಡ ಭಾಷಾಂತರ

ಪ್ರಪಂಚ ಪ್ರಪಂಚದಲ್ಲಿರುವ ಪ್ರಜೆಗಳೆಲ್ಲರದು ಎಂದು ಆ ಪ್ರಜೆಗಳೆಲ್ಲರೂ ಸಮಾನವಾಗಿ ಬೆಳೆಯಬೇಕೆಂದು ಆ ಉತ್ತಮವಾದ ಸಂದೇಶ ಜನರಿಗೆ ತಲುಪಲು ಮನುಷ್ಯನ ಧರ್ಮಶಕ್ತಿಯನ್ನೇ ಆಧಾರ ಮಾಡಬೇಕೆಂಬ ವಾದಕ್ಕಿಂತ ಉನ್ನತವಾದ ತತ್ವ ಇರಲಿಕ್ಕಿಲ್ಲ. ಎಲ್ಲರಿಗೂ ಸಮಾನ ಊಟ, ಸಮಾನ ಬಟ್ಟೆ, ಸಮಾನ ಸಂತೋಷ, ಸಾಮಾಜಿಕ ರಾಜಕೀಯ ಸಮತ್ವ ಬರುತ್ತದೆ ಎನ್ನುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೯ ಕ್ರಸಂ. ೫)

ಡಾಕ್ಟರ್ ರೆಡ್ಡಿ ಇವರ ಮಾತುಗಳಲ್ಲಿ ರಷ್ಯಾದ ಸಮತಾವಾದ, ಸಮಾಜವಾದದ ಸಿದ್ಧಾಂತಗಳನ್ನು ಗುರುತಿಸಬಹುದು. ಅಡವಿಬಾಪಿರಾಜು ಅವರು ನಾರಾಯಣರಾವ್ ಕಾದಂಬರಿಯಲ್ಲಿ ಡಾಕ್ಟರ್ ರಾಜಾರಾವ್ ಪಾತ್ರವನ್ನು ಕಾಂಗ್ರೇಸ್, ಗಾಂಧಿ ಅನುಯಾಯಿಯಾಗಿ ಅವರ ಚಿಂತನೆಗಳನ್ನು ಮೈಗೂಡಿಸಿಕೊಂಡು, ಜನರಿಗೆ ಸಾರುವ ಕೆಲಸವನ್ನು ಈ ಪಾತ್ರದ ಮೂಲಕ ಪ್ರಯತ್ನಿಸಿದ್ದರೆ, ಅವರದೇ ಆದ ಕೋನಂಗಿ ಕಾದಂಬರಿಯಲ್ಲಿ ಡಾಕ್ಟರ್ ರೆಡ್ಡಿ ಎಂಬ ಪಾತ್ರವನ್ನು ಕಮ್ಯುನಿಸ್ಟ್ ವಿಚಾರಗಳಾದಿಯಾಗಿ ಚಿತ್ರಿಸಿದ್ದಾರೆ. ಲೇಖಕರು ಬೇರೆ ಬೇರೆ ಕಾಲಘಟ್ಟದಲ್ಲಿ ಈ ಎರಡೂ ಕೃತಿಗಳನ್ನು ರಚಿಸಿದ್ದು, ನಾರಾಯಣರಾವ್ ಕಾದಂಬರಿಯಲ್ಲಿ ಕೇವಲ ದೇಶದ ಸ್ವಾತಂತ್ರ್ಯಕ್ಕೆ ಹೆಚ್ಚು ಒತ್ತುಕೊಟ್ಟಿದ್ದು ಕಂಡುಬಂದರೆ, ಕೋನಂಗಿ ಕಾದಂಬರಿಯಲ್ಲಿ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ದೊರೆತ ನಂತರ ಜನರಿಗೆ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯಗಳು ಅವಶ್ಯಕ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಕಮ್ಯುನಿಸ್ಟ್ ವಿಚಾರಗಳನ್ನು ಪ್ರಸ್ತಾಪಿಸಿರಬಹುದು ಎನಿಸುತ್ತದೆ. ಸಮಾಜದಲ್ಲಿನ ಜನರನ್ನು ನೋವು, ಸಂಕಟದಿಂದ ಮುಕ್ತಗೊಳಿಸಿ ಆರೋಗ್ಯಕರವಾದ ಜೀವನವನ್ನು ನಡೆಸಲು ಡಾಕ್ಟರರು ರಕ್ಷಾಕವಚದಂತೆ, ಸಂಜೀವಿನಿಯಂತೆ ಕೆಲಸ ಮಾಡುತ್ತಿದ್ದರೆ, ಸಮಾಜದಲ್ಲಿನ ಜನರಿಗೆ ಉತ್ತಮ ಸಂಸ್ಕೃತಿ, ನಡೆ–ನುಡಿಯನ್ನು ಬೆಳೆಸಿ ಉತ್ತಮ ನಾಗರೀಕರನ್ನಾಗಿ ಮಾಡುವ ಜವಾಬ್ದಾರಿ ಶಿಕ್ಷಕ ಅಧ್ಯಾಪಕರದಾಗಿರುತ್ತದೆ. ಅದು ಮುಖ್ಯವಾಗಿ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು, ಅನಕ್ಷರಸ್ಥ ಜನರನ್ನು ಚಳವಳಿಗೆ ಪ್ರೇರೇಪಿಸುವುದು ಪ್ರಮುಖವಾದ ಕೆಲಸವಾಗಿರುತ್ತದೆ. ಆದರೆ ಅದಕ್ಕೆ ವ್ಯತಿರೇಕವಾಗಿ ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ರಂಗನಾಥ ಎಂಬ ಅಧ್ಯಾಪಕ ರಾಮನಾಥ ಎಂಬ ವಿದ್ಯಾರ್ಥಿಯನ್ನು ಗಾಂಧೀಜಿ, ಖಾದಿ, ಕಾಂಗ್ರೆಸ್‌ನ್ನು ಕುರಿತು ವಿರೋಧವಾಗಿ ಮಾತನಾಡುತ್ತಾನೆ. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಎಲ್ಲಾ ಅಧ್ಯಾಪಕರು

ಒಂದೇ ರೀತಿಯಾಗಿರುವುದಿಲ್ಲ ಎಂಬ ಅಧ್ಯಾಪಕನ ಇನ್ನೊಂದು ಮುಖವನ್ನು ಮಹೀಧರ ರಾಮಮೋಹನರಾವ್ ಅವರು ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಸ್ವಾತಂತ್ರ್ಯ ಚಳವಳಿಯಲ್ಲಿ ಕೇವಲ ಅಧ್ಯಾಪಕರು, ಡಾಕ್ಟರರ ಸೇವೆ ಅಲ್ಲದೆ ಇಂಜಿನೀಯರರ ಸೇವೆಯು ಸಹ ಅಗತ್ಯ ಎಂಬುದನ್ನು ಅಡವಿ ಬಾಪಿರಾಜು ಅವರು ಹರಿಜನರನ್ನು ವಸ್ತುವನ್ನಾಗಿಸಿಕೊಂಡು ಬರೆದ ನರುಡು ಎಂಬ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಹರಿಜನೋದ್ಧಾರ ಚಳವಳಿಯ ಒಂದು ಭಾಗ ಎಂಬ ಗಾಂಧೀಜಿಯವರ ಆಶಯವನ್ನು ಗಮನದಲ್ಲಿಟ್ಟುಕೊಂಡು ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿಯಲ್ಲಿ ಯಲ್ಲಮಂದ ಎಂಬ ಹರಿಜನ ಯುವಕ ನೆರೆಹೊರೆಯವರ ಸಹಾಯದಿಂದ ಉತ್ತಮವಾದ ಶಿಕ್ಷಣವನ್ನು ಪಡೆದು ವಿದ್ಯುತ್ ಇಂಜಿನೀಯರ್ ಆಗಿ ವಿದೇಶಗಳಲ್ಲಿ ಕೆಲಸ ಮಾಡಿ, ತಮ್ಮ ದೇಶದ ಜನ, ಜನಾಂಗವನ್ನು ಮೇಲೆತ್ತುವ ಪ್ರಯತ್ನ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಯಲ್ಲಮಂದ ತನ್ನ ವಿದ್ಯಾಭ್ಯಾಸವನ್ನು ಪೂರ್ತಿ ಮುಗಿಸಿಕೊಂಡು ಬಂದು ಗಾಂಧೀಜಿಯವರ ವಿಗ್ರಹದ ಮುಂದೆ ನಿಂತು

ಕನ್ನಡ ಭಾಷಾಂತರ

ಬಾಪೂಜಿ! ನನ್ನ ಕರ್ತವ್ಯ ನನಗೆ ತಿಳಿಯುತ್ತಿಲ್ಲ ಈ ಶಿಕ್ಷಣ ನಮ್ಮ ದೇಶಕ್ಕೆ ಪ್ರಸ್ತುತ ಶಿರೋಮಣಿಯ ಹಾಗೆ. ಆಣೆಕಟ್ಟುಗಳು ಇಲ್ಲದೆ ನದಿಗಳ ಉಪಯೋಗವಿಲ್ಲ. ಆಣೆಕಟ್ಟುಗಳಿಂದ ವಿದ್ಯುಚ್ಛಕ್ತಿ ಉದ್ಭವಿಸುತ್ತಿದೆ. ಈ ಶಕ್ತಿ ದೇಶಕ್ಕೆ ಬೆಳಕು, ಫಸಲಿಗೆ ನೀರು, ಗೃಹಗಳಿಗೆ ಸಣ್ಣಪುಟ್ಟದಾಗಿ ಉಪಯೋಗ. ಪೂರ್ವಕಾಲದ ಕುಟೀರ ಗ್ರಾಮಗಳು ಸ್ವಲ್ಪವಾದರೂ ಬದಲಾಗುತ್ತವೆ. ವ್ಯವಸಾಯಕ್ಕೆ ಅನೇಕ ರೀತಿಯಾಗಿ ನೆರವಾಗುತ್ತದೆ. ಆಣೆಕಟ್ಟುಗಳಿಂದ ದೊಡ್ಡ ಕೆರೆಗಳು, ಕೆರೆಗಳ ಕೆಳಗಡೆ ಕಾಲುವೆಗಳು ಆ ಶಕ್ತಿ ದೇಶದೆಲ್ಲೆಡೆ ಸರಬರಾಜಾಗುವುದರಿಂದ ಬಾವಿಯಿಂದ ನೀರು ಮೇಲೆತ್ತಲು, ಗ್ರಾಮಗಳಲ್ಲಿ ಹಿಟ್ಟಿನ ಗಿರಣಿಗೆ, ಪ್ರತಿ ಊರಿನಲ್ಲಿ ವಿದ್ಯುತ್ ದೀಪದ ಬೆಳಕು, ಹಳ್ಳಿಗಳಲ್ಲಿ ಚಿಕ್ಕ ಚಿಕ್ಕ ರಸ್ತೆ ಪಕ್ಕದಲ್ಲಿ ಬೀದಿ ದೀಪಗಳು, ರೇಡಿಯೋಗಳು, ಯಂತ್ರಗಳ ಸಹಾಯದಿಂದ ಗ್ರಾಮಗಳ ಪರಿಶ್ರಮ ಎಲ್ಲರಿಗೂ ಊಟ ವಸತಿ, ಎಲ್ಲರೂ ಸಮಾನವಾಗಿರಬಹುದು. ಎಂದು ತನ್ನ ಆಶಯವನ್ನು ವ್ಯಕ್ತಪಡಿಸುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೯ ಕ್ರಸಂ. ೬)

ಈ ಮಾತುಗಳಲ್ಲಿ ಸ್ವಾತಂತ್ರ್ಯಪೂರ್ವದ ಭಾರತದ ಪರಿಸ್ಥಿತಿಯನ್ನು ಗುರುತಿಸಬಹುದು. ಸಮಾಜದಲ್ಲಿ ಬಹಿಷ್ಕೃತಗೊಂಡು, ಹಲವಾರು ರೀತಿಯ ಅವಮಾನ, ಮಾನಭಂಗಗಳಿಗೆ ಒಳಗಾದ ಜನಾಂಗದ ವ್ಯಕ್ತಿಯಿಂದ ಇಡೀ ದೇಶವೇ ನಿಬ್ಬೆರಗಾಗುವಂತ ದೇಶವೇ ಬೆಳಕಿನಲ್ಲಿ ಬದುಕುವ, ತಮ್ಮ ಜನಾಂಗವನ್ನು ಗುರುತಿಸುವ ಕಾರ್ಯ ಇಲ್ಲಿ ಕಾಣುತ್ತೇವೆ. ಅಲ್ಲದೆ ಸಾಧನೆಗೆ ಜಾತಿಯ ಅರ್ಹತೆ ಬೇಕಿಲ್ಲ ಪ್ರತಿಭೆಯ ಅವಶ್ಯಕತೆ ಬೇಕು ಎಂಬುದನ್ನು ಕಾಣಬಹುದಾಗಿದೆ. ಅಡವಿ ಬಾಪಿರಾಜು ಅವರು ಗಾಂಧೀಜಿಯವರ ಹರಿಜನೋದ್ಧಾರ ಕಾರ್ಯಕ್ರಮವನ್ನು ಈ ಕಾದಂಬರಿಯಲ್ಲಿ ಯಥಾವತ್ತಾಗಿ ಚಿತ್ರಿಸಿದ್ದಾರೆ.

ಸ್ವಾತಂತ್ರ್ಯ ಚಳವಳಿಯಲ್ಲಿ ಕೇವಲ ಡಾಕ್ಟರ್, ಅಧ್ಯಾಪಕರು, ಅಲ್ಲದೆ ವಕೀಲರು ಸಹ ತಮ್ಮ ಅಲ್ಪಸೇವೆಯನ್ನು ಸಲ್ಲಿಸಿರುವುದಕ್ಕೆ ಮಾಲಪಲ್ಲಿ ಕಾದಂಬರಿಯಲ್ಲಿ ನಾರಾಯಣರಾವ್ ಎಂಬ ವಕೀಲನ ಈ ಮಾತುಗಳು ನಿದರ್ಶನವಾಗಿವೆ.

ಕನ್ನಡ ಭಾಷಾಂತರ

ಮಹಾತ್ಮ ಗಾಂಧೀಜಿ ಹೇಳಿದ ಪ್ರಕಾರ ಸ್ವರಾಜ್ಯ ಸಿಗುವುದು ಸತ್ಯ. ನಾನು ಮತ್ತೆ ಪ್ಲೀಡರ್ ಉದ್ಯೋಗದಲ್ಲಿ ಸೇರುವ ಪ್ರಮೇಯವೇ ಇಲ್ಲ. ಸ್ವರಾಜ್ಯ ಬರುವವರೆಗೂ ದೇಶಕ್ಕಾಗಿ ದುಡಿಯಬೇಕೆಂದು ನಿಶ್ಚಯಿಸಿಕೊಂಡಿದ್ದೇನೆ. ಅಲ್ಲಿಯವರೆಗೂ ನಿಮ್ಮ ಮಂಗಳಾಪುರದಲ್ಲಿ ನೀವು ತೋರಿಸಿದ ಕೆಲಸ ಮಾಡಲಿಕ್ಕೆ ಸಿದ್ಧವಾಗಿದ್ದೇನೆ ಎಂದು ಹೇಳುತ್ತಾನೆ. (ಮೂಲ; ಅನುಬಂಧ-೩ ಅಧ್ಯಾಯ-೯ ಕ್ರಸಂ. ೭) ನಾರಾಯಣರಾವ್‌ನಲ್ಲಿನ ದೇಶಕ್ಕಾಗಿ ಯಾವ ಕೆಲಸವನ್ನಾದರೂ ಮಾಡಲು ಸಿದ್ಧ ಎಂಬ ದೇಶಭಕ್ತಿ ಮನೋಭಾವವನ್ನು ತಿಳಿಯಬಹುದು.

ಹೀಗೆ ನೌಕರಶಾಹಿ ವರ್ಗದವರು ಸರ್ಕಾರದ ಕಣ್ಣು ತಪ್ಪಿಸಿ ದೇಶಕ್ಕಾಗಿ ಅಲ್ಪಸ್ವಲ್ಪ ಸೇವೆಯನ್ನು ಮಾಡಿರುವುದನ್ನು ಕನ್ನಡ-ತೆಲುಗು ಲೇಖಕರು ಚಿತ್ರಿಸಿದ್ದಾರೆ.

ಮಹಿಳೆಯರು

ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ರಾಷ್ಟ್ರೀಯ ಜಾಗೃತಿ ತಿಲಕರ ಯುಗದಿಂದ ಆರಂಭವಾಗಿದ್ದರೂ ಅದು ಪ್ರಜ್ವಲಿಸಿದ್ದು, ವ್ಯಾಪಕವಾಗಿ ಹರಡಿದ್ದು ಗಾಂಧಿಯುಗದಲ್ಲಿ. ಸ್ವಾತಂತ್ರ್ಯವೆಂದರೇನೆಂದು ತಿಳಿಯದ ಜನರಿದ್ದಾಗ ಸ್ವಾತಂತ್ರ್ಯ ಏಕೆ ಬೇಕೆಂದು ಕೇಳುವ ಸಮಯವಿದ್ದಾಗ, ಸ್ವಾತಂತ್ರ್ಯ ಬೇಡವೇ ಬೇಡವೆಂದು ವಾದಿಸುವವರಿದ್ದಾಗ ಹಾಗೂ ನಾವು ಪರತಂತ್ರರಾಗಿದ್ದೇವೆ ಎಂದು ತಿಳಿಯದೇ ಲಕ್ಷಾಂತರ ಜನರು ಇದ್ದಾಗ, ಸ್ವಾತಂತ್ರ್ಯ ಬೇಕು, ಸ್ವಾತಂತ್ರ್ಯದಿಂದ ಸರ್ವಜನರ ಉನ್ನತಿಯ ಮಾರ್ಗದಲ್ಲಿ ಶ್ರಮಿಸಲು ಸಾಧ್ಯ ಎಂದು ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಟ್ಟವರು ಮಹಾತ್ಮರು.

ಗಾಂಧಿಜೀಯವರು ಆಯೋಜಿಸಿದ ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಕಾಡು ಮೇಡುಗಳಲ್ಲಿನ ಮತ್ತು ಹಳ್ಳಿ ಜನರಲ್ಲಿ ಜಾಗೃತಿ ಮೂಡಿಸಿದವು. ಖಾದಿಯ ಕೆಲಸ ನೇಕಾರರಿಗೆ ಹುರುಪು ನೀಡಿತು. ಮಧ್ಯಪಾನ ವಿರೋಧ ಮಹಿಳೆಯರಿಂದ ಸಹಾನುಭೂತಿ ಗಳಿಸಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೇವಲ ಪುರುಷರಷ್ಟೇ ಭಾಗವಹಿಸಲಿಲ್ಲ. ಹಲವಾರು ಮಂದಿ ವೀರ ಮಹಿಳೆಯರು ಕೂಡ ತಮ್ಮ ಸಂಸಾರವನ್ನು ಬಿಟ್ಟು ತೊಟ್ಟಿಲಲ್ಲಿರುವ ಹಸುಗೂಸುಗಳನ್ನು ಬಿಟ್ಟು ಚಳುವಳಿಗೆ ದುಮುಕಿ ಜೈಲುವಾಸ ಅನುಭವಿಸಿದ್ದಾರೆ. ಸೂರ್ಯನಾಥ ಕಾಮತ್ ಬರೆದ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟದಲ್ಲಿ ಅಂತಹ ವೀರ ಮಹಿಳೆಯರ ಪಾತ್ರವನ್ನು ನಾವು ಕಾಣಬಹುದು.

ನೇರವಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದವರಲ್ಲದೆ ತಮ್ಮ ಮಕ್ಕಳು, ಗಂಡ, ಮನೆ ಮಂದಿಯೆಲ್ಲಾ ಹೋರಾಟದಲ್ಲಿ ನಿರತರಾದಾಗ ಸರ್ವಕಷ್ಟವನ್ನು ಸಹಿಸಿದ ಸಹನಾಮಯಿ ವನಿತೆಯರ

ತ್ಯಾಗವನ್ನು ನಾವು ಕಡೆಗಣಿಸುವಂತಿಲ್ಲ. ದೇಶಕ್ಕೋಸ್ಕರ ತಮ್ಮ ಕರುಳಕುಡಿಯನ್ನು ಕಳೆದುಕೊಂಡವರು ಹಲವರು. ತಮ್ಮ ಮುತ್ತೈದೆತನವನ್ನು ಭಾರತಾಂಬೆಯ ಪದತಳದಲ್ಲಿ ಅರ್ಪಿಸಿದವರು ಸಾವಿರಾರು ಮಂದಿ. ಗಂಡ ಅಥವಾ ಮಗ ಭೂಗತ ಹೋರಾಟದಲ್ಲಿ ನಿರತರಾಗಿದ್ದಾಗ ಮನೆಯಲ್ಲಿರುವ ಹೆಣ್ಣುಮಕ್ಕಳಲ್ಲಿ ಅವರೆಲ್ಲಿದ್ದಾರೆಂದು ತಿಳಿದುಕೊಳ್ಳಲು ಬ್ರಿಟಿಷ್ ಪೊಲೀಸರು ಹಲವಾರು ರೀತಿಯಲ್ಲಿ ಕಿರುಕುಳವನ್ನು ನೀಡುತ್ತಿದ್ದರು. ಆದರೂ ಅವರು ಬಾಯಿ ಬಿಡುತ್ತಿರಲಿಲ್ಲ. ಭಾರತೀಯ ಹೆಣ್ಣುಮಕ್ಕಳ ತ್ಯಾಗ, ಸಹನೆ, ಕಷ್ಟಸಹಿಷ್ಣುತಾ ಗುಣದಿಂದಲೇ ಪುರುಷರು ಸಂಸಾರವನ್ನು ಮರೆತು ದೇಶಸೇವೆಯಲ್ಲಿ ತೊಡಗಲು ಸಾಧ್ಯವಾಯಿತು. ಆದುದರಿಂದ ನೇರ ಹೋರಾಟದಲ್ಲಿ ಭಾಗಿಯಾದ ಮಹಿಳೆಯರಲ್ಲದೆ ಪರೋಕ್ಷವಾಗಿ ಎಲೆಮರಿಯ ಕಾಯಿಯಂತೆ ತಮ್ಮ ಮನೆ ಮಂದಿಗೆ ಬೆಂಗಾವಲಾಗಿ ನಿಂತ ಅಸಂಖ್ಯಾತ ಮಹಿಳೆಯರು ಕೂಡಾ ಸರ್ವಮಾನ್ಯರು.

ನಾವಿಲ್ಲಿ ಕನ್ನಡ-ತೆಲುಗು ಭಾಷೆಗಳಲ್ಲಿ ಸಾಮಾನ್ಯವಾಗಿ ಗಮನಿಸಬೇಕಾದ ಅಂಶವೆಂದರೆ ನಿಜವಾಗಿಯೂ ಗಾಂಧಿಯ ತತ್ವವನ್ನು ಅಕ್ಷರಶಃ ಒಪ್ಪಿದವರು ಹೋರಾಟದಲ್ಲಿ ತೊಡಗಿಸಿಕೊಂಡ ಅಕ್ಷರಸ್ಥ ಮತ್ತು ಅನಕ್ಷರಸ್ಥ ಹೆಣ್ಣುಮಕ್ಕಳು. ಅವರಿಗೆ ಸಮಾಜವಾದವನ್ನು ಸಾರುವ ಕಮ್ಯುನಿಸ್ಟ್ ತತ್ವವಾಗಲಿ, ಅಥವಾ ಗಾಂಧೀಜಿಯವರ ಅಹಿಂಸೆಯಿಂದ ಸ್ವಾತಂತ್ರ್ಯ ಬರಲಾರದೆಂಬ ಅಧೈರ್ಯವಾಗಲಿ ಇರಲಿಲ್ಲ. ಗಾಂಧೀಜಿ ಏನೇ ಹೇಳಿದರೂ ದೇಶೋದ್ಧಾರಕ್ಕಾಗಿ ಹೇಳುತ್ತಾರೆಂಬುದು ಅವರ ಅಚಲವಾದ ನಂಬಿಕೆ. ಆದುದರಿಂದ ವಿಚಾರವಾದಿ ವಿದ್ಯಾವಂತ ಹೋರಾಟಗಾರರಿಗೆ ಕಾಡಿದ ಯಾವುದೇ ಗೊಂದಲವಾಗಲಿ, ಗಾಂಧೀಜಿಯ ಜೊತೆಯಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯವಾಗಲಿ ನಮ್ಮ ಹೆಣ್ಣುಮಕ್ಕಳಿಗೆ ಉಂಟಾಗಲಿಲ್ಲ.

ಕೆಲವೊಂದು ಸಂದರ್ಭದಲ್ಲಿ ಕಾಲೇಜು ವಿದ್ಯಾರ್ಥಿನಿಯರು ಕೂಡಾ ಗಾಂಧೀಜಿಯವರ ಕರೆಗೆ ಓಗೊಟ್ಟು ಕಾಲೇಜು ತ್ಯಜಿಸಿ ಚಳವಳಿ ಸೇರಿದ ಉದಾಹರಣೆಗಳು ಸಾಕಷ್ಟಿವೆ. ಹಾಗೂ ಹಲವಾರು ಪುರುಷರ ಜೊತೆಯಲ್ಲಿ ಮಹಿಳೆಯರು ಸಹ ಚಳವಳಿಯಲ್ಲಿ ಭಾಗವಹಿಸುತ್ತಿದ್ದರು. ಆದರೆ ಎಲ್ಲಾ ಪುರುಷರು ಆ ಮಹಿಳೆಯರನ್ನು ತುಂಬಾ ಗೌರವದಿಂದ ಅಕ್ಕ, ತಂಗಿ, ಮಗಳು ಎಂಬ ಭಾವನೆಯಿಂದ ಉಪಚರಿಸುತ್ತಿದ್ದರೇ ಹೊರತು ಎಲ್ಲೂ ತಪ್ಪಿ ನಡೆದ ಉದಾಹರಣೆಗಳಿಲ್ಲ. ಕೆಲವೊಂದು ಸಂದರ್ಭದಲ್ಲಿ ಕರಪತ್ರಗಳನ್ನು ಮುದ್ರಿಸಲು ಅಥವಾ ಪೊಲೀಸರಿಂದ ತಪ್ಪಿಸಿಕೊಳ್ಳುವ ಸಂದರ್ಭದಲ್ಲಿ ಸ್ತ್ರೀ-ಪುರುಷರು ಜೊತೆಯಾಗಿ ರಾತ್ರಿಗಳನ್ನು ಕಳೆಯುವ ಸಂದರ್ಭ ಎದುರಾಗುತ್ತಿತ್ತು. ಆದರೆ ಎಲ್ಲೂ ಕೂಡ ಅವರು ಸಂಯಮವನ್ನು ಮೀರಿ ವರ್ತಿಸಿದ್ದಿಲ್ಲ. ಇಂತಹ ಒಂದು ಮನೋಬಲದಿಂದಲೇ ಅವರು ಚಳುವಳಿಯಲ್ಲಿ ಭಾಗವಹಿಸುತ್ತಿದ್ದರು.

ಮಾಡಿ ಮಡಿದವರು ಕಾದಂಬರಿಯಲ್ಲಿ ಹೇಮಾ ಎಂಬ ಕಾಲೇಜು ವಿದ್ಯಾರ್ಥಿ ವಕೀಲ, ಹಿರಿಯ ಕಾಂಗ್ರೆಸ್ ನಾಯಕ ತನ್ನ ತಂದೆಯ ಮಾತನ್ನು ತಿರಸ್ಕರಿಸಿ ದೇಶದ ಸ್ವಾತಂತ್ರ್ಯಕ್ಕೋಸ್ಕರ ಕಾಲೇಜನ್ನು ತ್ಯಜಿಸಿ ಹೋರಾಟದ ಹಾದಿ ಹಿಡಿಯುತ್ತಾಳೆ. ಹೇಮಾ ಬೆಳಗಾಂಗೆ ಹೋಗುವಾಗ

ರೈಲಿನಲ್ಲಿ ಕಲ್ಲಾಪುರದ ಶೇಖರಪ್ಪನ ಪರಿಚಯವಾಗುತ್ತದೆ. ಹೇಮಾ ಶೇಖರಪ್ಪನ ಹೋರಾಟದಲ್ಲಿ ಭಾಗಿಯಾಗಲು ನಿರ್ಧರಿಸುತ್ತಾಳೆ. ಆಕೆ ರಾತ್ರಿಯಿಡೀ ನಿದ್ದೆಗೆಟ್ಟು ಕರಪತ್ರಗಳನ್ನು ಸಿದ್ದಗೊಳಿಸುತ್ತಾಳೆ. ಲಂಬಾಣಿಗಳ ತಾಂಡದಲ್ಲಿ ಅವರ ಸಂಸ್ಕೃತಿಯಂತೆ ವಾಸಿಸಿ ಕಟ್ಟಿಗೆ ಹೊರೆ ಹೊತ್ತು ಊರೂರು ತಿರುಗುವ ಲಂಬಾಣಿಗಳ ಜೊತೆಯಲ್ಲಿ ಕರಪತ್ರವನ್ನು ಕಳುಹಿಸುತ್ತಾಳೆ. ಅನಕ್ಷರಸ್ಥರಾದ ಲಂಬಾಣಿ ಹೆಣ್ಣು ಮಕ್ಕಳು ಕೂಡಾ ತಮಗೆ ತಿಳಿದೋ ತಿಳಿಯದೆಯೋ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮದೇ ಆದ ಕಿರುಕಾಣಿಕೆಯನ್ನು ಅರ್ಪಿಸುತ್ತಾರೆ. ಇವರು ಕರಪತ್ರವನ್ನು ಹಂಚುವಾಗ ಪೊಲೀಸರಿಗೆ ಸಿಕ್ಕಿಬಿದ್ದರೂ ಬಾಯಿ ಬಿಡುವುದಿಲ್ಲ. ಅನಕ್ಷರಸ್ಥರಾದ ಬುಡಕಟ್ಟು ಹೆಣ್ಣುಮಕ್ಕಳ ಅಂತರಂಗದಲ್ಲಿ ದೇಶಾಭಿಮಾನವಿರುವುದನ್ನು ಕಾಣುತ್ತೇವೆ. ಹೇಮಾ ಎಂಬ ದಿಟ್ಟ ಹೆಣ್ಣು ತಾವು ಹೆಣ್ಣು ಗಂಡೆಂಬ ಭೇದ ಮರೆತು ಚಳವಳಿಯಲ್ಲಿ ಭಾಗವಹಿಸುತ್ತಾಳೆ. ಆಕೆ ವಿಶ್ವನಾಥನೊಂದಿಗೆ ಹೇಳುವ ಮಾತು ಅವರ ವ್ಯಕ್ತಿತ್ವದಲ್ಲಿ ಅಡಗಿದ್ದ ತೇಜಸ್ಸು ಹಾಗೂ ಆತ್ಮಬಲದ ಪ್ರತಿಬಿಂಬದಂತಿದೆ. "ನಲವತ್ತೆರಡರ ಚಳುವಳಿ ಅಂತಿಂಥಾ ಚಳವಳಿ ಅಲ್ಲ ವಿಶ್ವನಾಥ ಬ್ರಿಟಿಷ್ ಸರಕಾರವನ್ನು ತೊಲಗಿಸದೆ ನಿಲ್ಲುವ ಹಾಗಿಲ್ಲ ಈ ಚಳುವಳಿ. ಇದರೊಳಗೆ ನಮ್ಮ ನಾಡಿನೊಳಗೆ ಹೆಂಗಸರೊಬ್ಬರೂ ಕೆಲಸ ಮಾಡಿಲ್ಲ. ಅಂತಾದರೆ ನಮಗೆಷ್ಟು ಅವಮಾನ ಅದು! ನಾಳೆ ಈ ಚಳವಳಿಯ ಇತಿಹಾಸ ಬರೆಯುವವರು ನಮ್ಮ ಹೆಣ್ಣು ಜಾತಿಯನ್ನೇ ಕೀಳಾಗಿ ಕಾಣಿಸಬಾರದು! ನನ್ನ ಮಟ್ಟಿಗೆ ಹೇಳಬೇಕಾದರೆ ಈ ಚಳವಳಿಯೊಳಗೆ ಇರೂತನಕ ನಾ ಹೆಣ್ಣು ಅನ್ನೋದನ್ನೇ ಮರೆತು ಇರ್ತೀನಿ. ಈಗ ನನ್ನ ಕಣ್ಣಿಗೆ ನೀನು ಬರೀ ಗಂಡಸಲ್ಲ, ನಾನು ಬರೀ ಹೆಂಗಸಲ್ಲ. ಈಗ ನಡಿತಿರೋದು ಯುದ್ಧ. ಈ ಯುದ್ಧದಾಗ ಭಾಗವಹಿಸುವವರು ನಾವಿಬ್ಬರೂ ಸೈನಿಕರು, ಅಷ್ಟೆ..." (ಮಾಡಿ ಮಡಿದವರು, ಪುಟ–೧೩೫, ೧೯೪೮) ಹೇಮಾಳ ಈ ಮಾತಿನಲ್ಲಿ ಅಚಲವಾದ ದೇಶಭಕ್ತಿ, ಧೈರ್ಯ, ಮನೋನಿಯಂತ್ರಣ, ಹೋರಾಡುವ ದಿಟ್ಟ ನಿರ್ಧಾರ ಕಾಣಬಹುದು.

ವಿಶ್ವನಾಥನನ್ನು ಚಳವಳಿಯಿಂದ ಬಿಡಿಸುವುದಕ್ಕೋಸ್ಕರ ಅವನ ತಂದೆ ಬಾಬಾಸಾಹೇಬರು ಶೇಖರನಿಗೆ ದೇಣಿಗೆ ಕೊಟ್ಟ ಹೊಲವನ್ನು ಬಿಡಿಸುತ್ತೇನೆಂದು ಅವರನ್ನು ಬೆದರಿಸುತ್ತಾನೆ. ಆಗ ಶೇಖರನ ತಾಯಿ ಪಾರ್ವತಮ್ಮ–"ನಮಗಾಗಿ ನೀವೇನೂ ಚಳುವಳಿ ಬಿಡಬೇಕಾಗಿಲ್ಲಪ್ಪ. ನಾ ಮುದುಕಿ ಆಗ್ತಾ ಬಂದೆ. ಆದರೂ ಮೈಯಾಗ ಶಕ್ತಿ ಐತಿ ಇನ್ನೂ ಈ ತೋಳು ಇರುತನಕಾ ಯಾರಿಗೂ ಅಂಜಬೇಕಾಗಿಲ್ಲ. ಕೂಲಿ ಮಾಡಿ ದುಡಿದು ಇರ್ತೀವಿ. ಆದರೆ ಯಾರಿಗೂ ಅಂಜಾಕಿಲ್ಲ" ಎಂದು ಆವೇಶದಿಂದ ನುಡಿಯುತ್ತಾಳೆ. ಕನ್ನಡ ನಾಡಿನ ಕೆಚ್ಚು ಕಲಿತನಗಳೇ ಮೂರ್ತಿ ಬಂದಂತಿದ್ದ ಆ ತಾಯಿಯನ್ನು ಕಂಡು ಗುಂಪಿನಲ್ಲಿದ್ದ ಎಲ್ಲಾ ಚಳವಳಿಗಾರರಿಗೂ ಮೈಯುಬ್ಬಿತು. ಇಂತಹ ಅನಕ್ಷರಸ್ಥ ಹೆಣ್ಣುಮಕ್ಕಳ ಆತ್ಮವಿಶ್ವಾಸ ಪರೋಕ್ಷ ಸಹಕಾರದಿಂದಲೇ ಗಂಡಸರು ಚಳವಳಿಯಲ್ಲಿ ಭಾಗವಹಿಸಲು ಪ್ರೇರಣೆ, ಸ್ಫೂರ್ತಿಯಿಂದ ಸಾಧ್ಯವಾಯಿತು (ಮಾಡಿ ಮಡಿದವರು, ಪುಟ–೧೦೫, ೧೦೭, ೧೯೪೮). ಅದೇ ಕಾದಂಬರಿಯಲ್ಲಿ ಹೋರಾಟಗಾರ ಸಂಗಣ್ಣ ಶೇಖರಪ್ಪನ ಮನೆಗೆ ಜಮೀನಿನ ವಿಚಾರ ತಿಳಿಸಲು ಬಂದಾಗ ಸಂಗಣ್ಣನನ್ನು ಹುಡುಕಿಕೊಂಡು ಪೊಲೀಸರು ಬರುತ್ತಾರೆ.

ಅವನ ತಾಯಿ ಸಿದ್ದವ್ವ ಸಾವಿನಂಚಿನಲ್ಲಿದ್ದ ಮುದುಕಿಗೆ ಪೊಲೀಸರನ್ನು ಕಂಡ ಕೂಡಲೇ ಅದೆಲ್ಲಿಂದ ಶಕ್ತಿ ಬಂದಿತೊ, ಪೊಲೀಸರು ಸಂಗಣ್ಣ ಅವಿತುಕೊಂಡಿದ್ದ ಕೋಣೆಗೆ ಹೋಗುವುದನ್ನು ತಡೆಯುತ್ತಾಳೆ. ಜ್ವರದಿಂದ ನರಳುತ್ತಾ ಬಿದ್ದುಕೊಂಡಿದ್ದ ಮುದುಕಿಗೆ ಇನ್ನು ತಡೆಯಲಾಗಲಿಲ್ಲ. ದಿಗ್ಗನೆ ಹಾಸಿಗೆಯಿಂದೆದ್ದು ಫೌಜುದಾರನಿಗೆ ಅಡ್ಡವಾಗಿ ತನ್ನ ಮೂಳೆಯ ದೇಹವನ್ನು ನಿಲ್ಲಿಸಿ ನಡುಗುವ ದನಿಯಲ್ಲಿ "ನನ್ನ ದೇಹದಾಗ ಪ್ರಾಣ ಇರೂತನಕ ಆ ಕೋಣೆಯೊಳಗೆ ನಿನಗೆ ಹೋಗಾಕ ಕೊಡಾಕಿಲ್ಲ. ಸುಮ್ಮನೆ ಹೋಗೋ ಮೂಳಾ" (ಮಾಡಿ ಮಡಿದವರು, ಪುಟ-೧೧೭, ೧೯೪೮) ಎಂದು ಮೂರು ಲೋಕವನ್ನು ನಡುಗಿಸುವ ಚಂಡಿ, ಮಹಾಕಾಳಿಯಂತೆ ಅಬ್ಬರಿಸುತ್ತಾಳೆ. ತನ್ನ ಮಗನನ್ನು ಉಳಿಸಲು ಪೊಲೀಸರ ಗುಂಡಿಗೆ ತಾನೇ ತನ್ನ ಪ್ರಾಣವನ್ನು ಅರ್ಪಿಸುತ್ತಾಳೆ. ಸೂರನಗೌಡನೆಂಬುವನು ಮೋಸದಿಂದ ಶೇಖರ ಮತ್ತು ಅವನ ತಂಡವನ್ನು ಕುತಂತ್ರದಿಂದ ಹಿಡಿಸಲು ಪ್ರಯತ್ನಿಸಿದಾಗ ಅವನ ಮಗಳು ನೀಲವ್ವ ಈ ವಿಚಾರವನ್ನು ಶೇಖರನಿಗೆ ತಿಳಿಸಿ ಅವನನ್ನು ಅಪಾಯದಿಂದ ರಕ್ಷಿಸುತ್ತಾಳೆ. ನೀಲವ್ವಳ ಸರಳ ಸ್ವಭಾವ, ಅಸತ್ಯದ ಛಾಯೆಯಂತಿರುವ ಹದಿನಾರು ವರ್ಷದ ಬಾಲೆಯ ಸ್ವಾತಂತ್ರ್ಯ ಪ್ರೇಮವನ್ನು ಕಾಣಬಹುದಾಗಿದೆ. ಈ ರೀತಿಯಾಗಿ ಪರೋಕ್ಷವಾಗಿ ದೇಶಕ್ಕಾಗಿ ದುಡಿದ ಹೆಣ್ಣು ಮಕ್ಕಳು ಹಲವಾರು ಮಂದಿ ಇದ್ದರು ಎಂಬುದನ್ನು ತಿಳಿಯಲಾಗಿದೆ.

ಸಂಗಣ್ಣ ಎಂಬ ಚಳುವಳಿಗಾರನ ಮುಂಗೋಪಿತನದಿಂದ ಶೇಖರ, ಹೇಮಾ, ಬಸವಣ್ಣೆಪ್ಪ ಇವರೆಲ್ಲರೂ ಪೊಲೀಸರನ್ನು ಎದುರಿಸಬೇಕಾದ ಪ್ರಸಂಗ ಬರುತ್ತದೆ. ಪೊಲೀಸರು ಹಿಂದಿನಿಂದ ಗುಂಡು ಹಾರಿಸಬೇಕಾದರೆ ಹೇಮಾ ಸಹ ಅವರಿಗೆ ಗುಂಡಿನಿಂದ ಉತ್ತರ ಕೊಡಲು ನಿರ್ಧರಿಸುತ್ತಾಳೆ. ಅಷ್ಟರಲ್ಲಿ ಪೊಲೀಸರ ಗುಂಡು ಅವಳ ಬಲಗೈಗೆ ತಾಗುತ್ತದೆ. ಅವಳನ್ನು ರಕ್ಷಿಸಲು ಬಂದ ಶೇಖರನಲ್ಲಿ ಅವಳು ಹೇಳುವ ಮಾತು ಇಡೀ ಸ್ತ್ರೀ ಕುಲದ ಗೌರವವನ್ನು ಎತ್ತಿ ಹಿಡಿಯುವಂತಿದೆ. "ನೀವೀಗ ನನ್ನನ್ನು ಬಿಟ್ಟು ಇಲ್ಲಿಂದ ಪಾರಾಗಿ ಹೋಗ್ರಿ, ಹ್ಯಾಗೂ ನನ್ನ ಹತ್ತಿರ ಸಾಕಷ್ಟು ಗುಂಡು ಇದಾವೆ... ಒಂದು ತಾಸಿನ ತನಕ ಇವರನ್ನು ತಡಿತೇನೆ ನಾನು ಅಷ್ಟರೊಳಗೆ ನೀವಿಬ್ಬರೂ ಗುಡ್ಡಾ ಇಳಿದು ಗೋಕಾವಿ ರಸ್ತೇಕ್ಕ ಹೋಗಿ ಮುಟ್ಟುತ್ತೀರಿ. ನಡೀರಿ, ಹೊರಡ್ರಿ... ಇಲ್ಲಿಂದ..." ಎಂದು ನುಡಿದು ಆಕೆ ಮತ್ತೆ ಗುಂಡು ಹಾರಿಸತೊಡಗಿದಳು (ಮಾಡಿ ಮಡಿದವರು ಪುಟ-೧೪೦, ೧೯೪೮). ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ಗಂಡಸರಿಗೆ ಸರಿಸಮಾನವಾಗಿ ಹೋರಾಡಿದ ಹೇಮಾ ಪೊಲೀಸರ ಗುಂಡಿಗೆ ಬಲಿಯಾಗುತ್ತಾಳೆ. ಎಲ್ಲಿ ಕೂಡ ತಾನು ಅಬಲೆಯೆಂದಾಗಲಿ, ಹೆಣ್ಣೆಂದಾಗಲಿ ಹಿಂಜರಿಯುವುದಿಲ್ಲ. ಗಂಡಸರಿಗೆ ಸರಿಸಮವಾಗಿ ಕಾಡು-ಬೆಟ್ಟ-ಗುಡ್ಡದಲ್ಲಿ ಅಲೆದಾಡುತ್ತಾಳೆ. ರಾತ್ರಿಯೆಲ್ಲಾ ನಿದ್ದೆ ಬಿಟ್ಟು ಕರಪತ್ರ ಹೊರಡಿಸುತ್ತಾಳೆ. ಪೊಲೀಸರ ಗುಂಡಿಗೆ ಪ್ರತಿಯಾಗಿ ಗುಂಡು ಹಾರಿಸುತ್ತಾಳೆ. ಕೊನೆಗೆ ಭಾರತ ಮಾತೆಗೆ ತನ್ನ ಪ್ರಾಣವನ್ನು ಅರ್ಪಿಸುತ್ತಾಳೆ.

ಅದೇ ಕಾದಂಬರಿಯಲ್ಲಿ ಶೇಖರನು ಎಲ್ಲಿದ್ದಾನೆಂದು ತಿಳಿದುಕೊಳ್ಳಲು ಶೇಖರನ ಮನೆಯನ್ನು ಜಪ್ತಿ ಮಾಡಿ, ಲಿಂಗಣ್ಣನನ್ನು ಒಡೆದು ಪೊಲೀಸರು ಹಿಡಿದೊಯ್ಯುತ್ತಿರುವಾಗ ಲಿಂಗಣ್ಣನ ತಾಯಿ ಪಾರ್ವತಮ್ಮ ಅವನನ್ನು ಬಿಡು ಎನ್ನದೆ "ಒಯ್ದರ ಒಯ್ಯಲಿ ಅವನನ್ನು, ಒಬ್ಬನಂತೂ ಕಾಂಗ್ರೇಸಿಗೆ

ಮುಡುಪಾಗಿ ಹೋಗಿದಾನ. ಇವನೂ ಹೋದರ ಹೋಗಲಿ ನನ್ನ ತೋಳಿನಾಗ ಶಕ್ತಿ ಇರೂತನಕ ಯಾರಿಗೂ ಅಂಜುವಾಕೆ ಅಲ್ಲ ನಾನು, ಕೂಲಿ ಕುಂಬಳಿ ಮಾಡಿ ಇವರೆಲ್ಲರ ಹೊಟ್ಟೆಗೆ ಹಾಕ್ತೀನಿ. ಇಲ್ಲಿ ಕೂಲಿ ಸಿಗದಿದ್ದರೆ ಗೋಕಾವಿ ಗಿರಣಿಗೆ ಹೋಗಿ ದುಡಿತೀನಿ. ಆ ಕೆಂಪು ಮಾರೀ ಸರಕಾರಕ್ಕ ಮಾತ್ರ ಎಂದೆಂದೂ ಅಂಜುವುದಿಲ್ಲ" ಎಂದು (ಮಾಡಿ ಮಡಿದವರು, ಪುಟ–೧೮೬, ೧೯೪೮).

ಆಪತ್ತಿನಲ್ಲಿ ಅವಳು ನುಡಿದ ನುಡಿಯಲ್ಲಿ ಎಂಥ ಸ್ವಾಭಿಮಾನವಿದೆ. ಎಂಥ ಧೀರೋದಾತ್ತವಾದ ಮಾತಿದು. ಶೇಖರನ ಗುಂಪಿನವರಿಗೆಲ್ಲ ಪಾರ್ವತಮ್ಮ ಅಭಿಮಾನದ ಮೂರ್ತಿ. ಆ ತಾಯಿಯ ಸ್ವಾಭಿಮಾನ, ಸ್ವದೇಶಾಭಿಮಾನ ಮನದಲ್ಲಿ ಮೂಡಿ ಅಚ್ಚಳಿಯದೆ ಇರುವುದನ್ನು ಗಮನಿಸಬಹುದು.

ಅಂದಿನ ಸಾಮಾನ್ಯ ಹೆಣ್ಣುಮಕ್ಕಳು ಕೂಡ ತೋರಿದ ಅಸಾಧಾರಣ ಸಾಹಸವನ್ನು ತ.ರಾ.ಸು. ಅವರ ರಕ್ತತರ್ಪಣ ಕಾದಂಬರಿ ಈ ರೀತಿಯಾಗಿ ನಿರೂಪಿಸುತ್ತದೆ. "ಕ್ರಾಂತಿಯ ಸೆಳೆ ಹೊಳೆಗೆ ಸಿಕ್ಕಿ ತೊಟ್ಟಿಲು ತೂಗುವ ಬಳೆ ತೊಟ್ಟ ಕೈ ಕೂಡ ವಿಪ್ಲವದ ಖಡ್ಗ ಧರಿಸಿದೆ. ಅಕ್ಕಪಕ್ಕದ ಮನೆಯ ಸಾತೂ, ಶಾರದೆಯರ ಪ್ರಣಯರ ವಿವಾಹದ ಪೊಳ್ಳು ಮಾತಾಡಿ ಹೊತ್ತು ಕಳೆಯುತ್ತಿದ್ದವರು ರಣಭೈರವಿಯಾಗಿ ಹೊರಬಂದಿದ್ದಾರೆ. ಅಡಿಗೆ ಒಲೆ ಉರಿಸುತ್ತಿದ್ದವರು ಇಂದು ತಾವೇ ಅಗ್ನಿಕನ್ಯೆಯರಾಗಿದ್ದಾರೆ." (ರಕ್ತತರ್ಪಣ, ಪುಟ–೬೦, ೧೯೪೬) ಅದೇ ಕಾದಂಬರಿಯಲ್ಲಿ ಅಜ್ಜಿಗ, ಸೀತಾರಾಮಯ್ಯನನ್ನು ಪೊಲೀಸರು ಅರೆಸ್ಟು ಮಾಡುತ್ತಾರೆ. ಅದಕ್ಕೆಲ್ಲ ಕಾರಣ ಬಾಪಾರೆಡ್ಡಿ ಆಗಿರುತ್ತಾನೆ. ಆದರೂ ಅವನನ್ನು ಏನು ಮಾಡದೆ ಹಳ್ಳಿಯ ಜನರು ಸುಮ್ಮನಿರುತ್ತಾರೆ. ಆಗ ಕೆರಳಿದ ಕೋಪದ ರುದ್ರವಾಣಿ ಮಹಿಳಾ ಮಂಡಲಿಯವರು "ಥೂ ಕಳ್ಳೂಳೇ ಮಗ, ಇವನ ಮನೆ ಹಾಳಾಗ್ಹೋಗ, ಇವನ್ನಿನ್ನೂ ಬಿಟ್ಟಿದ್ದಾರೆ ಗಂಡಸ್ರು–ಬಳೆತೊಟ್ಕೊಂಡು!" (ಪುಟ–೮೩) ಬಾಲಯ್ಯ ಹೆಂಡ ತೆಗೆದುಕೊಂಡು ಕೊಡಲು ಹೋದಾಗ ಮನೆಯ ಹೆಂಗಸರು "ಇನ್ನೊಂದ್ಸಲ ನಮ್ಮನೇತಾವೇನಾದ್ರು ಬಂದ್ರೆ ಕಸಬರ್ಕೇಲಿ ಒಡೆದ್ಬುಡ್ತೀವಿ ನೋಡು" ಎಂದು ಬೆದರಿಸಿ ಕಳುಹಿಸುತ್ತಾರೆ (ಪುಟ–೪೮) ಸ್ವಾತಂತ್ರ್ಯದ ಕಾವು, ಕಿಚ್ಚನ್ನು ಮೈಗತ್ತಿಸಿಕೊಂಡ ಸ್ತ್ರೀಯರು ಪುರುಷರ ಗಂಡಸ್ತನವನ್ನು ಹಿಯ್ಯಾಳಿಸುತ್ತಾರೆ. ಬ್ರಿಟಿಷ್ ಸರ್ಕಾರದ ಭಾಗವಾದ ಮೇಲ್ವರ್ಗದವರನ್ನು ಪ್ರತಿಭಟಿಸುವುದು ಚಳುವಳಿಯ ಫಲದಿಂದಲೇ.

ಅದೇ ಕಾದಂಬರಿಯಲ್ಲಿ ಅಜ್ಜಿಗ ಎಂಬ ಯುವ ರೈತ ಹೋರಾಟಗಾರನ ತಂಗಿ ಚೆನ್ನಿ ತನ್ನ ಅಣ್ಣನ ಬಗ್ಗೆ "ದೇಶಕ್ಕೋಸ್ಕರ ನಗನಗ್ತಾ ಜೇಲಿಗೋದ ಗಂಡಸು ಮಗ. ಅವರೆಲ್ಲ ಕಷ್ಟಪಡ್ತಾ ಇರೋವಾಗ ಹೆಣ್ಮುಂಡೆ ನಾನೊಳ್ಳೆ ಅಳ್ತಾ ಕೂತಿರ್ಬೇಕಲ್ಲಾಂತ ಎಸನ. ಅಣ್ಣನ್ನಿಡುಕೊಂಡೋದೋರು ನನ್ನು ಇಡುಕೊಂಡೋಗಿದ್ರೆ, ಅಣ್ಣಯ್ಯನಂಗಾದ್ದೇ ನಂಗೂ ಆಗ್ತಾ ಇತ್ತಲ್ಲ. ಈಗವನೊಬ್ನೆ ಪೇಸಾಡ್ಬೇಕಲ್ಲಾಂತ ದುಃಖ ಆಗ್ತೈತಿ" ಎಂದು ತಾನು ಕೂಡ ಹೋರಾಡುವುದಕ್ಕೂ ಸೈ ಎಂಬಂತಹ ಸನ್ನಿವೇಶವನ್ನು ತಿಳಿಯಬಹುದು. (ರಕ್ತತರ್ಪಣ, ಪುಟ–೧೦೫. ೧೯೪೬). ದಫೇದಾರ ಬಾಲಾಜಿಸಿಂಗನು ಬೊಮ್ಮಯ್ಯನ ಮನೆಗೆ ಬಂದು ಚೆನ್ನಿಯ ಮೇಲೆ ಕೈಮಾಡಿದಾಗ ದಫೇದಾರನ ಕೆನ್ನೆಗೆ ಬಾರಿಸುವ ಧೈರ್ಯವನ್ನು ಒಬ್ಬ ಹಳ್ಳಿಯ ಮುಗ್ಧ ಹೆಣ್ಣುಮಗಳು ತಾಳುವುದು ದೇಶಾಭಿಮಾನ ಸ್ವಾತಂತ್ರ್ಯಹೋರಾಟದ ಅಭಿಪ್ರೇರಣೆಯಿಂದಲೇ.

ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮ ಹೆಣ್ಣುಮಕ್ಕಳು ಅಬಾಲವೃದ್ಧರಾದಿಯಾಗಿ ಎಲ್ಲರೂ ಭಾಗವಹಿಸುತ್ತಾರೆ. ಚಿಕ್ಕಪ್ರಾಯದ ಹೆಣ್ಣುಮಕ್ಕಳು ಕೂಡಾ ಮೆರವಣಿಗೆಯಲ್ಲಿ ಭಾಗವಹಿಸುವುದು, ಹರತಾಳ ಮಾಡುವುದು, ಪ್ರಭಾತಪೇರಿ ಹಾಡುವುದು ಇತ್ಯಾದಿಗಳಲ್ಲಿ ಭಾಗವಹಿಸುತ್ತಿದ್ದು, ಭಾರತದ ತ್ರಿವರ್ಣಧ್ವಜವನ್ನು ಸರಕಾರಿ ಕಚೇರಿಗಳಲ್ಲಿ ಹಾರಿಸುವುದು, ಮೆರವಣಿಗೆಯಲ್ಲಿ ಧ್ವಜವನ್ನು ಹಿಡಿದುಕೊಂಡು ಸಾಗುವುದು ಕೂಡಾ ಚಳುವಳಿಯ ಒಂದು ಭಾಗವಾಗಿತ್ತು. ಭಾರತದ ತ್ರಿವರ್ಣ ಧ್ವಜವನ್ನು ಕಂಡರೆ ಬ್ರಿಟಿಷರ ಗುಲಾಮರಾಗಿದ್ದ ನಮ್ಮ ಪೊಲೀಸರು ಕೆಂಡ ಕಾರುತ್ತಿದ್ದರು.

ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಧ್ವಜ ಹಿಡಿದಿದ್ದ ಶಾಂತಾ ಎಂಬ ಪುಟ್ಟ ಹುಡುಗಿಯೊಬ್ಬಳು ಪೊಲೀಸ್ ತನ್ನ ಕೆನ್ನೆಗೆ ಬಾರಿಸಿದಾಗ "ನಿನ್ನ ಲಾಠಿಗ್ಯಾರೊ ಅಂಜುತಾರೆ! ಹೊಡೆದರೆ ಹೊಡಿ, ಸತ್ತರೂ ಧ್ವಜಾ ಬಿಡೋದಿಲ್ಲ" ಎಂದು ದೃಢಸ್ವರದಲ್ಲಿ ಉತ್ತರಿಸುತ್ತಾಳೆ. (ಸ್ವಾತಂತ್ರ್ಯದೆಡೆಗೆ, ಪುಟ–೧೧. ೧೯೪೬) ಹನ್ನೆರಡು ವರ್ಷದ ಮಗುವಿನಲ್ಲಿಯೂ ಸಹ ಸ್ವಾತಂತ್ರ್ಯ ದೇಶಕ್ಕೋಸ್ಕರ ಜೀವವನ್ನು ಮುಡುಪಾಗಿಟ್ಟು ಹೋರಾಡುವ ಶಕ್ತಿ ಇತ್ತು ಎಂಬುದನ್ನು ತಿಳಿಯಬಹುದು. ಅಂದಿನ ಕಾಲದ ಕೆಲವು ಹೆಣ್ಣು ಮಕ್ಕಳಿಗೆ ಓದು, ಮದುವೆ, ಪ್ರೇಮ ಇವುಗಳ ಜೊತೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ದುಮುಕುವುದು/ತೊಡಗಿಸಿಕೊಳ್ಳುವುದು ಹೆಚ್ಚು ಮುಖ್ಯವಾಗಿತ್ತು. ಈ ಕಾದಂಬರಿಯಲ್ಲಿ ಶಾಂತ ಎಂಬ ಹೆಣ್ಣುಮಗಳು ತನ್ನ ವೈಯಕ್ತಿಕ ಆಸೆಯನ್ನು ತ್ಯಜಿಸಿ "ಹೆಂಗಸು ಬರಿ ಹೆಂಡತಿಯಾಗುವುದಕ್ಕೆ ಹುಟ್ಟಿಲ್ಲ. ಹೆಂಗಸು–ಗಂಡಸಿಗಿಂತ ಯಾವುದರಲ್ಲೂ ಕಡಿಮೆ ಇಲ್ಲ. ಗಂಡಸಿನ ಗುಲಾಮಗಿರಿಯಿಂದ ಪಾರಾಗಿ ಸ್ವತಂತ್ರ ಜೀವನ ನಡೆಸಬೇಕು. ಉಚ್ಚ ಶಿಕ್ಷಣ ಪಡೆಯಬೇಕು. ಜಗತ್ತಿನ ಹೆಂಗಸರೆಲ್ಲ ಸ್ವಾತಂತ್ರ್ಯದ ಕಡೆಗೆ ಸಾಗುತ್ತಿರುವಾಗ ಹಿಂದೂಸ್ತಾನದ ಹೆಂಗಸರು ಮಾತ್ರ ಯಾಕೆ ಹಿಂದೆ ಬೀಳುಬೇಕು" ಎನ್ನುತ್ತಾಳೆ. (ಸ್ವಾದೆ. ಪುಟ–೧೬೪, ೧೯೪೬) ಇಲ್ಲಿ ಶಾಂತಾ ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಸ್ತ್ರೀಸ್ವಾತಂತ್ರ್ಯವನ್ನು ಬಯಸುತ್ತಿರುವುದನ್ನು ಗಮನಿಸಬಹುದು. ಅಲ್ಲದೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮನೋಭಾವವನ್ನು ಈ ಮಾತುಗಳಲ್ಲಿ ಗುರುತಿಸಬಹುದು.

ದೇಶಕ್ಕಾಗಿ ನಡೆದ ಮಹಾನ್ ಹೋರಾಟದಲ್ಲಿ ಕೆಳವರ್ಗದ ಸ್ತ್ರೀ, ಮೇಲ್ವರ್ಗದ ಸ್ತ್ರೀ ಮತ್ತು ಅಲ್ಪಸಂಖ್ಯಾತ ಸ್ತ್ರೀಯರು ಪಾಲ್ಗೊಂಡಿದ್ದು ತಮ್ಮದೇ ಆದ ಕಾಣಿಕೆಯನ್ನು ಸಲ್ಲಿಸಿರುವುದನ್ನು ಚರಿತ್ರೆಯ ಪುಟಗಳಲ್ಲಿ ಕಾಣಬಹುದಾಗಿದೆ. ಅದರಂತೆ ಮಧ್ಯಮವರ್ಗದಿಂದ ಸ್ತ್ರೀಯರು ಸಹ ಹೊರತಾಗಿಲ್ಲ. ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ಸತ್ಯ ಮನೆಯಲ್ಲಿ ಕುಳಿತು ಪತ್ರಿಕೆಯನ್ನು ಓದುತ್ತಿರುತ್ತಾಳೆ. ತಮ್ಮ ಊರಿನ ಜನ ಇಷ್ಟು ಬೇಗ ಶಾಂತರಾದುದನ್ನು ಕಂಡು ನೋಯುತ್ತಾ "ಶ್ಯಾಮಾ ಹಿಂದಿನ ಸಾರಿ ಉತ್ತರ ಕನ್ನಡದಲ್ಲಿ ಹೆಂಗಸರು ಸಹ ಜೈಲಿಗೆ ಹೋದರಂತೆ. ನೀನು ಮನೆಮಾರು ನೋಡಿಕೊಂಡಿರುವೆಯಾದರೆ ನನಗೂ ಮುಂದೆ ಹೋಗಬೇಕೆಂದು ಆಸೆಯಿದೆ" ಎನ್ನುತ್ತಾಳೆ. (ಔದಾರ್ಯದ ಉರುಳಲ್ಲಿ, ಪುಟ–೪೩೭. ೧೯೪೭) ಸತ್ಯಳಲ್ಲಿನ ಸ್ವಾತಂತ್ರ್ಯಪ್ರೇಮ, ಪ್ರತಿಷ್ಠೆ, ಸಂಯಮ, ತ್ಯಾಗಮನೋಭಾವವನ್ನು ಗುರುತಿಸಬಹುದು. ಸತ್ಯ ಬ್ರಿಟಿಷರನ್ನು ದೇಶದಿಂದ ಹೊರಗೆ ಹಾಕಲು ಏನಾದರೂ ಮಾಡಬೇಕಲ್ಲ ಏನು ಮಾಡುವುದು ಆಗುತ್ತಿಲ್ವಲ್ಲ ಎಂಬ ಹತಾಶೆ,

ಅಸಹಾಯಕತೆಯ ನಿಲುವನ್ನು ವ್ಯಕ್ತಪಡಿಸುತ್ತಾಳೆ. ತೆಲುಗಿನ ನಾರಾಯಣರಾವ್ ಕಾದಂಬರಿಯಲ್ಲಿ ಶ್ಯಾಮಸುಂದರಿ ಖಾದಿಯನ್ನು ತೊಡುತ್ತಾಳೆ. ೧೯೨೨ರ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿ ಕಾಲೇಜನ್ನು ತೊರೆದಿರುತ್ತಾಳೆ. ಪ್ರತಿಯೊಂದು ರಾಷ್ಟ್ರೀಯ ದಿನಾಚರಣೆಯಲ್ಲಿ ಪಾಲ್ಗೊಳ್ಳುತ್ತಾಳೆ. ಗಾಂಧಿ ಜಯಂತಿಯಂದು ಶ್ಯಾಮಸುಂದರಿ

ಕನ್ನಡ ಭಾಷಾಂತರ

ಬೀದಿ ಬೀದಿ ತಿರುಗಿ ಸ್ವದೇಶ ವಸ್ತುಗಳನ್ನು ಮಾರಾಟ ಮಾಡುವುದು, ರುಕ್ಮಿಣಿದೇವಿ ಮೊದಲಾದ ಸಮಾಜ ಸೇವಕಿಯರೊಂದಿಗೆ ಗ್ರಾಮ ಗ್ರಾಮಗಳಿಗೆ ಭೇಟಿ ನೀಡಿ ಮದ್ಯಪಾನ ಮಾಡಬಾರದು ಎಂದು ಬೋಧಿಸುವುದು. ಹಿಂದೂ-ಮುಸ್ಲಿಂರ ಸಮ್ಮೇಳನ ನಡೆಸುವುದರಿಂದ ದೇಶಕ್ಕೆ ಸ್ವಾತಂತ್ರ್ಯ ಲಭಿಸುತ್ತದೆ ಎಂದು ಬೋದಿಸುತ್ತಿದ್ದಳು. (ಮೂಲ; ಅನುಬಂಧ-೩ ಅಧ್ಯಾಯ-೯ ಕ್ರಸಂ. ೮)

ಹೀಗೆ ಶ್ಯಾಮಸುಂದರಿ ಪ್ರತಿಯೊಂದು ರಾಷ್ಟ್ರೀಯ ದಿನಾಚರಣೆಯಲ್ಲಿ ಪಾಲ್ಗೊಳ್ಳುತ್ತಿದ್ದು, ಪ್ರತಿ ಹಳ್ಳಿ ಹಳ್ಳಿಗೂ ಭೇಟಿ ನೀಡಿ ಗಾಂಧೀಜಿಯವರ ಸಿದ್ಧಾಂತಗಳನ್ನು ಪ್ರಸರಿಸುತ್ತಾಳೆ. ಮತ್ತು ಹಿಂದೂ ಮುಸ್ಲಿಂರಲ್ಲಿ ಐಕ್ಯತಾ ಮನೋಭಾವವನ್ನು ಮೂಡಿಸುತ್ತಿರುವುದನ್ನು ಕಾಣಬಹುದಾಗಿದೆ. ಇದೇ ಕಾದಂಬರಿಯಲ್ಲಿ ಪುಷ್ಪಶೀಲ ಎಂಬ ಸ್ತ್ರೀ ಎರಡನೆಯ ಗಂಡನಾದ ರಾಜೇಶ್ವರರಾವ್‌ನನ್ನು ತೊರೆದ ಸಂದರ್ಭದಲ್ಲಿ ಹೇಳಿದ ಮಾತುಗಳು ಹೀಗಿವೆ.

ಕನ್ನಡ ಭಾಷಾಂತರ

ಹೆಣ್ಣುಮಕ್ಕಳು ಇಷ್ಟು ಯುಗಗಳಿಂದ ಪುರುಷರಿಗೆ ಗುಲಾಮರಾಗಿದ್ದಾರೆ. ಅವರಿಗೆ ಗುಲಾಮಗಿರಿ ತೊಲಗಿಸಿ ಪುರುಷರಷ್ಟೆ ಸರ್ವಸ್ವತಂತ್ರ್ಯಗಳು ಕೊಡಬೇಕು. ವಿವಾಹ ಎನ್ನುವುದು ವ್ಯಕ್ತಿತ್ವವನ್ನು ಸಾಯಿಸಿ ಮಾನವರನ್ನು ಸಮಾಜಕ್ಕೆ ಗುಲಾಮರನ್ನಾಗಿ ಮಾಡುತ್ತದೆ. ಈ ವಿವಾಹ ಎಂಬ ಸಂಸ್ಥೆ ಪುರುಷನು ಸ್ತ್ರೀಯನ್ನು ಗುಲಾಮಳನ್ನಾಗಿ ಮಾಡಿಕೊಳ್ಳಲು ಏರ್ಪಾಟಾಗಿರುವಂತದ್ದು. ಆದ್ದರಿಂದ ಈ ವಿವಾಹ ಎಂಬ ಸಂಸ್ಥೆಯನ್ನು ಬದಲಾಯಿಸಿ ಅದರ ಸ್ಥಾನದಲ್ಲಿ ಸ್ತ್ರೀ-ಪುರುಷರಿಗೆ ಸಮಾನ ಹಕ್ಕುಗಳನ್ನು ನೀಡುವ ಸಂಸ್ಥೆಯನ್ನು ಏರ್ಪಾಟು ಮಾಡಬೇಕು. ವಿವಾಹ ಮಾಡಿಕೊಂಡ ಪುರುಷರು ತಮ್ಮ ಹೆಂಡತಿಯರಿಗೆ ಸ್ವಾತಂತ್ರ್ಯ ನೀಡಿ ಅವರ ಇಷ್ಟಾನುಸಾರವಾಗಿ ಸಂಚರಿಸಲು ಸಮ್ಮತಿಕೊಡಬೇಕು. (ಮೂಲ; ಅನುಬಂಧ-೩ ಅಧ್ಯಾಯ-೯ ಕ್ರಸಂ. ೯)

ಸ್ತ್ರೀ ಪ್ರಾಚೀನ, ಪ್ರಾಚೀನ ಪೂರ್ವ ಕಾಲದಿಂದಲೂ ರಾಜರ ಬೋಗದ ವಸ್ತುವಾಗಿಯೂ, ಮಕ್ಕಳನ್ನು ಹಡೆಯುವ ಯಂತ್ರವಾಗಿ ಆಟದ ಬೊಂಬೆಯ ತರಹದ ಜೀವನವನ್ನು ನಡೆಸುತ್ತಾ ಬಂದಿದ್ದಾಳೆ. ಆದರೆ ಈ ಕಾದಂಬರಿ ರಚನೆಯ ಸಂದರ್ಭದಲ್ಲಿ ದೇಶಕ್ಕೆ ಬರೀ ರಾಜಕೀಯ ಸ್ವಾತಂತ್ರ್ಯ ಬಂದರೆ ಸಾಲದು ಜೊತೆಗೆ ಸಾಮಾಜಿಕ ಸ್ವಾತಂತ್ರ್ಯವೂ ಸಹ ಬಹಳ ಅಗತ್ಯ ಎಂಬುದನ್ನು ತಿಳಿಯಲಾಗಿದೆ. ಅಲ್ಲದೆ ಗಂಡು ಹೇಗೆ ಬಹುಪತ್ನಿತ್ವ ಪದ್ದತಿಯನ್ನು ಅನುಸರಿಸಲು ಅವಕಾಶವಿದೆಯೋ

ಹಾಗೇನೇ ಹೆಣ್ಣು ಸಹ ಬಹುಪತಿತ್ವವನ್ನು ಅನುಸರಿಸುವ ಸೂಕ್ಷ್ಮವನ್ನು ಇಲ್ಲಿ ಗ್ರಹಿಸಬಹುದಾಗಿದೆ. ಪ್ರಸ್ತುತ ಸಮಾಜದಲ್ಲಿ ಪುರುಷ ಪ್ರದಾನ ಜೀವನದಂತೆ ಸ್ತ್ರೀ ಪ್ರಧಾನ, ಪ್ರಮುಖ ಜೀವನವನ್ನು ನಡೆಸಲು ಪ್ರಯತ್ನಿಸುತ್ತಿರುವುದನ್ನು ಪ್ರಸ್ತುತವಾಗಿ ನಗರ ಪ್ರದೇಶಗಳಲ್ಲಿ ಕಾಣಲಾಗಿದೆ. ಸಾಮಾಜಿಕ ಸ್ವಾತಂತ್ರ್ಯ ಚಳವಳಿಯು ಒಂದು ಭಾಗವಾಗಿದ್ದು ಜೊತೆಗೆ ಸಾಮಾಜಿಕ ಸುಧಾರಣೆಗೆ ತೆಲುಗು ಲೇಖಕರು ಒತ್ತು ನೀಡಿರುವುದನ್ನು ಗಮನಿಸಬಹುದಾಗಿದೆ. ಇದೇ ಕಾದಂಬರಿಯಲ್ಲಿ ಸೂರ್ಯಕಾಂತಮ್ಮ ವಿಮಲ, ಅಹಲ್ಯ ಝಾನ್ಸಿರಾಣಿ ಲಕ್ಷ್ಮಿಬಾಯಿ, ಚಾಂದ್‌ಬೇಬಿ ಮೊದಲಾದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸ್ತ್ರೀಯರನ್ನು ಸ್ಮರಿಸಿಕೊಳ್ಳುತ್ತಾ ದೇಶ ಸೇವಾಸಕ್ತಿ ಮನೋಭಾವವನ್ನು ಬೆಳೆಸಿಕೊಳ್ಳುತ್ತಾಳೆ. (ನಾರಾಯಣರಾವ್, ಪುಟ-೨೦೧, ೧೯೩೪)

ಕನ್ನಡ ಭಾಷಾಂತರ

ನಾನು ದೇಶಸೇವೆ, ಮಾನವಸೇವೆ ಮಾಡಬೇಕೆಂಬ ಸಂಕಲ್ಪವನ್ನು ಇಟ್ಟುಕೊಂಡಿದ್ದೇನೆ. ತರಬೇತಿ ಮುಗಿದ ನಂತರ ಸಬರಮತಿ ಆಶ್ರಮಕ್ಕೆ ಹೋಗಿ ಸೇವೆ ಮಾಡುವ ಅಧಿಕಾರವನ್ನು ಸಂಪಾದಿಸಿಕೊಳ್ಳುತ್ತೇನೆ. ಆ ಮಹಾತ್ಮನ ಪಾದಗಳಡಿಯಲ್ಲಿ ಸೇವೆ ಮಾಡುವುದನ್ನು ಕಲಿತು ನನ್ನ ಜನ್ಮವನ್ನು ಸೇವೆಯಲ್ಲಿ ಐಕ್ಯ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿಕೊಂಡಿದ್ದೇನೆ ಎಂದು ಶ್ಯಾಮಸುಂದರಿ ನಾರಾಯಣರಾವ್‌ಗೆ ಹೇಳುತ್ತಾಳೆ (ಮೂಲ; ಅನುಬಂಧ-೩ ಅಧ್ಯಾಯ-೬ ಕ್ರಸಂ. ೧೦)

ಶ್ಯಾಮಸುಂದರಿ ತನ್ನ ಜೀವನವನ್ನು ಮಾನವಸೇವೆ ಮತ್ತು ದೇಶಸೇವೆಗಾಗಿ ಅರ್ಪಿಸಿ ಕೊಳ್ಳುತ್ತಿರುವುದನ್ನು ಕಾಣಬಹುದು. ತನ್ನ ಸ್ವಾರ್ಥಜೀವನಕ್ಕಾಗಿ ಹಂಬಲಿಸುತ್ತಿರುವ, ಷೋಕಿ, ಅಹಂಕಾರ, ಆಡಂಬರದ ಜೀವನದ ಮೊರೆ ಹೋಗುತ್ತಿರುವಂತಹ ಸ್ತ್ರೀಯರಿರುವ ಸಮಾಜದಲ್ಲಿ ದೇಶಭಕ್ತಿ, ಮಾನವೀಯತೆಯಿಂದಲೇ ತನ್ನ ಬದುಕು ಸಾರ್ಥಕ ಎಂಬಂತಹ ಶ್ಯಾಮಸುಂದರಿಯ ತ್ಯಾಗ, ಅರ್ಪಣಾಮನೋಭಾವವನ್ನು ಗುರುತಿಸಬಹುದು.

ಇನ್ನೂ ಈ ಕಾದಂಬರಿಯಲ್ಲಿ ಬರುವಂತಹ ಸಣ್ಣ-ಪುಟ್ಟ ಪಾತ್ರಗಳಾದ ವಿದೇಶದಲ್ಲಿದ್ದು ಭಾರತ ದೇಶದ ಸ್ವಾತಂತ್ರ್ಯವನ್ನು ಬಯಸುತ್ತಿರುವ ಲಿಯೋನಾರಾ ಮತ್ತು ದೇಶಸೇವೆಗಾಗಿ/ದೇಶದ ಚಳವಳಿಗಾಗಿ ಅಲ್ಪಸ್ವಲ್ಪವಾಗಿ ಯೋಚಿಸುತ್ತಿರುವ ಶಕುಂತಲ, ಸೂರ್ಯಕಾಂತಮ್ಮನಂತಹ ಪಾತ್ರಗಳು ಮಿಂಚಿ ಮಾಯವಾಗುತ್ತವೆ.

ಸ್ವಾತಂತ್ರ್ಯ ಚಳುವಳಿಯನ್ನು ವಸ್ತುವಾಗುಳ್ಳ ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ದುವ್ವೂರಿ ಸುಬ್ಬಮ್ಮ ಎಂಬ ಸ್ತ್ರೀ ಗಾಂಧೀಜಿ ಅಸಹಕಾರ ಚಳುವಳಿಯನ್ನು ಕೈಗೊಂಡ ಹಿನ್ನೆಲೆಯಲ್ಲಿ ವಿದೇಶ ವಸ್ತ್ರಗಳನ್ನು ಅಗ್ನಿಗೆ ಆಹುತಿ ಮಾಡುತ್ತಾಳೆ. ಸುಬ್ಬಮ್ಮ ಖಾದಿ ಬಟ್ಟೆಯ ಮೂಟೆಗಳನ್ನು ಹೊತ್ತುಕೊಂಡು ಊರಿನ ಓಣಿ ಓಣಿಯೂ ತಿರುಗಿ ಖಾದಿ ಬಟ್ಟೆಗಳನ್ನು ಮಾರಾಟ ಮಾಡುತ್ತಾಳೆ. ಮತ್ತು ಇದೇ ಕಾದಂಬರಿಯಲ್ಲಿ ರಾಮನಾಥನು ಗಾಂಧೀಜಿಯವರ ಉದ್ದೇಶಗಳನ್ನು ಕನಿಷ್ಠವಾಗಿಯಾದರೂ ಈಡೇರಿಸಬೇಕೆಂದು ಯೋಜನೆ ಹಾಕಿಕೊಂಡಿರುತ್ತಾನೆ. ಈ ಯೋಜನೆಯಲ್ಲಿ

ಲಚ್ಚಮ್ಮ ಎಂಬ ಸ್ತ್ರೀ ಖಾದಿ ವೃತ್ತಿ ಕಾರ್ಯಕ್ರಮವನ್ನು ನೋಡಿಕೊಳ್ಳುತ್ತಾಳೆ. ಹೀಗೆ ದುವ್ವೂರಿ ಸುಬ್ಬಮ್ಮ ಲಚ್ಚಮ್ಮರ ಪಾತ್ರಗಳು ಗಾಂಧೀಜಿಯವರ ಸಿದ್ಧಾಂತಗಳಿಗೆ ಮಿಡಿಯುವಂತಿದ್ದು, ಗಾಂಧೀಜಿಯವರ ಪ್ರಭಾವ, ಪ್ರೇರಣೆಯನ್ನು ಇವರಲ್ಲಿ ಗುರುತಿಸಬಹುದಾಗಿದೆ. (ಕೊಲ್ಲಾಯಿ ಗಟ್ಟಿತೇನೆಮಿ, ಪುಟ–೬, ೩೮೦, ೧೯೨೧) ಸ್ವಾತಂತ್ರ್ಯ ಚಳುವಳಿಯನ್ನು ವಸ್ತುವಾಗುಳ್ಳ ಇನ್ನೊಂದು ಕಾದಂಬರಿ 'ಕೋನಂಗಿ' ಈ ಕಾದಂಬರಿಯಲ್ಲಿ ಅನಂತಲಕ್ಷ್ಮಿ

ಕನ್ನಡ ಭಾಷಾಂತರ

ಪ್ರತಿ ದಿನ ಮಹಿಳಾ ಖಾದಿ ಪ್ರಚಾರ ಕಾರ್ಯಾಲಯಕ್ಕೆ ಹೋಗಿ ನೇಯುವುದು, ಇತರರಿಗೂ ನೇಯುವುದನ್ನು ಕಲಿಸುವುದು, ಮಹಿಳಾ ಖಾದಿ ಪ್ರಚಾರಾಲಯ ವಸ್ತ್ರ ವಿಕ್ರಯಶಾಲೆಗೆ ಹೋಗಿ ಖಾದಿ ಮಾರಾಟ ಮಾಡುವುದು, ವಾರ್ಧಾ ಆಶ್ರಮ ಸೇರಿ ಏನಾದರೂ ಕೆಲಸ ಮಾಡುತ್ತಿರುತ್ತೇನೆ. ಪ್ರತಿ ದಿನ ಖಾದಿ, ನೂಲು ನೇಯುತ್ತಿರುತ್ತೇನೆ. ಖಾದಿ ಬಟ್ಟೆಯನ್ನೇ ತೊಟ್ಟುಕೊಳ್ಳುತ್ತೇನೆ ಎಂದು ಗಂಡ ಕೋನಂಗಿಗೆ ಉತ್ತರ ಬರೆಯುತ್ತಾಳೆ. (ಮೂಲ; ಅನುಬಂಧ–೩ ಅಧ್ಯಾಯ–೯ ಕ್ರಸಂ. ೧೧)

ದೇಶಕ್ಕಾಗಿ ಹೋರಾಟ ಮಾಡಿ ಮಿಂಚಿನ ವೇಗದಲ್ಲಿ ನಾ ಮುಂದು, ತಾಮುಂದು ಎಂದು ಪ್ರಾಣಗಳನ್ನು ಅರ್ಪಿಸಿದ ನಾಡಪ್ರೇಮಿಗಳು, ದೇಶಭಕ್ತರು ಭಾರತ ಮಾತೆಯ ಮಡಿಲಲ್ಲಿ ಸೇರಿ ಹೋಗಿದ್ದಾರೆ. ಅಂತವರ ಅಪ್ರತಿಮ ದೇಶಪ್ರೇಮ ಭಾರತ, ವಿದೇಶದ ಸ್ತ್ರೀಯರನ್ನು ಗಮನ ಸೆಳೆಯಲಿಲ್ಲವೆ. ಆದರೆ ಕೇವಲ ಅಹಿಂಸೆಯಿಂದಲೇ ದೇಶದ ಸ್ವಾತಂತ್ರ್ಯ ಎಂಬ ಮಂತ್ರವನ್ನು ತನ್ನ ಶಕ್ತಿಯನ್ನಾಗಿಸಿಕೊಂಡು ದೇಶದ ಸ್ತ್ರೀಕುಲವನ್ನು ಚಳವಳಿಯಲ್ಲಿ ಧುಮುಕುವಂತೆ ಮಾಡಿ ಅವರ ಪ್ರಭಾವ ಪ್ರೇರಣೆ ಬೀರಿರುವುದನ್ನು ಕಾಣಬಹುದು. ಗಾಂಧೀಜಿಯವರು ಮತ್ತು ಹೋರಾಟದ ಚಳವಳಿಯಲ್ಲಿ ಸ್ತ್ರೀಯರ ಪಾಲ್ಗೊಳ್ಳುವಿಕೆ ಹೇಗಿತ್ತು ಎಂಬುದನ್ನು ತಿಳಿಯಲಾಗಿದೆ.

ಹೀಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಸಾಧನೆ ಅಮೋಘ ಮತ್ತು ಅದ್ಭುತವಾದದ್ದಾಗಿದೆ. ಸಂಪ್ರದಾಯದ ಕಟ್ಟುಪಾಡಿಗೆ ಒಳಗಾಗಿ ಕೇವಲ ಗಂಡ, ಮಕ್ಕಳು, ಮನೆ ಸಂಸಾರದ ಸುಳಿಯಲ್ಲಿ ಕಾಲ ಕಳೆಯುತ್ತಿದ್ದ ಮಹಿಳೆಯರಲ್ಲಿ ದೇಶಸೇವಾಮನೋಭಾವ ಬೆಳೆದುದು ಆಶ್ಚರ್ಯವನ್ನುಂಟು ಮಾಡುತ್ತದೆ. ಗಾಂಧೀಜಿಯವರ ಪ್ರಭಾವಕ್ಕೆ ಅವರು ಎಷ್ಟೊಂದು ಒಳಗಾಗಿದ್ದರೆಂದರೆ ತಮ್ಮ ಸುಖ ಜೀವನವನ್ನು ಬದಿಗಿರಿಸಿ, ಕಾಲೇಜುಗಳಿಗೆ ಶರಣು ಹೊಡೆದು ಹೋರಾಟಕ್ಕೆ ಧುಮುಕುತ್ತಾರೆ. ಕನ್ನಡದ ಕಾದಂಬರಿಗಳಲ್ಲಿ ಸ್ತ್ರೀಯರು ಗಾಂಧೀಜಿಯವರ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿದ್ದು ಅವರ ಅಹಿಂಸಾ ತತ್ವಕ್ಕೆ ಬದಲಾಗಿ ಹಿಂಸಾ ರೀತಿಯ ಪ್ರತಿಭಟನಾ ಮನೋಭಾವವನ್ನು ತೋರುತ್ತಾರೆ. ಸಿದ್ಧಾಂತದಲ್ಲಿ ಗಾಂಧೀಜಿಯವರನ್ನು ಅನುಸರಿಸಿ, ಅವರ ಸಂದೇಶಗಳನ್ನು ಉಸಿರನ್ನಾಗಿಸಿಕೊಂಡು ಅಹಿಂಸಾ ಕ್ರಾಂತಿಕಾರಿಗಳಾಗಿ ಹೋರಾಟ ನಡೆಸುತ್ತಾರೆ. ತೆಲುಗು ಕಾಂದಬರಿಗಳಲ್ಲಿಯೂ ಸಹ ಗಾಂಧೀಜಿಯವರ ತತ್ವಗಳನ್ನು ಚಾಚೂತಪ್ಪದೇ ಪಾಲಿಸಿ ಅವರ ಬಿಂಬದಂತೆ ಸ್ತ್ರೀಪಾತ್ರಗಳು

ಚಿತ್ರಿತವಾಗಿವೆ. ತೆಲುಗಿನ ಕಾದಂಬರಿಗಳಲ್ಲಿ ಒಂದು ಸ್ತ್ರೀ ಪಾತ್ರವೂ ಸಹ ಪ್ರತಿಭಟನೆ, ಪ್ರತಿರೋಧ ನಡೆಸುವುದು ಕಂಡುಬರುವುದಿಲ್ಲ. ಹೀಗೆ ಸ್ವಾತಂತ್ರ್ಯ ಚಳವಳಿಯಲ್ಲಿ ಸ್ತ್ರೀಯರು ಪುರುಷರಿಗೆ ಸರಿಸಮಾನವಾಗಿ ಎಲ್ಲಾ ಬಗೆಯ ಕಷ್ಟ-ನಷ್ಟಗಳನ್ನು ಅನುಭವಿಸುತ್ತಾರೆ. ಇಂದು ಸ್ವತಂತ್ರ ಭಾರತದಲ್ಲಿ ಮಹಿಳೆ ತಮ್ಮ ಹಕ್ಕುಗಳಿಗೋಸ್ಕರ, ತಮ್ಮ ಭದ್ರತೆಗೋಸ್ಕರ, ಪ್ರತಿ ಹಂತದಲ್ಲೂ ಹೋರಾಟ ನಡೆಸುತ್ತಲೇ ಇದ್ದಾಳೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತೊಂಬತ್ತು ವರ್ಷಗಳು ಕಳೆದರೂ ಮಹಿಳೆ ಕೌಟುಂಬಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ವಲಯಗಳಲ್ಲಿ ಪೂರ್ಣ ಸ್ವಾತಂತ್ರ್ಯ ದೊರಕದೆ ಶೋಷಣೆಯನ್ನು ಅನುಭವಿಸುತ್ತಿರುವುದನ್ನು ಕಾಣಬಹುದಾಗಿದೆ.

ಮುಸ್ಲಿಂರ ಪಾತ್ರ

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಅಲ್ಪಸಂಖ್ಯಾತರಾದ ಮುಸ್ಲಿಂರು ಕೂಡಾ ಹಿಂದೆ ಉಳಿಯಲಿಲ್ಲ. ಅಂದು ಹಿಂದೂ-ಮುಸ್ಲಿಂರಲ್ಲಿ ಐಕ್ಯಮತವಿತ್ತು. ಅವರ ಧ್ಯೇಯ ದೇಶಕ್ಕೋಸ್ಕರ ಹೋರಾಡಿ ಬ್ರಿಟೀಷರನ್ನು ಭಾರತದಿಂದ ಓಡಿಸುವುದು ಮತ್ತು ಪಾಕಿಸ್ತಾನವೆಂಬ ಸ್ವತಂತ್ರ ರಾಷ್ಟ್ರದ ಕಲ್ಪನೆಯು ಸ್ವತಃ ಜಿನ್ನಾರಲ್ಲು ಇರಲಿಲ್ಲ. ಒಂದು ಕಾಲದಲ್ಲಿ ಮುಂದೆ ಪಾಕಿಸ್ತಾನಕ್ಕಾಗಿ ಪಟ್ಟು ಹಿಡಿದ ಮಹಮ್ಮದ್ ಆಲಿ ಜಿನ್ನಾರವರೆ ಪಕ್ಕಾ ರಾಷ್ಟ್ರೀಯವಾದಿಯಾಗಿದ್ದರು. ಅವರು ತಾನು ಪ್ರಥಮತಃ ರಾಷ್ಟ್ರೀಯವಾದಿ. ಎರಡನೆಯದಾಗಿಯೂ ರಾಷ್ಟ್ರೀಯವಾದಿ, ಮೂರನೆಯದಾಗಿಯೂ ರಾಷ್ಟ್ರೀಯವಾದಿ ಎಂದು ಹೇಳುತ್ತಿದ್ದ ಜಾತೀಯತೆಯ ಕಡು ವಿರೋಧಿಯಾಗಿದ್ದನು. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೂಡ ಹಿಂದೂ ಮುಸ್ಲಿಂರಿಬ್ಬರೂ ಬ್ರಿಟಿಷರ ವಿರುದ್ಧ ಕಲೆತು ನಿಂತಿದ್ದರು. ಈ ಕಾರಣದಿಂದಲೇ ಬ್ರಿಟಿಷರು ಮುಂದೆ ಸಂದರ್ಭ ಸಿಕ್ಕಿದಾಗೆಲ್ಲಾ ಹಿಂದೂ-ಮುಸ್ಲಿಂರ ನಡುವೆ ಅನೈಕ್ಯಮತ ಬೆಳೆಯುವುದನ್ನು ಪರೋಕ್ಷವಾಗಿ ಬೆಣ್ಣೆಯಲ್ಲಿ ಕೂದಲು ತೆಗೆದಂತೆ ಯಾರ ಗಮನಕ್ಕೂ ಬಾರದ ರೀತಿಯಲ್ಲಿ ಪ್ರೋತ್ಸಾಹಿಸಿದರು. ಸ್ವಾತಂತ್ರ್ಯ ಚಳವಳಿಯಲ್ಲಿ ಕೂಡಾ ಇವರು ಗಣನೀಯವಾದ ಪಾತ್ರವನ್ನು ವಹಿಸಿದ್ದಾರೆ. ಅನೇಕ ಕನ್ನಡ-ತೆಲುಗು ಕಾದಂಬರಿಗಳು ಕೂಡಾ ಹಿಂದೂ-ಮುಸ್ಲಿಂರ ನಡುವಿನ ಬಾಂಧವ್ಯ ಹಾಗೂ ಮುಸ್ಲಿಂರು ಚಳವಳಿಯಲ್ಲಿ ವಹಿಸಿದ ಪಾತ್ರವನ್ನು ಕುರಿತು ಚರ್ಚಿಸುತ್ತಿವೆ.

ಪಶ್ಚಿಮ ಬಂಗಾಲದ ಬಾರಾಸಾತ್‌ಗೆ ಸಮೀಪದಲ್ಲಿ ತೀಕುಮಿಯಾ ಉರೂಫ್ ತೀಕುವೀರನು ೧೮೩೧ರಲ್ಲಿ ಜಮೀನುದಾರರ ಅತ್ಯಾಚಾರಗಳ ವಿರುದ್ಧ ರೈತರನ್ನು ಸಂಘಟಿಸಿ ಹೋರಾಡುವಲ್ಲಿ ಸಫಲನಾದನು. ವಂಗಭಂಗದ ಹೆಸರಿನಲ್ಲಿ ನಡೆದ ಈ ಪ್ರಥಮ ಸ್ವದೇಶಿ ಆಂದೋಲನದಲ್ಲಿ ಪೂರ್ವ ಬಂಗಾಳದ ಹಿಂದೂಗಳೊಡನೆ ಸಮಭುಜರಾಗಿ ಮುಸ್ಲಿಂ ಬುದ್ಧಿಜೀವಿಗಳು ಸೇರಿಕೊಂಡಿದ್ದಾರೆಂಬುದು ಆಗಿನ ಸರಕಾರದ ದಾಖಲೆಗಳಿಂದ ತಿಳಿಯುತ್ತದೆ. (ಕನ್ನಡ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳವಳಿ, ಪುಟ-೨೦೭, ೨೦೧೬)

ಮೌಲಾನ ಅಬ್ದುಲ್ ಕಲಾಮ್ ಆಜಾದರು ಹಬೀಬುಲ್ಲಾ ಎಂಬ ಹೆಸರಿನ ಕ್ರಾಂತಿಕಾರಿ ಸಂಸ್ಥೆಯನ್ನು ಸ್ಥಾಪಿಸಿದರು. ಇದರ ಮೂಲಕವಾಗಿ ಬಂಗಾಳ ಮತ್ತಿತರ ಪ್ರಾಂತ್ಯಗಳ ಬುದ್ಧಿಜೀವಿಗಳನ್ನು

ಅವರು ಸಂಘಟಿಸಿದರು. ಬ್ರಿಟಿಷರು ಇವರನ್ನು 'ಗಂಡಾಂತರಕಾರಿ' ಎಂದು ಪರಿಗಣಿಸಿದ್ದರು. ಬೋಸರ ಆಜಾದ್ ಹಿಂದ್ ಸೈನ್ಯದಲ್ಲಿ ಸುಮಾರು ನೂರು ಮಂದಿಯ ಮುಸ್ಲಿಂರಿದ್ದರು. ಮುಸ್ಲಿಂ ದೇಶಪ್ರೇಮದ ಬಗೆಗೆ ಸಂಶಯ ತಾಳುತ್ತಿದ್ದವರಿಗೆ ಒಮ್ಮೆ ಬೋಸರು ಈ ರೀತಿ ಗುಡುಗಿದರು. "ಆಂಗ್ಲರ ಉದ್ದೇಶಪೂರ್ವಕವಾದ ಅಪಪ್ರಚಾರದಿಂದಾಗಿಯೇ ನಮ್ಮ ಸ್ವಾತಂತ್ರ್ಯ ಚಳವಳಿಗೆ ಮುಸ್ಲಿಂರು ವಿರೋಧವಾಗಿದ್ದಾರೆಂದು ಹೇಳಲಾಗುತ್ತಿದೆ. ಇದು ಸಂಪೂರ್ಣ ಸುಳ್ಳು ಮುಸ್ಲಿಂರು ಬಹಳಷ್ಟು ಜನ ಆಂದೋಲನದಲ್ಲಿ ಭಾಗಿಗಳಾಗಿದ್ದಾರೆ. ಈ ವೇಳೆ ನಮ್ಮ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಸ್ವತಃ ಮೌಲಾನ ಇದ್ದಾರೆ. ಮುಸ್ಲಿಂರ ಬಹುದೊಡ್ಡ ವಿಭಾಗವು ಬ್ರಿಟಿಷ್ ವಿರೋಧಿಯಾಗಿದೆ. ಇವರೆಲ್ಲಾ ಭಾರತದ ಬಿಡುಗಡೆಯನ್ನು ಬಯಸುತ್ತಿದ್ದಾರೆ." (ಸ್ವಾತಂತ್ರ್ಯ ಹೋರಾಟದಲ್ಲಿ ಶ್ರೀಸಾಮಾನ್ಯ, ಪುಟ–೪೦–೪೧, ೧೯೭೮)

ಸುಭಾಸ್‌ಚಂದ್ರ ಬೋಸರ ಈ ಮಾತಿನಲ್ಲಿ ಜಾತ್ಯಾತೀತ ಮನೋಭಾವ ಮತ್ತು ಮುಸ್ಲಿಂರ ದೇಶಾಭಿಮಾನವನ್ನು ಕಾಣಬಹುದಾಗಿದೆ. ೧೯೪೬ರಲ್ಲಿ ನೌಕಾಪಡೆಯ ನಾಯಕ ಕರ್ನಲ್‌ಖಾನ್ ಭಾರತೀಯರಿಗೆಲ್ಲಾ "ಜಾತಿಧರ್ಮಗಳ ಭೇದ ಭಾವ ಬಿಟ್ಟು, ಜಾತ್ಯಾತೀತ ಭಾವನೆಯಿಂದ ಈ ಹೋರಾಟದಲ್ಲಿ ಸೇರಿಕೊಳ್ಳಬೇಕು" ಎಂದು ವಿನಂತಿಸಿದ್ದರು. ಕನ್ನಡ–ತೆಲುಗು ಕಾದಂಬರಿಗಳು ಚಿತ್ರಿಸುವ ಕೆಲವೊಂದು ಪಾತ್ರಗಳು ಕಾಲ್ಪನಿಕವಾಗಿದ್ದರೂ ಸಹ ಉಭಯ ಲೇಖಕರು ತಮ್ಮ ನಿಜ ಜೀವನದಲ್ಲಿ ಕಂಡ ಪಡಿಯಚ್ಚುಗಳನ್ನು ಚಿತ್ರಿಸಿದ್ದಾರೆ. ಇಂತಹ ಹಲವಾರು ಮುಸ್ಲಿಂ ದೇಶಭಕ್ತರ ಪಾತ್ರಗಳನ್ನು ಉಭಯ ಭಾಷೆಗಳ ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಮಾಡಿ ಮಡಿದವರು ಕಾದಂಬರಿಯಲ್ಲಿ ಶೇಖರ, ಹೇಮಾ ಪೊಲೀಸರೊಂದಿಗೆ ಗುಂಡಿನ ಚಕಮಕಿ ನಡೆದು ಇಬ್ಬರಿಗೂ ಗುಂಡುಗಳು ತಗುಲಿರುತ್ತವೆ. ಆದರೂ ಅವರ ಕೈಗೆ ಸಿಗಬಾರದೆಂದು ತಪ್ಪಿಸಿಕೊಂಡು ಗುಡ್ಡ ಹತ್ತಿ ಇಳಿದು ಓಡುತ್ತಿರಬೇಕಾದರೆ ಅವರಿಗೆ ಹಸನಸಾಬಿಯ ಲಾರಿ ಸಿಗುತ್ತದೆ. ಗೋಕಾವಿನ ಆಸ್ಪತ್ರೆಗೆ ಹೋಗುತ್ತಿರಬೇಕಾದರೆ ಹೇಮಾ ಮಾರ್ಗ ಮಧ್ಯದಲ್ಲಿ ಸಾವನ್ನಪ್ಪುತ್ತಾಳೆ. ಅದರಿಂದಾಗಿ ಶೇಖರ ನಿಶ್ಚೇಷ್ಟಿತನಾಗಿ ಬಿದ್ದುಕೊಂಡಿದ್ದ ಸಂದರ್ಭದಲ್ಲಿ ಶೇಖರನ ತಲೆಯನ್ನು ತೊಡೆಯ ಮೇಲಿರಿಸಿಕೊಂಡಿದ್ದ ಹಾಗೇ ಹಸನ್‌ಸಾಬಿ ಮೊಣಕಾಲುಗಳನ್ನು ಮಡಚಿಕೊಂಡು ನಮಾಜಿನ ಭಂಗಿಯಲ್ಲಿ ಕುಳಿತು ಹೃದಯವನ್ನೆ ಹಿರಿದು ಈಚೆಗೆ ಎಳೆದು ತಂದಂಥ ಧ್ವನಿಯಲ್ಲಿ ಪ್ರಾರ್ಥನೆ ಮಾಡುತ್ತಾನೆ. "ಅಲ್ಲಾ, ದೇವರೇ, ಇವನ ಪ್ರಾಣ ಉಳಿಸು, ನನ್ನ ತಂದೇ! ನನ್ನ ಜೀವವನ್ನಾದರೂ ತಕ್ಕೊಂಡು ಇವನ ಪ್ರಾಣ ಉಳಿಸು! ತಂದೆ!" ಎಂದು ಗೋಗರೆಯುತ್ತಾನೆ. (ಮಾಡಿ ಮಡಿದವರು, ಪುಟ–೧೮೭, ೧೯೪೮) ಇದರಿಂದ ಹಿಂದೂ ಮುಸ್ಲಿಂರಲ್ಲಿನ ಐಕ್ಯತಾ ಮನೋಭಾವವನ್ನು ಗುರುತಿಸಬಹುದು. ಸ್ವಾತಂತ್ರ್ಯ ಹೋರಾಟದಲ್ಲಿ ಚಳವಳಿಗಾರರಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ತುಣುಕು ಸಹಾಯ ಮಾಡಿದವರೂ ಸಹ ದೇಶಭಕ್ತರೆ, ಇಲ್ಲಿ ಹಸನ್‌ಸಾಬಿಗೆ ತನ್ನ ಜೀವಕ್ಕಿಂತ ದೇಶ, ಹೋರಾಟಗಾರನ ಜೀವ ಮುಖ್ಯ ಎಂಬುದನ್ನು ಗ್ರಹಿಸಬಹುದು.

ರಕ್ತತರ್ಪಣ ಕಾದಂಬರಿಯಲ್ಲಿ ಹುಸೇನ್‌ಸಾಬಿ ಎಂಬ ಬಿಸಿರಕ್ತದ ಮುಸ್ಲಿಂ ಯುವಕ ಕಾಂಗ್ರೆಸ್ ಚಳವಳಿಗಾರರಾದ ಚಂದ್ರಶೇಖರ, ಸೀತಾರಾಮಯ್ಯನವರಿಗೆ ಆಪ್ತ ಶಿಷ್ಯನಾಗಿ ಸಹಾಯ ಮಾಡುತ್ತಾನೆ. ಚಂದ್ರಶೇಖರನಿಗೆ ಮುಂದೊದಗುವ ಆಪತ್ತನ್ನು ಯೋಚಿಸಿ ಊರ ಹೊರಗಿನ ಕಾಲುವೆ ಹಳ್ಳಿ ಮನೆಯಲ್ಲಿ ಬಚ್ಚಿಟ್ಟಿರುತ್ತಾರೆ. ಅವನ ಜೊತೆಯಲ್ಲಿ ಹುಸೇನ್‌ಸಾಬಿಯು ಇರುತ್ತಾನೆ. ದಪೇದಾರನು ಹುಸೇನ್‌ಸಾಬಿಯ ಬಾಯಿಂದ ಚಂದ್ರಶೇಖರನೆಲ್ಲಿದ್ದಾನೆಂದು ತಿಳಿದುಕೊಳ್ಳಲು ವಿವಿಧ ರೀತಿಯಾಗಿ ಭೇದೋಪಾಯ ಮಾಡುತ್ತಾನೆ. ಕಾಂಗ್ರೆಸ್ ಮತ್ತು ಮುಸ್ಲಿಂರ ನಡುವೆ ಕೋಮುಗಲಭೆ ಉಂಟು ಮಾಡುತ್ತಾನೆ. ಆದರೆ ಒಬ್ಬ ಸಾಮಾನ್ಯ ಮುಸ್ಲಿಂ ಸಹ ಜಾತಿ ಮತ ಭೇದಗಳನ್ನು ಖಂಡಿಸುತ್ತಿದ್ದನು. ಬ್ರಿಟಿಷ್ ಸರ್ಕಾರ ಹಿಂದೂ–ಮುಸ್ಲಿಂರನ್ನು ಬೇರ್ಪಡಿಸಲು ಪ್ರಯತ್ನಿಸುತ್ತಿತ್ತೆಂದು ಹುಸೇನ್‌ಸಾಬಿಯಂತಹ ಸಾಮಾನ್ಯ ವ್ಯಕ್ತಿಗೂ ಸಹ ತಿಳಿದ ವಿಷಯವಾಗಿತ್ತು. ಹುಸೇನ್‌ಸಾಬಿ "ಬ್ರಾಂಬ್ರಂತೆ–ಸಾಬ್ರಂತೆ. ಇನ್ನೊಂದ್ಸಲ ಜಾತಿ ಎಸರೆತ್ತಿದ್ರೆ ಆಮ್ಯಾಕೆ..... ನಾನು.... ಸಾಬ್ರಿಗೆ ಬ್ರಾಂಬ್ರೂ ಏನೂ ಮಾಡೋಕಿಲ್ಲ, ಅಣ್ಣ ತಮ್ಮ ಆಗಿಲ್ವ ಇಲ್ಲಿ? ನಿಮ್ಮಂಥ ಹಲ್ಕಾಗಳೇ ಈ ವಿಷ ಅರದಿಕ್ಕೋದು ಷರಂ ಆಗಾಕಿಲ್ವ ಶಾನ್‌ಬೋಗ್ ಮಹ್ರಾಜರ್ಮೆಲೆ ಇಂಥ ಮಾತಾಡಾಕೆ? ಬ್ರಾಂಬ್ರಂತೆ, ಸಾಬ್ರಂತೆ! ಎಲ್ಲೈತೆ ಅದು! ನಮ್ದು ಮಸೀದ್ಯಾಗ,ಅವರ್ದು ಹನುಮಪ್ಪನ್ ಗುಡ್ಯಾಗೆ ಹೊರಗ್ಬಂದ್ರೆ ಇಬ್ರೂ ಒಂದೇ. ನೀವಿದೀರಲ್ಲಾ ಹರಾಮ್‌ಕೋರ್ರು, ನೀವೇ ಇದೆಲ್ಲ ಅಡ್ಡದಾರಿ ಹಿಡಿಸೋದು. ನಿಮ್ಮಂಥೋರ್ ಸೊಂಟ ಮುರ್ದು, ಸಿಗ್ದು ಹನುಮಪ್ಪನ ಗರ್ಡಿ ಬಾಗಿಲ್ಗೆ ತ್ವಾರ್ಣಾ ಕಟ್ಬೇಕು." (ರಕ್ತತರ್ಪಣ, ಪುಟ–೭೩, ೧೯೪೬) ಹುಸೇನ್‌ಸಾಬಿಯ ಈ ಮಾತುಗಳಿಂದ ಹಳ್ಳಿಗಳಲ್ಲಿ ಹಿಂದೂ–ಮುಸ್ಲಿಂ ನಡುವಿನ ಬಾಂಧವ್ಯ ಎಷ್ಟು ಅನ್ಯೋನ್ಯವಾಗಿತ್ತು ಎಂಬುದನ್ನು ತಿಳಿಯಬಹುದು.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ರಾಧಾಕೃಷ್ಣನು ಸ್ವಾತಂತ್ರ್ಯ ಚಳವಳಿಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಜನರನ್ನು ಗುಂಪು ಕೂಡಿಸಬೇಕು ಎಂದಾಗ ಅಪ್ಪಣ್ಣ ಭಟ್ಟರು "ನಾಳೆ ಸಾಯಂಕಾಲ ನಾವಿಬ್ಬರೂ ಸೇರಿ ಒಬ್ಬರ ಕೈಯಲ್ಲಿ ಶೌಕತ್ ಆಲಿ ಚಿತ್ರ, ಇನ್ನೊಬ್ಬರ ಕೈಯಲ್ಲಿ ಗಾಂಧೀ ಚಿತ್ರ ಹಿಡಿದುಕೊಂಡು ಮೆರವಣಿಗೆ ಹೊರಟರೆ ಪೇಟೆಯಲ್ಲಿ ಸಾವಿರ ಜನ ಸೇರುತ್ತಾರೆ" ಎಂದು ಹೇಳುತ್ತಾನೆ. (ಔದಾರ್ಯದ ಉರುಳಲ್ಲಿ, ಪುಟ–೩೬, ೧೯೪೭) ಈ ಸನ್ನಿವೇಶ ಖಿಲಾಪತ್ ಮತ್ತು ಅಸಹಕಾರ ಚಳವಳಿಯ ನೋಟವನ್ನು ತಿಳಿಸುತ್ತದೆ. ಗಾಂಧೀಜಿ ಮತ್ತು ಶೌಕತ್ ಆಲಿ ಪ್ರಸಿದ್ಧ ಜನಮನ್ನಣೆಯ ರಾಷ್ಟ್ರೀಯ ನಾಯಕರು ಹಳ್ಳಿ ಪ್ರದೇಶಗಳಲ್ಲಿ ಎಷ್ಟು ಚಿರಪರಿಚತರು ಎಂಬುದನ್ನು ತಿಳಿಯಲಾಗಿದೆ. ಅದೇ ರೀತಿಯಾಗಿ ಕನ್ನಡದ ಕಾದಂಬರಿಗಳಲ್ಲಿ ಮುಸ್ಲಿಂ ಪಾತ್ರ ಚಿತ್ರಣವನ್ನು ಬಿಂಬಿಸಿದಂತೆ ತೆಲುಗು ಕಾದಂಬರಿಗಳಲ್ಲಿಯೂ ಸಹ ಮುಸ್ಲಿಂ ದೇಶಸೇವೆ, ದೇಶಾಭಿಮಾನವನ್ನು ಅಲ್ಪಸ್ವಲ್ಪವಾಗಿ ತೋರ್ಪಡಿಸಿದ್ದನ್ನು ಈ ಕೆಳಗಿನಂತೆ ಕಾಣಲಾಗಿದೆ.

ಕೋನಂಗಿ ಕಾದಂಬರಿಯಲ್ಲಿ ಮುಸ್ಲಿಂಲೀಗ್ ನಾಯಕರಲ್ಲಿ ಒಬ್ಬರಾದ ಮಹಮ್ಮದ್ ಪೈಜಲ್ ಹುಸೇನ್ ವಕೀಲರಾಗಿದ್ದರು. ಅವರಿಗೆ ಎಷ್ಟೋ ಮಂದಿ ಹಿಂದೂ ಸ್ನೇಹಿತರಿದ್ದಾರೆ. ಆತನಿಗೆ

ಹಿಂದೂಗಳೆಂದರೆ ದ್ವೇಷವಿಲ್ಲ. ಮತ ದ್ವೇಷಿ ಅಲ್ಲ. ಆದರೆ ಆತನ ಮಗಳು ಮೆಹರುನ್ನೀಸಾ ರಿಯಾಸತ್ ಆಲಿ ಎಂಬ ಸೋದರ ಮಾವನನ್ನು ಪ್ರೀತಿಸುತ್ತಾಳೆ. ಆದರೆ ಆತನು ಕಾಂಗ್ರೇಸ್‌ನ ಅನುಯಾಯಿ ಎಂಬ ಕಾರಣಕ್ಕೆ ಮದುವೆಗೆ ತಿರಸ್ಕರಿಸುತ್ತಾಳೆ. ಮುಸ್ಲಿಂರು ಯಾರೂ ಕಾಂಗ್ರೇಸ್ಸಿನಲ್ಲಿ ಇರಕೂಡದು ಎಂಬುದು ಆಕೆಯ ಮನೋಭಾವವಾಗಿರುತ್ತದೆ. ರಿಯಾಸತ್ ಆಲಿ ಪರದಾ ಪದ್ಧತಿಯನ್ನು ವಿರೋಧಿಸುತ್ತಾನೆ. ಮೆಹರುನ್ನೀಸಾ ಪರದಾ ಪದ್ಧತಿಯನ್ನು ಅನುಸರಿಸುತ್ತಾಳೆ. ಆದರೆ ಮೆಹರುನ್ನೀಸಾಳ ತಂದೆ ಪೈಜಲ್ ಹುಸೇನ್ ಮುಸ್ಲಿಂಲೀಗ್ ಇನ್ನೂ ಗಟ್ಟಿಯಾದರೆ, ಮುಸ್ಲಿಂರೆಲ್ಲರೂ ಒಂದಾದರೆ, ಕಾಂಗ್ರೇಸ್‌ನೊಂದಿಗೆ ರಾಜಿ ಮಾಡಿಕೊಂಡು ಒಪ್ಪಂದ ಮಾಡಿಕೊಂಡರೆ ದೇಶಕ್ಕೆ ಬಹುಬೇಗ ಸ್ವಾತಂತ್ರ್ಯ ಸಿಗುತ್ತದೆ ಎಂಬ ನಂಬಿಕೆಯನ್ನು ಹೊಂದಿರುತ್ತಾನೆ. ಮೆಹರುನ್ನೀಸಾ ರಿಯಾಸತ್ ಆಲಿಯ ವಿಚಾರಗಳಿಂದ ಬೇಸರಗೊಂಡು ಹೇಳುವ ಮಾತುಗಳು ಹೀಗಿವೆ.

ಕನ್ನಡ ಭಾಷಾಂತರ

ನಮ್ಮ ಭಾವ ಮುಸ್ಲಿಂಲೀಗ್‌ನಲ್ಲಿ ಸೇರಿದರೆ ಮಾತ್ರ ಆತನನ್ನು ಮದುವೆ ಮಾಡಿಕೊಳ್ಳುತ್ತೇನೆ ಎನ್ನುತ್ತಾಳೆ. (ಮೂಲ; ಅನುಬಂಧ-೩ ಅಧ್ಯಾಯ-೯ ಕ್ರ.ಸಂ. ೧೨)

ಅದೇ ಕಾಂದಬರಿಯಲ್ಲಿ ಮೆಹರುನ್ನೀಸಾ,

ಕನ್ನಡ ಭಾಷಾಂತರ

ಪಾಕಿಸ್ತಾನವನ್ನು ಸೃಷ್ಟಿಸುವುದು, ಮುಸ್ಲಿಂ ಜಾತಿಯನ್ನು ರಕ್ಷಿಸುವುದು ಮುಸ್ಲಿಂ ಜಾತಿಯನ್ನು ರಕ್ಷಿಸದಿದ್ದರೆ ಮುಸ್ಲಿಂ ಜಾತಿ ನಶಿಸಿ ಹೋಗುತ್ತದೆ. ಆ ಜಾತಿ ನಶಿಸಿದರೆ ಇಸ್ಲಾಂ ಮತವೇ ನಶಿಸಿ ಹೋಗುತ್ತದೆ. ಎನ್ನುತ್ತಾಳೆ. (ಮೂಲ; ಅನುಬಂಧ-೩ ಅಧ್ಯಾಯ-೯ ಕ್ರ.ಸಂ. ೧೩)

ರಿಯಾಸತ್ ಆಲಿ ಕಾಂಗ್ರೆಸ್, ಮೆಹರುನ್ನೀಸಾ ಮುಸ್ಲೀಂಲೀಗ್ ಇಬ್ಬರ ರಾಜಕೀಯ ಮತಾಭಿಪ್ರಾಯಗಳು, ಆಯಾಯ ಪಕ್ಷಗಳ ಬಗೆಗಿನ ಅಭಿಮಾನ, ಭಕ್ತಿ, ಗೌರವವನ್ನು ಕಾಣಬಹುದು. ಒಂದೇ ಧರ್ಮದವರಾಗಿದ್ದು, ತಮ್ಮ ಪಕ್ಷಗಳ ಶ್ರೇಯಾಭಿವೃದ್ಧಿಗೋಸ್ಕರ ತಮ್ಮ ಸ್ವಂತ ಜೀವನವನ್ನು ತ್ಯಜಿಸಲು ಸಿದ್ದರಾದ ಅವರ ಅಪ್ಪಟ ದೇಶಪ್ರೇಮವನ್ನು ತಿಳಿಯಬಹುದು. ಅಂದಿನ ಸಂದರ್ಭದಲ್ಲಿ ಮುಸ್ಲಿಂರ ಮನಸ್ಥಿತಿ ಹೇಗಿತ್ತು ಎಂಬುದನ್ನು ಬಾಪಿರಾಜು ಅವರು ಹಿಡಿದಿಟ್ಟಿರುವ ವಿಚಾರಗಳನ್ನು ನಾರಾಯಣರಾವ್ ಕಾದಂಬರಿಯಲ್ಲಿ ಈ ಕೆಳಗಿನಂತೆ ಕಾಣಬಹುದು.

ಕನ್ನಡ ಭಾಷಾಂತರ

ಮಹಮ್ಮದೀಯರು ಹಿಂದೂ ದೇವಾಲಯಗಳನ್ನು ಗೌರವಿಸುತ್ತಾರೆ. ಹಿಂದೂಗಳ ಮಸೀದಿಗಳ ಬಳಿ ವಾದ್ಯಗಳನ್ನು ಬಾರಿಸುತ್ತಿಲ್ಲ. ಮಹಮ್ಮದೀಯರ ಸೋಡಾ ಅಂಗಡಿಗಳಲ್ಲಿ ಬ್ರಾಹ್ಮಣರು ಸಹ ಷರಬತ್ತುಗಳನ್ನು ಕುಡಿಯುತ್ತಾರೆ. ಬೀಡಾ ಕೊಳ್ಳುತ್ತಾರೆ. ಮಹಮ್ಮದೀಯರ ಗೋರಿಗಳಿಗೆ ಹೋಗಿ ಹಿಂದೂಗಳು ಪೂಜೆ ಮಾಡಿಸುತ್ತಾರೆ. (ಮೂಲ; ಅನುಬಂಧ-೩ ಅಧ್ಯಾಯ-೯ ಕ್ರ.ಸಂ. ೧೪)

ಹೈದರಾಬಾದಿನ ನಿಜಾಮನು ಆಳ್ವಿಕೆ ಮಾಡುತ್ತಿರುವ ಸಂದರ್ಭದಲ್ಲಿ ಹಿಂದೂ-ಮುಸ್ಲಿಂರ ಸಹೋದರತ್ವ ಮನೋಭಾವ ಹೇಗಿತ್ತು ಎಂಬುದನ್ನು ಲೇಖಕರು ಚಿತ್ರಿಸಿದ್ದಾರೆ. ಅದೇ ಕಾದಂಬರಿಯಲ್ಲಿ ನಾರಾಯಣರಾವ್, ರಾಜೇಶ್ವರರಾವು, ರಾಜಾರಾವು, ಪರಮೇಶ್ವರ ಮೂರ್ತಿ, ಆಲಂ ಎಂಬ ಮುಸ್ಲಿಂ ಯುವಕನಿಗೆ ಶಿಕ್ಷಣಕ್ಕೆ ಸಹಾಯ ಮಾಡುತ್ತಾರೆ. ಆಂಗ್ಲರು ತಮ್ಮ ಪ್ರಯೋಜನಕ್ಕಾಗಿ ಹಿಂದೂ-ಮುಸ್ಲಿಂರಲ್ಲಿ ಕಲಹ ಬೀಜ ಬಿತ್ತಲು ಪ್ರಯತ್ನಿಸುತ್ತಿದ್ದು, ಅದು ದುಷ್ಪರಿಣಾಮ ಉಂಟಾಗದ ರೀತಿಯಲ್ಲಿ ಹಿಂದೂ-ಮುಸ್ಲಿಂರಲ್ಲಿನ ಅನ್ಯೋನ್ಯತಾ ಸಂಬಂಧವನ್ನು ಗುರುತಿಸಬಹುದು.

ಹೀಗೆ ಕನ್ನಡ-ತೆಲುಗು ಕಾದಂಬರಿಗಳಲ್ಲಿ ಮುಸ್ಲಿಂ ಪ್ರತಿನಿಧಿತ್ವವನ್ನು ಗಮನಿಸಬಹುದಾಗಿದ್ದು, ಕನ್ನಡ ಕಾದಂಬರಿಗಳಲ್ಲಿ ಮುಸ್ಲಿಂ ಪಾತ್ರಗಳು ಕ್ರಾಂತಿಕಾರಕವಾಗಿ ಚಿತ್ರಿತವಾಗಿದ್ದರೆ, ತೆಲುಗು ಕಾದಂಬರಿಗಳಲ್ಲಿ ಮುಸ್ಲಿಂ ಪಾತ್ರಗಳು ಶಾಂತಿ, ಸಂಯಮತೆಯಿಂದ ಚಿತ್ರಿತಗೊಂಡಿವೆ. ಸ್ವಾತಂತ್ರ್ಯ ಚಳವಳಿ ಎಂಬುದು ಯಾವುದೇ ಒಂದು ನಿರ್ದಿಷ್ಟ ಜಾತಿ ಧರ್ಮದ ಸ್ವತ್ತು, ಜವಾಬ್ದಾರಿ ಅಲ್ಲ. ರಾಷ್ಟ್ರೀಯ ಮನೋಭಾವ, ದೇಶದ ಬಗೆಗೆ ಪ್ರೀತಿ, ಗೌರವ, ಅಭಿಮಾನವಿದ್ದ ಪ್ರತಿಯೊಬ್ಬ ಭಾರತೀಯನು ಕೂಡಾ ಜಾತಿ ಮತ ಧರ್ಮವನ್ನು ಮರೆತು ತನ್ನ ಪುಣ್ಯಭೂಮಿ ಹೋರಾಟವೆಂಬುದು ಸಾಮೂಹಿಕ ಚಳವಳಿ ದೇಶವೆಂಬುದು ಕೇವಲ ಕೆಲವೇ ಕೆಲವರ ಸ್ವತ್ತಲ್ಲ, ಕೆಲವೇ ಕೆಲವರ ಏಕಸ್ವಾಮ್ಯತೆಯೂ ಅಲ್ಲ. ಆಗಾಗ ಹಿಂದೂ-ಮುಸ್ಲಿಂರ ನಡುವೆ ಕೆಲವು ಧಾರ್ಮಿಕ ಮೂಲಭೂತವಾದಿಗಳಿಂದ ಮತ್ತು ಬ್ರಿಟಿಷರ ಒಡೆದು ಆಳುವ ನೀತಿಯ ಪರಿಣಾಮವಾಗಿ ಕೆಲವೊಂದು ಮೂಲೆಗಳಲ್ಲಿ ಗಲಭೆಗಳು ಸಂಭವಿಸಿರಬಹುದು. ಆದರೆ ಹಳ್ಳಿಗಳಲ್ಲಿ ಹಿಂದೂ ಮುಸ್ಲಿಂರಲ್ಲಿ ಬಹಳ ಅನ್ಯೋನ್ಯವಾದ ಸೌಹಾರ್ದತೆ ಇದ್ದು, ಹಿಂದೂ-ಮುಸ್ಲಿಂರಿಬ್ಬರೂ ಹೆಗಲಿಗೆ ಹೆಗಲು ಕೊಟ್ಟು ದೇಶದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ್ದಾರೆ.

❖❖❖

ಅಧ್ಯಾಯ : ಹತ್ತು

ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳ ಹಿಂದಿನ ಸೈದ್ಧಾಂತಿಕ ನೆಲೆಗಟ್ಟು

ಅಧ್ಯಾಯ: ಹತ್ತು

ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳ ಹಿಂದಿನ ಸೈದ್ಧಾಂತಿಕ ನೆಲೆಗಟ್ಟು

ಕನ್ನಡ-ತೆಲುಗು ಕಾದಂಬರಿಗಳಲ್ಲಿ ಗಾಂಧೀಜಿ ಪರ, ವಿರೋಧಿ ಮತ್ತು ತತ್ವಗಳು

ಗಾಂಧೀಜಿ ೧೯೧೫ರಲ್ಲಿ ಭಾರತಕ್ಕೆ ಮರಳಿ, ೧೯೨೦ರಲ್ಲಿ ಸ್ವಾತಂತ್ರ್ಯ ಚಳವಳಿಗೆ ಪ್ರವೇಶ ಮಾಡಿದಂದಿನಿಂದ ೧೯೪೭ರವರೆಗೆ ಭಾರತಕ್ಕೆ ಸ್ವಾತಂತ್ರ್ಯ ದೊರಕುವವರೆಗೂ ಸ್ವಾತಂತ್ರ್ಯ ಚಳವಳಿಯ ಸೇನಾಧಿಪತಿಯೆಂದರೆ ತಪ್ಪಾಗಲಾರದು. ದಕ್ಷಿಣ ಆಫ್ರಿಕದಲ್ಲಿ ಫೀನಿಕ್ಸ್, ಟಾಲ್‌ಸ್ಟಾಯ್ ಆಶ್ರಮಗಳನ್ನು ತೆರೆದು ಸತ್ಯಾಗ್ರಹಿಗಳಿಗೆ ತರಭೇತಿ, ಶಿಕ್ಷಣ ನೀಡುತ್ತಿದ್ದ ಮಾದರಿಯಲ್ಲೆ ಭಾರತದಲ್ಲೂ ಒಂದು ಆಶ್ರಮ ತೆರೆದರು. ಅಹಮದಾಬಾದಿನ ಬಳಿ ಸಬರಮತಿ ನದಿಯ ದಂಡೆಯಲ್ಲಿರುವ ಸತ್ಯಾಗ್ರಹ ಆಶ್ರಮವಾದರೂ ಸಬರಮತಿ ಆಶ್ರಮ ಎಂದೇ ಇದು ಪ್ರಸಿದ್ಧವಾಗಿದೆ.

ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿ ಗಳಿಸಿದ ಅನುಭವದ ಕೆಲವು ಲಕ್ಷಣಗಳನ್ನು ಗಮನಿಸುವುದು ಅಗತ್ಯ. ಅಲ್ಲಿಗೆ ಹೋದ ಭಾರತೀಯರೆಲ್ಲ ಅಂದರೆ ಹಣವಂತ, ವಿದ್ಯಾವಂತ, ಕೂಲಿಗಾರ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಬಿಳಿಯರ ದಬ್ಬಾಳಿಕೆ ಅನುಭವಿಸುತ್ತಿದ್ದ ಕಾರಣ ಹಣ, ಪ್ರತಿಷ್ಠೆಗಳನ್ನೆಲ್ಲ ಮೀರಿದ ಒಂದು ಒಗ್ಗಟ್ಟು ದಕ್ಷಿಣ ಆಫ್ರೀಕಾದ ಭಾರತೀಯರಲ್ಲಿ ಮೂಡಿತ್ತು. ಮತ, ಜಾತಿ, ಭೇದಗಳಿಗೂ, ಪ್ರಾಂತೀಯ ಭೇದಗಳಿಗೂ ಇದು ಅನ್ವಯವಾಗುತ್ತದೆ. ಗಾಂಧೀಜಿ ತಮ್ಮ ರಾಜಕೀಯ ಹಾಗೂ ಸಮಾಜ ಸೇವಾ ಕಾರ್ಯಗಳನ್ನು ಈ ವಾತಾವರಣದಲ್ಲಿ ಆರಂಭಿಸಿ, ಯಶಸ್ವಿಯಾದ ಕಾರಣ ಅವರಲ್ಲಿ ಮತೀಯ, ಜಾತೀಯ, ಪ್ರಾಂತೀಯ ಭೇದ ಭಾವನೆಗಳು ಅಳಿಸಿ ಹೋಗಿದ್ದವು. ಈ ಕಾರಣದಿಂದ ಅವರು ಈವರೆಗಿನ ಮುಖಂಡರಿಗಿಂತ ಅಂದರೆ ಗೋಖಲೆ-ತಿಲಕ್ ಮಹಾರಾಷ್ಟ್ರದ ಚಿತ್ಪಾವನ ಬ್ರಾಹ್ಮಣರು, ಲಾಲಾ ಲಜಪತರಾಯ್ ಇಂತಹ ಭಾವನೆಗಳನ್ನು ಹುಟ್ಟಿಸಿದಂತಹ ಅಖಿಲ ಭಾರತೀಯರ ನಾಯಕರಾಗಲು ಸಾಧ್ಯವಾಯಿತು. ಅವರ ಪ್ರಭಾವ ಮಿಲ್ ಮಾಲೀಕರು, ಜಮೀನ್ದಾರರುಗಳ ಮೇಲೆ ಆದಂತೆ ಕಾರ್ಮಿಕರು, ರೈತರು, ಗೇಣಿದಾರರು ಇಂತಹ ವಿಶಾಲವಾದ ಜನವರ್ಗಗಳ ಮೇಲೂ ಆಯಿತು.

ದಕ್ಷಿಣ ಆಫ್ರಿಕಾದ ಹೋರಾಟಗಳಲ್ಲಿ ಗಾಂಧೀಜಿ ಅನಕ್ಷರಸ್ಥ, ಅಗ್ಗ ಕೂಲಿಕಾರರಲ್ಲಿ ಸಹ ಜಾಗೃತಿ ಮೂಡಿಸಿ, ಆದರ್ಶ ಹುಟ್ಟಿಸಿ ಸೂಕ್ತ ನಾಯಕತ್ವ ಒದಗಿ ಬಂದಾಗ ಎಂತಹ ಸಾಹಸ, ನಿರ್ಭಯ, ಛಲ, ತ್ಯಾಗ ಇಂತಹ ಸದ್ಗುಣಗಳೆಲ್ಲ ಎಚ್ಚತ್ತು ನಿಲ್ಲಬಲ್ಲವು ಎಂಬುದನ್ನು ಕಂಡಿದ್ದರು. ನಿರಾಯುಧರಾಗಿ ಅವುಡು ಕಚ್ಚಿ ಹೊಡೆತ, ಒಡೆತ ತಿಂದು ಓಡಿ ಹೋಗದ ಸೋತು ಸೊರಗದ ಕೆಚ್ಚನ್ನು ಗುರುತಿಸಿದ್ದರು. ಗಾಂಧಿಯವರ ನೇತೃತ್ವದಲ್ಲಿ ನಡೆದ ಚಳವಳಿಗಳಲ್ಲಿ ಜನ ಇಂತಹದೇ ಅಸಮ ಸಾಹಸ ತೋರಿದ ಪ್ರಸಂಗಗಳು ಸಾವಿರಾರು. ಗಾಂಧೀಜಿ ಜನರಲ್ಲಿ ತೋರಿದ ವಿಶ್ವಾಸವನ್ನು, ಜನರು ಅವರ ನಾಯಕತ್ವದಲ್ಲಿಯೂ ತೋರಿದರು. ಅಹಿಂಸೆ, ಸತ್ಯ, ಸರಳ ಜೀವನ, ತ್ಯಾಗ ಇಂತಹ ಆದರ್ಶಗಳು ಭಾರತದ ಪರಂಪರೆಯಲ್ಲಿ ಮಹತ್ವದ ಸ್ಥಾನ ಪಡೆದಿವೆ. ಬಹುಮಟ್ಟಿಗೆ ನಿತ್ಯ ಜೀವನದಲ್ಲಿ ಅನುಸರಿಸುವವರು ನಮ್ಮ ಜನರು ಹೃದಯವನ್ನು ಸೂರೆಗೊಳ್ಳುತ್ತಾರೆ. ಗಾಂಧೀಜಿಯವರ ಸರಳ ಉಡುಪು, ಸರಳ ಮಾತು ಅವರನ್ನು ಜನ ತಮ್ಮವರೆಂದು ಗುರುತಿಸಲು ಅನುವಾದವು. ಅವರ ಅಭಿಪ್ರಾಯ ಒಪ್ಪದವರೂ ಅವರೆದುರು ತಲೆಬಾಗಿ ನಡೆದುಕೊಳ್ಳುತ್ತಿದ್ದುದಕ್ಕೂ ಇವು ಬಹುಮಟ್ಟಿಗೆ ಕಾರಣ.

ಜನಸಾಮಾನ್ಯರು ಗಾಂಧೀಜಿಯವರಲ್ಲಿ ಏನು ಕಂಡರು? ಅವರ ಮಾತುಗಳಲ್ಲಿ ಅವರ ಅಚಲ ವಿಶ್ವಾಸ, ಅದೇನೂ ಮೋಡಿಯಿತ್ತೋ ಹಳ್ಳಿಯ ಅನಕ್ಷರಸ್ಥ ಜನತೆಯಿಂದ ಹಿಡಿದು ಹೆಣ್ಣುಮಕ್ಕಳಾದಿಯಾಗಿ ದೇಶಕ್ಕೋಸ್ಕರ ಸರ್ವತ್ಯಾಗಕ್ಕೂ ಸಿದ್ಧರಾದರು. ಆದರೆ ಒಂದು ಮಾತನ್ನು ಖಚಿತವಾಗಿ ಹೇಳಬಹುದು. ನೊಂದಿದ್ದ ಭಾರತೀಯ ಜನಮನ ಅವರಲ್ಲಿ ಒಬ್ಬ ಅವತಾರ ಪುರುಷನನ್ನು ಕಂಡುದು ಇದಕ್ಕೆ ಮುಖ್ಯ ಕಾರಣ. ಅಧರ್ಮ ಪ್ರಬಲವಾದಾಗ ಭಗವಂತ ಅವತಾರ ಎತ್ತಿ ಧರ್ಮ ನೆಲೆಗೊಳಿಸುತ್ತಾನೆ ಎಂಬ ನಂಬಿಕೆ ಭಾರತೀಯರಲ್ಲಿ ಮುಖ್ಯವಾಗಿ ಹಿಂದುಗಳಲ್ಲಿ ಭದ್ರವಾಗಿ ಬೇರೂರಿದೆ. ಜನಸಾಮಾನ್ಯರು ಅವರನ್ನು ಅಂತಹ ಒಂದು ಅವತಾರ ಎಂದು ನಂಬಿದುದು, ಗಾಂಧಿ ಚಳವಳಿಯ ಅಪಾರ ಯಶಸ್ಸಿನ ಮುಖ್ಯ ಕಾರಣಗಳಲ್ಲಿ ಒಂದು.

ಮಹಾತ್ಮಾ ಗಾಂಧಿ ದಕ್ಷಿಣ ಆಫ್ರಿಕಾದ ಹೋರಾಟಗಳಲ್ಲಿ ಗಳಿಸಿದ ಅಮೂಲ್ಯ ಅನುಭವ ಸಂಪತ್ತಿನೊಂದಿಗೆ ಭಾರತಕ್ಕೆ ಬಂದರು. ಅವರು ಮುಂದಾಳತ್ವ ವಹಿಸಿದ ಮೊದಲ ಮೂರು ಹೋರಾಟಗಳು ವಿಶಿಷ್ಟ. ಚಂಪಾರಣ್ಯದ ನೀಲಿ ಗೇಣಿ ರೈತರ ಹೋರಾಟ, ಖೇಡಾ ಜಿಲ್ಲೆಯಲ್ಲಿ ಮಳೆಬೆಳೆಯಿಲ್ಲದೆ ಕಂಗಾಲಾದ ರೈತರ ಕರನಿರಾಕರಣ, ಅಹಮದಾಬಾದಿನ ಕಾರ್ಮಿಕರ ವೇತನ ಕಡಿತದ ವಿರುದ್ಧ ಉಪವಾಸ ಸತ್ಯಾಗ್ರಹ ಇವು ಮೂರು ಗಾಂಧೀಜಿಯವರನ್ನು ಭಾರತ ರಾಜಕೀಯ ರಂಗಕ್ಕೆ ಕರೆತಂದ ಸೂತ್ರ ನಾಂದಿಯಂತಾದವು.

ರೌಲತ್ ಕಾಯಿದೆಯನ್ನು ಎಲ್ಲ ರಾಜಕಾರಣಿಗಳೂ, ರಾಜಕೀಯ ಪಕ್ಷಗಳೂ ಖಂಡಿಸಿದ್ದವಾದರೂ ಪ್ರತಿಭಟನೆಗೆ ಒಂದು ಕಾರ್ಯಕ್ರಮ ಸಿದ್ಧಮಾಡಿಕೊಂಡು ಮುಂದಾದವರು ಗಾಂಧೀಜಿ. ಈ ಪ್ರತಿಭಟನೆಯ ಒಂದು ಮುಖ್ಯ ಘಟನೆಯಾದ ಜಲಿಯನವಾಲಾಬಾಗಿನ ಹತ್ಯಾಕಾಂಡ ರಾಷ್ಟ್ರದ

ರಾಜಕೀಯದ ಮಹತ್ತರ ತಿರುವು ಇದರಿಂದ ೧೯೧೯ರ ಸುಧಾರಣೆಗಳಿಗೆ ಕಾಂಗ್ರೆಸ್ ವಿರೋಧವಾಯಿತು. ತುರ್ಕಿಯೊಂದಿಗೆ ಬ್ರಿಟನ್ ವ್ಯವಹರಿಸಿದ್ದರ ಬಗ್ಗೆ ಭಾರತದ ಮುಸಲ್ಮಾನರಲ್ಲಿ ತೀವ್ರ ಅಸಮಾಧಾನ ಮೂಡಿತ್ತು. ಇವೆರಡೂ ಕೂಡಿ ಅಸಹಕಾರ-ಖಿಲಾಫತ್ ಚಳವಳಿ ಎದ್ದಿತು. ಹಿಂದೂ ಮುಸಲ್ಮಾನರಿಬ್ಬರೂ ಸಮಾನ ಉತ್ಸಾಹದಿಂದ ಪಾಲುಗೊಂಡ ಹೋರಾಟವಾಗಿ ಇದು ವಿಶಿಷ್ಟ. ಚೌರಿಚೌರಾದ ಹಿಂಸಾಕಾಂಡದಿಂದಾಗಿ ಗಾಂಧೀಜಿ ಚಳವಳಿಯನ್ನು ಹಿಂತೆಗೆದುಕೊಂಡರು.

ಭಾರತದ ರಾಜಕೀಯ ರಂಗದಲ್ಲಿ ಗಾಂಧಿ ಕಾಲಿಡುವ ಹೊತ್ತಿಗೆ ನಮ್ಮ ರಾಷ್ಟ್ರೀಯ ಪ್ರಜ್ಞೆ ಎತ್ತರಗೊಂಡಿತ್ತು. ಆದರೆ ಆ ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮೆಲ್ಲರ ಪಾಲೂ ಇದೆ ಎಂಬ ಸಾಮೂಹಿಕ ಪ್ರಜ್ಞೆ ಅಷ್ಟಾಗಿ ಬಂದಿರಲಿಲ್ಲ. ಗಾಂಧಿ ಬಂದ ಮೇಲೆ ಜನತೆಯಲ್ಲಿ ಒಂದು ಅದ್ಭುತವಾದ ಮಾರ್ಪಾಡು ಕಾಣಿಸಿಕೊಂಡಿತು. ಅದನ್ನು ಕುರಿತು ಜವಾಹರಲಾಲ್ ನೆಹರು ಕವಿ ಶೈಲಿಯಲ್ಲಿ ಹೇಳಿದರಂತೆ. "ಬಿರುಗಾಳಿಯಂತೆ ಬಂದ ಅವರು ನಾನಾ ವಸ್ತುಗಳನ್ನು ಪಲ್ಲಟಗೊಳಿಸಿದರು; ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಪಲ್ಲಟಗೊಳಿಸಿದ್ದು ಜನರ ಆಲೋಚನಾಧಾರೆಯನ್ನು." (ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ಪುಟ-೧೫೬, ೧೯೯೧)

ಅಹಿಂಸಾ ಮಾರ್ಗವಲ್ಲದೆ ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ಕಲ್ಪನೆಯಲ್ಲಿ ಇನ್ನೂ ಒಂದು ವಿಶೇಷವಿತ್ತು. ಅವರು ರಾಜಕೀಯ ಹೋರಾಟದೊಂದಿಗೆ ಸಮಾಜ ಸುಧಾರಣೆಯನ್ನು ಕೈಗೊಂಡರು. ಈ ಗಾಂಧಿಯೆಂಬ ಬಿರುಗಾಳಿ ಭಾರತದ ಮೂಲೆ ಮೂಲೆಗೂ ಹಬ್ಬಿತು. ದೊಡ್ಡ ದೊಡ್ಡ ಶಹರುಗಳಲ್ಲದೆ ಸಣ್ಣ ಪುಟ್ಟ ಊರುಗಳು, ಹಳ್ಳಿಗಳಲ್ಲೆಲ್ಲ ಬೀಸಿತು. ಯುವಕರು, ಹಿರಿಯರು, ಮುದುಕರು, ಕೆಲಸಗಾರರು, ದಣಿಗಳು, ಪ್ರತಿಷ್ಠಿತರು, ದೀನರು, ಮೇಲ್ಜಾತಿಯವರು, ಕೆಳಜಾತಿಯವರು ಎಲ್ಲರಿಗೂ ಸ್ವಾತಂತ್ರ್ಯ ಸಂಗ್ರಾಮದ ಕರೆ ತಟ್ಟಿತು. ಅದಕ್ಕೆ ಎಲ್ಲರೂ ಒಂದೇ ರೀತಿಯಲ್ಲಿ ಓಗೊಟ್ಟರೆಂದು ಹೇಳಲಾಗದಿದ್ದರೂ ಹಿಂದೆಂದೂ ಕಂಡಿರದಷ್ಟು ಜನ, ಊಹಿಸಲಾರದಷ್ಟು ಜನ ಈ ಕರೆಗೆ ಓಗೊಟ್ಟರು. ಅದರ ಪ್ರಭಾವಕ್ಕೆ ಒಳಗಾದರು. ಜನರ ಮನಸ್ಸುಗಳಲ್ಲಿ ಸಂಸಾರಗಳಲ್ಲಿ ರಾಜಕೀಯದಲ್ಲಿ ಬದಲಾವಣೆಗಳು ಕಾಣಿಸತೊಡಗಿದವು.

ಅವರ ದೃಷ್ಟಿಯಲ್ಲಿ ಸ್ವಾತಂತ್ರ್ಯವೆಂದರೆ ಬರಿಯ ಹೋರಾಟವಲ್ಲ; ಸಮಾಜ ಸುಧಾರಣೆ ಕೂಡ ಅದರ ಒಂದು ಭಾಗ. ಸಮಾಜ ಸುಧಾರಣೆಯಾದರೆ ಬ್ರಿಟಿಷರನ್ನು ಸುಲಭವಾಗಿ ಭಾರತದಿಂದ ಓಡಿಸಲು ಸಾಧ್ಯವೆಂಬುದಾಗಿ ಅವರು ಮನಗಂಡಿದ್ದರು. ಆದುದರಿಂದ ಸ್ವಾತಂತ್ರ್ಯದ ಅವಿಭಾಜ್ಯ ಅಂಗವಾಗಿ ಅಹಿಂಸಾ ಹೋರಾಟದ ಜೊತೆ ಜೊತೆಯಲ್ಲಿ ಸಮಾಜ ಸುಧಾರಣೆ ಸಾಗಲಾರಂಭಿಸಿತು. ಹರಿಜನೋದ್ಧಾರಣ, ಸ್ವದೇಶಿ ಉದ್ಯಮ, ವಿದೇಶಿ ವಸ್ತು ಬಹಿಷ್ಕಾರ, ಕುಟೀರ ಪರಿಶ್ರಮಗಳ ಪುನರುದ್ಧರಣ, ಗ್ರಾಮೋದ್ಧಾರ, ಪಾನ ನಿರೋಧ, ಸ್ತ್ರೀ ಸಮಾನತೆ, ಖಾದಿ ಪ್ರಸರಣ, ಗೋವಧೆ ನಿಷೇಧ, ಅಂತರ್ಜಾತಿ ವಿವಾಹಗಳು, ವಿಧವಾ ವಿವಾಹಗಳು, ಹಿಂದೂ-ಮುಸ್ಲಿಂ ಐಕ್ಯತೆ ಇವೆಲ್ಲವೂ ಗಾಂಧೀಜಿಯವರ ಕನಸುಗಳಾಗಿದ್ದವು. ಇವುಗಳನ್ನು ಸಾಧಿಸಿದರೆ ಮಾತ್ರ ಭಾರತ ಸ್ವಾತಂತ್ರ್ಯವನ್ನು

ಪಡೆದುಕೊಳ್ಳಲು ಸಾಧ್ಯವೆಂಬುದು ಅವರ ದೃಢವಾದ ನಂಬಿಕೆಯಾಗಿತ್ತು. ಅವರ ಅನುಯಾಯಿಗಳು ಅವರ ಈ ಎಲ್ಲಾ ಆದರ್ಶಗಳನ್ನು ಸಮಾಜದಲ್ಲಿ ಅಳವಡಿಸಲು ಪ್ರಾರಂಭಿಸಿದರು. ಆದರೆ ಗಾಂಧೀಜಿ ಒಬ್ಬರು ರಾಷ್ಟ್ರೀಯ ನಾಯಕರಾದರೂ ಕೂಡ, ಬಹಳಷ್ಟು ಹಳ್ಳಿಯ ಜನ ಅವರ ತತ್ವಕ್ಕೆ ಮಾರು ಹೋಗಿದ್ದರೂ ಕೂಡ ಎಲ್ಲಾ ಜನರಿಗೆ ಗಾಂಧಿಯ ತತ್ವ ಆದರ್ಶದ ಕುರಿತು ಒಪ್ಪಿಗೆ ಇರಲಿಲ್ಲ. ಗಾಂಧೀಜಿಯವರದ್ದು ಒಂದು ರೀತಿಯಲ್ಲಿ ಸರ್ವಾಧಿಕಾರಿ ಧೋರಣೆಯೆಂಬುದು ಕೆಲವರ ಅಭಿಮತ. ತಮ್ಮ ಮನಸ್ಸಿಗೆ ಬಂದುದೇ ನಡೆಯಬೇಕು. ಇಲ್ಲದಿದ್ದರೆ ಸತ್ಯಾಗ್ರಹದ ಬೆದರಿಕೆ, ಕಟ್ಟಾ ಸಂಪ್ರದಾಯಸ್ಥರು ಕೂಡ ಗಾಂಧಿಯ ಆದರ್ಶ ಹಾಗೂ ಸಾಮಾಜಿಕ ಸಮಾನತೆಯನ್ನು ವಿರೋಧಿಸುತ್ತಿದ್ದರು. ಅಹಿಂಸೆಯ ಹೋರಾಟದಲ್ಲಿ ನಂಬಿಕೆಯಿಲ್ಲದ ಬಹಳಷ್ಟು ಮಂದಿ ಸಶಸ್ತ್ರ ಹೋರಾಟದಲ್ಲಿ ನಂಬಿಕೆಯಿಟ್ಟಂತಹ ಜನರು ಕೂಡಾ ಗಾಂಧೀಜಿಯ ತತ್ವಗಳನ್ನು ಒಪ್ಪುತ್ತಿರಲಿಲ್ಲ. ಹೀಗೆ ಕೆಲವೊಂದು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಹಾಗೂ ಇನ್ನು ಕೆಲವೊಮ್ಮೆ ಸಾಮಾಜಿಕ ಸ್ತರದಲ್ಲಿ ಭಿನ್ನಾಭಿಪ್ರಾಯಗಳು ಕಂಡುಬರುತ್ತಿದ್ದವು. ಆದರೆ ಕೆಲವರ ಪಾಲಿಗಂತೂ ಗಾಂಧೀಜಿ ಶ್ರೀಕೃಷ್ಣನ ಅವತಾರವಾಗಿದ್ದರು. ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಡಲೆಂದೇ ಜನ್ಮ ತಾಳಿದ ಮಹಾತ್ಮ ಗಾಂಧೀಜಿಯ ಆದರ್ಶವನ್ನು ಅಕ್ಷರಶಃ ಪಾಲಿಸುತ್ತಿದ್ದರು. ಗಾಂಧಿ ಯಾವ ನಿರ್ಧಾರ ಕೈಗೊಂಡರೂ ಸರಿಯೇ ಅವರು ದೇಶದ ಒಳಿತನ್ನು ದೃಷ್ಟಿಯಲ್ಲಿಟ್ಟುಕೊಂಡೇ ಕೈಗೊಳ್ಳುತ್ತಾರೆಂಬುದು ಗಾಂಧೀವಾದಿಗಳ ಅಚಲವಾದ ನಂಬಿಕೆ. ಈ ಕಾರಣಗಳಿಂದ ಅವರು ಗಾಂಧೀಜಿಯ ತತ್ವಗಳನ್ನು ಅಕ್ಷರಶಃ ಪಾಲಿಸುತ್ತಿದ್ದರು.

ತ.ರಾ.ಸು. ಅವರ ರಕ್ತತರ್ಪಣ ಕಾದಂಬರಿಯಲ್ಲಿ ಮನೆಯ ಹೊರಗಡೆಯ ವಿಚಾರ ಏನೂ ತಿಳಿಯದ ಗೌರಜ್ಜಿ ಬಿಳಿಮೋರೆಯ ಪಿಶಾಚಿಗಳನ್ನು ಶಪಿಸುತ್ತಾ, ಗಾಂಧೀಜಿಯವರ ಬಗ್ಗೆ ಅಪಾರವಾದ ಗೌರವ, ಅಭಿಮಾನವನ್ನು ಹೊಂದಿರುತ್ತಾಳೆ. "ಗಾಂಧೀಜಿಗೆ ಬಿಡುಗಡೆಯಾದರೆ ಸತ್ಯನಾರಾಯಣ ವ್ರತ ಮಾಡಿಸುತ್ತೇನಂತ ಹರಕೆ ಹೊತ್ತುಕೊಳ್ಳುತ್ತಾಳೆ." (ರಕ್ತತರ್ಪಣ, ಪುಟ–೨೧, ೧೯೪೬). ಗಾಂಧೀಜಿಯ ಹೆಸರನ್ನು ಕೇಳದ ಹಳ್ಳಿಯ ಜನರಿರಲಿಲ್ಲ. ಅವರೆಲ್ಲರಿಗೂ ಗಾಂಧೀಜಿಯವರ ಬಗ್ಗೆ ಗೌರವವಿತ್ತು. ಗಾಂಧೀಜಿಯವರಿಂದ ತಮ್ಮ ಗಂಡಂದಿರು ಕುಡಿತ ಬಿಟ್ಟರೆ ಚೆನ್ನಾಗಿರುತ್ತಿತ್ತು ಎಂಬ ಅಭಿಪ್ರಾಯ ಹಳ್ಳಿಯ ಹೆಣ್ಣುಮಕ್ಕಳಲ್ಲಿತ್ತು. ಅವರಿಗೆ ಗಾಂಧೀಜಿಯನ್ನು ನೋಡುವುದೇ ಮಹಾಭಾಗ್ಯವೆಂಬ ಭಾವನೆ ಮನೆ ಮಾಡಿತ್ತು. ಗಾಂಧೀಜಿ ಉಪವಾಸ ಕೈಗೊಂಡರೆ ತಾವೂ ಅನ್ನ ನೀರು ಬಿಡುವ ಜನರು ಹಳ್ಳಿಯಲ್ಲಿದ್ದರು. ಮುಗ್ಧ ಜನರಿಗೆ ಗಾಂಧಿಯೆಂದರೆ ದೇವರು, ಅವರು ಮಾಡುವ ಪ್ರತಿಯೊಂದು ಕೆಲಸವೂ ಯಾವುದೋ ಒಂದು ಘನ ಉದ್ದೇಶದಿಂದ ಕೂಡಿದೆ ಎಂಬುದನ್ನು ಅವರು ದೃಢವಾಗಿ ನಂಬಿದ್ದರು. ಅದರಿಂದಾಗಿ ಭಾರತ ದೇಶದ ಚಳವಳಿಯಲ್ಲಿ ಸ್ತ್ರೀ ಪಾಲ್ಗೊಳ್ಳುವಿಕೆ ಹೆಚ್ಚಾಯಿತು.

ನಮ್ಮ ದೇಶದ ಸಾಮಾನ್ಯ ಜನರು ಅನೇಕ ರೀತಿಯ ಸಮಸ್ಯೆ, ಸಂಕೋಲೆಗಳಿಗೆ ಸಿಲುಕಿ ಸಂಕಷ್ಟಗಳನ್ನು ಅನುಭವಿಸಿ ಕುಟುಂಬವನ್ನು ನಿರ್ವಹಿಸದೆ ತೊಳಲಾಡುತ್ತಿರುವುದನ್ನು ಗ್ರಹಿಸಿದ

ಗಾಂಧೀಜಿ ಆರ್ಥಿಕ ಪರಿಸ್ಥಿತಿ ಸುಧಾರಿಸಿ, ಅನ್ನ, ವಸತಿ, ವಸ್ತ್ರಗಳಿಗೆ ಚಿಂತೆ ಮಾಡಬಾರದೆಂಬ ಬಯಕೆ ಗಾಂಧೀಜಿಯವರದಾಗಿತ್ತು. ಸಾಮಾನ್ಯನ ಜೀವನ ಸುಧಾರಿಸಬೇಕಾದರೆ ಅವನು ಸ್ವಾವಲಂಬಿಯಾಗಬೇಕು ಖಾದಿ ಉತ್ಪತ್ತಿ, ಪ್ರಸರಣ ಅವನ ಒಂದು ಸಮಸ್ಯೆಯನ್ನಾದರೂ ನೀಗಿಸುತ್ತದೆ. ಹೀಗೆ ಗಾಂಧೀಜಿಯು ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಬಡಜನತೆಯು ಪರಾವಲಂಬಿಗಳಾಗದೆ ಸ್ವಾವಲಂಬನೆಯ ಜೀವನ ನಡೆಸಬೇಕು ಎಂಬುದನ್ನು ಬಯಸಿದ್ದರು. ಹಳ್ಳಿಯ ರೈತರಿಗೆ ಕೂಡಾ ಗಾಂಧೀಜಿ ಚಿರಪರಿಚಿತರಾಗಿದ್ದರು ಎಂಬುದಕ್ಕೆ ಬಸವರಾಜ ಕಟ್ಟೀಮನಿ ಅವರ ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಹಳ್ಳಿಗಳಲ್ಲಿ ಗಾಂಧಿ ಕುರಿತ ಲಾವಣಿ ಪದಗಳನ್ನು ಗಮನಿಸಬಹುದು.

ಎಂಥಾ ಶಾಣ್ಯಾ ಮಹಾತ್ಮಾಗಾಂಧಿ
ಹಿಂದೂಸ್ಥಾನಕ ಅವನೇ ತಂದಿ
ಖಾದಿಯ ಉಡಿರೆಂದ ಖಾದಿಯ ತೊಡಿರೆಂದ
ಕಾಯ್ದೆ ಭಂಗವ ಮಾಡಿರೆಂದ
ಕೂಡಿಸ್ಯಾನ ವಾನರ ದಂಡ

ಇಂತಹ ಲಾವಣಿಗಳು ಬೆಳಗಾವಿ ಪ್ರಾಂತ್ಯದ ಹಳ್ಳಿ ಹಳ್ಳಿಗಳಲ್ಲಿ ಬಹಳಷ್ಟು ಜನಪ್ರಿಯವಾಗಿದ್ದವು. ಇಡೀ ನಮ್ಮ ಹಿಂದೂಸ್ಥಾನಕ್ಕೆ ಗಾಂಧೀಜಿಯೇ ತಂದೆ ಎಂದು ಹಳ್ಳಿಯ ಜನರು ಒಪ್ಪಿಕೊಂಡಿದ್ದರು. ವಿಚಾರವಾದಿ ವಿದ್ಯಾವಂತರಿಗಿಂತ ಹೆಚ್ಚಾಗಿ ಹಳ್ಳಿಯ ಜನರಿಗೆ ಗಾಂಧಿಯ ಬಗ್ಗೆ ಪ್ರೀತಿ ವಿಶ್ವಾಸವಿರುವುದನ್ನು ಕಾಣಬಹುದಾಗಿದೆ. ಗಾಂಧಿ ತೆಗೆದುಕೊಳ್ಳುವ ಪ್ರತಿಯೊಂದು ತೀರ್ಮಾನದ ಹಿಂದೆ ಹಿಂದೂಸ್ತಾನದ ಹಿತ ಅಡಗಿದೆಯೆಂಬುದು ಅವರ ಅಚಲವಾದ ನಂಬಿಕೆ. ನಮ್ಮ ಸೃಜನಶೀಲ ಸಾಹಿತಿಗಳು ಗಾಂಧಿಯ ಕುರಿತು ಸ್ವಾತಂತ್ರ್ಯ ಚಳವಳಿಯ ಕುರಿತು ಕವನಗಳನ್ನು ರಚಿಸುವ ಮೊದಲೇ ಅನಕ್ಷರಸ್ಥ ಹಳ್ಳಿಯ ಜನರು ಅವರ ಕುರಿತಾಗಿ ಲಾವಣಿಗಳನ್ನು ರಚಿಸಿ ಅವರನ್ನು ಇನ್ನಷ್ಟು ಜನಪ್ರಿಯಗೊಳಿಸಿದ್ದರು.

ಗಾಂಧೀಜಿ ಎಂದರೆ ಯುವಕ, ಹುಡುಗ, ಸ್ತ್ರೀಯರಿಗೆ ಎಲ್ಲಿಲ್ಲದ ಗೌರವ, ಅಭಿಮಾನವನ್ನು ಇಟ್ಟುಕೊಂಡಿರುತ್ತಾರೆ. ಅದರಂತೆ ಮುದುಕರು ಸಹ ಗಾಂಧೀಜಿಯವರ ಬಗ್ಗೆ ಅಪಾರವಾದ ಪ್ರೀತಿ, ವಿಶ್ವಾಸ, ಭಯ, ಭಕ್ತಿಯನ್ನು ಹೊಂದಿದ್ದರು ಎಂಬುದಕ್ಕೆ ಮಾಡಿಮಡಿದವರು ಕಾದಂಬರಿಯಲ್ಲಿ ಮುದುಕ ಬಾಳಪ್ಪನು ಗಾಂಧೀಜಿಯವರನ್ನು ಬ್ರಿಟಿಷ್ ಸರ್ಕಾರ ಬಂಧಿಸಿ ಎಲ್ಲಿಟ್ಟಿದ್ದಾರೆಂದು ತಿಳಿದುಕೊಳ್ಳುವಲ್ಲಿನ ಕುತೂಹಲ, ಆತುರತೆ, ತಮ್ಮ ಮೇಲೆಲ್ಲ ದರ್ಪವಾದ ಅಧಿಕಾರ ನಡೆಸಿ ಪೀಡಿಸುತ್ತಿದ್ದ ಆ ಕೆಂಪು ಮೋರೆಯ ಸರಕಾರದ ವಿರುದ್ಧ ಚಳವಳಿ ಹೂಡಿದ್ದ ಗಾಂಧಿ ಆತನ ಅಭಿಮಾನದ ವ್ಯಕ್ತಿಯಾಗಿದ್ದ ಸಂಗೊಳ್ಳಿ ರಾಯಣ್ಣನೆ ಗಾಂಧಿಯ ರೂಪದಲ್ಲಿ ಮತ್ತೆ ಹುಟ್ಟಿ ಬಂದಿರುವನೆಂದು ಆತ ತಿಳಿದುಕೊಂಡಿದ್ದ. ತನ್ನ ವೈರಿಗಳಾದ ಇಂಗ್ಲೀಷರನ್ನು ದೇಶದಿಂದ ಹೊರಗೆ ಅಟ್ಟುವುದಕ್ಕಾಗಿ ಅವ್ವ ಚೆನ್ನವ್ವನೇ ಗಾಂಧಿಯನ್ನು ಹರಸಿ ಕಳುಹಿಸಿರುವಳೆಂದು ನಂಬಿಕೊಂಡಿದ್ದನು.

ಹರಿಜನ ಯಾತ್ರೆಯ ಕಾಲಕ್ಕೆ ಗಾಂಧೀಜಿ ಬೆಳಗಾವಿಗೆ ಬಂದಿದ್ದಾಗ ಕಲ್ಲಾಪುರದಿಂದ ಅಲ್ಲಿಯವರೆಗೂ ಹೋಗಿ ಅವರನ್ನು ಕಣ್ಣುತುಂಬ ನೋಡಿ ಬಂದಿದ್ದರು. ಉಡಲು ಬಟ್ಟೆಗಳಿಲ್ಲದೆ ನಗ್ನವಾಗಿರುವ ಬಡವರನ್ನು ಕಂಡು ಕರುಳು ಕುದಿದು ಅವರು ಅಂಗಿ ತೊಟ್ಟುಕೊಳ್ಳುವುದನ್ನು ಬಿಟ್ಟರೆಂಬ ವಿಚಾರ ತಿಳಿದಾಗ ಗಾಂಧೀಜಿ ಬಗೆಗೆ ಆತನಲ್ಲಿ ಆದರವಿನ್ನೂ ಹೆಚ್ಚಾಗಿದ್ದಿತು. ಅವರು ಉಪವಾಸ ಮಾಡುವ ಸುದ್ದಿ ತಿಳಿದಾಗಲೆಲ್ಲ ಅನ್ನ ನೀರು ಬಿಟ್ಟು ಅವರಿಗೆ ದೀರ್ಘಾಯುಷ್ಯ ದೊರೆಯಲೆಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದ ಅವರು ಸೆರೆಮನೆಗೆ ಹೋದುದು ಗೊತ್ತಾದಾಗ ದಿನವೂ ಬಸವಣ್ಣನ ಗುಡಿಗೆ ಹೋಗಿ ಕೈ ಮುಗಿದು "ನಮ್ಮಪ್ಪ ಗಾಂಧೆಪ್ಪನ್ನ ನೆಟ್ಟಗೆ ಇಡು, ದೇವರೇ!" ಎಂದು ಬೇಡಿಕೊಳ್ಳುತ್ತಿದ್ದನು. "ಗಾಂಧಿ ಮಾರಾಜನ್ನ ಎಲ್ಲಿಟ್ಟಾರಂತಪ್ಪಾ ಶೇಖರಣ್ಣ" ಎಂದು ಕಲ್ಲಾಪುರದ ಜನರಿಗೆಲ್ಲ ಹಿರಿಯನಾದ (ಮಾಡಿಮಡಿದವರು, ಪುಟ ೪೫, ೪೬, ೧೪೪೮) ಮುದುಕ ವಿದೇಶಿಯ ಆಡಳಿತದ ವಿರುದ್ದ ಬಂಡೆದ್ದ ಹಳ್ಳಿಗರ ಪ್ರತೀಕದಂತೆ ಚಿತ್ರಿತಗೊಂಡಿದ್ದನ್ನು ಕಾಣಬಹುದಾಗಿದೆ. ಹೀಗೆ ಅನೇಕ ಮುದುಕ ಬಾಳಪ್ಪನಂತವರು ಎಲೆಮರಿಯ ಕಾಯಿಯಂತೆ ಗಾಂಧೀಜಿಯವರನ್ನು ಆರಾಧಿಸುತ್ತಿದ್ದರು. ಹಳ್ಳಿಯಿಂದ-ದಿಲ್ಲಿಯವರೆಗೆ ಕಿರಿಯವನಿಂದ-ಹಿರಿಯರವರೆಗೆ ಗಾಂಧೀಜಿ ಚಿರಪರಿಚಿತರಾಗಿರುವುದನ್ನು ಇಲ್ಲಿ ತಿಳಿಯಬಹುದಾಗಿದೆ. ಅದೇ ರೀತಿಯಾಗಿ ತೆಲುಗು ಕಾದಂಬರಿಗಳಲ್ಲಿ ಗಾಂಧೀಜಿ ಪರವಾದ ವಿಚಾರಗಳನ್ನು ಕಾಣಬಹುದು.

ನಾರಾಯಣರಾವ್ ಕಾದಂಬರಿಯಲ್ಲಿ ಪರಮೇಶ್ವರ ಎಂಬ ಯುವಕ ಗಾಂಧೀಜಿಯವರನ್ನು ಕುರಿತು ಬರೆದ ಪದ್ಯ ಹೀಗಿದೆ.

ಕನ್ನಡ ಭಾಷಾಂತರ

ಓಹೋ ತಾತಾ ನಿನ್ನದು ಯಾವೂರು
ನೀನೆಲ್ಲಿ ಹೋಗುತ್ತೀಯಾ
ಊರು ಇಲ್ಲ ಮನೆಯು ಇಲ್ಲ
ದೇಶವೆಲ್ಲ ನಿನ್ನದೇ ಊರು
ಊರ ಹೊರಗೆ ದೇವಸ್ಥಾನದಲ್ಲಿ
ಉಟ್ಟ ಬಟ್ಟೆಯಲ್ಲೆ ಮಲಗುತ್ತೀಯಾ
ಕುಟೀರದಂತಹ ಮನೆಯ ಕಟ್ಟುತ್ತೀಯಾ
ಮಕ್ಕಳು ಮರಿಗಳೊಂದಿಗೆ ನಡೆಯುತ್ತಿದ್ದರೆ
ರಾಷ್ಟ್ರವೇ ಚಿಕ್ಕದೆನಿಸುತ್ತದೆ
ಅನ್ನ ನೀಡುವ ತಾಯಿ ಇದ್ದರೆ
ಬಾಡಿ ಹೋಗದ ಹೂವಿನ ಬದುಕು
ಏಕಾಏಕಿ ಬೈರಾಗಿ ಆಗುತ್ತೀಯಾ

ಅಂಗೈ ನೋಡಿ ಶಾಸ್ತ್ರ ಹೇಳುತ್ತೀಯಾ
ತಾತಾ ನಿನ್ನದು ಯಾವೂರು
ನೀ ಎಲ್ಲಿಗೆ ಹೋಗುತ್ತೀಯಾ
(ಮೂಲ; ಅನುಬಂಧ-೩ ಅಧ್ಯಾಯ-೧೦ ಕ್ರಸಂ. ೧)

ಗಾಂಧೀಜಿ ಇಡೀ ದೇಶವನ್ನು ಒಂದು ಕುಟುಂಬ ಎಂಬಂತೆ ಭಾವಿಸಿಕೊಂಡಿದ್ದರು. ಎಲ್ಲಾ ಜನಗಳು ತನ್ನವರೆಂದು ನಂಬಿ ಹಗಲು ರಾತ್ರಿ ಎನ್ನದೆ ಜನರನ್ನು ದೇಶದ ಹೋರಾಟಕ್ಕಾಗಿ ಪ್ರೇರೇಪಿಸುತ್ತಿದ್ದರು. ಇಲ್ಲಿ ಗಾಂಧೀಜಿ ಓದುಬಾರದ ಯುವಕ, ಮುದುಕರಿಗಷ್ಟೇ ಅಲ್ಲದೆ ಅಕ್ಷರಸ್ಥ ಯುವಕರಿಗೂ ಸಹ ಅಚ್ಚುಮೆಚ್ಚಿನವರಾಗಿದ್ದರು. ದೇಶವನ್ನು ಕಾಯುವ ಜಗದ್ರಕ್ಷಕನಾಗಿ, ಭವಿಷ್ಯ ನುಡಿಯುವ ಜ್ಯೋತಿಷಿಯಾಗಿ ಚಿತ್ರಿತವಾಗಿದ್ದಾರೆ. ಅದೇ ಕಾದಂಬರಿಯಲ್ಲಿ ಅನಿವಾಸಿ ಭಾರತೀಯರಾದ ರೊನಾಲ್ಡ್‌ಸನ್, ಆತನ ಸತಿ, ಮಗಳು ಲಿಯೋನಾರಾ ಗಾಂಧೀಜಿಯವರನ್ನು ಕ್ರೈಸ್ತನ ಅವತಾರ ಮೂರ್ತಿ ಎಂದು ಕೊಂಡಾಡುತ್ತಾರೆ. ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ಸ್ವರಾಜ್ಯಗಳ ತಂದೆ ಅಬ್ಬಾಯಿ ನಾಯುಡು ಕಾಂಗ್ರೆಸ್, ಗಾಂಧೀಜಿ ಎಂದರೆ ಬಹಳ ಅಭಿಮಾನವನ್ನು ಇಟ್ಟುಕೊಂಡಿರುತ್ತಾನೆ. ಊರಿನಲ್ಲಿ ಸಾರ್ವಜನಿಕವಾಗಿ ಸಭೆ ನಡೆಸಕೂಡದೆಂದು ಸರ್ಕಾರ ಆದೇಶವಿತ್ತಾಗ ನಾಯುಡು ತನ್ನ ಮನೆಯಲ್ಲೇ ಸಭೆ ಕೂಟ ಏರ್ಪಡಿಸುತ್ತಾನೆ. ಗಾಂಧೀಜಿ ಅಸಹಕಾರ ಚಳವಳಿಗೆ ಕರೆ ಇತ್ತಾಗ ಮಗಳು ಸ್ವರಾಜ್ಯಳನ್ನು ಶಾಲೆಯಿಂದ ಬಿಡಿಸುತ್ತಾನೆ. ಹೀಗೆ ನಾಯುಡು ಗಾಂಧೀಜಿಯ ಅಭಿಮಾನಿಯಾಗಿ ಗಾಂಧೀವಾದಿಯಾಗಿ ಸುತ್ತಮುತ್ತಲ ಹಳ್ಳಿಗಳಿಗೆ ಪ್ರಸಿದ್ಧಿಯಾಗಿರುತ್ತಾನೆ.

ಅದೇ ಕಾದಂಬರಿಯಲ್ಲಿ ಸುಬ್ಬಾವದಾನ್ಲು ಎಂಬ ವ್ಯಕ್ತಿ ಗಾಂಧೀಜಿಯವರನ್ನು ವಿಷ್ಣು ಸ್ವರೂಪದವನು ಎಂದು ಬಿಂಬಿಸುತ್ತಾನೆ. ಅಂದಿನ ಕಾಲದಲ್ಲಿ ಗಾಂಧೀಜಿಯವರ ಸತ್ಯ, ಅಹಿಂಸೆಯ ಹೋರಾಟಕ್ಕೆ ಹಳ್ಳಿಗಳಲ್ಲಿ ಅಷ್ಟೊಂದು ಬೆಂಬಲ ಸಿಗುವುದಕ್ಕೆ ಕಾರಣ ಹಳ್ಳಿಯ ಜನರ ಧರ್ಮಬೀರು ಮನೋಭಾವ, ಹಳ್ಳಿಯ ಜನರಿಗೆ ಗಾಂಧೀಜಿ ನಮ್ಮ ದೇಶವನ್ನು ಬ್ರಿಟಿಷರ ಕೈಯಿಂದ ರಕ್ಷಿಸಲು ಬಂದಂತಹ ಅವತಾರ ಪುರುಷನೆಂದೇ ಭಾವಿಸಿದ್ದರು. 'ಸತ್ಯಮೇವ ಜಯತೆ' ಎಂಬುದು ನಮ್ಮ ಸಂಸ್ಕೃತಿಯಾದ ಕಾರಣ ದುಷ್ಟರಾದ ಬ್ರಿಟಿಷರ ವಿರುದ್ಧ ನಮ್ಮ ನ್ಯಾಯಬದ್ಧವಾದ ಹೋರಾಟಕ್ಕೆ ಖಂಡಿತವಾಗಿಯೂ ಜಯ ಸಿಕ್ಕೇ ಸಿಗುತ್ತದೆಂಬುದು ಜನರ ನಂಬಿಕೆಯಾಗಿತ್ತು. ಹಳ್ಳಿಯ ಮುಗ್ಧ ಜನರು ಪಟ್ಟಣದ ವಿದ್ಯಾವಂತ ಜನರಂತೆ ಗಾಂಧಿಯ ವಿಚಾರಗಳನ್ನು ವಿಮರ್ಶೆ ಮಾಡಲು ಹೋಗುವುದಿಲ್ಲ. ಅವರು ಒಬ್ಬ ವ್ಯಕ್ತಿಯನ್ನು ನಂಬಿದರೆಂದರೆ ಅವರಿಗಾಗಿ ಯಾವ ತ್ಯಾಗಕ್ಕಾದರೂ ಸಿದ್ದರಾಗಿರುತ್ತಿದ್ದರು. ಅಂತಹ ವಿಶ್ವಾಸ ನಂಬಿಕೆಯನ್ನು ಹಳ್ಳಿಯ ಜನರು ಗಾಂಧೀಜಿಯವರಲ್ಲಿ ಇಟ್ಟಿದ್ದರು. ಅದಕ್ಕೋಸ್ಕರವೇ ಗಾಂಧೀಜಿಯ ಕರೆಗೆ ಅವರು ಆ ಮಟ್ಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಸಂಪ್ರದಾಯಸ್ಥ ಮೇಲ್ಜಾತಿಯವರು ಗಾಂಧಿಯ ತತ್ವಗಳನ್ನು ವಿರೋಧಿಸುತ್ತಿದ್ದರು. ಗಾಂಧಿಯೊಬ್ಬ ತಮ್ಮ ಧರ್ಮ ಸಂಸ್ಕೃತಿಯನ್ನು ಹಾಳು ಮಾಡಲು ಬಂದವನು ಎಂಬ ಭಾವನೆ ಹೊಂದಿದ್ದರು.

೧೯೨೦ರ ನಂತರ ಸಮಾಜದಲ್ಲಿ ಒಂದು ಬಗೆಯ ಹೊಸ ಗಾಳಿ ಬೀಸಲಾರಂಭಿಸುತ್ತದೆ. ಈ ಮೊದಲು ಹಲವಾರು ಸಾಮಾಜಿಕ ಸುಧಾರಣೆಗಳಾದರೂ ಕೂಡಾ ಜನರು ಈ ಮಟ್ಟದಲ್ಲಿ ಪ್ರಭಾವಕ್ಕೆ ಒಳಗಾಗಲಿಲ್ಲ. ಆದರೆ ಗಾಂಧೀಜಿಯವರ ಧೋರಣೆಗಳನ್ನು ಬಹುತೇಕ ಕಿರಿಯ ತಲೆಮಾರಿನವರು ಒಪ್ಪುತ್ತಿದ್ದರು. ಹಳೆಯ ತಲೆಮಾರಿಗೆ ಇದನ್ನು ಅರಗಿಸಿಕೊಳ್ಳಲು ಕಷ್ಟವಾಗುತ್ತಿತ್ತು. ತಮ್ಮ ಜಾತಿ, ತಮ್ಮ ಸಂಸ್ಕೃತಿಯೇ ಶ್ರೇಷ್ಠ ಎಂಬುದಾಗಿ ಭಾವಿಸಿದವರಿಗೆ ಗಾಂಧೀವಾದವು ಒಂದು ಬಗೆಯ ಅಭದ್ರತೆಯನ್ನುಂಟು ಮಾಡುತ್ತದೆ. ಇದಕ್ಕೆ ತಮ್ಮ ಕೌಟುಂಬಿಕ ವಲಯದಲ್ಲಿ ತಮ್ಮದೇ ಆದ ನೆಲೆಯಲ್ಲಿ ಅವರು ಪ್ರತಿಭಟಿಸುತ್ತಾರೆ.

ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ರಾಧಾಕೃಷ್ಣ ಗಾಂಧೀಜಿಯವರ ಕಟ್ಟಾ ಅನುಯಾಯಿಯಾಗಿದ್ದು, ಗಾಂಧೀಜಿಯವರ ಸ್ವರಾಜ್ಯ, ಗ್ರಾಮೋದ್ಧಾರದಂತಹ ಕಾಳಜಿಗಳ ಬಗ್ಗೆ ಆಸಕ್ತಿ ವಹಿಸಿದಾಗ ರಾಧಾಕೃಷ್ಣನ ತಂದೆ "ಈ ಗಾಂಧೀಮಂದಿಯ ಪಿತೂರಿ ಕೇಳಿ ಬೆಪ್ಪಾಗಿ ಕಾಲೇಜು ಬಿಟ್ಟು ಸ್ವರಾಜ್ಯ ತರುತ್ತಾನಂತೆ ಇವೆಲ್ಲಾ ಸೇರಿಕೊಂಡು ಎನ್ನುತ್ತಾನೆ" (ಔದಾರ್ಯದ ಉರುಳಲ್ಲಿ, ಪುಟ-೪, ೧೯೪೭). ಇಲ್ಲಿ ಗಾಂಧಿ ಮತ್ತು ಆತನ ಅನುಯಾಯಿಗಳೇ ನೀಡುವ ವಿಚಾರಗಳು ಬರೀ ಪೊಳ್ಳು. ಇವರಿಂದ ದೇಶಕ್ಕೆ ಸ್ವಾತಂತ್ರ್ಯ ಸಿಗುವುದು ಗ್ಯಾರಂಟಿಯೇ ಇಲ್ಲ ಎಂಬಂತಹ ಅಣಕ ನುಡಿಗಳನ್ನು ಗಮನಿಸಬಹುದು. ಅದೇ ಕಾದಂಬರಿಯಲ್ಲಿ ರಾಧಾಕೃಷ್ಣನ ತಂದೆ ಮತ್ತು ಅವರ ಮಾವ ಸಂಕಪ್ಪಯ್ಯ ಮದುವೆ ವಿಚಾರ ಕುರಿತು ಮಾತನಾಡುವಾಗಿನ ಸಂಭಾಷಣೆ ಹೀಗಿದೆ. "ನಮ್ಮ ಹುಡುಗ ಶಾಲೆ ಬಿಟ್ಟಿದ್ದಾನೆ. ಅವನು ಮುಂದೆ ವಿದ್ಯೆ ಮುಂದುವರಿಸುವುದಾದರೆ ಹೆಣ್ಣು ಕೊಟ್ಟದ್ದೊಂದು ಸಾರ್ಥಕ. ಬದಲು ಅವನು ಉಂಡಾಡಿಯಂತೆ ಗಾಂಧಿ ಲೆಕ್ಚರು ಕೊಟ್ಟು ಜೈಲಿಗೆ ಹೋಗುವ ಗತಿ ಬಂದರೆ" ಎನ್ನುತ್ತಾನೆ. ಅವನ ಖರ್ಚಿನ ವಿಷಯ ಮಾತನಾಡುವಾಗ ಅವನ ಮಾವ "ಅವನು ಗಾಂಧಿ ಕೆಲಸ ಮಾಡುವುದಾದರೆ ಅದೇ ಗಾಂಧಿ ಅವನಿಗೆ ಸಂಬಳ ಕೊಡಲಿ" ಎಂದಾಗ ಅವನ ತಂದೆ "ಹಾ! ಗಾಂಧಿ ಸಂಬಳ ಕೊಡುವವನೇ? ಇವರಿಂದಲೇ ಫಂಡು ಕೂಡಿಸಿ ಅವನು ತರಿಸಿಕೊಳ್ಳುವಾಗ! ನನಗೆ ಯಾವುದೂ ತಿಳಿಯುವುದಿಲ್ಲ. ಇವರ ಸ್ವರಾಜ್ಯವೂ ಆಯಿತು ಇವನೂ ಆಯಿತು. ನಮ್ಮ ಕಾಲ ಹೀಗೆಯೇ ಹೋದರೆ ಸಾಕು, ಆ ಸ್ವರಾಜ್ಯವೊಂದು ಇಲ್ಲದೆ ನಮಗೇನು ಕಡಿಮೆಯಾಗಿದೆಯೆಂದು ಬೇಡವೆ? ಇಷ್ಟೆಲ್ಲ ಸರ್ಕಾರದ ಬಿಗು ಇರುವಾಗಲೇ ಒಬ್ಬರಿಗೆ ಇನ್ನೊಬ್ಬರನ್ನು ನೋಡಿದರೆ ಆಗುವುದಿಲ್ಲ. ಇನ್ನು ಸ್ವರಾಜ್ಯ ಬಂದರೆ ಒಬ್ಬರು ಇನ್ನೊಬ್ಬರನ್ನು ಹಿಡಿದು ನುಂಗಿಯೇ ಬಿಡುತ್ತಾರೆ." (ಔದಾರ್ಯದ ಉರುಳಲ್ಲಿ, ಪುಟ-೫, ೧೯೪೭)

ಬ್ರಿಟಿಷ್ ಭಾರತದಲ್ಲಿ ಗಾಂಧೀಜಿ ಸ್ವರಾಜ್ಯಕ್ಕಾಗಿ ಹೋರಾಟ ನಡೆಸುತ್ತಿರುವ ಚಾಣಾಕ್ಷ ವ್ಯಕ್ತಿಯಾಗಿ ಕಂಡುಬಂದರೂ ಮತ್ತು ಹಳ್ಳಿಗಳಲ್ಲಿ ಜನರಿಗೆ ದೇವಸ್ವರೂಪಿಯಾಗಿ ಚಿತ್ರಿತವಾಗಿದ್ದರೂ ಸಹ ಕುಟುಂಬಗಳ ವಿಚಾರವಾಗಿ ಬಂದಾಗ ಗಾಂಧೀಜಿ ತಿರಸ್ಕಾರದ ನಾಯಕರಾಗಿರುವುದು ಇಲ್ಲಿ ಕಂಡುಬರುತ್ತದೆ.

ಅದೇ ಕಾದಂಬರಿಯಲ್ಲಿ ಪುರುಷೋತ್ತಮರಾಯರು ಎಂಬ ವ್ಯಕ್ತಿ ರಾಧಾಕೃಷ್ಣನೊಡನೆ ಕೂಡಿ ಕೆಲಸ ಮಾಡುವ ಸಂದರ್ಭ ಎದುರಾದಾಗ, ಕಲೆಕ್ಟರ್‌ನಾಗಿದ್ದಾಗ ರಾಧಾಕೃಷ್ಣನನ್ನು ನೋಡಿ ಆತ ರಾಜದ್ರೋಹಿ, ಇನ್ನೂ ಖಾದಿ ಧರಿಸುತ್ತಾನೆ. "ಇಂಥ ಗಾಂಧೀ ನಾಯಿಗಳನ್ನು ಉಸಿರಿಲ್ಲದಂತೆ ಸಾಯಿಸಿ ಬಿಡಿ" ಎಂದು ಅಪ್ಪಣೆ ಹೇಳುತ್ತಾನೆ. (ಔದಾರ್ಯದ ಉರುಳಲ್ಲಿ ಪುಟ-೩೨೨, ೧೯೪೭) ಬ್ರಿಟಿಷ್ ಸರ್ಕಾರದಲ್ಲಿ ಹಣದ ಆಸೆಗೆ, ಉನ್ನತ ಹುದ್ದೆಯ ಭರವಸೆಯಿಂದ ಕೆಲವು ಜನರು ದೇಶದ್ರೋಹದಂತಹ ಅನೇಕ ದುಷ್ಕೃತ್ಯಗಳನ್ನು ಭಾರತೀಯರಾದ ಅನೇಕರು ಮಹಾನ್ ದೇಶಭಕ್ತರನ್ನು ನಮ್ಮವರೆಂಬುದನ್ನು ಲೆಕ್ಕಿಸದೆ ಹಿಂಸಿಸುತ್ತಿದ್ದರು. ಮುಖ್ಯವಾಗಿ ಗಾಂಧೀಜಿಯವರ ಅನುಯಾಯಿಗಳನ್ನು ಕಂಡಲ್ಲಿ ಕೊಂದುಬಿಡಿ ಎಂಬಂತೆ ಹೀನಾ-ಮಾನವಾಗಿ ಥಳಿಸುತ್ತಿದ್ದರು. ಬ್ರಿಟಿಷರಿಗಿಂತ ನಮ್ಮ ದೇಶದವರೇ ನಮಗೆ ದೊಡ್ಡ ಶತ್ರುಗಳಾಗಿರುವುದನ್ನು ಗಮನಿಸಬಹುದು. ಗಾಂಧೀಜಿಯವರು ಸ್ವರಾಜ್ಯಕ್ಕಾಗಿ ಹೋರಾಟ ಮಾಡುತ್ತಾರೆ ಎಂಬ ಕಾರಣಕ್ಕಾಗಿಯೋ ಅಥವಾ ಅಹಿಂಸೆಯಿಂದ ಹೋರಾಟ ಮಾಡುತ್ತಿದ್ದಾರೆ ಎಂಬ ಆಕ್ರೋಶದಿಂದಲೋ ಅಥವಾ ಬ್ರಿಟಿಷರ ಪ್ರಭುತ್ವದ ಆಳ್ವಿಕೆಯಿಂದ ಚಿಲ್ಲರೆ ಕಾಸು ಸಿಗುತ್ತದೆ ಎಂಬ ಬಯಕೆಯಿಂದ ದೇಶದ ಕೆಲವು ಜನರು ಸ್ವಾತಂತ್ರ್ಯ ಹೋರಾಟಗಾರರ ವಿರುದ್ಧವಾಗಿ ಈ ರೀತಿಯ ವರ್ತನೆ ಮಾಡುತ್ತಾರೆ ಎಂಬ ಗೊಂದಲಗಳನ್ನು ಗುರುತಿಸಬಹುದಾಗಿದೆ.

ಕ್ವಿಟ್ ಇಂಡಿಯಾ ಚಳವಳಿಯನ್ನು ವಸ್ತುವಾಗುಳ್ಳ ಮಾಡಿ ಮಡಿದವರು ಕಾದಂಬರಿಯಲ್ಲಿ ಆಗಿನ ಕಾಲದ ಸಂದರ್ಭದಲ್ಲಿ ಹಳ್ಳಿಗಳಲ್ಲಿ ಜನರನ್ನು ಅಂಜಿಸುವ ವ್ಯಕ್ತಿಗಳೆಂದರೆ ಕುಲಕರ್ಣಿ ಮತ್ತು ದೇಸಾಯಿಯವರು. ಇವರು ಗಾಂಧೀಜಿ ಮತ್ತು ಕಾಂಗ್ರೆಸ್‌ನ್ನು ಕುರಿತು ವ್ಯಂಗ್ಯ ಮಾತುಗಳನ್ನಾಡುತ್ತಾರೆ. ಶಂಕರ ಮಾಸ್ತರರು ಗಾಂಧಿಮ್ಯಾಲ ನಿಮಗ ಭಕ್ತಿ ಐತ್ಯೋ ಇಲ್ಲೋ ಎಂದು ಕೇಳಿದಾಗ ಕುಲಕರ್ಣಿ ರಂಗಣ್ಣ "ಎಂಥಾ ಮಾತು ಕೇಳ್ತೀರಪಾ! ಗಾಂಧೀ ಅಂದರೆ ದೇವರು, ಮಹಾತ್ಮಾ, ದೇವರ ಕೋಣೆಯೊಳಗೆ ಇಟ್ಟು ಪೂಜಾ ಮಾಡಬೇಕು ಅವನ್ನ" (ಮಾಡಿ ಮಡಿದವರು, ಪುಟ-೪೮, ೧೯೪೮) ಸತ್ಯ, ಅಹಿಂಸೆ, ತ್ಯಾಗ, ಶಾಂತಿ ಸಹನೆಗಳ ಮೂರ್ತಿ ಗಾಂಧೀಜಿ ತಮ್ಮ ಅಮೂಲ್ಯವಾದ ಮಾನವೀಯತೆಯಿಂದ ಜನರನ್ನು ಅವರ ಮನಸ್ಸನ್ನು ಗೆದ್ದಿರುತ್ತಾನೆ. ಜನರು ಕಣ್ಣಿಗೆ ಕಾಣದ ಒಬ್ಬ ದೇವರು ನಮ್ಮನ್ನು ರಕ್ಷಣೆ ಮಾಡುತ್ತಿದ್ದರೆ, ಕಣ್ಣಿಗೆ ಕಾಣುವ ಗಾಂಧೀಜಿಯವರನ್ನು ದೈವಸಂಭೂತ, ಪವಾಡ ಪುರುಷ ಎಂದು ಪೂಜೆ ಮಾಡುವ ಜನರಿದ್ದರು. ಅಂತಹ ಸುಸಂದರ್ಭದಲ್ಲಿ ದೈವವನ್ನು ಬದಿಗೊತ್ತಿ ರಾಕ್ಷಸ ಪ್ರವೃತ್ತಿಯವರಾದ ಬ್ರಿಟಿಷರನ್ನು ತಮ್ಮ ದೇವರೆಂದು ಪೂಜಿಸುವ ರಂಗಪ್ಪನಂತವರನ್ನು ಪ್ರಸ್ತುತ ಸಮಾಜದಲ್ಲಿಯೂ ಕಾಣಬಹುದಾಗಿದೆ. ಅದೇ ಕಾದಂಬರಿಯಲ್ಲಿ ಬಾಬಾ ಸಾಹೇಬ ದೇಸಾಯಿ ತನ್ನ ಮಗ ವಿಶ್ವನಾಥ ಚಳವಳಿಗೆ ಸೇರಿಕೊಂಡಿದ್ದಾಗ "ಕಾಂಗ್ರೆಸ್ ಚಳವಳಿಗೆ! ಮಾಡಲು ಕೆಲಸವಿಲ್ಲದ ಕೆಲವರು ನಿರುದ್ಯೋಗಿಗಳು ನಡೆಸುವ ಚಳವಳಿಗೆ (ಮಾಡಿ ಮಡಿದವರು, ಪುಟ-೫೭, ೧೯೪೮) ಎಂದು ಗಾಂಧೀ ಟೋಪಿಯನ್ನು ಕಾಣುತ್ತಲೂ ಉರಿದುಬೀಳುತ್ತಿದ್ದನು. ದೇಶಕ್ಕಾಗಿ ನಡೆದ ಹೋರಾಟದಲ್ಲಿ ಕುಟುಂಬದ ಸದಸ್ಯರು ಪಾಲ್ಗೊಂಡಾಗ ಕಾಂಗ್ರೆಸ್, ಗಾಂಧೀಜಿ ಕಲಹವನ್ನುಂಟು ಮಾಡುತ್ತಿದ್ದರು ಎಂಬುದನ್ನು ತಿಳಿಯಬಹುದು. ದೇಶಕ್ಕಾಗಿ ಊಟ ಬಿಟ್ಟು, ಉಪವಾಸ ಮಾಡಿ

ತಮ್ಮ ಸ್ವಂತ ಸ್ವಾರ್ಥ ಬದುಕುಗಳನ್ನು ಬದಿಗೊತ್ತಿ ದೇಶವೇ ಉಸಿರು, ದೇಶವೇ ಮಾನ, ಪ್ರಾಣ ಎಂದು ಜೀವದ ಹಂಗುತೊರೆದು ಹೋರಾಟವನ್ನು ಮಾಡಿ ಜೀವಗಳನ್ನು ಅರ್ಪಿಸಿದ ಮಹಾನ್ ದೇಶಪ್ರೇಮಿಗಳು ಮಣ್ಣಲ್ಲಿ ಮಣ್ಣಾಗಿ ಹೋಗಿದ್ದಾರೆ. ಅಂತಹ ಮಣ್ಣಲ್ಲಿ ಅಣು, ಕಣವಾಗಿ ಜನಿಸಿದ ಕೆಲವು ವ್ಯಕ್ತಿಗಳು ಗಾಂಧೀಜಿ ಮತ್ತು ಕಾಂಗ್ರೆಸ್ ಚಳವಳಿಯನ್ನು ತುಚ್ಚವಾಗಿ ಕಾಣುತ್ತಿರುವುದು, ನಿರುದ್ಯೋಗಿಗಳ ಕೆಲಸ ಎಂದು ಹೀಯ್ಯಾಳಿಕೆಯ ಮಾತುಗಳನ್ನು ಗಮನಿಸಬಹುದು.

ಕನ್ನಡ ಕಾದಂಬರಿಗಳಲ್ಲಿದ್ದಂತೆ ತೆಲುಗು ಕಾದಂಬರಿಗಳಲ್ಲಿಯೂ ಸಹ ಗಾಂಧಿ ವಿರೋಧಿ ಅಂಶಗಳನ್ನು ಕಾಣಬಹುದಾಗಿದೆ. ಸ್ವಾತಂತ್ರ್ಯ ಚಳವಳಿಯನ್ನು ವಸ್ತುವಾಗುಳ್ಳ ಮಹೀಧರ ರಾಮ ಮನೋಹರರಾವ್ ಅವರ ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಯಲ್ಲಿ ರಂಗನಾಥರಾವ್ ಎಂಬ ಅಧ್ಯಾಪಕ ರಾಮನಾಥನೊಂದಿಗೆ ಹೇಳಿದ ಮಾತುಗಳು ಹೀಗಿವೆ.

ಕನ್ನಡ ಭಾಷಾಂತರ

ನಿಮ್ಮ ಗಾಂಧಿ ದೇಶವನ್ನು ಕೃತಕಯುಗದ ಕಡೆ ತಿರುಗಿಸಬೇಕೆಂದುಕೊಂಡಿದ್ದಾನೆ. ಅದು ಸಾಧ್ಯವಾಗದ ಕೆಲಸ. ಗಾಂಧಿಯವರ ಹೋರಾಟಕ್ಕೆ ಖಾದಿ ಒಂದು ಸಂಕೇತ ಆಗಿರಬಹುದು. ಅಷ್ಟಲ್ಲದೆ ದೇಶದ ಪುರೋಗತಿಗೆ ಮಾತ್ರ ಅದರ ಪಾತ್ರ ಇರದು. ನೀನು ಇಷ್ಟು ಬೋಧನೆ ಮಾಡಿದೆ ಅವನನ್ನು ನೋಡಿದರೆ ನಿನಗೆ ಏನು ಅರ್ಥವಾಯಿತು? ಎನ್ನುತ್ತಾನೆ. (ಮೂಲ; ಅನುಬಂಧ-೩ ಅಧ್ಯಾಯ-೧೦ ಕ್ರ.ಸಂ. ೨)

ಗಾಂಧೀಜಿ ದೇಶವನ್ನು ಬ್ರಿಟಿಷರ ಕಡೆಯಿಂದ ಬಿಡಿಸಿಕೊಳ್ಳಲು ನಾನಾ ರೀತಿಯ ಸಾಹಸಗಳನ್ನು ಮಾಡಿದ್ದು, ಇಡೀ ದೇಶವನ್ನು ತನ್ನ ಹಿಡಿತದಲ್ಲಿ ಹಿಡಿದುಕೊಳ್ಳಲು ಖಾದಿ, ಚರಕವನ್ನು ಚಳವಳಿಯ ಸಂಕೇತಗಳನ್ನಾಗಿ ಮಾಡಿಕೊಂಡಿದ್ದಾರೆ. ಅದು ಸಾಧ್ಯವಿಲ್ಲ. ಖಾದಿ ಕೇವಲ ಕ್ಷಣಿಕ ಸಂದರ್ಭದಲ್ಲಿ ಸಂಕೇತವಾಗಿ ಮಾತ್ರ ಕೆಲಸ ಮಾಡಬಹುದು. ಇಡೀ ದೇಶದ ಉದ್ದಾರ, ಬದಲಾವಣೆಯಲ್ಲಿ ಅದರ ಮಹತ್ವ ಎಳ್ಳಷ್ಟು ಇಲ್ಲ ಎಂಬುದನ್ನು ಮತ್ತು ಗಾಂಧೀಜಿಯವರನ್ನು ವಿದೇಶಿಗನಂತೆ ಕಾಣುವುದನ್ನು ಗಮನಿಸಬಹುದು. ಅದೇ ಕಾದಂಬರಿಯಲ್ಲಿ ಸುಂದರಿಯ ತಂದೆ-ತಾಯಿಗಳಿಗೂ ಮತ್ತು ರಾಮನಾಥನಿಗೆ ಸುಂದರಿ ವಿಚಾರದಲ್ಲಿ ಜಗಳವಾದಾಗ ಸುಂದರಿ

ಕನ್ನಡ ಭಾಷಾಂತರ

ಆ ದಿಕ್ಕು ಕಾಣದ ಗಾಂಧಿ ಯಾರೋ! ನಿಕ್ಷೇಪದಂತಹ ಮನೆಯಲ್ಲಿ ಕಿಚ್ಚು ಹತ್ತಿಸಿದ. (ಮೂಲ; ಅನುಬಂಧ-೩ ಅಧ್ಯಾಯ-೧೦ ಕ್ರ.ಸಂ. ೩) ಗಾಂಧೀಜಿ ಕೇವಲ ಬ್ರಿಟಿಷರ ದುರ್ಭರ, ದುಷ್ಕೃತ್ಯ ಚಟುವಟಿಕೆಗಳಿಗೆ ಅಹಿಂಸೆ, ಸತ್ಯ, ಮೌನಗಳ ಮುಖಾಂತರ ಸಿಂಹಸ್ವಪ್ನವಾಗಿದ್ದರೆ, ಇಲ್ಲಿ ಆಗ ತಾನೆ ಕುಡಿಯೊಡೆಯುತ್ತಿರುವ ಕುಟುಂಬ, ಇಬ್ಬರ ಹಾಲಿನಂತಹ ಸಂಸಾರದಲ್ಲಿ ಹುಳಿಯಂತೆ ಚಿತ್ರಿತವಾಗಿದ್ದಾನೆ. ಗಾಂಧೀಜಿ ದಿಕ್ಕುದೆಸೆಯಿಲ್ಲದ ಅನೇಕ ರಾಷ್ಟ್ರ ಪ್ರೇಮಿಗಳಿಗೆ ದಿಕ್ಸೂಚಿಯಾಗಿದ್ದರೆ,

ಸುಂದರಿಯ ವಿಚಾರದಲ್ಲಿ ದಿಕ್ಕುಕಾಣದವರಂತೆ ಚಿಂತಿತವಾಗಿದ್ದಾರೆ. ಗಾಂಧೀಜಿ ದೇಶ-ವಿದೇಶಗಳಲ್ಲಿ ಜನಪ್ರಿಯ ರಾಷ್ಟ್ರೀಯ ಹೋರಾಟಗಾರರಾಗಿ ಪ್ರಸಿದ್ಧಿಯಾಗಿದ್ದರೆ ಕೆಲವು ಕುಟುಂಬಗಳಿಗೆ ಮಾತ್ರ ವಿರೋಧನಾಯಕರಾಗಿ ಚಿತ್ರಿತಗೊಂಡಿದ್ದಾರೆ.

ರಾಜಮ್ಮ ತನ್ನ ಮಗಳ ಜೀವನವನ್ನು ಕುರಿತು ಹೀಗೆ ಹೇಳುತ್ತಾಳೆ.

ಕನ್ನಡ ಭಾಷಾಂತರ

ದಿಕ್ಕು ದೆಶೆ ಇಲ್ಲದ ಕಾಂಗ್ರೆಸ್, ಗಾಂಧಿ, ಎಲ್ಲಿಂದ ಬಂದರೇ ತಾಯಿ, ಹಚ್ಚ ಹಸುರಾಗಿ ಕುಡಿಯೊಡೆಯುತ್ತಿರುವ ಮೊಳಕೆಯನ್ನು ಚಿವುಟಿದಂತಾಯಿತು. ಆ ದುರದೃಷ್ಟ ಗಾಂಧಿ ರೂಪದಲ್ಲಿ ಬಂದಿದೆ. (ಮೂಲ; ಅನುಬಂಧ-೩ ಅಧ್ಯಾಯ-೧೦ ಕ್ರಸಂ. ೪) ಈ ಮೊದಲು ರಾಜಮ್ಮ ಅಪ್ಪಟ ದೇಶಾಭಿಮಾನಿಯಾಗಿರುತ್ತಾಳೆ. ಜಲಿಯನ್ ವಾಲಾಬಾಗಿನಲ್ಲಿನ ಬ್ರಿಟಿಷರ ದುಷ್ಕೃತ್ಯ ಕುರಿತು ಮರುಗುತ್ತಾಳೆ. ಆದರೆ ಬ್ರಿಟೀಷರು ಭಾರತಕ್ಕೆ ಬಂದ ನಂತರ ಭಾರತೀಯರಿಗೆ ಅನೇಕ ಲಾಭಗಳು ಉಂಟಾದವು. ಬ್ರಿಟೀಷರ ಆಗಮನದಿಂದಲೇ ಸ್ತ್ರೀ ಓದು ಬರಹ ಕಲಿತು ಅಕ್ಷರಸ್ಥಳಾಗಿದ್ದಾಳೆ ಎಂಬ ನಂಬಿಕೆಯನ್ನು ಹೊಂದಿರುತ್ತಾಳೆ. ಮತ್ತು ತನ್ನ ಮಗನ ಜೀವನ ಅಸ್ತವ್ಯಸ್ತವಾದಾಗ ಇದಕ್ಕೆಲ್ಲ ಕಾರಣ ಗಾಂಧೀಜಿ ಎಂದು ಶಪಿಸುತ್ತಾಳೆ. ಗಾಂಧೀಜಿ ನಮ್ಮ ದೇಶದಲ್ಲಿ ಜನಿಸಿದ್ದು ನಮ್ಮ ಅದೃಷ್ಟ ಎಂದು ಕೆಲವರು ಭಾವಿಸಿಕೊಂಡಿದ್ದರೆ ಇಲ್ಲಿ ರಾಜಮ್ಮನಂತವರು ಗಾಂಧೀಜಿ ನಾಡಿನಲ್ಲಿ ನಾವು ಜನಿಸಿದ್ದು ನತದೃಷ್ಟ, ಗಾಂಧೀ ದುರದೃಷ್ಟ ಎಂಬ ಮಾತುಗಳನ್ನು ರಾಮನಾಥನ ತಾಯಿ ರಾಜಮ್ಮ ಹೇಳುತ್ತಾಳೆ. ತೆಲುಗು ಸಾಹಿತ್ಯದಲ್ಲಿ ಸ್ವಾತಂತ್ರ್ಯ ಚಳವಳಿಯನ್ನು ಕುರಿತಂತೆ ಹೆಚ್ಚು ಸದ್ದು ಮಾಡಿದ ಕೃತಿಯೆಂದರೆ ಅಡವಿ ಬಾಪಿರಾಜು ಅವರ ನಾರಾಯಣರಾವ್ ಕಾದಂಬರಿಯಲ್ಲಿ,

ಕನ್ನಡ ಭಾಷಾಂತರ

ಗಾಂಧೀಜಿಯವರ ಅಹಿಂಸಾ ತತ್ವ ಹೆಣ್ಣುಮಕ್ಕಳ ಮತ, ಶಕ್ತಿಹೀನರ ಹಾಗೆ ನಾವು ಈ ಅಹಿಂಸಾ ಚಳವಳಿಯಲ್ಲಿ ಬಿದ್ದು ಇನ್ನಷ್ಟು ಶಕ್ತಿಯನ್ನು ಕಳೆದುಕೊಂಡು ನಶಿಸಿಹೋಗುತ್ತೇವೆ. ಸರಿಯಾದ ದಾರಿ ತೋರಿಸಿ ನಡೆಯುತ್ತೇವೆ. ಬಾಂಬುಗಳನ್ನು ತಯಾರು ಮಾಡುತ್ತೇವೆ. ಬಂದೂಕಿನ ರುಚಿ ನೋಡುತ್ತೇವೆ. ಯುದ್ಧ ಮಾಡಿ ರಾಜ್ಯ ಸಂಪಾದಿಸುತ್ತೇವೆ ಎಂದು ಮಂಗಪತಿರಾವ್‌ನ ವಾದವನ್ನು ನಾರಾಯಣರಾವ್ ಈ ರೀತಿ ಹೇಳುತ್ತಾನೆ. (ಮೂಲ; ಅನುಬಂಧ-೩ ಅಧ್ಯಾಯ-೧೦ ಕ್ರಸಂ. ೫)

ಈ ಮಾತುಗಳು ಗಾಂಧೀಜಿಯವರ ಸತ್ಯ ಅಹಿಂಸೆ ತತ್ವದಿಂದ ದೇಶಕ್ಕೆ ಮುಕ್ತಿ ಸಿಗುವುದು ಸಾಧ್ಯವಿಲ್ಲ. ಕೇವಲ ಹಿಂಸೆಯಿಂದ ಮಾತ್ರ ಬ್ರಿಟಿಷರನ್ನು ದೇಶದಿಂದ ಹೊರಗೆ ಹಾಕಬೇಕು ಎಂಬ ದೃಢನಿರ್ಧಾರವನ್ನು ಗ್ರಹಿಸಬಹುದಾಗಿದ್ದು, ಬ್ರಿಟಿಷರ ಅನ್ಯಾಯ, ಅಕ್ರಮದಂತಹ ದುಷ್ಕೃತ್ಯಗಳಿಂದ ಬೇಸತ್ತು ಹೋರಾಡಿದ ತೀವ್ರಗಾಮಿನಾಯಕರಾದ ಉದಾಂಸಿಂಹ, ಭಗತ್‌ಸಿಂಗ್, ಸುಭಾಷ್‌ಚಂದ್ರಬೋಸ್ ಮೊದಲಾದವರನ್ನು ನೆನಪಿಸುತ್ತಿವೆ.

೧೯೧೫ರಲ್ಲಿ ಬೊಂಬಾಯಿಯ ಸಮುದ್ರ ತಡಿಯಲ್ಲಿ ಪಾದಾರ್ಪಣ ಮಾಡಿದಾಗ ಗಾಂಧಿ ಇನ್ನೂ ಮಹಾತ್ಮಾಗಾಂಧಿಯಾಗಿರಲಿಲ್ಲ. ಆ ವೇಳೆಗಾಗಲೇ ದಕ್ಷಿಣ ಆಫ್ರಿಕಾದಲ್ಲಿ ಸಾಮ್ರಾಜ್ಯಶಾಹಿಯಲ್ಲಿನ ಅಸಮಾನತೆಗಳ ವಿರುದ್ಧ ಅವರು ಹೋರಾಡಿದ್ದರಲ್ಲದೆ, ಭಾರತದಲ್ಲಿ ರಾಷ್ಟ್ರೀಯತಾ ಶಕ್ತಿಗಳಿಗೆ ಸಹಾಯಕರಾಗಬೇಕೆಂದು ಸಂಕಲ್ಪ ಮಾಡಿದ್ದರು. ಆ ಮೊದಲು ದಕ್ಷಿಣ ಆಫ್ರಿಕಾದ ಭಾರತೀಯರ ಸಮಸ್ಯೆಯ ಪರಿಹಾರದ ಸಂದರ್ಭದಲ್ಲಿ ದಕ್ಷಿಣ ಆಫ್ರಿಕಾದ ಜನಾಂಗವಾದಿ ಪ್ರಭುತ್ವ ಗಾಂಧೀಜಿಯವರನ್ನು ಅವಮಾನಗೊಳಿಸಿದಾಗ, ಅಂದರೆ ೧೮೯೦ರಷ್ಟು ಹಿಂದೆಯೇ ದಕ್ಷಿಣ ಭಾರತ ಪತ್ರಿಕೆಗಳಲ್ಲಿ ಗಾಂಧೀಜಿಯವರ ಹೆಸರು ಕಂಡುಬಂದಿತ್ತು. ದಕ್ಷಿಣ ಭಾರತದಲ್ಲಿ ಗಾಂಧೀಜಿಯವರು ಹೆಚ್ಚು ಒಗ್ಗಿಹೋದವರಂತೆ ಬಳಕೆಯಾದರು. ಗಾಂಧೀಜಿಯವರು ತಾವೇ ಕರೆದುಕೊಂಡಿದ್ದ ತಮ್ಮ ವಿಲಕ್ಷಣ ಗುಣಗಳು ಹಾಗೂ ಅವರ ವ್ಯಕ್ತಿತ್ವದಲ್ಲಿನ ಉದ್ಧಾರಕ ಶಕ್ತಿಯ ಕಾರಣಗಳಿಗಾಗಿ ಭಾರತ ರಾಷ್ಟ್ರೀಯ ಚಳವಳಿ ನಾಯಕರುಗಳಿಗೆ ಮೆಚ್ಚಿನವರಾಗಿದ್ದರು. ೧೯೧೫ ಮತ್ತು ೧೯೧೯ರ ನಡುವಿನಲ್ಲಿ ಅವರು ರಾಷ್ಟ್ರಾದ್ಯಂತ ಪ್ರವಾಸ ಮಾಡಿ ಜನರ ಸಮಸ್ಯೆಗಳ ಬಗ್ಗೆ ಖುದ್ದು ಅನುಭವ ಪಡೆದಿದ್ದರಲ್ಲದೆ, ರಾಷ್ಟ್ರೀಯತಾ ಚಳವಳಿ ಎದುರಿಸುತ್ತಿದ್ದ ಸಮಸ್ಯೆಗಳ ಬಗ್ಗೆಯೂ ಅಧ್ಯಯನ ಮಾಡಿದ್ದರು.

ಚಂಪಾರಣ್ಯದ ನೀಲಿ ಬೆಳೆಗಾರರು, ಖೇಡಾದ ರೈತರು ಹಾಗೂ ಅಹ್ಮದಾಬಾದಿನ ಗಿರಣಿ ಕಾರ್ಮಿಕರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವುದರ ಮೂಲಕ ಭಾರತದ ಮೂಲಸೆಲೆ ಇರುವುದೆಲ್ಲಿ ಎಂದು ಅವರು ಅರಿತುಕೊಂಡಿದ್ದರು. ಅವರ ಸರಳ ಹಾಗೂ ಸ್ನೇಹಪರ ಗುಣಗಳು ಕದನನಿರತ ಪಂಗಡಗಳನ್ನು ರಾಜಿ ಮಾಡುವ ಅವರ ಸ್ವಭಾವ ಈ ಎಲ್ಲಾ ಕಾರಣಗಳಿಂದಾಗಿ ಒಂದು ರಾಷ್ಟ್ರವಾಗಿ ಹೊರ ಹೊಮ್ಮುವ ಪ್ರಕ್ರಿಯೆಯಲ್ಲಿದ್ದ ದೇಶದ ಸಂಘರ್ಷನಿರತ ಗುಣಗಳಿಗೆ ಅತ್ಯಗತ್ಯವಾಗಿದ್ದ ವ್ಯಕ್ತಿಯಾಗಿದ್ದರು. ಈ ಸದ್ಗುಣಗಳೇ ಅವರನ್ನು ಜನಸ್ತೋಮದ ದೃಷ್ಟಿಯಲ್ಲಿ ಮಹಾತ್ಮರನ್ನಾಗಿ ಮಾಡಿದವು. ನಿರ್ದಿಷ್ಟವಾದ ಸಮಸ್ಯೆಗಳನ್ನು ಎತ್ತಿಕೊಂಡು ಅವುಗಳ ಪರಿಹಾರಾರ್ಥವಾಗಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡರು. ತಮ್ಮ ಬಳಿಯಿದ್ದ ಮಿತವಾದ ಸಂಪನ್ಮೂಲಗಳನ್ನು ಎಚ್ಚರಿಕೆಯಿಂದ ಬಳಸಿಕೊಂಡರಲ್ಲದೆ, ತಮ್ಮ ದಾರಿಯಲ್ಲಿ ಮತ್ತೆ ಎಂದೂ ಹಿಂದಿರುಗಿ ನೋಡಲಿಲ್ಲ. ಆದಾಗ್ಯೂ, ವಸಾಹತು ಭಾರತ ಬಹು ವಿಶಾಲವಾಗಿತ್ತು. ಅದರ ಸರ್ಕಾರ ಪರಕೀಯವಾಗಿತ್ತು. ರಾಷ್ಟ್ರ ಸಮಾಜ ಎದುರಿಸುತ್ತಿದ್ದ ಸಮಸ್ಯೆಗಳ ಬಗ್ಗೆ ನಾಯಕತ್ವಕ್ಕೆ ಭಿನ್ನ ಭಿನ್ನವಾದ ಪರಿಕಲ್ಪನೆಗಳಿದ್ದವು. ಆದ ಕಾರಣ ಪ್ರಚಲಿತ ವೈವಿಧ್ಯವನ್ನು ಅರಿತುಕೊಳ್ಳುವುದು ಅವರಿಗೆ ಸುಲಭದ ಕೆಲಸವಾಗಿರಲಿಲ್ಲ. ಆದರೂ ಅವರು ೧೯೧೯ರ ವೇಳೆಗೆ ಈ ಎಲ್ಲದರ ಬಗ್ಗೆ ಸಾಕಷ್ಟು ನಿಖರವಾಗಿಯೇ ಅವರು ಅಂದಾಜು ಮಾಡುವ ಸಾಮರ್ಥ್ಯ ಹೊಂದಿದ್ದರು. ತಮ್ಮ ನಿಷ್ಕಾಮ ಕರ್ಮದ ಫಲವಾಗಿ ಆ ವೇಳೆಗಾಗಲೇ ಗಾಂಧೀಜಿಯವರು ದೇವತಾ ಮನುಷ್ಯ ಹಾಗೂ ಆಧ್ಯಾತ್ಮ ಶಕ್ತಿಯನ್ನು ಹೊಂದಿದ ಪ್ರವಾದಿಯೆಂದು ಜನಮನ್ನಣೆಗೆ ಪಾತ್ರರಾಗಿದ್ದರು.

ಭಾರತ ಬ್ರಿಟನ್ನಿನ ಯುದ್ದ ಪ್ರಯತ್ನಗಳಿಗೆ ಬೆಂಬಲವಾಗಿ ನಿಂತಿತಷ್ಟೆ! ಆದರೆ ಯುದ್ಧ ಮುಗಿದ ಬಳಿಕ ಸರ್ಕಾರ ನಡೆದುಕೊಂಡ ರೀತಿಯಿಂದ ಬೇಸತ್ತು ವಸಾಹತು ಸರ್ಕಾರಕ್ಕೆ ಪ್ರಜ್ಞೆ

ಮೂಡಿಸಬೇಕೆಂದು ಗಾಂಧೀಜಿಯವರು ಎಲ್ಲ ವಿದ್ಯಮಾನಗಳನ್ನು ಹತ್ತಿರದಿಂದ ನೋಡಿ ತೀರ್ಮಾನಿಸಿದ್ದರು. ಬ್ರಿಟಿಷರ ನ್ಯಾಯನಿಷ್ಠೆಯ ಬಗೆಗಿದ್ದ ಅವರ ನಂಬಿಕೆಗೆ ಧಕ್ಕೆಯಾಗಿತ್ತು. ಭಾರತದ ಇತಿಹಾಸದಲ್ಲೆ ಈ ಶತಮಾನ ಮಹತ್ವಪೂರ್ಣವಾದುದು. ಹಲವು ವರ್ಷಗಳ ಕಾಲ ಸಾಮ್ರಾಜ್ಯಶಾಹಿ ಪ್ರಭುತ್ವದ ಆಡಳಿತದಲ್ಲಿದ್ದ ಭಾರತ, ಸ್ವಾತಂತ್ರ್ಯ ಹೋರಾಟದ ಮೂಲಕ ರಾಜಕೀಯ ಪ್ರಭುತ್ವದಿಂದ ಕೂಡಿದ ಪ್ರಜಾಸತ್ತಾತ್ಮಕ ರಾಷ್ಟ್ರವನ್ನಾಗಿ ಪಡೆಯಲು ಮಹಾತ್ಮಗಾಂಧಿಯಂಥ ಸಮರ್ಥ ನಾಯಕರು ಶ್ರಮಿಸಿದ್ದಾರೆ. ಸಾವಿರ ಸಾವಿರ ಸಾಮಾನ್ಯರ ನಡುವೆ ಸಾವಿರ ಅಸಾಮಾನ್ಯರು ಎಲ್ಲೋ ಕೆಲವರು, ಆಗೊಮ್ಮೆ ಈಗೊಮ್ಮೆ ಬಂದು ಹೋಗುತ್ತಾರೆ. ಮನುಕುಲದ ಚರಿತ್ರೆಯಲ್ಲಿ ಎಲ್ಲರು ಬುದ್ಧನ ಹಾಗೆ ಶಾಶ್ವತ ಕೀರ್ತಿಗೆ ಪಾತ್ರರೇನಾಗುವುದಿಲ್ಲ! ಎಲ್ಲರೂ ಬಸವಣ್ಣನ ಹಾಗೆ ತನ್ನತನದ ಮುದ್ರೆಯನ್ನು ಅಚ್ಚೊತ್ತಿ ಹೋಗುವುದಿಲ್ಲ ಎಲ್ಲರೂ ಮಹಾತ್ಮರೂ ಆಗಿರುವುದಿಲ್ಲ.

ಇಡೀ ಜಗತ್ತಿನ ಜನರನ್ನು ತನ್ನ ವ್ಯಕ್ತಿತ್ವದಿಂದ ಹಾಗೂ ವಿಚಾರಧಾರೆಯಿಂದ ಸೆಳೆದ ಮಹಾನ್ ಚೇತನ ಗಾಂಧಿಮಹಾತ್ಮ. ಅಂಥ ಅಸೀಮ ಪ್ರಭಾವದ ಅನನ್ಯ ಇರುವಿಕೆಯ ಅಪರೂಪದ ವ್ಯಕ್ತಿ ಗಾಂಧೀಜಿಯವರ ರಚನಾತ್ಮಕ ತತ್ವಗಳನ್ನು ಕನ್ನಡ-ತೆಲುಗು ಲೇಖಕರು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ತಿಳಿಯಲು ಇಲ್ಲಿ ಪ್ರಯತ್ನಿಸಲಾಗಿದೆ.

"ತ.ರಾ.ಸು. ಅವರ ರಕ್ತತರ್ಪಣ ಕಾದಂಬರಿಯಲ್ಲಿ ಚಂದ್ರಶೇಖರನು ಹಳ್ಳಿಯ ಸಿಪಾಯಿಗಳಿಗೆ ಇವರಿಗೆ ಕಂದಾಯ ಕೊಡಬೇಡಿ ಇವರ ಕೋರ್ಟುಗಳಲ್ಲಿ ವ್ಯಾಜ್ಯ ಹೂಡಬೇಡಿ ಇವರ ಮಾರಿ ಬಾಯಿಗೆ ಕಷ್ಟಪಟ್ಟು ದುಡಿದ ದುಡ್ಡು ಸುರಿಯಬೇಡಿ ಹೀಗೆ ಮಾಡಿದರೆ ಇವರು ನಿಮ್ಮ ಮೇಲೆ ಇಲ್ಲದ ಅತ್ಯಾಚಾರ ಮಾಡಬಹುದು. ನಿಮ್ಮ ಪ್ರಾಣ ತೆಗೆಯಬಹುದು. ಆದರೆ ನೀವು ಮಾತ್ರ ಯಾವುದಕ್ಕೂ ಹೆದರಬಾರದು. ಅಹಿಂಸೆಯಿಂದಿರಬೇಕು; ಶಿಸ್ತಿನಿಂದಿರಬೇಕು. ಪ್ರಾಣ ಹೋದರೂ ಮುಂದಿಟ್ಟ ಹೆಜ್ಜೆ ಹಿಂದಿಡಬಾರದು" (ರಕ್ತತರ್ಪಣ, ಪುಟ-೩೩, ೧೯೪೬) ಎಂದು ಬೋಧಿಸುತ್ತಾನೆ. ಚಂದ್ರಶೇಖರನು ಯಥಾ ಗಾಂಧೀಜಿಯವರ ಪ್ರತಿಬಿಂಬವಾಗಿ ಚಿತ್ರಿತಗೊಂಡಿದ್ದಾನೆ. ಇಲ್ಲಿ ಗಾಂಧೀಜಿಯವರ ನೇರಮಾತು, ನೇರನುಡಿ, ಅಂತರಂಗದ ಧ್ವನಿಯನ್ನು ಸಾರ್ವಜನಿಕ ಅಭಿಪ್ರಾಯವಾಗಿ ಮಾರ್ಪಡಿಸಬಲ್ಲ ಮೋಡಿಗಾರಿಕೆ, ಛಲಗಾರಿಕೆ ಮೊದಲಾದ ವ್ಯಕ್ತಿತ್ವಗಳನ್ನು ಕಾಣಬಹುದಾಗಿದೆ.

ಅದೇ ಕಾದಂಬರಿಯಲ್ಲಿ ಚಂದ್ರಶೇಖರನು ಹೆಂಡದಂಗಡಿಯ ಮುಂದೆ ಸತ್ಯಾಗ್ರಹ ಮಾಡಬೇಕು. ಕುಡಿಯಲಿಕ್ಕೆ ಬರುವವರನ್ನು ಕಾಲಿಗೆ ಬಿದ್ದು ಬೇಡಿಕೊಂಡು ಹಿಂದಕ್ಕೆ ಕಳಿಸಬೇಕು. ಅವರು ಬೈದರೆ, ಹೊಡೆದರೆ, ರೇಗದೆ ಅವರಿಗೆ ಬುದ್ಧಿ ಕಲಿಸಬೇಕು ಎಂದು ಹೇಳುತ್ತಾನೆ. ಆಗ ಒಬ್ಬ ಯುವಕ "ಅಯ್ಯೋ ಅವರು ಒಳ್ಳೇ ಮಾತಿಗೆ ಬಗ್ತಾರಾ ಬುದ್ದಿ, ಆ ಕುಡಿದು ಕೊಬ್ಬಿರ ಹಂದಿಗಳು ಒಂದೇ ಸಾರಿ ಅದಕ್ಕೇ ಬೆಂಕಿ ಇಟ್ಟುಬಿಟ್ರೆ ಆಗೋಕಿಲ್ವಾ" ಎಂದು ಹೇಳುತ್ತಾನೆ. "ನೀವು ಒಂದು ಅಂಗಡಿ ಸುಟ್ಟರೆ ಅವರು ಇನ್ನು ಹತ್ತು ಅಂಗಡಿ ಕಟ್ಟುತ್ತಾರೆ. ಅದಕ್ಕೆ ಬದಲು ಕುಡಿಯುವವರೇ ಇಲ್ಲದ ಹಾಗೆ ಮಾಡಿದರೆ! ಎಂದು ಚಂದ್ರಶೇಖರ ಹೇಳುತ್ತಾನೆ (ರಕ್ತತರ್ಪಣ, ಪುಟ-೩೪,

೧೯೪೬). ಸತ್ಯಕ್ಕಾಗಿ ಆಗ್ರಹಿಸುವಂತಹ ರಕ್ಷಣಾ ನೀತಿ ಸತ್ಯಾಗ್ರಹ ಈ ತಂತ್ರದ ಮೂಲಕ ಗಾಂಧೀಜಿ ಮಾನವ ಸಮುದಾಯದಲ್ಲಿನ ದ್ವೇಷ, ಹಿಂಸೆಗಳನ್ನು ಪ್ರೇಮ ಹಾಗೂ ಅಹಿಂಸೆಗಳಿಂದ ಗೆಲ್ಲಬೇಕು ಎಂಬ ಅಭಿಲಾಷೆಯನ್ನು ರೂಢಿಸಿಕೊಂಡಿರುತ್ತಾನೆ. ಸತ್ಯ ಮತ್ತು ದೇವರು ಎರಡೂ ಒಂದೇ, ಜೊತೆಗೆ ಸರ್ವರ ಉದಯವನ್ನು ಬಯಸಿದ, ಮೃಗ ಮನಸ್ಸಿನವನನ್ನು ಮೃದು ಮನಸ್ಸಿನವನನ್ನಾಗಿ ಮಾಡಿದ ದೀನಮಯಿ, ಕರುಣಾಮಯಿ ಎಂದರೆ ತಪ್ಪಾಗಲಾರದು. ಗಾಂಧೀಜಿಯವರ ಮುಕ್ತಮನಸ್ಸಿನ ಮೃದು ಸ್ವಭಾವವನ್ನು ಇಲ್ಲಿ ಚಂದ್ರಶೇಖರನ ಪಾತ್ರದ ಮೂಲಕ ಲೇಖಕರು ಚಿತ್ರಿಸಿದ್ದಾರೆ. ಅದೇ ಕಾದಂಬರಿಯಲ್ಲಿ ಪೊಲೀಸ್ ಬಾಲಾಜಿಸಿಂಗ್ ಬಾಪಾರೆಡ್ಡಿಯ ಕುತಂತ್ರದ ಮೇರೆಗೆ ಅಜ್ಜಿಗನನ್ನು ಅರೆಸ್ಟ್ ಮಾಡಿ ಚಿತ್ರಹಿಂಸೆ ನೀಡಿರುತ್ತಾನೆ. ಆಗ ಅಜ್ಜಿಗನ ತಂಡದ ಸ್ವಯಂಸೇವಕರು ಬಾಪಾರೆಡ್ಡಿಯನ್ನು ಹೊದೆಯಬೇಕು, ನಾಶ ಮಾಡಬೇಕು ಎಂದು ಕೋಪಗೊಂಡಾಗ ಚಂದ್ರಶೇಖರ ಅವನನ್ನು ಕೊಂದುಹಾಕುವುದೊಂದೇ ದಾರಿಯಲ್ಲ. ನಮ್ಮ ಒಳ್ಳೆಯತನದಿಂದ ಅವರನ್ನು ನಮ್ಮ ದಾರಿಗೆ ತಂದುಕೊಳ್ಳಬೇಕೇ ಹೊರತು ಆಗದವರನ್ನೆಲ್ಲ ಕೊಲ್ಲುತ್ತೇವೆ ಅಂತ ಹೊರಟರೆ ಅದಕ್ಕೆ ಕೊನೆಯೆಲ್ಲಿ? ಹಿಂಸೆಯದೊಂದು ವಿಷಚಕ್ರ ಮುಳ್ಳುಬತ್ತಿ ಹೂ ಬೆಳೆಯುವುದಕ್ಕಾಗುತ್ತೇನು, ಹೇಳು ಮುಳ್ಳಿನ ಫಲ ಮುಳ್ಳೇ" (ರಕ್ತತರ್ಪಣ, ಪುಟ–೧೦೪, ೧೯೪೬) ಎಂದು ಹಿಂಸೆಯ ಕುರಿತು ಚಂದ್ರಶೇಖರ ಸ್ವಯಂ ಸೇವಕರಿಗೆ ಮನವರಿಕೆ ಮಾಡುತ್ತಾನೆ. ನಾಡಿನ ಶತ್ರು, ದ್ರೋಹಿಗಳನ್ನು ಸ್ನೇಹ, ಪ್ರೀತಿ, ವಿಶ್ವಾಸಗಳಿಂದ ಮನಗೆಲ್ಲಬೇಕು. ಬರಡಾದ ಮನಕೆ ಪನ್ನೀರಾಗುವ ಮೂಲಕ ಚೈತನ್ಯದ ಮಹಾಚೇತನವಾಗಬೇಕೆಂಬ ಗಾಂಧೀಜಿಯವರ ಚಿಂತನೆಗಳನ್ನು ಇಲ್ಲಿ ಗುರುತಿಸಬಹುದಾಗಿದೆ. ಇಂತಹ ಮಹಾನ್ ಮನಸ್ಸಿನಿಂದಲೇ ಗಾಂಧೀಜಿ ಜಗತ್ತಿನ ಜನರ ಮನದಾಳದಲ್ಲಿ ಚೈತ್ರದ ಚಿಲುಮೆಯಂತಿರುವುದನ್ನು ತಿಳಿಯಬಹುದು.

ಅದೇ ರೀತಿಯಾಗಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸ್ವಾತಂತ್ರ್ಯ ಚಳವಳಿಯನ್ನು ವಸ್ತುವನ್ನಾಗಿಸಿಕೊಂಡು ಮೆರವಣಿಗೆ ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿಯಲ್ಲಿ ಕರ್ನಾಟಕದಲ್ಲಿನ ಕರಾನಿರಾಕರಣೆ ಚಳವಳಿಯ ಸ್ವರೂಪವನ್ನು ಚಿತ್ರಿಸಲಾಗಿದ್ದು, ಅಂಕೋಲದಲ್ಲಿ ಈ ಚಳವಳಿಯ ನೇತೃತ್ವವನ್ನು ಸುದರ್ಶನನು ವಹಿಸಿಕೊಂಡಿರುತ್ತಾನೆ. ಪ್ರತಿ ನಿತ್ಯವೂ ಪತ್ರಿಕೆಗಳಲ್ಲಿ ಗಾಂಧೀಜಿಯವರ ಸಂದೇಶಗಳನ್ನು ಅಚ್ಚಾಗಿಸಿ ಪ್ರಸರಿಸುತ್ತಿರುತ್ತಾನೆ. ಅದರಲ್ಲಿ "ಎದುರಾಳಿ ಬಂದೂಕದಿಂದ ಹೊಡೆದರೂ ಎದೆ ಒಡ್ಡಬೇಕೆ ಹೊರತು ಅವನ ಮೇಲೆ ಕೈ ಎತ್ತಬಾರದು" (ಮೆರವಣಿಗೆ, ಪುಟ–೪೦೮, ೧೯೪೭) ಎಂದು ಗಾಂಧೀಜಿಯವರ ಸಿದ್ಧಾಂತವಾದ ಅಹಿಂಸೆಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತಾನೆ. ಮತ್ತು ಈ ಚಳವಳಿಯ ಸಂಬಂಧ ಗಂಡಸರೂ ಮತ್ತು ಹೆಂಗಸರು ರಾಮಭಟ್ಟರ ಮನೆಯ ಮುಂದೆ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಾರೆ. ಹಾಗೇನೇ ಮಲ್ಲಿಗೆಹಳ್ಳಿಯಲ್ಲಿ ಸುದರ್ಶನ ಮತ್ತು ವಾಸು ದಸ್ತಗಿರಿ ಆದಾಗ ಪಾಯಿಯನ್ನು ಕೆಳಕ್ಕೆ ತಳ್ಳಿ ಅದನ್ನು ತಮ್ಮ ಕೈಯಲ್ಲಿದ್ದ ಕೊಡಲಿ ಮಚ್ಚುಗಳಿಂದ ಒಡೆದುಹಾಕುತ್ತಾರೆ. ಈ ಎರಡು ಹೋರಾಟಗಳು ಆರ್ಥಿಕವಾಗಿ ರೈತನು ಕುಗ್ಗಿ ಹೋಗಿರುವುದರ ಪರಿಣಾಮವಾಗಿ ಯುವಕರು ಎಚ್ಚೆತ್ತುಕೊಂಡು

ಸರ್ಕಾರದ ವಿರುದ್ಧವಾಗಿ ನಡೆಸಿದ ಪ್ರತಿಭಟನೆಗಳಾಗಿವೆ. ಇದೇ ಕಾದಂಬರಿಯಲ್ಲಿ ಅಡ್ವೋಕೇಟರೊಬ್ಬರು ಡಿಟೆನ್ಯುವಾಗಿ ಕಾರಾಗಾರವನ್ನು ಸೇರಿದಾಗ ಹೆಂಡತಿಗೆ "ಇಲ್ಲಿ ಎಲ್ಲಾ ಹಿಂದಿ ಕಲಿಯುತ್ತಿದ್ದಾರೆ" (ಮೆರವಣಿಗೆ, ಪುಟ-೫೯೬, ೧೯೪೭) ಹಣ ಕಳುಹಿಸಿಕೊಡು ಎಂದು ಪತ್ರ ಬರೆಯುತ್ತಾನೆ. ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿಸುವುದು ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಈ ಪ್ರಯತ್ನವನ್ನು ಗಾಂಧೀಜಿಯವರ ಅಪ್ಪಟ ಅನುಯಾಯಿಯಾದ ಗೊರೂರು ಅವರು ಯಥಾವತ್ತಾಗಿ ತಂದಿದ್ದಾರೆ.

ಇದೇ ಕಾದಂಬರಿಯಲ್ಲಿ ಶಂಕರನು ಒಂದು ಖಾದಿ ಅಂಗಡಿಯನ್ನು ಇಡಬೇಕೆಂದು ಯೋಚಿಸುತ್ತಾನೆ. ಆದರೆ ಬಂಡವಾಳವಿಲ್ಲದಿರುವುದರಿಂದ ಖಾದಿಯನ್ನು ಹೊತ್ತು ಮಾರುತ್ತಾನೆ. (ಪುಟ-೪೨೮) ಸ್ವರಾಜ್ಯಕ್ಕಾಗಿ ಮನೆ, ಮಾರು, ಸಂಸಾರವನ್ನು ಬದಿಗಿರಿಸಿ ದೇಶ, ವಿದೇಶಗಳಲ್ಲಿ ಹಗಲು, ಇರುಳು ಎನ್ನದೆ ದೇಶಕ್ಕಾಗಿ ಒಂದು ಹನಿ ರಕ್ತಕೊಡಿ ಎಂದು ಕ್ರಾಂತಿಕಾರಕ ಸಂದೇಶವನ್ನು ನೀಡುತ್ತಿರುವ ನೇತಾಜಿ ಅವರಿರುವಂತಹ ಸುಸಂದರ್ಭದಲ್ಲಿ ಯವಕರು ಅವರ ಪ್ರಭಾವಕ್ಕೆ ಒಳಗಾಗದೆ ಉಪವಾಸ, ಅಹಿಂಸೆ ಎಂದು ಚಳವಳಿ ನಡೆಸುತ್ತಿರುವ ಗಾಂಧೀಜಿಯವರ ಪ್ರಭಾವ, ಪ್ರೇರಣೆ ಎಷ್ಟಿತ್ತು ಯುವಪೀಳಿಗೆಯ ಮೇಲೆ ಎಂಬುದನ್ನು ಗಮನಿಸಬಹುದು. ಇದೇ ಕಾದಂಬರಿಯಲ್ಲಿ ಸುದರ್ಶನನು ಮಲ್ಲಿಗೆಹಳ್ಳಿಯಲ್ಲಿ ರಾಟೆ ಖಾದಿಯ ಗೀಳು ಹತ್ತಿಸಲು ಪ್ರಯತ್ನಿಸುತ್ತಿರುವಾಗ "ಖಾದಿ ಪ್ರಚಾರವಾಗಬೇಕು; ಊರಿನಲ್ಲಿ ಚರಕಗಳು ತಿರುಗಬೇಕು; ಊರಿಗೆ ಬೇಕಾಗುವ ಖಾದಿಯೆಲ್ಲಾ ಆ ಚರಕಗಳಿಂದಲೇ ತಯಾರಾಗಬೇಕು" ಎಂದು ಆಶಯ ಹೊಂದಿರುತ್ತಾನೆ. (ಮೆರವಣಿಗೆ, ಪುಟ-೩೫೭, ೧೯೪೭) ಗಾಂಧೀಜಿಯವರ ಪ್ರಬಲ ಅಸ್ತ್ರಗಳಾದ ಚರಕ, ಖಾದಿ ಭಾರತೀಯರಿಗೆ ಉಜ್ವಲವಾದ ರಾಷ್ಟ್ರೀಯತೆಯನ್ನು ಉಂಟುಮಾಡುವ ಸಂಕೇತಗಳಾಗಿ ಚಿತ್ರಿತವಾಗಿವೆ. ಇವುಗಳ ಮುಖಾಂತರ ಮೌಲ್ಯಗಳಾದ ಸತ್ಯ, ಸರಳ ಜೀವನ, ತ್ಯಾಗ, ಮಾನವ ಪ್ರೇಮ, ವ್ಯಕ್ತಿ ಮತ್ತು ಸಮಾಜದ ನಡುವೆ ಬಾಂಧವ್ಯ, ಸಂವಾದ ಸಾಮರಸ್ಯ ಉಂಟಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಇಲ್ಲಿ ಸುದರ್ಶನನು ಮಲ್ಲಿಗೆ ಹಳ್ಳಿಯ ಜನತೆ ಆರ್ಥಿಕವಾಗಿ ಪ್ರಬಲವಾಗಬೇಕೆಂಬ ಕನಸನ್ನು ಕಾಣುತ್ತಿರುವುದನ್ನು ಗುರುತಿಸಬಹುದಾಗಿದೆ. ಅಲ್ಲದೆ ಸುದರ್ಶನನು ಮಲ್ಲಿಗೆಹಳ್ಳಿಯಲ್ಲಿ ರಾಟೆ, ನೂಲು, ಮಗ್ಗ, ಗಾಣ, ಕಾಗದ, ಖಾದಿಗಳ ಉತ್ಪತ್ತಿ, ಬಳಕೆ, ಪ್ರಸಾರದಂತಹ ಚಟುವಟಿಕೆಗಳನ್ನು ನಡೆಸುತ್ತಾನೆ. ಜನರನ್ನು ಸ್ವ-ಉದ್ಯೋಗಕ್ಕಾಗಿ ಪ್ರಚೋದಿಸುತ್ತಾನೆ. ವಿದೇಶಿ ವಸ್ತು ಬಳಕೆ ತಿರಸ್ಕೃತವಾಗುತ್ತಿರುವುದನ್ನು ಈ ಕೆಳಗೆ ಕಾಣಬಹುದಾಗಿದೆ. ಮಲ್ಲಿಗೆಹಳ್ಳಿ ಸಾಹುಕಾರರು "ಮಿಶನನ್ನಿನ ಅಕ್ಕಿ ಉಪಯೋಗಿಸಕೂಡದು ಕೊಟ್ಟಣದ ಅಕ್ಕಿ ಉಪಯೋಗಿಸಬೇಕು," (ಮೆರವಣಿಗೆ, ಪುಟ-೩೭೨, ೧೯೪೭) ಸಾಮಾನ್ಯವಾಗಿ ಜಮೀನ್ದಾರಿ ಕುಟುಂಬಗಳು ಬ್ರಿಟಿಷ್ ಸಂದರ್ಭದ ಅವಧಿಯಲ್ಲಿ ಸರ್ಕಾರದ ಪರವಾದ ದೇಶದ್ರೋಹದ ಕೆಲಸಗಳು ಯಥೇಚ್ಛವಾಗಿದ್ದವು. ಆದರೆ ಈ ಕಾದಂಬರಿಯಲ್ಲಿ ಜಮೀನ್ದಾರಿ ಕುಟುಂಬ ಸರ್ಕಾರದ ವಿರೋಧವಾಗಿ ಸ್ವಾತಂತ್ರ್ಯದ ಪರವಾಗಿ ಬೆಂಬಲ ನೀಡುತ್ತಿರುವುದನ್ನು ಗಮನಿಸಬಹುದು. ಸಾವಿರದ ಒಂಬೈನೂರ ನಲವತ್ತೆಂಟರಲ್ಲಿ ಸ್ವಾತಂತ್ರ್ಯದ

ಅಲೆ, ಕಿಚ್ಚನ್ನು ಹಚ್ಚಿದ ಬಸವರಾಜ ಕಟ್ಟೀಮನಿ ಅವರ ಕಾದಂಬರಿ ಮಾಡಿ ಮಡಿದವರು. ಉತ್ತರ ಕರ್ನಾಟಕವನ್ನು ಕದನದ ಕಣವನ್ನಾಗಿ ಮಾಡಿಕೊಂಡು ಪ್ರಾಂತೀಯ ಅರಸರನ್ನು ಸ್ಫೂರ್ತಿಯ ಅಲೆ ಸೆಲೆಯನ್ನಾಗಿಸಿಕೊಂಡು ಹೋರಾಡಿ ಮಡಿದ ವೀರರ ಕಥೆ ಈ ಕೃತಿಯಲ್ಲಿದೆ. ಈ ಕಾದಂಬರಿಯಲ್ಲಿ ಸರ್ಕಾರವನ್ನು ಉರುಳಿಸಲು ಸ್ವಯಂ ಸೇವಕ ತಂಡದವರು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತಾರೆ. ಅದರಂತೆ ಕಂದಾಯ ಕಚೇರಿಗೆ ಮುತ್ತಿಗೆ ಹಾಕಬೇಕೆಂದು ನಿರ್ಣಯವಾಗುತ್ತದೆ. ಆ ಸಂದರ್ಭದಲ್ಲಿ ಶೇಖರನ ಗುಂಪಿಗೆ ಹೊಸದಾಗಿ ಸೇರಿದ ಹುರುಪಿನ ಯುವಕ ಬಸವಣ್ಣೆಪ್ಪ ಶೇಖರ ಮತ್ತು ಶಂಕರ ಮಾಸ್ತರರ ನಡುವಿನ ಚರ್ಚೆ ಹೀಗಿದೆ.

"ಹಿಂಸೆ ಉಪಯೋಗಿಸುವಂಥ ಪ್ರಸಂಗವೇ ಬರದ ಹಾಂಗ ಕೆಲಸ ನಡೀಬೇಕು. ಪೊಲೀಸರಿಗೂ ಕೂಡ ಏನೂ ಆಗದ ಹಾಗೆ ಕೆಲಸ ಮುಗಿಸಬೇಕು ನಾವು. ಅವರ ಕೈಯಾಗ ಬಂದೂಕು ಇರ್ತಾವೆ. ನಮ್ಮ ಕೈಯೊಳಗೆ ಪಿಸ್ತೂಲು ಇರ್ತಾವೆ. ಅವರು ಬಂದೂಕು ಉಪಯೋಗ ಮಾಡಿದರೂ ನಾವು ಪಿಸ್ತೂಲು ಉಪಯೋಗ ಮಾಡುವ ಹಂಗಿಲ್ಲ. ಹಾಂಗ ಬೆದರಿಸಿ ಕೆಲಸ ಸಾಧಿಸಬೇಕು. ಎಂಥಾ ಪ್ರಸಂಗ ಬಂದರೂ ನಾವು ಅಹಿಂಸೆಯನ್ನು ಬಿಡಬಾರದು. ನಮ್ಮ ಮುಖಂಡರಾದ ಮಹಾತ್ಮರ ತತ್ವಕ್ಕೆ ವಿರುದ್ಧವಾಗಿ ಹೋಗಬಾರದು." (ಮಾಡಿ ಮಡಿದವರು, ಪುಟ–೧೨೬, ೧೯೪೪) ಕ್ರಿಸ್ತ ಬುದ್ಧರ ಮೈತ್ರಿಯನು ಸಾಧಿಸುತ ವಿಶ್ವಸೇವಕರ ಪಂಕ್ತಿಯಲ್ಲಿ ನಿಂತವರು ಗಾಂಧೀಜಿ. ಶಾಂತಿಯಲ್ಲಿ ಹಿಮಾಲಯದಂತೆ, ಆಕಾಶದಲ್ಲಿ ಹೊಳೆಯುವ ನಕ್ಷತ್ರದಂತೆ, ವಿಶ್ವವನ್ನೇ ಕಂಪನ ಮಾಡುವ ಧರ್ಮದ ಬಲವೇ ಗಾಂಧೀಜಿ. ತಾಯ್ನಾಡಿಗಾಗಿ ಹೋರಾಟ ಮಾಡುತ್ತಿರುವವರ ಮೇಲೆ ಬ್ರಿಟಿಷರು ಮಾನವೀಯತೆ, ಅನುಕಂಪವನ್ನು ತೋರಿಸದೆ ಜಂತುಗಳನ್ನು ಸಾಯಿಸಿದ ಹಾಗೆ ಸಾಯಿಸುತ್ತಿದ್ದರೂ ತುಟಿಪಿಟಕೆನ್ನದೆ ಹಿಂಸೆ ಮಾಡದೆ ಅಹಿಂಸೆಯನ್ನು ಪಾಲಿಸುತ್ತಿರುವ ಗಾಂಧೀಜಿಯವರ ತತ್ವಗಳಿಗೆ ಭಂಗವಾಗದೆ ಅನುಸರಿಸಬೇಕೆಂಬ ಶೇಖರ, ಶಂಕರಪ್ಪನವರ ಮನಸ್ಥಿತಿಯನ್ನು ಗಮನಿಸಬಹುದು. ಗಾಂಧೀಜಿಯವರ ತತ್ವಗಳಿಗೆ ಮಿಡಿಯುವವರಾಗಿ ಈ ಇಬ್ಬರು ವ್ಯಕ್ತಿಗಳು ಚಿತ್ರಿತಗೊಂಡಿದ್ದಾರೆ. ಅಂದಿನ ಸಂದರ್ಭದಲ್ಲಿ ಗಾಂಧೀಜಿ ಗುರು, ಗಾಂಧೀವಿಯಾಗಿ ಕಂಡಬಂದರೂ ಪ್ರಸ್ತುತ ಸಮಾಜದಲ್ಲಿ ಗಾಂಧೀಜಿಯವರ ಇರುವಿಕೆಗೆ ಅವಕಾಶವಿರುತ್ತಿರಲಿಲ್ಲ ಎನಿಸುತ್ತದೆ. ಇದರಿಂದ ಗಾಂಧೀಜಿ ಅಕ್ಷರಸ್ಥ, ಅನಕ್ಷರಸ್ಥರ ಮೇಲೆ ಪ್ರಭಾವ ಎಷ್ಟರಮಟ್ಟಿಗಿತ್ತು ಎಂಬುದನ್ನು ತಿಳಿಯಬಹುದು. ಅದೇ ಕಾದಂಬರಿಯ ಕೊನೆಯಲ್ಲಿ ಸಂಗಣ್ಣ ಪೊಲೀಸರ ದಾಳಿಗೆ ಪ್ರತಿಯಾಗಿ ದಾಳಿ ಮಾಡಲು ಸಿದ್ಧವಾದಾಗ ಶೇಖರನು "ಬೇಡ ಎಂಥ ಪ್ರಸಂಗ ಬಂದರೂ ನಮ್ಮ ತತ್ವವನ್ನು ಬಿಡುವ ಹಾಂಗಿಲ್ಲ. ಇಂದಿಲ್ಲ ನಾಳೆ ನಮ್ಮ ತತ್ವಕ್ಕೆ ಜಯ ಸಿಕ್ಕೀತು...." (ಮಾಡಿ ಮಡಿದವರು, ಪುಟ–೧೭೭, ೧೯೪೪) ಎಂದು ಹೇಮಾಳಿಗೆ ಹೇಳುತ್ತಾನೆ. ಇಲ್ಲಿ ತನ್ನ ತಾಯ್ನಾಡಿಗಾಗಿ ಅನೇಕರು ಬಲಿಯಾಗಿದ್ದರೂ, ಶೇಖರನು ಎದೆಗೆ ಎದೆಕೊಟ್ಟು ಹೋರಾಟ ಮಾಡದೆ ಗಾಂಧೀಜಿಯವರನ್ನು ಅನುಸರಿಸುತ್ತಿರುವುದನ್ನು ಕಾಣಬಹುದಾಗಿದೆ.

ಶಿವರಾಮ ಕಾರಂತರ ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ರಾಧಾಕೃಷ್ಣನು ಆಲೆಮನೆ ಮಂಜಪ್ಪನ ಮನೆಗೆ ಹೋಗುವಾಗ ಕಡುಬಿ ಎಂಬ ದಾರಿಹೋಕನಿಗೆ "ಉಪ್ಪಿಗೆ ಸುಂಕ ಕಟ್ಟಬಾರದು,

ತಮ್ಮ ಬಟ್ಟೆ ತಾವೇ ನೂಲು ಮಾಡಿ, ನಾವೇ ನೆಯ್ದು, ನಾವೇ ಉಟ್ಟುಕೊಂಡರೆ ಸ್ವರಾಜ್ಯ ಖಂಡಿತ" ಎಂದು ಮಾರ್ದರ್ಶನ ಮಾಡುತ್ತಾನೆ. (ಔದಾರ್ಯದ ಉರುಳಲ್ಲಿ, ಪುಟ–೨೦, ೧೯೪೭) ದೇಶಕ್ಕಾಗಿ ನಡೆಯುವ ಹೋರಾಟದಲ್ಲಿ ಅಕ್ಷರಸ್ಥ, ಅನಕ್ಷರಸ್ಥ ನಾಡಿನ ಜನತೆ ಪಾಲ್ಗೊಳ್ಳುವುದು ಅವಶ್ಯಕವಾಗಿತ್ತು. ಅದರಿಂದಾಗಿ ವಿದೇಶಿ ಸರ್ಕಾರ, ವಸ್ತುವಿನ ಬಗೆಗೆ ತಿರಸ್ಕಾರ, ಸ್ವದೇಶಿ ವಸ್ತು ಉತ್ಪತ್ತಿ, ಬಳಕೆ ಕುರಿತು ಜ್ಞಾನವನ್ನು ಮೂಡಿಸುತ್ತಿರುವುದು ದಾಸ್ಯದಿಂದ ಮುಕ್ತಿ ಮೂಡಿಸಲು ಭಾರತಾಂಬೆಯ ಗರ್ಭದಲಿ ಜನಿಸಿ ಬಂದ ಉದಾತ್ತ ಸಾತ್ವಿಕ ರೂಪವೇ ಗಾಂಧೀಜಿ. ಅವರ ಚಿಂತನೆಗಳು ರಾಧಾಕೃಷ್ಣನಲ್ಲಿ ಅಚ್ಚೊತ್ತಿದಂತಿರುವುದು ಕಂಡುಬರುತ್ತದೆ.

ಇದೇ ಕಾದಂಬರಿಯಲ್ಲಿ ಮಂಜಯ್ಯನವರ ಮನೆಯಲ್ಲಿ ಉಪಾಧ್ಯಾಯರು ಮಕ್ಕಳಿಗೆ ತಕಲಿಯಿಂದ ನೂಲು ಮಾಡಲು, ಬಿದಿರ ಬಿಲ್ಲಿನಿಂದ ಹತ್ತಿ ಹಿಂಜುವುದು, ರಾಟೆಗಳ ತಯಾರಿಕೆ, ನೂಲುವಿಕೆ ಮೊದಲಾದಂತೆ ಶಿಕ್ಷಣ ನಡೆಯುತ್ತದೆ. ರಾಧಾಕೃಷ್ಣ ಹಳ್ಳಿ ಜನರಿಗೆ "ನೀವಿಷ್ಟು ಹತ್ತಿಯ ಗಿಡ ನೆಟ್ಟು, ನೂಲು ಮಾಡುತ್ತ ಬಂದರೆ ನಿಮ್ಮ ಖರ್ಚಿಗೆ ಬೇಕಾದ ಅರಿವೆಯನ್ನು ಮಾಡಿಕೊಳ್ಳಬಹುದಲ್ಲ" ಎಂದು ಉಪದೇಶಿಸುತ್ತಾನೆ. (ಔದಾರ್ಯದ ಉರುಳಲ್ಲಿ, ಪುಟ–೭೭, ೧೯೪೭) ಮತ್ತು ರಾಧಾಕೃಷ್ಣನು ಮಂಜಯ್ಯನು ಕೊಟ್ಟ ಕಾಣಿಕೆಯನ್ನು ಮಗ್ಗ, ರಾಟೆಗಳ ಖರೀದಿಗೆ ಬಳಸುತ್ತಾನೆ (ಪುಟ–೭೯). ಅಲ್ಲದೆ ಹೊಲೆಯರ ಗುಡಿಸಲುಗಳಿಗೆ ಕದ್ದು ಹೋಗಿ "ಮಧ್ಯಪಾನ ಬಿಡಿ, ಮಾಂಸಹಾರ ಬಿಡಿ ಉಚ್ಚಿಷ್ಟ ಬೋಜನ ಬಿಡಿ ಎಂದು ತಿಳುವಳಿಕೆ ಹೇಳುತ್ತಾನೆ. (ಪುಟ–೮೩) ಇಲ್ಲಿ ಆಲೆಮನೆ ಮಂಜಯ್ಯನವರ ಮನೆಯೇ ಶಾಲೆಯಾಗಿದ್ದು, ರಾಷ್ಟ್ರೀಯತೆಯ ಶಿಕ್ಷಣದ ಭೋದನೆ ನಡೆಯುತ್ತದೆ. ಇಡೀ ಅವರ ಕುಟುಂಬವೇ ಗಾಂಧೀಜಿಯವರ ತತ್ವಗಳನ್ನು ಅಳವಡಿಸಿಕೊಂಡಿದ್ದು, ಕಾಯಾ, ವಾಚಾ, ಮನಸಾದಿಂದ ಒಪ್ಪಿಕೊಂಡು ಶ್ರದ್ಧೆ ಭಕ್ತಿಯಿಂದ ಪರಿಪಾಲಿಸುತ್ತಿರುವುದು ಕಂಡುಬರುತ್ತದೆ. ಈ ಕುಟುಂಬ ಸ್ವದೇಶಿ ವಸ್ತು ಉತ್ಪತ್ತಿ ಮಾಡುವಲ್ಲಿ ಮಾದರಿಯಾಗಿರುವುದನ್ನು ಗುರುತಿಸಬಹುದಾಗಿದೆ. ರಾಧಾಕೃಷ್ಣನು ಜನರಿಗೆ ತಮ್ಮ ಸ್ವಂತ ದುಡಿಮೆಯ ಮೇಲೆ ಜೀವನ ನಡೆಸುವಂತೆ ಸ್ವಾವಲಂಬನೆ ಜೀವನಕ್ಕೆ ಪ್ರೇರೇಪಿಸುತ್ತಿರುವುದನ್ನು ಕಾಣಬಹುದಾಗಿದೆ. ರಾಧಾಕೃಷ್ಣನ ನಿಸ್ವಾರ್ಥ ಬದುಕು, ಉದಾರ ಮನಸ್ಥಿತಿ ದಲಿತರ ಜಡ್ಡುಗಟ್ಟಿದ ಜೀವನಕ್ಕೆ ಸುಧಾರಣೆ ತರುವಲ್ಲಿನ ಪರಿವರ್ತನಾ ಮನೋಭಾವ, ಅವರ ಏಳಿಗೆಗೆ ತನ್ನ ತನವನ್ನು ಬಿಟ್ಟು ದಲಿತರ ಮನೆಗಳಿಗೆ ಪ್ರವೇಶ ನೀಡಿರುವಂತಹ ಸಮತಾವಾದಿ ಗುಣ, ಸಂಯಮ, ತ್ಯಾಗ, ತಾಳ್ಮೆ, ಮನೋಭಾವಗಳನ್ನು ಕಾಣಬಹುದು.

ಇದೇ ಕಾದಂಬರಿಯಲ್ಲಿ ದಯಾನಂದರಾಯರ ನೆರವಿನ ಮೇರೆಗೆ, ರಾಧಾಕೃಷ್ಣನ ಆಶಯದಿಂದ ದಲಿತಾಶ್ರಮ ಸ್ಥಾಪನೆಯಾಗುತ್ತದೆ. ಆ ಆಶ್ರಮದ ಮಕ್ಕಳಿಗೆ ಯಾವ ರೀತಿಯ ಶಿಕ್ಷಣ ನೀಡಬೇಕೆಂಬ ಚರ್ಚೆ ನಡೆಯುತ್ತದೆ. ಅಲ್ಲಿ ಹಿಂದಿ ಭಾಷೆಯನ್ನು ಶಿಕ್ಷಣದ ಭಾಗವಾಗಿ ಮಕ್ಕಳಿಗೆ ಕಲಿಸಲು ಜಾರಪ್ಪ ಎಂಬ ಮಾಸ್ತರರು ಸೂಚಿಸುತ್ತಾರೆ. ಆದರೆ ರಾಧಾಕೃಷ್ಣನು ರೇಷ್ಮೆಹುಳ ಸಾಕಾಣಿಕೆ, ನೇಯುವ ಕೆಲಸ, ಬಣ್ಣಗಾರಿಕೆ, ಕಬ್ಬಿಣದ ಕೆಲಸದಂತಹ ಕಾಯಕ ಶಿಕ್ಷಣಕ್ಕೆ ಒತ್ತು ನೀಡಬೇಕೆಂದು ಪ್ರಸ್ತಾಪಿಸುತ್ತಾನೆ. ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಕಲಿಸಬೇಕು ಎಂಬ ಚಿಂತನೆ ಮತ್ತು

ಕಾಯಕ ಶಿಕ್ಷಣ ನೀಡುವುದರ ಮೂಲಕ ಮಕ್ಕಳಲ್ಲಿ ದೇಶಾಭಿಮಾನವನ್ನು ಮೂಡಿಸಬೇಕು ಎಂಬ ಗಾಂಧೀಜಿಯವರ ವಿಚಾರಗಳನ್ನು ಲೇಖಕರು ಹಿಡಿದಿಟ್ಟಿದ್ದಾರೆ. ಮತ್ತು ಶಿಕ್ಷಣ ಎಂಬುದು ಕೇವಲ ಜ್ಞಾನ ವೃದ್ಧಿಯ ಜೊತೆಗೆ ಅಲ್ಲದೆ ದೇಶವಿಮುಕ್ತಿಗಾಗಿ ಎಂಬ ಲೇಖಕರ ಸಣ್ಣ ಸೂಕ್ಷ್ಮವನ್ನು ಗ್ರಹಿಸಬಹುದಾಗಿದೆ.

ಬಸವರಾಜ ಕಟ್ಟೀಮನಿ ಅವರ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಹೊಂದಿದ, ಬೆಳಗಾವಿ ಸುತ್ತಮುತ್ತಲಿನ ಪರಿಸರದಲ್ಲಿ ರಚನೆಯಾದ ಕಾದಂಬರಿ ಸ್ವಾತಂತ್ರ್ಯದೆಡೆಗೆ. ಈ ಕೃತಿಯಲ್ಲಿ ರೈತರು ಬೆಳೆದ ಫಸಲನ್ನು ಮಾರುಕಟ್ಟೆಗೆ ಸಾಗಿಸಿ ಊರುಗಳಿಗೆ ಹಿಂದಿರುಗುವಾಗ ಎತ್ತಿನಗಾಡಿಗಳಲ್ಲಿ ತಮ್ಮದೇ ಧಾಟಿಯಲ್ಲಿ

"ಖಾದಿಯ ಉಡಿರೆಂದ
ಖಾದಿಯ ತೊಡಿರೆಂದ
ಕಾಯ್ದೇ ಭಂಗಾವ ಮಾಡಿರೆಂದ
ಹಿಂದೂಸ್ಥಾನಕೆ ಸ್ವಾತಂತ್ರ್ಯ
ಗಾಂಧಿ ಹೇಳ್ಯಾನ ಒಂದೇ ಮಂತ್ರ
ನೂಲಂತ್ಹೇಳ್ಯಾನ ನಮ್ಮ ಜಂತ್ರ
ಸರ್ಕಾರಿ ಚಾಕರಿ ಕೊರಕಲಿಗ್ಹಾಕಿರಿ
ಎಂಥಾ ಶ್ಯಾಣ್ಯಾ ಮಹಾತ್ಮಾ ಗಾಂಧಿ
ಹಿಂದೂಸ್ಥಾನಕ ಅವನೇ ತಂದಿ
(ಸ್ವಾತಂತ್ರ್ಯದೆಡೆಗೆ, ಪುಟ-೪೦, ೧೯೪೬).

ಭಾರತವು ಹಲವಾರು ಸಮಸ್ಯೆಗಳಿಗೆ ಸಿಕ್ಕು ಜರ್ಜರಿತವಾಗಿ ಬಿರುಗಾಳಿಗೆ ಸಿಕ್ಕ ಹಡಗಿನಂತಾಗಿದೆ. ಈ ಹಡಗನ್ನು ದಡ ಸೇರಿಸಲು ಮತ್ತು ಬ್ರಿಟಿಷರನ್ನು ದೇಶದಿಂದ ಹೊರಗೆ ಹಾಕಲು ಖಾದಿಯನ್ನು ಉತ್ಪತ್ತಿ ಮಾಡಿ, ಬಳಕೆ ಮಾಡಿ ಬ್ರಿಟಿಷ್ ಸರ್ಕಾರವನ್ನು ಅತಂತ್ರಗೊಳಿಸಬೇಕು, ಸರ್ಕಾರಿ ನೌಕರಿಯನ್ನು ಬಿಟ್ಟುಬಿಡಿ ಎಂದು ಗಾಂಧೀಜಿ ಹೇಳಿರುವುದನ್ನು, ಅವರ ಮಾತುಗಳೇ ವೇದವಾಕ್ಯಗಳೆಂದು, ದೇಶಕ್ಕೆ ಆತನೇ ತಂದೆ ಎಂದು ಹಳ್ಳಿಯ ಹುಂಬರಿಗೂ ಸಹ ಗೊತ್ತು. ಗಾಂಧೀಜಿಯವರ ತತ್ವಗಳನ್ನು ಚಾಚೂತಪ್ಪದೇ ಪಾಲಿಸುತ್ತಿರುವ ಆ ಹಳ್ಳಿಯ ಸರಳಜೀವಿಗಳ ಗಾಂಧೀಭಕ್ತಿ ದೇಶಪ್ರೀತಿಗಳನ್ನು ಗಮನಿಸಬಹುದು.

ಇದೇ ಕಾದಂಬರಿಯಲ್ಲಿ ಶೇಖರನು ಗೌರಿಗೆ "ಚೆನ್ನವ್ವನ ಹಾಂಗ ನಾವು ಯುದ್ಧ ಮಾಡೂದಕ್ಕಾಗುವುದಿಲ್ಲ. ಕತ್ತಿಗಿತ್ತಿ ಮದ್ದು, ಗುಂಡು ಏನೂ ಇಲ್ಲದಿದ್ದರೂ ನಾವು ಯುದ್ಧ ಮಾಡಬೇಕಾಗೈತಿ" ಎನ್ನುತ್ತಾನೆ. ಆಗ ಗೌರಿ ಅದ್ಯಾಂಗ ಮಾಡಾದು? ಎಂದಾಗ

ಶೇಖರ "ಪರದೇಶಿ ಅರಿವೆ ಕೊಳ್ಳಬಾರದು, ಪರದೇಶಿ ಸಾಮಾನು ಕೊಳ್ಳಬಾರದು–ಸರ್ಕಾರದ ಮಾತು ಕೇಳಬಾರದು, ಮನೆಯೊಳಗೆ ನೂತು ಅರಿವೆ ಮಾಡಿಕೊಳ್ಳಬೇಕು, ಕೋರ್ಟು ಕಚೇರಿಗೆ ಹೋಗಬಾರದು, ಕಾಯ್ದೆಭಂಗ ಮಾಡಬೇಕು, ಸರಕಾರ ಏನಾದರೂ ಮಾಡಿದರ ಸುಮ್ಮನಿರಬಾರದು, ಸತ್ಯಾಗ್ರಹ ಮಾಡಬೇಕು." (ಸ್ವಾತಂತ್ರ್ಯದೆಡೆಗೆ, ಪುಟ–೬೭, ೧೯೪೬) ಮಹಾತ್ಮಾ ಗಾಂಧೀಜಿಯವರು ಯಾವುದೇ ರೀತಿಯ ಪವಾಡಗಳನ್ನು ಮಾಡಲಿಲ್ಲ. ಜನಸಾಮಾನ್ಯರಂತೆ ಅವರೊಂದಿಗೆ ಬೆರೆತರು. ಅವರಂತೆ ಸ್ವಾತಂತ್ರ್ಯಕ್ಕಾಗಿ ಆತೊರೆದವರು ಶ್ರೇಷ್ಠ ಸಂತ, ಅರೆನಗ್ನ ಫಕೀರ ಎಂದು ಬಿಂಬಿಸಿಕೊಂಡವರು. ಕತ್ತಿ–ಕೋವಿ ಹಿಡಿಯಲಿಲ್ಲ ಆದರೂ ಅಹಿಂಸಾ ಎಂಬ ಅಸ್ತ್ರದಿಂದ ಮಾನಸಿಕವಾಗಿ ದೇಶದ ಉದ್ದಗಲಕ್ಕೂ ಬ್ರಿಟಿಷರ ದರ್ಪ, ದೌರ್ಜನ್ಯದಿಂದ ಬಳಲಿ, ಬೆಂಡಾದ ಜನರಿಗೆ ರಕ್ಷಾಕವಚವಾದರು. ಏಕಾಂಗಿಯಾದರೂ ಜನಗಣಮನದ ಅಧಿನಾಯಕರಾದರು. ಅಂತಹ ಮಹಾನ್ ನಾಯಕರು ಜನರಿಗೆ ಸುಲಭವಾಗಿ ಸರ್ಕಾರವನ್ನು, ಅದರ ಕಾರ್ಯಚಟುವಟಿಕೆಗಳನ್ನು ತಿರಸ್ಕರಿಸಬೇಕು ಎಂದು ಸಂದೇಶಿಸಿದರು. ಆ ಅಸಹಕಾರದ ಛಾಯೆಯನ್ನು ಕಟ್ಟೀಮನಿಯವರು ತಮ್ಮ ಕಾದಂಬರಿಯಲ್ಲಿ ಒಂದು ಶಿಕ್ಷಿತ ಪಾತ್ರವು ಅಶಿಕ್ಷಿತ ಪಾತ್ರವೊಂದಕ್ಕೆ ಪರಿಚಯಿಸುವ ಸಣ್ಣ ಸೂಕ್ಷ್ಮವನ್ನು ಹಿಡಿದಿಟ್ಟಿದ್ದಾರೆ.

ಹೀಗೆ ಕನ್ನಡದ ಕಾದಂಬರಿಕಾರರು ರಾಷ್ಟ್ರೀಯತೆಯ ಪರಿಕಲ್ಪನೆ ಹೊಂದಿದ ಕಾದಂಬರಿಗಳಲ್ಲಿ ಗಾಂಧೀಜಿಯವರ ವಿಚಾರಗಳನ್ನು ತಮ್ಮದೇ ಆದ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಅದರಂತೆ ತೆಲುಗು ಕಾದಂಬರಿಕಾರರು ತಮ್ಮ ಕಾದಂಬರಿಗಳಲ್ಲಿ ಗಾಂಧೀಜಿಯವರ ವಿಚಾರಗಳನ್ನು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ಈ ಕೆಳಗೆ ನೋಡಲಾಗಿದೆ.

ಅಡವಿ ಬಾಪಿರಾಜು ಅವರ ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್–ಶಾರದ ಮದುವೆಯಲ್ಲಿ ಗಂಡಿನ ಕಡೆಯವರಿಗೆ ಕಾದಿ ಪಂಚೆ, ಕಾದಿ ಟವ್ವಲು, ಖಾದಿ ಶಾಲು ಸ್ವದೇಶಿ ವಸ್ತ್ರಗಳನ್ನು ಬಳಕೆಗೆ ನೀಡುತ್ತಾರೆ. ನಾರಾಯಣರಾವ್, ರಾಜಾರಾವು, ರೋಹಿಣಿ, ನಳಿನಿದೇವಿ, ಸರಳ ಎಲ್ಲರೂ ಊಟಕ್ಕಾಗಿ ಹೋಟೆಲ್‌ಗೆ ಹೋಗಿದ್ದಾಗ, ಊಟವನ್ನು ಬಡಿಸುವ ಬ್ರಾಹ್ಮಣ ಯುವಕರು ಬಿಳಿಯ ಗಾಂಧೀ ಟೋಪಿಯನ್ನು ಧರಿಸಿಕೊಂಡಿರುತ್ತಾರೆ. (ನಾರಾಯಣರಾವ್, ಪುಟ–೬೧, ೨೭೮, ೧೯೩೪) ಭಾರತೀಯ ದೇಶ ಹಲವು ಸಂಸ್ಕೃತಿಗಳ ನಾಡು. ಮದುವೆಗೆ ಭಾರತ ದೇಶದಲ್ಲಿ ಬಹಳ ಗೌರವ ಉನ್ನತ ಸ್ಥಾನವಿದೆ. ಅಂತಹ ಸಾಮೂಹಿಕ ಕಾರ್ಯಕ್ಕೆ ಎಲ್ಲರೂ ಖಾದಿಯನ್ನು ತೊಟ್ಟಿರುವುದು ವಿಶೇಷ ಮತ್ತು ಸ್ವದೇಶಿ ವಸ್ತು ಬಳಕೆ, ವಿದೇಶ ವಸ್ತು ಬಹಿಷ್ಕಾರದ ಸೂಚನೆಯಾಗಿರುತ್ತದೆ. ಮದುವೆ ಮತ್ತು ಹೋಟೆಲ್‌ಗಳಿಗೆ ಸಾಮಾನ್ಯವಾಗಿ ಜನರು ಯಥೇಚ್ಛವಾಗಿ ಸೇರುತ್ತಾರೆ. ಅಲ್ಲಿ ಖಾದಿ ಬಳಕೆ ಮಾಡಿರುವುದು ಲೇಖಕರಿಗೆ ಗಾಂಧೀಜಿಯವರ ಮೇಲಿನ ಗೌರವ, ಅಭಿಮಾನ, ಭಕ್ತಿ, ಆಂಧ್ರಪ್ರದೇಶವನ್ನು ಖಾದಿಯ ನಾಡನ್ನಾಗಿ ಮಾಡುವ ಅವರ ಹಂಬಲ ಗಾಂಧೀಜಿಯವರ ಮೇಲಿನ ಪ್ರಭಾವವನ್ನು ಗುರುತಿಸಬಹುದಾಗಿದೆ.

ಇದೇ ಕಾದಂಬರಿಯಲ್ಲಿ ನಾರಾಯಣರಾವ್ ರಾಣಮಹೇಂದ್ರವರದಲ್ಲಿ ವಕೀಲ ವೃತ್ತಿಯನ್ನು ಆರಂಭಿಸಬೇಕು ಎಂದು ಆಲೋಚಿಸುತ್ತಿರುವಾಗ,

ಕನ್ನಡ ಭಾಷಾಂತರ

ಗಾಂಧಿ ಮಹಾತ್ಮ ಕಾಂಗ್ರೆಸ್ಸಿನ ನೇತೃತ್ವ ವಹಿಸಿಕೊಂಡು ಜೈಲಿಗೆ ಹೋಗಿರೆಂದು ಆದೇಶವಿತ್ತರೂ ಸರಿ. ಎಲ್ಲವನ್ನು ತೊರೆದು ಸನ್ಯಾಸಿಯಾದರು ಸರಿಯಾಗಿತ್ತೇನೋ? ಸ್ಮಶಾನ ವೈರಾಗ್ಯವೇ? ತನ್ನಲ್ಲಿ ಸ್ಫೂರ್ತಿ ಶಕ್ತಿ ಇಲ್ಲವೇ? ತಲೆಗಳು ಬೋಡಾಗಿದ್ದರೂ ಬಾಗಿಲುಗಳು ಬೋಡಾಗಿರುವುದಿಲ್ಲ. ಯಾವುದೇ ರೀತಿಯಲ್ಲಾದರೂ ದೇಶಸೇವೆ ಮಾಡಬೇಕು. ಖಾದಿ ಉತ್ಪತ್ತಿಯ ಅಥವಾ ಖಾದಿ ಕಾರ್ಖಾನೆಯನ್ನಾದರೂ ಪ್ರಾರಂಭಿಸಬೇಕು. (ಮೂಲ; ಅನುಬಂಧ-೩ ಅಧ್ಯಾಯ-೧೦ ಕ್ರಸಂ. ೬)

ಈ ಮಾತುಗಳಲ್ಲಿ ತನ್ನ ಸ್ವಂತ ಜೀವನದ ಬಗೆಗಿನ ಬೇಸರ ದೇಶಸೇವೆ ಕುರಿತು ಕನವರಿಕೆ, ಖಾದಿ ಉತ್ಪತ್ತಿ ಕುರಿತು ಆಶಯ ಅಭಿವ್ಯಕ್ತಿಯನ್ನು ಗಮನಿಸಬಹುದು. ದೇಶಸೇವೆಯೇ ಈಶ ಸೇವೆ ಎಂದು ಗಾಂಧೀಜಿಯವರು ಯಾವ ಸಂದೇಶವನ್ನು ನೀಡಿದರೂ ಶಿರಸಾವಹಿಸಿ ತನ್ನ ದೇಶಕ್ಕಾಗಿ ಅರ್ಪಣಾಭಾವದಿಂದ ಪಾಲಿಸುತ್ತಿದ್ದೆ ಎಂಬ ಈತನ ಮಾತುಗಳಲ್ಲಿ ತಿಳಿಯಬಹುದಾಗಿದೆ.

ಇದೇ ಕಾದಂಬರಿಯಲ್ಲಿ ಗಾಂಧೀಜಿಯವರು ಕೇವಲ ಭಾರತ ದೇಶದಲ್ಲಿ ಮಾತ್ರವೇ ಜನಪ್ರಿಯ ನಾಯಕರಾಗಿದ್ದಲ್ಲದೆ, ವಿದೇಶಗಳಲ್ಲಿಯೂ ಮನ್ನಣೆ ಗಳಿಸಿರುವುದು ಕಂಡುಬರುತ್ತದೆ. ಇದಕ್ಕೆ ನಿದರ್ಶನ ಅಮೇರಿಕದ ರೌನಾಲ್ಡ್‌ಸನ್ ಮತ್ತು ಆತನ ಸತಿ ಅವರ ಮಾತುಗಳು ಹೀಗಿವೆ.

ಕನ್ನಡ ಭಾಷಾಂತರ

ಗಾಂಧೀಜಿ ಪ್ರಾರಂಭಿಸಿದ ಚಳವಳಿ ಕ್ರೈಸ್ತ ಧರ್ಮಪರವಾದುದೆಂದು ಆಂಗ್ಲರು ನೋಡಿದ ತಕ್ಷಣ ಅವರಿಗೆ ತಾವು ಮಾಡಿದ ಕೃತ್ಯಗಳು ತಪ್ಪು ಎಂದು ತಿಳಿಯಪಡಿಸಿ, ಆಂಗ್ಲ ಸಾಮ್ರಾಜ್ಯದಲ್ಲೋ, ಬೇರೆ ಕಡೆಯಲ್ಲೋ, ಅವರೊಂದಿಗೆ ವಿಶ್ವಾಸದಿಂದ ಜೀವಿಸುವುದು ಉತ್ತಮವೆಂದು, ಗಾಂಧೀಜಿಯವರ ಬೋಧನೆಗಳೇ ಈ ಬದಲಾವಣೆಗೆ ಕಾರಣ. ಆಂಗ್ಲ ಪರಿಪಾಲನೆಯನ್ನು ಯಾವುದೇ ಕಾರಣಕ್ಕೂ ದ್ವೇಷಿಸದೆ ಅವರ ಪ್ರಾಣವೇ ನಮ್ಮ ಪ್ರಾಣವೆಂದುಕೊಂಡು ಅವರ ಮನಃಪರಿವರ್ತನೆ ಮಾಡಲು ತೊಡಗಬೇಕು. (ಮೂಲ; ಅನುಬಂಧ-೩ ಅಧ್ಯಾಯ-೧೦ ಕ್ರಸಂ. ೭)

ಇಲ್ಲಿ ಭಾರತ ದೇಶದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿಯೂ ಗಾಂಧೀಜಿಯ ಪ್ರಭಾವ ಪ್ರೇರಣೆ, ಅವರು ಹಳ್ಳಿಯಿಂದ-ದಿಲ್ಲಿಯವರೆಗೆ ದೇಶ-ವಿದೇಶಗಳಲ್ಲಿ ಚಿರಪರಿಚಿತರೂ ಎಂಬುದು ಕಂಡುಬರುತ್ತದೆ. ಶತ್ರುಗಳನ್ನು ದ್ವೇಷದಿಂದ, ಹಿಂಸೆಯಿಂದ ಗೆಲ್ಲಲು ಸಾಧ್ಯವಿಲ್ಲ. ಪ್ರೀತಿ, ವಿಶ್ವಾಸದಿಂದ ಗೆಲ್ಲಬೇಕು ಎಂಬ ಗಾಂಧೀಜಿಯವರ ತತ್ವಗಳನ್ನು ಪಾಲಿಸುತ್ತಿರುವುದು, ಅವರ ಈ ಸತ್ಯ, ಸಂಯಮ, ಅಹಿಂಸಾ ತತ್ವಗಳಿಂದಲೇ ಗಾಂಧೀಜಿ ಮಹಾತ್ಮ ಆಗಿರುವುದು ಎನಿಸುತ್ತದೆ. ಆದರೆ ಗಾಂಧೀಜಿಯವರ ಈ ತತ್ವಗಳಿಗೆ ವಿರುದ್ಧವಾಗಿ ಪ್ರಸ್ತುತ ಸಂದರ್ಭವಿದೆ.

ಇದೇ ಕಾದಂಬರಿಯಲ್ಲಿ ಒಬ್ಬ ಮನೆಕೆಲಸದವಳು ಕೊರಳಲ್ಲಿನ ಬಂಗಾರದ ಸರವನ್ನು ಕದ್ದು ಹೋಗುತ್ತಿರುವಾಗ ಸೆರೆಯಾಗುತ್ತಾಳೆ. ಆಗ ಕೆಲವರು ಪೊಲೀಸರಿಗೆ ಒಪ್ಪಿಸು ಎಂದು ಹೇಳಿದಾಗ ಸೂರಮ್ಮ ಎಂಬಾಕೆಯು ತನ್ನ ಗಂಡನಿಗೆ ಹೇಳುವ ಮಾತುಗಳು ಹೀಗಿವೆ.

ಕನ್ನಡ ಭಾಷಾಂತರ

ಅದೇನ್ರಿ, ನೀವು ಗಾಂಧೀಜಿಯವರ ತತ್ವಗಳನ್ನು ಮರೆತಿದ್ದೀರಾ! ಹೋಗಲಿ ಬಿಡಿ, ಅದನ್ನು ಮರೆತುಬಿಡಿ. ಹಾಗೆ ಮಾಡುವುದು ತಪ್ಪು ಎಂದು ಬುದ್ದಿವಾದ ಹೇಳೋಣ (ಮೂಲ; ಅನುಬಂಧ-೩ ಅಧ್ಯಾಯ-೧೦ ಕ್ರಸಂ. ೮)

ಗಾಂಧೀಜಿಯವರು ದೇಶದ ನಾಯಕತ್ವದ ಚುಕ್ಕಾಣಿ ಹಿಡಿದಿದ್ದು, ಅನೇಕ ಯುವಕರು, ಮುದುಕರ ಮೇಲೆ ಅನೇಕ ರೀತಿಯಾಗಿ ಪ್ರಭಾವ ಬೀರಿದ್ದಾರೆ. ಅದರಂತೆ ಸ್ತ್ರೀಯರು ಸಹ ಹೊರತಾಗಿಲ್ಲ. ಕಳ್ಳತನ ಮಾಡಿದ ವ್ಯಕ್ತಿಯನ್ನು ಪೊಲೀಸರ ವಶಕ್ಕೆ ಒಪ್ಪಿಸದೆ ಬುದ್ದಿವಾದ ಹೇಳಿ ಬಿಟ್ಟುಬಿಡೋಣ ಎಂಬ ಸೂರಮ್ಮಳಲ್ಲಿನ ಮಾನವೀಯತೆ, ಆತ್ಮಪ್ರಜ್ಞೆ, ಗಾಂಧೀಜಿಯವರ ತತ್ವಗಳ ಪರಿಪಾಲನೆಯನ್ನು ಕಾಣಬಹುದಾಗಿದೆ. ಆ ಸಂದರ್ಭದಲ್ಲಿ ಗಾಂಧೀಜಿ ಮತ್ತು ತತ್ವಗಳು ಗಂಡನಿಗಿಂತ, ಚಿನ್ನ, ಬೆಳ್ಳಿ, ಬಂಗಾರಕ್ಕಿಂತ ಅಮೂಲ್ಯವಾದ ಸಂಜೀವಿನಿಯಂತೆ ಎಂಬುದನ್ನು ತಿಳಿಯಬಹುದಾಗಿದೆ. ಇದೇ ಕಾದಂಬರಿಯಲ್ಲಿ ಶ್ಯಾಮಸುಂದರಿದೇವಿ

ಕನ್ನಡ ಭಾಷಾಂತರ

ರಾಷ್ಟ್ರೀಯ ದಿನಾಚರಣೆಗಳಂದು ಕೇರಿ ಕೇರಿ ತಿರುಗಿ ಖಾದಿಯನ್ನು ಮಾರುವುದು. ಸ್ವದೇಶಿ ವಸ್ತುಗಳನ್ನು ಮಾರುತ್ತಿರುವುದು. ಗ್ರಾಮ ಗ್ರಾಮಗಳಿಗೆ ಭೇಟಿ ನೀಡಿ ಹೆಂಡ ಕುಡಿಯಬೇಡಿರೆಂದು, ಹಿಂದೂ-ಮುಸ್ಲಿಂರು ಕೂಡಿ ಬಾಳುವವರೆಗೂ ದೇಶಕ್ಕೆ ಸ್ವರಾಜ್ಯ ದಕ್ಕುವುದಿಲ್ಲ ಎಂದು ಭೋದಿಸುತ್ತಾಳೆ. (ಮೂಲ; ಅನುಬಂಧ-೩ ಅಧ್ಯಾಯ-೧೦ ಕ್ರಸಂ. ೯) ದೇಶದ ಜನತೆಯನ್ನು ಸ್ವಾತಂತ್ರ್ಯಕ್ಕಾಗಿ ಒಗ್ಗೂಡಿಸುವುದು, ಅವರಲ್ಲಿ ರಾಷ್ಟ್ರಾಭಿಮಾನವನ್ನು ಬೆಳೆಸುವುದು ತುಂಬಾ ಮಹತ್ವದ ಕೆಲಸವಾಗಿತ್ತು. ಅದರಿಂದ ಜನರಲ್ಲಿ ಜಾಗೃತಿ ಬೆಳೆಸಲು ರಾಷ್ಟ್ರೀಯ ದಿನದಂದು ಗಾಂಧೀಜಿಯವರು ಬಳಕೆಗೆ ತಂದ ಖಾದಿ, ಸ್ವದೇಶಿ ವಸ್ತು ಉಪಯೋಗ, ಮಧ್ಯಪಾನ ನಿಷೇಧ, ಹಿಂದೂ-ಮುಸ್ಲಿಂರಲ್ಲಿನ ಐಕ್ಯತಾ ಮನೋಭಾವ ಮುಂತಾದ ರಚನಾತ್ಮಕ ಕಾರ್ಯಗಳ ಬಗ್ಗೆ ಅರಿವು ಮೂಡಿಸುವುದು ಶ್ಯಾಮಸುಂದರಿ ದೇವಿಯಲ್ಲಿನ ದೇಶಭಕ್ತಿ, ಸ್ತ್ರೀ ಮುಂದಾಳತ್ವ, ಸ್ವಾತಂತ್ರ್ಯದ ಬಯಕೆ, ಧೈರ್ಯ, ತ್ಯಾಗ ಮನೋಭಾವವನ್ನು ಗುರುತಿಸಬಹುದು.

ಇದೇ ಕಾದಂಬರಿಯಲ್ಲಿ ರಾಜೇಶ್ವರನು ಸುಬ್ಬಯ್ಯಶಾಸ್ತ್ರಿ ಅವರ ಪತ್ನಿಯಾದ ಪುಷ್ಪಶೀಲಳನ್ನು ಕರೆದುಕೊಂಡು ಬಂದಾಗ ನಾರಾಯಣನು ಹೇಳುವ ಮಾತುಗಳು ಹೀಗಿವೆ.

ಪರಸ್ತ್ರೀ, ಪರರ ಸಂಪತ್ತಿಗೆ ಆಸೆಪಡುವುದು ಬೇರೆಯವರನ್ನು ಹಿಂಸಿಸಿದಂತೆಯೇ ಅದು ಪಾಪಕೃತ್ಯ. ಅಹಿಂಸೆಯನ್ನು ಆಧಾರವಾಗಿಸಿಕೊಂಡು ನೀನು ಕೆಲಸ ಮಾಡುವುದು ಸಾಧ್ಯವಿಲ್ಲ (ಮೂಲ; ಅನುಬಂಧ-೩ ಅಧ್ಯಾಯ-೧೦ ಕ್ರಸಂ. ೧೦) ಜಗತ್ತಿನ ಎಲ್ಲೆಡೆಯಲ್ಲಿಯೂ ಮಾನವ ದಾನವನಂತೆ ವರ್ತಿಸುವ ಸಂದರ್ಭದಲ್ಲಿ ಬುದ್ಧ, ಕ್ರಿಸ್ತ, ಗಾಂಧೀಜಿಯಂಥವರು ತ್ಯಾಗ ತಪಸ್ಸುಗಳ ಮೂಲಕ ಜನರನ್ನು ನೈತಿಕತೆಯ ಕಡೆಗೆ ಆಕರ್ಷಿಸುತ್ತಿರುವುದಲ್ಲದೆ, ಎಲ್ಲೆಲ್ಲೂ ದೈವೀಪ್ರಜ್ಞೆಯ ಬೆಳಕನ್ನು ಚಿಮ್ಮಿದ್ದಾರೆ. ಗಾಂಧೀಜಿಯವರ ಪ್ರಬಲ ತತ್ವಗಳಲ್ಲಿ ಪ್ರಮುಖವಾದವು ಸತ್ಯ, ಅಹಿಂಸೆಗಳು. ಅವರ ಅಹಿಂಸೆಯನ್ನು ಮೂಲವಾಗಿಸಿಕೊಂಡು ಅನ್ಯಾಯವನ್ನು ಮಾಡಬಾರದು, ಪರಸ್ತ್ರೀ ಸಂಗ ಮಾಡಬಾರದು, ಪರಸಂಪತ್ತಿಗೆ ಆಸೆ ಪಡಬಾರದು ಅವು ಮನುಷ್ಯರನ್ನು ದೈಹಿಕವಾಗಿ ಅಲ್ಲದೆ ಮಾನಸಿಕವಾಗಿ ಚಿತ್ರಹಿಂಸೆ ನೀಡುತ್ತವೆ. ಸಮಾಜದಲ್ಲಿನ ಅನ್ಯಾಯ, ಕೌಟುಂಬಿಕ ಕಲಹ, ಅಕ್ರಮ ಸಂಬಂಧಗಳಿಗೆ ನೀಡಿದ ಸಂದೇಶವನ್ನು ಲೇಖಕರು ಈ ರೀತಿಯಾಗಿ ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

೨೦ನೆಯ ಶತಮಾನದ ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ತುಂಬಾ ವಿಶಿಷ್ಟವಾದ ಸ್ಥಾನವನ್ನು ಪಡೆದಿರುವುದು ಕಾದಂಬರಿ ಉನ್ನವ ಲಕ್ಷ್ಮೀನಾರಾಯಣ ಅವರು ಬರೆದ 'ಮಾಲಪಲ್ಲಿ'. ಈ ಕಾದಂಬರಿಯಲ್ಲಿ ಸಂಗದಾಸ ರಾಮಾನುಜ ಮತಸ್ಥ. ಈತನು ಕೂಲಿಗಳಿಗೆ ಹೆಚ್ಚಿನ ಕೂಲಿಯನ್ನು ಕೊಡಬೇಕೆಂದು ಹೋರಾಟ ನಡೆಸುತ್ತಾನೆ. ಮತ್ತು ಆದಿಮಾಂಧ್ರ ಸಭೆಗೆ ಹೋಗಿರುವಾಗ ಸಂಗದಾಸ, ಚೌದರಯ್ಯ ಎಂಬ ಶ್ರೀಮಂತನ ಮಗ ರಾಮಾನಾಯುಡು ಒಂದೇ ತಟ್ಟೆಯಲ್ಲಿ ಊಟ ಮಾಡಿರುತ್ತಾರೆ. ಆಗ ಚೌದರಯ್ಯ ಸಂಗದಾಸ ಮಾದಿಗ ಎಂಬ ಕಾರಣದಿಂದ ಕುಪಿತನಾದ ಚೌದರಯ್ಯ ಪ್ರಳಯರುದ್ರನಾಗಿ ಒನಕೆಯಿಂದ ಸಂಗದಾಸನ ತಲೆಗೆ ಹೊಡೆದು ಸಾಯಿಸುತ್ತಾನೆ. ಇಷ್ಟೆಲ್ಲಾ ಆದರೂ ಸಂಗದಾಸನ ತಂದೆ ರಾಮದಾಸನಿಗೆ ಚೌದರಯ್ಯನ ಮೇಲೆ ಎಂತಹ ದ್ವೇಷ ಮನೋಭಾವವನ್ನು ಸಹ ತಾಳುವುದಿಲ್ಲ. ಸಂಗದಾಸನ ಮರಣವನ್ನು ರಾಮದಾಸನು ವಿಧಿವಶ ಎಂದುಕೊಳ್ಳುತ್ತಾನೆ. ಹತ್ಯೆ ಮಾಡಿದ್ದು ಚೌದರಯ್ಯ ಎಂದು ಗೊತ್ತಿದ್ದರೂ ಆತನ ಮೇಲೆ ಅನುಮಾನವಿದೆ ಎಂದು ಪೊಲೀಸರಿಗೆ ಕೂಡ ಹೇಳುವುದಿಲ್ಲ. ಈ ಎಲ್ಲಾ ಅಂಶಗಳು ಗಾಂಧೀಜಿಯವರ ಭಾವನೆಗಳು, ಚಿಂತನೆಗಳು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ತಂದೆಗೆ ತಕ್ಕ ಮಗನಾದ ಸಂಗದಾಸ ಮಾಲಪಲ್ಲಿಯಲ್ಲಿ ಹತ್ತಿ ಕುರಿತು, ಹೊಗೆಸೊಪ್ಪಿನ ದುಷ್ಪರಿಣಾಮ ಬಗ್ಗೆ ತಿಳುವಳಿಕೆ, ರಾಟೆ, ಹಿಂದೂ-ಮುಸ್ಲಿಂ ಸಂಬಂಧದ ಅರಿವಿನ ಬಗ್ಗೆ, ಮಧ್ಯಪಾನದ ಕುರಿತ ಜ್ಞಾನ, ದಲಿತರಿಗಾಗಿ ದೇವಸ್ಥಾನಗಳ ನಿರ್ಮಾಣ, ಶಾಲೆಗಳ ವ್ಯವಸ್ಥೆ, ಹೊಲೆಯರ ಕೇರಿಯನ್ನು ತಪೋವನವಾಗಿಸುತ್ತೇನೆ ಎಂಬ ಆಶಯವನ್ನು ಹೊಂದಿರುತ್ತಾನೆ. ಇಲ್ಲಿ ಸಂಗದಾಸ ಗಾಂಧೀಜಿಯವರ ತತ್ವಗಳನ್ನು ಜೀವಂತವಾಗಿರಿಸಿದ್ದು, ಆ ತತ್ವಗಳನ್ನು ಸಮಾಜದಲ್ಲಿ ಬಿತ್ತರಿಸಲು ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ.

ಮತ್ತು ಸಂಗದಾಸ ಅಕ್ಷರಶಃ ಗಾಂಧೀ ಅನುಯಾಯಿ ಎಂಬುದನ್ನು ಈ ಮೂಲಕ ಲೇಖಕರು ಚಿತ್ರಿಸಿದ್ದಾರೆ. ಇದೇ ಕಾದಂಬರಿಯಲ್ಲಿ ಹರಿಜನೋದ್ಧಾರಣ ಸಭೆಯಲ್ಲಿ ಸಂಗದಾಸನನ್ನು ಅಭಿಮಾನಿಸುವ ಸಭಾಪತಿ ವೆಂಕಟರೆಡ್ಡಿ ಅವರ ಮಾತುಗಳು ಹೀಗಿವೆ.

ಕನ್ನಡ ಭಾಷಾಂತರ

ನಮ್ಮ ಚಳವಳಿ ಪವಿತ್ರವಾದದ್ದು. ಅದರ ಮುಂದೆ ದ್ವೇಷಕ್ಕೆ ಎಡೆಯಿಲ್ಲ. ದ್ವೇಷಪೂರಿತವಾದ ಚಳುವಳಿಗಳಾವುವೂ ಗಟ್ಟಿನೆಲೆ ಕಾಣುವುದಿಲ್ಲ. ಶತ್ರುತ್ವ ದ್ವೇಷಗಳನ್ನು ಇಲ್ಲವಾಗಿಸು ಎಂದು ಭಗವಂತನನ್ನು ನಾವೆಲ್ಲ ಪ್ರಾರ್ಥಿಸೋಣ (ಮೂಲ; ಅನುಬಂಧ–೩ ಅಧ್ಯಾಯ–೧೦ ಕ್ರಸಂ. ೧೧) ಕಾರ್ಮಿಕರು, ಕೂಲಿಗಳ ನೆಮ್ಮದಿಗಾಗಿ ನಡೆಸುವ ಹೋರಾಟ ಶಾಂತರೀತಿಯಿಂದ ಇರಬೇಕು. ಸತ್ಯ, ಅಹಿಂಸೆಯಿಂದ ಐಕ್ಯಮತ್ಯದಿಂದ ಕೂಡಿರಬೇಕು ಎಂಬ ನುಡಿಗಳನ್ನು ವೆಂಕಟರೆಡ್ಡಿ ಅವರ ಮಾತುಗಳಲ್ಲಿ ಗಮನಿಸಬಹುದು.

ಇದೇ ಕಾದಂಬರಿಯಲ್ಲಿ ಶ್ರೀಮಂತ ಚೌದರಯ್ಯನ ಮಗ ರಾಮನಾಯುಡು ಸಂಗದಾಸ ಮತ್ತು ಕೂಲಿ ಆಳುಗಳೊಂದಿಗೆ ತಮ್ಮ ಹೊಲಕ್ಕೆ ಕೊಯ್ಲು ಕೊಯ್ಯುವುದಕ್ಕೆ ಹೋಗುತ್ತಾನೆ. (ಮಾಲಪಲ್ಲಿ, ಪುಟ–೮೨, ೧೯೨೧) ಈ ಸಂದರ್ಭ 'ಕಷ್ಟಪಟ್ಟು ಕೂಲಿ ಮಾಡದೆ ಅನ್ನ ತಿನ್ನುವುದು ಕಳ್ಳತನಕ್ಕೆ ಸಮಾನ' ಎಂಬ ಗಾಂಧೀಜಿಯವರ ಮಾತನ್ನು ನೆನಪಿಸುತ್ತದೆ. ಇದರ ಪ್ರಕಾರ ಧನಿಕರು, ದಲಿತರು, ಬಡವರು ಎಲ್ಲರೂ ದುಡಿದು ಅನ್ನ ತಿನ್ನುವ ಹಕ್ಕನ್ನು ಪಡೆದುಕೊಳ್ಳಬೇಕು ಎಂಬುದನ್ನು ತಿಳಿಸುತ್ತದೆ. ಅಲ್ಲದೆ ರಾಮಾನಾಯುಡು ಗಾಂಧೀಜಿಯವರ ಚಿಂತನೆ, ತತ್ವಗಳಿಗೆ ಆಕರ್ಷಿತನಾಗಿ ಪ್ರಭಾವಿತನಾಗಿರುವುದು ಕಂಡುಬರುತ್ತದೆ. ಗಾಂಧೀಜಿ ಚಳವಳಿಯ ನೇತೃತ್ವವಹಿಸಿದಾಗಿನಿಂದಲೂ ಮೇಲ್ವರ್ಗದವರ ವಿರೋಧಿಯಾಗಿಯೇ ಚಿತ್ರಿತವಾಗಿರುವುದು ಅಲ್ಪಸ್ವಲ್ಪ ಕಂಡುಬರುತ್ತದೆ. ಆದರೆ ಈ ಕಾದಂಬರಿಯಲ್ಲಿ ಗಾಂಧೀಜಿಯರ ಚಿಂತನೆಗಳಿಗೆ ಮೇಲ್ವರ್ಗದ ಚೌದರಯ್ಯ ವಿರೋಧಿಸುತ್ತಿದ್ದರೂ, ಆತನ ಮಗ ರಾಮಾನಾಯುಡು ನ್ಯಾಯದ ಪರವಾಗಿ, ಗಾಂಧೀಜಿ ತತ್ವಕ್ಕೆ ಬೆಂಬಲವಾಗಿರುವುದನ್ನು ಲೇಖಕರು ಚಿತ್ರಿಸಿದ್ದಾರೆ.

ಇದೇ ಕಾದಂಬರಿಯಲ್ಲಿ ಸೆಟಲ್ಮೆಂಟುಗಳಲ್ಲಿ ಬ್ರಿಟಿಷ್ ಅಧಿಕಾರಿಗಳು ಪ್ರತಿದಿನ ಕ್ರಿಶ್ಚಿಯನ್ ಧರ್ಮದ ಕುರಿತಾಗಿ ಪ್ರಾರ್ಥನೆ, ಬೋಧನೆ ಮಾಡುತ್ತಿರುತ್ತಾರೆ. ಕೈದಿಗಳಾದ ಪುಲ್ಲಯ್ಯ, ರಾಮದಾಸರಿಗೆ ಆ ಪಾಠ ಬೋಧನೆ ಇಷ್ಟವಾಗಿರುವುದಿಲ್ಲ. ಆಗ ಅಲ್ಲಿನ ಕೈದಿಗಳಿಗೆ ರಾಮದಾಸ ಪ್ರಾರ್ಥನೆಗೆ ಯಾರೂ ಹೋಗಕೂಡದೆಂದು ಹೇಳುತ್ತಾನೆ. ಪುಲ್ಲಯ್ಯ ಹೆಣ್ಣುಮಕ್ಕಳನ್ನು, ಚಿಕ್ಕ ಮಕ್ಕಳನ್ನು, ಸಾಯಿಸುತ್ತಾರೋ ನೋಡೋಣ ಎಂದು ಹೇಳುತ್ತಾನೆ. ಆಗ ರಾಮದಾಸ,

ಕನ್ನಡ ಭಾಷಾಂತರ

ಹೇಗೆ ಬೇಕೋ ಹಾಗೆ ಹೋಗೋಣ. ಅನಾವಶ್ಯಕವಾಗಿ ಸಾಯಿಸಿದರೆ ಸಾಯಿಸಲಿ. ನಾವು ಮಾತ್ರ ದೌರ್ಜನ್ಯಕ್ಕೆ ಇಳಿಯಬಾರದು" (ಮೂಲ; ಅನುಬಂಧ–೩ ಅಧ್ಯಾಯ–೧೦ ಕ್ರಸಂ. ೧೨)

ಎಂದು ಹೇಳುವಲ್ಲಿ ರಾಮದಾಸನು ಗಾಂಧೀಜಿಯವರ ಅಹಿಂಸಾ ತತ್ವವನ್ನು ಪರಿಪಾಲಿಸುವವನಾಗಿ ಕಂಡುಬರುತ್ತಾನೆ. ಹಿಂಸೆಗೆ ಪ್ರತಿಹಿಂಸೆ ಮಾಡಬಾರದು ಎಂಬುದು ಇಲ್ಲಿ ಕಂಡುಬರುತ್ತದೆ. ಮಹೀಧರ ರಾಮಮೋಹನ್‌ರಾವ್ ಹೆಸರಾಂತ ತೆಲುಗಿನ ಲೇಖಕರಾಗಿದ್ದು ಸ್ವಾತಂತ್ರ್ಯ ಚಳವಳಿಯನ್ನು ಕುರಿತು ಕೊಲ್ಲಾಯಿ ಗಟ್ಟಿತೇನೇಮಿ ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿಯಲ್ಲಿ ನಾರಾಯಣ ರಾಮನಾಥನನ್ನು ಗಾಂಧೀಜಿ ಎಂದು ಜನರಿಗೆ ಪರಿಚಯಿಸುತ್ತಾನೆ. ಹಾಗೆಯೇ ಮುಂದೆ ಹೋಗುತ್ತಿರುವಾಗ ಲಚ್ಚಮ್ಮ ಎಂಬಾಕೆ ಚರಕದಿಂದ ನೂಲು ತೆಗೆಯುತ್ತಿರುತ್ತಾಳೆ. ಅದನ್ನು ನೋಡಿ ರಾಮನಾಥನು ಲಚ್ಚಮ್ಮನನ್ನು ಹೀಗೆ ಕೇಳುತ್ತಾನೆ.

ಕನ್ನಡ ಭಾಷಾಂತರ

"ಇದು ಎಂದಿನಿಂದ ಎನ್ನುತ್ತಾನೆ." ಲಚ್ಚಮ್ಮ – "ಗಾಂಧೀಜಿಯವರು ಆದೇಶಿಸಿದಂತೆ ನೀವೆಲ್ಲ ಜೈಲಿಗೆ ಹೋಗುತ್ತಿದ್ದರೆ, ನಾವು ಈ ಮಾತ್ರದ ಕೆಲಸವನ್ನಾದರೂ ಮಾಡಲು ಸಾಧ್ಯವಿಲ್ಲವೆ." (ಮೂಲ; ಅನುಬಂಧ–೩ ಅಧ್ಯಾಯ–೧೦ ಕ್ರ.ಸಂ. ೧೩)

"ಈ ಆರು ತಿಂಗಳಿನಲ್ಲಿ ನಮಗೆ ಬೇಕಾದ ಪಂಚೆ, ಸೀರೆಗಳನ್ನು ನೇಯ್ದುಕೊಂಡಿದ್ದೇವೆ."

ಸ್ವಾತಂತ್ರ್ಯ ಚಳುವಳಿ ಎಂಬುದು ಬ್ರಿಟಿಷರ, ಅನ್ಯಾಯ, ಅಕ್ರಮ ವ್ಯವಸ್ಥೆ, ಗುಲಾಮಗಿರಿಯ ವಿರುದ್ಧ ಗಂಡು–ಹೆಣ್ಣು ಚಿಕ್ಕವ–ದೊಡ್ಡವ ಎಂದು ಭೇದಬಾವ ಇಲ್ಲದೆ ನಡೆದ ಮಹಾನ್ ಹೋರಾಟ. ಬ್ರಿಟಿಷರ ಅನೀತಿಯನ್ನು ಖಂಡಿಸಬೇಕು ಎಂದು ಗಾಂಧೀಜಿ ದೇಶದ ಜನತೆಗೆ ಕರೆಕೊಟ್ಟಾಗ ಜೈಲುಗಳೆಲ್ಲ ತುಂಬುತ್ತವೆ. ಆಗ ಮನೆಗಳಲ್ಲಿನ ಸ್ತ್ರೀಯರು ಮಾರಾಮಾರಿ ಹೋರಾಟ ಮಾಡದೆ ಗಾಂಧೀಜಿಯವರ ಕರೆಯಂತೆ ಅವರ ಖಾದಿ, ಚರಕಗಳನ್ನು ಬಳಕೆ ಮಾಡುತ್ತ ಸ್ವಾವಲಂಬಿ ಸ್ವತಂತ್ರ ಜೀವನವನ್ನು ನಡೆಸುತ್ತಿರುವಂತಹ ದೇಶಾಭಿಮಾನದ ಸನ್ನಿವೇಶವನ್ನು ಲಚ್ಚಮ್ಮಳ ಮಾತುಗಳಲ್ಲಿ ಕಾಣಬಹುದಾಗಿದೆ.

ಇದೇ ಕಾದಂಬರಿಯಲ್ಲಿ ರಾಮನಾಥನು ರಾಷ್ಟ್ರೀಯತೆಯ ಕುರಿತು ಜಾಗ್ರತೆಯನ್ನು ಮೂಡಿಸಲು ತನ್ನ ಅನುಚರರೊಂದಿಗೆ ಚರ್ಚಿಸಿದ ಯೋಜನೆಗಳು ಈ ಕೆಳಕಂಡಂತಿವೆ.

ಕನ್ನಡ ಭಾಷಾಂತರ

"ಖಾದಿ ಉತ್ಪತ್ತಿಯ ಕಾರ್ಯಕ್ರಮದ ಜವಾಬ್ದಾರಿ ಲಚ್ಚಮ್ಮ ನೋಡಿಕೊಳ್ಳಬೇಕು.

ಊರಿನಲ್ಲಿ ರಾಗಿಮರ (ಅಶ್ವತ್ಥಮರ)ದ ಕೆಳಗೆ ಪತ್ರಿಕೆಯಲ್ಲಿನ ಸುದ್ದಿ ಸಮಾಚಾರವನ್ನು ತಿಳಿಸುವ ಕೆಲಸ ಮತ್ತು ದಲಿತರಿಗೆ ಕೆರೆಯಿಂದಲಾದರೂ, ಬಾವಿಯಿಂದಲಾದರೂ ನೀರಿನ ವ್ಯವಸ್ಥೆಯ ಜವಾಬ್ದಾರಿಯನ್ನು ಶಿವಕಾಮಯ್ಯ ನೋಡಿಕೊಳ್ಳಬೇಕು" ಎಂದು ಹೇಳುತ್ತಾನೆ. (ಮೂಲ; ಅನುಬಂಧ–೩ ಅಧ್ಯಾಯ–೧೦ ಕ್ರ.ಸಂ. ೧೪)

ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಗುಂಪು ಗುಂಪಾಗಿ ರಾಷ್ಟ್ರೀಯತೆಯ ಜಾಗೃತಿಯ ಕೆಲಸ ಮಾಡುವಂತಿರಲಿಲ್ಲ. ಆದರೆ ಸರ್ಕಾರದ ಕಣ್ತಪ್ಪಿಸಿ ಗಾಂಧೀಜಿಯವರನ್ನು ಅನುಸರಿಸುತ್ತಿರುವಂತಹ ಹಳ್ಳಿಯ ಮುಗ್ಧ ಜನರು ಹಲವಾರು ಮಂದಿ ಹಳ್ಳಿಗಳಲ್ಲಿ ಜನರನ್ನು ತಿದ್ದಿ ಬುದ್ಧಿ ಹೇಳುವವರಿದ್ದರು. ಹೆಚ್ಚಿನದಾಗಿ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಗಾಂಧೀಜಿಯವರ ಅನುಯಾಯಿಗಳಾಗಿದ್ದು, ಅವರ ಖಾದಿ, ಚರಕಗಳ ಬಗ್ಗೆ ಜ್ಞಾನವನ್ನು ಮೂಡಿಸುವುದರ ಮೂಲಕ ದೇಶಾಭಿಮಾನವನ್ನು ಉಂಟುಮಾಡುತ್ತಿದ್ದರು. ಜೊತೆಗೆ ಹಳ್ಳಿಗಳಲ್ಲಿ ದಲಿತರ ಶೋಷಣೆ, ಯಥೇಚ್ಛವಾಗಿದ್ದು, ಆ ಅಸಮಾನತೆಯನ್ನು ಹೋಗಲಾಡಿಸಿ, ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಸಾಮಾಜಿಕ ಸ್ವಾತಂತ್ರ್ಯಕ್ಕೆ ಒತ್ತುಕೊಟ್ಟಿದ್ದನ್ನು ಗಮನಿಸಬಹುದು. ಇದೇ ಕಾದಂಬರಿಯಲ್ಲಿ ಗವರಯ್ಯ ಎಂಬ ವ್ಯಕ್ತಿ ದೇಶ ಎಂದರೆ ಪ್ರೀತಿ, ಕಾಂಗ್ರೇಸ್, ಗಾಂಧೀಜಿ ಎಂದರೆ ಎಲ್ಲಿಲ್ಲದ ಭಯ, ಭಕ್ತಿ, ಗೌರವವನ್ನು ಹೊಂದಿರುತ್ತಾನೆ. ಹತ್ತು ಚರಕಗಳನ್ನು ತಯಾರಿಸಬೇಕೆಂದು ಅದಕ್ಕೆ ಬೇಕಾದ ಮರಮುಟ್ಟುಗಳನ್ನು ತಂದು ಹಾಕುತ್ತಾನೆ. (ಕೊಲ್ಲಾಯಿ ಗಟ್ಟಿತೇನೇಮಿ, ಪುಟ–೩೪೭, ೧೯೨೧)

ಅಡವಿ ಬಾಪಿರಾಜು ಅವರ ಕೋನಂಗಿ ಕಾದಂಬರಿಯಲ್ಲಿ ಕೋನಂಗಿ ಡಾಕ್ಟರ್ ರೆಡ್ಡಿ ಅವರ ಮುಖ್ಯ ಸೂತ್ರಗಳು ಹೀಗಿವೆ.

ಕನ್ನಡ ಭಾಷಾಂತರ

"ಮನುಷ್ಯನೆ ಮನುಷ್ಯನಿಗೆ ಅಧಿಕಾರಿ ಹೊರತು ದೇವರೂ ಅಲ್ಲ, ದೆವ್ವವೂ ಅಲ್ಲ. ಯಾವುದು ಮನುಷ್ಯನಿಗೆ ಸರಿಯೆನಿಸುತ್ತದೋ, ಅದೇ ನೈತಿಕತೆ. ಮನುಷ್ಯನ ಉತ್ತಮ ಸ್ಥಿತಿಗೆ ಯಾವ ಮಾರ್ಗ ಕಡಿಮೆ ಖರ್ಚಿನಲ್ಲಿ, ವೇಗವಾಗಿ ನಿಶ್ಚಯದ ಗುರಿಗೆ ಕೊಂಡೊಯ್ಯುತ್ತದೋ ಅದೇ ಸರಿಯಾದ ಮಾರ್ಗ. (ಮೂಲ; ಅನುಬಂಧ–೩ ಅಧ್ಯಾಯ–೧೦ ಕ್ರ.ಸಂ. ೧೫)

ಈ ಮಾತುಗಳು ಮನುಷ್ಯನು ಉತ್ತಮ ಜೀವನವನ್ನು ರೂಪಿಸಿಕೊಳ್ಳುವುದಕ್ಕೆ ಮಹಾತ್ಮ ಗಾಂಧೀಜಿಯವರು ಲೋಕಕ್ಕೆ ಉಪದೇಶಿಸಿದ ಸೂತ್ರಗಳನ್ನು ನೆನಪಿಸುತ್ತಿವೆ. ಗಾಂಧೀಜಿಯರ ತತ್ವ ಚಿಂತನೆಗಳು ದೇಶದ ಸ್ವಾತಂತ್ರ್ಯಕ್ಕೆ ಎಷ್ಟು ಮುಖ್ಯವೋ ವ್ಯಕ್ತಿಯ ಬದುಕಿಗೂ ಅಷ್ಟೇ ಮುಖ್ಯ ಎಂಬುದನ್ನು ತಿಳಿಯಬಹುದು. ಅದೇ ಕಾದಂಬರಿಯಲ್ಲಿ ಡಾಕ್ಟರ್ ರೆಡ್ಡಿ ಕೋನಂಗಿ ಎರಡನೆಯ ಜಾಗತಿಕ ಯುದ್ಧವನ್ನು ಕುರಿತು ಚರ್ಚಿಸುತ್ತಿರುವಾಗ ಕೋನಂಗಿ ಹೇಳಿದ ಮಾತುಗಳು ಹೀಗಿವೆ.

ಕನ್ನಡ ಭಾಷಾಂತರ

ಜಗತ್ತಿಗೆ ಎಂದಾದರೂ ಉತ್ತಮ ಮಾರ್ಗಗಳು ಸತ್ಯ, ಅಹಿಂಸೆಗಳೆ. ಈ ಪರಿಸ್ಥಿತಿಯಲ್ಲಿ ಹಿಂಸಾಮಾರ್ಗವನ್ನು ಅವಲಂಬಿಸಿದ ಎರಡು ದೇಶಗಳ ಪರಿಸ್ಥಿತಿಯನ್ನು ಗಮನಿಸಿದರೆ ಧರ್ಮ ಯಾರ ಕಡೆ ಇದೆಯೋ ಆ ಪಕ್ಷ ಗೆಲ್ಲುತ್ತದೆ ಎಂಬುದು ನನ್ನ ಅನಿಸಿಕೆ. (ಮೂಲ; ಅನುಬಂಧ–೩ ಅಧ್ಯಾಯ–೧೦ ಕ್ರ.ಸಂ. ೧೬)

ಇಲ್ಲಿ ಗಾಂಧೀಜಿಯವರು ಸಾರಿದ ಸತ್ಯ, ಅಹಿಂಸೆ, ನ್ಯಾಯ, ನೀತಿಯಂತಹ ಉತ್ತಮ ಚಿಂತನೆಗಳು ಕೇವಲ ಭಾರತ ದೇಶದ ವ್ಯಾಪ್ತಿಯಡಿಯಲ್ಲಿ ಅಲ್ಲದೆ, ಜಗತ್ತಿನ ಹಿತಚಿಂತನೆಗೆ ಅವಶ್ಯಕವಾಗಿವೆ ಎಂಬುದನ್ನು ತಿಳಿಯಬಹುದಾಗಿದೆ. ಎಂದಿದ್ದರೂ ಧರ್ಮ ಗೆಲ್ಲುತ್ತದೆ. ಅಧರ್ಮ ಸೋಲುತ್ತದೆ ಎಂಬ ಅಂಶವನ್ನು ಕೋನಂಗಿಯ ಮಾತುಗಳಲ್ಲಿ ಗಮನಿಸಬಹುದು.

ಹೀಗೆ ಕನ್ನಡ-ತೆಲುಗು ಕಾದಂಬರಿಗಳಲ್ಲಿ ಗಾಂಧೀಜಿಯವರ ಚಿಂತನೆ, ತತ್ವಗಳು ಒಂದಲ್ಲ ಒಂದು ರೀತಿಯಾಗಿ ಕಾಣಿಸಿಕೊಂಡಿವೆ. ಗಾಂಧೀಜಿಯವರ ತತ್ವಗಳು ಕಾದಂಬರಿಗಳಲ್ಲಿ ಕ್ರಾಂತಿಕಾರಕವಾಗಿ ಚಿತ್ರಿತಗೊಂಡಿರುವುದು ಕಂಡುಬಂದರೆ, ತೆಲುಗಿನ ಕಾದಂಬರಿಗಳಲ್ಲಿ ಅದೇ ಚಿಂತನೆಗಳು ಮಂದವಾಗಿ ಚಿತ್ರಿತಗೊಂಡಿವೆ. ಕನ್ನಡದ ಕಾದಂಬರಿಗಳು ದೇಶಬಂಧನ ವಿಮುಕ್ತಿಗೊಂಡ ನಂತರ ರಚನೆಯಾಗಿರುವುದು ಕಂಡುಬಂದರೆ, ತೆಲುಗಿನ ಕಾದಂಬರಿಗಳು ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ರಚನೆಗೊಂಡಿರುವುದು ಇದರಿಂದ ತಿಳಿಯುತ್ತದೆ. ಹಾಗೂ ಗಾಂಧೀಜಿಯವರ ಪರವಾದ ಮತ್ತು ವಿರೋಧವಾದ ವಿಚಾರಗಳು ಉಭಯ ಕೃತಿಗಳಲ್ಲಿ ಬಿತ್ತರವಾಗಿರುವುದು ಕಂಡುಬರುತ್ತದೆ.

❖❖❖

ಅಧ್ಯಾಯ : ಹನ್ನೊಂದು

ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಾಯ: ಹನ್ನೊಂದು

ಸಮಾರೋಪ

ಭಾರತ ದೇಶದಲ್ಲಿ ಪರದೇಶಿಯರ ಪ್ರಭುತ್ವಗಳು ನೆಲೆಯೂರಿದಂದಿನಿಂದ ದೇಶ ಸ್ವಾತಂತ್ರ್ಯಕ್ಕೋಸ್ಕರ ಅನೇಕ ಶತಾಬ್ಧಿಗಳಿಂದ ಹೋರಾಟ ನಡೆಯುತ್ತಲೇ ಇದೆ. ಆರಂಭದಲ್ಲಿ ಗ್ರೀಕರನ್ನು ಪ್ರತಿಭಟಿಸುತ್ತಿರುವಾಗ ಪುರುಷೋತ್ತಮನು, ಚಂದ್ರಗುಪ್ತ ಮೌರ್ಯನು ಪ್ರಬಲವಾಗಿ ಹೋರಾಟ ಮಾಡುವುದಕ್ಕೆ ನಾಯಕರಾಗಿ ಪ್ರಸಿದ್ಧರಾದರು. ಮುಸ್ಲಿಂ ಪ್ರಭುತ್ವಗಳನ್ನು ಎದುರಿಸುವ ಕಾಲದಲ್ಲಿ ಸ್ಥಾನೇಶ್ವರದ ಕಡೆ ಪೃಥ್ವಿರಾಜು, ವರಂಗಾಲದಲ್ಲಿ ಕಾಕತೀಯರು, ವಿದ್ಯಾನಗರದಲ್ಲಿ ಹರಿಹರನು, ಬುಕ್ಕರಾಯನು, ರಾಜಪುತ್ರ ಸ್ಥಾನದಲ್ಲಿ ರಾಣಾ ಪ್ರತಾಪಸಿಂಹ, ಮಹಾರಾಷ್ಟ್ರ ಪ್ರಾಂತ್ಯದಲ್ಲಿ ಶಿವಾಜಿ, ಪಂಜಾಬಿನಲ್ಲಿ ಸಿಖ್‌ಗುರುಗಳು, ಮೊದಲಾದವರು ತಮ್ಮ ತಮ್ಮ ಅಸ್ತಿತ್ವ, ರಾಜ್ಯ, ಸ್ವಾತಂತ್ರ್ಯಕ್ಕಾಗಿ ಪ್ರತಿಭಟನೆಗಳನ್ನು ಮಾಡುತ್ತಾ ಬಂದಿದ್ದಾರೆ.

ಈ ಎಲ್ಲ ಕಾಲಘಟ್ಟಗಳಲ್ಲೂ ಸಮರ, ಸಂಘರ್ಷಗಳು ನಡೆಯುತ್ತಿರುವಂತಹ ಸಂದರ್ಭದಲ್ಲಿ ವೀರರನ್ನು ವಿಜೃಂಭಿಸುವುದಕ್ಕಾಗಿ ಸಾಧಾರಣವಾಗಿ ವಿಪ್ಲವ, ಕ್ರಾಂತಿಗೀತೆಗಳು ರಚನೆಯಾಗಿವೆ. ರಾಜಾಸ್ಥಾನಗಳಲ್ಲಿ ವೀರಕಾವ್ಯಗಳು ರಚನೆಗೊಂಡಿವೆ. ಉದಾಹರಣೆಗೆ,ಕನ್ನಡದ ಕುಮಾರರಾಮ ಸಾಂಗತ್ಯ, ಹಿಂದಿಯ ಪೃಥ್ವಿರಾಜರಾಸೋ ಇತ್ಯಾದಿ. ಅಂತೆಯೇ ಇಂತಹ ಸಾಹಿತ್ಯ ರಚನೆಗಳ ಪ್ರತಿನಿಧಿಯಾಗಿ ಭಾರತದ ಸ್ವಾತಂತ್ರ್ಯಸಂಗ್ರಾಮದ ಸಂದರ್ಭದಲ್ಲಿ ಕೂಡ ಲಾವಣಿ ಮತ್ತಿತರ ಕಾವ್ಯಪ್ರಕಾರಗಳು ಮತ್ತು ಕಥೆ ಕಾದಂಬರಿಗಳು ಕಾರ್ಯನಿರ್ವಹಿಸಿವೆ. ಪ್ರಜೆಗಳ ಜೀವನವನ್ನು ಪ್ರಭಾವಿತವಾಗಿ ಮಾಡುವ ಯಾವುದೇ ಬಹುದೊಡ್ಡ ಕಾರ್ಯ ಸಾಧನೆಗೆ ಬುನಾದಿಯಾಗಿ ಮಹಾಸಂಗ್ರಾಮವೊಂದು ಇರುತ್ತದೆ.

ಭಾರತದಲ್ಲಿ ತಲೆದೋರುತ್ತಿದ್ದ ರಾಷ್ಟ್ರೀಯ ಜಾಗೃತಿಗೆ ಸಾಂಸ್ಕೃತಿಕ ಪರಿವರ್ತನೆಗೆ ಕನ್ನಡ ಮತ್ತು ತೆಲುಗು ಭಾಷೆಗಳು ಪ್ರತಿಸ್ಪಂದಿಸಿದವು. ಬಂಗಾಲಿ, ಮರಾಠಿ ಸಾಹಿತ್ಯದಿಂದ ಹಲವಾರು ಕಾದಂಬರಿಗಳನ್ನು ಕನ್ನಡ ಮತ್ತು ತೆಲುಗು ಕಾದಂಬರಿಕಾರರು ತಮ್ಮ ತಮ್ಮ ಭಾಷೆಗಳಿಗೆ ತಂದುಕೊಂಡರು. ರಾಷ್ಟ್ರೀಯವಾದದ ಉತ್ತೇಜನಾತ್ಮಕ ಅಂಶವಾದ ಇತಿಹಾಸದ ವೈಭವೀಕರಣವುಳ್ಳ ಕೃತಿಗಳು ಈ ಎರಡು ಭಾಷೆಗಳಿಗೆ ಹೆಚ್ಚಾಗಿ ಅನುವಾದಗೊಂಡವು. ಅವುಗಳಲ್ಲಿ ಬಂಕಿಮಚಂದ್ರ

ಚಟರ್ಜಿಯವರ ವಿಷವೃಕ್ಷ, ದುರ್ಗೇಶನಂದಿನಿ, ಆನಂದ ಮಠ, ದೇವೀಚೌಧುರಾಣಿ ಮತ್ತು ಹರಿನಾರಾಯಣ ಅಪ್ಟೆಯವರ ಕಮಲಕುಮಾರಿ, ಛತ್ರಪತಿ, ಧರ್ಮರಹಸ್ಯಂ, ಕುಮುದಿನಿ, ರವೀಂದ್ರನಾಥ ಠಾಗೂರರ ಗೋರಾ ಮುಂತಾದ ಕಾದಂಬರಿಗಳು ಮುಖ್ಯವಾದವು. ಈ ಕಾದಂಬರಿಗಳಲ್ಲಿ ರಾಷ್ಟ್ರದರ್ಶನ, ದೇಶನಿಷ್ಠ ಮತ್ತು ರೋಮಾಂಚಕ ಇತಿಹಾಸದ ರಮ್ಯತೆ ಚಿತ್ರಿತವಾಗಿದ್ದವು. ಕನ್ನಡಿಗರಿಗೆ ರಂಜನೆಯನ್ನು ಒದಗಿಸುವುದರ ಜೊತೆಗೆ ರಾಷ್ಟ್ರೀಯ ಭಾವನೆಯನ್ನು ಉದ್ದೀಪನಗೊಳಿಸಲು ಈ ಅನುವಾದಿತ ಕೃತಿಗಳು ಸಹಾಯವಾದವು.

ಈ ಎರಡು ಭಾಷೆಗಳಲ್ಲಿ ಒಂದೆಡೆ ಬಂಗಾಳಿ ಕಾದಂಬರಿಗಳ ಅನುವಾದ ಕಾರ್ಯವು ಭರದಿಂದ ಸಾಗುತ್ತಿದ್ದರೆ ಮತ್ತೊಂದು ಕಡೆ ಸ್ವತಂತ್ರ ಕೃತಿ ರಚನೆಯ ಪ್ರಕ್ರಿಯೆಯು ಆರಂಭಗೊಂಡಿತು. ಈ ಎರಡೂ ಸಮಾನಾಂತರ ಕ್ರಿಯೆಗಳಿಗೆ ಆಗಿನ ರಾಜಕೀಯ, ಸಾಮಾಜಿಕ, ವಾತಾವರಣವೂ ಪೂರಕವಾಗಿದ್ದಿತು. ಆಧುನಿಕ ಶಿಕ್ಷಣವನ್ನು ಪಡೆದ ಹೊಸ ವಿದ್ಯಾವಂತವರ್ಗ ತಮ್ಮ ಕಾದಂಬರಿಗಳಲ್ಲಿ ಮೊದಲಿಗೆ ಎರಡು ಸಂಗತಿಗಳತ್ತ ಗಮನಹರಿಸಿತು. ಒಂದು, ಭಾರತೀಯ ಪರಂಪರೆಯ ವೈಭವೀಕರಣ. ಎರಡು, ಸಮಕಾಲೀನ ಭಾರತೀಯ ಸಮಾಜದ ಸಾಮಾಜಿಕ ಸಮಸ್ಯೆಗಳ ಚಿತ್ರಣ. ಹೀಗೆ ಆರಂಭಗೊಂಡ ಕಾದಂಬರಿ ಜಗತ್ತು ರಾಷ್ಟ್ರೀಯವಾದದ ಪ್ರಭಾವದೊಂದಿಗೆ ನಿಧಾನವಾಗಿ ಬ್ರಿಟಿಷರ ಸ್ವಾರ್ಥ ಹಾಗೂ ದೌರ್ಜನ್ಯವನ್ನು ತನ್ನ ವಸ್ತುವಾಗಿಸಿಕೊಂಡಿತು. ಇದರ ಪರಿಣಾಮವಾಗಿ ೨೦ನೇ ಶತಮಾನದ ಪೂರ್ವಾರ್ಧದ ಕಾದಂಬರಿಗಳಲ್ಲಿ ಒಂದೆಡೆ, ಬ್ರಿಟಿಷರನ್ನು ಹೊಡೆದೋಡಿಸಬೇಕೆಂಬ ರಾಷ್ಟ್ರೀಯ ಪ್ರಜ್ಞೆ , ಅದಕ್ಕೆ ಪೂರಕವಾಗಿ ಭಾರತೀಯ ಪರಂಪರೆಯನ್ನು ಉಳಿಸುವ ಪ್ರಯತ್ನ, ಮತ್ತೊಂದು ಕಡೆ ಇಂಗ್ಲೀಷ್ ವಿದ್ಯಾಭ್ಯಾಸದ ಬೆಳಕಿನಲ್ಲಿ ಕಂಡುಕೊಂಡ ಜೀವನ ವಿಕಾಸದ ವೈಚಾರಿಕ ಆಯಾಮ, ಅದರೊಂದಿಗೆ ಪರಂಪರೆಯನ್ನು ಪರಿಷ್ಕರಿಸುವ ಆಶಯ ಈ ಎಲ್ಲಾ ಮನೋಧರ್ಮಗಳು ಒಟ್ಟೊಟ್ಟಿಗೆ ಕಾಣತೊಡಗಿದವು.

ಕನ್ನಡ ಕಾದಂಬರಿಗಳಲ್ಲಿ ಇಡೀ ಭಾರತ ಸ್ವಾತಂತ್ರ್ಯ ಚಳವಳಿಯ ಸ್ವರೂಪವನ್ನು ಕಟ್ಟಿಕೊಡದೆ ಕೇವಲ ಕ್ವಿಟ್ ಇಂಡಿಯಾ, ಅಸಹಕಾರ ಚಳವಳಿ ಕುರಿತಂತೆ, ಗಾಂಧೀಜಿಯವರ ವಿಚಾರಧಾರೆಗಳನ್ನು ಕ್ರಾಂತಿಕಾರಕವಾಗಿ ತಮ್ಮ ಕಾದಂಬರಿಗಳಲ್ಲಿ ತಂದಿದ್ದಾರೆ. ಜೊತೆಗೆ ಪ್ರಾಂತೀಯ ಅರಸರ ಚರಿತ್ರೆಯನ್ನು ಕಾದಂಬರಿಯ ಪುಟಗಳಲ್ಲಿ ತಂದಿದ್ದಾರೆ. ಕಟ್ಟೀಮನಿ, ತ.ರಾ.ಸು. ಶಿವರಾಮ ಕಾರಂತರು ಕೇವಲ ೧೯೨೦ ರಿಂದ ೧೯೪೭ರವರೆಗಿನ ಚಳವಳಿಯ ಸ್ವರೂಪವನ್ನು ಹಿಡಿದಿಟ್ಟಿದ್ದಾರೆ. ಆದರೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಎರಡನೆಯ ಜಾಗತಿಕ ಯುದ್ಧವನ್ನು ಸ್ವಲ್ಪಮಟ್ಟಿಗೆ ಕಟ್ಟಿಕೊಟ್ಟಿದ್ದಾರೆ. ಭಾರತದಲ್ಲಿ ೧೮೫೭ರಿಂದ ವಿಮುಕ್ತಿಗೋಸ್ಕರ ಹೋರಾಟ ನಡೆಯುತ್ತಾ ಬಂದಿದೆ. ಹಲವಾರು ಮಂದಿ ದೇಶಪ್ರೇಮಿಗಳು ಪ್ರಾಣಗಳನ್ನು ಅರ್ಪಿಸುತ್ತಾ ಬಂದಿದ್ದಾರೆ. ಸಮರ್ಥ ನಾಯಕತ್ವ ಕೊರತೆ ಇದ್ದುದರಿಂದ ಹಿಂದಿನ ಸ್ವಾತಂತ್ರ್ಯ ಹೋರಾಟ ಅಷ್ಟೊಂದು ಪ್ರಬಲವಾಗಿ ಜನರ ಮನಸ್ಸಿನ ಮೇಲೆ ಉಳಿಯಲಿಲ್ಲವಾದ್ದರಿಂದ ೧೯೦೦ರಿಂದ ಈಚಿನ ಸ್ವಾತಂತ್ರ್ಯ ಚಳವಳಿ ಕುರಿತಂತೆ ಎರಡು ಭಾಷೆಗಳಲ್ಲಿಯೂ ಸಾಹಿತ್ಯ ರಚನೆಯಾಗಲು ಕಾರಣವಿರಬಹುದು ಎನಿಸುತ್ತದೆ.

ತೆಲುಗು ಲೇಖಕರಾದರೆ, ಗಾಂಧೀಜಿ ಚಳವಳಿಗೆ ಪ್ರವೇಶ ಮಾಡಿದಂದಿನಿಂದ ಕೊನೆಯವರೆಗೆ ನಡೆಸಿದ ಎಲ್ಲಾ ರಚನಾತ್ಮಕ ಕಾರ್ಯಕ್ರಮಗಳನ್ನು ಮತ್ತು ಪ್ರಪಂಚದ ಯುದ್ಧವ್ಯವಹಾರ, ಕ್ರಾಂತಿಗಳು, ಅಮೆರಿಕಾ, ರಷ್ಯಾ, ಫ್ರಾನ್ಸ್, ಸ್ವಾತಂತ್ರ್ಯದ ಅಂಶಗಳು, ಸುಧಾರಣಾ ಕ್ರಮಗಳು, ಜೈಲುಗಳು, ಅಲ್ಲಿನ ಸ್ಥಿತಿಗತಿ, ಶಿಕ್ಷಾಕ್ರಮಗಳು, ಸಮಾಜ ಸುಧಾರಣಾ ಕ್ರಮಗಳು ಮೊದಲಾದ ವಿಷಯಗಳನ್ನು ಕುರಿತು ತಮ್ಮ ಕೃತಿಗಳಲ್ಲಿ ಚರ್ಚಿಸಿದ್ದಾರೆ. ಕನ್ನಡದ ಲೇಖಕರು ಸಂಕುಚಿತ ಮನೋಭಾವದಿಂದ ಚಳವಳಿಯನ್ನು ಕಂಡುಂಡಿರುವುದು ಕಂಡುಬಂದರೆ, ತೆಲುಗು ಲೇಖಕರು ವಿಶಾಲ ಮನೋಭಾವದಿಂದ ಸ್ವಾತಂತ್ರ್ಯ ಚಳವಳಿಯ ಆಳ-ವಿಸ್ತಾರಗಳನ್ನು ತಮ್ಮ ಕೃತಿಗಳಲ್ಲಿ ತಂದಿದ್ದಾರೆ.

ಹೀಗೆ ಸರಿಸುಮಾರು ಒಂದೇ ನೆಲೆಯಲ್ಲಿ ಬೆಳೆದುಕೊಂಡು ಬಂದ ಕನ್ನಡ-ತೆಲುಗು ಕಾದಂಬರಿಗಳಲ್ಲಿನ ಸ್ವಾತಂತ್ರ್ಯ ಹೋರಾಟದ ಚಿತ್ರಣವನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ಈ ಅಧ್ಯಯನದಿಂದ ಕಂಡುಕೊಂಡ ಫಲಿತಗಳು ಈ ಕೆಳಕಂಡಂತೆ ಇವೆ.

ಅಧ್ಯಯನದ ಫಲಿತಗಳು

- ರಾಷ್ಟ್ರೀಯ ಚಳುವಳಿಯ ಕೇಂದ್ರಬಿಂದುವಾದ ಮಹಾತ್ಮಗಾಂಧೀಜಿಯವರನ್ನು ಈ [redacted] ಎರಡೂ ಕಾದಂಬರಿ [redacted]ಗಳು ಗ್ರಹಿಸಿರುವ ಕ್ರಮ ವಿಶಿಷ್ಟವಾಗಿದೆ. ಕನ್ನಡದ ಬಸವರಾಜ ಕಟ್ಟೀಮನಿ ಅವರ ಮಾಡಿ ಮಡಿದವರು ಕಾದಂಬರಿಯಲ್ಲಿ ಮಹಾತ್ಮಗಾಂಧೀಜಿಯವರನ್ನು ಸಂಗೊಳ್ಳಿ ರಾಯಣ್ಣನ ಅವತಾರ ಎನ್ನುವಂತೆ ಚಿತ್ರಿಸಲಾಗಿದೆ. ತೆಲುಗಿನ ಅಡವಿ ಬಾಪಿರಾಜು, ಮಹೀಧರ ರಾಮಮೋಹನರಾವ್ ಕಾದಂಬರಿಗಳಾದ ನಾರಾಯಣರಾವ್, ಕೊಲ್ಲಾಯಿ ಗಟ್ಟಿತೇನೇಮಿ ಕಾದಂಬರಿಗಳಲ್ಲಿ ಮಹಾತ್ಮಗಾಂಧೀಜಿಯವರನ್ನು ಕ್ರಿಸ್ತನ ಅವತಾರ, ಮಹಾನ್ ಬುದ್ಧ, ವಿಷ್ಣುವಿನ ಅಂಶವನ್ನು ಹೊಂದಿದ ದೈವಸಂಭೂತ ಎಂದು ಕಂಡರಿಸಿದ್ದಾನೆ.

- ಕನ್ನಡ ಕಾದಂಬರಿಗಳಲ್ಲಿ ಗಾಂಧೀಜಿ ಮತ್ತು ಅವರ ಬದುಕು, ತತ್ವಗಳು ಅವರು ಮುನ್ನಡೆಸಿದ ಚಳುವಳಿಗಳು ಬಹಳ ಮುಖ್ಯ ಎಂದುಕೊಂಡು ಬಂದರೂ ತೌಲನಿಕವಾಗಿ ನೋಡಿದಾಗ ತೆಲುಗು ಕಾದಂಬರಿಗಳಲ್ಲಿ ಮಹಾತ್ಮಗಾಂಧೀಜಿ ಅವರ ತತ್ವ, ಚಿಂತನೆಗಳ ಜೊತೆಗೆ ಗಾಂಧೀಜಿಯವರನ್ನು ಒಬ್ಬ ವ್ಯಕ್ತಿಯಾಗಿ, ಒಂದು ಪ್ರಭಾವಳಿಯನ್ನಾಗಿ ವಿಶೇಷವಾಗಿ ಅವರಿಗೆ ಹೆಚ್ಚು ಒತ್ತುಕೊಟ್ಟಿರುವುದನ್ನು ಗಮನಿಸಲಾಗಿದೆ.

- ಅಹಿಂಸಾ ಮಾರ್ಗವನ್ನು ಎತ್ತಿಹಿಡಿದ ಗಾಂಧೀಜಿಯವರನ್ನು ತಮ್ಮ ನಾಯಕರಾಗಿ ಇಲ್ಲಿ ಕಾದಂಬರಿಕಾರರು ಸ್ವೀಕರಿಸಿದರೂ, ಅವರ ಅಹಿಂಸಾ ತಂತ್ರದ ಗ್ರಹಿಕೆ ಮತ್ತು ಪ್ರತಿಪಾದನೆಯ ಸಂದರ್ಭದಲ್ಲಿ ಭಿನ್ನತೆಯನ್ನು ತೋರಿಸುತ್ತಾರೆ. ಎರಡು ಭಾಷೆಯ ಕೃತಿಗಳಲ್ಲಿ ಗಾಂಧೀಜಿಯವರ ವಿಚಾರಗಳು ಸಾಮಾನ್ಯವಾಗಿದ್ದರೂ ಕನ್ನಡದ ಲೇಖಕರು ಕ್ರಾಂತಿಕಾರಕ, ಪ್ರತಿಭಟನೆಯ ಅಸ್ತ್ರಗಳಾಗಿಸಿಕೊಂಡಿದ್ದರೆ, ತೆಲುಗು ಲೇಖಕರು ಶಾಂತಿ, ಅಹಿಂಸಾತ್ಮಕವಾಗಿ ರೂಪಿಸಿಕೊಂಡಿದ್ದಾರೆ. ಕನ್ನಡ ಕಾದಂಬರಿಗಳ ಒಟ್ಟಾರೆ ನಿಲುವಿನಲ್ಲಿ ಗಾಂಧೀಜಿಯವರು ಮುಖ್ಯವಾದರೂ ಬಸವರಾಜ

ಕಟ್ಟೀಮನಿ ಅವರ ಮಾಡಿ ಮಡಿದವರು, ಗೋರೂರು ರಾಮಸ್ವಾಮಿ ಅಯ್ಯಂಗಾರರ ಮೆರವಣಿಗೆ ಕಾದಂಬರಿಗಳು ಅವರ ಚೌಕಟ್ಟನ್ನು ಮೀರಿ ನಡೆಯುತ್ತವೆ. ಗೊರೂರು ಮೆರವಣಿಗೆ ಕಾದಂಬರಿಯಲ್ಲಿ ಗಾಂಧೀಜಿ ಹಿಂಸೆಯನ್ನು ಕುರಿತು ಮಾತನಾಡಿರುವಂತೆ, ಹಿಂಸೆಗೆ ಪ್ರಚೋದನೆ ನೀಡಿರುವಂತೆ ಚಿತ್ರಿಸುತ್ತಾರೆ. ಅಂದರೆ ಉಪ್ಪಿನ ಸತ್ಯಾಗ್ರಹಕ್ಕೂ ಮುಂಚೆ ವೈಸರಾಯರ ಪ್ರತ್ಯುತ್ತರವನ್ನು ನೋಡಿ ಹೀಗೆ ಹೇಳುತ್ತಾರೆ. "ನಾನು ನಮಸ್ಕಾರ ಮಾಡಿ ಅನ್ನ ಕೇಳಿದೆ. ಆದರೆ ನನಗೆ ದೊರಕಿದುದು ಕಲ್ಲು. ಬ್ರಿಟಿಷ್ ಜನಾಂಗ ಹಿಂಸೆಗೆ ಮಾತ್ರ ಬಗ್ಗುವುದು. ಭಾರತದಲ್ಲಿ ಇರುವ ಶಾಂತಿ ಸೆರೆಮನೆಯ ಶಾಂತಿ ಮಾತ್ರ, ಭಾರತ ಒಂದು ದೊಡ್ಡ ಸೆರೆಮನೆ. ನಾನು ಈ ಕಾನೂನನ್ನು ಪ್ರತಿಭಟಿಸುತ್ತೇನೆ. ದೇಶದ ಉಸಿರನ್ನು ಹಿಂಡುತ್ತಿರುವ ಈ ಬಲಾತ್ಕಾರವಾದ ದುಃಖದಾಯಕ ಶಾಂತಿಯನ್ನು ಒಡೆಯುತ್ತೇನೆ" ಎಂಬ ಸಂದೇಶ ನೀಡಿದ್ದು ಕಂಡುಬರುತ್ತದೆ.

ತೆಲುಗು ಕಾದಂಬರಿಗಳಲ್ಲಿಯಾದರೂ ಗಾಂಧೀಜಿ, ಅವರ ತತ್ವ ಚಿಂತನೆಗಳಿಂದ ಪ್ರೇರಿತವಾದ ಅನುಯಾಯಿಗಳು ಬ್ರಿಟಿಷರು ಎಷ್ಟೇ ಹಿಂಸೆ, ಅನ್ಯಾಯ, ಅಕ್ರಮ ಎಸಗಿದರೂ ಪ್ರತಿ ಹಿಂಸೆ ಮಾಡಬೇಡಿ ಎಂದು ಘೋರವಾದ ಅಹಿಂಸೆಯನ್ನು ಅನುಸರಿಸುತ್ತಿರುವುದನ್ನು ಕಾಣಬಹುದಾಗಿದೆ. ಅಂದರೆ ಒಂದು ವೇಳೆ ಚಳುವಳಿಯ ಸೃಷ್ಟಿಕರ್ತ ಗಾಂಧೀಜಿ ತನ್ನ ತತ್ವವನ್ನು ಮೀರಬಹುದು ಆದರೆ ನಾವು ಮೀರುವುದಿಲ್ಲ ಎಂಬಂತೆ ಗಾಂಧಿ ಮತ್ತು ಅವರ ತತ್ವಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವುದನ್ನು ಕಾಣಬಹುದು. ತೆಲುಗು ಪ್ರದೇಶದಲ್ಲಿ ನಕ್ಸಲ್ ಬರಿ ಹೋರಾಟಗಳನ್ನು ನಾವು ಇವತ್ತಿಗೂ ನೋಡಬಹುದಾಗಿದ್ದರೂ ಸಹ ಸ್ವಾತಂತ್ರ್ಯ ಚಳುವಳಿಯ ಹೋರಾಟದ ಸಂದರ್ಭದಲ್ಲಿ ತೀವ್ರಗಾಮಿ ಧೋರಣೆಗಳನ್ನು ಬಿಟ್ಟುಕೊಟ್ಟಿರುವುದು ಕುತೂಹಲಕಾರಿಯಾದ ಸಂಗತಿಯಾಗಿದೆ.

- ಕನ್ನಡ ಕಾದಂಬರಿಗಳಲ್ಲಿ 'ಹಿಂಸೆ' ಎಂದರೆ ಆಯುಧಗಳನ್ನು ಬಳಕೆ ಮಾಡಿ ಹೋರಾಟ ಮಾಡುತ್ತಿರುವುದು ಚಿತ್ರಿತಗೊಂಡಿದೆ. ಉದಾ. ಮಾಡಿ ಮಡಿದವರು ಕಾದಂಬರಿಯಲ್ಲಿ ಚಳುವಳಿಯ ನಾಯಕ ಚಂದ್ರಶೇಖರ ಬಂದೂಕು ಪಿಸ್ತೂಲುಗಳನ್ನು ಹಿಡಿದುಕೊಂಡು ಎದುರಾಳಿಗೆ ಹಾನಿ ಮಾಡದೆ ಅಹಿಂಸೆಯಿಂದ ಹೋರಾಟ ಮಾಡಬೇಕು ಎಂದು ಹೇಳಿದಾಗ ಸಂಗಣ್ಣ, ಬಸವಣ್ಣೆಪ್ಪ, ಹೇಮಾವತಿ ಪಾತ್ರಗಳು ಆಯುಧಗಳನ್ನು ಬಳಸಿಕೊಂಡು ಹಿಂಸೆಯ ಮುಖಾಂತರ ಪ್ರಾಣವನ್ನು ಅರ್ಪಿಸುವುದನ್ನು ಕಾಣಬಹುದು.

ತೆಲುಗಿನ ನಾರಾಯಣರಾವ್ ಕಾದಂಬರಿಯಲ್ಲಿ ನಾರಾಯಣರಾವ್ ಹಿಂಸೆ ಎಂದರೆ ಕೇವಲ ಆಯುಧಗಳ ಬಳಕೆಯಿಂದ ಆಗುವಂತಹದ್ದಲ್ಲ. ಪರನಾರಿ ಮೋಹ, ಪರರ ಹಣ, ಸಂಪತ್ತು, ಪರರ ಮನಸ್ಸನ್ನು ನೋಯಿಸುವುದು ಎಂದು ಹಿಂಸೆಯ ಇನ್ನೊಂದು ರೂಪವನ್ನು ಚರ್ಚಿಸಲಾಗಿದೆ. ಕನ್ನಡದ ಕಾದಂಬರಿಯಲ್ಲಿ ಆಯುಧಗಳಿಗೆ ಒತ್ತುಕೊಟ್ಟು ರಾಜಕೀಯ ಸ್ವಾತಂತ್ರ್ಯಕ್ಕೆ ಗಮನಕೊಟ್ಟಿರುವುದು ಕಂಡುಬರುತ್ತದೆ. ತೆಲುಗು ಕಾದಂಬರಿಯಲ್ಲಿ ಸಮಾಜದ ಒಳಿತಿನ ಬಗ್ಗೆ ಯೋಚಿಸಿರುವುದನ್ನು ಗಮನಿಸಬಹುದು.

- ಸ್ವಾತಂತ್ರ್ಯ ಚಳುವಳಿಯ ವ್ಯಾಪ್ತಿಯನ್ನು ಗುರುತಿಸಿಕೊಳ್ಳುವಲ್ಲಿ ಕೂಡ ಈ ಎರಡೂ ಪರಂಪರೆಗಳು ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಕನ್ನಡ ಕಾದಂಬರಿಗಳಲ್ಲಿ ಇಡೀ ಭಾರತ ಸ್ವಾತಂತ್ರ್ಯ ಚಳುವಳಿಯ ಸ್ವರೂಪವನ್ನು ಕಟ್ಟಿಕೊಡದೆ ಕೇವಲ ಕ್ವಿಟ್ ಇಂಡಿಯಾ, ಅಸಹಕಾರ ಚಳುವಳಿ ಕುರಿತಂತೆ ಗಾಂಧೀಜಿಯವರ ವಿಚಾರಧಾರೆಗಳನ್ನು ಕ್ರಾಂತಿಕಾರಕವಾಗಿ ತಮ್ಮ ಕಾದಂಬರಿಗಳಲ್ಲಿ ತಂದಿದ್ದಾರೆ. ಜೊತೆಗೆ ಪ್ರಾಂತೀಯ ಅರಸರ ಚರಿತ್ರೆಯನ್ನು ಕಾದಂಬರಿಯ ಪುಟಗಳಲ್ಲಿ ಚಿತ್ರಿಸಿದ್ದಾರೆ. ಬಸವರಾಜ ಕಟ್ಟೀಮನಿ, ತ.ರಾ.ಸು., ಶಿವರಾಮ ಕಾರಂತರು ಕೇವಲ ೧೯೨೦ ರಿಂದ ೧೯೪೭ರವರೆಗಿನ ಚಳುವಳಿಯ ಸ್ವರೂಪವನ್ನು ಹಿಡಿದಿಟ್ಟಿದ್ದಾರೆ. ಆದರೆ ಗೊರೂರು ರಾಮಸ್ವಾಮಿ ಅಯ್ಯಂಗಾರರು ಎರಡನೆಯ ಜಾಗತಿಕ ಯುದ್ಧವನ್ನು ಸ್ವಲ್ಪಮಟ್ಟಿಗೆ ಕಟ್ಟಿಕೊಟ್ಟಿದ್ದಾರೆ. ೧೮೫೭ರಿಂದ ದೇಶ ವಿಮುಕ್ತಿಗೋಸ್ಕರ ಹೋರಾಟ ನಡೆಯುತ್ತಾ ಬಂದಿದೆ. ಸಮರ್ಥ ನಾಯಕತ್ವದ ಕೊರತೆ ಇದ್ದುದರಿಂದ ಆ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟ ಅಷ್ಟೊಂದು ಪ್ರಬಲವಾಗಿ ಜನರ ಮನಸ್ಸಿನ ಮೇಲೆ ಪ್ರಭಾವ ಬೀರದೆ ಇರುವುದರಿಂದ ೧೯೨೦ರಿಂದ ಈಚಿನ ಸ್ವಾತಂತ್ರ್ಯ ಚಳುವಳಿ ಕುರಿತಂತೆ ಎರಡು ಭಾಷೆಗಳಲ್ಲಿಯೂ ಸಾಹಿತ್ಯ ರಚನೆಯಾಗಲು ಕಾರಣವಿರಬಹುದು ಎಂಬುದನ್ನು ಗಮನಿಸಬಹುದು.

  ತೆಲುಗು ಲೇಖಕರು ಗಾಂಧೀಜಿ ಚಳುವಳಿಗೆ ಪ್ರವೇಶ ಮಾಡಿದಂದಿನಿಂದ ಕೊನೆಯವರೆಗೆ ನಡೆಸಿದ ಎಲ್ಲಾ ರಚನಾತ್ಮಕ ಕಾರ್ಯಕ್ರಮಗಳನ್ನು ಮತ್ತು ಜಾಗತಿಕ ಯುದ್ಧ ವ್ಯವಹಾರಗಳನ್ನು, ಕ್ರಾಂತಿಗಳನ್ನು, ಅಮೆರಿಕಾ, ರಷ್ಯಾ, ಫ್ರಾನ್ಸ್ ಸ್ವಾತಂತ್ರ್ಯದ ಅಂಶಗಳು, ಸುಧಾರಣಾ ಕ್ರಮಗಳು, ಜೈಲುಗಳಲ್ಲಿನ ಸ್ಥಿತಿಗತಿಗಳು, ಶಿಕ್ಷಾಕ್ರಮಗಳು, ಸಮಾಜ ಸುಧಾರಣಾ ಕ್ರಮಗಳು ಮೊದಲಾದ ವಿಷಯಗಳನ್ನು ಕುರಿತು ತಮ್ಮ ಕೃತಿಗಳಲ್ಲಿ ಚರ್ಚಿಸಿದ್ದಾರೆ. ಕನ್ನಡದ ಲೇಖಕರು ಸಂಕುಚಿತ ಮನೋಭಾವದಿಂದ ಚಳುವಳಿಯನ್ನು ಚಿತ್ರಿಸಿರುವುದು ಕಂಡುಬಂದರೆ, ತೆಲುಗು ಲೇಖಕರು ವಿಶಾಲ ಮನೋಭಾವದಿಂದ ಸ್ವಾತಂತ್ರ್ಯ ಚಳುವಳಿಯ ಆಳ-ವಿಸ್ತಾರಗಳನ್ನು ತಮ್ಮ ಕೃತಿಗಳಲ್ಲಿ ತಂದಿದ್ದಾರೆ.

- ಕನ್ನಡ ಕಾದಂಬರಿಗಳಲ್ಲಿ ಮುಖ್ಯವಾಗಿ ಸ್ವಾತಂತ್ರ್ಯ ಚಳುವಳಿಯ ಘಟ್ಟಗಳಾದ ಅಸಹಕಾರ ಚಳುವಳಿ, ಕ್ವಿಟ್ ಇಂಡಿಯಾ, ಸ್ವದೇಶಿ ವಸ್ತು ಬಳಕೆ ಮತ್ತು ವಿದೇಶಿ ವಸ್ತು ಬಹಿಷ್ಕಾರ, ಕರನಿರಾಕರಣೆ ಚಳುವಳಿಗಳ ಸುತ್ತ ಬರೆದಿರುವುದು ಕಂಡುಬರುತ್ತದೆ. ತೆಲುಗು ಕಾದಂಬರಿಗಳಲ್ಲಿಯೂ ಸಹ ಅದೆ ಚಳುವಳಿಯ ಘಟ್ಟಗಳನ್ನು ಅನುಸರಿಸಿ ಕೃತಿಗಳನ್ನು ರಚಿಸಿರುವುದು ಕಂಡುಬಂದಿದ್ದು, ಕರನಿರಾಕರಣೆ ಚಳುವಳಿಯ ಪ್ರಸ್ತಾಪ ಮಾತ್ರ ಕಂಡುಬರುವುದಿಲ್ಲ.

- ಕನ್ನಡ ಕಾದಂಬರಿಗಳ ಸ್ವಾತಂತ್ರ್ಯ ಚಳುವಳಿ ಕಥನವು ಬಹುತೇಕ ಒಂದು ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರ ಚಿತ್ರಿತಗೊಂಡಿರುವುದು ಕಂಡುಬರುತ್ತದೆ. ಉದಾ. ಸೋಮಲಾಪುರ, ಕಲ್ಲಾಪುರ, ಮಂಗಳೂರು, ಬೆಳಗಾವಿ, ಗೋಕಾಕ್ ಪ್ರದೇಶಗಳಲ್ಲಿ ಚಳುವಳಿಯ ಹಂದರ

ಹರಡಿದೆ. ಇದಕ್ಕೆ ಪ್ರತಿಯಾಗಿ ತೆಲುಗು ಕಾದಂಬರಿಗಳ ಸ್ವಾತಂತ್ರ್ಯ ಚಳುವಳಿಯ ವ್ಯಾಪ್ತಿ ಬಹುತೇಕ ಇಡೀ ಆಂಧ್ರಪ್ರದೇಶದೆಲ್ಲೆಡೆಗೂ ಹಬ್ಬಿರುವುದನ್ನು ಗುರುತಿಸಬಹುದು.

- ಕನ್ನಡ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ನಾಯಕತ್ವ ಮೇಲ್ವರ್ಗ, ಮಧ್ಯಮ ವರ್ಗದವರಲ್ಲಿರುವುದು ಕಂಡುಬರುತ್ತದೆ. ತೆಲುಗು ಕಾದಂಬರಿಗಳಲ್ಲಿ ಮೇಲ್ವರ್ಗದವರ ಪಾಲ್ಗೊಳ್ಳುವಿಕೆ ಇದ್ದರೂ ಹೆಚ್ಚಿನದಾಗಿ ಚಳುವಳಿಯ ಮುಂದಾಳತ್ವ, ತಂತ್ರಗಾರಿಕೆಗಳು ಕೆಳವರ್ಗದವರಲ್ಲಿರುವುದನ್ನು ಕಾಣಬಹುದಾಗಿದೆ.

ಕನ್ನಡದ ಮಾಡಿ ಮಡಿದವರು ಕಾದಂಬರಿಯಲ್ಲಿ ಬುಡಕಟ್ಟು ಜನರಾದ ಲಂಬಾಣಿಗರು ಸ್ವಾತಂತ್ರ್ಯ ಚಳುವಳಿಗೆ ಸಂಬಂಧಪಟ್ಟ ಕರಪತ್ರಗಳನ್ನು ಕಟ್ಟಿಗೆ ಹೊರೆಗಳಲ್ಲಿಟ್ಟುಕೊಂಡು ಊರೂರು ಅಲೆಯುತ್ತ ಹಂಚುತ್ತಿರುವ ಅವರ ಅಲ್ಪ ದೇಶ ಸೇವಾ ಮನೋಭಾವವನ್ನು ಗುರುತಿಸಬಹುದು. ತೆಲುಗು ನಾರಾಯಣರಾವ್ ಕಾದಂಬರಿಯಲ್ಲಿ ಸತ್ಯವತಿಯ ಯಜಮಾನ ಅನುಮಾನಾಸ್ಪದವಾಗಿ ಸತ್ಯವತಿಗೆ ಹಿಂಸೆ ನೀಡುತ್ತಿದ್ದಾಗ ನಾರಾಯಣರಾವ್ ಲಂಬಾಣಿಗರ ಗುಣ, ಗೌರವ, ಪ್ರಾಮಾಣಿಕತೆಯ ಕುರಿತು ಆತನಿಗೆ ಬೋಧಿಸುತ್ತಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಕನ್ನಡದ ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಶೇಖರನು ಕಲ್ಲಾಪುರದ ಎಲ್ಲಾ ಕೆಳವರ್ಗ, ಮಧ್ಯಮವರ್ಗದ ಮಕ್ಕಳಿಗೆ ಬಸವಣ್ಣನ ಗುಡಿಯಲ್ಲಿ ಶಿಕ್ಷಣ ಕಲಿಸುವುದರ ಮೂಲಕ ಸಮಾನತೆ ಸಾಧಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ತೆಲುಗಿನ ನರುಡು ಕಾದಂಬರಿಯಲ್ಲಿ 'ಯಲ್ಲಮಂದ' ಎಂಬ ದಲಿತ ವಿದ್ಯಾರ್ಥಿಯನ್ನು ಫುಟ್ಬಾಲ್ ಕ್ರೀಡೆಗೆ ಸೇರಿಸುವುದರ ಜೊತೆಗೆ ಅಸಮಾನತೆಯನ್ನು ಹೋಗಲಾಡಿಸಲು ಪ್ರಯತ್ನಿಸಿದ್ದನ್ನು ಕಾಣಬಹುದಾಗಿದೆ.

- ಮೇಲಿನವೆಲ್ಲ ಸಾಮ್ಯ-ವೈಷಮ್ಯಗಳ ನಡುವೆಯೇ ಒಟ್ಟಾರೆಯಾಗಿ ಸ್ವಾತಂತ್ರ್ಯ ಚಳುವಳಿಯ ತಾತ್ವಿಕ ಗ್ರಹಿಕೆಯಲ್ಲಿಯೇ ಈ ಎರಡೂ ಪರಂಪರೆಗೆ ಮುಖ್ಯವಾದ ಭಿನ್ನತೆಯೊಂದಿದೆ. ಅದೇ ಸ್ವಾತಂತ್ರ್ಯ ಚಳುವಳಿಯನ್ನು ಗುರುತಿಸುವ ಕ್ರಮದ ಭಿನ್ನತೆ, ಕನ್ನಡ ಕಾದಂಬರಿಗಳು ಸ್ವಾತಂತ್ರ್ಯ ಹೋರಾಟವನ್ನು ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಇತ್ಯಾದಿ ರಾಜಮನೆತನಗಳ ರಾಜಸತ್ತೆಯ ಹೋರಾಟದೊಂದಿಗೆ ಬೆರೆಸುತ್ತವೆ. ಅಂದರೆ ಸ್ವಾತಂತ್ರ್ಯ ಚಳುವಳಿಯು ಮೊದಲು ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣನಿಂದ ಆರಂಭಗೊಂಡಿದ್ದು, ಗಾಂಧೀಜಿಯವರನ್ನು ಅವರ ಮುಂದುವರಿಕೆಯ ಭಾಗವಾಗಿ ನೋಡುತ್ತಾರೆ. ಆದರೆ ತೆಲುಗು ಕಾದಂಬರಿಗಳು ಸ್ವಾತಂತ್ರ್ಯ ಹೋರಾಟವನ್ನು ಬ್ರಿಟಿಷರ ವಿರುದ್ಧ ಆರಂಭಗೊಂಡ ಪ್ರಜಾಸತ್ತಾತ್ಮಕ ಹೋರಾಟವಾಗಿ ಗ್ರಹಿಸುತ್ತಾರೆ. ತೆಲುಗು ಕಾದಂಬರಿಗಳಲ್ಲಿ ಗಾಂಧೀಜಿಯವರನ್ನು ವಿಶೇಷವಾಗಿ ನೋಡಿದ್ದು, ಗಾಂಧೀಜಿಯವರಿಂದಲೇ ಸ್ವಾತಂತ್ರ್ಯ ಚಳುವಳಿ ಪ್ರಾರಂಭವಾಯಿತು ಎನ್ನುವಂತೆ ಅವರಿಗೆ ವಿಶೇಷವಾದ ಆರಾಧನಾಭಾವದಿಂದ ಗುರುತಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

- ಚಾರಿತ್ರಿಕವಾದ ಸ್ವಾತಂತ್ರ್ಯ ಚಳುವಳಿ ಎರಡೂ ಭಾಷೆಗಳಲ್ಲಿಯೂ ಸಮಾನವಾಗಿ ಚಿತ್ರಿತಗೊಂಡಿದೆ. ಆದರೆ ಕನ್ನಡದ ಕಾದಂಬರಿಗಳಲ್ಲಿ ಕೇವಲ ಗಾಂಧೀಜಿಯವರ ಸಾಮಾಜೀಕರಣದಲ್ಲಿ ಅವರ ತತ್ವಗಳಿಗೆ ಪ್ರತಿಯಾಗಿ ನಡೆದಿರುವುದು ಕಂಡುಬರುತ್ತದೆ. ತೆಲುಗು ಕಾದಂಬರಿಗಳಲ್ಲಿ ಜಟಿಲವಾದ ಸ್ವಾತಂತ್ರ್ಯ ಚಳುವಳಿಯ ಪೂರ್ಣಸ್ವರೂಪವನ್ನು ಆಂಧ್ರಪ್ರದೇಶದಾದ್ಯಂತ ಪ್ರತ್ಯಕ್ಷವಾಗಿ ಗಾಂಧೀಜಿಯವರ ನಾಯಕತ್ವದಲ್ಲಿ ಮುನ್ನಡೆಸಿದಂತೆಯೇ ಯಥಾ ರೂಪದಲ್ಲಿಯೇ ಅನುಸರಿಸಿರುವುದು, ಮನ್ನಣೆ ನೀಡಿರುವುದು ಕಂಡುಬರುತ್ತದೆ. ಕನ್ನಡ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಗಟ್ಟಿತನ, ಸಾಂಸ್ಕೃತಿಕ ಪರಿಸರ ಅಲ್ಪವಾಗಿ ಕಂಡುಬಂದರೂ ಕೇವಲ ರಾಜಕೀಯ ಸ್ವಾತಂತ್ರ್ಯಕ್ಕೆ ಹೆಚ್ಚು ಒತ್ತುಕೊಟ್ಟಿರುವುದನ್ನು ಗಮನಿಸಲಾಗಿದೆ. ತೆಲುಗು ಕಾದಂಬರಿಗಳಲ್ಲಿ ಭಾರತ ಸ್ವಾತಂತ್ರ್ಯ ಚಳುವಳಿಯ ಮುಖ್ಯವಾಗಿ ಗಾಂಧೀಜಿಯವರ ಮಂದವಾದ ಚಳುವಳಿಯ ಸ್ವರೂಪವನ್ನು, ಗಟ್ಟಿತನವನ್ನು, ಸಾಂಸ್ಕೃತಿಕ ಪರಿಸರ, ಮಾನವ ಸಂಬಂಧಗಳನ್ನು, ಕೆಲವು ಪಾತ್ರಗಳ ಮೂಲಕ ಎಳೆಎಳೆಯಾಗಿ ಚಿತ್ರಿಸಲಾಗಿದೆ. ತೆಲುಗು ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳುವಳಿಯು ಸಂಕೀರ್ಣವಾಗಿದ್ದು ಚರಿತ್ರೆಗೆ ಸ್ವಲ್ಪಮಟ್ಟಿಗೆ ಹತ್ತಿರ ಎನ್ನುವಂತೆ ಚಿತ್ರಿಸಲಾಗಿದೆ. ಆದರೆ ಕನ್ನಡ ಕಾದಂಬರಿಗಳಲ್ಲಿ ಆ ಪ್ರಯತ್ನ ಕಂಡುಬರುವುದಿಲ್ಲ. ಏಕೆಂದರೆ ಕನ್ನಡ ಕಾದಂಬರಿಗಳು ಸ್ವಾತಂತ್ರ್ಯೋತ್ತರದಲ್ಲಿ ರಚನೆಯಾಗಿದ್ದು, ತೆಲುಗು ಕಾದಂಬರಿಗಳು ಸ್ವಾತಂತ್ರ್ಯಪೂರ್ವದಲ್ಲಿ ರಚನೆಯಾಗಿರುವುದು. ಕನ್ನಡ ಕಾದಂಬರಿಗಳಲ್ಲಿ ಸ್ಥಳೀಯ ಚರಿತ್ರೆ, ಸ್ಥಳೀಯ ನಾಯಕರಿಗೆ ಹೆಚ್ಚಿನ ಮನ್ನಣೆ ಕೊಟ್ಟಿರುವುದನ್ನು ಚಿತ್ರಿಸಲಾಗಿದೆ. ತೆಲುಗು ಕಾದಂಬರಿಗಳಲ್ಲಿ ಸ್ಥಳೀಯ ಚರಿತ್ರೆ, ನಾಯಕರ ಪ್ರಸ್ತಾಪ ಎಲ್ಲಿಯೂ ಕಂಡುಬರದೆ ಅವರ ದೃಷ್ಟಿ ಮುಖ್ಯವಾಗಿ ಸ್ವಾತಂತ್ರ್ಯ ಚಳುವಳಿಯ ಕಡೆಗೆ ಇರುವುದನ್ನು ಗಮನಿಸಲಾಗಿದೆ.

❖❖❖

ಅನುಬಂಧಗಳು

ಪ್ರಾಥಮಿಕ ಆಕರಗಳು

ಪರಾಮರ್ಶನ ಗ್ರಂಥಗಳು

ತೆಲುಗು ಪದ್ಯಗಳು

ಕನ್ನಡ-ತೆಲುಗು ಲೇಖಕರ ಕಿರುಪರಿಚಯ

ಅನುಬಂಧ–೨

ಪರಾಮರ್ಶನ ಗ್ರಂಥಗಳು

ಕನ್ನಡ

೧. ಕನ್ನಡ ಕಾದಂಬರಿಗಳಲ್ಲಿ ರಾಜಕೀಯ ವಸ್ತು ವಿನ್ಯಾಸ, ಸುರೇಶ ಪಾಟೀಲ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೨. ಕನ್ನಡ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳವಳಿ, ಜ್ಯೋತಿ ರೈ., ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬.

೩. ಗಣೇಶದರ್ಶನ, ಪು.ತಿ.ನ., ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೪೭.

೪. ಗಾಂಧೀಟೋಪಿ, ಭಾಸ್ಕರ ಟಿ.ಎಂ., ಮರುಗ ಪ್ರಕಾಶನ, ಗುಲ್ಬರ್ಗಾ, ೨೦೦೦.

೫. ತಲೆಬಾಗದ ಜನ, ವೆಂಕಟರಾಜು ಕೆ., ಶಾಂತಲಾ ಕಲಾವಿದರು, ಚಾಮರಾಜನಗರ, ೨೦೦೦.

೬. ತೆಲುಗು ಭಾಷೆ ಮತ್ತು ಸಾಹಿತ್ಯ, ಸುಂದರಂ ಆರ್.ವಿ.ಎಸ್., ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೭.

೭. ಧ್ವಜರಕ್ಷಣೆ, ಪು.ತಿ.ನ., ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೩೧

೮. ಭಾರತೀಯ ಸಾಹಿತ್ಯ ಚರಿತ್ರೆ, ಕೃಷ್ಣಮೂರ್ತಿ ಕೆ., ಕನ್ನಡ ಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೪.

೯. ಮಣ್ಣಿನ ಗೋಡೆಗಳು, ಕೇಶವರೆಡ್ಡಿ ಹಂದ್ರಾಳ, ಸಪ್ನಬುಕ್‌ಹೌಸ್, ಬೆಂಗಳೂರು, ೨೦೦೮.

೧೦. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ರಾಜಕೀಯ ಪ್ರಜ್ಞೆ, ಮಾಲಿನಿ ಮಲ್ಯ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೦.

೧೧. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ಎನ್.ಪಿ. ಶಂಕರನಾರಾಯಣರಾವ್, ನವಕರ್ನಾಟಕ ಪ್ರಕಾಶನ, ೧೯೯೧.

೧೨. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶ್ರೀಸಾಮಾನ್ಯ, ವಿ.ಎಸ್. ನಾರಾಯಣರಾವ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೮.

೧೩. ಸ್ವಾತಂತ್ರ್ಯ ಸಮರದ ಗೇಯಗೀತೆಗಳು, ಸೂರ್ಯನಾಥ ಕಾಮತ್ (ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೮.

ತೆಲುಗು

೧. ತೆಲುಗು ನವಲಲ್ಲೋ ಸ್ವಾತಂತ್ರ್ಯೋದ್ಯಮ ಚಿತ್ರಣ, ಕೂರೇಳ್ಳ ವಿಠಲಾಚಾರ್ಯ, ಅಕ್ಷರ ಕಳಾಭಾರತಿ, ನಲ್ಲಗೊಂಡ, ೨೦೧೨.

೨. ತೆಲುಗು ಕಥಲ್ಲೋ ಗಾಂಧೀ ದರ್ಶನಂ, ಮಧುರಾಂತಕಂ ರಾಜರಾಂ (ಸಂಪಾದಕರು), ಗಾಂಧಿಕ್ಷೇತ್ರಂ, ಅವನಿಗಡ್ಡ, ಹೈದ್ರಾಬಾದ್, ೨೦೦೮.

೩. ಪ್ರಸಿದ್ಧ ತೆಲುಗು ನಾಟಕಾಲು, ವಲ್ಲೂರು ಶಿವಪ್ರಸಾದ್ (ಸಂ), ವಿಶಾಲಾಂಧ್ರ ಪಬ್ಲಿಷಿಂಗ್ ಹೌಸ್, ಹೈದ್ರಾಬಾದ್, ೨೦೧೧.

೪. ಮುಂದಡುಗು, ಸುಂಕರ ಸತ್ಯನಾರಾಯಣ, ಪ್ರಜಾಶಕ್ತಿ ಕಾವ್ಯಾಲಯ, ಬೆಜವಾಡ, ೧೯೪೫.

೫. ರಾಣಾಪ್ರತಾಪಸಿಂಹ ಚರಿತ್ರ, ದರ್ಭಾರ ರಾಜಶೇಖರ ಶತಾವಧಾನಿ, ಶ್ರೀ ಜಾನಕಿ ಮುದ್ರಾಕ್ಷರಶಾಲಯ, ಬೆಜವಾಡ, ೧೯೩೪.

೬. ವಂದೇಮಾತರಂ, ಮುದಿಗೊಂಡ ವೀರಭದ್ರಮೂರ್ತಿ, ಆಂಧ್ರ ಸಾರಸ್ವತ ಪರಿಷತ್ತು, ಹೈದರಾಬಾದ್, ೧೯೭೭.

ಅನುಬಂಧ–೩

ತೆಲುಗು ಪದ್ಯಗಳು

ಅಧ್ಯಾಯ: ಮೂರು

ಕನ್ನಡ–ತೆಲುಗು ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟ

ಕಾವ್ಯ

೧. "ಗಜ ಚರ್ಮಂಬು ಚೆಚ್ಚಿರ ಕನ್ನುಪೂಪ
ಚಂದುರುನಿ ರೇಖ ಕೈಲಾಸಮಂದು ವಿಡಿಚಿ
ಭರತಖಂಡಂಬು ಉದ್ದರಿಂಪಗಾ ಜನಿಂಚು
ದೂರ್ಜಟಿವಿ ನೀವು ರಾಜಮಾತ್ರಡುವು ಕಾವು"
(ರಾಣಾಪ್ರತಾಪ ಸಿಂಹ ಚರಿತ್ರ, ಪುಟ–೬೮, ೧೯೪೮)

೨. "ಪಾರತಂತ್ರ್ಯ ಮದಲ್ಚಿ ಸ್ವಾತಂತ್ರ್ಯಮು ನಿಲ್ಪು
ಬವರಮ್ಮ ವಚ್ಚೆ ಸಂವತ್ಸರಾದಿ
ಪಂಡುಗವೊಲೆ ನೀ ಭಾರತ ಪ್ರಜಕೆಲ್ಲ
ಸಮಭಾಗ ಮ್ಯೆನ ಯುತ್ಸಾಹವೇಳ
ಯಂದರ ಮೊಕ ಮುಗಂಬೈ ನಿಲ್ಚಿಯರುಲಗೆ
ಲ್ಚಿತಿ ಮೆನಿ ಸ್ವಾತಂತ್ರ್ಯಸಿದ್ದಿಯಾದವು
ನನಿಲೋನಬಡಿನ ಗಲ್ಪಾಂತಂಬುವರಕು ಶಾ
ಶ್ವತ ನಾಕಲೊಕ ವಾಸಂಬು ಗಲದು
ರೆಂಟನೆದಿ ಗಲ್ಲಿನ ಗೃತಕೃತ್ಯುಲಗುದು
ಮಿಂತ ಕನ್ನನು ಜಿರಪುಣ್ಯಮೆದಿ ಗಲದು
ಮೀನ ಮೇಷಂಬುಲನು ಬ್ರೌದ್ಧು ಮಿಂಚ ಕುಂಡ
ನಿಪುಡೆ ಪ್ರಸ್ಥಾನ ಚೇರಿ ಮ್ರೊಯಿಂಪವಯ್ಯಾ"
(ರಾಣಾಪ್ರತಾಪ ಸಿಂಹ ಚರಿತ್ರ, ಪುಟ–೬೯, ೧೯೪೮)

೩. "ಈಶ್ವರ ಪದಭಕ್ತಿ ಎಪುಡು ಮಾನಗರಾದು
ಮಧುಮಾಂಸ ಸೇವನ ಮರಗರಾದು

ಬಂಗಾರುಪಟ್ಟು ಪಲ್ವಲು ಕಟ್ಟಿಗಾರಾದು
ಭೋಗ ಕೋಟುಲವಂಕ ಪೋವರಾದು
ಕಾಮಾದಿ ಶತ್ರು ವರ್ಗಮು ಲಂಟರಾದು ಸ
ತ್ಯಂಬು ಶೌಚಮು ವಿಡನಾಡರಾದು
ತ್ಯಾಗಂಬು ಕಲನ್ನೈನ ತಗ್ಗನಿಯಂಗ ರಾ
ದಾತ್ಮ ನಿಗ್ರಹಮು ಪೊನಾಡರಾದು
ಮಾನ ಮುತ್ತಮು ಧನ ಮೌಟ ಮರುವರಾದು
ದರ್ಮಮೇ ದೈವ ಮನು ಬುದ್ಧಿ ತಲಗರಾದು
ನಿಖಿಲ ಜಗಮುಲು ಮಾರೊಡ್ಡಿ ನಿಲುಚುಗಾಕ
ದೇಶಭಕ್ತಿನಿ ವಿಡನಾಡಿ ತೆರುಗರಾದು"
(ರಾಣಾಪ್ರತಾಪ ಸಿಂಹ ಚರಿತ್ರ, ಪುಟ–೭೦, ೧೯೪೮)

೪. "ಈಶ ಭಕ್ತಿಕಿ ಮಿಂಚಿನ ದೇಶಭಕ್ತಿ
ದೇಶಭಕ್ತಿಕಿ ದಗಿನ ಯಾತ್ಮಿಯ ಶಕ್ತಿ
ಯಾತ್ಮಶಕ್ತಿಕಿ ದೋಡುಗನಾದುನಿಕತ
ರಕ್ತಿ ಮನಿ ಯೊಪ್ಪನಾಡೆ ಭಾರತಮು ಮುಕ್ತಿ"
(ವಂದೇಮಾತರಂ, ಪುಟ–೫೫, ೧೯೫೦)

ಕಥೆ

೫. ರಂಗಿ - "ಏಂದೇ ಮಾಮಾ! ನುವ್ವು ಸರಪಂಚಿವೈನಾವು ಗದಾ! ದೀನಿಕೇಮೈನಾ ಜೀತಮಿತ್ತಾರಾ?" ಅನಿ

ಗಂಗನು - "ಇಚ್ಚಟಟ್ಟಯಿತೆ ಎವುರೈನಾ ಜೆಪ್ಪರಾ? ಇಚ್ಚೆಮಾಟ ಅನುಮಾನಮೇ"

ರಂಗಿ - "ಪೋನಿಲೆ ಜೀತಮಿಚ್ಚರಿ ಇಯ್ಯಕಪೋಯಿರಿ, ಸರಪಂಚಿವೈನಾಕನುವ್ವು

ಕೂಲಿಕೆಕ್ಕಡಪೋತಾವುಲೆ ಮಾಮಾ! ಇಂಟಿದಗ್ಗರ್ನೆ ವುಂಡು.

ನೇನು ಕೂಲಿಕಿ ಬೋತೆ ರೆಂಡುಮುದ್ದಲು ತೆಸ್ತಾನು ಗದಾ । ನಿಕೊಕಟಿ

ನಾಕೊಕಟಿ" ಎನ್ನುತ್ತಾಳೆ

(ತೆಲುಗು ಕಥೆಗಳಲ್ಲಿ ಗಾಂಧಿ ದರ್ಶನಂ, ಪುಟ–೧೭೫, ೨೦೦೮)

೬. "ನಾಕು ತೆಲಿಸಿಂದೇಮಂಟೆ - ನೇನು ತಿರಿಗೆಲ್ಲೆಟಪ್ಪಟಿಕಿ ನಾ ಗುಡಿಸೆಲೊ

ಮಟ್ಟಿಗೋಡಲು, ಪೈನ ಸಪ್ಪದಂಟು ಕಪ್ಪು ಎದುರು ತಡಿಕತೊಬೆಟ್ಟುಕುನ್ನ ತಲುಪು

ಇಂಟ್ಲೋನಾ ಸತ್ತುಗಿನ್ನ, ನಾಪೆಳ್ಳಾಂಕಟ್ಟುಕುನೇ ಚಿಂಕಿಪಾತಲು, ನಾಬಿಡ್ಡಲು ತೊಡುಕ್ಕನೇ ಮಾಸಿಕುಲ ಗುಡ್ಡಲು ಮಾರಲೇದು, ಮರ್ಯೆತೆ ನೇನು ಮಾತ್ತರಂ ಮಾರಿಪೋಯಿ ನಾನನಿ ಅಂಟಾ ವುಂಡಾರು...." (ತೆಲುಗು ಕಥೆಗಳಲ್ಲಿ ಗಾಂಧಿ ದರ್ಶನಂ, ಪುಟ–೧೭೫, ೨೦೦೮)

೭. "ನೀ ಕಂಟೆ ಮಾಕು ಪೆದ್ದ ದಿಕ್ಕೆವರು? ಬತುಕಿನಂತಕಾಲಂ ಮಾ ಬಾಗಲಕೋಸರಮೆ ಪಾಟುಬಡಿನಾವಂಟ! ಮಾಕು ಗಿರಿಜನಲುನನಿ ಪೇರು ಬೆಟ್ಟಿಂದಿ ಗೂಡಾ ನುವ್ವೆನಂಟ". (ತೆಲುಗು ಕಥೆಗಳಲ್ಲಿ ಗಾಂಧಿ ದರ್ಶನಂ, ಪುಟ–೧೭೬, ೨೦೦೮)

೮. "ಈ ಹರಿಜನುಲ್ಕಿ ಇಂಕಾ ಅಕ್ಕಡೇ ವುಂಡನಿಸ್ತೇ ಆ ಚುಟ್ಟುಪಕ್ಕ ಉನ್ನ ವಿಲುವೈನ ಸ್ಥಲಾನ್ನಿ ಕಾಸ್ತಾ ಕಾಜೇಸ್ತಾರು ಅಂತಾ ರೋಷ್ಟು ಪಟ್ಟಿ ಪೋತುಂದಿ". (ತೆಲುಗು ಕಥೆಗಳಲ್ಲಿ ಗಾಂಧಿ ದರ್ಶನ, ಪುಟ–೧೭೯, ೨೦೦೮)

ನಾಟಕ

೯. "ಭಾರತ ವೀರಕುಮಾರಾ। ರಾರಾ ಕರ್ಷಕ ವೀರಾ
ಕಲಪಿಮೆಲಸಿ ನಿ ಹಕ್ಕುಲ ಕೊರಕ್ಕೈ–ಕದನಮು ಚೆಯಮುರಾ
ಎದುರುಲೆಸಿ ನೀ ಶಕ್ತಿನಿ ಚಾಟಗ। ನೆಗುರುವೆಯರಾ ಜೆಂಡಾ"
(ಮುಂದಡುಗು, ಪುಟ–೬, ೧೯೪೫)

೧೦. "ನೂಲು ತಿದಾಮು ರಾರಾ
ಅಲಸಾಲಿಡೂಕನ್ನಾ, ಬಹುಸನ್ನಾನ್ಯೆನ ನೂಲು"
(ಮುಂದಡುಗು, ಪುಟ–೧೨, ೧೯೪೫)

೧೧. "ಸ್ವಾತಂತ್ರ್ಯಮು ಸ್ವೇಚ್ಛೆಯು ಶಾಂತಿ
ಈ ಜಗತಿ ಲೇದಾ ಸ್ತ್ರೀಲಕು
ಸಂಘ ದುರಾಚಾರಾಲೆ ಕ್ರುಂಗದೀಸೆ ಮನಲನೆ
ಲೇದಾ ಇಕ ತರಿಂಚು ಮಾರ್ಗಮೂ
ಝಾನ್ಸಿ ಲಕ್ಷ್ಮಿರುದ್ರಮ ಜಾತಿನಿ ಜನ್ಮಿಂಚು
ಭೀತಿಯೆಲ ಹಕ್ಕುಲಡುಗಗಾ"
(ಮುಂದಡುಗು, ಪುಟ–೧೩, ೧೯೪೫)

೧೨. "ಓ ಕರ್ಷಕ ವೀರಕುಮಾರ ಲೇರಾ
ಕ್ರೂರ ಜಮೀನ್ದಾರಿ ಬಾಧಲತೊ, ಮಾರಣಮ್ಯೆಪೋನೆಲಾ ಲೇರಾ
ಭಾರತ ಭಾಗ್ಯವಿದಾತವು ನೀವೋ ರೈತ

ಬಾನಿಸತ್ವಮುನ ಪಡಿಯಿಟು ಚಾವಗನೆಲಾ
ಕೂಡದೀಸಿಕೊನಿ ನೀ ಸೋದರಲನು
ಪೀಡನ ಪದ್ಧತಿ ನಿಪುಡೆದಿರಿಂಪನೆ
ವೇಗರಾರಾ ಮುಂದುಕಿಪುಡೆರಾರಾ
ಚಾವುದಪ್ಪ ದೆಪ್ಪುಡೈನ ಸಾಗಿರಮ್ಮುರಾ
ಅನ್ನಿಮೂಲಲಕಿದೆ ನಿನಾದಂ
ಬಂದಜೆಯರಾ ಕರ್ಷಕವೀರಾ ಲೇರಾ"
(ಮುಂದಡಗು, ಪುಟ–೨೧, ೧೯೪೫)

೧೩. "ಧನಮುನ ಕಾಶಿಂಚಿ ತನಯನು ಗೊಂಪೊಯಿ
ಮುದಿವಗ್ಗುಕಿಚ್ಚೆಡು ಮೂರ್ಕುಡೊಕಡು
ಮಂಚಿಸಂಬಂಧಂಬು ಮಿಂಚಿಪೋವುನಲಂಚು
ಚಿನ್ನಪಿಲ್ಲಕೆ ಪೆಂಡ್ಲಿಜೆಯುನೊಕಡು
ಮೈನರಿಕಾನಿಕಿ ಮಿಂಚಿನದೇಮಂಚು
ಈಡುಜೋಡೈನ ಯೋಚಿಂಪಡೊಕಡು"
(ಮುಂದಡುಗು, ಪುಟ–೪೫, ೧೯೪೫)

೧೪. "ರೆಂಡು ಜಾಮುಲ ಯೆರ್ರನಿ ಮಂಡು ಟೆಂಡ
ಬಂಡ ಚಾಕಿರಿ ಜೆಯಚು ಕಂಡ ಗರುಗ
ತಿಂಡಿ ದೊರಕಕ ವಸ್ತುರಿಡಿ ಯೆಂಡಿಪೋವು
ಕೃಷಕಬೃಂದಮ ಲೆಮ್ಮು ವೆವುಪುನಾದಿ"
(ಮುಂದಡುಗು, ಪುಟ–೩೩, ೧೯೪೫)

೧೫. "ಪದಿಮಂದಿಕೋಸಂ ಜೈಲುಕು ಪೋತುನ್ನಾಂ....
ಇಂದುಲೋ ಮಾಕು ಸಿಗ್ಗು ನಾಮಾರ್ದಾಯೇಮಿ ಲೇದು
ಯಿಸಂಕೆಳ್ಳನ್ನಾ ಜೈಲನ್ನಾ ಮಾಕೆಂ ಭಯಂಲೇದು"
(ಮುಂದಡುಗು, ಪುಟ–೪೫, ೧೯೪೫)

೧೬. "ಶ್ರಮಿಕಾವಳಿ ತಮ ಸಂಘ ಶಕ್ತಿಯೆರಿಗಿ
ನಡುಮು ಬಿಗಿಯಿಂಚಿ ನಿಲ್ಚಿ ಮುಂದಡುಗುವೇಯ
ಮೃತ್ಯುಕೋರಲನೆನೆ ಪೆಕಲಿಂಚಿವೈಚು
ಸಂಘಬಲಮುನಕೇದಿ ಅಸಾಧ್ಯಮಿಲನು"
(ಮುಂದಡುಗು, ಪುಟ–೫೦, ೧೯೪೫)

೧೭. ನಾಗೇಂದ್ರರಾವ್ – "ಕಾಸಿಂ ಎಂದುಕೊಯ್ ನೀಕೀ ಸಂಘಲ ಗೊಡವ? ವಾಳ್ಳಂಟೆ ಪದಿಮಂದಿ ಗಲಾಳ್ಳು. ಮೀರೋ ರೆಂಡು ಕೊಪಲಾಳ್ಳು.

ಕಾಸಿಂ – ಐತೆ

ನಾಗೇಂದ್ರರಾವ್ – ಆಂ ಅಯಿತೆನಾ? ವಾಳ್ಳಂತಾ ಹಿಂದುವುಲು. ಮಂಚಿಕಿ ಚೆಡ್ಡಕಿ ಒಕಳಲೊಕಳು ಅಂಡಾದಂಡಗಾ ವುಂಟಾರು. ಅವಸರಂ ವಚ್ಚಿ ಚಂಕಕೆಕ್ಕಿಂಚುಕುಂಟುನ್ನಾರುಗಾನಿ, ಲೇಕಪೋತೆ ಮೀ ಮಹಮ್ಮದಿಯುಲ ಮುಖಂ ಚೂಚೆದೆವಡೋಯ್.

ಕಾಸಿಂ – ಇಪ್ಪುಡು ಆ ಗೊಡವ ಏಮಿಲೇದಂಡಿ. ಕುಲಂ ಮತಂ ತಗಾದೆಲು ಕೊಂಚಂ ಗೂಡಾ ಲೇಕುಂಡಾ ಮಾ ರೈತುಲು ಅಂತಾ ಬಾಯಿ ಬಾಯಿಗಾ ವುಂಟುಂಡಾಂ." (ಮುಂದಡುಗು, ಪುಟ-೫೨, ೧೯೪೫)

೧೮. ಸೀತಾ – "ವೀರುನಿ ಕರ್ತವ್ಯಂ ಪೋರಾಟಂ ನಿಲಪಡಂಕಾದು, ಕಾಕೂಡದು ರಕ್ತಪುಟೇರಲು ಪಾರನಿ, ರಣರಂಗಮಂದು ಅಶೇಷವೀರುಲು ನೆಲಕೊರಗನಿ, ದೇಶ ದೇಶಮುಲನ್ನಿ ಏಕಮ್ಮೆ ಎದುರು ತಿರಗನಿ ಭಾರತ ಮಾತ ದಾಸ್ಯವಿಮುಕ್ತಿ ಜರುಗುನಂತವರಕು ಯಿ ಯುದ್ಧಂ ಆಗಬೋದು. ನಿಜಮ್ಮೆನ ಭಾರತಿಯುನಿ ವಿಧಿ ಅಡುಗಡುಕ್ಕಿ ರಕ್ತಾನ್ನಿ ಅರ್ಚನಗಾ ಅರ್ಪಣ ಚೇಸ್ತೂ ಯೀ ಭೀಕರ ಸಮರಂ ಕೊನಸಾಗಿಂಚಡಮೆ ಈ ಧರ್ಮಯುದ್ಧಂ ಮಧ್ಯಲೋ ಆಗೇದಾನಿಕಿ ವೀಲುಲೇದು. ಇದಿ ಅನಂತಪೋರಾಟಂ.

ರಾಮ – ಈ ಅನಂತಪೋರಾಟಾನ್ನಿ...

ಸೀತಾ – ನಿಲಿಪೇದಾನಿಕಿ ವೀಲುಲೇದು ಬಂದಿಖಾನಲ್ಲೋ ಕುಳ್ಳಿಪೊಯೆ ದೇಶಭಕ್ತಲುಕು ವಿಮುಕ್ತಿಲೇದಾ! ಶಾಂತಿಯುತ ಸಮಾವೇಶಲ್ಲೋ ತಲಲು ಬದ್ದಲೌತುಂಟೆ ಮೀ! ಅಹಿಂಸಾವಾದುಲಕು ರಕ್ಷಣೆಲೇದಾ?

ರಾಮ – ರಕ್ಷಣ ಜರಗಾಲಿ ಪರ ಪ್ರಭುತ್ವಂ ಪೋವಾಲಿ! ಸ್ವಾತಂತ್ರ್ಯ ಕಾವಾಲಿ!

ಸೀತಾ – ಅಂದುಕೆ ಯಿ ಯುದ್ದಂ ಜರಗಾಲಿ ಯಿ ಅನಂತ ಪೋರಾಟಂ ಮಧ್ಯಲೋ ಆಗಕುಂಡ ನಿರಂತರಂಗಾ ಕೊನಸಾಗಲಿ! ಸ್ವಾತಂತ್ರ್ಯ ವೀರುಲ ಬಲಿದಾನಪು ಮಂಗಳಗೀತಂ ವಿನಿಪಿಂಚಾಲಿ! ಆ ಮಂಗಳಗೀತಂ ವಿನ್ಪಿಂಚಿನದಾಕಾ ಯಿ ವಿಪ್ಲವಾಗ್ನುಲು ರಗುಲುಕುಂಟಾನೆ ಉಂಡಾಲಿ. ತೆನಗುಬಿಡ್ಡ ಮೊದಲು ಪೆಟ್ಟಿನ ಯೆ ಪನಿ ಮಧ್ಯಲೋ ಆಗದು. ಏಪನಿ ಚೇಸಿನಾ ತೆನುಗೋಡೆ ಚೆಯಾಲಿ! ತೆನುಗುಬಿಡ್ಡ ಪ್ರಾರಂಭಿಂಚಿನ ಯುದ್ಧಾನ್ನಿ, ಕಾರ್ಯಾನ್ನಿ ಸಾಧಿಂಚೆದಾಕಾ ಮಧ್ಯಲೋ ಎಡುವದು.

ರಾಮ – ಯುದ್ಧಾನ್ನಿ ಆಪರಾ? ಸೀತಾರಾಮರಾಜುಗಾರೂ! ಯುದ್ಧಾನ್ನಿ...

ಸೀತಾ– ಮಧ್ಯಲೋ ಆಪೆದಾನಿಕಿ ವಿಲುಲೇದು. ಈ ಜ್ವಾಲಾಜಲಿತ ಭಯಂಕರ ಸಮರಾಗ್ನುಲಲೊ ತೆಲ್ಲದೊರಲು ಆಹುತಿ ಕಾಕಮುನುಪೆ ಯಿ ಯುದ್ಧಂ ಆಗೆದಾನಿಕಿ ವಿಲುಲೇದು. ಅದಿ ನೀತಿಕಿ ವಿರುದ್ದಂ ಜಾತಿಕಿ ಅವಮಾನಂ ಭಾರತ ಮಾತ ಕಂಠಾನಿಕಿ ತಡಿಗುಡ್ಡಬೆಟ್ಟಿ ಗೊಂತು ಕೊಯಡಂ, ಅಮಾಯಕ ಮಾನವರಕ್ತಂತೊ ಅಂತುಲೇನಿ ಪಿಪಾಸುಚ್ಚುಲ್ಯೆ ಕಡುಪುಲು ನಿಂಪುಕೊನೆ ಯಿ ಮುಷ್ಕರ ಜಾತಿ ಸಮೂಲಂಗಾ ಸರ್ವನಾಶನಂ ಕಾಕಮುನುಪೆ ಈ ವೀರುಡು ಪಟ್ಟಿನ ಕತ್ತಿನಿ ದಿಂಪಡು ಅಂತವರಕೂ ಈ ಕೃಪಾಣಾನಿಕಿ ವಿಶ್ರಾಂತಿ ಲೇದು." (ಅಲ್ಲೂರಿ ಸೀತಾರಾಮರಾಜು, ಪುಟ–೨೭೯, ೧೯೫೪)

೧೯. "ರೋಷಂತೋ ಆಲೋಚಿಂಚಿ, ಆಲೋಚಿಂಚಿ ಅರ್ಥಂ ಲೇಕುಂಡಾ, ಅನಾಥಗಾ, ಪರಾನ್ನಭಕ್ತುಲಕು, ಪರಮ ದುರ್ಮಾರ್ಗುಲಕು, ಪಾಪಮಂಟೆ ಏಮಿಟೋ ತೆಲಿಯನಿ ಪಾಪಾತ್ಮುಲಕು ಲೊಂಗಿ ಪೋಮ್ಮನೆಟಮೆ ಕದೂ ನೀವು ಚೆಪ್ಪೆದಿ!" (ಅಲ್ಲೂರಿ ಸೀತಾರಾಮರಾಜು, ಪುಟ–೨೭೯, ೧೯೫೪)

೨೦. "ಓ ಭಾರತಮಾತಾ! ನಿ ಭವಿಷ್ಯತ್ತು ಚಿಮ್ಮಚೀಕಟಿಗಾ ಕನ್ಪಿಸ್ತುನ್ನದಮ್ಮಾ! ಒಕ ವರ್ಗಂ ಅಹಿಂಸಾ ಪ್ರಚಾರಂತೋ ಸ್ವಾತಂತ್ರ್ಯಂ ಸಂಪಾದಿಂಚಾಲಂಟೂವುಂದಿ. ಅದಿ ಎಂತವರಕು ಸಾಧ್ಯಮಾ ನಾಕರ್ತಂಕಾವಟಂ ಲೇದು. ನೇ ಚೇಸೆ ವಿಧಾನಂ ಮಂಚಿದಿ ಕಾದನಿ ಅದಿ ಹಿಂಸಾ ಅನಿ ಕೊಂದರಂಟುನ್ನಾರು. ಅಮ್ಮಾ ಭಾರತ ಮಾತಾ! ಈ ಅಹಿಂಸಾ ವಿಧಾನಂ ವಲ್ಲ ನೀ ಕಾಲು ತೆಗಿಪೋತುಂದೋ ನೀ ಕಂಠಮೇ ಎಗಿರಿಪೋತುಂದೋ ತೆಲಿಯಂಡಂಲೇದು. ಮನಕು ಕಾವಲ್ಸಿಂದಿ ಸಂಪೂರ್ಣ ಸ್ವರಾಜ್ಯಂ ದಾನಿಕೋಸಂ ಬ್ರಹ್ಮಾಂಡಮ್ಯೆನ ಪೋರಾಟಂ." (ಅಲ್ಲೂರಿ ಸೀತಾರಾಮರಾಜು, ಪುಟ–೨೮೪, ೧೯೫೪)

೨೧. ನಾರಾಯಣಮ್ಮ – "ಏ ಅಖಂಡ ಭಾರತ ಸ್ವಾತಂತ್ರ್ಯಕೋಸಂ ಯಿಂತವರಕೂ ಲಕ್ಷಾದಿ ವೀರುಲು ತಮ ರಕ್ತಾನ್ನಿ ಚಿಂದಿಂಚೇರೋ ವಾರಿ ಕೋರ್ಕಲು ಸಫಲಂ ಚೇಯಕುಂಡಾ ಭವಿಷ್ಯತ್ತುಲೋ ಮರೇ ಒಪ್ಪಂದಾನಿಕ್ಯೆನಾ ಸರೆ, ಏ ಭಾರತೀಯುಡ್ಯೆನಾ ಒಪ್ಪುಕುನ್ನಾಡಂಟೆ ಅದಿ ಪಚ್ಚಿ ದೇಶ ದ್ರೋಹಮೆ ಔತುಂದಿ.

ಸೀತಾರಾಮರಾಜು– ಸ್ವಾತಂತ್ರ್ಯ ಕೋಸಂ ಏ ಭಾರತೀಯುಡು ಕೂಡ ಅಮ್ಮುಡು ಪೋಲೇದು.

ನಾರಾಯಣಮ್ಮ – ಔನು! ರಾಮರಾಜು! ಅಮ್ಮುಡುಪೋಲೇದು. ಕನ್ನ ಬಿಡ್ಡ ಆ ಪನಿನಿ ಚೇಯಲೇಡು. ವೀರುಡುಗನೆ ಪ್ರವರ್ತಿಂಚು ತೆಲ್ಲಜಾತಿನಿ ಜಾಗರೂಕತತೋ ವೇಯಿಕಂಡ್ಲತೋ ಕನಿಪೆಟ್ಟು ರಾಜಲಕು ವಚ್ಚು ಆನಿಚುಲತೊ ಮೆಳಕುವಗಾ ಪ್ರವರ್ತಿಂಚು! ರಾಮರಾಜಾ! ಆ ನಾಡು ಶಿವಾಜಿ ಮಹಾವೀರುನಿತೊ ಮಾಟಲಾಡುಟಕನಿ ವಚ್ಚಿನ ಅಪ್ಜಲ್‌ಖಾನ್, ಶಿವಾಜಿ ವೀರುನಿಯಂದು ಅತ್ಯಂತ ಪ್ರೇಮಚೂಪುವಾಡಿವಲೆ ಆಲಿಂಗನಂ ಚೇಸುಕೊನುಚೂ ದಾಟಿಯುನ್ನ

ಬಾಕತೊ ಆ ಮಹಾವೀರುನಿ ಚಂಪಬೋಯಿನಾಡು. ದೇಶಮುಕಾನಿ ದೇಶಮುನುಂಡಿ ವಚ್ಚಿನ ದೋಪಿಡಿ ಗಾಂಡ್ಲಂದರೂ ಚೆಯುವಿಧಾನಮದಿ.

ಸೀತಾರಾಮರಾಜು – ಅಲಾಗೇನಮ್ಮಾ

ನಾರಾಯಣಮ್ಮ – ರಾಮರಾಜ! ರಾಜಿಲಕುವಚ್ಚು ಬ್ರಿಟಿಷ್‌ವಾಂಡ್ಲತೊ ತಲವಂಚಿ ಮಾಡ್ಲಾಡವದ್ದು. ಚಾತಿಚೂಪಿ ಜವಾಬುಚೆಪ್ಪು ಮನ ಸಾಂಪ್ರದಾಯಾನಿಕಿ ವ್ಯತಿರೇಕಮ್ಮೆನ ಏ ಒಪ್ಪಂದಾನಿಕಿ ನೀವು ಅಂಗೀಕಾರಂ ಚೂಪೊದ್ದು.

ಸೀತಾರಾಮರಾಜು – ನುವ್ವು ಕನ್ನಬಿಡ್ಡ ಸಾಂಪ್ರದಾಯಾನಿಕಿ, ಚರಿತ್ರಕು ವ್ಯತಿರೇಕಮ್ಮೆನ ಯೆ ಪನುಲು ಚೇಯಲೇಡಮ್ಮಾ!

ನಾರಾಯಣಮ್ಮ – ರಾಜೀಯ ಕುದರಕಪೋತೆ ಮನ್ಯಂಲೋನಿ ಮಗುವಲು ಕೂಡಾ ಮಹಾವೀರ ವನಿತಲ್ಲೆ ಅಡುಗಡುಕ್ಕಿ ಈ ಮಹಾಯಜ್ಞಂಲೋ ರಕ್ತಾನ್ನಿ ಚಿಂದಿಸ್ತಾರು.

ಸೀತಾರಾಮರಾಜು – ಬ್ರಿಟಿಷ್‌ವಾರಿತೋ ರಾಜಿಯ ಕುದರಕಪೋತೆ ಬ್ರಿಟಿಷ್‌ಜಾತಿ ದಾಸೋಹಮೆ ಅನಕಪೋತೆ, ಮೀರಂದಿಂಚೆ ಆಶಿಸ್ಸುಲ ಬಲಂತೊ ಪ್ರಚಂಡ ಭೀಕರ ಸಮರಾನ್ನಿ ಸ್ವರಾಜ್ಯಂ ವಚ್ಚಿಂದಾಕಾ ಕೊನಸಾಗಿಸ್ತಾನು. ಆ ಬ್ರಹ್ಮಾಂಡಮ್ಮೆನ ಯುದ್ಧಂಲೋ ಪ್ರತಿ ಭಾರತೀಯುಡು ಒಕ್ಕೊಕ್ಕ ಮಹಾಯೋಧಡು ಕಾವಾಲಿ! ಪ್ರತಿ ಭಾರತೀಯ ಯುವಕುಡು ಒಕ್ಕೊಕ್ಕ ಅಭಿಮನ್ಯುಡು, ಬಾಲಚಂದ್ರುಡು ಕಾವಾಲಿ! ಪ್ರತಿ ಭಾರತ ಸ್ತ್ರೀ ಕೂಡಾ ಮಹಾರಾಣಿ ಝಾನ್ಸಿ ವೀರವನಿತ ಮಾಂಚಾಲ ಕಾವಾಲಿ.

ನಾರಾಯಣಮ್ಮ – ಪ್ರತಿ ಭಾರತ ಸ್ತ್ರೀ ಕೂಡಾ ನಿಪ್ಪುಲು ಚಿಂದಿಂಚೆ ಒಕ್ಕೊಕ್ಕ ಕಾಳಿಕಾರೂಪಂ ಕಾವಾಲಿ! ಕಾಳಿಕಾಮಾತಾ ಪದಪುಟ್ಟನಕು ಅಸುರ ಲೋಕಮು ಮಟ್ಟಿಲೊ ಕಲಿಸಿ ನಟ್ಲು ಪೀಡಾಂಚಿ ಪಿಪ್ಪಿಚೇಸೆ ಯಿ ಪರಜಾತಿ ಪತನಮ್ಮೆ ಪೋವಾಲಿ!" (ಅಲ್ಲೂರಿ ಸೀತಾರಾಮರಾಜು, ಪುಟ–೨೮೪, ೧೯೫೪)

೨೨. ಸೀತಾರಾಮರಾಜು – "ಅಮ್ಮಾ! ನಾಕು ಅನ್ಯಾಯಂ ಜರಿಗಿಂದನಿ ಬಾಧಲೇದಮ್ಮಾ! ಕಾನಿ ಮನ ಭಾರತಮಾತಕು ಯೇ ಅನ್ಯಾಯಂ ಜರುಗುತುಂದನೆದೇ ನಾ ಬಾಧಮ್ಮಾ! ನಾ ಅಖಂಡ ಸರ್ವಮಂಗಳ ಭಾರತ ಮಾತ ದಾಸ್ಯ ಬಂಧಾಲು ಇಕ ಅಟ್ಟೇಕಾಲಂ ವುಂಡಕೂಡದಮ್ಮಾ! ಅದೇನಮ್ಮಾ ನಾ ಕೋರಿಕ ತಲ್ಲಿ ಭಾರತ ಮಾತ! ನಾ ಧರ್ಮಾನ್ನಿ ನೆರವೇರ್ಚೆನು. ನೀ ಭವಿಷ್ಯತ್ತನು ತಲಚುಕುಂಟೆನೆ ಈ ಮರಣ ಬಾಧಕನ್ನಾ ಇಂಕ ಭಯಂಕರಂಗಾ ವುಂದಮ್ಮಾ! ಅಮ್ಮಾ! ನಮಸ್ಕಾರಮಮ್ಮಾ! ಅಮ್ಮಾ! ಈ ವೀರುಡಿ ಮೃತ ಕಳೇಬರಾನ್ನಿ ಆ ಮುಷ್ಕರಜಾತಿ ತಾಕಕುಂಡಾ ಈ ನೀ ಬಿಡ್ಡ ಶವಂಮೀದ ಅಂತ ಮನ್ನುಚಲ್ಲಮ್ಮಾ! ಅಮ್ಮಾ! ಅಮ್ಮಾ!" (ಅಲ್ಲೂರಿ ಸೀತಾರಾಮರಾಜು, ಪುಟ–೨೮೯, ೧೯೫೪)

೨೩. ರಾಮಚಂದ್ರರಾವ್ – "ಸ್ವಾತಂತ್ರ್ಯ ವೀರುಲನಿ, ಅಹಿಂಸಾಮೂರ್ತುಲನಿ ಚೆಪ್ಪಕೋನು ಚುನ್ನ ಮಾ ಕಾಂಗ್ರೆಸ್ ವಾದುಲು ಸ್ವಾತಂತ್ರ್ಯ ಪೋರಾಟಮಂಟೆ ಏಮಿಟೋ ತೆಲಿಯಕ ವಾದಲಾಡುಕುಂಟುನ್ನ ಸಮಯಂಲೋ ಪಿಡುಗುಲಾ ಮಹಾಸಭಲೊ ಪ್ರತ್ಯಕ್ಷಮೈ "ಮಹಾಪ್ರಜಲ ಗುಂಡೆಬಲಂತೋ ಭಾರತೀಯುಲು ರಕ್ತಾರ್ಚನತೋ ಸ್ವಾತಂತ್ರ್ಯ ಸಂಪಾದಿಸ್ತಾಂ. ವೇದಿಕಲಮೀದ ಉಪನ್ಯಾಸಲು ಸ್ವರಾಜ್ಯಾನ್ನಿ ಸಂಪಾದಿಂಚಲೇವು" ಅನಿ ಪ್ರಬೋಧಂಚೇಸಿ ಮಾ ಕಳ್ಳು ತೆರಿಪಿಂಚಿನ ಸೀತಾರಾಮರಾಜು, ವಿಪ್ಲವ ಸಂದೇಶಂ ವಿನೇ ಭಾಗ್ಯಂ ಇಂಕ ಮಾಕುಲೇದು! ಬಾನಿಸಗಾ ಪುಟ್ಟಿ ಪ್ರತಿದಿನಮು ಚಚ್ಚೆದಾನಿಕನ್ನ, ಒಕ್ಕ ದಿನಮೆ ಚಚ್ಚಿ ಒಕ ವಿಪ್ಲವ ಜ್ಯೋತಿಲಾ ಪುಟ್ಟಿಮನಿ ಸಂದೇಶಮಂದಿಂಚಿನ ಸೀತಾರಾಮರಾಜು ಅಜೇಯ ನಾಯಕತ್ವಂ ಇಂಕ ಮಾಕುಲೇದಮ್ಮಾ ಇಂಕ ಮಾಕುಲೇದು." (ಅಲ್ಲೂರಿ ಸೀತಾರಾಮರಾಜು, ಪುಟ–೨೮, ೧೯೫೪)

ಅಧ್ಯಾಯ: ನಾಲ್ಕು

ರಕ್ತತರ್ಪಣ ಮತ್ತು ಕೋನಂಗಿ: ಒಂದು ಕಾಲಘಟ್ಟದ ಎರಡು ರಚನೆಗಳು

೧. "ರಚಯಿತ ತನ ರಚನಾ ಕಾಲಾನಿಕಿ ಮುಂದೂ, ರಚನಾಕಾಲಂಲೊ ಜರಿಗಿನ, ಜರುಗುತುನ್ನ ಅನ್ನಿ ಉದ್ಯಮಾಲನು ಚಿತ್ರೀಕರಿಸ್ತಾಡು. ಪ್ರಥಮ, ದ್ವಿತೀಯ ಜಾಗತಿಕ ಸಂಗ್ರಾಮಾಲ ಮಧ್ಯ ಭಾರತದೇಶ ಸ್ಥಿತಿನಿ, ಪ್ರಪಂಚಂಲೋನಿ ಪರಿಣಾಮಾಲನು ಪಾಠಕುನಿಕಿ ಕಳ್ಳಕು ಕಟ್ಟಿನಟ್ಟು ಅಭಿವರ್ಣಿಸ್ತಾಡು" ಎಂದು ಹೇಳುತ್ತಾನೆ (ತೆಲುಗು ನವಲಲ್ಲೋ ಸ್ವಾತಂತ್ರ್ಯೋದ್ಯಮ ಚಿತ್ರಣ, ಪುಟ–೨೯, ೨೦೧೨) –

೨. ವೈಟ್‌ವೆ ಲೆಯಿಡೆಲ್ ಕಂಪನಿಲಲೋ "ಅಮ್ಮಕ ಮನಿಷಿ" (ಸೇಲ್ಸ್ ಮ್ಯಾನ್) (ಪುಟ–೨೦)

೩. "ಒಕ ವಸ್ತುವು ಕೊನಡಾನಿಕಿ ವಚ್ಚಿನವಾನಿಚೇತ ಪದಿ ವಸ್ತುವುಲು ಕೊನಿಂಚಾಲಿ. ಊರಿಕೆ ಚೂಡಡಾನಿಕಿ ವಸ್ತೆ ಯಾಭೈವಸ್ತುವುಲು ಕೊನಿಪಿಂಚಾಲಿ" (ಕೋನಂಗಿ, ಪುಟ–೨೦, ೧೯೪೬)

೪. ಚೆಟ್ಟಿಯಾರ್– "ಮಾಮಿಯರ್, ಯುದ್ದಂಸಾಗುತೊಂದಿ. ಪ್ರಭುತ್ವಾನಿಕಿ ಮನಂ ಸಹಾಯಮು ಚೆಯಾಲಿ.

ಜಯಲಕ್ಷ್ಮಿ– ಪ್ರಭುತ್ವಾನಿಕಿ ಮನಂ ಎಂದುಕು? ಪ್ರಭುತ್ವಂಕನ್ನ ಭಾಗ್ಯವಂತುಲಯಿನವಾರು ಎವರು?

ಚೆಟ್ಟಿಯಾರ್– ಪ್ರಭುತ್ವಂ ಅಂಟೆ ಮನಮೆಗಾ?

ಜಯಲಕ್ಷ್ಮಿ– ಮನಂ ಪ್ರಭುತ್ವಂ ಎಟ್ಲು ಅವುದುಮು?

ಚೆಟ್ಟಿಯಾರ್– ಮನ ಮಂತ್ರುಲು ಕದಾ ರಾಜ್ಯಂ ಚೇಸ್ತುನ್ನದಿ?

ಜಯಲಕ್ಷ್ಮಿ– ಅಯಿತೆ ರಾಜ್ಯಂ ಚೆಯಿಂಚೇದಿ ತೆಲ್ಲವಾಂಡ್ಲು ಕಾದಾ? ಎಂದರು ಮಂತ್ರುಲು ವಚ್ಚಿನಾ ರಾಜ್ಯಂ ತೆಲ್ಲವಾಂಡ್ಲದಿದಾ! ಜಸ್ಟೀಸ್ ಪಾರ್ಟಿವಾರು, ಉದ್ಯೋಗಾಲ ಪಾರ್ಟಿವಾರು ಬ್ರಾಹ್ಮಣ ದ್ವೇಷ ಮೀದದಾ ಬತಿಕಾರು. ಇಂತಲೋ ಕಾಂಗ್ರೆಸ್ ವಚ್ಚಿಂದಿ, ಏಮಯಿಪೋಯಿನಾರು ಜಸ್ಟಿಸ್! ಮೀರೇಂ ಹೈಕೋರ್ಟ್ ಜಸ್ಟಿಸ್ಸಾ!

ಚೆಟ್ಟಿಯಾರ್– ಕಾದು ಮಾಮಿಯರ್! ಬಾಮ್ಮಲು ತಮ ರಾಜ್ಯಂದಾ ಸ್ಥಾಪಿಂಚಿರಿ. ಮನಂದರಂ ವಾಡ್ಲಕು ಬುದ್ದಿ ಚೆಪ್ಪಿನಾಮು.

ಜಯಲಕ್ಷ್ಮಿ– ನೇನು ಬ್ರಾಹ್ಮಣ ಸ್ತ್ರೀನಿ. ಅಯ್ಯಂಗಾರಿ ಅಮ್ಮಾಯಿನಿ, ಅಯ್ಯಂಗಾರಿ ಭಾರ್ಯನು.

ಚೆಟ್ಟಿಯಾರ್– ಆಯಿನಾ ಲಾ ಪ್ರಕಾರಂ ಮೀರುದಾ ನಾನ್ ಬಾಮ್ಮಲು!

ಜಯಲಕ್ಷ್ಮಿ– ಅಯಿತೆ ಕಾಂಗ್ರೆಸ್‌ವಾಂಡ್ಲು ಎವರು?

ಚೆಟ್ಟಿಯಾರ್– ವಾಂಡ್ಲು ಬಾಮ್ಮಲು

ಜಯಲಕ್ಷ್ಮಿ– ಪಟೇಲ್, ರಾಜೇಂದ್ರಬಾಬು, ಸುಭಾಷ್‌ಚಂದ್ರಬೋಸ್, ಆಜಾದ್, ಗಫೂರ್‌ಖಾನ್, ಅಸಲು ಕಾಂಗ್ರೆಸುಕು ಮಹಾನಾಯಕುಡು ಗಾಂಧೀಜಿ ಬ್ರಾಹ್ಮಣಲು ಕಾದೇ.

ಚೆಟ್ಟಿಯಾರ್– ವಾಂಡ್ಲಂತಾ ಬಾಮ್ಮಲ ಬಾನಿಸಲು

ಜಯಲಕ್ಷ್ಮಿ– ಅಯಿತೆ ಕಾಂಗ್ರೆಸ್ ಎಂದುಕು ನೆಗ್ಗಿಂದಿ? ಜಸ್ಟಿಸ್‌ಪಾರ್ಟಿ ನಾಮರೂಪಾಲು ಲೇಕುಂಡಾ ಪೋಯಿಂದಿದಾ?" (ಕೋನಂಗಿ, ಪುಟ–೨೭, ೧೯೪೬)

೫. "ಮಾ ದೇಶಾನಿಕಿ ಪ್ರತ್ಯೂಷ ವಚ್ಚಿಂದಿ
ಮಾ ಎಡದಲೋನೇ ಸ್ವೇಚ್ಛಾಕಾಂತುಲು ದರಿಶಾಯಿ
ಹಿಂದೂ ಮುಸ್ಲಿಂ ಪಾರಶಿ ಶಿಕ್ಕೂ
ಅಂದರಂ ಏಕಂ ಅವುತಾಮೂ
ಸಂಪೂರ್ಣಂಗಾ ದೇಶಮಾತಕು
ಸ್ವಾತಂತ್ರ್ಯಾನ್ನಿ ತೆಸ್ತಾಮೂ" (ಕೋನಂಗಿ, ಪುಟ–೧೩೨, ೧೯೪೬)

೬. "ರಾಷ್ಟ್ರನಾಯಕುಲು, ಜಿಲ್ಲಾ ನಾಯಕುಲು ಬಂಧಿಂಪಬಡಿನಾರು. ಪ್ರಜಲು ಲಕ್ಷಲು ಬಯಲುದೇರಿ ರೈಳ್ಳಾಪಿ, ಪೆಟ್ಟೆಲು ತಗುಲಬೆಟ್ಟಿನಾರು. ಪಟ್ಟಾಲು ಲಾಗಿಪಾರವೇಶಾರು. ತಂತಿಟಪಾತಿಗಲು ತೆಂಪಿಪಾರವೇಶಾರು. ರೈಯಿಲು ಸ್ಟೇಷನುಲು, ತಾಲೂಕಾಫಿಸುಲು, ಕಲೆಕ್ಟ್ರಾಫಿಸುಲು ತಗುಲಬೆಟ್ಟಾರು. ಅನೇಕ ಸ್ಥಲಾಲಲೊ ಪೊಲೀಸ್ ಕಾಲ್ಪುಲು, ಪೊಲೀಸುಲನೆ ಕೊನ್ನಿಚೋಟ್ಲ ತಗುಲಬೆಟ್ಟಿನಾರು. ದಿಟ್ಟಮಯಿನ ಜಾತಿಯ ನಾಯಕ ನಾಯಕುಲು ಮಾರುಮೂಲಲಕು ಪೋಯಿ ಉದ್ಯಮಂ ಸಾಗಿಸ್ತುನ್ನಾರು" (ಕೋನಂಗಿ, ಪುಟ–೨೪, ೧೯೪೬).

೭. "ಮಹಾತ್ಮಗಾಂಧಿ! ಕ್ವಿಟ್ಇಂಡಿಯಾನು
ಮಹಾವಾಕ್ಕುನೆ
ಮಂತ್ರಂ ಚೇಶಾವೂ
ಬ್ರಿಟಿಷ್‌ಗುಂಡೆಲೂ ಪಿಚುಪಿಚುಮನ
ಭೇರಿನಾದಂ ಚೇಶಾವೂ
ಇನ್ನೆಳ್ಳೂ ನಿಮಾಟೇ ಮಾಕೂ
ಎಂತೋ ಮುಂದುಕು ನಡಿಪೆಶಕ್ತಯಿ
ಸ್ವರಾಜ್ಯಯುಗಮುಕು ಸಾಗಿಂಚಿಂದಿ
ಅಡ್ಡಂಲೇನಿ ವೇಗಂತೋಟಿ
ಮಹಾತ್ಮ...
ಬ್ರಿಟಿಷ್ ಪ್ರಭುತ್ವಪು ಮಾಯ ಎತ್ತುಲಕು
ವಿರುಗುಡು ಶಕ್ತಯಿ ವಿಜ್ರುಂಭಿಂಚಿ
ಹಿಂದೂ ಮುಸಲ್ಮಾನ
ಪಾರ್ಸಿಕ್ಕುಲ
ಸಂಯೋಗಾನಿಕಿ
ಸಾಧನಮ್ಮೆನಾವೂ
ಮಹಾತ್ಮ ಗಾಂಧೀಜಿ...
ಅಧೋಗತಿಲೊ ಪಡಿ ಅಲ್ಲಲ್ಲಾಸೆ
ಹರಿಜನುಲಂದರಿ ರಕ್ಷಿಂಚಾವೂ
ವಾರಿಕಿ ಹಕ್ಕು ಪ್ರಥಮಸ್ಥಾನಮು
ವಾರಿಕೆ ತಿರಿಗಿ ಇಪ್ಪಿಂಚಾವೂ
ಮಹಾತ್ಮಗಾಂಧಿ!
ಜಯ ಜಯ ಲೋಕಗುರು
ಸತ್ಯಮು ಧರ್ಮಮು ಚಂಪಿನ ಲೋಕಮು
ನಿತ್ಯ ಪದಾರ್ಥಮು ಎರುಗನಿ ಲೋಕಮು
ಅಮೃತನಿನಾದಮು ನಿಜಯನಾದಮು
ಆಲಂಕಿಂಚುತೂ ಆನಂದಮಾಯೆ!"
(ಕೋನಂಗಿ, ಪುಟ-೨೪೯-೨೫೦, ೧೯೪೭)

೮. "ಅಭಿಮಾನಮೆ ಗೊಪ್ಪಾ? ಪ್ರೇಮ ಗೊಪ್ಪಾ? ಅನಿ ಮೆಹರುನ್ನೀಸಾ ಕಂಟನೀಳ್ಳು ತೆಸ್ತುಂದಿ. ರಿಯಾಸತ್ ಮಾಟ್ಲಾಡಡು. ತನ ತಂಡ್ರಿ ಮುಸ್ಲಿಂಲೀಗ್ ನಾಯಕುಲಲೊ ಒಕರು. ತನ ಬಾವ ಜಾತಿಯ ನಾಯಕುಲಲೊ ಒಕಡು. ಪಾಕಿಸ್ತಾನ ವಿಷಯಮಯಿ ಮುಸ್ಲಿಂ ಲೀಗ್ ನಾಯಕ ವರ್ಗಂ ಅನುಮಾನಸಹಿತಂಗಾ ಮಾಟ್ಲಾಡುತೊಂದಿ. ಪಾಕಿಸ್ತಾನ ಸೃಷ್ಟಿಂಚಡಂ ಮುಸ್ಲಿಂ ಜಾತಿ ರಕ್ಷಿಂಚಡಂ, ಮುಸ್ಲಿಂ ಜಾತಿನಿ ರಕ್ಷಿಂಚಕಪೋತೆ ಮುಸ್ಲಿಂ ಜಾತಿ ನಶಿಂಚಿಪೋತುಂದಿ. ಆ ಜಾತಿ ನಶಿಸ್ತೆ ಇಸ್ಲಾಂ ಮತಮೆ ನಶಿಸ್ತುಂದಿ" ಎನ್ನುತ್ತಾಳೆ. (ಕೋನಂಗಿ, ಪುಟ–೨೬೪, ೧೯೪೬)

೯. "ನೇನು ಹರಿಜನ ಸೇವ ಚೇಯಗಲನಾ, ಚೇಯಲೇನಾ? ತನಕಿ ಕುಲಮೆ ಲೇದು. ಗುಡಿ ಮಿಂಗೆವಾಡಿಕಿ ಗುಳ್ಳೋ ಲಿಂಗಮೆಂತ? ಅನಿ ಅನುಕುನ್ನಾಡು" ಎನ್ನುತ್ತಾನೆ. (ಕೋನಂಗಿ, ಪುಟ–೧೦೭, ೧೯೪೬).

೧೦. ಅನಂತಲಕ್ಷ್ಮಿ– "ನೇನು ಗಾಂಧಿತ್ವವಾದಿನಿ, ಖದ್ದರು ಕಟ್ಟಕಪೋವಚ್ಚುಗಾಕ, ವಡಕಕ ಪೋವಚ್ಚುಗಾಕ! ಕಾನಿ ಮಾವಾರು ಜಸ್ಟೀಸ್‌ಪಾರ್ಟಿ ಅಯಿನಾ ಲೇಕ ಪ್ರಭುತ್ವ ಪಕ್ಷಪಾತಿಯುಲಯಿನಾ ನಾಕು ಲೆಕ್ಕಲೇಕುಂಡಾ ಉಂಡನು. ಮೆಹರ್– ನುವ್ವು ಅಸಲು ಗಾಂಧಿವಾದಿವನುಕೊ, ನುವ್ವು ಖದ್ದರ್ ತಪ್ಪ ಇತರ ವಸ್ತ್ರಾಲು ಕಟ್ಟುಕೋವನುಕೊ ನುವ್ವು ಎಪ್ಪುಡೂ ವಡುಕುತೂ ಉಂಟಾವು ಅನುಕೋ! ಅಲಾಂಟಪ್ಪುಡು ಮೀ ಆಯನ ನಿನ್ನು ಖದ್ದರು ಮಾನಿವೇಯಮನಿ, ವಡಕಡಂ ಪನಿಕಿರಾದನಿ, ಗಾಂಧಿತೋ ಸಂಬಂಧಂ ಏ ಮಾತ್ರಮೂ ಪನಿಕಿರಾದನಿ ಪಟ್ಟುಬಟ್ಟಾಡನುಕೋ, ಅಪ್ಪುಡೆಂ ಚೇಸ್ತಾವು.

ಅನಂತಲಕ್ಷ್ಮಿ– ನಾಕು ಹಿಂಸಾ ಅಂಟೆ ನಮ್ಮಕಂ ಲೆದು.

ಮೆಹರ್– "ಏಮಿ ಗಾಂಧಿ ತತ್ವವಾದಿ! ಎಕ್ಕಡ ನೇರ್ಚುಕುನ್ನಾವು ಈ ವೇದಾಂತಮು? ಯೆಪ್ಪುಡು ಪ್ರವೇಶಿಂಚಾವು ಕಾಂಗ್ರೆಸುಲೋ?"

ಅನಂತಲಕ್ಷ್ಮಿ– ಅಹಿಂಸಾ ಪರಮಸಾಧನಂ ಅನಿ ನಮ್ಮಡಾನಿಕಿ ಕಾಂಗ್ರೆಸುಲೋ ಚೇರಾಲಾ" (ಕೋನಂಗಿ, ಪುಟ–೧೮೮೧, ೧೮೩, ೧೯೪೬).

೧೧. "ಖಾದಿ ಪ್ರಚಾರ ಕಾರ್ಯಾಲಯಾನಿಕಿ ಪೋಯಿ ವಡಕೇದಿ, ಇತರುಲಕು ವಡಕಟಂ ನೇರ್ಪೇದಿ ಅಕ್ಕಡನುಂಡಿ ಮಹಿಳಾ ಖಾದಿ ಪ್ರಚಾರಾಲಯ ವಸ್ತ್ರವಿಕ್ರಯಶಾಲಕು ಬೋಯಿ, ಅಕ್ಕಡ ಖದ್ದರು ಅಮ್ಮೇದಿ ಚೇಸ್ತುನ್ನದಿ. ತಲ್ಲಿತೋ ವಾರ್ಧಾಕುವೆಳ್ಳಿ ಸೇವಾಗ್ರಾಮಂ ಆಶ್ರಮಂಲೋ ಮಹಾತ್ಮುನಿ ಸನ್ನಿಧಿಲೋ ಸೇವ ಚೇಸ್ತು ಉಂಟುಂದಿ" (ಕೋನಂಗಿ, ಪುಟ–೧೮೮೪, ೧೯೪೬).

೧೨. "ಮೀರು ಈ ಯುದ್ಧಂ ಜರಿಗಿನನ್ನಾಳ್ಳು ಬ್ರಿಟಿಷ್ ಪ್ರಭುತ್ವಂಪೈನ ಕತ್ತಿಕಟ್ಟಕುಂಡಾ ಮಿ ಪತ್ರಿಕ ತಡುಪುತಾಮನಿ, ಯುದ್ದಂ ಬಾಗಾ ಸಾಗೆಂದುಕು ಮೀಕು ಶಕ್ತಿ ಉನ್ನಂತ ಮಟ್ಟಕು ಪನಿ

ಚೇಸ್ತಾಮನಿ ಮಾಟಯಿಸ್ತೆ ಪ್ರಭತ್ವಂವಾರು ಮಿಮ್ಮುವದಿಲಿವೇಸ್ತಾರು. ಮೀಕು ಪ್ರಭುತ್ವಂ ಎನ್ನೋ ಸಹಾಯಾಲು ಚೇಸ್ತುಂದಿ" (ಕೋನಂಗಿ – ೧೯೪೬, ಪುಟ ಸಂಖ್ಯೆ –೯೯)

೧೩. "ತನದೇಶಂ, ತನಮನ್ನು, ತನನದುಲು, ತನಗಾಲಿ, ತನ ಪೊಲಾಲು, ತನ ಪ್ರಜಲು ತನಲೋನೇ ಪ್ರತಿಫಲಿಸ್ತುನ್ನಾರು. ರಾಜ್ಯಾಲು, ವಿದೇಶಿಮುಲು, ಯುದ್ದಾಲು, ನಾಶನಾಲು, ಕರುವುಲು ರೋಗಾಲು ವಿವಿಧ ಮತಾಲು ಉದ್ಭವಿಂಚಡಂ, ಮತಯುದ್ಧಾಲ, ಬಾನಿಸತ್ವಂ, ಬಾನಿಸತ್ವಾನ್ನಿ ನಾಶನಂಚೇಸಿ ಸ್ವೇಚ್ಛ ಪೊಂದಾಲನ್ನ ಕಾಂಕ್ಷ, ಅಂದುಕು ಪ್ರಯತ್ನಾಲು, ಕುಟ್ರ, ರಹಸ್ಯಮಾರ್ಗಾಲು, ಪ್ರಥಮ ಸ್ವಾತಂತ್ರ್ಯ ಯುದ್ಧಂ, ಝಾನ್ಸಿರಾಣಿ ಲಕ್ಷ್ಮಿಬಾಯಿ, ತಾಂತಿಯಟೋಪಿ, ಕಾಂಗ್ರೆಸ್ ಸಂಸ್ಥ ಉದ್ಭವಂ, ಮಾಧ್ಯಮಿಕವಾದುಲು, ಅತಿವಾದುಲು, ರಾಜಕೀಯ ಹತ್ಯಾಲು, ಜಾತೀಯ ಮಹಾಭಾವೋದ್ಭವಂ, ಜಾತಿಯ ಭಾವ ಅಖಂಡ ತಾಂಡವಂ, ಹಿಂಸ, ಅಹಿಂಸಾಭಾವೋದ್ಭವಂ, ಗಾಂಧಿ ಮಹಾತ್ಮುಡು, ಸತ್ಯಾಗ್ರಹಂ, ಖೈದು, ಪಾಕಿಸ್ತಾನ ಭಾವ ಪ್ರಾದುರ್ಭಾವಂ ಒಹೋ! ತನದೇಶಂ ಎನ್ನಾಳ್ಳವರಕು ಈ ಪಂಜರಂಲೊ ಉಂಡಾಲನಿ ತಲಚುಕುಂಟೂ ಕ್ರುಂಗಿ ಪೋತಾಡು". (ಕೋನಂಗಿ, ಪುಟ–೨೬೩, ೧೯೪೬)

೧೪. ಕೋನಂಗಿ– "ಕಾಂಗ್ರೆಸ್ ರಾಜಕೀಯಾಲ ಮಾಟ ಏಮಿಟಿ?

ಡಾಕ್ಟರ್– ಕಾಂಗ್ರೆಸ್ ಮಂಚಿದೆ. ಮಹಾತ್ಮಗಾಂಧಿ ಉತ್ತಮಾಶಯಾಲು ಕಲವಾಡು. ಕಾನಿ ಕಾಂಗ್ರೆಸ್ ಆಶಯಾಲ ಪ್ರಕಾರಂ ಕಾಂಗ್ರೆಸುಲೋ ಕೋಟಿಶ್ವರುಡು ಚೇರಿನಾ ಏಮಿ ಇಬ್ಬಂದಿಲೇದು.

ಕೋನಂಗಿ– ಸಾಂಘಿಕವಾದುಲತೋ ಮಾತ್ರಂ ಕೋಟೀಶ್ವರುಲು ಚೇರಡಾನಿಕೆ ಅಭ್ಯಂತರಂ ವುಂದಾ.

ಡಾಕ್ಟರ್– ಕೋಟೀಶ್ವರುಲು ಚೇರವಚ್ಚುನು. ಕಾನಿ ಮುಂದು ಮುಂದು ತನಕುನ್ನ ಆಸ್ತಿ ಯಾವತ್ತು ಸಾಂಘಿಕ ವಾದಾನಿಕಿ ಅರ್ಪಿಂಚವಲಸಿ ವಸ್ತುಂದಿ.

ಕೋನಂಗಿ– ಸಾಂಘಿಕವಾದುಲು, ಸಾಮ್ಯವಾದಲು ಮಹಾತ್ಮಗಾಂಧಿಗಾರಿ ಬೋಧನಲು ಒಪ್ಪುಕೋರಾ?

ಡಾಕ್ಟರ್– ಒಪ್ಪುಕೋರು.

ಕೋನಂಗಿ– ಕಾರಣಂ

ಡಾಕ್ಟರ್– ಆ ಬೋಧನಲ ನಷ್ಟಂ ಏಮಿಟೋ, ನಷ್ಟಲಾಭಾಲು ಬೇರೆಜು ಚೇಸುಕೋಕುಂಡಾ ಸಾಂಘಿಕ ಸಾಮ್ಯವಾದುಲು ಆಯನ ಬೋಧನ ಎಲಾ ಒಪ್ಪುಕುಂಟಾರು.

ಕೋನಂಗಿ– ಮಹಾತ್ಮಗಾಂಧಿಗಾರು ನಿಜಮ್ಮೈನ ಸೌಮ್ಯವಾದಿ. ಡಾಕ್ಟರುಗಾರು, ಪ್ರಪಂಚಂ ಪ್ರಪಂಚಂಲೋ ಉನ್ನ ಪ್ರಜಲಂದಿರಿದಿ. ಆ ಪ್ರಜಲಂದರೂ ಸಮಂಗಾ ಪೈಕಿರಾವಾಲನಿ ಆ ಉತ್ತಮ ಪಥಂ ಅಂದಟಾನಿಕಿ ಮನುಷ್ಯುನಿ ಧರ್ಮಶಕ್ತಿನೆ ಆಧಾರಂ.

ಡಾಕ್ಟರ್– ಸಾಮ್ಯವಾದಂ ಚಪ್ಪೇದಿ ಅದೇ. ಮನುಷ್ಯನಿ ಧರ್ಮಶಕ್ತಿ ಪೈನ ಆಧಾರಪಡಿ ಊರುಕುಂಟೆ ಆ ಉತ್ತಮಸ್ಥಿತಿ ರಾವಡಾನಿಕಿ ಭೂಗೋಳಂ ಅಂತಮಯ್ಯೆವರಕೂ ಎದುರುಚೂಸ್ತೂ ವುಂಡವಲಸಿಂದೆ!

ಕೋನಂಗಿ– ದೇನಿಮೀದ ಆಧಾರಪಡಿತೆ ತ್ವರಗಾ ವಸ್ತುಂದಿ?

ಡಾಕ್ಟರ್– ಹಿಂಸಮೀದೇ ತಪ್ಪುಚೇಸಿನ ವಾರಿನಿ ದಂಡಿಂಚಡಂ ಮಾನವಜಾತಿಲೋ ವುಂಡೇ ಒಕ ಪೆದ್ದ ಶಕ್ತಿ! ಆ ಶಕ್ತಿನಿ ಉಪಯೋಗಿಂಚಡಂ ಮಾನಿವೇಸಿ ಎಕ್ಕಡೋ ಮೂಲದಾಗಿ ವುನ್ನ ಒಕ ಚಿನ್ನ ಮುಸಲಮ್ಮ ಶಕ್ತಿನಿ ಸಹಾಯಂ ತೆಚ್ಚುಕುಂಟೆ ಏಂ ಪನಿ ಜರುಗುತುಂದಿ?" (ಕೋನಂಗಿ, ಪುಟ–೭೭, ೧೯೪೬)

ಅಧ್ಯಾಯ: ಐದು

ಔದಾರ್ಯದ ಉರುಳಲ್ಲಿ ಮತ್ತು ಕೊಲ್ಲಾಯಿ ಗಟ್ಟಿತೇನೇಮಿ: ಸಮಾನ ಘಟನೆಗಳನ್ನು ಪ್ರತಿನಿಧಿಸುವ ರಚನೆಗಳು

೧. "ಮನಜಾತಿಯೋದ್ಯಮಂ ಚಾಲಾಮಂದಿ ಭಾವಿಸ್ತುನ್ನಟ್ಲು ಕೇವಲಂ ರಾಜಕೀಯಾಲಕು ಮಾತ್ರಮೆ ಪರಿಮಿತಮ್ಮೆನದಿ ಕಾದು. ಕುಲಮತ ಭೇದಾಲನು, ದ್ವೇಷಾಲನೂ ನಿರಾಕರಿಂಚಡಂಲೊ, ನಿರ್ಮೂಲಿಂಚಡಂಲೊ ದಾನಿ ಭವಿಷ್ಯತ್ತು ಆಧಾರಪಡಿ ವುಂದಿ. ಸಮಾಜಂಲೋ ಸಗಂ ಮಂದಿ ವುನ್ನ ಸ್ತ್ರೀಲನು ಮುಂದುಕು ತೀಸುಕುರಾವಡಂ ಸಮಾನಸ್ಥಾಯಿ ಕಲ್ಪಿಂಚಡಂ ಮೀದ ದಾನಿ ಪುರೋಗತಿ ಆಧಾರಪಡಿವುಂದಿ. ಅಸ್ಪೃಶ್ಯತನೂ, ಅಸಮಾನತನೂ ಪೋನಾಡಿ ವೆನಕಬಾಟು ತನಂತೋ ಅವಮಾನಾಲಕು ಗುರಿ ಅವುತನ್ನ ವರ್ಣ ಪಂಚಮತ್ವಾನ್ನಿ ನಿರಾಕರಿಂಚಡಂ, ವಾರಿಕಿ ಮಿಗಿಲಿನ ವಾರಿತೊ ಸಮಾನ ಪ್ರತಿಪತ್ತಿನಿ ಕಲಿಗಿಂಚಡಂ ಆ ಉದ್ಯಮಪುರೋಗತಿಕಿ ಆಯುಪುಪುಟ್ಟುಗಾ ವುಂದಿ. ಫ್ಯೂಡಲ್ ಆಚಾರಾಲನೂ, ಆಲೋಚನಲನೂ, ಅಲವಾಟ್ಲನೂ ಪೋನಾಡಿ ಜನಂಲೋ ತಲೆತ್ತುತ್ತುನ್ನ ಕೊತ್ತ ಆಲೋಚನಲಕೂ, ಆಚಾರಾಲಕೂ ಪುಷ್ಟಿನಿವ್ವಾಲಿ" (ಕೊಲ್ಲಾಯಿ ಗಟ್ಟಿತೇನೇಮಿ, ಪುಟ–೪೪, ೧೯೨೧)

೨. "ಸ್ಕೂಳ್ಳು, ಕಾಲೇಜಿಲು, ಕೋರ್ಟುಲು, ಉದ್ಯೋಗಾಲೂ ಮಾನೇಸಿ ಪರಾಯ ಪ್ರಭುತ್ವಂತೋ ಸಹಾಯ ನಿರಾಕರಣ ಚೆಯ್ಯಾಲಿ" ಎಂದು ಕರೆಕೊಟ್ಟಾಗ (ಕೊಲ್ಲಾಯಿ ಗಟ್ಟಿತೇನೇಮಿ, ಪುಟ–೯೧, ೧೯೨೧)

೩. "ಬಾಗಾ ಆಲೋಚಿಂಚುಕೊನೆ ದಿಗಿ ಉಂಟಾವುಲೆ ಡಿಂಗ್ರಾಲೂ ಸಾವರ್ಕಲೂ ಚೂಪಿನ ತ್ಯಾಗಲೂ, ಸಾಹಸಾಲತೊ ಸಮಾನಮ್ಮೆನ ತ್ಯಾಗಂ, ಸಾಹಸಂ ಚೂಪುತುನ್ನಾವು.

ಆಲೋಚಿಂಚನಿದೆ ಏ ಪನಿ ಚೆಯ್ಯಕೂಡದು. ಓ ಮಾರು ತಲಪೆಟ್ಟೇಕ ದಾನಿ ಅಂತೆದೊ ಚೂಡಾಲ್ಸಿಂದೇ ಗಾನಿ ಮಧ್ಯಲೊವೆನಕ್ಕಿ ತಿರಗರಾದನಿ ಆಯನ ಎಪ್ಪುಡೂ ಚೆಪ್ತೂಂಟಾರು.

ಅದೇ ಇಪ್ಪುಡು ಕೊತ್ತ ರೂಪಂಲೊ ವಿನಿಪಿಂಚಿಂದಿ.

ಅಂದುಲೋ ಎತ್ತುಕೊನ್ನದಿ ಅಲ್ಲಾಟಪ್ಪಾ ವ್ಯವಹಾರಂ ಕಾದು. ದೇಶ ಸ್ವಾತಂತ್ರ್ಯ ತೆಸ್ತಾನಂಟುನ್ನಾವು ಇಂದುಲೋ ಶರೀರಾನಿಕಿ ಕ್ಷೇಮಂಲೇದು. ಆಸ್ತುಲು ವಗೈರಾ ಮನಲ್ನಿ ಕಾಪಾಡವು. ಅಭಿಮಾನಿಂಚೆ ವಾಳ್ಳು ಕೂಡ ಒಕ್ಕೊಕ್ಕ ದೇಶಲೋ ಕನಬಡರು ಅನ್ನಾಡು.

ಸತ್ಯಾಗ್ರಹ ಪ್ರತಿಜ್ಞ ತೀಸುಕೊನ್ನಪ್ಪುಡು ತೋಡಿವಾಳ್ಳಂತಾ ಚಪ್ಪಟ್ಲು ಕೊಟ್ಟೇರು ಹುಷಾರು ಚೇಶೇರು. ವಾಳ್ಳೆ ಮಳ್ಳಿ ರಾತ್ರಿ ತನ ಗದಿಕಿವ್ರೇಲು ಮೊಗಾಲು ವೇಸುಕುವಚ್ಚಿ ಚದುವು ಮಾನೇಸ್ತುನ್ನಂದುಕು ಅಂತ ಬಾಧಾ ಪಡ್ಡಾರು. ಪ್ರತಿಜ್ಞ ನುಂಚಿ ಬಯಪಡೆಂದುಕು ಅನ್ನಿ ಮಾರ್ಗಾಲು ಚೂಪಿಂಚೇರು" (ಕೊಲ್ಲಾಯಿ ಗಟ್ಟಿತೇನೇಮಿ, ಪುಟ-೧೨, ೧೯೨೧)

೪. "ತನ ತಂಡ್ರಿ ಕಾಂಗ್ರೆಸ್ ಸಭಲನಿ, ಆಂಧ್ರ ರಾಷ್ಟ್ರ ಮಹಾಸಭಲನಿ, ರಾಜಕೀಯ ಸಮಾವೇಶಾಲನಿ ವೆಳ್ಳುರಾವಡಾನಿಕಿ ಆಯನ ತನ ವಂತುಕು ವಚ್ಚಿನ ಅಯಿದು ಎಕರಾಲಲೊ ಸಗಂ ಇಪ್ಪಟಿಕೆ ಅಮ್ಮೆಶಾಡು. ಮಿಗಿಲಿಂದಾನಿಕಿ ಸರಿಪಡಾ ಅಪ್ಪು ವುಂದಿ. ವ್ಯವಸಾಯ ಪಂಟಲಕಿ ಕಾಸ್ತ ಧರಲು ಪಲುಕುತುನ್ನಾಯಿ ಗನುಕ ಅಪ್ಪುಲಾಳ್ಳುವೂರುಕುನ್ನಾರು ಗಾನಿ, ಲೇಕುಂಟೆ ಅದಿ ಕೂಡಾ ಎಪ್ಪುಡೋ ಅಯಿಪೋಯೇದಿ. ಆಯನತೊ ಎವರೋ ಪೆದ್ದ ಪೆದ್ದ ವಾಳ್ಳು ತಮಯಿಂಟಿಕಿ ಅಪ್ಪುಡಪ್ಪುಡೂ ರಾವಡಂ ಪೆದ್ದ ಗೊಪ್ಪಗಾ ಅನಿಪಿಂಚೇದಿ. ಓ ಮಾರು ತಮ ಊರಿಲೊನಿವಿವೇಕೋದಯ ಪುಸ್ತಕ ಭಂಡಾಗಾರಾನಿಕಿ ವಾರ್ಷಿಕೋತ್ಸವಂ ಜರಿಗಿನಪ್ಪುಡು ಕಾಶಿನಾಥುನಿ ನಾಗೇಶ್ವರರಾವು ವಚ್ಚೇರು. ಆಯನ ತಮ ಇಂಟನೆ ಬಸಚೇಸೆರು. ಅಲ್ಲಾಂಟಿ ಪೆದ್ದವಾಳ್ಳತೋಡಿ ಪರಿಚಯಾಲು, ಆ ಗೊಪ್ಪದನಂ ಆಸ್ತಿ ಪೋತುಂದನ್ನ ಕಷ್ಟಾನ್ನಿ ತೋಚನಿಯಲೇದು." (ಕೊಲ್ಲಾಯಿ ಗಟ್ಟಿತೇನೇಮಿ, ಪುಟ-೭೬,೧೯೨೧)

೫. "ಇದೆಪಟ್ಟಿನುಂಚಮ್ಮ! ಅನ್ನಾಡು

ಗಾಂಧಿಗಾರು ಚೆಪ್ಪಿನಟ್ಲು ಮೀರಂತಾ ಜೈಲುಕೆಡುತೂಂಟೆ ಮೇಮೀಪಾಟಿ ಪನೇನಾ ಚೆಯ್ಯಲೇಮಾ? ಅಂದಿ ಲಚ್ಚಮ್ಮ.

ಈ ಆರು ನೆಲಲ್ಲೋ ಮಾಕು ಕಾವಲಸಿನ ಪಂಚೆಲೂ, ಚೀರಲೂ ನೇಯಿಂಚುಕೋಗಲಿಗೆಂ. ಮೀ ಪೆದ ತಂಡ್ರಿ ತನಕು ವೆಂಕಟರಮಣ ಕೋರ್ಟುಲೊ ಸಾಕ್ಷ್ಯ ಇಚ್ಚಿನ ರೋಜು ನುಂಚಿ ರಾಟ್ನಂ ವೊಡುಕುತುನ್ನಾರು. ನೂಲು ಚಾಲಾ ಸನ್ನಗಾ ವುಂದಿ. ಎನಭಯಿ ನೆಂಬರು ವುಂಟುಂದನಿಪಿಂಚೆಂದಿ. ಅದಿ ಪೈಡಿಪತ್ತಿ ಪಿಂಜತೊ, ದಂಜ್ಯಾಲ ಕದರು ಮೀದ ತೀಸಿಂದಿ. ಆ ಪತ್ತಿಕೋಸಂ ದೊಡ್ಲೊಪದಿ ಪೈಡಿ ಪತ್ತಿ ಚೆಟ್ಲು ವೇಸೇರು. ಪದಿ ರಾಟ್ನಾಲು ಮಾಮಿಡಿಚೆಟ್ಟು ಕ್ರಿಂದ ಪೆಟ್ಟುಕೊನಿ ಶರಭಯ್ಯ ವಾನಿಕಿಕಾವಲಸಿನ ಮರಮ್ಮತ್ತುಲು ಚೇಸ್ತುನ್ನಾಡು" (ಕೊಲ್ಲಾಯಿ ಗಟ್ಟಿತೇನೇಮಿ, ಪುಟ-೨೮೨, ೨೮೩, ೪೩೭, ೧೯೨೧).

೬. "ಮೀ ಗಾಂಧಿ ದೇಶಾನ್ನಿ ಕೃತಯುಗಂ ವೇಪುಕು ತಿಪ್ಪಾಲನು ಕುಂಟುನ್ನಾಡನುಕೋವಾಲಿ, ಅದಿ ಜರಿಗೇ ಪನಿ ಕಾದು. ಗಾಂಧಿ ವುದ್ಯಮಾನಿಕಿ ಖದ್ದರು ಓ ಸಿಂಬಲ್ ಕಾವಚ್ಚು, ಅಂತೇಗಾನಿ, ದೇಶಂ ಪುರೋಗತಿಕಿ ಮಾತ್ರ ದಾನಿ ಪಾತ್ರಂ ವುಂಡದು" ಎನ್ನುತ್ತಾನೆ. (ಕೊಲ್ಲಾಯಿ ಗಟ್ಟಿತೇನೇಮಿ, ಪುಟ-೧೮೮, ೧೯೨೧)

೭. "ದಿಕ್ಕುಮಾಲಿನ ಕಾಂಗ್ರೆಸೂ ದಿಶಮಾಲಿನ ಗಾಂಧಿ... ಎಕ್ಕಡ ದಾಪರಿಂಚೇರೆ ತಲ್ಲಿ ಪಚ್ಚಗಾ ಎಕ್ಕಿವಸ್ತೂನ್ನ ಮೊಕ್ಕನಿ ತುಂಪೆಸಿನಟ್ಲಯಿಂದಿ ಕಾದೇ ಅಮ್ಮಾ!" (ಕೊಲ್ಲಾಯಿ ಗಟ್ಟಿತೇನೇಮಿ, ಪುಟ-೩೧೯, ೧೯೨೧)

೮. "ಆ ದಿಕ್ಕುಮಾಲಿನ ಗಾಂಧಿ ಎವಡೋ, ನಿಕ್ಷೇಪಂಲಾಂಟಿ ಇಂಟ್ಲೋ ಚಿಚ್ಚು ಪಟ್ಟೇಡು" (ಕೊಲ್ಲಾಯಿ ಗಟ್ಟಿತೇನೇಮಿ, ಪುಟ-೨೧೬, ೧೯೨೧)

೯. "ಅತಡು ತನ ವದ್ದ ವುನ್ನ ಡಬ್ಬೂ, ಅಪ್ಪು ಚೇಸಿ ತೆಚ್ಚಿನ ಡಬ್ಬೂ ಖದ್ದರು ವೊಡಿಕಿಂಚಡಂ, ನೇಯಿಂಚಡಂ ಮೀದ ಪಡುತುನ್ನಾಡು, ಓ ಪಾತಿಕ ಮಂದಿಕಿ ರಾಟ್ನಾಲು ಕೊನಿ ಇಚ್ಚಿ ವೊಡಿಕಿಸ್ತುನ್ನಾಡು." (ಕೊಲ್ಲಾಯಿ ಗಟ್ಟಿತೇನೇಮಿ, ಪುಟ-೩೦೧, ೧೯೨೧)

೧೦. "ರೆಂಡು ವಾರಾಲ ಪಾಟು ಪೊದ್ದುಟಾ- ಸಾಯಂಕಾಲಂ ಬಿಂದೆ ತೀಸುಕೊನಿ ಪಲ್ಲೆ ಜನಾನಿಕಿ ನೀಳ್ಳು ಪೊಯ್ಯಾಲಿ. (ಪುಟ-೩೨೮) ವರ್ಷಾಲು ವೆನಕಬಟ್ಟಯಿ, ಅಸ್ಪೃಶ್ಯಲಕು ನೂತಿ ವದ್ದ ನೀಳ್ಳು ತೊಡುಕೊನೆ ಅವಕಾಶಂ ಕಲಿಗಿಂಚಾಲಿ (ಪುಟ-೩೩೩) ಗಾಂಧಿಗಾರು ಅಸ್ಪೃಶ್ಯತಾ ನಿವಾರಣಾ ಗುರಿಂಚಿ ಚೆಪ್ತುನ್ನಾರು. ಮನ ಊಳ್ಳೋ ಓ ಚಿನ್ನ ಪನಿಚೇಸಿ ಮನ ಶಾಯಶಕ್ತುಲಾ ಆಯನ ಕೃಷಿಕಿತೊಡ್ಪಡದಾಂ" (ಪುಟ-೩೩೬). "ಅಸ್ಪೃಶ್ಯತಾ ಹಿಂದೂ ಮತಾನಿಕಿ ಮಾಸಿಪೋನಿ ಮಚ್ಚ. ಒಕ ಮಹಾನೇರಂ, ಅಸ್ಪೃಶ್ಯತಾ ನಿವಾರಣಕು ಜರಿಪೆ ಕೃಷಿ ಮಾನವುನಿ ಘನತನುಗುರ್ತಿಂಚಡಾನಿಕಿ ಜರಿಪೆ ಕೃಷಿ" (ಕೊಲ್ಲಾಯಿ ಗಟ್ಟಿತೇನೇಮಿ, ಪುಟ-೩೩೧, ೧೯೨೧).

೧೧. "ಬ್ರಹ್ಮ ಸಾಮಾಜಿಕುಲು ಕುಲಭೇದಾಲ್ನಿ, ಅಂಟುಸಾಂಟುಲ್ನಿ ಪಾಟಿಂಚರು" ಎಂದು ಬ್ರಹ್ಮಸಮಾಜದ ಕುಟುಂಬಗಳಿಗೆ ಭೇಟಿ ನೀಡಿ (ಕೊಲ್ಲಾಯಿ ಗಟ್ಟಿತೇನೇಮಿ ಪುಟ-೪೭, ೧೯೨೧)

ಅಧ್ಯಾಯ: ಆರು

ಮಾಡಿ ಮಡಿದವರು ಮತ್ತು ನಾರಾಯಣರಾವ್: ಸ್ವಾತಂತ್ರ್ಯ ಹೋರಾಟದ ಭಿನ್ನ ಮಾರ್ಗಗಳನ್ನು ಪ್ರತಿನಿಧಿಸುವ ರಚನೆಗಳು

೧. ಶಾರದ- "ನುವ್ವು ಗಾಂಧೀಗಾರಿ ಮತಂಲೋ ಚೇರಾವುಟೆ ಅಕ್ಕಯ್ಯಾ

ಶಕುಂತಲ- ನುವ್ವದೃಷ್ಟವಂತುರಾಲವು ಕಾಬಟ್ಟಿ ನೀಕು ನಾನ್ ಕೋ-ಆಪರೇಷನ್ ಭರ್ತ ದೊರಿಕಾಡು. ನುವ್ವು ನಿಮಿಷಂಲೋ ಚೇರಡಾನಿಕಿ ವೀಲುಂದಿ." (ನಾರಾಯಣರಾವ್ ಕಾದಂಬರಿ, ಪುಟ-೨೧೧, ೧೯೩೪)

೨. ರಾಜಾವಿಶ್ವೇಶ್ವರರಾವ್ – "ಏಮಂಡಿ ಖೈದುಕು ವೆಳ್ಳಿ ವಚ್ಚಾರೆ. ಮಳ್ಳಿ ಕಾಲೇಜಿಲೊ ಎಂದುಕು ಚೇರಾರೂ?"

ನಾರಾಯಣರಾವ್– "ನೇನು ಮಾ ತಂಡ್ರಿ, ಇತರ ಚುಟ್ಟಾಲೂ ಎಂತ ಚೆಪ್ಪಿನ ವಿನಕ ಯಿಂಟರುಲೊ ನೆಗ್ಗಿನ ಸಂವತ್ಸರಮು ವೆಸವಿಕಾಲಂಲೊ ಸಹಾಯ ನಿರಾಕರಣಂಲೊ ಚೇರಾನು. ಖೈದುಕು ವೆಳ್ಳಾನನುಕೊಂಡಿ."

ರಾಜಾವಿಶ್ವೇಶ್ವರರಾವ್ – "ರಾಜಮಂಡ್ರಿ ಜೈಲ್ಲೋನೆ ಉನ್ನಾರಾ"

ನಾರಾಯಣರಾವ್ – "ರೆಂಡು ನೆಲಲು ರಾಜಮಂಡ್ರಿ, ನಾಲುಗು ನೆಲಲು ಕಡಲೂರು."

ರಾಜಾವಿಶ್ವೇಶ್ವರರಾವ್ – "ಅಲಾಗಾ!"

ನಾರಾಯಣರಾವ್ – "ಅವುನಂಡಿ! ಜೈಲುನುಂಚಿ ವಚ್ಚಾನು. ಜೈಲುಕು ಮುಂದು ಆರುನೆಲ್ಲು ದೇಶಂ ಅಂತಾ ತಿರಿಗಿ ಉಪನ್ಯಾಸಲು ಯಿವ್ವಡಂ, ಖದ್ದರಮ್ಮಡಂ, ಮೊದಲೈನ ಪ್ರಚಾರಂ ಚೇಶಾನು." (ನಾರಾಯಣರಾವ್, ಪುಟ–೧೩೯, ೧೯೩೪)

೩. "ನಾಕು ಈ ಸಹಾಯ ನಿರಾಕರಣಂ ವ್ಯಥಾ ಅನಿ ದೃಡಮೈನ ನಮ್ಮಕಂ ಉಂದಿ. ಮೀರು ಪ್ರಭುತ್ವಮು ವಾಳ್ಳಿಚ್ಚಿನವಿ ಪರಿಪಾಲಿಸ್ತೂ ಎಕ್ಕುವಕಾವಲೆನಸಿ ಗಡಿಬಿಡಚೇಸ್ತು ಉಂಟೇ, ನೆಮ್ಮದಿ ನೆಮ್ಮದಿಗಾ ಅವೆ ವಸ್ತಾಯಿ. ಸ್ವರಾಜ್ಯಮೂ ವಸ್ತುಂದಿ" (ನಾರಾಯಣರಾವ್, ಪುಟ–೧೪೦, ೧೯೩೩)

೪. "ವಾಡವಾಡಕು ದಿರಿಗಿ ಯಮ್ಮುಚ್ಚುಂಡುನು ಸ್ವದೇಶ ವಸ್ತುವುಲ ನಮ್ಮುಚುಂಡುನು. ಗ್ರಾಮಗ್ರಾಮಮುಲಕು ಆಚಂಟ ರುಕ್ಮಿಣಿದೇವಿ ಮೊದಲಗು ದೇಶನಾಯಿಕಲ ಯಜಮಾನ್ಯಮುನ ದಿರಿಗಿ ಕಲ್ಲು ತ್ರಾಗವದ್ದನಿಯು, ಹಿಂದೂ–ಮಹಮ್ಮದಿಯ ಸಮ್ಮೇಳನ ಮುನ್ನಗಾನಿ ದೇಶಮುನಕು ಸ್ವರಾಜ್ಯಮು ರಾದನಿಯು ಬೋದಿಂಚುಚುಂಡೆನು." (ನಾರಾಯಣರಾವ್, ಪುಟ–೨೦೭, ೧೯೩೪)

೫. "ಯುಗಪುರುಷಡು ಗಾಂಧಿಮಹಾತ್ಮಡು, ಕ್ರೈಸ್ತ, ಬುದ್ದುಡು, ಮನಕು ಬೋಧಚೇಸಿಂದಿ ಪ್ರೇಮಕಾದಾ ಬಾವಾ? ಮನಂ ಕೋಪಂ ಚಂಪುಕುನಿ, ಪ್ರೇಮಚೂಪಿಂಚಡಂ ವಲನ ಮನಲನು ನಮ್ಮುಕುನ್ನವಾರು ಜನ್ಮಜನ್ಮಕು ಮನಯಂ ದಪರಿಮಿತ ಕೃತಜ್ಞತ ಚೂಪಿಸ್ತಾರು ಒಕರಿಯೆಡ ದ್ವೇಷಂಪೂನಿ ವಾರಿನಿ ಹಿಂಸಿಸ್ತೂ ತಕ್ಕಿನ ಯಾವನ್ಮಂದಿ ವಿಷಯಂಲೋ ಎಂತ ಪ್ರೇಮ ಚೂಪಿನಾ, ಅದಿ ಕ್ರೋಧ್ವರೂಪಮೂ, ಅಸತ್ಯಮೂ ಅವುತುಂದಿ ಸುಮಾ! ನೀಕನ್ನ ಚದುವುರಾನಿ ಯಾನಾದಿ (ಲಂಬಾಣಿ)ವಾಡು ಗೊಪ್ಪೇ!" (ನಾರಾಯಣರಾವ್, ಪುಟ–೧೫೦, ೧೯೩೪)

೬. "ಕಾಂಗ್ರೆಸುಲೋ ವುಂಡಿ ಖೈದುಲು ವೆಳ್ಳಲೇರು, ಕಷ್ಟಪಡಲೇರು, ಶಾಸನಸಭಲಲೊ ಸಭ್ಯುಲಮನಿ ವಿಱವಿಗಡಂ ತಪ್ಪ ಏಮುನ್ನದಿ? ಸರಿಯೈನ ಮಾರ್ಗಂಚೆಪ್ಪಿ ದಾಕ್ಷತೊ ನಡುಚುಕುಂಟು ರಾ ಅನ್ನ ಆ ಮಾಹತ್ಮುಣ್ಣಿ ಮೂಲಕು ತೋಶಾರು. ಒಕ್ಕಗಾಟನಿ ನಡವ ವಲಸಿನ ದೇಶಂ ಭಿನ್ನ ಭಿನ್ನಮೈ ಎವರಿಕಿ ವಾರೆ ಯಮುನಾತೀರೇ ಅಯಿಂದಿ! ಏಮಿಟೊಯಿ ಸ್ವರಾಜ್ಯ ಪಾರ್ಟಿವಾರು ಚೇಸಿನ ಅದ್ಭುತಕೃತ್ಯಾಲು." (ಪುಟ-೪೨, ೧೯೩೪)

೭. "ಶ್ರೀ ಮಹಾತ್ಮಗಾಂಧಿಗಾರಿ ಹೃದಯಮು ಬಾಧನೊಂದುನನಿಯು ದನ ಮುದ್ದು ಚೆಲ್ಲೆಲು ತನನು ದೇಶ ದ್ರೋಹಿಯ್ಯಿ ಜೈಲಿ ವದಿಲಿ ರಮ್ಮನಿ ಕೋರುನಂತಟಿ ದೇಶಭಕ್ತಿ ಲೆನಿದಿ ಕಾದನಿಯು ಚೆಪ್ಪಿ ಯೂರಡಿಂಚಿನಾಡು" (ಪುಟ-೫೦, ೧೯೩೪).

೮. "ರೈಲ್ವೆಲು ಪ್ರಭುತ್ವಂ ಚೇತಿಲೋ ಉಂಟೆ ಪೆದ್ದ ಉದ್ಯೋಗಾಲನ್ನಿ ಇಂಗ್ಲಿಷುವಾಳ್ಳಕೆ ಕಟ್ಟಬೆಟ್ಟಿ ವಾಳ್ಳಂದರಿಕಿ ಜೀತಾಲು ವಿಪರೀತಂಗಾ ಇಸ್ತಾರು. ಮರೇಮಂಟೆ ಆ ಸೊಮ್ಮು ಐ.ಸಿ.ಎಸ್. ವಾಳ್ಳ ಜೀತಾಲಲಾಗ ಅಂತಾ ಇಂಗ್ಲೆಂಡ್ ಚೇರುತುಂದಿ" (ಪುಟ-೫೭, ೧೯೩೪)

೯. "ಸ್ತ್ರೀ ಸ್ವಾತಂತ್ರ್ಯ ಸಂಪಾದನ ಶಿಕ್ಷಾಸ್ಮತಿಲೊ ಪರಭಾರ್ಯ ಸಂಭೋಗಮುನಕು, ಗರ್ಭವಿಚ್ಛಿತ್ತಿಕಿ ನೇರ್ಪಡಿನ ಶಿಕ್ಷಲು ತೊಲಗಿಂಚುಟ, ವಿಡಾಕುಲ ಚಟ್ಟಮು, ಅನ್ನದಮ್ಮುಲತೊ ಪಾಟು ಸ್ತ್ರೀಲಕು ಪಿತೃಸ್ವಮುನ ಭಾಗಮೊಸಗು ಚಟ್ಟಮು ನಿರ್ಮಿಂಪಜೆಯುಟ ಮೊದಲಗುನವಿ ವಾರಿಕಿ ಮುಖ್ಯಾಶಯಮುಲನು ನೆರವೇರ್ಚಾಲಿ." (ಪುಟ-೬೫, ೧೯೩೪)

೧೦. "ಸ್ವರಾಜ್ಯಮು ವಚ್ಚಿ ದೇಶಂ ಬಾಗುಪಡ್ಡಾಕ ಈ ಬಿಚ್ಚಗಾಳ್ಳನಿ ಬಾಗುಚೇಸಿ, ವಾಳ್ಳ ಕಳಾಸಂಬಂಧಮೈನ ವೃತ್ತುಲಲೋಕಿ ಪ್ರವೇಶಿಂಚಿನ ದೋಷಾಲು ಮಾಯಂಚೇಸಿ ಆ ವೃತ್ತುಲು ವೃದ್ಧಿಪೋಂದೇಂದುಕು ಕಳಾಶಾಲಲು ಏರ್ಪರಚಾಲಿ" ಎನ್ನುತ್ತಾನೆ. (ಪುಟ-೯೮, ೧೯೩೪)

೧೧. "ನೀ ಹೃದಯಂ ಚಾಲಾ ಮಂಚಿದಿ ಬಾವಾ! ನೀಬೋಟಿ ಮನಿಷಿ ಮಾ ಸಹಾಯ ನಿರಾಕರಣಂಲೊ ಜೇರಿತೆ ಗೊಪ್ಪ ನಾಯಕುಡವು ಅವುದುವು. ನೀ ಹೃದಯಮು ಈ ಉದ್ಯೋಗಂಲೋ ಚೇರಡಂವಲ್ಲ ಯಿಲ್ಲಾ ಪಾಡಯಿಂದಿ. ಕಾನಿ ಇಲಾಂಟಿ ಉದ್ಯೋಗಾಲಲೊ ಉಂಡಿ ತಮ ಜೀವಿತಾಲನು ನ್ಯಾಯಮಾರ್ಗನ್ನಿ ನಡಿಪೆ ಮಹಾನುಬಾವುಲನ್ನು ಉನ್ನಾರನಿ ಯಿಪ್ಪಟಿವರಕು ಪ್ರಜಲು ಚೆಪ್ಪುಕೋವಟಂ ಲೇದಟೋಯಿ". (ಪುಟ-೧೫೨, ೧೯೩೪)

೧೨. "ರಾಮಚಂದರ್! ಗಾಂಧಿಗಾರಿ ಮಾರ್ಗಮೆ ಉತ್ತಮಮಯಿನದಿ ಆಂಗ್ಲ ಪರಿಪಾಲಕುಲ ನೇಮಾತ್ರಮು ದ್ವೇಷಿಂಚಕ ವಾರಿ ಪ್ರಾಣಮೆ ಮನ ಪ್ರಾಣಮನುಕೊನಿ ವಾರಿ ಹೃದಯಮು ಮಾರ್ಚುಟಕು ತಲಚಿನನಾಡೆ ಮಿರು ನೆಗ್ಗಿಪೋಯೆದರು" (ಪುಟ-೨೦೫, ೧೯೩೪)

೧೩. "ತನ ದೊಡ್ಡಿಲೋನಿ ಆಡುವಾರಂದರಿಕಿ ಖದ್ದರು ರವಿಕ ಗುಡ್ಡಲು, ಪಂಡ್ಲು, ಬಹುಮತುಲು ಪಂಪಿಂಚಿರಿ" (ನಾರಾಯಣರಾವ್, ಪುಟ-೨೯೬, ೧೯೩೪)

೧೪. "ಮಹಮ್ಮದಿಯುಲು ಹಿಂದೂ ದೇವಾಲಯಮುಲನು ಗೌರವಿಂಚುಚುನ್ನಾರು, ಹಿಂದುವುಲು, ಮನೇದುಲಕಡ ವಾಯಿಧ್ಯಮು ವಾಯಿಂಚರು. ತೆಲುಗು ದೇಶಮುಲ ಮಹಮ್ಮದಿಯಲು ಸೋಡಾಷಾಪುಲಲೊ ಬ್ರಾಹ್ಮಣುಲು ಕೂಡಾ ಷರಬತ್ತುಲು ತ್ರಾಗುದುರು. ಕಿಳ್ಳಿಲು ಕೊಂದುರು, ಮಹಮ್ಮದಿಯಯೊಗುಲ ಗೋರಿಲಕು ಬೋಯಿ ಹಿಂದುವುಲು ಪೂಜಲು ಚೇಯಿಂಚುಚುಂದರು." (ನಾರಾಯಣರಾವ್, ಪುಟ-೧೮೫, ೧೯೩೪)

೧೫. "ಒಹೋ ತಾತಾ ನೀದೇವೂರು?
ನೀವೇಡ ಪೋತವೋಯ್?
ಊರುಲೇದು ವಾಡಲೇದು
ದೇಶಮಂತಾ ನೀದೇ ಊರು
ಊರಿಬ್ಬೆಟ ಚೆರುವು ಕಾಡ
ಚೇರುತೊನೆ ಪಾದುಕೊಂಟವ
ತಾತಾ ನೀದೇವೂರು
ನೀವೇಡ ಪೋತವೋಯ್?
ಗಿತ್ತಪೈನ ಯಿಲ್ಲು ಚುಟ್ಟಾವ್
ಇಂಟಿ ಸಾಮಾನಂತಾ ಕಟ್ಟಾವ್
ಬಿಡ್ಡಾ ಪಾಪಲು ಕೂಡಾ ನಡುಸ್ತೆ
ಯಿಡ್ದೂರಾತಿ ರಾಜ್ಯಾಲನ್ನಿ
ತಾತಾ ನೀದೇವೂರು
ನೀವೇಡ ಪೋತವೊಯ್?
ಬಿಚ್ಚಮೇಸೆ ತಲ್ಲಿ ಉಂಟೆ
ವಿಚ್ಚಿಪೋಯಿನ ಪೂವೇ ಬತುಕು
ಏಸಾಲೇಸಿ ಬೈರಾಗವುತವು
ಸೇತುಲು ಸೂಸಿ ಸುದ್ದುಲು ಸೆಪುತಾವು
ತಾತಾ ನೀದೇವೂರು
ನಿ ವೇಡ ಪೋತವೊಯ್" (ಪುಟ ಸಂಖ್ಯೆ ೬೭ ೧೯೩೪)

೧೬. "ಪರದಾರನು, ಪರಧನಮುನು ಆಶಿಂಚುಟ ಪರುಲ ಹಿಂಸಿಂಚುಟಯೆ ಯಗುನು ಕಾವುನ ಪಾಪಕೃತ್ಯಮನಿ ವಾದಿಂಚಿನಾಡು, ಅಹಿಂಸಾ ಸೂತ್ರಮುನಾ ಧಾರಮುಚೇಸಿಕೊನಿ ನೀವು ನೀ ಕರ್ಮ ನಡುಪವಲೆನು. ಸಂಘಮು ಮುಕ್ತಿಮಾರ್ಗಮು ನನ್ವೇಷಿಂಚುಟಲೊ ನೆನ್ನಿಯೋ ಪದ್ದತುಲ ನಲವಾಡ ಬೇಸಿಕೊನುನು ಅವಿಯನ್ನಿಯು ಅಹಿಂಸಕು, ಸತ್ಯಮುನಕು ವ್ಯತಿರೇಕಮು ಗಾಗೂಡದು" (ನಾರಾಯಣರಾವ್, ಪುಟ-೨೬೦, ೧೯೩೪)

೧೭. "ದೇಶಮುನಕಂತಾ ಸ್ವರಾಜ್ಯತೆಚ್ಚೇ ಪ್ರಯತ್ನಾಲು ಮಾನಿ ಆಂಧ್ರರಾಷ್ಟ್ರಂ ಮಾತ್ರಂ ತೆಚ್ಚೆ ಪ್ರಯತ್ನಂನೇನು ಆಮೋದಿಂಚನು ಎಂದು ಕಂಟಾರಾ, ಯಾವದ್ದೇಶ ಬಂಧ ಮೋಕ್ಷಾನಿಕಿ ಪಾಟು ಪಡವಲಸಿನ ಉತ್ಕೃಷ್ಟ ವ್ಯಕ್ತುಲಕು ಆಂಧ್ರ ಸಮಸ್ಯೆ ಸೈಂಧವುಡುಲಾಗಾ ಅಡ್ಡು ಅವತುಂದಿ. ದೇಶ ಪರಿಪಾಲನಾ ಚೇತಿಕಿ ವಚ್ಚಿನ ತರುವಾತ ಮಿ ಚಿತ್ತಮು ವಚ್ಚಿನಟ್ಲು ಭಾಷೆನುಬಟ್ಟೊ, ಮರೊಕ ದಾನ್ನಿ ಬಟ್ಟೊ ರಾಷ್ಟ್ರ ವಿಭಜನ ಚೆಯಡಂ ಸುಲಭಂ. ಅನವಸರವು ಖರ್ಚಲತೊ ನೆತ್ತಿ ಬರುವೆಕ್ಕಿನ ಯಿ ರೊಜುಲಲೊ ರಾಷ್ಟ್ರ ವಿಭಜನ ಚೇಸ್ತೆ ಖರ್ಚುಕು ಡಬ್ಬುಂಡಕ ಭಾಗಿಂಪಬಡ್ಡ ರಾಷ್ಟ್ರಾಲನ್ನಿ ದಿವಾಲಾ ರಾಷ್ಟ್ರಾಲೈತೆ ಏಮಿಲಾಭಂ." (ನಾರಾಯಣರಾವ್, ಪುಟ–೭೩, ೧೯೩೪)

೧೮. "ಮಂಗಪತಿರಾವು ಗಾಂಧಿಗಾರಿ ಅಹಿಂಸಾ ವ್ರತಮು ಆಡುದಾನಿ ಮತಮನಿ ವಾದಿಂಚುನು ಶಕ್ತಿಪೊಗೊಟ್ಟುಕೊನಿ ನಶಂಚಿಪೊವುದುಮನಿ ಆ ಬಾಲುನಿ ವಾದನ. ಏಮಿ ತೆಲಿಯನಿ ಕುರ್ರವಾಳ್ಳು, ಸರಿಯ್ಯೆನ ದಾರಿ ಚೂಪಂಡಿ ನಡುಸ್ತಾಂ, ಬಾಂಬುಲು ತಯ್ಯಾರು ಚೇಸ್ತಾಂ, ರಿವಾಲ್ವರುಲು ಗುರಿ ಚೂಸ್ತಾಂ, ಯುದ್ಧಂ ಚೇಸಿ ರಾಜ್ಯಂ ಸಂಪಾದಿಸ್ತಾಂ ಅನಿ ವಹಿಸ್ತಾರು, ಈ ಕುರ್ರವಾಂಡ್ಲು ಸರಿಯ್ಯೆನ ಮಾರ್ಗಂಲೇಕ ತಪ್ಪು ದಾರಿನಿ ಪಡುತುನ್ನಾರು ಮೀರತ್ ಕುಟ್ರಕೇಸು ಚೂಸ್ತನ್ನಾಂ ಕಾದೂ? ಶ್ರೀ ಮಹಾತ್ಮುನಿತತ್ವಂ ವಿಳ್ಳಕೇಮಿ ತೆಲುಸುನು ಚೆಲ್ಲಿ. ಈತನಿ ಮನಸ್ಸು ನೆಮ್ಮದಿಗಾ ಮಾರ್ಚಿವೆಯ್ಯಾಲಿ ಲೇಕಪೋತೆ ಓ ರಾತ್ರಿ ವೇಳ ಯೆಕ್ಕಡಿಕೊ ಪಾರಿಪೋತಾಡು. ಚಿವರಕು ಉರಿಕಂಬಮೆಕ್ಕುವಕು ಸಿದ್ಧಂ ಅಯಿನ ತರ್ವಾತ ಎವಳ್ಳಮಲಾ ಏಮಿ ಚೆಯಲೇಮ." (ನಾರಾಯಣರಾವ್, ಪುಟ–೨೩೦–೩೧, ೧೯೩೪)

೧೯. "ಧನಮು, ಸಾಮಾನು, ಬಟ್ಟಲು, ಪೆಟ್ಟಿಲು, ನೋಟುಲು, ಭೂಮಿ ತನಖಾಪತ್ರಾಲು, ಕ್ರಯಮುಲು ಅನ್ನಿ ಅಂದುಲೋ ಉನ್ನಾಯಿ. ಇಂಕಾ ನಾಪನಿ ಅಯಿಪೋಯಿಂದಂಡಯ್ಯೋ" (ನಾರಾಯಣರಾವ್, ಪುಟ–೨೯೦, ೧೯೩೪)

೨೦. "ಪ್ರಿಯತಮಾ! ನಾ ಪ್ರಭೂ! ನನ್ನೊಕಸಾರಿ ಪಾಲಿಂಚುಕೊ, ನನ್ನಿ ಒಕ್ಕ ಮುಹೂರ್ತಕಾಲಮೂ ಭಾರ್ಯನೊನರಿಂಚುಕೊ ಈ ಯೊಕ್ಕ ನಿಮಿಷಮು ನೀಲೋ ಐಕ್ಯಮೈಪೋವನಿ ಎಂದು ಶ್ರೀ ಮಹಾತ್ಮಗಾಂಧಿ ಕ್ರೈಸ್ತು ಅವತಾರಮು ನೆನಿಂತಟಿನುಂಚಿ ಬ್ರಹ್ಮಚಾರಿಣಿನೈ ಮಾನವ ಸೇವ ಚೇಯುಟಕು ಸಂಕಲ್ಪಿಂಚುಕೊನ್ನಾನು" (ನಾರಾಯಣರಾವ್ ಪುಟ–೨೪೨, ೧೯೩೪)

೨೧. "ಆಯನ ಸದುಗುಲು ಪೆದ್ದವಿ. ಬುದ್ದುಲು ಗೊಪ್ಪವಿ. ಎಂತ ಗೊಪ್ಪವೊರಂಡಿ? ಚಿನ್ನತನಾನ್ನುಂಚಿ ಎಲಾಂಟಿವಾಳ್ಳಮಿದಾ ಪ್ರೇಮ, ಮಾಲೊಳ್ಳಂಟೆ ಆಳ್ಳಕನ್ನಿ ಯಿಸ್ತೂ ಉಂಡೇವಾರು. ಗಾಂಧಿಗಾರಿಮಾಟ ರಾಕಮುನುಪೆ ಇಂಟಿಲೋವನ್ನಿ ತೀಸುಕೆಳ್ಳಿ ಮಾಲೊಳ್ಳಪಿಲ್ಲಲಕಿ, ಮಾ ಪಿಲ್ಲಲಕಿ ಪೆಟ್ಟುಂಡೆವಾರಂಡಿ. ಎಂತ ಬಕಿತಿ ಮಾ ವೊಳ್ಳಂತಾ ಬಜನಚೇಸ್ತೂ ಉಂಟೆ ಆ ಅಂದಂವಾಲಿಕೆ ಕನ್ನಲ್ತೊ ಚೂಸ್ತೂ ಉಂಡೇವಾರು. ದಯ ಇಂತಿಂತ ಕಾದಂಡಿ. ಮೆಂ

ಅಪ್ಪುಡೇ ಅನಕೋನೆವಾಳ್ಳಂ. ಈಯನ ಪ್ರಪಂಚಯೊಕೆಲ್ಲಾ ತೆಲಿವೈನ ವಾರನಿ" (ನಾರಾಯಣರಾವ್, ಪುಟ-೨೯೭, ೧೯೩೪)

ಅಧ್ಯಾಯ: ಏಳು

ಸ್ವಾತಂತ್ರ್ಯದೆಡೆಗೆ ಮತ್ತು ನರುಡು: ರಾಜಕೀಯ ಮತ್ತು ಸಾಮಾಜಿಕ ಬಿಡುಗಡೆಗಳ ಮುಖಾಮುಖಿಯ ರಚನೆಗಳು

೧. "ಭಧುವುಕು ಕುಲಂ ತೇಡಾಲು ಲೇವು ದಾರಿಲೊಪಡಿತೆ ಆ ಭಧುವುಲ ತಲ್ಲಿ ಅಂದರಿನಿ ಸಮಾನ ಪ್ರೇಮತೋನೆ ಚೂಸ್ತುಂದಿ" (ನರುಡು, ಪುಟ-೬, ೧೯೪೬)

೨. "ಮೂಲ ಮಾದಿಗ ಕುಲಾಲವಾರು ಎಲಾ ಭದುವುತಾರು? ವಾರಿಕಿ ಭದುವೆಂದುಕು? ಎಂದು ವಾದಿಸುತ್ತಾರೆ. (ನರುಡು, ಪುಟ-೭, ೧೯೪೬)

೩. "ಮಂದಾಂ? ಎಲರಾ ಈ ಮಂದಾ! ಚಾಲುರಾ ಈ ಕಂದ" (ನರುಡು, ಪುಟ-೭, ೧೯೪೬)

೪. "ಈ ಮಾದಿಗ ಕುರ್ರವಾನಿಕಿ ಇವನ್ನಿರಾವ ಡಂ ಏಮಿಟಿ? ಇವನ್ನಿ ತನಕೇ ವಚ್ಚಿ ಉಂಡಾಲಿ" (ನರುಡು, ಪುಟ-೧೯, ೧೯೪೬).

೫. "ತಮಕು ದೇವಾಲಯ ಪ್ರವೇಶಂ ಲೇದು. ದೇವಾಲಯಂಲೊನೆ ದೇವುಡುಂಡಿ, ಇಂಕೊಚೋಟ ಲೆಡನಾ? ಕಾವಲಿಸಿನ ವಾರಿಕಿ ಭಗವಂತುಡು ಎಕ್ಕಡ ಬಡಿತೆ ಅಕ್ಕಡ ವುನ್ನಾಡು, ಅಸಲು ಉನ್ನಾಡೋ ಲೇಡೋ? ದೇವಾಲಯಂಲೋನಿಕಿ ರಾಕೂಡದು ಅನಿ ಒಕ ಕುಲಾನ್ನಿ ಅರಿಕಟ್ಟಡಂಲೊ ಉನ್ನ ಅಗೌರವಂ ಅನಂತ" (ಪುಟ-೭, ೧೯೪೬)

೬. "ತನ ಜಾತಿಕಿ ಎಲಾ ಸಹಾಯಂ ಚೇಯಡಂ? ಮಹಾತ್ಮಗಾಂಧಿ ನಿಜಂಗಾ ಅವತಾರಮೂರ್ತಿ! ಹರಿಜನುಲನಿ ಪೇರುಪೆಟ್ಟಿ ತಮ ಜಾತಿನಿ ತಕ್ಕಿನ ಕುಲಾಲತೋಪಾಟು ಸಮಂ ಚೆಯ್ಯಾಲನಿ ತಮ ಪವಿತ್ರ ಜೀವಿತಂ ಅಂಕಿತಂ ಚೇಸುಕುನ್ನಾರು. ತನ ದೇಶಂಲೋನಿವಾರೆ ಆಯನ ದಿವ್ಯಾಶಯಾಲಕು ಅಡ್ಡಂ ವಸ್ತುನ್ನಾರು. ಇಂತಕೂ ಈ ಕಾಲೇಜಿ ಚದುವು ತಮ ವಾರಂದರೂ ಚದವಾಲಿ. ಬಾಲರೂ ಬಾಲಿಕಲೂ ಕೂಲಿಪನಿ ಮಾನಿವೇಸಿ ಚದವಾಲಿ. ಉದ್ಯೋಗಲಿವ್ವಡಂಲೊ ಪ್ರಭುತ್ವಂವಾರೆ ಹರಿಜನುಲ ವಂತು ಎಕ್ಕುವ ಚೆಯ್ಯಾಲಿ" (ಪುಟ-೧೮, ೧೯೪೬).

೭. "ತನ ಸಂಘಂ ಅಂತ ನಿಕೃಷ್ಟ ಸ್ಥಿತಿಲೊ ಉಂಡಡಾನಿಕಿ ತಾಮೆ ಕಾರಣಂ ಅನಿ, ಏನಾಟಿಕೈನಾ ತಾಮೆ ಪೆದ್ದಕುಲಾಲವಾರಿ ಮುಕ್ಕಲುಗುದ್ದಿ ವಾರಿತೊ ಸಮತ್ವಂ ಸಂಪಾದಿಂಚುಕೋವಾಲನಿ ವಾದಿಂಚಾಡು" (ಪುಟ-೩೪, ೧೯೪೬)

೮. "ನಾ ಜಾತಿ
ನಾ ಮಾದಿಗ ಜಾತಿ!
ಏನಾಟಿಕಿ ನೀಕು ಮುಕ್ತಿ?

ಏನಾಟಿಕಿ ನೀಕು ಏಡುಗಡ?

ಎಂತಟಿ ದೀನ ಚರಿತ್ರ ಜರಿಗಿಪೋತೋಂದಿ!

ತಿಂಡಿ ಲೇಕುಂಡಾ!

ಮೊಂಡಿತನಂ ಕಪ್ಪೆ ಬಟ್ಟ ಲೇಕುಂಡಾ!!" (ಪುಟ-೧೯, ೧೯೪೬)

೯. "ಹರಿಜನ ಬಾಲಿಕಲು ಚಕ್ಕನಿ ವಿದ್ಯೆ ನೇರ್ಚುಕುನಿ ಉತ್ತಮ ಕುಲಾಲ ಬಾಲಕುಲ್ನಿ ವಿವಾಹಂ ಚೇಸುಕೋವಾಲಿ, ಚದುವು, ಅಲಂಕಾರಂ, ಶುಭ್ರತ, ನಾಗರಿಕತ ಗುರಿಂಚಿ ಚೆಪ್ಪಾಲಿ" (ಪುಟ-೬೭, ೧೯೪೬)

೧೦. "ಇದೇಮಿಟಿ ಈ ಜಂತುವುನು ತಿಸುಕುವಚ್ಚಾಡು? ಈ ಪಕ್ಷಿಂದ್ರುಡು ವಚ್ಚಾಡೇಮಿಟಿ? ಈ ಮಗ ಗೇದಿಗಾ ರಂಗಸ್ಥಲಂಲೋಕಿ ದಿಗಾಡೇಮಿಟಿರಾ" ಎಂದು ವಿದ್ಯಾರ್ಥಿಗಳು ಅಧ್ಯಾಪಕರ ಮೇಲೆ ಕೋಪಗೊಳ್ಳುತ್ತಾರೆ. (ನರಡು, ಪುಟ-೯, ೧೯೪೬)

೧೧. "ರಾಮ-ಒರೇ ವೆಂಕಟೇಶ್ವರರಾವೂ, ಶಿಕ್ಷಲನೇವಿ ಲೋಕಂಲೋ ಉನ್ನಾಯ.

ವೆಂಕಟ-ಉನ್ನಾಯಿ, ಅವಿ ನಿರ್ಮಾಣಂ ಚೇಸಿಂದಿ ಸಂಘಂ

ರಾಮ-ಆಯಾ ತಪ್ಪಲನು ಬಟ್ಟಿ ಆಯಾ ಶಿಕ್ಷಲು ವಚ್ಚಾಯಿ. ಜನ್ಮಶಿಕ್ಷ, ಚಾವುಶಿಕ್ಷ, ಪದೇಳ್ಳ ಶಿಕ್ಷ! ಅಲಾಗೇ ಈ ದೇಶಂಲೊ ಚಚ್ಚಿನ ಗೊಡ್ಡುಮಾಂಸಂ ತಿಂಟೂ ಪ್ರಜಲನು ಚಂಪಿ ಕಾಲ್ಚುಕುತಿಂಟೂ ಉನ್ನನರಮಾಂಸಾಶನುಲಯಿನ ವಾರಿಕಿ ಆರ್ಯುಲು ಸಂಘ ಬಾಹ್ಯುಲುಗಾ ಶಿಕ್ಷ ವಿಧಿಚಾರ

ಒಕ ವಿದ್ಯಾರ್ಥಿ-ಇಪ್ಪುಡು ಮನದೇಶಂ ಅಂತಕೂ ಆಂಗ್ಲೇಯಲು ಶಿಕ್ಷ ವಿಧಿಂಚಾರು ಕಾದಟ್ರಾ!

ರಾಮ- ಅಪ್ಪಟಿ ಆರ್ಯುಲು ಈ ಶಿಕ್ಷ ಎಪ್ಪಟಿಕಿ ತಗ್ಗಿಂಚುಕುಂಡಾ ಉಂಡೇ ನಿಬಂಧನ ಕೂಡಾ ಆ ಶಿಕ್ಷಲೋನೆ ವಿಧಿಂಚಾರು, ಅಂದುಕನಿ ಈ ಮಾಲ ಮಾದಿಗಲು ಎಲ್ಲಕಾಲಂ ಅಲ್ಲಾ ಉಂಡವಲಸಿಂದೆ!

ಇಂಕೋ ವಿದ್ಯಾರ್ಥಿ – ಮನಕು ಮೆಲಿಮೊಗುಳ್ಳಯಿನ ಇಂಗ್ಲಿಷವಾಳ್ಳು ಈ ಹರಿಜನುಲಕು ಶಿಕ್ಷ ತಗ್ಗಿಂಚಿ, ವಾಳ್ಳನು ಮನಕು ಪ್ರಭುವುಲನು ಚೇಸಿ ಆ ಪ್ರಭುತ್ವಂ ಸಾಗೆಂದುಕು ತಮ ಸೈನ್ಯಂ ಅಂತಾ ಮದ್ದತು ಚೇಸ್ತೆ ಏಮಿ ಚೆಸ್ತಾರುರಾ ಮೀರು?" (ನರುಡು, ಪುಟ-೧೩, ೧೯೪೬).

೧೨. "ತನ ಜಾತಿಕಿ ಎಲಾ ಸಹಾಯಂ ಚೆಯಡಂ? ಮಹಾತ್ಮಗಾಂಧಿ ನಿಜಂಗಾ ಅವತಾರ ಮೂರ್ತಿ ಹರಿಜನುಲ ವಂತು ಎಕ್ಕುವ ಚೆಯ್ಯಾಲಿ" ಎನ್ನುವಲ್ಲಿ ಗಾಂಧಿಜೀಯವರು ದಲಿತರ ಉದ್ಧಾರಕ್ಕಾಗಿ ಶ್ರಮಪಟ್ಟ ಬಗೆಯನ್ನು ಸ್ಮರಿಸಿಕೊಳ್ಳುತ್ತ ದಲಿತ ಮಕ್ಕಳು ಉನ್ನತವಾದ ಉತ್ತಮ ಶಿಕ್ಷಣವನ್ನು ಪಡೆದುಕೊಳ್ಳಬೇಕು ಎಂಬ ಯಲ್ಲಮಂದನ ಆಶಯವನ್ನು ಗುರುತಿಸಬಹುದು. (ನರಡು, ಪುಟ-೧೭, ೧೯೪೬)

೧೩. ಜೆನ್ನಿ– "ಯುರೇಷಿಯನ್ ಜಾತಿ ಚಿವರಕು ಗಬ್ಬಿಲಂಲಾ ತೇಲಿಂದಿ ಭಾರತೀಯುಲಕು ಆ ಜಾತಿ ಅಂಟೆ ಗೌರವಂಲೇದು ತಮ ತಕ್ಕವ ಕುಲಂ ಕನ್ನಾ ಅಧ್ವಾನಂಗಾ ಚೂಸ್ತಾರು.

ಮಾರ್ಥಾ–ಅವುದು ಜೆನ್ನಿ ! ಇಂಗ್ಲೀಷ್ ವಾರು ಮನಕಿ ವಾರಿಕಿ ಸಂಬಂಧ ಮುನ್ನಟ್ಟೆ ಆಲೋಚಿಂಚರು.

ಹೆನ್ರಿ–ಅವುನು ಮಾರ್ಥಿ ವಾಳ್ಳ ದೃಷ್ಟಿಲೊ ಮನ ಆಡವಾಳ್ಳು, ವಾಳ್ಳ ಸೈನಿಕುಲು ಭಾರತದೇಶಂಲೋ ಉನ್ನಪ್ಪಡು ವಾಳ್ಳ ಗಾಢ ಪುರುಷತ್ವ ರಾಕ್ಷಸಕಾಮಂ ತೀರ್ಚದಾನಿಕಿ ಎರ್ಪಾಟಯಿನ ಒಕ ವೀಲಯಿನ, ಪರವಾಲೇನಿ, ಚಕ್ಕನಿ ಸೇಜ್ಜಿವ್ವಾಲನಿ.

ಜೆನ್ನಿ–ಅಂದುಕು ಮುಂದರ ತಯಾರು ಮನ ಯರೇಷಿಯನು ಜಾತಿ ಆಡಮುಂಡಲೆಗಾ ಭಾರತ ದೇಶಂಲೊ, ಬರ್ಮಾಲೊ, ಜಾವಾಲೊ ಮಲಯಾಲೊ, ಇಂಡೋ ಚೈನಾಲೋ ಅಮೆರಿಕಾಲೊ, ಆಫ್ರಿಕಾಲೊ, ಮನ ಜಾತಿ ಉದ್ಬವಿಂಚಿ ಎಕ್ಕಡಾ ಉತ್ತಮ ಸ್ಥಿತಿ ಸಂಪಾದಿಂಚುಕೋಲೇಕ ಎನ್ನಿ ನೀಚತ್ವಾಲು ಅನುಭವಿಸ್ತೊಂದೋ!

ಹೆನ್ರಿ–ರೆಂಡು ಜಾತುಲು ಕಲುಸ್ತಾಯಿ, ಈ ಜಾತಿ ಪುರುಷಲು ಆ ಜಾತಿ ಸ್ತ್ರಿಲನು ವಾಂಛಿಸ್ತಾರು, ಪ್ರೇಮಿಸ್ತಾರು. ಕಾನಿ ನಲ್ಲಜಾತಿ ವಾಳ್ಳಲೊ, ರಂಗುಲ ಜಾತಿ ವಾಳ್ಳಲೊ ಪುರುಷಲು ತೆಲ್ಲಜಾತಿ ಪುರುಷುಲ್ನಿ ಪ್ರೇಮಿಂಚುಕೂಡದು. ಕಲಿಯಕೂಡದು.

ಹೆನ್ರಿ–ಮುಸ್ಲಿಂ ಸಂಘಂವಾರು, ಏ ಜಾತಿನಯನಾ ತಮಲೊ ಕಲುಪುಕುಂಟಾರು ಏ ಯಿಂಟೆ ಮಿಶ್ರಮಾಲಯನಾ ಆ ಮಹಾಸಂಘಂಲೊ ಕಲಿಸಿಪೋತಾಯಿ. ತೆಲ್ಲ ಮುಸ್ಲಿಂಲುನ್ನಾರು, ಬಂಗಾರು ಮುಸ್ಲಿಂಲುನ್ನಾರು, ನಲ್ಲ ಮುಸ್ಲಿಂಲು, ಚೀನಾ ಮುಸ್ಲಿಂಲು, ಜಾವಾ ಮುಸ್ಲಿಂಲು, ನೀಗ್ರೋ ಮುಸ್ಲಿಂಲು ಭಾರತಿಯುಲು ವಗೈರಾ ವಗೈರಾ ಅಂದರೂ ಒಕ ಬ್ರಹ್ಮಾಂಡಮೈನ ಸಂಘಂ" ಎನ್ನುವಲ್ಲಿ (ನರಡು, ಪುಟ–೨೨, ೧೯೪೬)

೧೪. "ತನಜಾತಿ ಸ್ಥಿತಿ ಏಮಿಟಿ? ಬ್ರಿಟಿಷ್ ಪ್ರಭುತ್ವಂ ಎಂತ ಕಾಲಂ ಈ ದೇಶಂ ಪರಿಪಾಲಿಸ್ತೂ ಉಂಟುಂದೊ ಅಂತಕಾಲಂ ಪಶು ಶರೀರ ಸೌಂದರ್ಯಮಂ ಕಲ ತನ ಬೋಟಿ ಯುವತಲಕು ತೆಲ್ಲ ಸೈನಿಕ ಮಿಂಡಗಾಳ್ಳಕು' ಕೊದವಲೇದು ಆ ಮಗ ಪಶುವುಲನು ಆಕರ್ಷಿಂಚೆ ಆಡ ಪಶುವುಲಗಾ ತನ ಜಾತಿಸ್ತ್ರೀಲು ತಯಾರ್ಶೆ ತನ ಜಾತಿನಿ ಎಂತ ನೀಚಗತಿಲೋಕಿ ತೀಸುಕುವಚ್ಚಾರು". (ನರುಡು, ಪುಟ–೨೭, ೧೯೪೬)

೧೫. "ಬಾಪೂಜಿ! ನಾ ಕರ್ತವ್ಯಂ ನಾಕು ತೆಲಿಯಟಂಲೇದು. ಇಂತ ಚದುವು ಚದುವುಕೊನಿ ವಚ್ಚಿ ನೇನು ಪ್ರಭುತ್ವೋದ್ಯೋಗಂ ಸ್ವೀಕರಿಂಚಕುಂಡಾ ಉಂಟೆ ನಾ ಚದುವು ವೃದಾ! ಈ ಚದುವು ಮನ ದೇಶಾನಿಕಿ ಪ್ರಸ್ತುತಂ ಶಿರೋಮಣಿ ವಂಟಿದಿ. ಆನೆಕಟ್ಟಲು ಲೇಕ ನದುಲು ಉಪಯೋಗಂ ಲೇದು. ಆನಕಟ್ಟಲವಲ್ಲ ವಿದ್ಯುಚ್ಛಕ್ತಿ ಉದ್ಭವಿಸ್ತುಂದಿ. ಈ ಶಕ್ತಿ ದೇಶಾನಿಕಿ

ವೆಲುಗೂ, ಪೊಲಾಲಕು ನೀರೂ, ಗೃಹಲಕು ಚಿನ್ನ ಪರಿಶ್ರಮಲತು ಎನ್ನಿ ವಿಧಾಲೊ ಉಪಯೋಗಂ, ಪೂರ್ವಕಾಲಪೂ ಗೃಹ ಪರಿಶ್ರಮಲೂ, ಗ್ರಾಮ ಪರಿಶ್ರಮಲೂ, ಕೊದ್ದಿ ರೂಪಂ ಮಾರುತಾಯಿ ವ್ಯವಸಾಯಮೂ, ಮರಿ ರಾಕ್ಷಸಂ ಕಾಕುಂಡಾ ಅನೇಕ ರೂಪಾಲ ಉತ್ತಮ ವಿಧಾನಾಲು ಅಲವರಚುಕೊಂಟುಂದಿ." (ನರಡು, ಪುಟ-೫೧, ೧೯೪೬)

೧೬. "ಹರಿಜನುಲಕು ಕಾಂಗ್ರೆಸು ಪ್ರಭುತ್ವಾಲು ಮನುಷ್ಯನಕು ಪದಿಯೆಕರಾಲಕು ತಕ್ಕುವಗಾನಿ ಭೂಮಿ ಇವ್ವಾಲಿ. ತಕ್ಕಿನ ವಾರಿ ಮಾಟ ಎಲ್ಲಾ ಉನ್ನ ಹರಿಜನಾದಿ ಸಂಘಾಲವಾರಿಕಿ ತಪ್ಪಕ ಪಟ್ಟ ಪರೀಕ್ಷ ವರಕು ಚದುವು ಚೆಪ್ಪಾಲಿ. ದೇವಾಲಯಲಕು ಪ್ರವೇಶಂ ಇವ್ವಾಲಿ. ಈ ಶಾಸನಂ ಯೆವ್ವರೂ ತಪ್ಪಟಾನಿಕಿ ವೀಲುವೇದು" (ನರುಡು, ಪು-೪೮, ೧೯೪೬)

೧೭. "ಏನಾಟಿಕಿ ತನ ಸಂಘಾನಿಕಿ ವಿಮುಕ್ತಿ? ಕಾಂಗ್ರೆಸು ವಾರೂ ವೆನಕಟಿ ಸಂಪ್ರದಾಯಂ ವದಲಲೇಕುಂಡಾವುನ್ನಾರು, ಅಯಿನಾ ಎಂ ಚೆಯಗಲಿಗಿನಾ ವಾರೆ! ಒಕ್ಕಟೇ ಮಾರ್ಗಂ ಉಂದಿ. ಹರಿಜನ ಬಾಲಿಕಲು ಚಕ್ಕನಿ ವಿದ್ಯ ನೇರ್ಚುಕುನಿ ಉತ್ತಮ ಕುಲಾಲ ಬಾಲಕುಲ್ನಿ ವಿವಾಹಂ ಚೇಸುಕೊವಾಲಿ ಚದವು, ಅಲಂಕಾರಂ, ಶುಭ್ರತ, ನಾಗರೀಕತೆ, ಇವಿ ಮನುಷ್ಯಲನು ಪೈಕಿ ತೀಸುಕುವೆಡತಾಯಿ" (ನರುಡು, ಪುಟ-೬೭, ೧೯೪೬)

೧೮. "ಮಾ ಸಂಘಂಕಿ ಸರಿಯ್ಯೆನ ಗುಡ್ಡಕಟ್ಟಡಂ ಎರುಗದು, ಸರಿಯ್ಯೆನ ತಿಂಡಿ ಎರುಗದು, ಲೋಕಂ ಅಂಟೆ ಏಮಿಟೊ ಎರಗದು, ಮಾ ಅತ್ತರು ವಾಸನಲು ಕುಳ್ಳು ಕಂಪು, ಮಾ ರಂಗು ನಲ್ಲ ಕಾರುದುನ್ನ, ಮಾ ತಲಲು ನೂನೆಲೆರುಗವು ಮಾ ಒಳ್ಳು ಸಬ್ಬುಲೆರುಗವು, ಮಾ ಗುಡ್ಡಲು ತೆಲುಪು, ಪ್ರಕಾಶಮೂ ಎರುಗವು" (ನರುಡು, ಪುಟ-೫೬, ೧೯೪೬)

ಅಧ್ಯಾಯ: ಎಂಟು

ಮೆರವಣಿಗೆ-ಮಾಲಪಲ್ಲಿ: ಜೈಲುವಾಸದಲ್ಲಿ ಅರಳಿದ ಎರಡು ಕಾದಂಬರಿಗಳು

೧. ಮುತ್ತಡು – "ಮನಸಬು ಕೋತ ಕೂಲಿಕಿ ಗಿಂಜಲು ಯಿಯ್ಯಡಟ ಡಬ್ಬಿಸ್ತಾಡಟ.

ಸಂಗದಾಸ – ಎಂತ ಯಿಸ್ತಾನನನ್ನಾಡು?

ಮುತ್ತಡು – ರೋಜುಕು ಪಾವಲಾಟ ಅದಿ ಮಾಮೂಲು ಕೂಲಟ.

ಸಂ – ರೂಪಾಯಿಕಿ ಪನ್ನೆಂಡು ಮಾಸಿಕುಲು ಜೊನ್ನಲಿಚ್ಚೆಟಪ್ಪುಡು ಕೂಲಿ ಪಾವಲಾ. ಆ ಪ್ರಕಾರಂ ಅಯಿತೆ ಯಿಪ್ಪಟಿ ಪ್ರಕಾರಂ ಕೂಲಿ ರೂಪಾಯಿಕಿ ದಾಕೊಂಟುಂದಿ.

ಚಾಕಿರಿ ಕೂಲಿವಾಂಡ್ಲ ಸೊಮ್ಮು. ಭೂಮಿ ರೈತು ಸೊಮ್ಮು ದೇನಿ ಧರ ದಾನಿಕುಂಡಾಲೆ ತನ ಪದಾರ್ಥಾನಿಕಿ ತಾನು ಎಕ್ಕುವ ಧರ ತೆಚ್ಚು ಕುಂಟುನ್ನಪ್ಪುಡು ಆ ವರಪಡಿನ ಕೂಲಿವಾಡಿ ಪದಾರ್ಥಾನಿಕಿ ವೆಲ ಹೆಚ್ಚವದ್ದಾ?

ರಂಗದಾಸ – ಪಾವಲಾಮಟುಕು ವಾರಿಕಿ ನಷ್ಟಂ ಯೆಂದುಕು? ಪನಿ ಮಾನುಕೊನಿ ವಾಂಡ್ಲನು ನಷ್ಟಪೆಟ್ಟನೂವದ್ದು, ವಾಂಡ್ಲನೆ ಬಾಗುಪಡನಿಯಂಡಿ. ಚಚ್ಚೆ ವಾಂಡ್ಲಂ ಯೆಟ್ಲಾಗೂ ಚೆಸ್ತಾಂ ಊರಿಕೆ ಪನಿಚೇಸಿ ರಂಡಿ." (ಪುಟ–೭೮, ೧೯೨೧)

೨. "ಮಾಲಪಲ್ಲೆಲು ಮಗ್ಗಾಲತೊ ನಿಂಡಿನವಿ. ಸಾಲಿಲೂ, ತೊಗಟಲೂ, ಮಾಲಲೂ ಮೊದಲಯಿನ ತಂತು ವಾಯಜಾತುಲನ್ನಿ ದೇಶಾನಿಕಿ ಕಾವಲಿಸಿನ ಗುಡ್ಡಲನ್ನಿ ನೇಯಲೇಕುಂಡಾ ಉನ್ನಾರು. ಸ್ವದೇಶಿ ಚೆಪ್ಪುಲ ಯಂದು ಜನಾನಿಕಿ ಅಭಿಮಾನಂ ಕಲಗಡಂತೋಟಿ ಮಾದಿಗ ವಾಂಡ್ಲುಕು ಕೂಡಾ ಚೇತಿನಿಂಡಾ ಪನಿ ದೊರಕುತುನ್ನದಿ. ಖದ್ದರು ವೃದ್ಧಿ ಕಾವಡಂತೋಟಿ ಕೋಟ್ಲಮಂದಿಕಿ ವಡಕಡಂ, ಏಕಡಂ, ರಂಗುಲದ್ದಡಂ ಪನಿ ಸರಿಪೋತುನ್ನದಿ. ವಿದೇಶಿಗುಡ್ಡಲಮ್ಮೆ ವರ್ತಕಲಂತಾ ಸ್ವದೇಶಿ ಗುಡ್ಡಲನೆ ಅಮ್ಮುತುನ್ನಾರು. ಜನಂ ಬೊತ್ತುಗಾ ತಾಗುಡು ಮಾನಿ ವೇಶಾರು. ಏ ಇಂಗ್ಲೀಷು ವಿದ್ಯಾರ್ಥಿಕುಲಲೋ ತಪ್ಪ ಸಾಮಾನ್ಯ ಜನಂಲೊ" (ಪುಟ–೧೧೩, ೧೯೨೧)

೩. "ಅಹಿಂಸಾ ಪರಮೋ ಧರ್ಮ" ಅನೇ ಸೂತ್ರಾನ್ನಿ ಅನಾದಿ ಸಿದ್ದಂಗಾ ಆಚರಿಸ್ತುನ್ನ ಭಾರತದೇಶಮೆ ಈ ಧರ್ಮಾನ್ನಿ ಪ್ರತಿಷ್ಠಿತ ಲೋಕಾನಿಕಿ ಮಾರ್ಗಂ ಚೂಪಿಂಚವಲಸಿ ಉಂಟಾದಿ. ಕೇವಲಂ ಸ್ವಾತಂತ್ರ್ಯಮು ಸಂಪಾದಿಂಚಡಮೆ ಮನ ಪ್ರಯತ್ನಂಗಾದು. ಸ್ವರಾಜ್ಯ ನಿಜಂಗಾ ಸ್ವರ್ಗರಾಜ್ಯಮೆ ಗಾವಾಲೆ. ಮನ ಮಾರ್ಗಂ ರಸ್ತಸಿಕ್ತಮ್ಯೆತೆ ಸ್ವರ್ಗರಾಜ್ಯಂ ರಾದು, ನೆತ್ತುರು ಕೂಡು ಮನಕು ಅಂಟದು" (ಪುಟ ೪೪೦, ೧೯೨೧).

೪. ಮುದುಕ – "ನುವ್ವು ಈಗಲು ಚಂಪಮಂಟೆ ತಪ್ಪಿಂಚುಕೊನಿ ವೂರುಕೊಂಟಿವಿ. ನಾ ಸಂಗತೇಮಿಟಿ? ರೋಜು ಸಾಯಂಕಾಲನಿಕಿ ಒಕ ವಂದಯಿನಾ ಚೂಪಿಂಚಾಲೆ, ನುವ್ವು ಮಾಂಸಂ ತಿನ ವದ್ದಂಟಿವಿ. ರೋಜುಕು ನೂರಿಂಟಿನಿ ಜಂಪಿತೆಗಾನಿ ನಾ ಬ್ರತುಕು ವೆಳ್ಳದು."

ರಾಮದಾಸು – ಹಿಂಸಾ ಪನಿಕಿ ರಾನಂದುವಲ್ಲ ಮಾಂಸಂ ತಿನಡಂ ತಪ್ಪು. ಮಾಂಸಂ ಕೋಸಂ ಚಂಪಡಂ ತಪ್ಪು.

ಮನುಷ್ಯುಡು ಮನುಷ್ಯುಣ್ಣಿ ಹತ್ಯೆ ಚೇಸ್ತೆ ತಪ್ಪಾ? ತಪ್ಪುಗಾಕ ಪೋತೆ ಚಂಪಿನ ವಾಣ್ಣಿ ಉರಿತಿಯಮನಿ ಚಟ್ಟಮೆಂದುಕು ಪುಟ್ಟಿಂದಿ." (ಮಾಲಪಲ್ಲಿ, ಪುಟ–೪೩೬, ೧೯೨೧)

೫. "ಇದಿಗೋ ರಾಮದಾಸೂ! ನೀವು ಮತಂಲೋ ಕಲಿಶಾವಾ ಅಂಟೆ ಅನ್ನಿ ಚಿಕ್ಕುಲೂ ತೀರುತವಿ. ಪೌಲುಗಾರು ಮೀಕೇ ಲೋಪಂ ಲೇಕುಂಡಾ ಚೇಸ್ತಾರು" (ಪುಟ–೨೯೪, ೧೯೨೧)

೬. "ಬ್ರಾಹ್ಮಲು ಚಾಲವರಕು ಇತರ ವೃತ್ತಲ ನಾಶಿಂಚಾರು ವಾರಿಕಿ ಪಾರತಂತ್ರ್ಯಂ ಪೂರ್ತಿಗಾ ಪ್ರಾಪ್ತಮ್ಯೆಂದಿ. ಕ್ಷತ್ರಿಯೇತರುಲು ಪೂರ್ವಾಕಾಲಮಂದೆ ಕ್ಷಾತ್ರಧರ್ಮಂ ಅವಲಂಬಿಂಚಾರು. ಶೂದ್ರಲನೇಕುಲು ರಾಜುಲ್ಯೆನಾರು. ಕೂಲಿವಾಡು ಸಹಿತಂ ತನ ವೋಟಿಚ್ಚಿ ಪ್ರಭುತ್ವಾನ್ನಿ

ನಡಪಡಮೆ ಉತ್ತಮ ಮನಿ ಅನುಕುಂಟುನ್ನಾಡು. ಬುದ್ಧ, ರಾಮಾನುಜ, ಬಸವ, ಚನ್ನಬಸವ ಮೊದಲಯಿನ ಮತ ಸಂಸ್ಕರ್ತಲು ನಿರಸಿಂಚಿ ಯಿತರ ಕುಲಮುಲಲೊ ಮತ ಪ್ರಚಾರಕ ಸಂಘಮುಲನು ತಯಾರುಚೇಶಾರು." (ಪು–೧೧೫, ೧೯೨೧)

೭. ರಾಮದಾಸು – "ಮನಂ ಪ್ರಾರ್ಥನಕು ಪೋವುಕ ಪಾರಿಪೋತೆ ಪೋಲೀಸುಲನು ಪೆಟ್ಟಿ ಕಾಲಿಪಿಸ್ತಾರು.

ಪುಲ್ಲಯ್ಯ – ದಾನಿಕಿ ಮನಂ ತಯಾರು ಕಾವಲಿಸಿಂದೆ. ಎಂತಮಂದಿ ಆಡವಾಂಡ್ಲನೂ, ಪಿಲ್ಲಲನೂ ಕಾಲುಸ್ತಾರೋ ಚೂತಾಂ.

ರಾಮದಾಸು – ರೆಪೊದ್ದುನ ಯಾವತ್ತೂ ಮಂದಿನಿ ಪ್ರಾರ್ಥನಕು ಪೋವಡಮು ಮಾನಿವೇತಾಂ ಅಪ್ಪುಡು ಬಯಟ ಗವರ್ನಮೆಂಟುವಾರು ಮೆದಲಕುಂಡಾ ಉಂಟಾರು. ಎವರಿ ದಾರಿನಿ ವಾಂಡ್ಲಂ ಪೊದಾಂ, ವೃಥಾಗಾ ಚಂಪಿತೆ ಚಂಪನಿನಯ್ಯಂಡಿ ಮನಂ ದೌರ್ಜನ್ಯಾನಿಕಿ ದಿಗವದ್ದು" (ಪುಟ–೩೨೯, ೧೯೨೧)

ಅಧ್ಯಾಯ: ಒಂಭತ್ತು

ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳಲ್ಲಿ ಕಂಡುಬರುವ ಭಿನ್ನ ಸಮುದಾಯಗಳ ಪ್ರತಿನಿಧೀಕರಣ

೧. "ಇಂತವರಕು ಮನಂ ಪುಟ್ಟಿಂಚಿನ ಆಂದೋಳನವಲ್ಲ ಧನಿಕುಲೂ, ಪ್ರಭುತ್ವಂವಾರೂ ಪ್ರಸ್ತುತ ಸ್ಥಿತಿಗತುಲು ಮಾರ್ಚಕ ತಪ್ಪದನಿ ಅಭಿಪ್ರಾಯಪಡುತುನ್ನಾರು. ಇಕ ಮೀದ ಪಾತ ಪದ್ದತುಲು ಆಪಿ ಕೊತ್ತ ಪದ್ದತುಲವಲಂಬಿಂಚಂಡಿ. ಮನ ದಗ್ಗರ ಅನ್ನಿಚೋಟ್ಲಾ ೫ ಕೋಟ್ಲಾ ೧೦ ಲಕ್ಷಲ ಧನಮುನ್ನದಿ. ದಾಂಟ್ಲೊ ೫ ಕೋಟ್ಲು ಸಂತಾನುಲಂತಾ ಸಮಾನಂಗಾ ಪಂಚುಕೊನಿ ನ್ಯಾಯಜೀವನಂ ಚೇಯಂಡಿ. ಶೇಷಿಂಚಿನ ೧೦ ಲಕ್ಷಲಲ್ಲೋ.... ಧರ್ಮಾನಿಕುಪಯೋಗಿಂಚಂಡಿ. ಮೀರಂದರೂ ಕಾರ್ಮಿಕ ಸಂಘಾಲ ಸಭಿಕುಲುಗಾ ಚೇರಿ ಪನಿ ಚೆಯ್ಯಂಡಿ. ತ್ವರಲೊ ಮನಕು ಸ್ವರಾಜ್ಯಂ ವಸ್ತುಂದಿ. ವಿದ್ಯಾವೃತ್ತುಲು ತಪ್ಪಕ ಅಭಿವೃದ್ಧಿ ಪೊಂದಿ ಬೀದಲ ಸ್ಥಿತಿ ತಪ್ಪಕ ಬಾಗಪಡುತುಂದನಿ ನಾ ನಮ್ಮಕಂ" ಅಂಟಾಡು. (ಮಾಲಪಲ್ಲಿ ಪುಟ–೩೮೧, ೧೯೨೧)

೨. "ಸ್ವರಾಜ್ಯಂ ವಸ್ತೆನೆಕಾನಿ ಮನದೇಶ ಕಷ್ಟಾಲು ತೀರವನಿ ಸಂಗಡು ಚೆಪುತುಂಡೆ ಮಾಟ ವಾಸ್ತವಂ. ಸೇನಲೋಕಿ ಮನುಷ್ಯಲನು ಚೇರ್ಚುಕೋನಡಾನಿಕಿ, ಕ್ರೈಸ್ತವಮತಂ ವ್ಯಾಪಿಂಪ ಚೇಯಡಾನಿಕಿ ತಪ್ಪ ಈ ಸೆಟಲ್‌ಮೆಂಟ್ಲವಲ್ಲ ಇತರ ಪ್ರಯೋಜನಂ ಲೇದು. ಸ್ವರಾಜ್ಯಂ ವಚ್ಚಿನ ತರ್ವಾತ ಪದ್ದತುಲನ್ನಿ ಮಾರ್ಚಿ ವೀಟಿನಿ ಗ್ರಾಮಾಲುಗಾ ಚೇಯವಲಸಿ ಉಂಟುಂದಿ." (ಮಾಲಪಲ್ಲಿ ಪುಟ–೩೧೦, ೧೯೨೧)

೩. “ಈಶ್ವರೋನ್ಮುಖ ಮಾನವಸೇವ ಚೇಯವಲೆನನಿಯೆ ವೈದ್ಯಶಾಲರಿನಾ ದೇಶಸೇವಚೆಯು ಶ್ರೀ ಸರೋಜಿನಿದೇವಿ, ಶ್ರೀ ಕಸ್ತೂರಿಬಾಯಿ ಮೊದಲಗು ವನಿತಾಮತಲ್ಲಲುವತಿ ದನ ಜನ್ಮಮು ಸೇವಕ್ತ ಯರ್ಪಣ ಮನಿ ಸಂಕಲ್ಪಿಂಚುಕೊನ್ನಾನು. ವೀಲಯಿನಪ್ಪುಡೆಲ್ಲ ರಾಟ್ನಮು ವಾಡುಕುನು, ಚೆಲ್ಲೆಂಡ್ಲಚೇತ ವಡಕಿಂಚನು.”(ನಾರಾಯಣರಾವ್ ಪುಟ–೨೩೬, ೧೯೩೪)

೪. “ನುವ್ವು ದೇಶಸೇವ, ಮಾನವ ಸೇವಯು ಚೇಸಿ ತರಿಂಪ ಸಂಕಲ್ಪಿಂಚುಕೊನ್ನಾವು. ತರಿಬೀತುಲನ್ನಿಯು ಪೂರ್ತಿಯೈನ ವೆನುಕ ಸಬರ್ಮತಿ ಯಾಶ್ರಮಮುನಕಬೋಯಿ ಸೇವಚೇಯುನಧಿಕಾರಮು ಸಂಪಾದಿಂಚು ಕೊಂಟಾನನ್ನಾವು” ಎಂದು ಕೇಳಿದಾಗ ಶ್ಯಾಮಸುಂದರಿದೇವಿ “ಆ ಮಹಾತ್ಮುನಿ ಪಾದಾಲಕಡ ಸೇವಚೇಯುಟ ನೇರ್ಚುಕೊನಿ ನಾ ಜನ್ಮಮು ಸೇವಲೊ ಐಕ್ಯಮು ಸೇವವಲೆನನಿ ನೇನು ನಿಶ್ಚಯಿಂಚುಕೊನ್ನಾನು” (ನಾರಾಯಣರಾವ್ ಪುಟ–೩೦೩, ೧೯೩೪).

೫. “ಪ್ರಪಂಚಂ ಪ್ರಪಂಚಂಲೋ ಉನ್ನ ಪ್ರಜಲಂದರಿದಿ ಅನಿ, ಆ ಪ್ರಜಲಂದರೂ ಸಮಂಗಾ ಪೈಕಿರಾವಾಲನಿ ಆ ಉತ್ತಮ ಪಥಂ ಅಂದಡಾನಿಕಿ ಮನುಷ್ಯುನಿ ಧರ್ಮಶಕ್ತಿನೇ ಆಧಾರಂ ಚೇಯಾಲನೆ ವಾದನಕನ್ನ ಗೊಪ್ಪವಾದಂ ಏಮಿ ಉಂಡಗಲದು? ಅಂದರಿಕಿ ಸಮಂಗಾ ತಿಂಡಿ, ಸಮಂಗಾ ಬಟ್ಟಾ, ಸಮಂಗಾ ಆನಂದಂ, ಸಾಂಘಿಕ ಸಮತ್ವಂ–ರಾಜಕೀಯ ಸಮತ್ವಂ ವಸ್ತುಂದಿ” ಎನ್ನುತ್ತಾನೆ. (ಕೋನಂಗಿ ಪುಟ–೭೭, ೮೫, ೧೯೪೬)

೬. “ಬಾಪೂಜಿ! ನಾ ಕರ್ತವ್ಯಂ ನಾಕು ತೆಲಿಯಟಂಲೇದು. ಈ ಚದುವು ಮನ ದೇಶಾನಿಕಿ ಪ್ರಸ್ತುತಂ ಶಿರೋಮಣಿ ವಂಟಿದಿ. ಆನಕಟ್ಟಲು ಲೇಕ ನದುಲು ಉಪಯೋಗಂ ಲೇದು. ಆನಕಟ್ಟಲವಲ್ಲ ವಿದ್ಯುಚ್ಛಕ್ತಿ ಉದ್ಭವಿಸ್ತುಂದಿ. ಈ ಶಕ್ತಿ ದೇಶಾನಿಕಿ ವೆಲುಗೂ ಪೋಲಾಲಕು ನೀರೂ, ಗೃಹಲಕು ಚಿನ್ನ ಪರಿಶ್ರಮಲಕು ಎನ್ನಿ ವಿಧಾಲೊ ಉಪಯೋಗಂ, ಪೂರ್ವಕಾಲಪು ಗೃಹಾ ಪರಿಶ್ರಮಲೂ, ಗ್ರಾಮಪರಿಶ್ರಮಲೂ, ಕೊದ್ದಿ ರೂಪಂ ಮಾರುತಾಯಿ, ವ್ಯವಸಾಯಮೂ, ಮರಿ ರಾಕ್ಷಸಂ ಕಾಕುಂಡಾ ಅನೇಕ ರೂಪಾಲ ಉತ್ತಮ ವಿಧಾನಲು ಅಲವರಚುಕೊಂಟುಂದಿ. ಆನಕಟ್ಟಲವಲ್ಲ ಪೆದ್ದ ಚೆರುವುಲು ಚೆರುವುಲು ಕಿಂದ ಕಾಲುವಲು. ಆ ಶಕ್ತಿ ದೇಶಂ ಅಂತಟಾ ತೀಗಲತೊ ಸರಫರಾ ಚೇಯಡಂ ಆ ಶಕ್ತಿವಲ್ಲ ಮಿಟ್ಟ ಪ್ರದೇಶಾಲ ನೂತಲಲೊನುಂಡಿ ನೀರು ಪೈಕಿ ರಾವಡಂ ಗ್ರಾಮಾಲ ಪಿಂಡಿಮರಲು, ಪ್ರತಿ ವೂರಿಲ್ಲುಲೊ ವೆಲುಗು, ಪಲ್ಲೆಟೂಳ್ಳಲೊ ಚಿನ್ನ ಚಿನ್ನ ರೋಡ್ಲ ಪಾಡುಗುನಾ ಪೆದ್ದ ರಾಜ ಬಾಟಲಲೊ ದೀಪಾಲು, ಗ್ರಾಮಾಲ ರೇಡಿಯಾಲು, ಚಿನ್ನ ಚಿನ್ನ ಯಂತ್ರ ಸಹಾಯಂವಲ್ಲ ಗ್ರಾಮ ಪರಿಶ್ರಮ, ಅಂದರಿಕಿ ತಿಂಡಿ, ಬಟ್ಟ, ಅಂದರೂ ಒಕೇಜಾತಿ” (ನರುಡು ಪುಟ–೫೧, ೬೫, ೧೯೪೬)

೭. “ಮಹಾತ್ಮಾಜಿ ಚೆಪ್ಪಿನ ಪ್ರಕಾರಂ ಸ್ವರಾಜ್ಯಂ ರಾಕ ತಪ್ಪದು. ನೇನು ತಿರಿಗಿ ಪ್ಲೀಡರು ವೃತ್ತಿಲೋ ಪ್ರವೇಶಿಂಪವಲೆನನೆ ಉದ್ದೇಶಂ ಲೇದು. ಸ್ವರಾಜ್ಯಂ ವಚ್ಚೇ ವರಕೂ ದೇಶ ಸ್ವಾತಂತ್ರ್ಯನಿಕೈ ಪನಿ

ಚೇಯಡಾನಿಕಿ ನಿಶ್ಚಯಿಂಚುಕುನ್ನಾನು. ಅಟು ಪೈನ ಮಿ ಮಂಗಳಾಪುರಂಲೋ ಚೂಪಿನ ಪನಿ ಚೇಯಡಾನಿಕಿ ಸಿದ್ಧಂಗಾ ವುನ್ನಾನು" (ಮಾಲಪಲ್ಲಿ ಪುಟ–౩౬౬, ౧౯౨౧)

౮. "ವಾಡವಾಡಕು ದಿರಿಗಿ ಯಮ್ಮುಚ್ಚುಂಡುನು ಸ್ವದೇಶ ವಸ್ತುವುಲ ನಮ್ಮುಚುಂಡುನು. ಗ್ರಾಮಗ್ರಾಮಮುಲಕು ಆಚಂಟ ರುಕ್ಮಿಣಿದೇವಿ ಮೊದಲಗು ದೇಶನಾಯಿಕಲ ಯಜಮಾನ್ಯಮುನ ದಿರಿಗಿ ಕಲ್ಲು ತ್ರಾಗವದ್ದನಿಯು, ಹಿಂದೂ–ಮಹಮ್ಮದಿಯ ಸಮ್ಮೇಳನ ಮುನ್ನಗಾನಿ ದೇಶಮುನಕು ಸ್ವರಾಜ್ಯಮು ರಾದನಿಯು ಬೋದಿಂಚುಚುಂಡೆನು." (ನಾರಾಯಣರಾವ್, ಪುಟ–౨౦౬, ౧౯౩౪)

౯. "ಆಡವಾಳ್ಳು ಇನ್ನಿ ಯುಗಾಲನಿಂಚಿ ಮಗವಾಳ್ಳಕು ಬಾನಿಸಲೈಯುಂಡುಟಚೇತ, ವಾರಿ ಬಾನಿಸತ್ವಮು ತೊಲಗಚೇಯುಟ, ವಾರಿಕೆ ಪುರುಷುನಕುನ್ನ ಸರ್ವಸ್ವತಂತ್ರಾಲು ಇಚ್ಚುಟ.

ವಿವಾಹಮು ಅನ್ನದಿ ವ್ಯಕ್ತಿತ್ವಾನ್ನಿ ಚಂಪಿ ಮಾನವುಲ್ನಿ ಸಂಘಾನಿಕಿ ಬಾನಿಸಲ್ನಿ ಚೇಸ್ತೂವುನ್ನದಿ. ಈ ವಿವಾಹಂ ಅನೇ ಸಂಸ್ಥ ಪುರುಷುಡು ಸ್ತ್ರೀನಿ ತನಕು ಬಾನಿಸ ಚೇಸುಕೋಡಾನಿಕಿ ಏರ್ಪಾಟು ಚೇಸುಕುನ್ನದಿ. ಕಾಬಟ್ಟಿ ಈ ವಿವಾಹಂ ಅನೆ ಸಂಸ್ಥನು ರೂಪುಮಾಪಿ ದಾನಿಸ್ಥಾನೇ ಸ್ತ್ರೀ ಪುರುಷಲಕು ಸಮಾನ ಹಕ್ಕುಲ್ನಿ ಯಿಚ್ಚೆ ಸಂಸ್ಥನು ಏರ್ಪಾಟು ಚೇಯಾಲಿ. ವಿವಾಹಮು ಚೇಸಿಕೊನ್ನ ಸಭಯಲು ತಮ ಭಾರ್ಯಲಕು ಸ್ವಾತಂತ್ರ್ಯಮಿಚ್ಚಿ ವಾರಿ ಇಷ್ಟಾನುಸಾರಮು ಸಂಚರಾಚುಟಕು ಸಮ್ಮತಿಂಪವಲೆನು." (ನಾರಾಯಣರಾವ್, ಪುಟ–౨౪౮, ౧౯౩౪).

౧౦. "ನೇನು ದೇಶಸೇವ, ಮಾನವ ಸೇವಯು ಚೇಸಿ ತರಿಂಪ ಸಂಕಲ್ಪಿಂಚುಕುಂಟಾನು. ತರಿಬೇತುಲನ್ನಿಯು ಪೂರ್ತಿಯೈನ ವೆನುಕ ಸಬರ್ಮತಿ ಯಾಶ್ರಮಮುನಕುಬೋಯಿ ಸೇವಚೇಯುನಧಿಕಾರಮು ಸಂಪಾದಿಂಚುಕೊಂಟಾನು. ಆ ಮಹಾತ್ಮುನಿ ಪಾದಾಲಕಡ ಸೇವ ಚೇಯುಟ ನೇರ್ಚುಕೊನಿ ನಾ ಜನ್ಮಮು ಸೇವಲೊ ಐಕ್ಯಮು ಸೇಯವಲೆನನಿ ನೇನು ನಿಶ್ಚಯಿಂಚುಕೊನ್ನಾನು" (ನಾರಾಯಣರಾವ್, ಪುಟ–౩౦౩, ౧౯౩౪).

౧౧. "ಪ್ರತಿ ರೋಜು ಮಹಿಳಾ ಖಾದಿ ಪ್ರಚಾರ ಕಾರ್ಯಾಲಯಾನಿಕಿ ಪೋಯಿ ವಡಿಕೇದಿ, ಇತರುಲಕು ವಡಕಟಂ ನೇರ್ಪೇದಿ. ಮಹಿಳಾ ಖಾದಿ ಪ್ರಚಾರಾಲಯ ವಸ್ತ್ರವಿಕ್ರಯಶಾಲಕುಬೋಯಿ, ಅಕ್ಕಡ ಖದ್ದರು ಅಮ್ಮೇದಿ, ವಾರ್ದಾ ಆಶ್ರಮ ಸೇರಿ ಪನಿ ಚೇಸ್ತೂವುಂಟಾನು. ರೋಜು ಖದ್ದರು ನೂಲು ವಡುಕುತುನ್ನಾನು, ಖದ್ದರು ಬಟ್ಟಲೇ ಕಟ್ಟುಕುಂಟುನ್ನಾನು" (ಕೋನಂಗಿ, ಪುಟ–౧౮౪, ౧౮౫, ౧౯౪౬).

౧౨. "ಮಾ ಭಾವ ಮುಸ್ಲೀಂಲೀಗುಲೋ ಚೇರಿತೇನೇಗಾನಿ ಅತನ್ನಿ ಪೆಳ್ಳಿಚೇಸುಕೋದಲಚುಕೋಲೇನು" (ಕೋನಂಗಿ, ಪುಟ–౧౮౧, ౧౮౨, ౧౯౪౬).

೧೩. "ಪಾಕಿಸ್ತಾನಂ ಸೃಷ್ಟಿಂಚಡಂ ಮುಸ್ಲಿಂಜಾತಿನಿ ರಕ್ಷಿಂಚಡಂ, ಮುಸ್ಲಿಂಜಾತಿನಿ ರಕ್ಷಿಂಚಕ ಪೋತೆ ಮುಸ್ಲಿಂಜಾತಿ ನಶಿಂಚಿಪೋತುಂದಿ. ಆ ಜಾತಿ ನಶಿಸ್ತೇ ಇಸ್ಲಾಂ ಮತಮೇ ನಶಿಸ್ತುಂದಿ" (ಕೋನಂಗಿ ಪುಟ-೨೬೪, ೧೯೪೬).

೧೪. "ಮಹಮ್ಮದೀಯುಲು ಹಿಂದೂ ದೇವಾಲಯಮುಲನು ಗೌರವಿಂಚುಚುನ್ನಾರು. ಹಿಂದುವುಲು ಮಸಿದುಲಕಡ ವಾಯಿದ್ಯಮು ವಾಯಿಂಚರು. ಮಹಮ್ಮದಿಯಲ ಸೋಡಾಷಾಪುಲಲೊ ಬ್ರಾಹ್ಮಣಲು ಕೂಡಾ ಷರಬತ್ತುಲು ತ್ರಾಗುದುರು. ಕಿಳ್ಳಲು ಕೊಂದರು ಮಹಮ್ಮದೀಯ ಯೋಗಲ ಗೋರಿಲಕು ಬೋಯಿ ಹಿಂದುವುಲು ಪೂಜಲು ಚೇಯಿಂಚಚುಂದುರು" (ನಾರಾಯಣರಾವ್ ಪುಟ-೧೮೫, ೧೯೩೪).

ಅಧ್ಯಾಯ: ಹತ್ತು

ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳ ಹಿಂದಿನ ಸೈದ್ಧಾಂತಿಕ ನೆಲೆಗಟ್ಟು

೧. "ಓಹೋ ತಾತಾ ನೀದೇವೂರು
ನಿ ವೇಡಪೋತವೊಯ್
ಊರುಲೇದು ವಾಡಲೇದು
ದೇಶಮಂತಾ ನೀದೇ ಊರು
ಊರಿಬೈಟ ಚೆರುವು ಕಾಡ
ಚೆರುತೊನೆ ಪಾದುಕೊಂಟಾವ್
ಗಿತ್ತಪೈನ ಯಿಲ್ಲು ಚುಟ್ಟಾವ್
ಇಂಟಿ ಸಾಮಾನಂತಾ ಕಟ್ಟಾವ
ಬಿಡ್ಡಾ ಪಾಪಲು ಕೂಡ ನಡುಸ್ತೆ
ಯಿಡ್ಡೂರಾಲೆ ರಾಜ್ಯಾಲನ್ನಿ
ಬಿಚ್ಚಮೇಸೆ ತಲ್ಲಿ ಉಂಟೆ
ಚಿಚ್ಚಿಪೋಯಿನ ಪೂವೆ ಬತುಕು
ಏಸಾಲೇಸಿ ಬೈರಾಗವುತವು
ಸೇತುಲು ಸೂಸಿ ಸುದ್ದುಲು ಸೆಪುತಾವು
ತಾತಾ ನೀದೇವೂರು
ನೀ ವೇಡ ಪೋತವೊಯ್"
(ನಾರಾಯಣರಾವ್, ಪುಟ-೯೬, ೧೯೩೪)

೨. "ಮಿ ಗಾಂಧಿ ದೇಶಾನ್ನಿ ಕೃತಯುಗಂ ವೈಪುಕು ತಿಪ್ಪಾಲನುಕುಂಟುನ್ನಾಡನುಕೋವಾಲಿ, ಅದಿ ಜರಿಗೇ ಪನಿ ಕಾದು, ಗಾಂಧಿ ವುದ್ಯಮಾನಿಕಿ ಖದ್ದರು ಓ ಸಿಂಬಲ್ ಕಾವಚ್ಚು, ಅಂತೇಗಾನಿ, ದೇಶಂ ಪುರೋಗತಿಕಿ ಮಾತ್ರಂ ದಾನಿ ಪಾತ್ರಂ ಉಂಡದು. ನುವ್ವು ಇನ್ನಿ ಪುಟನಲು ಚೆಪ್ಪೇವು. ವಾನಿನಿ ಚೂಸ್ತೆ ನೀಕು ಏಮಿ ಅರ್ದಂ ಅಯಿಂದಿ?" (ಕೊಲ್ಲಾಯಿ ಗಟ್ಟಿತೇನೇಮಿ ಪುಟ–೧೮೮, ೧೯೨೧)

೩. "ಆ ದಿಕ್ಕುಮಾಲಿನ ಗಾಂಧಿ ಎವಡೋ!, ನಿಕ್ಷೇಪಂಲಾಂಟಿ ಇಂಟ್ಲೋ ಚಿಚ್ಚುಪೆಟ್ಟೇಡು" (ಕೊಲ್ಲಾಯಿ ಗಟ್ಟಿತೇನೇಮಿ ಪುಟ–೨೧೬, ೧೯೨೧).

೪. "ದಿಕ್ಕು ಮಾಲಿನ ಕಾಂಗಿರೆಸೂ, ದಿಶಮಾಲಿನ ಗಾಂಧೀ... ಎಕ್ಕಡ ದಾಪರಿಂಚೆರೇ ತಲ್ಲಿ, ಪಚ್ಚಗಾ ಎಕ್ಕಿವಸ್ತೂನ್ನ ಮೊಕ್ಕನಿ ತುಂಪೇಸಿನಟ್ಲಯಿಂದಿ. ಆ ದುರದೃಷ್ಟಂ ಗಾಂಧಿ ರೂಪಂಲೋ ನೆತ್ತಿಕೆಕ್ಕಿಂದಿ" ಎನ್ನುತ್ತಾಳೆ. (ಕೊಲ್ಲಾಯಿ ಗಟ್ಟಿತೇನೇಮಿ ಪುಟ–೩೧೯, ೧೯೨೧)

೫. "ಗಾಂಧಿಗಾರಿ ಅಹಿಂಸಾವ್ರತಮು ಆಡುದಾನಿ ಮತಮನಿ, ಶಕ್ತಿಹೀನುಲಮಗು ಮನಂ ಈ ಅಹಿಂಸಾವ್ರತಂಲೊ ಬಡಿ ಮರಿಂತ ಶಕ್ತಿ ಪೊಗೊಟ್ಟುಕೊನಿ ನಶಿಂಚಿಪೊವುದುಮು. ಸರಿಯೈನ ದಾರಿ ಚೂಪಂಡಿ ನಡುಸ್ತಾಂ, ಬಾಂಬುಲು ತಯ್ಯಾರು ಚೇಸ್ತಾಂ, ರಿವ್ವಾಲ್ವರುಲು ಗುಂಚೂಸ್ತಾಂ, ಯುದ್ಧಂ ಚೇಸಿ ರಾಜ್ಯಂ ಸಂಪಾದಿಸ್ತಾಂ ಅನಿ ವಾದಿಸ್ತಾಡು." (ನಾರಾಯಣರಾವ್ ಪುಟ–೨೩೦, ೧೯೩೪)

೬. "ಗಾಂಧಿ ಮಹಾತ್ಮುಡು ಮರಲ ಕಾಂಗ್ರೆಸುನು ನಡುಪುಚು ಖೈದುಲಕು ಬೋಂಡನಿ ಯಾದೇಶಮಿಚ್ಚಿನನು ಬಾಗುಂಡನು. ಸಮಸ್ತಮನು ವಿಡಿಚಿ ಸನ್ಯಸಿಂಚಿನ ಬಾಗುಂಡುನೇಮೊ? ಶ್ಮಶಾನವೈರಾಗ್ಯಮಾ? ತನಲೋ ವಾಂಛಪೋಯಿನದಾ? ತಲಲು ಬೋಡುಲೈನ ತಲಪುಲು ಬೋಡುಲಾ! ಏನೇರಿತಿನೈನ ದೇಶಸೇವ ಚೆಯವಲೆನು. ಖದ್ದರು ಉತ್ಪತ್ತಿಯಾ? ಓ ಫ್ಯಾಕ್ಟರಿ ಪೆಟ್ಟುಟಯಗುನು." (ನಾರಾಯಣರಾವ್, ಪುಟ–೧೭೧, ೧೯೩೪)

೭. "ಗಾಂಧಿ ಮಹಾತ್ಮುಡು ಮೊದಲಿಡಿನ ಯುದ್ಧಮಂ ಕ್ರೈಸ್ತವ ಧರ್ಮಯುತಮಯಿನದಿನಿನ್ನಿ ಆಂಗ್ಲ ಹೃದಯಮುನು ಜೂರಗೊನಿ ವಾರಿಕಿ ತಮ ಚರ್ಯಲು ತಪ್ಪನಿ ತೋಪಿಂಪಚೇಸಿ, ಆಂಗ್ಲ ಸಾಮ್ರಾಜ್ಯಮುಲೋನೋ, ವೆಲುಪಲನೋ, ವಾರಿತೊ ಸ್ನೇಹಮುಗಾ ಉಂಡಡಂ ಉತ್ತಮ ಮನಿ, ಗಾಂಧಿಗಾರಿ ಬೋಧಲೆ ಈ ಮಾರ್ಪುಕು ಕಾರಣಂ. ಆಂಗ್ಲ ಪರಿಪಾಲಕುಲ ನೇಮಾತ್ರಮು ದ್ವೇಷಿಂಚಕ ವಾರಿ ಪ್ರಾಣಮೆ ಮನಪ್ರಾಣಮನುಕೊನಿ ವಾರಿ ಹೃದಯಮು ಮಾರ್ಚುಟಕು ತಲಚಿನನಾಡೆ ಮೀರು ನೆಗ್ಗಿಪೊಯೆದರು ಎಂದು ರಾಮಚಂದ್ರರಾವ್‌ಗೆ ಹೇಳುತ್ತಾರೆ." (ನಾರಾಯಣರಾವ್, ಪುಟ–೨೦೫, ೧೯೩೪)

೮. "ಅದೇಮಿಟಂಡಿ! ಮೀ ಹೃದಯಂ ಗಾಂಧಿಗಾರಿ ಬೋಧಲು ಮರಿಚಿಂದಾ! ಪೋನಿಲೆಂಡಿ, ದಾನ್ನಿ ವದಿಲೇಯಂಡಿ. ತಪ್ಪನಿ ಗಟ್ಟಿಗಾ ಚೆಪ್ಪಿ ವದಿಲಿವೆದ್ದಾಂ." (ನಾರಾಯಣರಾವ್ ಪುಟ-೨೫೧, ೧೯೩೪)

೯. "ಜಾತಿಯವಾರಮುಲಂದು, ಗಾಂಧಿವಾರಮುಲಂದು ಖದ್ದರು, ವಾಡವಾಡಕುದಿರಿಗಿ ಯಮ್ಮುಚುಂಡನು. ಸ್ವದೇಶ ವಸ್ತುವುಲ ನಮ್ಮುಚುಂಡುನು. ಗ್ರಾಮ ಗ್ರಾಮಲಕು ಬೋಯಿ ಕಲ್ಲುತ್ರಾಗವದ್ದನಿಯು, ಹಿಂದೂ ಮಹಮ್ಮದೀಯ ಸಮ್ಮೇಳನಮುನ್ನ ಗಾನಿ ದೇಶಮುನಕು ಸ್ವರಾಜ್ಯಮು ರಾದನಿಯು ಭೋದಿಂಚುಚುಂಡೆನು." (ನಾರಾಯಣರಾವ್ ಪುಟ-೨೦೭, ೧೯೩೪)

೧೦. "ಪರದಾರನು, ಪರಧನಮುನು ಆಶಿಂಚುಟ ಪರುಲ ಹಿಂಸಿಂಚುಟಯೆ ಯಗುನು. ಕಾವುನ ಪಾಪಕೃತ್ಯಮು, ಅಹಿಂಸಾ ಸೂತ್ರಮು ನಾಧಾರಮುಚೇಸಿಕೊನಿ ನೀವು ನೀ ಕರ್ಮ ನಡುಪವಲೆನು." (ನಾರಾಯಣರಾವ್ ಪುಟ-೨೬೦, ೧೯೩೪)

೧೧. "ಮನ ಉದ್ಯಮಂ ಪವಿತ್ರಮ್ಮೈಂದಿ, ದಾನಿಯಂದು ದ್ವೇಷಭಾವಮುನಕು ಅವಕಾಶಮು ಲೇದು. ದ್ವೇಷ ಪೂರಿತಮ್ಮೈನ ಉದ್ಯಮಂ ಏದಿ ನಿಲುವ ಜಾಲದು" ಎಂದು ಹೇಳುತ್ತಾನೆ. (ಮಾಲಪಲ್ಲಿ, ಪುಟ-೧೮೨, ೧೯೨೧)

೧೨. "ಎವರಿ ದಾರಿನಿ ವಾಂಡ್ಲಂ ಪೋದಾಂ, ವೃಥಗಾ ಚಂಪಿತೆ ಚಂಪನಿಯ್ಯಂಡಿ. ಮನಂ ದೌರ್ಜನ್ಯಾನಿಕಿ ದಿಗವದ್ದು." (ಮಾಲಪಲ್ಲಿ, ಪುಟ-೩೨೯, ೧೯೨೧)

೧೩. "ಇದೆಪ್ಪಟಿನುಂಚಮ್ಮಾ!"

ಲಚ್ಚಮ್ಮ - "ಗಾಂಧಿಗಾರು ಚೆಪ್ಪಿನಟ್ಲು ಮೀರಂತಾ ಜೈಲುಕೆಡುತೂಂಟೆ ಮೇಮಿಪಾಟಿ ಪನೆನಾ ಚೆಯ್ಯಲೇಮಾ?"

"ಈ ಆರು ನೆಲಲ್ಲೊ ಮಾಕು ಕಾವಲಸಿನ ಪಂಚೆಲು, ಚೀರಲು ನೇಯಿಂಚುಕೋಗಲಿಗೇಂ" (ಕೊಲ್ಲಾಯಿ ಗಟ್ಟಿತೇನೇಮಿ, ಪುಟ-೨೮೨, ೧೯೨೧)

೧೪. "ಖದ್ದರು ಉತ್ಪತ್ತಿ ಕಾರ್ಯಕ್ರಮಂ ಇಪ್ಪುಡಿಂಚುಮಿಂಚು ಲಚ್ಚಮ್ಮ ಚೂಸುಕೋವಾಲಿ"

ಊಳ್ಳೋ ರಾವಿಕ್ರಿಂದ ರಾತ್ರಿ ಪೇಪರು ಚದಿವಿ ವಿನಿಪಿಂಚೆ ಕಾರ್ಯಕ್ರಮಾನ್ನಿ, ಶಿವಕಾಮಯ್ಯ ತೀಸುಕೋವಾಲಿ ಪಂಚಮ ಪೇದ ವಾಳ್ಳಕಿ ಚೆರುವುಲೊ ನೀಳ್ಳುತೋಡಿ ಲೇಕಪೋತೆ ನೂತಿಲೋನುಂಚಿ ತೋಡಿ ಪೋಯವಲಸಿನ ಕಾರ್ಯಕ್ರಮಂ ಚೂಸುಕೋವಾಲಿ" (ಕೊಲ್ಲಾಯಿ ಗಟ್ಟಿತೇನೇಮಿ, ಪುಟ-೩೮೦, ೧೯೨೧)

೧೫. "ಮನುಷ್ಯುಡೆ ಮನುಷ್ಯುನಿಕಿ ಅಧಿಕಾರಿ ಅಂಕ ದೇವುಡನಿಗಾನಿ ದೆಯ್ಯಮನಿಗಾನಿಕಾದು. ಯೇದಿ ಮನುಷ್ಯನಿಕಿ ಉತ್ತಮಮೊ ಅದೇ ನೈತಿಕಮು. ಮನುಷ್ಯನಿ ಉತ್ತಮ ಸ್ಥಿತಿಕಿ ಏ ಮಾರ್ಗಮು ತಕ್ಕುವ ಕರ್ಚುತೋ, ವೇಗಂತೊ, ವಿಜಯ ನಿಶ್ಚಯಂತೊ, ಸರಿಗಾ ತೀಸುಕೊನಿ ವೇಳುತುಂದೊ ಅದೇ ಸರಿಯಯಿನ ಮಾರ್ಗಂ" (ಕೋನಂಗಿ, ಪುಟ-೧೮೭, ೧೯೪೬)

೧೬. "ಲೋಕಾನಿಕಿ ಎಪ್ಪಟಿಕನ್ನಾ ಉತ್ತಮ ಮಾರ್ಗಂ ಅಹಿಂಸಾ, ಸತ್ಯಾಲೆ. ಈ ಲೋಗಾ ಹಿಂಸಾಮಾರ್ಗಂ ಅವಲಂಬಿಂಚಿನ ರೆಂಡು ದೇಶಾಲ ವಿಷಯಂ ಆಲೋಚಿಸ್ತೆ, ಧರ್ಮ ಎವರಿಪಕ್ಷಂ ಉಂದೋವಾಳ್ಳ ವೈಪು ಮೊಗ್ಗುತುಂದನಿ ನಾತೋಟಿ ವಾಳ್ಳ ಹೃದಯಂ!" (ಕೋನಂಗಿ, ಪುಟ-೨೧೧, ೧೯೪೬)

ಅನುಬಂಧ–೪

ಕನ್ನಡ–ತೆಲುಗು ಲೇಖಕರ ಕಿರು ಪರಿಚಯ

ಕನ್ನಡ ಲೇಖಕರು

೧. ಬಸವರಾಜ ಕಟ್ಟೀಮನಿ

ಜನನ – ೧೯೧೯ ಅಕ್ಟೋಬರ್ ೦೫,

ಮರಣ – ೧೯೮೯ ಅಕ್ಟೋಬರ್–೨೩

ಜನ್ಮಸ್ಥಳ – ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಮಲಾಮರಡಿ

ಸಾಹಿತ್ಯ ಪಥ

ಕವನ ಸಂಕಲನ – ಕಂಪೋಜಿಟರ್, ಸ್ವತಂತ್ರವ್ವ

ಕಥಾ ಸಂಕಲನ – ಕಾರವಾನ್, ಗುಲಾಬಿ ಹೂ, ಆಗಸ್ಟ್ ಒಂಬತ್ತು, ಸೆರೆಯಿಂದ ಹೊರಗೆ, ಜೋಳದ ಬೆಳೆಯ ನಡುವೆ, ಸುಂಟರಗಾಳಿ, ಜೀವನ ಕಲೆ, ಸೈನಿಕನ ಹೆಂಡತಿ, ಹುಲಿಯಣ್ಣನ ಮಗಳು, ಗರಡಿಯಾಳು.

ಕಾದಂಬರಿಗಳು – ಸ್ವಾತಂತ್ರ್ಯದೆಡೆಗೆ, ಮಾಡಿ ಮಡಿದವರು, ಜ್ವಾಲಾಮುಖಿಯ ಮೇಲೆ, ಮೋಹದ ಬಲೆಯಲ್ಲಿ, ಬೀದಿಯಲ್ಲಿ ಬಿದ್ದವಳು, ಜರತಾರಿ ಜಗದ್ಗುರು, ಮಣ್ಣು ಮತ್ತು ಹೆಣ್ಣು, ಖಾನಾವಳಿಯ ನೀಲಾ, ಬಲೆಯ ಬೀಸಿದರು, ನಾನು ಪೋಲೀಸನಾಗಿದ್ದೆ, ಬಂಗಾರದ ಜಿಂಕೆಯ ಹಿಂದೆ, ನೀ ನನ್ನ ಮುಟ್ಟಬೇಡ, ಜನಿವಾರ ಮತ್ತು ಶಿವದಾರ, ಗೋವಾದೇವಿ, ಬೆಳಗಿನ ಗಾಳಿ, ಆಶ್ರಮವಾಸಿ, ಸಾಕ್ಷಾತ್ಕಾರ, ಸಮರ ಭೂಮಿ, ಪಾತರಗಿತ್ತಿ, ಗಿರಿಯ ನವಿಲು, ಜಲತರಂಗ, ಪೌರುಷ ಪರೀಕ್ಷೆ, ಕತ್ತರಿ ಪ್ರಯೋಗ, ಗೆಳೆಯನ ಮಡದಿ, ದ್ರೋಹಿ, ಪ್ರಿಯ ಬಾಂಧವಿ, ಬೆಂಗಳೂರಿಗೊಂದು ಟಿಕೇಟು, ಚಕ್ರವ್ಯೂಹ, ಹೆಂಡತಿ, ಪ್ರಪಾತ, ಗ್ರಾಮಸೇವಿಕ, ಐದನೆಯ ದೇಸಾಯಣಿ, ಸಂಗೊಳ್ಳಿರಾಯ ನಾಯಕ, ಮಾಜೀ ಮಂತ್ರಿ, ಹರಿಜನಾಯಣ, ತಿರುಗಣಿ, ಸೈತಾನ, ಜೊತೆಗಾತಿ, ಮಗನ ತಾಯಿ, ಆಧುನಿಕ ಬಸವಣ್ಣ.

ಅನುವಾದಿತ ಕಥಾ ಸಂಕಲನ – ಕಾಡಿನ ಹಾಡು (ಬೈಲೋ ರಶಿಯನ್ ಕಥೆಗಳ ಅನುವಾದ)

ನಾಟಕ - ಪಟ್ಟಣದ ಹುಡುಗಿ

ಪ್ರವಾಸ ಕಥನ - ನಾನು ಕಂಡ ರಷ್ಯಾ

ಜೀವನ ಚಿತ್ರಗಳು - ಸೇನಾಪತಿ ಚೆನ್ನಪ್ಪವಾಲಿ, ಪ್ರಿಯದರ್ಶಿನಿ ಇಂದಿರಾಗಾಂಧಿ.

ಮಕ್ಕಳ ಕಥೆ - ಸಂಗೊಳ್ಳಿ ರಾಯಣ್ಣ, ಕುಮಾರರಾಮ

ಸಂಪಾದನೆ - ನವಿಲೂರು ಮನೆಯಿಂದ (ಚೆನ್ನವೀರ ಕಣವಿಯೊಂದಿಗೆ) ರಸಿಕ ರಂಗದರ್ಶನ (ಮಾಧವ ಮಹಿಷಿ ಅವರೊಂದಿಗೆ), ಗೋಕಾಕ ತಾಲೂಕಿನಲ್ಲಿಯ ಸ್ವಾತಂತ್ರ್ಯ ಸಮರ, ಹಾಲತೊರೆಗೆ ಬೆಲ್ಲದ ಕೆಸರು

ಆತ್ಮಕಥೆ - ಕಾದಂಬರಿಕಾರನ ಕಥೆ

ಪ್ರಶಸ್ತಿ - ಜ್ವಾಲಾಮುಖಿಯ ಮೇಲೆ (೧೯೬೮) ಕೃತಿಗೆ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ ಲಭಿಸಿದೆ.

ಇತರೆ - ಬಸವರಾಜ ಕಟ್ಟೀಮನಿ ಅವರು ಸಂಯುಕ್ತ ಕರ್ನಾಟಕ, ತರುಣ ಕರ್ನಾಟಕ, ಕರ್ನಾಟಕ ಬಂದು, ಉಷಾ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

೨. ಗೊರೂರು ರಾಮಸ್ವಾಮಿ ಅಯ್ಯಂಗಾರ್

ಜನನ - ೧೯೦೪ ಜುಲೈ ೦೪, ಮರಣ ೧೯೯೧, ಅಕ್ಟೋಬರ್ ೨೮

ಜನ್ಮಸ್ಥಳ - ಹಾಸನ ಜಿಲ್ಲೆಯ ಗೊರೂರು

ಸಾಹಿತ್ಯ ಪಥ - ಕಥೆ, ಪ್ರಬಂಧ, ವಿನೋದ ಚಿತ್ರಗಳು-ಹಳ್ಳಿಯ ಚಿತ್ರಗಳು, ಶಿವರಾತ್ರಿ, ಕಮ್ಮಾರ ವೀರಭದ್ರಾಚಾರಿ ಜೋಯಿಸನಾದುದು, ಗರುಡಗಂಬದ ದಾಸಯ್ಯ, ಬೆಸ್ತರ ಕರಿಯ, ನಮ್ಮ ಊರಿನ ರಸಿಕರು, ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು, ಗೋಪುರದ ಬಾಗಿಲು, ಕನ್ಯಾಕುಮಾರಿ ಮತ್ತು ಇತರ ಕಥೆಗಳು, ಕತೆಗಳು ಮತ್ತು ವಿನೋದ ಚಿತ್ರಗಳು, ಉಸುಬು, ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು, ವೈಯಾರಿ.

ಕಾದಂಬರಿಗಳು - ಪುನರ್ಜನ್ಮ, ಮೆರವಣಿಗೆ, ಹೇಮಾವತಿ, ಊರ್ವಶಿ

ಪ್ರವಾಸ ಕಥನ - ಅಮೆರಿಕದಲ್ಲಿ ಗೊರೂರು

ಜಾನಪದ - ಹಳ್ಳಿಯ ಬಾಳು, ಹಳ್ಳಿಯ ಹಾಡುಗಳು, ಜನಪದ ಜೀವನ ಮತ್ತು ದರ್ಶನ

ಅನುವಾದ - ಮಲೆನಾಡಿನವರು, ಪಾಶ್ಚಾತ್ಯರ ಪುರಾತನ ಕಥೆಗಳು, ಕೋನಷ್ವೈ ಕಥೆಗಳು, ಕ್ರೌಂಚವಧ, ತಾಯ್ನುಡಿಯಲ್ಲಿ ಶಿಕ್ಷಣ, ಪೂರ್ಣಸ್ವದೇಶಿ, ಭಕ್ತಿಯೋಗ, ಭಾಷಣಗಳು ಮತ್ತು ಹೇಳಿಕೆಗಳು, ಭಗವಾನ್ ಕೌಟಿಲ್ಯ (ಕಾದಂಬರಿ, ಅನುವಾದ), ಮಹಾದೇವ ದೇಸಾಯಿಯವರ ಕೃತಿಗಳು,

ಆತ್ಮಕಥೆ ಅಥವಾ ಸತ್ಯಾನ್ವೇಷಣೆ ಭಾಗ-೧, ಜಗದ್ಗುರುಗಳ ದಿವ್ಯ ಬೋಧೆ, ಮಕ್ಕಳ ಪೋಷಣೆ, ಮದ್ಯಪಾನದಿಂದ ವಿಮೋಚನೆ, ರಾಜ ನರ್ತಕಿ, ಸತ್ಯ ಅಹಿಂಸೆ, ಸಾಹಿತ್ಯ ಜೀವಾಳ, ಸ್ವಾತಂತ್ರ್ಯವೇ ಧರ್ಮ, ಶರೀರ ಸಾಧನಾಯೋಗ ಅಥವಾ ಸೌಖ್ಯದ ಗುಟ್ಟು.

ಇತರೆ – ಜಗತ್ತಿನ ಮಹದ್ವ್ಯಕ್ತಿಗಳು, ಮೌಲಾನಾ ಅಬ್ದುಲ್ ಕಲಾಂ ಆಜಾದ್, ಸತೀ ಕಸ್ತೂರಿ ಬಾ, ಸಾಹಿತ್ಯ ರಶ್ಮಿ.

ಪ್ರಶಸ್ತಿಗಳು – ಅಮೆರಿಕದಲ್ಲಿ ಗೊರೂರು ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

೩. ತ.ರಾ.ಸು.

ಜನನ – ೧೯೨೦ ಏಪ್ರಿಲ್ ೨೧, ಮರಣ ೧೯೮೪ ಏಪ್ರಿಲ್ ೧೦

ಜನ್ಮಸ್ಥಳ – ಚಿತ್ರದುರ್ಗ ಜಿಲ್ಲೆಯ ತಳಕು ಗ್ರಾಮ

ಸಾಹಿತ್ಯ ಪಥ– ರೂಪಸಿ, ತೊಟ್ಟಿಲು ತೂಗಿತು, ಗಿರಿ ಮಲ್ಲಿಗೆಯ ನಂದನದಲ್ಲಿ, ಇದೇ ನಿಜವಾದ ಸಂಪತ್ತು, ಮೂರು ಮತ್ತೊಂದು (ಸಮಗ್ರ ಕಥೆಗಳು)

ನಾಟಕಗಳು – ಮೃತ್ಯುಸಿಂಹಾಸನ, ಜ್ವಾಲಾ, ಅನ್ನಾವತಾರ, ಮಹಾಶ್ವೇತೆ, ಬಾಳು ಬೆಳಗಿತು, ರುದ್ರಾಧ್ಯಾಯ,

ಸಾಮಾಜಿಕ ಕಾದಂಬರಿಗಳು – ಮನೆಗೆ ಬಂದ ಮಹಾಲಕ್ಷ್ಮೀ, ರಕ್ತತರ್ಪಣ, ಕಾಮಾಕ್ಷಿ ಜೀವದ ಜೀವ, ಪುರುಷಾವತಾರ, ಮುಂಜಾವಿನಿಂದ ಮುಂಜಾವು, ಬೇಡದ ಮಗು, ಮಸಣದ ಹೂ, ಬಿಡುಗಡೆಯ ಬೇಡಿ, ಚಂದನದ ಗೊಂಬೆ, ಚಕ್ರತೀರ್ಥ, ಸಾಕು ಮಗಳು, ಬೆಂಕಿಯ ಬಲೆ, ನಾಗರಹಾವು, ಎರಡು ಹೆಣ್ಣು ಒಂದು ಗಂಡು, ಸರ್ಪಮತ್ಸರ, ಕೇದಿಗೆ ವನ, ಕಣ್ಣು ತೆರೆಯಿತು, ವಿಷಪ್ರಾಸನ, ಮೊದಲ ನೋಟ, ಗೃಹಪ್ರವೇಶ, ರಾಜೇಶ್ವರಿ, ಚಂದವಳ್ಳಿಯ ತೋಟ, ಮರಳು ಸೇತುವೆ, ಮಾರ್ಗದರ್ಶಿ, ಭಾಗ್ಯಶಿಲ್ಪಿ, ಬೆಳಕಿನ ಬೀದಿ, ಗಾಳಿಮಾತು, ಬೇಲಿ ಮೇಯ್ದ ಹೊಲ, ಆಕಸ್ಮಿಕ, ಅಪರಾದಿ, ಪರಿಣಾಮ, ನಾಯಕಿ, ಹಾವು ಹಿಡಿದವರು, ಗ್ರಹಣ ಬಿಟ್ಟಿತು, ಎಲ್ಲವು ಅವನ ಹೆಸರಿನಲ್ಲೇ, ಪಂಜರದ ಪಕ್ಷಿ, ಒಮ್ಮೆ ನಕ್ಕ ನಗು, ಶಿಶುದೈತ್ಯ, ಹೆಣ್ಣು ಕಟ್ಟಿದ ಮನೆ, ಶ್ರೀ ಚಕ್ರೇಶ್ವರಿ, ಕಾರ್ಕೋಟಕ, ಯಕ್ಷಪ್ರಶ್ನೆ, ಬಯಕೆಯ ಬಂದಿ, ಪರಿಮಳದ ಉರುಳು, ಖೋಟಾನೋಟು, ಚದುರಂಗದ ಮನೆ, ಅಕ್ಕಮ್ಮನ ಭಾಗ್ಯ, ಶುಕ್ರವಾರದ ಲಕ್ಷ್ಮಿ, ವನಾಂತರಾಳ.

ಐತಿಹಾಸಿಕ ಕಾದಂಬರಿ – ನೃಪತುಂಗ, ಸಿಡಿಲ ಮೊಗ್ಗು, ಕೀರ್ತಿನಾರಾಯಣ, ಹಂಸಗೀತೆ, ಶಿಲ್ಪಶ್ರೀ, ಅಗ್ನಿರಥ–ಮುಕ್ತಿಪಥ, ಕಸ್ತೂರಿ ಕಂಕಣ, ಕಂಬನಿಯ ಕುಯಿಲು, ರಾಜ್ಯದಾಹ, ರಕ್ತರಾತ್ರಿ, ತಿರುಗುಬಾಣ, ಹೊಸಹಗಲು, ವಿಜಯೋತ್ಸವ, ದುರ್ಗಾಸ್ತಮಾನ.

ಪೌರಾಣಿಕ ಕಾದಂಬರಿಗಳು – ಬೆಳಕು ತಂದ ಬಾಲಕ, ನಾಲ್ಕು x ನಾಲ್ಕು ಒಂದು.

ಜೀವನ ಚರಿತ್ರೆ – ರೇಖಾಚಿತ್ರಗಳು, ಅ.ನ.ಕೃ

ಅನುವಾದ – ಗಾಂಧೀಜಿ, ದಳಪತಿ ಜವಹರ್, ನಿಮ್ಮ ಆಹಾರ, ಡಾ. ಕೊಟ್ನಿಸ್, ಬಾರ್ಬೋಸಾ ಕಂಡ ವಿಜಯನಗರ, ನಂದನವನ, ಮಾದಾಂಬಾವರಿ, ಮರೆಯಲಾಗದ ಪರಿಮಳ, ಪ್ರಥಮ ಪ್ರಣಯ

ಆತ್ಮಕಥೆ – ಹಿಂತಿರುಗಿ ನೋಡಿದಾಗ

ಸಂಪಾದನೆ – ಶ್ರೀ ಜಗದ್ಗುರು ಶ್ರೀ ಶಿವಾರ್ಪಣಂ

ಇತರೆ – ಕ್ರಿಯಾಶಕ್ತಿ ವಿದ್ಯಾರಣ್ಯ, ನಾಗರಮರಿ, ಸ್ನೇಹ ಸಮನ್ವಯ (ವ್ಯಕ್ತಿಚಿತ್ರಗಳು)

ಪ್ರಶಸ್ತಿ – ದುರ್ಗಾಸ್ತಮಾನ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮರಣೋತ್ತರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದಲ್ಲಿ ಶ್ರೇಷ್ಠ ಕಾದಂಬರಿಕಾರ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

೪. ಶಿವರಾಮ ಕಾರಂತ

ಜನನ – ೧೯೦೨ ಅಕ್ಟೋಬರ್, ೧೦, ಮರಣ ೧೯೯೭, ಡಿಸೆಂಬರ್ ೯

ಸಾಹಿತ್ಯ ಪಥ –

ಕವಿತೆ – ನೀಳ್ಗವನಗಳು, ರಾಷ್ಟ್ರಗೀತೆ ಸುಧಾಕರ

ನಾಟಕ – ವಿಜಯದಶಮಿ, ಡುಮಿಂಗೋ, ಬೆವರಿಗೆ ಜಯವಾಗಲಿ, ಹಣೆಬರಹ, ಕಟ್ಟೆಪುರಾಣ, ಸಾವಿರ ಮಿಲಿಯ.

ಏಕಾಂಕ ನಾಟಕಗಳು– ಬೌದ್ಧ ಯಾತ್ರಾ, ಗೊಂಬೆಯ ಮನೆ, ದೆವ್ವದ ಜಾಲ, ವಿನಾಶದ ಒಸಗೆ, ಅವಳಿ ನಾಟಕಗಳು, ಕನ್ಯಾರ್ಥಿಗಳು, ಕರ್ಣಾರ್ಜುನ, ಗರ್ಭಗುಡಿ.

ಗೀತನಾಟಕಗಳು– ಜಂಬದ ಜಾನಕಿ, ದೃಷ್ಟಿಸಂಗಮ, ನಾರದ ಗರ್ವಭಂಗ, ಬಿತ್ತಿದ ಬೆಳೆ, ಮಂಗಳಾರತಿ, ಮುಕ್ತದ್ವಾರ, ವಿಜಯ, ಹಿರಿಯಕ್ಕನ ಚಾಳಿ, ಹೇಗಾದರೇನು? ಹೇಮಂತ, ಕೀಚಕ ಸೈರಂಧ್ರಿ,

ಸಣ್ಣಕಥೆ– ತೆರೆಯಮರೆಯಲ್ಲಿ, ಹಸಿವು, ಹಾವು, ಕವಿಕರ್ಮ

ಕಾದಂಬರಿ – ಆಳ–ನಿರಾಳ, ಒಡಹುಟ್ಟಿದವರು, ಒಂಟಿದನಿ, ಔದಾರ್ಯದ ಉರುಳಲ್ಲಿ, ಕನ್ಯಾಬಲಿ, ಕರುಳಿನ ಕರೆ, ಕುಡಿಯರ ಕೂಸು, ಗೊಂಡಾರಣ್ಯ, ಚಿಗುರಿದ ಕನಸು, ಚೋಮನದುಡಿ,

ಜಾರುವ ದಾರಿಯಲ್ಲಿ, ದೇವದೂತರು, ನಂಬಿದವರ ನಾಕ–ನರಕ, ನಿರ್ಭಾಗ್ಯ ಜನ್ಮ, ಬೆಟ್ಟದ ಜೀವ, ಮರಳಿ ಮಣ್ಣಿಗೆ, ಮೂಕಜ್ಜಿಯ ಕನಸುಗಳು, ಮೈಮನಗಳ ಸುಳಿಯಲ್ಲಿ ಮುಂತಾದವು.

ಹರಟೆ–ವ್ಯಂಗ್ಯ ಪ್ರಬಂಧ – ಚಿಕ್ಕದೊಡ್ಡವರು, ಮೈಗಳ್ಳನ ದಿನಚರಿಯಿಂದ, ಮೈಲಿಕಲ್ಲಿನೊಡಲನೆ ಮಾತುಕತೆಗಳು, ಹಳ್ಳಿಯ ಹತ್ತು ಸಮಸ್ತರು, ದೇಹಜ್ಯೋತಿಗಳು ಮತ್ತು ಪ್ರಾಣಿ ಪ್ರಬಂಧಗಳು.

ವಿಚಾರ ಸಾಹಿತ್ಯ – ಕೋಶಗಳು, ಬಾಲ ಪ್ರಪಂಚ, ಸಂ–೧, ೧೧೧, ವಿಜ್ಞಾನ ಪ್ರಪಂಚ– ಸಂ–೧,–IV

ಪ್ರವಾಸ ಸಾಹಿತ್ಯ – ಅಪೂರ್ವ ಪಶ್ಚಿಮ, ಅಬೂವಿನಿಂದ ಬರಾಮಕ್ಕೆ, ಚಿತ್ರಮಯ ದಕ್ಷಿಣ ಹಿಂದೂಸ್ತಾನ, ಅರಸಿಕರಲ್ಲ, ಪೂರ್ವದಿಂದ ಅತ್ಯಪೂರ್ವಕ್ಕೆ, ಉಷ್ಣವಲಯದ ಆಗ್ನೇಸ್ಯ, ಪಾತಾಳಕ್ಕೆ ಪಯಣ, ಯಕ್ಷರಂಗಕ್ಕಾಗಿ ಪ್ರವಾಸ

ಜೀವನ ವೃತ್ತ/ಆತ್ಮಕಥೆ

ಕೆ.ಕೆ. ಹೆಬ್ಬಾರ, ಹುಚ್ಚುಮನಸ್ಸಿನ ಹತ್ತು ಮುಖಗಳು – ಅಳಿದುಳಿದ ನೆನಪುಗಳೊಂದಿಗೆ, ಅಳಿದುಳಿದ ನೆನಪುಗಳು, ಸ್ಮೃತಿಪಟಲದಿಂದ. (ಸಂಪುಟ–೧–೨)

ಬಾಲಸಾಹಿತ್ಯ – ಒಂದೇ ರಾತ್ರಿ–ಒಂದೇ ಹಗಲು, ಡುಮಿಂಗೋ, ಮರಿಯಪ್ಪನ ಸಾಹಸಗಳು, ಮಂಗನ ಮದುವೆ, ಸೂರ್ಯಚಂದ್ರ ಹುಲಿರಾಯ, ಗೆದ್ದವರ ಸತ್ಯ, ಗುಜರಾತ, ನರನೋ ವಾನರನೋ, ಜೋಗಿ ಕಂಡ ಊರು, ದೇವ ಒಲಿದ ಊರು, ಸಮಾಜ ನೀತಿ, ಸಿರಿಗನ್ನಡ ಪಾಠಶಾಲೆ ಇತ್ಯಾದಿ.

ತಾತ್ವಿಕ– ಜೀವನ ರಹಸ್ಯ, ಪ್ರಜಾಪ್ರಭುತ್ವವನ್ನು ಕುರಿತು, ಬಾಳ್ವಯೇ ಬೆಳಕು, ಶಿಕ್ಷಣ ಪದ್ಧತಿ, ಸಾರ್ಥಕವಾಗಲು.

ವಿಚಾರ ಸಾಹಿತ್ಯ – ತಾತ್ವಿಕ ವಿಚಾರ ಸಾಹಿತ್ಯ ನಿರ್ಮಾಣ, ಮನೋದೇಹಿಯಾದ ಮಾನವ, ಸ್ವಾರ್ಥಿಮಾನವ, ಕರ್ನಾಟಕ ಇಂದು ಮತ್ತು ನಾಳೆ, ಪರಿಸರ ಮೂರು ಉಪನ್ಯಾಸಗಳು.

ಕಲೆ– ಕಲೆಯ ದರ್ಶನ, ಭಾರತೀಯ ಚಿತ್ರಕಲೆ, ಯಕ್ಷಗಾನ ಬಯಲಾಟ, ಚಾಲುಕ್ಯ ವಾಸ್ತುಶಿಲ್ಪ, ಭಾರತೀಯ ಶಿಲ್ಪ, ಕಲಾಪ್ರಪಂಚ, ಕರ್ನಾಟಕದಲ್ಲಿ ಚಿತ್ರಕಲೆ, ಚಿತ್ರ, ಶಿಲ್ಪ, ವಾಸ್ತುಕಲೆಗಳು.

ತೆಲುಗು ಲೇಖಕರು

೧. ಅಡವಿ ಬಾಪಿರಾಜು

ಜನನ – ೧೮೯೫ ಅಕ್ಟೋಬರ್ ೮, ಮರಣ ೧೯೫೨ ಅಕ್ಟೋಬರ್ ೨೨

ಜನ್ಮಸ್ಥಳ – ಭೀಮವರಂ

ಸಾಹಿತ್ಯ ಪಥ –

ರಾಜಕೀಯ ಕಾದಂಬರಿಗಳು – ನಾರಾಯಣರಾವ್, ತುಫಾನು, ಕೋನಂಗಿ, ನರುಡು, ಜಾಜಿಮಲ್ಲಿ

ಚಾರಿತ್ರಿಕ ಕಾದಂಬರಿಗಳು – ಹಿಮಬಿಂದು, ಗೋನ ಗನ್ನಾರೆಡ್ಡಿ, ಅಡವಿ ಶಾಂತಿಶ್ರೀ, ಅಂಶುಮತಿ

ಅಮುದ್ರಿತ ಕೃತಿಗಳು – ಮಧುರವಾಣಿ, ಶಿಲಾರಥಂ, ಕೈಲಾಸೇಶ್ವರ

ಸಂಪುಟಗಳು – ಅಂಜಲಿ, ತರಂಗಿಣಿ, ತೂಲಿಕಾ ನೃತ್ಯಂ, ಬೋಗೇರ ಲೋಯ, ರಾಗಮಾಲಿಕ, ವಿಂಧ್ಯಾಚಲಂ

ಪ್ರಕಟಿತ ಕೃತಿಗಳು – ತೊಲಕರಿ, ಗೋಧೂಳಿ, ಶಶಿಕಳ

ಅಪ್ರಕಟಿತ ಕೃತಿಗಳು – ಅಂಜಲಿ, ಚಿಗುರುಟಾಕುಲು, ಜ್ಯೋತಿ, ಬಾಪು, ಆಂಧ್ರ, ದೀಪಮಾಲ, ಶಿಲ್ಪಬಾಲ, ಸುಷಮಾ, ಚಂದ್ರಿಕಲು, ಬಾಪಿರಾಜು ವಚನಾಲು, ಜಂಗಂ ಕಥಲು.

ನಾಟಕಗಳು – ರೇಡಿಯೋ ನಾಟಕಾಲು, ಏಕಾಂಕ ನಾಟಕಾಲು

ರೇಡಿಯೋ ನಾಟಕಗಳು – ಬೋಗೀರ ಲೋಯ, ನಾರಾಯಣರಾವ್, ಶೈಲಬಾಲ, ಉಷಾ ಸುಂದರಿ, ಪಾರಿಜಾತಂ, ನವೋದಯಂ, ದುಕ್ಕಿಟೆದ್ದುಲು, ಏರುವಾಕ

ಏಕಾಂಕ ನಾಟಕಗಳು – ಆಂಧ್ರ ಸಾಮ್ರಾಜ್ಞಿ, ಕೃತಿ ಸಮರ್ಪಣಂ, ಬೊಮ್ಮಲು, ಗುಡ್ಡಿಪಿಲ್ಲ

೨. ಉನ್ನವ ಲಕ್ಷ್ಮಿನಾರಾಯಣ

ಜನನ – ೧೮೭೭ ಡಿಸೆಂಬರ್, ೪, ಮರಣ– ೧೯೫೮, ಸೆಪ್ಟಂಬರ್ ೨೫

ಜನ್ಮಸ್ಥಳ – ಗುಂಟೂರು ಜಿಲ್ಲೆಯ ಸತ್ತೆನಪಲ್ಲಿ ತಾಲೂಕಿನ ವೇಮುಲೂರಿಪಾಡು

ಪ್ರಬಂಧಗಳು – ನನ್ನಯಭಟ್ಟು ವಂಶಪು ಕವಿ ಗೋಪಾಲುನಿ ರಾಮ ಕವಿ, ಶಿವಕವುಲನು ಮಿಂಚಿನ ಕವಿ, ಆಕರಿ ಮಾಟ, ಆಂಧ್ರ ಭಾಷಾ ಪ್ರವೀಣ, ಸೌಂದರನಂದಂ, ಪ್ರೇಮರಾಜ್ಯಮು, ಕವಿರಾಜ ಅಸ್ತಮಯಂ ಹಿಂದೂಮತಂ, ಅಚಲಬೋಧ, ಬೊಮ್ಮಲಾಟ, ರಾಜಕೀಯ ಬಾಧಿತುಲು, ಆಶಿಸ್ಸುಲು ನಾ ಅನುಭಾವಾಲು.

ನಾಟಕಗಳು– ನಾಯಕಿ, ಸೋದೋಯಮ್ಮ ಸೋದಿ, ಅನ್ನಮಾಂಬ, ಸಂಗೀತ ನಾಪಸಾನಿ

ಕವಿತೆಗಳು – ಪಲ್ನಾಟಿ ಯುದ್ದದ ಹಾಡುಗಳು, ಮೇಕೆ ಹಾಡು

ಕಾದಂಬರಿ – ಮಾಲಪಲ್ಲಿ

ಜಾನಪದ – ಬುಡಬುಡಕ್ಕಲ ಜೋಸ್ಯಂ

ಇತರೆ – ಪಲ್ನಾಡು ಅರಣ್ಯದ ಸಂಕಷ್ಟಗಳು, ಪೂರ್ವವಿದ್ಯಲು– ಪರಿಶೋಧನಲು.



ಕನ್ನಡ ವಿಶ್ವವಿದ್ಯಾಲಯ

ಭಾಷಾಂತರ ಅಧ್ಯಯನ ವಿಭಾಗ